ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.



27-03-2017

ದಿನಾಂಕ:27.03.2017.11.00.(04).ಜಿಎಂ.ಎಸ್ಎಸ್ಡಿ

**ಕರ್ನಾಟಕ ವಿಧಾನ ಸಭೆ**

**ಸೋಮವಾರ, 27ನೇ ಮಾರ್ಚ್ 2017**

**ವಿಷಯಾನುಕ್ರಮಣಿಕೆ**

(INDEX)


**1.ಮಾನ್ಯ ಕೃಷಿ ಸಚಿವರಿಂದ ಹೇಳಿಕೆ.**

ಶ್ರೀ ಕೃಷ್ಣಬೈರೇಗೌಡ (ಕೃಷಿ ಸಚಿವರು)
ವಿಷಯ:ವಿಧಾನಸೌಧದ ಆವರಣದಲ್ಲಿ `ಸಾವಯವ ಸಂತೆ ` ಏರ್ಪಡಿಸಿರುವ ಬಗ್ಗೆ.

**2.ನಿಯಮ 60ರ ಅಡಿ ಚರ್ಚೆಗೆ ಮನವಿ.**

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)
ವಿಷಯ:ಹೆಣ್ಣು ಮಕ್ಕಳಿಗೆ ಗರ್ಭಕೋಶವನ್ನು ತೆಗೆದ ಡಾಕ್ಟರ್ ಬಗ್ಗೆ.

**3.ಹಕ್ಕುಚ್ಯುತಿ ಮಂಡನೆಗೆ ಅನುಮತಿ ಕೋರಿಕೆ.**

ಶ್ರೀ ಹೆಚ್.ಡಿ.ರೇವಣ್ಣ
ವಿಷಯ: ಆಹ್ವಾನ ಪತ್ರಿಕೆಯಲ್ಲಿ ಮಾನ್ಯ ಶಾಸಕರು ಹೆಸರನ್ನು ನಮೂದಿಸದಿರುವ ಬಗ್ಗೆ.

**4.ವರದಿಗಳನ್ನೊಪ್ಪಿಸುವುದು.**

ಶ್ರೀ ಆರ್. ಅಶೋಕ್ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ)
ವಿಷಯ:2016-17ನೇ ಸಾಲಿನ ವಿಧಾನಸಭೆಯ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವರದಿ.

**5.ವಿತ್ತೀಯ ಕಾರ್ಯಕಲಾಪಗಳು.**

2017-18ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ

ಶ್ರೀ ಬಸವರಾಜು ಬೊಮ್ಮಾಯಿ (5-17)
ಶ್ರೀ ಹೆಚ್.ಡಿ.ಕುಮಾರಸ್ವಾಮಿ (17-22)

**6.ಪಶುಭಾಗ್ಯ ಸಮಿತಿಗಳಿಗೆ ಸದಸ್ಯರನ್ನು ನಾಮಕರಣ ಮಾಡಿರುವ ಬಗ್ಗೆ.**

ಶ್ರೀ ಎಂ.ಟಿ.ಕೃಷ್ಣಪ್ಪ
ಶ್ರೀ ಕೆ.ಎಂ.ತಿಮ್ಮರಾಯಪ್ಪ
ಶ್ರೀ ವೈ.ಎಸ್.ವಿ.ದತ್ತಾ
ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು)
ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)


ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಹೆಚ್.ಡಿ.ಕುಮಾರಸ್ವಾಮಿ

(26-27)

**7.ವರದಿಯನ್ನೊಪ್ಪಿಸುವುದು.**

ಶ್ರೀ ಎನ್.ಎ.ಹ್ಯಾರೀಸ್ (ಅಧ್ಯಕ್ಷರು, ಕರ್ನಾಟಕ ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ)
ವಿಷಯ:2016-17ನೇ ಸಾಲಿನ ಕರ್ನಾಟಕ ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 32ನೇ ವರದಿ.

**8.ಶಾಸನ ರಚನೆ.**

ವಿಧೇಯಕದ ಮಂಡನೆಗೆ ಅನುಮತಿ ಕೋರಿಕೆ

**ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2017**

ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
ವಿಧೇಯಕವನ್ನು ಮಂಡಿಸಲಾಯಿತು

(ಅನುಬಂಧ-1)

**ಕರ್ನಾಟಕ ಶಿಕ್ಷಣ (ಎರಡನೇ ತಿದ್ದುಪಡಿ) ವಿಧೇಯಕ, 2017**

ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
ವಿಧೇಯಕವನ್ನು ಮಂಡಿಸಲಾಯಿತು

(ಅನುಬಂಧ-2)

**9.ವಿತ್ತೀಯ ಕಾರ್ಯಕಲಾಪಗಳು.**

2017-18ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಂದುವರೆದು..) (27-31)
ಶ್ರೀ ಅಶೋಕ್ ಖೇಣಿ
ಡಾ:ಎಸ್. ರಫೀಕ್ ಅಹ್ಮದ್
ಶ್ರೀಮತಿ ವಿನಿಷಾ ನೀರೊ
ಶ್ರೀ ಯು.ಬಿ.ಬಣಕಾರ್
ಶ್ರೀ ಸಿದ್ದು ಬಿ. ನ್ಯಾಮಗೌಡ

(27-36)

**10.ಪ್ರಕಟಣೆ.**

ವಿಷಯ: ವಿಧಾನ ಪರಿಷತ್ತಿನಿಂದ ಯಾವುದೇ ತಿದ್ದುಪಡಿಗಳಿಲ್ಲದೇ ಅಂಗೀಕರಿಸಲಾಗಿರುವ ವಿಧೇಯಕಗಳು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

## 11.ವಿತ್ತೀಯ ಕಾರ್ಯಕಲಾಪಗಳು.

2017-18ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ

ಶ್ರೀ ಹೆಚ್.ಕೆ.ಕುಮಾರಸ್ವಾಮಿ
ಶ್ರೀ ಕೆ.ಎಸ್. ಪುಟ್ಟಣ್ಣಯ್ಯ
ಶ್ರೀ ವೈ.ಎ.ನಾರಾಯಣಸ್ವಾಮಿ
ಶ್ರೀ ಬಿ.ಬಿ.ನಿಂಗಯ್ಯ
ಶ್ರೀ ಬಿ.ಆರ್.ಪಾಟೀಲ್
ಶ್ರೀ ಎಂ.ಕೆ.ಸೋಮಶೇಖರ್

(36-53)

## 12.ಪ್ರಕಟಣೆ.

ವಿಷಯ: ವಿಧಾನ ಪರಿಷತ್ತಿನಿಂದ ಯಾವುದೇ ತಿದ್ದುಪಡಿಗಳಿಲ್ಲದೇ ಅಂಗೀಕರಿಸಲಾಗಿರುವ ವಿಧೇಯಕಗಳು

## 13.ವಿತ್ತೀಯ ಕಾರ್ಯಕಲಾಪಗಳು.

2017-18ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ

ಶ್ರೀ ಜೆ.ಟಿ.ಪಾಟೀಲ್
ಶ್ರೀ ಟಿ. ರಘುಮೂರ್ತಿ
ಶ್ರೀ ಸಿ.ಎನ್.ಬಾಲಕೃಷ್ಣ
ಶ್ರೀ ಬಿ.ಆರ್.ಯಾವಗಲ್
ಶ್ರೀ ಎನ್.ಹೆಚ್.ಕೋನರೆಡ್ಡಿ

(53-58)

## 14.ಅನುಬಂಧಗಳು-2.

************

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

**ಕರ್ನಾಟಕ ವಿಧಾನಸಭೆ**

ಸೋಮವಾರ, ದಿನಾಂಕ:27ನೇ ಮಾರ್ಚ್ 2017ರಂದು

ಸದನವು ಬೆಂಗಳೂರಿನ ವಿಧಾನಸೌಧದ

ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 03 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ **ಶ್ರೀ ಕೆ.ಬಿ.ಕೋಳಿವಾಡ್**ರವರು

ಪೀಠವನ್ನು ಅಲಂಕರಿಸಿದರು.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು)(ಹುಬ್ಬಳ್ಳಿ-ಧಾರವಾಡ)(ಕೇಂದ್ರ): ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಸಚಿವರ್‍ಯಾರೂ ಇಲ್ಲ. ಜಯಚಂದ್ರರವರೊಬ್ಬರೇ ಗತಿ, ಜಯಚಂದ್ರರವರೆ ನೀವೂ ಹೋಗಿಬಿಡಿ.

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ರಾಜ್ಯದ 160 ತಾಲ್ಲೂಕುಗಳಲ್ಲಿ ಬರ, ಸದನದಲ್ಲಿ ಸಚಿವರುಗಳಿಗೇ ಬರ. ಎಲ್ಲಾ ಸಚಿವರುಗಳು ಗುಳೆ ಹೋಗಿದ್ದಾರೆ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್: ಮಾನ್ಯ ಅಧ್ಯಕ್ಷರೆ, ಅಧಿವೇಶನವನ್ನು ಯಾರಿಗಾಗಿ ಮಾಡುತ್ತಿದ್ದೀರಿ? ಏತಕ್ಕಾಗಿ ಮಾಡುತ್ತಿದ್ದೀರಿ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಜಯಚಂದ್ರರವನ್ನು ಹೊರತುಪಡಿಸಿದರೆ ಸದನದಲ್ಲಿ ಸಚಿವರು ಇನ್ಯಾರಿದ್ದಾರೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಉಪಚುನಾವಣೆಗೆ ಹೋಗಿದ್ದಾರೆ, ಹಾಗಾದರೆ ಇಲ್ಲಿ ಸದನ ಏತಕ್ಕಾಗಿ ಬೇಕು?

(ಗೊಂದಲ)

ಶ್ರೀ ವಿ.ಸುನೀಲ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಬಜೆಟ್ ಮೇಲೆ ಚರ್ಚೆಯಾಗಲಿ ಎಂದು ತಾವು question hourನ್ನೇ cancel ಮಾಡಿದ್ದೀರಿ. ಒಬ್ಬರೂ ಸಚಿವರಿಲ್ಲ ಎಂದ ಮೇಲೆ ಯಾರಿಗಾಗಿ ಸದನವನ್ನು ನಡೆಸುತ್ತಿದ್ದೀರಿ?

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಡಿ.ಎನ್.ಜೀವರಾಜ್: ಮಾನ್ಯ ಅಧ್ಯಕ್ಷರೆ, ಒಬ್ಬರೇ ಒಬ್ಬರು ಸಚಿವರಿಲ್ಲ, ಯಾರಿಗಾಗಿ ಸದನವನ್ನು ನಡೆಸುತ್ತಿದ್ದೀರಿ?

(ಗೊಂದಲ)

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಒಳಗೆ ಹೊರಗೆ ಎಲ್ಲವೂ ಸೇರಿ ಜಯಚಂದ್ರವರಿಗೆ wholesale contract.

(ಗೊಂದಲ)

ಶ್ರೀ ವಿ.ಸುನೀಲ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಎಲ್ಲಾ ಪ್ಯಾಕೇಜ್ ಮಾಡಿಕೊಂಡಿದ್ದಾರೆಯೇ?

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್: ಮಾನ್ಯ ಅಧ್ಯಕ್ಷರೆ, ಕಿಮ್ಮನೆ ರತ್ನಾಕರ್‌ರವರಾದರೂ ಬಂದು ಬೇಗ ಕುಳಿತುಕೊಳ್ಳುತ್ತಿದ್ದರು, ಅವರನ್ನೂ ತೆಗೆದು ಹಾಕಿದ್ದೀರಿ.

(ಗೊಂದಲ)

ಶ್ರೀ ವಿ.ಸುನೀಲ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಎಲ್ಲರೂ ಉಪಚುನಾವಣೆ ಕಡೆಗೆ ಹೋಗಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಉಪಚುನಾವಣೆ ಪ್ರಚಾರ, ಅದಕ್ಕಾಗಿ ಪ್ರಶ್ನೋತ್ತರವನ್ನೂ ಇಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು: ಸರ್ಕಾರದವರು ಏನೋ ಹೇಳುತ್ತಿದ್ದಾರೆ ನೋಡಿ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಇಂದು ಬಜೆಟ್ ಮೇಲೆ ಮುಂದುವರೆದ ಚರ್ಚೆ. ಚರ್ಚೆಯನ್ನು ಪ್ರಾರಂಭ ಮಾಡಲಿ. ಸಚಿವರು ಬರುತ್ತಾರೆ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಬರುತ್ತಿದ್ದಾರೆ. ಒಂದೆರಡು ನಿಮಿಷ ಹೆಚ್ಚು ಕಡಿಮೆ ಆಗುತ್ತಿದೆ. ಕೃಷ್ಣ ಭೈರೇಗೌಡರು ಬರುತ್ತಿದ್ದಾರಲ್ಲ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್: ಮಾನ್ಯ ಅಧ್ಯಕ್ಷರೆ, ನೀವು ಏತಕ್ಕಾಗಿ ಸದನವನ್ನು ದಿನವೂ ಬೆಳಗ್ಗೆ 10.30ಕ್ಕೆ ಕರೆಯುತ್ತೀರೋ ಗೊತ್ತಿಲ್ಲ. ದಿನವೂ 10.30ಕ್ಕೆ ಸದನವನ್ನು ಕರೆಯುತ್ತೀರಿ. ಆದರೆ, ಬೆಳಗ್ಗೆ 11.30ವರೆಗೂ ಬೆಲ್ ಹೊಡೆಯುತ್ತಲೇ ಇರುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಸಚಿವರು ಏತಕ್ಕಾಗಿ ಬರುವುದಿಲ್ಲ?

(ಗೊಂದಲ)

ಅಧ್ಯಕ್ಷರು: ತಾವೆಲ್ಲರೂ ಸೇರಿ ರೂಲ್ಸ್ amendment ಮಾಡಿಕೊಟ್ಟಿದ್ದೀರಿ. ಆ ಕಾರಣದಿಂದ ಬೆಳಗ್ಗೆ 10.30ಕ್ಕೆ ಸದನವನ್ನು ಕರೆಯಬೇಕಲ್ಲವೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಂತ್ರಿಗಳಿಗೆ ಅಷ್ಟೇನು urgent ಇದೆಯೆಂದು ನಾನು ಕೇಳುತ್ತಿದ್ದೇನೆ. ಸದನದಲ್ಲಿ ಯಾರ್‍ಯಾರು ಹಾಜರಿರಬೇಕೆನ್ನುವ ಬಗ್ಗೆ ತಯಾರಿಸಿರುವ ಲಿಸ್ಟ್‌ನ್ನು ಓದಿಬಿಡಿ. ಎಲ್ಲರಿಗೂ ಗೊತ್ತಾಗಿಬಿಡಲಿ, ಜನ ಇವರಿಗೆ ಛೀಮಾರಿ ಹಾಕಲಿ.

(ಗೊಂದಲ)

ಅಧ್ಯಕ್ಷರು: ಸದನದಲ್ಲಿ ಪ್ರಶ್ನೆಗಳಿಗೆ ಉತ್ತರಿಸಬೇಕಾದ ಮಾನ್ಯ ಸಚಿವರುಗಳು - ಶ್ರೀ ಬಿ.ರಮಾನಾಥರೈರವರು on health grounds permission ತೆಗೆದುಕೊಂಡಿದ್ದಾರೆ. ಎರಡನೆಯದಾಗಿ ಕಾಗೋಡು ತಿಮ್ಮಪ್ಪನವರು ಬಂದಿದ್ದು, Councilನಲ್ಲಿದ್ದಾರೆ. ಎಂ.ಬಿ.ಪಾಟೀಲ್‌ರವರು ಹಾಜರಿಲ್ಲ, ಟಿ.ಬಿ.ಜಯಚಂದ್ರರವರು ಸದನದಲ್ಲಿ ಹಾಜರಿದ್ದಾರೆ, ಸಂತೋಷ್ ಎಸ್.ಲಾಡ್‌ರವರು, ರುದ್ರಪ್ಪ ಲಮಾಣಿ, ಪ್ರಮೋದ್ ಮಧ್ವರಾಜ್‌ರವರು ಸದನದಲ್ಲಿ ಹಾಜರಿಲ್ಲ. ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಸಚಿವರುಗಳು ಆರ್.ವಿ.ದೇಶಪಾಂಡೆ, ಹೆಚ್.ಕೆ.ಪಾಟೀಲ್, ಹೆಚ್.ಸಿ.ಮಹದೇವಪ್ಪ, ಕೆ.ಜೆ.ಜಾರ್ಜ್‌ರವರುಗಳು ಹಾಜರಿಲ್ಲ, ಡಿ.ಕೆ.ಶಿವಕುಮಾರ್‌ರವರು permission ತೆಗೆದುಕೊಂಡಿದ್ದಾರೆ. ಬಸವರಾಜ್



ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ರಾಯರೆಡ್ಡಿಯವರು ಹಾಜರಿಲ್ಲ, ಕೃಷ್ಣ ಭೈರೇಗೌಡರವರು ಸದನದಲ್ಲಿ ಹಾಜರಿದ್ದಾರೆ. ಮಲ್ಲಿಕಾರ್ಜುನ್‌ರವರು ಸದನದಲ್ಲಿ ಹಾಜರಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಶೇಕಡಾ.80 ರಿಂದ 90%ನಷ್ಟು ಸಚಿವರುಗಳು ಸದನದಲ್ಲಿ ಹಾಜರಿಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ತಾವು ಇವತ್ತು ಪ್ರಶ್ನೋತ್ತರವನ್ನು ರದ್ದು ಮಾಡಿದ್ದೀರಿ. ನನ್ನದೂ ಸಹ ಒಂದು ಪ್ರಶ್ನೆಯಿತ್ತು ಎನ್ನುವ ಜೊತೆಯಲ್ಲಿ ಪ್ರಶ್ನೋತ್ತರ ಈ ಸದನದ ಅತ್ಯಂತ ಪ್ರಮುಖವಾದ, ಪ್ರಾಮುಖ್ಯವಾದ ಕಲಾಪದಲ್ಲಿ ಒಂದು. ತಾವು ಅದನ್ನು ರದ್ದು ಮಾಡುವ ಅಗತ್ಯವೇ ಇರಲಿಲ್ಲ. ತಾವು ಪ್ರಶ್ನೋತ್ತರವನ್ನು ರದ್ದು ಮಾಡಿದ್ದು ತಪ್ಪು ಎನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ. ತಾವು ಯಾವುದೇ ಸಂದರ್ಭದಲ್ಲೂ ಪ್ರಶ್ನೋತ್ತರವನ್ನು ರದ್ದು ಮಾಡುವುದಿಲ್ಲವೆಂದು ಹೇಳಿದ್ದೀರಿ. ಆದರೂ ತಾವು ಇಂದು ರದ್ದು ಮಾಡಿದ್ದೀರಿ. ನಮಗೇನು ಅನುಮಾನಯಾಗಿದೆಯೆಂದರೆ, ಮಂತ್ರಿಗಳೆಲ್ಲರೂ ಉಪಚುನಾವಣೆ ಪ್ರಚಾರಕ್ಕೆ ಹೋಗಿರುವುದರಿಂದ ಪ್ರಶ್ನೋತ್ತರ ಬೇಡ ಎಂದು ಅನುಮತಿ ತೆಗೆದುಕೊಂಡಿರಬಹುದೆಂದು ಅನುಮಾನ. ಹಾಗಾಗಿ ಯಾರೂ ಇಲ್ಲ. ನಿಮ್ಮ ಪ್ರಕಾರ ಪ್ರಶ್ನೆಗೆ ಉತ್ತರಿಸಬೇಕಾದವರು ಎಂದು ಹೆಸರು ಓದಿದಿರಿ. ಅವರೂ ಸಹ ಯಾರೂ ಇಲ್ಲ.

(ಗೊಂದಲ)

ಶ್ರೀ ವೈ.ಎಸ್.ವಿ.ದತ್ತಾ: ಮಾನ್ಯ ಅಧ್ಯಕ್ಷರೆ,

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ ದತ್ತಾರವರೆ, ಅವರಿಗೆ ಉತ್ತರ ಕೊಡುತ್ತಿದ್ದೇನೆ, ನೀವು ಆಮೇಲೆ ಹೇಳುವಿರಂತೆ.

(ಗೊಂದಲ)

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ವೈ.ಎಸ್.ವಿ.ದತ್ತಾ: ಮಾನ್ಯ ಅಧ್ಯಕ್ಷರೆ, ಮೊನ್ನೆ ಸಹ ನಾವು ಹೇಳಿದ್ದೆವು. ಇಲ್ಲ ಎಂದರೆ ಮುಗಿಸೇಬಿಡೋಣ, ಚರ್ಚೆಯಾಗಲಿ, ಪ್ರಶ್ನೋತ್ತರ ಬೇಡ ಎಂದು ನಾವು ಹೇಳಿದ್ದೆವು. ಅವತ್ತು ಸಹ ಪ್ರಶ್ನೋತ್ತರ ಬೇಡ ಎಂದು ಹೇಳಿದ್ದೆವು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ದತ್ತಾರವರೆ, ಮಂತ್ರಿಗಳಿರಬೇಕಲ್ಲವೆ?

(ಗೊಂದಲ)

ಅಧ್ಯಕ್ಷರು: ಏಕೆಂದರೆ ದತ್ತಾರವರೆ, ಬಜೆಟ್ ಮೇಲೆ ಕೇವಲ 4 ಜನರಷ್ಟೆ ಮಾತನಾಡಿದ್ದಾರೆ. ಮೊದಲು ಜಗದೀಶ್ ಶೆಟ್ಟರ್‌ರವರು initiate ಮಾಡಿದರು. ಎರಡನೆಯದಾಗಿ ಕೃಷ್ಣಪ್ಪರವರು ಮಾತನಾಡಿದರು, ಮೂರನೆಯದಾಗಿ ಖಮರುಲ್ ಇಸ್ಲಾಂರವರು ಮತ್ತು ರಾಘವೇಂದ್ರರವರು ಬಜೆಟ್ ಮೇಲೆ ಮಾತನಾಡಿದ್ದಾರೆ. ಬಸವರಾಜ ಬೊಮ್ಮಾಯಿಯವರು ಬಜೆಟ್ ಮೇಲಿನ ಭಾಷಣವನ್ನು ಪ್ರಾರಂಭ ಮಾಡಿದ್ದಾರಷ್ಟೆ. ಕೇವಲ 3-4 ಜನ ಮಾತ್ರ ಮಾತನಾಡಿದ್ದಾರೆ. ಸದನದಲ್ಲಿ ಮಾತನಾಡುವವರು ಇನ್ನೂ ಬಹಳಷ್ಟು ಜನರಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಅದಕ್ಕಾಗಿ ನಾನು ಇವತ್ತು ಉತ್ತರ ಕೊಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು: ಅದಕ್ಕಾಗಿ ಮುಖ್ಯಮಂತ್ರಿಗಳು ಇವತ್ತು ಉತ್ತರ ಕೊಡುತ್ತಿಲ್ಲ. ನಾಳೆ ಮುಂಜಾನೆ ಉತ್ತರ ಕೊಡುತ್ತಿದ್ದಾರೆ. ಎಲ್ಲಾ ಸದಸ್ಯರಿಗೂ ಮಾತನಾಡಲು ಅವಕಾಶ ಸಿಗಲಿ ಎನ್ನುವ ದೃಷ್ಟಿಯಿಂದ ಪ್ರಶ್ನೋತ್ತರ ವೇಳೆಯನ್ನು ಕಡಿಮೆ ಮಾಡಿದ್ದೇನೆಯೇ ಹೊರತು ಬೇರೆ ಉದ್ದೇಶವಿಲ್ಲ. ಆಯಿತು, ಈಗ ವರದಿಗಳನ್ನೊಪ್ಪಿಸುವುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಈ ರೀತಿ ಎಷ್ಟು ಬಾರಿ ಮಾಡಿದ್ದೇವೆ. ನೀವೂ ಮಾಡಿದ್ದೀರಿ, ನಾವೂ ಮಾಡಿದ್ದೇವೆ. ನಾನೇ ನೋಡಿದ್ದೇನೆ.

(ಗೊಂದಲ)

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಕೆ.ಜಿ.ಬೋಪಯ್ಯ: ಅದು ಬೇರೆ, ನೀವು ಕೇಳಿದಾಗ ನಾವು ಮಾಡಿದ್ದೇವಷ್ಟೆ, ಆದರೆ ಅಜೆಂಡಾದಲ್ಲಿ question hour ಇಲ್ಲವೆಂದರೆ ಸರಿಯಾಗುವುದಿಲ್ಲ. Question hourನ್ನು ಸಾಯಂಕಾಲ ಆಮೇಲೆ ತೆಗೆದುಕೊಂಡಿದ್ದೇವೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, Question Hour suspend ಮಾಡಬೇಕೆನ್ನುವ ಉದ್ದೇಶವಲ್ಲ. ಬಜೆಟ್ ಮೇಲೆ ವ್ಯಾಪಕವಾದ ಚರ್ಚೆಯಾಗಲಿ ಎನ್ನುವುದಷ್ಟೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಬೋಪಯ್ಯನವರೆ ತಾವು ಸ್ವಲ್ಪ ಕೇಳಿಸಿಕೊಳ್ಳಿ, ತಾವು ಅಧ್ಯಕ್ಷರಾಗಿದ್ದವರು. ಇದು ಸ್ವಲ್ಪ Communication gap, ನಾವು Business Advisory Committee meetingನಲ್ಲಿ ಸದನದಲ್ಲಿ 27ನೇ ತಾರೀಖಿಗೆ ಉತ್ತರ ಕೊಡುತ್ತೇವೆಂದು ಹೇಳಿದ್ದೆವು. ಹಾಗಾಗಿ, ಬಹುಶ: question hourನ್ನು ಅಜೆಂಡಾದಲ್ಲಿ ಸೇರಿಸಿಲ್ಲವೆಂದು ಕಾಣಿಸುತ್ತದೆ. ನಾನು ಇವತ್ತು ಬೇಡ, ಬಹಳ ಕಡಿಮೆ ಜನ ಬಜೆಟ್ ಮೇಲೆ ಮಾತನಾಡಿದ್ದಾರೆ. ಇವತ್ತೂ ಕೆಲವರು ಮಾತನಾಡಲಿ, ಅವಕಾಶ ಕೊಡೋಣವೆಂದು ಹೇಳಿ ಇವತ್ತು ನಾನು ಉತ್ತರ ಕೊಡುತ್ತಿಲ್ಲ. ನಾಳೆ ವಿಧಾನಸಭೆ ಮತ್ತು ವಿಧಾನಪರಿಷತ್ ಎರಡೂ ಕಡೆಯೂ ಉತ್ತರ ಕೊಡುತ್ತೇನೆ. ಆದ್ದರಿಂದ ಅವರು ಆ ರೀತಿ ಮಾಡಿದ್ದಾರಷ್ಟೆ, ಇದನ್ನು ಹೊರತುಪಡಿಸಿ ಬೇರೆ ಯಾವುದೇ ಉದ್ದೇಶವಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, question hour ಈಗ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವಂಥ ಸಂದರ್ಭದಲ್ಲಿ, ಚರ್ಚೆಯಾಗುವಂಥ ಸಂದರ್ಭದಲ್ಲಿ ವಿಶೇಷವಾಗಿ ಬೆಳಗಿನ ಸಮಯ ಬಿಟ್ಟು ಸಾಯಂಕಾಲ 4 ಗಂಟೆ ಮೇಲೆ question hourನ್ನು ಅಜೆಂಡಾದಲ್ಲಿಟ್ಟಿರುವುದೂ ಸಹ ಗೊತ್ತಿದೆ. ಈ ರೀತಿ ಸಾರಾಸಗಟಾಗಿ question hourನ್ನೇ ತೆಗೆದಿರುವಂಥದ್ದಿಲ್ಲ. ಸಾಯಂಕಾಲ ಮಾಡಿದ್ದಾರೆ.

(ಗೊಂದಲ)



ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಅಧ್ಯಕ್ಷರು: ಹಾಗಾದರೆ, ನಾಳೆ ಮುಖ್ಯಮಂತ್ರಿಗಳು ಉತ್ತರ ಕೊಟ್ಟ ನಂತರ ಮಧ್ಯಾಹ್ನದ ಮೇಲೆ question hour ಮಾಡೋಣ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನಾಳೆಯದ್ದೂ ಸಹ question hour ಇರುತ್ತದೆ, ನಾಳೆಯದ್ದೂ questions ಇರುತ್ತದೆ. ಅದು ಮತ್ತೆ ಜಾಸ್ತಿಯಾಗುತ್ತದೆ. ನಾಳೆ ಮತ್ತೆ 15 questions, ಎಂದರೆ ಇವತ್ತಿನ ಪ್ರಶ್ನೆಗಳಿಗೆ ಅವಕಾಶ ಸಿಗುತ್ತಿಲ್ಲ. Usually, ನಾವು ನಿಲುವಳಿ ಸೂಚನೆಯನ್ನು ತಂದಾಗ ನೀವು question hour ಆದ ಮೇಲೆ ಅವಕಾಶ ಕೊಡುತ್ತೀರಿ. ಈ ರೀತಿ ಬಜೆಟ್ ಮೇಲೆ ಚರ್ಚೆಯಾಗಬೇಕು, ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ಏನು ಮಾಡುತ್ತೀರೆಂದರೆ ಹಿಂದಿನ ಅಧ್ಯಕ್ಷರು question hourನ್ನು ಸಾಯಂಕಾಲ ತೆಗೆದುಕೊಂಡಿರುವಂಥ ಉದಾಹರಣೆಗಳಿವೆ. ಆದರೆ ಅಜೆಂಡಾದಲ್ಲಿಯೇ ಇವತ್ತು question hour ಇಲ್ಲ.

(ಗೊಂದಲ)

ಅಧ್ಯಕ್ಷರು: ಬಜೆಟ್ ಮೇಲೆ ಮಾತನಾಡಿ ಒಂದು ವೇಳೆ ಮುಗಿದರೆ, ಇವತ್ತಿನ ಅಜೆಂಡಾದಲ್ಲಿ question hour ಇಲ್ಲ ಅಲ್ಲವೆ, ಹಾಗಾದರೆ 15 ಪ್ರಶ್ನೆಗಳನ್ನೇ ಕೇಳಬೇಕು ಎಂದು ಎಲ್ಲಿ ನಿಯಮವಿದೆ? ನಾಳೆಗೆ 30 ಪ್ರಶ್ನೆಗಳನ್ನು ತೆಗೆದುಕೊಳ್ಳಬಹದಲ್ಲವೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ನಾಳೆಯೂ ಮಾಡಿ, ಆದರೆ time ಬೇಕಷ್ಟೆ. ನಾಳೆ ಮತ್ತೆ Calling attention, rule 69 ಇವೆಲ್ಲವೂ ಇರುತ್ತವೆ.

(ಗೊಂದಲ)

ಅಧ್ಯಕ್ಷರು: ನೋಡೋಣ, ನಾಳೆ ಎಷ್ಟೋತ್ತಾಗುತ್ತದೆ, ಅಗತ್ಯ ಬಿದ್ದರೆ ರಾತ್ರಿವರೆಗೂ ನಡೆಸೋಣವಂತೆ.

(ಗೊಂದಲ)

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾನು ಉತ್ತರ ಕೊಟ್ಟ ಮೇಲೆ question hour ಇಟ್ಟುಕೊಳ್ಳಬಹುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಸಾಕಷ್ಟು ಬಾರಿ ತಾವೇ ಹೇಳುತ್ತೀರಿ ಮತ್ತು ನಿಯಮವನ್ನೂ ಮಾಡಿದ್ದೀರಿ. ನಿಲುವಳಿ ಸೂಚನೆ, ಚರ್ಚೆ ಯಾವುದೇ ಇದ್ದರೂ ಸಹ question hour ಆದ ಮೇಲೆ ಅವಕಾಶ ಕೊಡುತ್ತೇನೆಂದು ತಾವೇ ಹೇಳುತ್ತೀರಿ.

(ಗೊಂದಲ)

ಅಧ್ಯಕ್ಷರು: ತಾವು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ, ಆದರೆ, ಇಂಥ ಸಂದರ್ಭದಲ್ಲಿ ಈ ರೀತಿಯಾಗುತ್ತದಷ್ಟೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ವಿಶೇಷ ಸಂದರ್ಭಗಳಲ್ಲಿ ಮಧ್ಯಾಹ್ನ ಸಮಯದಂದು ಪ್ರಶ್ನೋತ್ತರವನ್ನು ಇಟ್ಟುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಇವತ್ತು question hour ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಏಕೆಂದರೆ, questions ನಾವು mention ಮಾಡಿಲ್ಲ. ಉತ್ತರ ಕೊಡುವುದು ಹೇಗೆ, ಅವರು ಹೇಳುವುದು ಹೇಗೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಆಯಿತು, ನಾಳೆ ಇಟ್ಟುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ನಾಳೆಗೆ ನೋಡೋಣ.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ: ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಸಣ್ಣ ಪ್ರಕಟಣೆ.

(ಗೊಂದಲ)

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಅಧ್ಯಕ್ಷರು: Statement ಮಾಡಿದ್ದೀರಾ?

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ: ಹೌದು ಅಧ್ಯಕ್ಷರೆ, ಮಾಡಿದ್ದೇನೆ.

(ಗೊಂದಲ)

ಅಧ್ಯಕ್ಷರು: ಮಂತ್ರಿಗಳು ಒಂದು statement ಮಾಡುತ್ತಾರೆ.

(ಗೊಂದಲ)

(ಮುಂದುವರೆದಿದೆ)

27.03.2017 / 11.10 (05) MPL-VR

ಶ್ರೀ ಕೃಷ್ಣ ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಸಣ್ಣ ಪ್ರಕಟಣೆ.

ಅಧ್ಯಕ್ಷರು : Statement ಮಾಡುತ್ತೀರಾ?

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಮಂತ್ರಿಗಳು ಒಂದು statement ಮಾಡುತ್ತಾರಂತೆ. ನಿಮಗೆ ನಂತರ ಅವಕಾಶ ಕೊಡುತ್ತೇನೆ ರೇವಣ್ಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಒಂದು ನಿಲುವಳಿ ಸೂಚನೆ. .

ಅಧ್ಯಕ್ಷರು : ಮಂತ್ರಿಗಳು statement ಮಾಡಿದ ಮೇಲೆ mention ಮಾಡಿ. ಏನೋ statement ಮಾಡುತ್ತಾರಂತೆ. ಮಾಡಲಿ.

ಶ್ರೀ ಜಗದೀಶ್ ಶೆಟ್ಟರ್ : Statement ಯಾವುದರ ಬಗ್ಗೆ?

ಶ್ರೀ ಕೃಷ್ಣ ಭೈರೇಗೌಡ : ಒಂದು ಸಣ್ಣ statement ಇದೆ, ಎಲ್ಲರಿಗೂ ಮನವಿ ಇದೆ. ಬೆಂಗಳೂರು ಮಹಾನಗರ ಪಾಲಿಕೆಯವರು ಹೊರಗಡೆ ಒಂದು 'ಸಾವಯವ ಸಂತೆ' 'Compost Sante' ಎಂದು ವಿಧಾನಸೌಧದ ಆವರಣದಲ್ಲಿ ಇಟ್ಟುಕೊಂಡಿದ್ದಾರೆ. ಎಲ್ಲರಿಗೂ ಮನವಿ ಎಂದರೆ ಸದಸ್ಯರು ಸಮಯ ಸಿಕ್ಕಾಗ ದಯವಿಟ್ಟು 10-15 ನಿಮಿಷ ಹೋಗಿ ನೋಡಿದರೆ ಒಳ್ಳೆಯದು. ಉದ್ದೇಶ ಏನೆಂದರೆ, ಬೆಂಗಳೂರು ಮತ್ತು ಎಲ್ಲಾ ಕಡೆ ಕಸ ದೊಡ್ಡ ಸಮಸ್ಯೆ ಆಗಿದೆ. ನಾವು ಹಸಿ ಕಸವನ್ನು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮನೆಯಲ್ಲಿಯೇ ಬೇಕಾದರೂ ಗೊಬ್ಬರ ಮಾಡಿಕೊಳ್ಳಬಹುದು. ಅಥವಾ ಹಸಿ ಕಸವನ್ನು ಬೇರ್ಪಡಿಸಿ ಕೊಟ್ಟರೆ ಬೆಂಗಳೂರು ಮಹಾನಗರ ಪಾಲಿಕೆಯವರು ಅದನ್ನು ಗೊಬ್ಬರವನ್ನಾಗಿ ಪರಿವರ್ತನೆ ಮಾಡುತ್ತಾರೆ. ಒಣಕಸ ಏನಿದೆ, ಗಾಜು, ಪೇಪರ್, ಪ್ಲಾಸ್ಟಿಕ್ ಇದನ್ನು ಅವರು ಕೆ.ಜಿ ಗೆ ಇಂತಿಷ್ಟು ಎಂದು ಅನೇಕರು ಕೊಂಡುಕೊಳ್ಳುವವರಿದ್ದಾರೆ, ಅವರಿಗೆ ಮಾರಾಟ ಮಾಡುತ್ತಾರೆ. ಇದರ ಮುಖಾಂತರ sustainable waste management ಅನ್ನು ಮಾಡುವ ಪ್ರಯತ್ನವನ್ನು ಬಿ.ಬಿ.ಎಂ.ಪಿ ಯವರು ಮಾಡುತ್ತಿದ್ದಾರೆ. ಅದನ್ನು ನಮ್ಮೆಲ್ಲರಿಗೂ ಸಹ ಪರಿಚಯ ಮಾಡಿಕೊಡಬೇಕೆಂದು ಇವತ್ತು ಬೆಂಗಳೂರಿನ ಎಲ್ಲಾ ಕಡೆ ಮಾಡುತ್ತಿರುವುದನ್ನು ವಿಧಾನಸೌಧದ ಆವರಣದಲ್ಲಿಯೂ ಮಾಡಿದ್ದಾರೆ. ತಾವು ದಯವಿಟ್ಟು ಅದನ್ನು ಒಂದು ಬಾರಿ ವೀಕ್ಷಣೆ ಮಾಡಿದರೆ ರಾಜ್ಯದ ಜನ ಪ್ರತಿನಿದಿಗಳು ಬೆಂಗಳೂರಿನಲ್ಲಿ ವಾಸ ಮಾಡುವವರು ನಮ್ಮ ಮನೆಯಲ್ಲಿ ನಾವು ಕಸ ಬೇರ್ಪಡಿಸುವುದನ್ನು ನಾವು ಆರಂಭ ಮಾಡಿದರೆ ಬೇರೆ ನಾಗರೀಕರಿಗೂ ಅದು ಪ್ರೇರಣೆಯಾಗುತ್ತದೆ. ನಾನು ಎಲ್ಲರಿಗೂ ಮನವಿ ಮಾಡುತ್ತೇನೆ. ದಯವಿಟ್ಟು 10 ನಿಮಿಷ ಬಿಡುವು ಮಾಡಿಕೊಂಡು 4.00 ಗಂಟೆಯವರೆಗೆ ಇರುತ್ತದೆ. ಯಾವ ರೀತಿ ನಮ್ಮ ಮನೆಯಲ್ಲಿ ನಾವೇ ಕಸವನ್ನು ಬೇರ್ಪಡಿಸಬಹುದೆಂಬ ಎಲ್ಲಾ ಮಾದರಿಗಳನ್ನು ಅಲ್ಲಿ ಇಟ್ಟಿದ್ದಾರೆ. ಒಂದು ವೀಕ್ಷಣೆ ಮಾಡುವುದು, ಎರಡನೆಯದು ತಮ್ಮ ಮುಖಾಂತರ ಮನವಿ ಮಾಡುತ್ತೇನೆ. ರಾಜ್ಯಕ್ಕೆ ಮಾದರಿಯಾಗಬೇಕಾದರೆ ನಾವುಗಳು ನಮ್ಮ ನಮ್ಮ ಮನೆಗಳಲ್ಲಿ ಕಸವನ್ನು segregation ಮಾಡುವಂತಹ ಒಂದು pledge ಅನ್ನು, ಪ್ರತಿಜ್ಞೆಯನ್ನು ನಾವು ಮಾಡಿದರೆ ರಾಜ್ಯದ ಜನರು, ಬೆಂಗಳೂರಿನ ಜನರು ನಮ್ಮನ್ನು ಅನುಸರಿಸುತ್ತಾರೆ. ಹಾಗಾಗಿ ಒಂದು ಬಾರಿ ನೋಡಿ ದಯವಿಟ್ಟು ನಮ್ಮ ನಮ್ಮ ಮನೆಗಳಲ್ಲಿ ಕನಿಷ್ಟ ಬೆಂಗಳೂರಿನಲ್ಲಿ ಯಾರು ವಾಸ ಮಾಡುತ್ತಾರೆ ಅವರಾದರೂ ಸಹ ನಮ್ಮ ಮನೆಯಲ್ಲಿ ನಾವು waste segregation ಗೆ ಒಂದು ಪ್ರತಿಜ್ಞೆಯನ್ನು ಮಾಡಬೇಕೆಂದು ಎಲ್ಲಾ ಸದಸ್ಯರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇಂದು ಬೆಳಿಗ್ಗೆ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

**ನಿಯಮ 60 ರ ಅಡಿ ಚರ್ಚೆಗೆ ಮನವಿ**

27-03-2017

ವಿಷಯ: ಹೆಣ್ಣು ಮಕ್ಕಳ ಗರ್ಭಕೋಶವನ್ನು ತೆಗೆದ ಡಾಕ್ಟರ್ ಬಗ್ಗೆ.

ಅಧ್ಯಕ್ಷರು : ನೋಡೋಣ. ಮಧ್ಯಾಹ್ನ ಅಥವಾ ನಾಳೆ.

ಶ್ರೀ ಜಗದೀಶ್ ಶೆಟ್ಟರ್ : ಒಂದೇ ಒಂದು ನಾನು ಹೇಳುತ್ತೇನೆ. ಒಂದೆರಡು ಪ್ರಸ್ತಾಪ. ಏಕೆಂದರೆ, ಹಿಂದೆಯೂ ಚರ್ಚೆಯಾಗಿದೆ. ಇವತ್ತು ಗುಲ್ಬರ್ಗಾ ಜಿಲ್ಲೆಯಲ್ಲಿರಬಹುದು ಅಥವಾ ನಮ್ಮ ಹಾವೇರಿ ಜಿಲ್ಲೆಯ ರಾಣಿಬೆನ್ನೂರಿನಲ್ಲಿ ಲಂಬಾಣಿ ತಾಂಡಾದಲ್ಲಿರುವ ಸಾವಿರಾರು ಜನ ಹೆಣ್ಣು ಮಕ್ಕಳಿಗೆ ಗರ್ಭಕೋಶವನ್ನು ತೆಗೆದು ಹಾಕಿರುವ ಡಾಕ್ಟರ್ ನಡವಳಿಕೆ ಇದೆಯಲ್ಲ, ರಾಣಿಬೆನ್ನೂರಿನಲ್ಲಿ ಡಾ.ಶಾಂತಾ ಎಂಬುವವರು, ಗುಲ್ಬರ್ಗಾದಲ್ಲಿ ಖಾಸಗಿ ಡಾಕ್ಟರ್‌ಗಳು ಸಾವಿರಾರು ಜನ ಹೆಣ್ಣುಮಕ್ಕಳ ಗರ್ಭಕೋಶವನ್ನು ಆಪರೇಷನ್ ಎಂದು ತೆಗೆದು ಹಾಕುತ್ತಾರೆ. ಏನೋ ಹೊಟ್ಟೆನೋವು ಮತ್ತೊಂದು ಎಂಬ ಕಾರಣಕ್ಕಾಗಿ ಅವರ ಕಡೆಯಿಂದ 15 ರಿಂದ 20-25 ಸಾವಿರ ರೂ. ಗಳವರೆಗೆ ತೆಗೆದುಕೊಂಡು ಇವತ್ತೇನು ಶೋಷಣೆ ಮಾಡುತ್ತಾರಲ್ಲ, ಇಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಅದನ್ನು ನಿಯಮ 69 ಕ್ಕೆ convert ಮಾಡುತ್ತೇನೆ. ಇವತ್ತು ಅಥವಾ ನಾಳೆ ಚರ್ಚೆ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ಅದಕ್ಕಾಗಿ ಅದನ್ನು separate ಆಗಿ detail ಚರ್ಚೆ ಮಾಡುತ್ತೇನೆ. ಅದಕ್ಕಾಗಿ ನಿಲುವಳಿ ಸೂಚನೆ ಕೊಟ್ಟಿದ್ದೇನೆ. ಯಾವುದಾದರೂ ಸಂದರ್ಭದಲ್ಲಿ ಚರ್ಚೆಗೆ ಅವಕಾಶ ಕೊಡಬೇಕು.

ಅಧ್ಯಕ್ಷರು : ನಿಮಗೆ ಚರ್ಚೆಗೆ ಅವಕಾಶ ಕೊಡುತ್ತೇನೆ. ಸರ್ಕಾರದಿಂದ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಇದುವರೆಗೆ ಆ ಡಾಕ್ಟರ್‌ಗಳಿಗೆ punishment ಆಗಿಲ್ಲ. ಡಾಕ್ಟರ್ ಶಾಂತಾ free ಯಾಗಿ ಅಡ್ಡಾಡುತ್ತಿದ್ದಾನೆ. ಅವನನ್ನು arrest ಮಾಡಿ ಜೈಲಿಗೆ ಹಾಕಬೇಕು. ಅಂತಹ ಡಾಕ್ಟರನ್ನು ಜೈಲಿನೊಳಗೆ ಹಾಕಬೇಕು.

ಅಧ್ಯಕ್ಷರು : ಆಯಿತು, ನಿಮಗೆ ಅವಕಾಶ ಕೊಡುತ್ತೇನೆ. ಸರ್ಕಾರದಿಂದ ಉತ್ತರವನ್ನೂ ಕೊಡಿಸುತ್ತೇನೆ.



ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

27-03-2017

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, Specific ಆಗಿ ಉತ್ತರ ಬೇಕು.

ಅಧ್ಯಕ್ಷರು : ಕೊಡಿಸುತ್ತೇನೆ. ರೇವಣ್ಣ ಅವರದು ಏನು?

ಶ್ರೀ ಜಗದೀಶ್ ಶೆಟ್ಟರ್ : Separate ಆಗಿ ಚರ್ಚೆಗೆ ಅವಕಾಶ ಕೊಡಿ. ಬಹಳ ಶೋಷಣೆ ಆಗಿದೆ. ತಾಂಡಾದ ಹೆಣ್ಣು ಮಕ್ಕಳು. ತಾಂಡಾದ ಬಗ್ಗೆ ಕಾಳಜಿ ವಹಿಸಿ ಮೊನ್ನೆ ಬಿಲ್ ಪಾಸ್ ಮಾಡಿದ್ದೀರಿ. ಆದರೆ ಅದೇ ತಾಂಡಾದ ಸಾವಿರಾರು ಹೆಣ್ಣುಮಕ್ಕಳ ಗರ್ಭಕೋಶ ತೆಗೆದು ಹಾಕಿದ್ದಾರೆ.

ಅಧ್ಯಕ್ಷರು : Last session ನಲ್ಲಿ ಇದನ್ನು ರೈಸ್ ಮಾಡಿದ್ದಿರಿ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾಳೆ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : .... ಮತ್ತೆ ಎಂತಹ ಚರ್ಚೆ?

ಶ್ರೀ ಜಗದೀಶ್ ಶೆಟ್ಟರ್ : ಇನ್ನೂ ಹೇಳುವುದಿದೆ. ಚರ್ಚೆ ಬೇಡವೇನು? ಏನು ಕಾಗೋಡು ತಿಮ್ಮಪ್ಪ ನವರು ಇಷ್ಟು senior ಆಗಿ ನೀವು ಚರ್ಚೆ ಬೇಡ, ಹೇಳಿದ್ದು ಆಗಿದೆ ಎಂದರೆ ಏನು ನೀವು? 2 ನಿಮಿಷವೂ ನಾವು ಚರ್ಚೆ ಮಾಡಿಲ್ಲ. Detail ಆಗಿ ಚರ್ಚೆ ಆಗಬೇಕು.

ಅಧ್ಯಕ್ಷರು : ಸರ್ಕಾರದಿಂದ ಉತ್ತರ ಕೊಡಿಸುತ್ತೇನೆ ಬಿಡಿ.

ಶ್ರೀ ಜಗದೀಶ್ ಶೆಟ್ಟರ್ : ಶಾಂತಾಗೆ ಏನು ಮಾಡಿದಿರಿ ಹಾಗಾದರೆ ? ಕಳೆದ ಬಾರಿ ರಮೇಶ್ ಕುಮಾರ್ ರವರು ಹೇಳಿದರಲ್ಲ? ಏನು ಮಾಡಿದಿರಿ ? ಅವನ ಮೇಲೆ ಕ್ರಮ ಕೈಗೊಂಡಿರೇನು? Senior minister ಆಗಿ ನೀವು ಇಷ್ಟು ಲಘುವಾಗಿ ತೆಗೆದುಕೊಂಡರೆ ಹೇಗೆ ಕಾಗೋಡು ತಿಮ್ಮಪ್ಪ ನವರೆ. ತಾಂಡಾದ ಹೆಣ್ಣುಮಕ್ಕಳ ಮೇಲೆ ಕಾಳಜಿ ತೆಗೆದುಕೊಳ್ಳದೆ 2 ನಿಮಿಷ ಮಾತನಾಡಿದರೆ ಮುಗಿದು ಹೋಯಿತೇನು? ಡಾಕ್ಟರ್ ಶಾಂತಾ ಮೇಲೆ ಏನು ಕ್ರಮ ತೆಗೆದುಕೊಂಡಿರಿ? ಡಾಕ್ಟರ್‌ಗಳ ಮೇಲೆ ಏನು ಕ್ರಮ ತೆಗೆದುಕೊಂಡಿರಿ? ಇನ್ನುವರೆಗೆ ಆರಾಮವಾಗಿ ಅಡ್ಡಾಡುತ್ತಿದ್ದಾರೆ. ಶಾಂತಾ ರವರು ಇನ್ನೂ service ನಲ್ಲಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಸರ್ಕಾರ ಏನೂ ಮಾಡುತ್ತಿಲ್ಲ. ಅದರ ಬಗ್ಗೆ ನಾವು ಕೇಳಬಾರದೆ?

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಜಗದೀಶ್ ಶೆಟ್ಟರ್ : ಆ ತಾಂಡಾದ ಹೆಣ್ಣು ಮಕ್ಕಳ ಗರ್ಭಕೋಶ ತೆಗೆದಿದ್ದಾರಲ್ಲ. ಅವರಿಗೆ ಅನ್ಯಾಯವಾಗಿದೆ. ಯಾರು ಕಾಳಜಿ ತೆಗೆದುಕೊಳ್ಳುತ್ತೀರಿ ಅವರ ಬಗ್ಗೆ. ತಪ್ಪಿತಸ್ಥ ಡಾಕ್ಟರ್ ಗಳ ಮೇಲೆ ಕ್ರಮ ತೆಗೆದುಕೊಳ್ಳಿ.

ಅಧ್ಯಕ್ಷರು : ಅವಕಾಶ ಕೊಡೋಣ. ಒಂದು ನಿಮಿಷದಲ್ಲಿ ಕೇಳಿ.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್ : ಆರೋಗ್ಯ ಮಂತ್ರಿಗಳು ಬಂದ ನಂತರ ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಏನು ಹೇಳುತ್ತಾರೆ?

ಶ್ರೀ ಕೆ.ಜೆ.ಜಾರ್ಜ್ : ಏನು ಹೇಳುತ್ತಾರೆಂದರೆ ಕೇಳಿದರೆ.

ಶ್ರೀ ಜಗದೀಶ್ ಶೆಟ್ಟರ್ : ಇದುವರೆಗೂ action ಆಗಿಲ್ಲ. ಏನೂ ಕ್ರಮ ಕೈಗೊಂಡಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅವರು ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲವಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಇಷ್ಟೆಲ್ಲಾ light ಆಗಿ ತೆಗೆದುಕೊಂಡಿದ್ದೀರಿ. ಇದು ಸರಿಯಲ್ಲ. ಚರ್ಚೆಗೆ ಅವಕಾಶ ಕೊಡಿ ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು : ಕೇಳಿ ಶೆಟ್ಟರೆ. ಒಂದು ನಿಮಿಷ please. ಹೋದ ಅಧಿವೇಶನದಲ್ಲಿ ಇದೇ ವಿಷಯವನ್ನು ಇಲ್ಲಿಯೇ raise ಮಾಡಿದಿರಿ. ಆಗ ಆರೋಗ್ಯ ಮಂತ್ರಿಗಳು ಇದ್ದರು.

ಶ್ರೀ ಜಗದೀಶ್ ಶೆಟ್ಟರ್ : ಎರಡು ದಿನ ಸಮಯ ಕೇಳಿದರು.

ಅಧ್ಯಕ್ಷರು : ಉತ್ತರ ಕೊಡುತ್ತೇವೆ ಎಂದರು. ಅವನಿಗೆ posting ಕೊಡಬಾರದೆಂದು ಹೇಳಿದಿರಿ.

ಶ್ರೀ ಜಗದೀಶ್ ಶೆಟ್ಟರ್ : ಅವನ ಮೇಲೆ criminal case file ಮಾಡಬೇಕು.

ಅಧ್ಯಕ್ಷರು : ಹೇಳುತ್ತೇನೆ. Posting ಅನ್ನು ಅವನಿಗೆ ಕೊಟ್ಟಿಲ್ಲ. ಅವನ ಮೇಲೆ ಕ್ರಿಮಿನಲ್ ಕೇಸ್ನು initiate ಮಾಡಬೇಕು ಎಂದಿರಿ.

ಶ್ರೀ ಜಗದೀಶ್ ಶೆಟ್ಟರ್ : ಇನ್ನೂ ಕ್ರಿಮಿನಲ್ ಕೇಸ್ ಆಗಿಲ್ಲ.

ಅಧ್ಯಕ್ಷರು : ಕ್ರಿಮಿನಲ್ ಕೇಸು ಹಾಕಿಲ್ಲ ಎನ್ನುತ್ತೀರಿ. ಅದಕ್ಕೆ ಉತ್ತರ ಕೊಡಿಸುತ್ತೇನೆ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಜಗದೀಶ್ ಶೆಟ್ಟರ್ : ಕ್ರಿಮಿನಲ್ ಕೇಸೂ ಹಾಕಿಲ್ಲ. ಅವನನ್ನು ಅರೆಸ್ಟೂ ಮಾಡಿಲ್ಲ. ಅವನಿಗೆ ಇಲ್ಲಿಯವರೆಗೆ ಏನೂ punishment ಮಾಡಿಲ್ಲ. Free ಯಾಗಿ ಅಡ್ಡಾಡುತ್ತಾನೆ ಆತ.

ಅಧ್ಯಕ್ಷರು : ಆಯಿತು. ನಿಮಗೆ ಉತ್ತರ ಕೊಡಿಸುತ್ತೇನೆ ಬಿಡಿ. ರೇವಣ್ಣ ನವರೆ ನಿಮ್ಮದೇನು?

**ಹಕ್ಕುಚ್ಯುತಿ ಮಂಡನೆ ಬಗ್ಗೆ**

**ವಿಷಯ: ಮಾನ್ಯ ಸದಸ್ಯರ ಹೆಸರನ್ನು ನಮೂದಿಸಿಲ್ಲದಿರುವ ಬಗ್ಗೆ.**

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನಸಭೆ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 190 ರಡಿಯಲ್ಲಿ ಹಕ್ಕುಚ್ಯುತಿಯನ್ನು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ.

ಅಧ್ಯಕ್ಷರು : ಯಾವ ವಿಷಯಕ್ಕೆ ಸಂಬಂಧಪಟ್ಟಿದ್ದಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ .. . .

ಅಧ್ಯಕ್ಷರು : ವಿಷಯ ಏನೆಂದು ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಅದೇ ವಿಷಯವನ್ನು ಈಗ ಓದುತ್ತೇನೆ. ದಿನಾಂಕ 26.3.2017 ರ ಭಾನುವಾರದಂದು ಬೆಂಗಳೂರಿನ ಯಶವಂತಪುರ ರೈಲು ನಿಲ್ದಾಣದಲ್ಲಿ ಕೇಂದ್ರ ರೈಲ್ವೆ ಸಚಿವರಾದ ಶ್ರೀ ಸುರೇಶ್ ಕುಮಾರ್ ಅವರು, ಸನ್ಮಾನ್ಯ ಮುಖ್ಯ ಮಂತ್ರಿಯವರು, ಮಾಜಿ ಪ್ರಧಾನ ಮಂತ್ರಿಗಳಾದ ಮಾನ್ಯ ಹೆಚ್.ಡಿ.ದೇವೇಗೌಡ ಅವರು . . ..

ಅಧ್ಯಕ್ಷರು : ರೇವಣ್ಣ ಅವರೇ ಈ ವಿಷಯವನ್ನು ಈಗಾಗಲೇ ರೆಫರ್ ಮಾಡಿರುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, 45 ಕಿ.ಮೀ. ರಸ್ತೆ ನನ್ನ ಮತಕ್ಷೇತ್ರಕ್ಕೆ ಬರುತ್ತದೆ ಮತ್ತು ಇದರ ಜೊತೆಯಲ್ಲಿ ಎರಡು ರೈಲ್ವೆ ನಿಲ್ದಾಣಗಳೂ ಸಹ ಬರುತ್ತದೆ. ನನ್ನ ಹೆಸರನ್ನು ಬೇಕೆಂದೇ ನಮೂದಿಸಿರುವುದಿಲ್ಲ.

ಅಧ್ಯಕ್ಷರು : ಈಗಾಗಲೇ ನೀವು ಹೇಳುತ್ತಿರುವ ವಿಷಯವನ್ನು ರೆಫರ್ ಮಾಡಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರದ ಅಧಿಕಾರಿಗಳಾಗಲಿ, ಕೇಂದ್ರ ಸರ್ಕಾರದ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಧಿಕಾರಿಗಳಾಗಲಿ ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಹಕ್ಕುಚ್ಯುತಿ ಆಗಬೇಕು. 21 ವರ್ಷಗಳ ಕಾಲ ಸತತವಾಗಿ 11 ಮಂತ್ರಿಗಳನ್ನು ಮತ್ತು ನಾಲ್ಕು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಆ ರೈಲ್ವೆ ಮಾರ್ಗ ಮಾಡುವುದಕ್ಕೆ ಪ್ರಮುಖ ಕಾರ್ಯಕರ್ತನಾಗಿದ್ದೇನೆ. 45 ಕಿ.ಮೀ. ನನ್ನ ಕ್ಷೇತ್ರಕ್ಕೆ ಬರುತ್ತದೆ.

ಅಧ್ಯಕ್ಷರು : ನಿಮ್ಮ ಉದ್ದೇಶ ಈಡೇರಿದೆ. I have already referred to the Privilege Committee.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನನ್ನ ಹೆಸರನ್ನು ಬೇಕೆಂತಲೇ ದುರುದ್ದೇಶದಿಂದ invitation ನಲ್ಲಿ ಹಾಕಿರುವುದಿಲ್ಲ. ಹಾಗಾಗಿ ಹಕ್ಕುಚ್ಯುತಿ ಆಗಬೇಕೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ರೇವಣ್ಣ ನವರೇ, ನಿಮ್ಮ ನೋಟೀಸ್ ಮೇಲೆ ಈಗಾಗಲೇ I have taken decision to refer it to the Privilege Committee. ಈಗ ವರದಿಗಳನ್ನು ಒಪ್ಪಿಸುವುದು. ಆರ್. ಅಶೋಕ್ ಅವರು.

**ವರದಿಗಳನ್ನೊಪ್ಪಿಸುವುದು**

**ಶ್ರೀ ಆರ್. ಅಶೋಕ್ :** ಮಾನ್ಯ ಅಧ್ಯಕ್ಷರೆ, 14ನೇ ವಿಧಾನಸಭೆಯ 2016-17 ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷನಾದಂತಹ ನಾನು ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದ 7ನೇ ವರದಿ,ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ 8ನೇ ವರದಿ ಹಾಗೂ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಿಸಿದ 9ನೇ ವರದಿಯನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಗಿದೆ. ಈಗ ಆಯವ್ಯಯದ ಮೇಲೆ ಚರ್ಚೆ. ಮಾನ್ಯ ಸದಸ್ಯರಾದ ಬೊಮ್ಮಾಯಿಯವರು ಪ್ರಾರಂಭ ಮಾಡುವುದು.

**2017-18ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ**

ಶ್ರೀ ಬಸವರಾಜ ಬೊಮ್ಮಾಯಿ (ಶಿಗ್ಗಾಂವ್): ಮಾನ್ಯ ಅಧ್ಯಕ್ಷರೆ, ಆಯವ್ಯದ ಮೇಲೆ ಚರ್ಚೆಯನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ಪ್ರಥಮದಲ್ಲಿ ತಮಗೆ ಧನ್ಯವಾದ ಗಳನ್ನು ಹೇಳುತ್ತಾ, ನಾನು ಮೊನ್ನೆ ಶುಕ್ರವಾರದ ದಿನದಂದು ಬಜೆಟ್ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿದಂತಹ ಸಂದರ್ಭದಲ್ಲಿ 2-3 ವಿಚಾರಗಳನ್ನು ಪ್ರಸ್ತಾಪ ಮಾಡಿರುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿರುವುದರಿಂದ ಅದೇ ವಿಚಾರಗಳನ್ನು ಮತ್ತೊಮ್ಮೆ ಹೇಳುವುದಕ್ಕೆ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಅವಶ್ಯಕತೆಯಿದೆಯೆಂದು ನಾನು ಭಾವಿಸುತ್ತೇನೆ. ಬಜೆಟ್ ಒಂದು ವರ್ಷದ ವರಮಾನ ಖರ್ಚು ಮತ್ತು ಅದರ ಲೆಕ್ಕಪತ್ರ ಅಷ್ಟೇ ಅಲ್ಲ, ಇಡೀ ನಮ್ಮ ರಾಜ್ಯದ ಆರ್ಥಿಕ ಬೆಳವಣಿಗೆಗೆ, ಸಾಮಾಜಿಕ ಬೆಳವಣಿಗೆಗೆ ಬಹಳ ದೊಡ್ಡ ಪಾತ್ರವನ್ನು ವಹಿಸುತ್ತದೆ. ಪ್ರತಿಯೊಂದು ವರ್ಷದ ಬಜೆಟ್‌ಗೂ ಅದರದೇ ಆದಂತಹ ಹಿನ್ನೆಲೆ ಇರುತ್ತದೆ. ಈ ವರ್ಷದ ಬಜೆಟ್‌ನಲ್ಲಿ, ಭಾರತದಲ್ಲಿ 1991-92 ರಲ್ಲಿ economic reforms ಬಂದ ಮೇಲೆ, ಅದರ ಪರಿಣಾಮ ಇಂದು ಬಜೆಟ್ ಮೇಲೆ. . 1991-92 ರ economic reforms ಬಂದ ಮೇಲೆ, ಈಗ full circle ಬಂದು ಈಗ complete ಆಗುತ್ತಿದೆ. ಅಂತರರಾಷ್ಟ್ರೀಯ ಮಟ್ಟದ WTO ಅಗ್ರಿಮೆಂಟ್ ಆದ ಮೇಲೆ ಖಾಸಗೀಕರಣ, ಉದಾರೀಕರಣದ ಹಿನ್ನೆಲೆಯಲ್ಲಿ ಇಂದು tax reforms ಮಾಡುವುದು ಅಷ್ಟೇ ಅವಶ್ಯಕತೆಯಿತ್ತು. ಈ tax reformsಗೆ ಮೊದಲನೇ ಆದ್ಯತೆ ಕೊಡಬೇಕು. ಆದರೆ ನಾವು ಅಂತರರಾಷ್ಟ್ರೀಯ ಮಟ್ಟದ ಅಗ್ರಿಮೆಂಟ್‌ಗಳ ಟ್ರೇಡ್‌ಗೆ, economic developmentಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುವುದು ಅಂದು ಅವಶ್ಯಕತೆಯಿತ್ತು. ಆದರೆ ಒಂದು ದೇಶದ ಆರ್ಥಿಕ ಅಭಿವೃದ್ಧಿಗೆ ಬೇಕಾಗಿರುವಂತಹ ಹಣಕಾಸಿನ ಕ್ರೋಢೀಕರಣ ನಮ್ಮ ತೆರಿಗೆ ನೀತಿ ಮೇಲೆ ನಿಂತಿದೆ. ಒಂದು ತೆರಿಗೆಯನ್ನು ಏಕೆ ಹಾಕಬೇಕು ಮತ್ತು ಯಾವ ರೀತಿ ಹಾಕಬೇಕು ಎನ್ನುವುದಕ್ಕೂ ಒಂದು ನೀತಿ ಇದೆ. ಒಂದು ತೆರಿಗೆಯನ್ನು ಹಾಕಬೇಕಾದರೆ ಮೊದಲು it should be affordable.

(ಮುಂದು. . . .)

27.03.2017-11.20-(6) BR-VR

ಶ್ರೀ ಬಸವರಾಜ್ ಬೊಮ್ಮಾಯಿ: (ಮುಂದು)

ಯಾವ ಜನರ ಮೇಲೆ ತೆರಿಗೆ ಹೊರೆ ಹಾಕುತ್ತೇವೆ, ಆ ತೆರಿಗೆಯನ್ನು ಕಟ್ಟುವಂಥ ಶಕ್ತಿ, ಸಶಕ್ತಿ ಆ ಜನರ ಬಳಿಗಡೆ ಇರಬೇಕು. Tax should be affordable. ಎರಡನೆಯದು, tax should be equitable. ಅದು ಒಂದು ವರ್ಗಕ್ಕೆ ಹೊರೆಯಾಗುವುದು, ಇನ್ನೊಂದು ವರ್ಗಕ್ಕೆ ಆಗದೇ ಇರುವುದಕ್ಕಿಂತ ಅದು ಎಲ್ಲರಿಗೂ ಸಮನಾದ tax ಹೊರೆ ಬೀಳಬೇಕು, Equitable.

ಅಧ್ಯಕ್ಷರು: Proportionally equitable.

ಶ್ರೀ ಬಸವರಾಜ್ ಬೊಮ್ಮಾಯಿ: ಅಂದರೆ affordable ಆಧಾರದ ಮೇಲೆ. ಯಾರು ಹೆಚ್ಚಿಗೆ ಶಕ್ತಿ ಇರುತ್ತದೆ, ಅದರ ಆಧಾರದ ಮೇಲೆ. Third is, the tax should be accountable. ಯಾವುದಕ್ಕೆ ನಾವು ತೆರಿಗೆಯನ್ನು ಹಾಕುತ್ತೇವೆ, ನಮ್ಮ ಗುರಿ ಎಷ್ಟು? ಎಷ್ಟು ಬಂದಿದೆ? ಎನ್ನುವಂಥದ್ದು accountable and last the tax should be purposeful. ಯಾವ ಉದ್ದೇಶಕ್ಕಾಗಿ ನಾವು ತೆರಿಗೆಯನ್ನು ಹಾಕುತ್ತೇವೆ, ಎನ್ನುವುದು ಬಹಳ ಪ್ರಾಮುಖ್ಯವಾಗುತ್ತದೆ. ಈ ನಾಲ್ಕು ನೀತಿಗಳಿಂದ ನಾವು ಜನರ ಮೇಲೆ ತೆರಿಗೆ ಹೊರೆಯನ್ನು ಹಾಕುತ್ತೇವೆ. ಮುಖ್ಯ ಮಂತ್ರಿಗಳೆ, tax ಹಾಕಬೇಕಾದರೆ ಒಂದು ನೀತಿ ಇದೆ. ಒಂದು affordable, ಜನರಿಗೆ ಆ ಟ್ಯಾಕ್ಸ್ ಕಟ್ಟುವ ಶಕ್ತಿ ಇರಬೇಕು. ಇನ್ನೊಂದು equitable, ಮೂರನೆಯದು accountable, ನಾಲ್ಕನೆಯದು purposeful, ಯಾವ purposeಗೆ ಹಾಕುತ್ತೇವೆ ಅದು ಈಡೇರಬೇಕು. ಈ ನಮ್ಮ economic reformsನಲ್ಲಿ tax ಪ್ರಾಮುಖ್ಯತೆಯನ್ನು ಪಡೆಯುತ್ತದೆ, ಆದರೆ ಇವತ್ತು economic reforms 1991-92ರ ಒಂದು full circle ಬಂದಿದ್ದೇವೆ. ಈಗ ನಾವು tax reforms ತೆಗೆದುಕೊಂಡಿದ್ದೇವೆ. ಮುಂಬರುವ ದಿನಗಳಲ್ಲಿ ಇಡೀ ದೇಶಕ್ಕೆ GST ಬರುವಂಥ ಹಂತಕ್ಕೆ ಇವತ್ತು ನಾವು ತಲುಪಿದ್ದೇವೆ. ಬಹುತೇಕವಾಗಿ ಜೂನ್ ನಂತರ GST ಎಲ್ಲಾ ರಾಜ್ಯಗಳಿಗೆ ಬರುತ್ತದೆ, ನಮ್ಮ ರಾಜ್ಯಕ್ಕೂ ಸಹ ಬರುತ್ತದೆ. ಅದರ ಹಿನ್ನೆಲೆಯಲ್ಲಿ ನಾವು ಬಜೆಟನ್ನು ನೋಡುವಂಥದ್ದು ಬಹಳ ಪ್ರಮುಖವಾಗಿದೆ. ಎರಡನೆಯದಾಗಿ, 14ನೇ ಹಣಕಾಸಿನ ಆಯೋಗ ಏನು recommendation ಮಾಡಿದೆ . . .

ಶ್ರೀ ವೈ.ಎಸ್.ವಿ.ದತ್ತಾ: ಬೊಮ್ಮಾಯಿಯವರೆ, ಒಂದು ನಿಮಿಷ ನೀವು ತೆಗೆದುಕೊಳ್ಳುತ್ತಿರುವ ಪಾಯಿಂಟ್ ಕರೆಕ್ಟಾಗಿದೆ, ತೆರಿಗೆ ಬಗ್ಗೆ ನೀವು ಹೇಳುತ್ತಿದ್ದೀರಲ್ಲಾ, GST ಬಂದರೆ ರಾಜ್ಯಗಳಿಗೆ ಇರುವ ತೆರಿಗೆ ಹಾಕುವ ಅಧಿಕಾರ ಒಂದು ರೀತಿಯಲ್ಲಿ ಕಡಿಮೆಯಾಗುತ್ತದೆಯೋ, ಜಾಸ್ತಿಯಾಗುತ್ತದೆಯೋ? GST ಬಂದರೆ ರಾಜ್ಯದ ಆಯವ್ಯಯದ ಮೇಲೆ ಬೀಳಬಹುದಾದ ಪರಿಣಾಮ ಒಂದು ಚೂರು ಟಚ್ ಮಾಡಿದರೆ ಒಳ್ಳೆಯದು.

ಶ್ರೀ ಬಸವರಾಜ್ ಬೊಮ್ಮಾಯಿ: ಮಾಡುತ್ತೇನೆ, ಈಗ ನಾನು ಬರೀ preamble ಹೇಳಿದ್ದೇನೆ. GST ಬಗ್ಗೆ ಮಾತನಾಡುವಾಗ ಖಂಡಿತ detail ಆಗಿ ಹೇಳುತ್ತೇನೆ. ಇವತ್ತು 14ನೇ

27-03-2017

ಹಣಕಾಸಿನ ಆಯೋಗ, ಅದರ ಶಿಫಾರಸ್ಸುಗಳು ನೇರವಾಗಿ ನಮ್ಮ ರಾಜ್ಯದ ಆರ್ಥಿಕ ಸ್ಥಿತಿಯ ಮೇಲೆ ಪರಿಣಾಮ ಬೀಳುತ್ತದೆ. ಅದು Central taxesನಲ್ಲಿ state share ಏನಿದೆ, grant-in-aid ಎಷ್ಟು ಬರುತ್ತದೆ? ಅದರ ಆಧಾರದ ಮೇಲೆ ಒಟು ಬಜೆಟ್ಟಿನ sizeನ ತೀರ್ಮಾನವನ್ನು ಮಾಡುತ್ತೇವೆ. ಅದೂ ಸಹ ಕಳೆದ ವರ್ಷ ಬಂದಿದ್ದರಿಂದ ಅದರ ಪರಿಣಾವೂ ಈ ಬಜೆಟ್‌ನಲ್ಲಿ ಆಗುತ್ತದೆ. ಮೂರನೆಯದು, ಅಂತರರಾಷ್ಟ್ರೀಯ, ರಾಷ್ಟ್ರೀಯ ಆರ್ಥಿಕ ಪರಿಸ್ಥಿತಿ ಏನಿದೆ, ಅದೂ ಸಹ ನಮ್ಮ ಬಜೆಟ್ ಮೇಲೆ ಆಗುತ್ತದೆ. ಈ ವರ್ಷ ಮತ್ತೆ ನಮ್ಮ ಸರ್ಕಾರಿ ನೌಕರರ Pay Commission ನಾವು ಮಾಡುತ್ತಿದ್ದೇವೆ, ಅದೂ ಸಹ ಈ ಬಜೆಟ್ ಹಾಗೂ ಮುಂದಿನ ಬಜೆಟ್‌ಗಳ ಮೇಲೆ ಪರಿಣಾಮವಾಗುತ್ತದೆ. ಹೀಗೆ ಬಜಟ್‌ನ ಹೊರಗಡೆ ಇರುವಂಥ ಈ ಪ್ರಮುಖ ಆಯಾಮಗಳು ನೇರವಾಗಿ ಬಜೆಟ್ ಮೇಲೆ bearing ಅನ್ನು ಅವುಗಳ ಪರಿಣಾಮವನ್ನು ಬೀರುತ್ತಿವೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಆ ಹಿನ್ನೆಲೆಯಲ್ಲಿ ಇವತ್ತು ನಮ್ಮ ಮುಖ್ಯಮಂತ್ರಿಗಳು ಸುಮಾರು 1,86,000 ಕೋಟಿ ರೂಪಾಯಿಯಷ್ಟು ಒಟ್ಟು ಬಜೆಟ್‌ನಲ್ಲಿ ಖರ್ಚು ಮಾಡುತ್ತೇವೆ, ಎನ್ನುವ ಅಂದಾಜನ್ನು ನಮ್ಮ ರಾಜ್ಯದ ಜನತೆ ಮುಂದೆ ಈ ಸದನದ ಮುಖಾಂತರ ಇಟ್ಟಿದ್ದಾರೆ. ಕರ್ನಾಟಕ ಆರ್ಥಿಕವಾಗಿ ನಿರಂತರವಾಗಿ ಬೆಳವಣಿಗೆಯಾಗುತ್ತಿರುವ ರಾಜ್ಯ. ನಮ್ಮ ದೇಶದಲ್ಲಿ ಸುಮಾರು 8 ಪ್ರಗತಿ ಪರವಾದ ರಾಜ್ಯಗಳಿರುವುದರಿಂದ, ಅದರಲ್ಲಿ ಕರ್ನಾಟಕವೂ ಒಂದು. ಆರ್ಥಿಕವಾಗಿ ನಿರಂತರವಾಗಿ ಬೆಳವಣಿಯನ್ನು ತೋರಿಸುತ್ತಿರುವುದು. ಇಲ್ಲಿ, ನಮ್ಮ ಮುಂದೆ ಹಲವಾರು ಸವಾಲುಗಳಿವೆ. ನಮ್ಮ budget estimates ಪ್ರತಿ ವರ್ಷ ಹೆಚ್ಚಾಗುತ್ತದೆ. ಪ್ರತಿ ವರ್ಷವೂ ಸಹ ಸುಮಾರು 13 ರಿಂದ 15% ನಮ್ಮ ಬಜೆಟ್ ಹೆಚ್ಚಾಗುತ್ತಲೇ ಬಂದಿದೆ. ಇಲ್ಲಿ, budget size ಹೆಚ್ಚಾದ ತಕ್ಷಣ ಎಲ್ಲವೂ ಸರಿಯಾಗಿದೆ ಎನ್ನುವ ಭಾವನೆ ಬರುವುದಕ್ಕೆ ಸಾಧ್ಯವಿಲ್ಲ. ಒಂದು ಮಾತಿದೆ, 'In between concept and creation lies a shadow' ಎಂದು. ನಮ್ಮ ವಿಚಾರಕ್ಕೂ ಆಚರಣೆಗೂ ಮಧ್ಯೆ ಒಂದು ಸಣ್ಣ gap ಇದೆ. ಅದು ಎಷ್ಟು ಕಡಿಮೆ ಇರುತ್ತದೆ, ಅಷ್ಟು ನಮ್ಮ ಸದೃಢವಾದಂತಹ ವಿಚಾರಕ್ಕೆ ಸದೃಢವಾದ ಪರಿಣಾಮವನ್ನು ನಾವು ಕೊಡುವುದಕ್ಕೆ ಸಾಧ್ಯ. ಮೊದಲೆಲ್ಲಾ, World Bank ನಲ್ಲಿ statistical calculations ಇತ್ತು. ಈ statistical calculations ಬಹಳ ಸಲ ನಮಗೆ misguide ಮಾಡುವಂತಹ

27-03-2017

ಅವಕಾಶಗಳೂ ಇವೆ. ಹೀಗಾಗಿ World Bankನವರು ಇತ್ತೀಚೆಗೆ reality check ಮಾಡುತ್ತಾರೆ ಮತ್ತು co-efficient of growth ಏನಿದೆ, GSDP ಇತ್ತು, ಅದು ಈಗ ಬದಲಾವಣೆಯಾಗಿದೆ. World Bank ಸಹ ಬದಲಾವಣೆಯನ್ನು ಮಾಡುತ್ತಿದೆ. ಎಲ್ಲಕ್ಕಿಂತ ಮುಂಚೆ, ಅತ್ಯಂತ ಸಣ್ಣ ರಾಷ್ಟ್ರವಾದ ಭೂತಾನ್, ಭೂತಾನ್ ದೇಶದ ದೊರೆ co-efficient of happiness ತಂದ. ಅಂದರೆ, ಒಂದು ಸಂಸಾರದಲ್ಲಿ, ತಂದೆ ಮಕ್ಕಳು ಸುಖವಾಗಿದ್ದಾರೆ, ಒಳ್ಳೆಯ education ಇದೆ, health ಇದೆ, employment ಇದೆ, ಸಂಬಂಧಗಳು ಚೆನ್ನಾಗಿವೆ ಎನ್ನುವುದನ್ನು ಅಳತೆ ಮಾಡಿ ರಾಷ್ಟ್ರ ಹೇಗಿದೆ ಎನ್ನುವುದು co-efficient of happiness. ಇವತ್ತು World Bank ಸಹ co-efficient of happinessಅನ್ನು ಒಪ್ಪಿಕೊಂಡಿದೆ. ಆದುದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮನವಿಯನ್ನು ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ಇವತ್ತು ರಾಜ್ಯದಲ್ಲಿ GSDP ಜೊತೆಗೆ co-efficient of happiness ಎನ್ನುವ ಸರ್ವೆಯನ್ನು ದಯವಿಟ್ಟು ತಾವು ಮಾಡಿಸಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳೇ, ಈ GSDP calculations ಜೊತೆಗೆ co-efficient of happiness ಎಂದು ಏನಿದೆ, ಒಂದು ಸಂಸಾರದಲ್ಲಿ health, education, employment ಆರ್ಥಿಕ ಸ್ಥಿತಿ ಮತ್ತು ಇತರ ಒಂದು stability ಏನಿದೆ, ಅದನ್ನು ಈ ರಾಜ್ಯದಲ್ಲಿ ಒಂದು study ಮಾಡಿ ನೀವು ರಾಜ್ಯದ ಜನರ ಮುಂದೆ ಇಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತೇನೆ. ಆಗ ನೀವು ಏನು ಖರ್ಚು ಮಾಡಿದ್ದೀರಿ, ಯಾವ ವರ್ಗಕ್ಕೆ ಖರ್ಚು ಮಾಡಿದ್ದೀರಿ, ಅದು ಎಷ್ಟು ಪ್ರತಿಫಲವನ್ನು ಕೊಟ್ಟಿದೆ, ಎಷ್ಟು ಬದಲಾವಣೆಯನ್ನು ತಂದಿದೆ, ಅವರ ಜೀವನದ ಗುಣಮಟ್ಟ, ಕಟ್ಟಕಡೆಯ ಮನುಷ್ಯ, ಎಸ್‌ಸಿ/ಎಸ್‌ಟಿ, ಹಿಂದುಳಿದ ವರ್ಗ, ಅಲ್ಪ ಸಂಖ್ಯಾತರ ಬಗ್ಗೆ ಏನು ಅಭಿವೃದ್ಧಿಯಾಗಬೇಕು ಎನ್ನುವ ಚಿಂತನೆ ಏನಿದೆ, ಇದಕ್ಕೆ ಇವತ್ತು ದೊಡ್ಡ ಪ್ರಮಾಣದ ಹಣಕಾಸಿನ ನೆರವನ್ನು ಕೊಡಬೇಕೆನ್ನುವ ತಮ್ಮ ಇಚ್ಛೆ ಏನಿದೆ, ಈಗಾಗಲೇ ತಾವು ಕೊಟ್ಟಿರುವ ಹಣಕಾಸಿನಲ್ಲಿ ಅವರ ಬದುಕಿನಲ್ಲಿ ಏನು ಬದಲಾವಣೆ ತಂದಿದೆ, ಅವರ ಜೀವನ ಗುಣಮಟ್ಟ ಯಾವರೀತಿ ಬದಲಾವಣೆಯಾಗಿದೆ, ಉತ್ತಮಗೊಂಡಿದೆಯೇ, ಇಲ್ಲವೋ, ಸ್ಥಗಿತವಾಗಿದೆಯೇ ಎನ್ನುವುದನ್ನು ನೀವು ಸರ್ವೇ ಮಾಡಿಸಬೇಕು. ಆಗ ಈ ನಿಮ್ಮ ಮಾತುಗಳಿಗೆ, ನಿಮ್ಮ ಅಂಕಿ ಅಂಶಗಳಿಗೆ ಬೆಲೆ ಬರುತ್ತದೆ. ಈಗ



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಉದಾಹರಣೆಗೆ, ತಾವೇ ನಿಮ್ಮ ಬಜೆಟ್‌ನಲ್ಲಿ ಹೇಳಿದ್ದೀರಿ, social sectorಗೆ ನೀವು ಕಳೆದ ನಾಲ್ಕು ವರ್ಷದಲ್ಲಿ ಏನು ಕೊಟ್ಟಿದ್ದೀರಿ, ಅದರಲ್ಲಿ ಸುಮಾರು ನೀವು ಕೊಟ್ಟಿರುವ ಹಣದಲ್ಲಿ 13,000 ಕೋಟಿ ರೂಪಾಯಿಯಷ್ಟು ಖರ್ಚು ಮಾಡಿಲ್ಲವೆಂದು ಹೇಳಿದ್ದೀರಿ.

ಅಧ್ಯಕ್ಷರು: ಬೊಮ್ಮಾಯಿಯವರೆ, ನೀವು ಸರ್ವೇ ಮಾಡಿಸಬೇಕೆಂದು ಹೇಳುತ್ತಿದ್ದೀರಲ್ಲಾ, ಈಗಾಗಲೇ ಸರ್ಕಾರದವರು Economic and Social survey ಮಾಡಿಸಿದ್ದಾರಲ್ಲಾ? ಅದರಲ್ಲಿ ಅವರ income ಇದೆ, ಆರ್ಥಿಕ ಪರಿಸ್ಥಿತಿ ಇದೆ, education ಇದೆ, ಎಲ್ಲವೂ ಅದರಲ್ಲಿ ಬರುತ್ತದೆಯಲ್ಲಾ?

ಶ್ರೀ ಬಸವರಾಜ್ ಬೊಮ್ಮಾಯಿ: ಹಾಗಲ್ಲಾ ಸರ್, ಅದು ವರ್ಷ ವರ್ಷಕ್ಕೆ comparative survey ಮಾಡಿಸಬೇಕು. ಈಗ ಉದಾಹರಣೆಗೆ, 2013-14ನೇ ಸಾಲಿನಲ್ಲಿ ಎಷ್ಟು SC/ST family ಗಳಿಗೆ ಮೂಲಭೂತಸೌಕರ್ಯ ಇತ್ತು, ಈಗ ಎಷ್ಟು ಹೆಚ್ಚಾಗಿದೆ, ಅವರ education level ಎಷ್ಟಿದೆ, ಈಗ Primaryಯಿಂದ Secondaryಗೆ ಬರುವಷ್ಟರಲ್ಲಿ ಅವರು 50% ಕಡಿಮೆಯಾಗುತ್ತಾರೆ.

(ಮುಂದುವರೆದಿದೆ)

27-03-2017/11-30/07/HRV/PS

ಶ್ರೀ ಬಸವರಾಜ ಬೊಮ್ಮಾಯಿ (ಮುಂ.ವ)

ಸೆಕೆಂಡರಿಯಿಂದ ಮತ್ತೆ higher education ಗೆ ಹೋಗುವುದರಲ್ಲಿ ಮತ್ತೆ ಕಡಿಮೆಯಾಗುತ್ತಾರೆ. ಈಗೇನು ಬದಲಾವಣೆಯಾಗಿದೆ. ಹೆಚ್ಚಿನ ರೀತಿಯಲ್ಲಿ ಇಷ್ಟೆಲ್ಲಾ ಸವಲತ್ತುಗಳನ್ನು ಕೊಟ್ಟಮೇಲೆ ಅವರು ಎಷ್ಟು ಜನ higher education ಗೆ ಹೋಗಿದ್ದಾರೆ, employment ನಲ್ಲಿ ಏನಾಗಿದೆ, ಒಟ್ಟಾರೆ ಅವರ ಆರ್ಥಿಕ ಪರಿಸ್ಥಿತಿಯಲ್ಲಿ ವರ್ಷ ವರ್ಷಕ್ಕೂ ಏನು ಬದಲಾವಣೆಯಾಗಿದೆ, ಎಷ್ಟು households ಅನ್ನು ನಾವು poverty line ನಿಂದ ಮೇಲಕ್ಕೆ

ತರುವುದಕ್ಕೆ ಸಾಧ್ಯವಾಗಿದೆ, ಇವೆಲ್ಲವನ್ನು ಕೂಡ every year comparative ಮಾಡಬೇಕು.

ಅಧ್ಯಕ್ಷರು:-Every year comparative survey ಮಾಡಿಸಿ ಬಜೆಟ್ ಮೇಲೆ ಅದು reflect ಆಗಬೇಕು ಎಂದು ತಾವು ಹೇಳುತ್ತಿರುವುದು.

ಶ್ರೀ ಬಸವರಾಜ ಬೊಮ್ಮಾಯಿ:-ಹೌದು, ಬಜೆಟ್ ಮೇಲೆ ಅದು reflect ಆಗಬೇಕು.

ಅಧ್ಯಕ್ಷರು:-Ok,

ಶ್ರೀ ಬಸವರಾಜ ಬೊಮ್ಮಾಯಿ:-We are able to bring so many families of SC/ST above the BPL ಎನ್ನುವಂಥದ್ದರ ಬಗ್ಗೆ, ಅಂದರೆ ನೀವು ಕೊಟ್ಟಿರುವಂಥದ್ದರಿಂದ ಅವರ ಜೀವನ ಗುಣಮಟ್ಟ ಹೆಚ್ಚಾಗಬೇಕಲ್ಲ, ಆ ರೀತಿ ಹೆಚ್ಚಾಗುವುದಕ್ಕೆ ತಮ್ಮ ಕಾರ್ಯಕ್ರಮಗಳು ಸರಿಯಾದ ದಿಕ್ಕಿನಲ್ಲಿ ಹೋಗುತ್ತಿದೆಯೆ ಎಂಬುದು ಗೊತ್ತಾಗುತ್ತಿಲ್ಲ. ನಿಮ್ಮ ಕಾರ್ಯಕ್ರಮಗಳು ಅವರ ಜೀವನದಲ್ಲಿ ಬದಲಾವಣೆಯನ್ನು ತರುತ್ತಾ ಇದೆಯೇ ಅಥವಾ ಇಲ್ಲವೆ ಎನ್ನುವಂಥದ್ದು ಗೊತ್ತಾದರೆ correction ಮಾಡಿಕೊಳ್ಳಬಹುದು, midcourse correction ಮಾಡಿಕೊಳ್ಳಬಹುದು. ಎರಡನೆಯದಾಗಿ, ಈಗ ನೀವೇ ಹೇಳಿದ್ದೀರಿ, ಕಳೆದ ನಾಲ್ಕು ವರ್ಷದಲ್ಲಿ 13 ಸಾವಿರ ಕೋಟಿ ರೂ.ಗಳಷ್ಟನ್ನು ಖರ್ಚು ಮಾಡುವುದಕ್ಕೆ ಆಗಿಲ್ಲವೆಂದು ತಮ್ಮ ಬಜೆಟ್‌ನಲ್ಲಿಯೇ ಹೇಳಿದ್ದೀರಿ. ಇಲ್ಲಿ ನಾವು ನಿಮ್ಮ integrity ಯನ್ನು ಪ್ರಶ್ನೆ ಮಾಡುವುದಿಲ್ಲ. ಆದರೆ ನೀವು ಹೊಸ ಚಿಂತನೆಯನ್ನು ಮಾಡಬೇಕೆಂದು ನನ್ನ ಸಲಹೆಯಿದೆ. ಏನೆಂದರೆ, the state capacity to convert the budget provisions into the programs which are targeted to the targeted sector or sections of the people, ಅಷ್ಟು infrastructure capacity ಏನಿದೆ ಅಷ್ಟು ಇಲ್ಲ, ಅದಕ್ಕಾಗಿ ಹೀಗೆ ಆಗುತ್ತಿದೆ, ತಾವು high power committee chairman ಆಗಿದ್ದೀರಿ, ಹಲವಾರು ವಿಚಾರಗಳು ತಮ್ಮ ಮುಂದೆ ಬಂದಿರುತ್ತವೆ. ಉದಾಹರಣೆಗೆ ತಾಲ್ಲೂಕು ಮಟ್ಟದಲ್ಲಿ ಒಬ್ಬ social welfare officer ಇದ್ದಾರೆ, ಜಿಲ್ಲಾ ಮಟ್ಟದಲ್ಲಿ ಒಬ್ಬರಿದ್ದಾರೆ. ಅವರು 39 ಇಲಾಖೆಗಳ ಹೊಣೆಗಾರಿಕೆಯನ್ನು ಮಾಡಬೇಕು. ಅವರು ಬೇರೆ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಇಲಾಖೆಯ ಅಧಿಕಾರಿಗಳ ಮೇಲೆ ಅವಲಂಬಿತವಾಗಿರುವಂಥ program ಗಳನ್ನು ನಡೆಸ ಬೇಕಾಗುತ್ತದೆ. Estimates ಅನ್ನು PWD ಯವರಾದರೂ ಕೊಡಬೇಕು ಅಥವಾ RDPR ನವರಾದರೂ ಕೊಡಬೇಕು. ಆದರೆ estimates ಬರುವುದಿಲ್ಲ, ನೀವು ಬಜೆಟ್‌ನ್ನು ಮಾರ್ಚ್‌ನಲ್ಲಿ ಮಾಡಿದರೂ ಕೂಡ estimates ಬರುವಂಥದ್ದು ಅಕ್ಟೋಬರ್‌ಗೋ ನವೆಂಬರ್‌ಗೋ ಆಗುತ್ತದೆ. ಅವರು ಬೇರೆ ಇಲಾಖೆಯ ಅಧಿಕಾರಿಗಳ ಮೇಲೆ ಅವಲಂಬಿತವಾಗಿರುವುದು ಜಾಸ್ತಿಯಿದೆ. ಆದರೆ estimates ಬರುವುದಿಲ್ಲ, administrative sanctions late ಆಗುತ್ತದೆ, ಇದರಿಂದ implement ಕೂಡ late ಆಗುತ್ತದೆ. ಆದ್ದರಿಂದ ನೀವೇನು ಇಲ್ಲಿ budget provision ಮಾಡಿ ನಾನು ಸಾಮಾಜಿಕ ನ್ಯಾಯವನ್ನು ಕೊಡುತ್ತೇವೆಂದು ಏನು ಹೇಳುತ್ತಿದ್ದೀರಿ ಆ ಜನರಿಗೆ ಆ ಸಾಮಾಜಿಕ ನ್ಯಾಯ ಸಿಗುತ್ತಿಲ್ಲ ಅಥವಾ ಅವರಿಗೆ ಸಾಮಾಜಿಕ ನ್ಯಾಯ ಸರ್ಕಾರ ಕೊಡುತ್ತಿದೆ, ಅದನ್ನು ತೆಗೆದುಕೊಳ್ಳಬೇಕು ಎನ್ನುವಂಥದ್ದು ಕೂಡ ಇವತ್ತು ಆಗುತ್ತಿಲ್ಲ. ಅದಕ್ಕೆ concept and creation ನಲ್ಲಿ shadow ಇದೆ ಎಂದು ಹೇಳಬಯಸುತ್ತೇನೆ. ಇದರಿಂದ ಏನಾಗುತ್ತಿದೆಯೆಂದರೆ ಸನ್ಮಾನ್ಯ ಮುಖ್ಯಮಂತ್ರಿಗಳೆ, ಈ ವ್ಯತ್ಯಾಸವಿದೆಯಲ್ಲಾ ಆಡುವ ಮಾತಿಗೂ ಕೃತಿಗೂ ವ್ಯತ್ಯಾಸವಿರುವುದರಿಂದ credibility of budget ಕಡಿಮೆಯಾಗುತ್ತಿದೆ. ವಿಶ್ವಾಸಾರ್ಹತೆ ಕಡಿಮೆಯಾಗುತ್ತಿದೆ. ನಾವು ಲಕ್ಷ ಕೋಟಿಗಳನ್ನು announce ಮಾಡಿದರೂ ಕೂಡ ಆ ಜನರಿಗೆ ನಮ್ಮ ಜೀವನದಲ್ಲಿ ಇದು ಬದಲಾವಣೆ ಮಾಡುತ್ತದೆ ಎನ್ನುವಂಥ ವಿಶ್ವಾಸ ಅವರಲ್ಲಿ ಮೂಡಬೇಕಲ್ಲ, ಆ ವಿಶ್ವಾಸಾರ್ಹತೆಯಲ್ಲಿ ಕೊರತೆಯಿದೆ, ಆ ವಿಶ್ವಾಸಾರ್ಹತೆ ಕೊರತೆಯಿರುವುದರಿಂದ ನಿಮ್ಮ ದೊಡ್ಡ ದೊಡ್ಡ ಬಜೆಟ್‌ಗಳಿಗೆ ಯಾವುದೇ ರೀತಿಯ ಒಂದು ಪರಿಣಾಮ ಅಥವಾ ವಿಶ್ವಾಸ, ಅವರಲ್ಲಿ ಒಂದು ಉತ್ಸಾಹ ಮೂಡಲು ಸಾಧ್ಯವಾಗಿಲ್ಲವೆನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಬಹಳ ವರ್ಷಗಳಿಂದ ನೋಡಿದ್ದೇನೆ. ವಿಶೇಷವಾಗಿ ಆರ್ಥಿಕ ಸಚಿವರಾಗಿ ನೋಡಿದ್ದೇನೆ. ಅವತ್ತು ನನ್ನ ಮೊದಲನೇ ಭಾಷಣ ವಿಧಾನ ಪರಿಷತ್ತಿನಲ್ಲಿ ಮಾಡಲು ನನಗೆ ಅವಕಾಶವಿದ್ದಾಗ ಅವತ್ತಿನ ಛೇರ್ಮನ್‌ರು ಈಗ ಇಲ್ಲಾ, ಬಜೆಟ್ ಮೇಲೆ ಈಗಾಗಲೇ ಭಾಷಣ ಮುಗಿದಿದೆ, ಆರ್ಥಿಕ ಸಚಿವರು ಈಗ ಉತ್ತರ ಕೊಡುತ್ತಾರೆ, ನೀವು next time ಮಾತನಾಡುವಿರಂತೆ ಎಂದರು. ಆಗ ಸಿದ್ದರಾಮಣ್ಣನವರು ಎದ್ದು ನಿಂತು ಹಾಗೆಲ್ಲಾ ಹೇಳಬೇಡಿ, ಅವರು ಮೊದಲನೇ ಬಾರಿ ಬಜೆಟ್ ಮೇಲೆ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಾತನಾಡುತ್ತಿದ್ದಾರೆ, ಅವರ ತಂದೆ ಬೊಮ್ಮಾಯಿಯವರು ನಮ್ಮ ನಾಯಕರು, ಅವರ ಮಗ ಇವರು, ನನ್ನ ಉತ್ತರದಲ್ಲಿ 20 ನಿಮಿಷ ಕಡಿಮೆ ಮಾಡುತ್ತೇನೆ, ಅವರಿಗೆ ಮಾತನಾಡಲು ಅವಕಾಶ ಕೊಡಿ ಎಂದು ಹೇಳಿ ಅವಕಾಶ ಕೊಡಿಸಿದರು. ಹೀಗಾಗಿ ನನ್ನ ಮೊದಲನೇ ಭಾಷಣ ಬಜೆಟ್‌ನಿಂದಲೇ ಪ್ರಾರಂಭವಾಗಿ ಅವರು ಉತ್ತರ ಕೊಡುವ ಸಮಯದಲ್ಲಿ 20 ನಿಮಿಷ ಕಡಿಮೆ ಮಾಡಿಸಿ ನನಗೆ ಅಂದು ಮಾತನಾಡಲು ಅವಕಾಶ ಮಾಡಿಸಿಕೊಟ್ಟಿದ್ದನ್ನು ಇವತ್ತಿಗೂ ನಾನು ನೆನಪಿನಲ್ಲಿಟ್ಟುಕೊಂಡಿದ್ದೇನೆ. ಇನ್ನು ಎರಡನೆಯದಾಗಿ ಅವರನ್ನು ನೆನಪಿನಲ್ಲಿಟ್ಟುಕೊಂಡಿರುವುದು, 1995-96 ರಲ್ಲಿ, ಅದುವರೆವಿಗೂ revenue deficit budget ಇರುತ್ತಿತ್ತು. ಆ ಸಂದರ್ಭದಲ್ಲಿ revenue surplus ಮಾಡಬೇಕೆಂದು plan size ಕಡಿಮೆ ಮಾಡಿ ಅವರು revenue surplus ಮಾಡಿದರು. ಅಂದರೆ financial discipline ತೆಗೆದುಕೊಂಡು ಬಂದರು. ಆಗ Financial Discipline Act ಇರಲಿಲ್ಲ. ಆದರೂ ಕೂಡ ಅದನ್ನು ಅನ್ವಯಿಸಿ ಅವತ್ತು revenue deficit ಇದ್ದಂಥ ಬಜೆಟ್‌ನ್ನು revenue surplus ಗೆ ತೆಗೆದುಕೊಂಡು ಬಂದರು. ಹಿಂದೆ 2013-14 ರಲ್ಲಿಯೂ ಕೂಡ ಅವರು ಅದನ್ನೇ ಹೇಳಿದರು. ಅವರೇನು ಹೇಳಿದರೆಂದರೆ ನಾವು revenue surplus ಅನ್ನು ಹೆಚ್ಚಿಗೆ ಮಾಡುತ್ತೇವೆ. Revenue and revenue surplus are declining, borrowings are high, pending bills are more, ಆದ್ದರಿಂದ state economy ಯನ್ನು ನಾವು ವಾಪಸ್ ತರುತ್ತೇವೆ, revenue surplus ಅನ್ನು ನಾವು ಮಾಡುತ್ತೇವೆ ಎಂದು ಹೇಳಿದರು. ಆದರೆ ಈ ಬಾರಿ ಮುಖ್ಯಮಂತ್ರಿಯಾಗಿ, ಆರ್ಥಿಕ ಸಚಿವರಾದ ಮೇಲೆ ನಾವು expect ಮಾಡಿದ್ದೆವು, ಅದೇ ನೀತಿಯನ್ನು ಅವರು ಇಟ್ಟುಕೊಳ್ಳುತ್ತಾರೆಂದು. 2012-13 ರಲ್ಲಿ revenue surplus ಅವರಿಗೆ ಬಂದಂಥದ್ದು 1,880 ಕೋಟಿ ರೂಪಾಯಿ. ನಾನು ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ, 2013-14, 2014-15 ರದ್ದು ಈಗ ಅವೆಲ್ಲಾ ಬೇಡ. ಆದರೆ ತಮ್ಮ ಬಜೆಟ್‌ನಲ್ಲಿ ಈ ವರ್ಷ 2017-18 ರ ಬಜೆಟ್‌ನಲ್ಲಿ ತಾವು estimate ಮಾಡಿದ್ದೀರಿ, revenue surplus is estimated to be 137 crore ಎಂದಿದ್ದೀರಿ. ಒಂದು ಸಂದರ್ಭದಲ್ಲಿ 2500 ಕೋಟಿ ಇದ್ದದ್ದು ಕಡಿಮೆಯಾಯಿತು, ಇವರು ತೆಗೆದುಕೊಂಡಾದ 1880 ಕೋಟಿ revenue surplus

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಇತ್ತು. ಈಗ ಈ ವರ್ಷ ನೀವೇ estimate ಮಾಡಿದ್ದೀರಿ 137 ಕೋಟಿ revenue surplus ಎಂದು. ನಾನು ಮಧ್ಯದ್ದು ಏನೂ ಮಾತನಾಡುತ್ತಿಲ್ಲ, ತಮ್ಮ estimate ಇರುವುದನ್ನೇ ಹೇಳಿದ್ದೇನೆ. ಅಂದರೆ revenue deficit ನ ಅಂಚಿಗೆ ಬಂದು ನಾವು ನಿಂತಿದ್ದೇವೆ, ಈಗ revenue surplus ಇದೆ, ಅದನ್ನು ನಾನು ಒಪ್ಪುತ್ತೇನೆ. ಇದು prudent financial management ಅಲ್ಲ. ನಿಮ್ಮ ಕಾಲದಲ್ಲಿ revenue surplus ಆದರೆ ಅದನ್ನು ನೀವು capital expenditure ಗೆ ಖರ್ಚು ಮಾಡಬಹುದು, asset creation ಆಗಬಹುದು, productive ಆಗಬಹುದು, ಇವತ್ತು revenue surplus ಏಕೆ ಆಗಿದೆಯೆಂದರೆ; revenue expenditure ಹೆಚ್ಚಾಗಿದೆ. ನಿಮ್ಮ revenue collection ಹೆಚ್ಚಾಗಿದೆ, ನಾನು ಇಲ್ಲವೆಂದು ಹೇಳುವುದಿಲ್ಲ ಆದರೆ ಅದಕ್ಕೆ ತಕ್ಕಂತೆ expenditure ಕೂಡ ಹೆಚ್ಚಾಗಿದೆ. ಹೀಗಾಗಿ ನಿಮ್ಮ revenue surplus ಕಡಿಮೆಯಾಗಿದೆ. ಇವತ್ತಿಗೆ ನೀವು 137 ಕೋಟಿ ರೂ.ಗಳ revenue surplus ಆಗಬಹುದು ಎಂದು estimate ಮಾಡಿದ್ದೀರಿ. ಯಾವುದೇ ವರ್ಷವೂ ಕೂಡ ತಾವು ಏನು revenue surplus ಆಗಬಹುದು ಎಂದು estimate ಮಾಡಿದ್ದೀರೋ ಅದಕ್ಕಿಂತ ಕಡಿಮೆಯೇ ಆಗಿದೆ. ಹೀಗಾಗಿ ಯಾವ ಮಾತನ್ನು 2013-14 ರಲ್ಲಿ ಯಾವ ಸ್ಪಿರಿಟ್‌ನಲ್ಲಿ ಕೆಲಸವನ್ನು ಅವರು ಪ್ರಾರಂಭ ಮಾಡಿದ್ದರೋ ಆ ಮಾತುಗಳನ್ನು ಉಳಿಸಿಕೊಳ್ಳುವುದಕ್ಕೆ ಅವರಿಂದ ಸಾಧ್ಯವಾಗಿಲ್ಲ. ಅದೇ spirit ನಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ, ಇವತ್ತು revenue deficit ನ ಅಂಚಿಗೆ ನಮ್ಮ ರಾಜ್ಯ ಬಂದು ನಿಂತಿದೆ ಎನ್ನುವಂಥದ್ದನ್ನು ನಾನು ಹೇಳಬಯಸುತ್ತೇನೆ.

ಶ್ರೀ ಸಿದ್ಧರಾಮಯ್ಯ(ಮಾನ್ಯ ಮುಖ್ಯಮಂತ್ರಿಗಳು):-ಯಾವುದರ ಅಂಚಿಗೆ ಬಂದು ನಿಂತಿದೆ?

ಶ್ರೀ ಬಸವರಾಜ ಬೊಮ್ಮಾಯಿ:-revenue deficit ಅಂಚಿಗೆ ನಮ್ಮ ರಾಜ್ಯ ಬಂದು ನಿಂತಿದೆ ಎಂದು ಹೇಳಬಯಸುತ್ತೇನೆ. 1 ಲಕ್ಷದ 86 ಸಾವಿರ ಕೋಟಿ ರೂ.ಗಳ expenditure ಅನ್ನು ತಾವು book ಮಾಡುತ್ತಿದ್ದೀರಿ. 1 ಲಕ್ಷದ 81 ಸಾವಿರ ಕೋಟಿ ರೂ.ಗಳು ನಿಮ್ಮ ಆದಾಯವಿದೆ. ಆದ್ದರಿಂದ ಇದು ಬಹಳ ಚಿಂತಾಜನಕವಾಗಿರತಕ್ಕಂಥ ಹಣಕಾಸಿನ ಪರಿಸ್ಥಿತಿ ಎನ್ನುವುದನ್ನು ನಾನು ಹೇಳಬಯಸುತ್ತೇನೆ. ನಮ್ಮ growth ಕೂಡ ಅಷ್ಟೇ, ನಮ್ಮ growth ಒಂದು ಕಾಲದಲ್ಲಿ

national growth ಗಿಂತ ಹೆಚ್ಚಿತ್ತು. ಇವತ್ತೇನಾಗಿದೆ? ಇವತ್ತು ಈ ವರ್ಷ national growth ಗಿಂತ ಕಡಿಮೆಯಾಗಿದೆ. ನೋಡಿ, 2013-14 ರಲ್ಲಿ ಇಡೀ ರಾಷ್ಟ್ರದಲ್ಲಿ 6.6 ಇತ್ತು, ನಮ್ಮ ರಾಜ್ಯದ್ದು ಆಗ 10.5 ಇತ್ತು. 2014 ರಲ್ಲಿ 7.2 ಇಡೀ ರಾಷ್ಟ್ರದ್ದು ಇತ್ತು, 7.3 ನಮ್ಮ ರಾಜ್ಯದ್ದು ಇತ್ತು, ಕಳೆದ 2015-16 ರಲ್ಲಿ ಇಡೀ ರಾಷ್ಟ್ರದ್ದು 7.6 ಆಯಿತು, ನಮ್ಮದು 7.3 ಇದೆ. 2016-17 ರಲ್ಲಿ 7.1 ರಾಷ್ಟ್ರದ್ದು ಇದೆ, 6.9 ರಾಜ್ಯದ್ದು ಇದೆ. ಅಂದರೆ GDP ಕಡಿಮೆಯಾಗುತ್ತಾ ಬಂದಿದೆ. ಇದು ಅತ್ಯಂತ ಕಳವಳಕಾರಿ ವಿಚಾರ. (ಮುಂದು)

D 27.03.2017/11.40/8/HBU-PS

ಶ್ರೀ ಬಸವರಾಜ ಬೊಮ್ಮಾಯಿ (ಮುಂದು) : ಇದು ಅತ್ಯಂತ ಕಳವಳಕಾರಿ ವಿಚಾರ. ಇವತ್ತು ಅವರು midterm fiscal plan ನಲ್ಲಿ ನಮ್ಮ industrial growth, service growth ಬಹಳ ಕಡಿಮೆಯಾಗಿದೆ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಅವರು ಹೇಳಿದ್ದಾರೆ. Industrial growth 2.2 ಗೆ ಇಳಿದಿದೆ, Service growth 8.6 ಗೆ ಇಳಿದಿದೆ. ಇದು ಅತ್ಯಂತ ಕಳವಳಕಾರಿಯಾದ ವಿಚಾರ.

(ಈ ಹಂತದಲ್ಲಿ ಶ್ರೀ ಕ್ಯಾತಸಂದ್ರ ಎನ್. ರಾಜಣ್ಣನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಈಗ ಸತತವಾಗಿ ಮೂರು ವರ್ಷದಿಂದ ಬರಗಾಲ ಇದೆ. 8% ನಿಂದ 1.5% ಗೆ growth ಆಗಿದೆ. Natural calamity ಆದಾಗ ನಾವು ಸರ್ಕಾರವನ್ನು blame ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ಮಾನ್ಯ ಕೃಷ್ಣ ಬೈರೇಗೌಡರು ಚಿಂತನೆ ಮಾಡಬೇಕಾಗಿರುವುದು ಒಂದು ವಿಚಾರ ಇದೆ. ಬರಗಾಲವಿದ್ದಾಗ ಯಾರೂ ಏನೂ ಮಾಡುವುದಕ್ಕೆ ಆಗುವುದಿಲ್ಲ, ಅದನ್ನು ಒಪ್ಪುತ್ತೇನೆ. ಅದು ನೈಸರ್ಗಿಕ ವಿಕೋಪ. ಆದರೆ ಹೆಚ್ಚುಕಡಿಮೆ ಎರಡು ದಶಕಗಳನ್ನು ನೋಡಿದಾಗ ಒಂದು ರೀತಿಯಲ್ಲಿ ಬರಗಾಲ ನಿರಂತರವಾಗಿರುವುದು ಎಂದು ಅನಿಸುತ್ತಿದೆ. ಪೂರ್ಣ ಪ್ರಮಾಣದ ಹಿಂಗಾರು ಮುಂಗಾರು ಮಳೆ ಇಡೀ 20 ವರ್ಷಗಳಲ್ಲಿ ಬಿದ್ದಿರುವುದು ಎಂದೂ ಇಲ್ಲ. ಮುಂಗಾರು ಮಳೆ ಬಂದರೆ ಹಿಂಗಾರು ಮಳೆ ಬಂದಿಲ್ಲ, ಹಿಂಗಾರು ಮಳೆ ಬಂದರೆ ಮುಂಗಾರು ಮಳೆ ಬಂದಿಲ್ಲ, ಒಂದೊಂದು ಬಾರಿ ಎರಡೂ ಮಳೆಗಳು ಬಂದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಿಮ್ಮ ಇಲಾಖೆಗಳು basically extension



ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

services and help and aid in different form, seed ಮತ್ತೊಂದು ಮಾಡುವಂಥಾದ್ದು. ಆದರೆ ನಿಮ್ಮ ವಿಶ್ವವಿದ್ಯಾಲಯಗಳಿಗೆ ನನ್ನ ಪ್ರಶ್ನೆ ಏನೆಂದರೆ ಬರಗಾಲ ಬಂದಾಗ ಯಾವ ನೀತಿಯನ್ನು ಅನುಸರಿಸಬೇಕು, alternative cropping method ಏನಿದೆ, ಅತ್ಯಂತ ಕಡಿಮೆ ನೀರನ್ನು ಬಳಕೆ ಮಾಡಿ ಯಾವ ರೀತಿಯ ಹೊಸ ತಳಿಗಳನ್ನು ಮಾಡಬೇಕು ಎನ್ನುವುದರ ಬಗ್ಗೆ ಬಹಳ ದೊಡ್ಡ ಪ್ರಮಾಣದ ಚಿಂತನೆಯಾಗುತ್ತಿಲ್ಲ. ಇಡೀ ಕೃಷಿ ಇಲಾಖೆ ಅಥವಾ ಸೆಕ್ಟರ್‌ಗೆ ಪರಿಣಾಮಕಾರಿಯಾಗಿರುವಂಥ alternatives ಕೊಡುತ್ತಿಲ್ಲ. ಕೃಷಿ ವಿಶ್ವವಿದ್ಯಾಲಯಕ್ಕೆ ನೀವು ದೊಡ್ಡ mandate ಅನ್ನು ಕೊಡಬೇಕಾಗುತ್ತದೆ. ಆ mandate ಕೊಡದಿದ್ದರೆ ಯಾವ್ಯಾವ ಸ್ಕೀಮ್‌ಗಳಿಗೆ ಯಾವ್ಯಾವ ಫಂಡಿಂಗ್ ಇದೆ ಅದನ್ನು R & D ಮಾಡುತ್ತಾರೆ. International, national ಯಾವ ಫಂಡಿಂಗ್ ಬರುತ್ತಿದೆ, ಅದನ್ನು R & D ಮಾಡುತ್ತಿರುವುದು. ಅದರಿಂದ ನಮ್ಮ ಕರ್ನಾಟಕಕ್ಕೆ, ನಮ್ಮ ರೈತರಿಗೆ ಉಪಯೋಗ ಇದೆಯೋ ಇಲ್ಲವೋ, ಅದರ ಬಗ್ಗೆ ಏನೂ ಚಿಂತನೆ ಮಾಡುವುದಿಲ್ಲ. Fund oriented R & D ನಮಗೆ ಬೇಡ. Agricultural oriented R & D ಮಾಡಿಸಿ. R & D ಗೆ ವಿಶೇಷ ಅನುದಾನವನ್ನು ಕೊಡಿ.

(ಈ ಹಂತದಲ್ಲಿ ಮಾನ್ಯ ಎನ್.ಹೆಚ್. ಶಿವಶಂಕರ ರೆಡ್ಡಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ನಮಗೆ ಒಂದು ರೀತಿಯಲ್ಲಿ ವಿಶ್ವಾಸವೇ ಹೋಗಿಬಿಟ್ಟಿದೆ. ನಮ್ಮ ಕೃಷಿ ಕ್ಷೇತ್ರಕ್ಕೆ ವಿಶ್ವವಿದ್ಯಾಲಯ ಇದೆ. ನಮ್ಮಲ್ಲಿ ಏನಾದರೂ ಸಮಸ್ಯೆಯಾದರೆ ಅವರು ಬರುತ್ತಾರೆ, ಬಗೆಹರಿಸುತ್ತಾರೆ ಎನ್ನುವ ವಿಶ್ವಾಸ ಇತ್ತು. ಆದರೆ ಈ ನಡುವೆ ಆ ವಿಶ್ವಾಸವೇ ಹೋಗಿಬಿಟ್ಟಿದೆ. ನಾವೆಲ್ಲ ಬೇಕಾದಷ್ಟು ಬಾರಿ campus oriented ಇರಬಾರದು, ಎಲ್ಲ ನಿಮ್ಮ ಎಲ್ಲ ಕ್ಯಾಂಪಸ್ಸೇ ಫೀಲ್ಡ್ ಎಂದು ಹೇಳಿದರೂ ಕೂಡ ಇನ್ನು communication and field work gap ಹೆಚ್ಚಾಗುತ್ತಿದೆ ಹೊರತಾಗಿ ಕಡಿಮೆಯಾಗುತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ಕೃಷಿ ವಿಶ್ವವಿದ್ಯಾಲಯದವರು ಮತ್ತು ಅಧಿಕಾರಿ ಗಳ ಜೊತೆಗೆ field visit ಆಗಲಿ, ಸರ್ವೆಯಾಗಲಿ ಅಥವಾ crop dissection ಆಗಲಿ ಮಾಡುವುದನ್ನು ನಾವು ಎಲ್ಲಿಯೂ ಕೂಡ ನೋಡಿಲ್ಲ. ನಾವೇ ಕರೆದರೂ ಕೂಡ ಬರದಿರುವಂಥ


ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಪರಿಸ್ಥಿತಿ ಇದೆ. ಹೀಗಾಗಿ ಎಲ್ಲಿಯವರೆಗೂ ವಿಶ್ವವಿದ್ಯಾಲಯಗಳನ್ನು ಸಂಪೂರ್ಣವಾಗಿ ಬದಲಾವಣೆ ಮಾಡುವುದಿಲ್ಲವೋ, ಅವರ ಚಿಂತನೆ, ಅವರ orientation ಬದಲಾವಣೆ ಮಾಡುವುದಿಲ್ಲವೋ, ಅಲ್ಲಿಯವರೆಗೂ ನಮ್ಮ ಕೃಷಿಕನ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ. ರೈತನಿಗೆ ಎಷ್ಟು ಬುದ್ಧಿವಂತಿಕೆ ಇದೆ ಅದರ ಪ್ರಕಾರ ಅವನು ಮಾಡುತ್ತಾನೆ. ನನಗೆ ಗೊತ್ತಿದೆ, ICRISAT, ನಮ್ಮ ಹತ್ತು Agro climatic zoneನಲ್ಲಿ semi aerate zone ಎಂದರೆ ಒಣಹವೆ ಇರುವಂಥ ಜೋನ್ ಒಂದಿದೆ. ಆ semi aerate zone ನಲ್ಲಿ ಯಾವ ರೀತಿ ಜೋಳ ಬೆಳೆಯಬೇಕೆನ್ನುವುದರ ಸುಮಾರು ತಳಿಗಳನ್ನು ಅವರು develop ಮಾಡಿಲ್ಲ. ಅದನ್ನು ಆಫ್ರಿಕಾ ದೇಶದಿಂದ ಹಿಡಿದುಕೊಂಡು ಎಲ್ಲಾ ಕಡೆ develop ಮಾಡಿದ್ದಾರೆ. ಅದಕ್ಕೆ ಏನು ತೆಗೆದುಕೊಂಡು ಬಂದು adopt ಮಾಡಿಕೊಳ್ಳಬಹುದು, ಏನೆಲ್ಲ improve ಮಾಡಿಕೊಳ್ಳಬಹುದು ಎನ್ನುವ ಕನಿಷ್ಠ ಸೌಜನ್ಯವನ್ನು ಕೂಡ ವಿಶ್ವವಿದ್ಯಾಲಯಗಳು ತೋರಿಸದಿದ್ದರೆ ಇಂತಹ ಬರಗಾಲದಲ್ಲಿ ನಾನು ಏನು ಹೇಳುವುದು? ಇವತ್ತು ಕೃಷಿಗೆ ಬರ ಬಂದಿದೆ. ಕುಡಿಯುವ ನೀರಿಗಂತೂ ಬರ ಇದ್ದೇ ಇದೆ. ಅಮರ್ತ್ಯ ಸೇನ್ ಅವರು ಬರಗಾಲದ ಬಗ್ಗೆ ಒಂದು ಮಾತು ಹೇಳಿದರು. It is no more of food famine, there are no food famines, it is a temporary displacement of employment. ಆದರೆ ಇವತ್ತು ಕೃಷಿಯಲ್ಲಿ ಆಗುತ್ತಿರುವಂಥ ಅನಾಹುತಗಳು, ಪ್ರಕೃತಿಯ ವಿಕೋಪಗಳು, ವೈಪರೀತ್ಯಗಳು ಮುಂಬರುವ ದಿನಗಳಲ್ಲಿ 1960ರಲ್ಲಿ ಆಗಿರುವಂಥ food famine, ಆಹಾರಕ್ಕಾಗಿ ಪರಿತಪಿಸಿದ್ದೇವೆ, ಆ ಪರಿಸ್ಥಿತಿ ಬರುತ್ತದೆ. ಏಕೆಂದರೆ, ಜನಸಂಖ್ಯೆ ಹೆಚ್ಚಾಗುತ್ತಿದೆ, ಊಟ ಮಾಡುವಂಥ ಕೈಗಳು ಹೆಚ್ಚಾಗಿವೆ, ಹಸಿದಿರುವಂಥ ಹೊಟ್ಟೆಗಳು ಹೆಚ್ಚಾಗುತ್ತಿವೆ. ಆದರೆ ನಾವು ಸಂಶೋಧನೆಯನ್ನು ಮಾಡದಿದ್ದರೆ, ಇನ್ನೊಂದು ಹಸಿರು ಕ್ರಾಂತಿಯನ್ನು ನಾವು ಮಾಡದಿದ್ದರೆ, ಭೂಮಿ ಬರಡಾಗಿ ಬಹಳ ದೊಡ್ಡ ಅನಾಹುತ ಇನ್ನು ಮುಂದಿನ ದಿನಗಳಲ್ಲಿ ಆಗುತ್ತದೆಂದು ನಾನು ಹೇಳುತ್ತೇನೆ. ನಾವೆಲ್ಲ ಏನು ತಿಳಿದುಕೊಂಡಿದ್ದೇವೆಂದರೆ ಆಡಳಿತ ಮಾಡುವವರು ಇದನ್ನು ಬಹಳ ಸೂಕ್ಷ್ಮವಾಗಿ ಗಮನಿಸಬೇಕು. ನಾವೆಲ್ಲ ಏನು ತಿಳಿದುಕೊಂಡಿದ್ದೇವೆಂದರೆ ವಿಧಾನಸಭೆಯಲ್ಲಿ multi storied building ನಲ್ಲಿರುವಂಥ ಐಎಎಸ್ ಅಧಿಕಾರಿಗಳು ಎಕಾನಮಿ ನಡೆಸುತ್ತಾರೆ, ಕಮರ್ಷಿಯಲ್ ಟ್ಯಾಕ್ಸ್‌ನವರು ಟ್ಯಾಕ್ಸ್ ಕಲೆಕ್ಟ್ ಮಾಡದಿದ್ದರೆ ನಡೆಯುವುದಿಲ್ಲ,

27-03-2017

ಎಕ್ಸೈಜ್‌ನವರು ಎಕ್ಸೈಜ್ ಡ್ಯೂಟಿ ಕಲೆಕ್ಟ್ ಮಾಡಿದಿದ್ದರೆ ನಡೆಯುವುದಿಲ್ಲ, ಸ್ಟ್ಯಾಂಪ್ ಡ್ಯೂಟಿ ಕಲೆಕ್ಟ್ ಮಾಡದಿದ್ದರೆ ನಡೆಯುವುದಿಲ್ಲ, ಇವರೇ ನಮ್ಮ ಆದಾಯದಾತರು ಎನ್ನುವಂಥ ರೀತಿಯಲ್ಲಿ ನಾವೆಲ್ಲರೂ ಚಿಂತನೆಯನ್ನು ಮಾಡುತ್ತೇವೆ. ಆದರೆ ಸತ್ಯ ಏನೆಂದರೆ ಈ ರಾಜ್ಯ ಒಂದೇ ಅಲ್ಲ, ಈ ದೇಶದ ಎಕಾನಮಿ ನಡೆಸುವವರು ಯಾವುದೇ ಸಾಹುಕಾರರು, ಅಧಿಕಾರಿಗಳು ಅಥವಾ ರಾಜಕಾರಣಿಗಳಲ್ಲ. ಈ ರಾಷ್ಟ್ರದ ಮತ್ತು ಈ ರಾಜ್ಯದ ಎಕಾನಮಿ ನಡೆಸುವವರು ಯಾರು ತಳಮಟ್ಟದಲ್ಲಿ physical change ತರುತ್ತಿದ್ದಾರೆ, ದುಡಿಯುತ್ತಿದ್ದಾರೆ, ನಾವು ರೈತ ಕೂಲಿಕಾರನಿಗೆ ಒಂದು ಕೆ.ಜಿ. ಬೀಜ ಕೊಟ್ಟರೆ ಅವನು ಹತ್ತು ಕ್ವಿಂಟಾಲ್ ಜೋಳ ಗೋಧಿ ಅಥವಾ ಭತ್ತ ಬೆಳೆದು ಕೊಡುತ್ತಾನೆ. ಅದು ಉತ್ಪಾದನೆ, ಅವರು ಉತ್ಪಾದಕರು. ಅವರು ಆರ್ಥಿಕ ಬೆಳವಣಿಗೆಗೆ ಕಾರಣೀಭೂತರು. ಕಾರ್ಖಾನೆಯಲ್ಲಿ ಕೆಲಸ ಮಾಡುವವರು, they are the economic movers ಎಂದು ಹೇಳುತ್ತಾರೆ. Bottom of the pyramid ಎಂದು ಏನು ಕರೆಯುತ್ತೇವೆ, ಈ ಜನ ನಮ್ಮ ಎಕಾನಮಿಯನ್ನು ತೀರ್ಮಾನ ಮಾಡುತ್ತಾರೆ. ಮೇಲೆ ಕುಳಿತವರು, ಪಾಲಿಸಿ ಮಾಡುವವರು ಅಲ್ಲ. ಕಮರ್ಷಿಯಲ್ ಟ್ಯಾಕ್ಸ್ ಯಾವಾಗ ಬರುತ್ತದೆ? ವ್ಯವಹಾರ ಆದಾಗ ಬರುತ್ತದೆ. ವ್ಯವಹಾರ ಯಾವಾಗ ಆಗುತ್ತದೆ? ಉತ್ಪಾದನೆ ಮಾಡುವವನು ಇರಬೇಕು. ಕಾರ್ಖಾನೆಯಲ್ಲಿ ಕೂಲಿಕಾರರಿರಬೇಕು, ಆಮೇಲೆ ಉತ್ಪಾದನೆಯಾದ ಮೇಲೆ ಕೊಳ್ಳುವವನೂ ಇರಬೇಕು. ಮಾನ್ಯ ಉಪಾಧ್ಯಕ್ಷರೆ, ನಮ್ಮ ರೈತರು ಕೇವಲ ಉತ್ಪಾದಕರಲ್ಲ, ಅವರು producers and consumers ಎರಡೂ ಆಗುತ್ತಾರೆ. ಈ ದೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿ ನಾವು ಹತ್ತಿಯನ್ನು ಬೆಳೆಯುತ್ತೇವೆ. ಆದರೆ ಬಟ್ಟೆಯನ್ನು ಅತೀ ಹೆಚ್ಚು ತೊಡುವವರು ರೈತರೆ. ಹೀಗಾಗಿ ಅವರು ಉತ್ಪಾದಕರ ಜೊತೆಗೆ consumer ಕೂಡ ಇದ್ದಾರೆ. ಆದುದರಿಂದ ಆರ್ಥಿಕ ಬೆಳವಣಿಗೆಯಲ್ಲಿ ಅವರ ದೊಡ್ಡ ಪಾತ್ರ ಇದೆ. ಅವರ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯ ಇದೆ. ಈ ಸೂಕ್ಷ್ಮತೆಯನ್ನು ಆಡಳಿತಗಾರರಾದ ನಾವು ನೋಡದಿದ್ದರೆ ಬಹಳ ಕಷ್ಟವಾಗುತ್ತದೆ. ಕೂಲಿಕಾರರು ಬಿಸಿಲಿನಲ್ಲಿ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಏನು ಕೆಲಸ ಮಾಡುತ್ತಾರೆ, ಸ್ಟೀಲ್ ತೆಗೆದುಕೊಂಡು ಕಾರು ಮಾಡುತ್ತಾರೆ, ಕಾರು ತೆಗೆದುಕೊಂಡು ಹೋಗಿ ಇನ್ನೊಂದು ಮಾಡುತ್ತಾರೆ, ಅದರಿಂದ ಉಪಯೋಗವಾಗುವಂಥ ವಸ್ತುಗಳನ್ನು ಮಾಡುತ್ತಾರೆ. They are the economic movers. ಆದರೆ ಅವರಿಗೆ ನಾವು ಏನು ಮಾಡುತ್ತಿದ್ದೇವೆ? ಇವತ್ತು

27-03-2017

ಅವರು ಸಂಕಷ್ಟದಲ್ಲಿದ್ದಾರೆ. ಅದರ ಬಗ್ಗೆ ಏನು ಮಾಡುತ್ತಿದ್ದೇವೆ? ಇಲ್ಲಿ ಮೂರನೇ ಮಹಡಿಯಲ್ಲಿ ಕುಳಿತ ಅಧಿಕಾರಿಗಳು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಆರ್ಥಿಕ ಸಚಿವರಿಗೆ ಸಲಹೆ ಕೊಡುತ್ತಾರೆ. ರೈತರ ಸಾಲವನ್ನು ಮನ್ನಾ ಮಾಡಿದರೆ . . . .

(ಮುಂದು)

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27.03.17 11.50 (09) RD-VG

ಶ್ರೀ ಕೃಷ್ಣ ಭೈರೇಗೌಡ (ಕೃಷಿ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಬರದ ಬಗ್ಗೆ ಮಾತನಾಡುತ್ತಾ, ತಾವು ವಿಶ್ವವಿದ್ಯಾಲಯಗಳು ಪದೇ ಪದೇ ಬರವಾಗುತ್ತಿದೆಯೆಂಬ ಅಂಶಕ್ಕೆ ಬಂದಿದ್ದೀರಿ. ರೈತರಿಗೆ ಬರವನ್ನು ಮೀರತಕ್ಕಂಥ, ಮೆಟ್ಟಿನಿಲ್ಲುವಂಥ ದಿಕ್ಕಿನಲ್ಲಿ ಕೊಡುಗೆ ಏನು? ಇವರ ಮತ್ತು ರೈತರ ನಡುವೆ ಎಷ್ಟರಮಟ್ಟಿಗೆ ಅಂತರವಿದೆಯೆನ್ನುವ ವಿಚಾರಗಳನ್ನೆಲ್ಲಾ ಮಾತನಾಡಿದ್ದೀರಿ. ನಾನು ಅದ್ಯಾವುದನ್ನೂ ಸಹ ಅಲ್ಲಗಳೆಯುವುದಿಲ್ಲ. ತಾವು ಹೇಳಿರುವಂಥ ವಿಚಾರಗಳೆಲ್ಲಾ ವಾಸ್ತವಕ್ಕೆ ಹತ್ತಿರವಾಗಿರುವಂಥದ್ದೆ ಆಗಿದೆ. ನಾವು ಅದಕ್ಕೆ ಪರ್ಯಾಯವಾಗಿ ಒಂದು ಪ್ರಯತ್ನವನ್ನು ಮಾಡುತ್ತಿದ್ದೇವೆ. ನಾವು ಇದನ್ನು ಸುಮ್ಮನೆ ಏನೂ ಬಿಟ್ಟಿಲ್ಲ. ತಮಗೆ ಗೊತ್ತಿರುವಂತೆ, ಇವತ್ತು ವಿಜ್ಞಾನ ಬಹಳ ವೇಗವಾಗಿ ಬೆಳೆಯುತ್ತಿದೆ. ನಾವು ವಿಜ್ಞಾನವನ್ನು ಸರಿಯಾಗಿ ಬಳಕೆ ಮಾಡಿಕೊಂಡರೆ, ನಾನಾ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಕೊಳ್ಳಬಹುದು. ಅಂಥದ್ದರಲ್ಲಿ ಒಂದು Genomic Science ಆಗಿದೆ. ನಾವು DNA Mapping ಮಾಡುತ್ತೇವೆ, Genomics ಇದೆ, ಇದು ಇವತ್ತು ಕ್ರಾಂತಿಕಾರಿ ಬದಲಾವಣೆಯನ್ನು ವಿಜ್ಞಾನದಲ್ಲಿ ತರುತ್ತಿದೆ. ಅದನ್ನು Medical Scienceನಲ್ಲಿ ಬಹಳ ವ್ಯಾಪಕವಾಗಿ ಬಳಕೆ ಮಾಡುತ್ತಿದ್ದಾರೆ. ಈಗಿಗ ಕೃಷಿ ವಿಜ್ಞಾನದಲ್ಲಿ ಬಳಕೆ ಮಾಡುವುದಕ್ಕೆ ಆರಂಭವಾಗುತ್ತಿದೆ. ನಾವು ಏನು ಮಾಡಿದ್ದೇವೆಂದರೆ, Genomic Science based DNA Map ಮಾಡಿ, ಬೆಳೆಗಳನ್ನು ಅದರೊಳಗೆ ಬರ ನಿರೋಧಕ ಶಕ್ತಿಯನ್ನು ಹೆಚ್ಚಿಗೆ ಮಾಡಿ, ಬರದ ಸಂದರ್ಭದಲ್ಲೂ ಸಹ ಬೆಳೆ, ಬರದ ಪ್ರಭಾವವನ್ನು ತಡೆದುಕೊಳ್ಳುವಂಥ ಶಕ್ತಿಯನ್ನು ವೃದ್ಧಿ

ಮಾಡುವಂಥ ಪ್ರಯೋಗವನ್ನು, ಪ್ರಯತ್ನವನ್ನು ಮಾಡುತ್ತಿದ್ದೇವೆ. ಇವೆಲ್ಲವೂ ಸಹ Genome Based Marker Assisted Breeding ಎನ್ನುತ್ತಾರೆ. DNA Mapping ಮಾಡಿ, ಪ್ರತಿ ತಳಿಯೊಳಗೆ ಬರ ನಿರೋಧಕ ಶಕ್ತಿ ಇರುತ್ತದೆ. ಅದನ್ನು ಹೇಗೆ ಹೆಚ್ಚು ಮಾಡುವಂಥದ್ದು ಎಂದು, ಇದಕ್ಕೆ ತಾವು ICRISAT ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದೀರಿ. National Centre for Biological Sciences ಇದೆ ಮತ್ತೆ ನಮ್ಮ ಎಲ್ಲಾ ವಿಶ್ವವಿದ್ಯಾಲಯಗಳು ಇವೆ. Consortium ಮಾಡಿ, 5 ಬೆಳೆಗಳನ್ನು ತೆಗೆದುಕೊಂಡಿದ್ದೇವೆ. ಅವುಗಳು ಯಾವುವೆಂದರೆ ತೊಗರಿ, ಕಡಲೆ, ಜೋಳ, ರಾಗಿ, ಶೇಂಗಾ ಪ್ರಾಯೋಗಿಕವಾಗಿ ಈ 5 ಬೆಳೆಗಳಿಗೆ Genome based DNA mapping, drought tolerance and disease resistance ಈ ಎರಡು ಅಂಶಗಳನ್ನು boost ಮಾಡಿ, ಬರ ನಿರೋಧಕ ತಳಿಗಳನ್ನು ಹೇಗೆ ಅಭಿವೃದ್ಧಿಪಡಿಸುವುದೆಂದು accelerated programme ಎಂದು ಎರಡು ವರ್ಷಗಳ ಹಿಂದೆ ಆರಂಭ ಮಾಡಿದ್ದೇವೆ. ಇದರಲ್ಲಿ ಸಾಕಷ್ಟು ಕೆಲಸಗಳು ಆಗಿವೆ, ಕೆಲವು ತಳಿಗಳನ್ನು ಈ ವರ್ಷ ನಾವು ಧಾರವಾಡ Universityಯಲ್ಲಿ field trial ಮಾಡುತ್ತಿದ್ದೇವೆ. ಮುಂದಿನ ವರ್ಷಕ್ಕೆ ಕೆಲವನ್ನು ರೈತರಿಗೆ ಬಿಡುಗಡೆ ಮಾಡುವ ಹಂತಕ್ಕೆ, ಇದೊಂದು ಪ್ರಯೋಗವಾಗಿದ್ದು, ಇದು ಯಶಸ್ಸಾದರೆ, ಬೇರೆ ತಳಿಗಳಿಗೂ ಇದನ್ನು ವಿಸ್ತರಿಸಬಹುದು. ನಾವು ಇದಕ್ಕೆ ತಗಲುವಂಥ ವೈಜ್ಞಾನಿಕ ಖರ್ಚು-ವೆಚ್ಚಗಳನ್ನು ರಾಜ್ಯದಿಂದ ಭರಿಸುತ್ತಿದ್ದೇವೆ. ನಾನು ಇದರಿಂದ ಎಲ್ಲಾ ಸಮಸ್ಯೆಗಳು ಪರಿಹಾರವಾಗುತ್ತದೆಂದು ಹೇಳುತ್ತಿಲ್ಲ. ಆದರೆ ವಿಜ್ಞಾನವನ್ನು ಸದ್ಬಳಕೆ ಮಾಡಿಕೊಂಡರೆ, ಮಾರ್ಗಗಳು ಇವೆ, ನಾವು ಬರೀ ವಿಶ್ವವಿದ್ಯಾಲಯಕ್ಕೆ ಅಷ್ಟೆ ಸೀಮಿತವಾಗದೇ, ಇರುವ ಎಲ್ಲಾ ಸಂಸ್ಥೆಗಳನ್ನು ಬಳಕೆ ಮಾಡಿಕೊಂಡರೆ, ಮಾಡಬಹುದೆಂದು ಚರ್ಚೆಗೆ ಪೂರಕವಾಗಿ ತಿಳಿಸುತ್ತಿದ್ದೇನೆ. ಇದು ಉತ್ತರವಲ್ಲ, ತಾವು ವಿಚಾರ ಮಂಡನೆ ಮಾಡಿದ್ದೀರಿ, ಅದಕ್ಕೆ ತಿಳಿಸಿದ್ದೇನೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಉಪಾಧ್ಯಕ್ಷರೆ, ನನ್ನ ಅಪೇಕ್ಷೆ ಏನೆಂದರೆ, ಇವತ್ತು ರಾಷ್ಟ್ರದಲ್ಲೇ ಕೃಷಿ ವಿಶ್ವವಿದ್ಯಾಲಯ ಮತ್ತು Horticultureನಲ್ಲಿ ಕರ್ನಾಟಕ ಬಹಳ pioneer ಆಗಿದೆ. ICRISAT ಆಗಲಿ, ಇನ್ನೊಂದು ಅಗಲಿ, ಈ ದೇಶದಲ್ಲಿ ಇವೆಲ್ಲಾ ಆಮೇಲೆ ಬಂದಿವೆ. ನಮ್ಮ ವಿಶ್ವವಿದ್ಯಾಲಯಗಳು ಮುಂಚಿನಿಂದಲೂ ಇವೆ. ಅವು ಇಷ್ಟು ಹೊತ್ತಿಗೆ leadership

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೆಗೆದುಕೊಳ್ಳಬೇಕಾಗಿತ್ತು. ಈಗ ಬೇಕಾದಷ್ಟು Foreign Exchange programmes 1960ರಿಂದಲೂ ನಡೆಯುತ್ತಿದೆ, ಅದು ನಮಗೆ ಗೊತ್ತಿದೆ. ಆದರೆ ಅದರ ಒಟ್ಟು ಪರಿಣಾಮ ಏನಾಗಿದೆ? ಈಗ ತಾವು ಇಂಥದ್ದು ಏನಾದರೂ ಹೇಳಿದಾಗ ಒಂದೆರಡು ವರ್ಷಗಳು ನಡೆಸುತ್ತಾರೆ. Field trial ಮಾಡಿ ಒಂದು report ಹಾಕುತ್ತಾರೆ. ನಂತರ ಅದು shelf ನಲ್ಲಿ ಕುಳಿತುಕೊಳ್ಳುತ್ತದೆ. ನಾನು ಹೇಳುವುದೇನೆಂದರೆ, ಅದು ರೈತರಿಗೆ ಮುಟ್ಟುತ್ತಿಲ್ಲ. ನಮ್ಮ ರೈತರಿಗೆ ಮುಟ್ಟಬೇಕು ಮತ್ತು ಅದು ವ್ಯಾಪಕವಾಗಿ ಉಪಯೋಗವಾಗಬೇಕು. ನಮಗೆ ಅದು ಆಗುತ್ತಿಲ್ಲವೆಂಬ ಸಂಕಟವಿದೆ. ಹಲವಾರು ಸಂದರ್ಭಗಳಲ್ಲಿ ಹೇಳಿದರೂ ಕೂಡ, ಅದು ಆಗುತ್ತಿಲ್ಲ. ನಾವು ಎಲ್ಲರಿಗೂ PHD ಕೊಟ್ಟಿದ್ದೇವೆ, ದೊಡ್ಡ ದೊಡ್ಡ ಪದವಿಗಳನ್ನು ತೆಗೆದುಕೊಂಡಿದ್ದಾರೆ. ಅವರಿಗೆ ಪದವಿಯನ್ನು ಹೇಗೆ ತೆಗೆದುಕೊಳ್ಳಬೇಕೆಂಬುದು ಗೊತ್ತಿದೆ. ಆದ್ದರಿಂದ ತಾವು ಅದರ ಮೇಲೆ ಹೋಗುವುದಕ್ಕೆ ಹೋಗಬೇಡಿ. ಇತ್ತೀಚಿನ ವೈಸ್ ಚಾನ್ಸಲರ್‌ಗಳ ಬಗ್ಗೆ, ಅದು ಆ ದೇವರಿಗೆ ಪ್ರೀತಿಯಾಗಬೇಕು. ಹಾಗಾಗಿ ಇದರಲ್ಲಿ ಒಂದು ಆಮೂಲಾಗ್ರ ಬದಲಾವಣೆಯನ್ನು ತರುವ ಬಗ್ಗೆ ತಾವು ಚಿಂತನೆ ಮಾಡಿ. ತಮ್ಮ ವಿಶ್ವವಿದ್ಯಾಲಯಗಳ memorandum ಏನಿದೆ, ಅದಕ್ಕೆ ಕೃಷಿ ವಿಶ್ವವಿದ್ಯಾಲದಲ್ಲಿ ಬೇರೆ word Charter ಎಂದೋ ಉಪಯೋಗಿಸುತ್ತಾರೆ. ತಾವು ಅದನ್ನು ಬದಲಾವಣೆ ಮಾಡಬೇಕು. ಇನ್ನೊಂದು ಇದು degree ಕೊಡುವಂಥ ಕಾಲೇಜ್ ಆಗಬಾರದು. ತಾವು ಇದರ ಬಗ್ಗೆ ಚಿಂತನೆ ಮಾಡಿ.

ಶ್ರೀ ಪಿ.ರಾಜೀವ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಸವರಾಜ ಬೊಮ್ಮಾಯಿಯವರೆ, ಒಂದು ನಿಮಿಷ. ನಾವು ಪ್ರತಿ ವರ್ಷ ರೈತರ ಬಗ್ಗೆ ಮಾತನಾಡುತ್ತೇವೆ, ವೈಜ್ಞಾನಿಕ ಬೆಲೆ ಬಗ್ಗೆ ಮಾತನಾಡುತ್ತೇವೆ, ಆಯವ್ಯಯ ಮೂಲ ಉತ್ಪಾದಕರು ರೈತರೆಂದು ಹೇಳುತ್ತೇವೆ. ರೈತರನ್ನು ಸಧೃಡಗೊಳಸಲಾಗದೇ, ಯಾವುದೇ ದೇಶದ ಆರ್ಥಿಕ ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇವೆ. ಇಲ್ಲಿ ಮಾನ್ಯ ಕೃಷಿ ಸಚಿವರು ಇದ್ದಾರೆ, ಮಾನ್ಯ ಮುಖ್ಯಮಂತ್ರಿಯವರಿದ್ದಾರೆ. ಇಲ್ಲಿ ಮಾನ್ಯ ಪುಟ್ಟಣ್ಣಯ್ಯನವರು ನನ್ನ ಮಾತನ್ನು ಗಮನಿಸಬಹುದೆಂದು ಅಂದುಕೊಳ್ಳುತ್ತೇನೆ. ವೈಜ್ಞಾನಿಕ ಬೆಲೆಯನ್ನು ಏಕೆ ಕೊಡುವುದಕ್ಕೆ ಆಗುವುದಿಲ್ಲ? ನಾವು very simple arithmetic ಮೂಲಕ ಮಾಡಲು ಸಾಧ್ಯವಿದೆ. ಆಹಾರ ಬೆಳೆಗಳನ್ನು ನಾಲ್ಕೈದು ಅವುಗಳು ಭತ್ತ, ರಾಗಿ, ಜೋಳ, ಗೋಧಿ ಇಷ್ಟು ಬೆಳೆಗಳನ್ನು ನಾವು ಪರಿಗಣನೆಗೆ ಮಾಡಿಕೊಂಡು, ಇವತ್ತು ಮಾರ್ಕೆಟ್‌ನಲ್ಲಿ ಒಂದು ಕೆ.ಜಿ. ಅಕ್ಕಿಗೆ 40



ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ರೂ.ಗಳ ಬೆಲೆ ಇದೆ. ಆದರೆ ರೈತರಿಗೆ ಒಂದು ಕೆ.ಜಿ. ಅಕ್ಕಿಗೆ 15 ರೂ.ಗಳಿಗಿಂತ ಹೆಚ್ಚಿಗೆ ಇಲ್ಲ. ಆ ರೀತಿ ಇದ್ದರೆ ಉಳಿದ 25 ರೂ.ಗಳು ಎಲ್ಲಿಗೆ ಹೋಯಿತು? ಈ 25 ರೂ.ಗಳು ಎಲ್ಲಿ ಲೂಟಿಯಾಗುತ್ತಿದೆ. ಹಾಗಾದರೆ ಇಡೀ ಕೃಷಿ ಸಮೂಹ ಮಧ್ಯವರ್ತಿಗಳ ಲಾಭಕ್ಕಾಗಿ ಕೆಲಸ ಮಾಡುವಂಥ ವಾತಾವರಣವನ್ನು ನಾವು ನಿರ್ಮಾಣ ಮಾಡಿದ್ದೇವೆಯೇ? Agriculture comes under the State List. ರಾಜ್ಯ ಸರ್ಕಾರಕ್ಕೆ ಕೃಷಿಯ ಮೇಲೆ ಸಂಪೂರ್ಣವಾದಂಥ ಅಧಿಕಾರ ಹೊಂದಲು ಸಾಧ್ಯವಿದೆ. ನಾನು ಒಂದು ಸಲಹೆ ಕೊಡುವುದೇನೆಂದರೆ, ನೀವು ಅಕ್ಕಿ, ರಾಗಿ, ಗೋಧಿ ಮತ್ತು ಜೋಳ ಈ ಕೆಲವೇ ಆಹಾರ ಬೆಳೆಗಳಿಗೆ ಮೊದಲೇ ಬೆಲೆಯನ್ನು ನಿಗದಿ ಮಾಡಿ ಬಿಡಿ. ಇವತ್ತು ಮಾರ್ಕೆಟ್‌ನಲ್ಲಿ 40 ರೂ.ಗಳಿಗೆ ಸಿಗುತ್ತಿದೆಯೆಂದರೆ, ರೈತನು 15 ರೂ.ಗಳ ಲಾಭವನ್ನು ಪಡೆದುಕೊಳ್ಳಲು ಒದ್ದಾಡುತ್ತಿದ್ದಾನೆಂದರೆ, ಇವತ್ತು ಬಿತ್ತನೆ ಮಾಡುವಂಥ ಸಂದರ್ಭದಲ್ಲಿ ಒಂದು ಕೆ.ಜಿ ಅಕ್ಕಿಗೆ ಎಷ್ಟು ಪ್ರಮಾಣ ಭತ್ತ ಬರುತ್ತದೊ, ಆ ಭತ್ತಕ್ಕೆ, ಒಂದು ಕೆ.ಜಿ. ಅಕ್ಕಿಗೆ ರೈತನಿಗೆ ಲಾಭ ಬರುವ ರೀತಿಯಲ್ಲಿ 30 ರೂ.ಗಳನ್ನು fix ಮಾಡಿ, ಅದು ಅವರು ಬೆಳೆ ಬಿತ್ತುವ ಸಮಯದಲ್ಲಿ ಮಾಡಿ. ನಾವು ಗ್ರಾಹಕನಿಗೆ ಮಾರ್ಕೆಟ್‌ನಲ್ಲಿ ಅಕ್ಕಿ 28 ರೂ.ಗಳಿಗೆ ಸಿಗುವಂತೆ ಮಾಡಲು ಸಾಧ್ಯವಿದೆ. ಆ ರೀತಿ ಇದ್ದಾಗ ಸರ್ಕಾರ ರೈತನಿಂದ 30 ರೂ.ಗಳಿಗೆ ಖರೀದಿ ಮಾಡಲಿ, ಗ್ರಾಹಕನಿಗೆ 28 ರೂ.ಗಳಿಗೆ ಕೊಡಲಿ. ಆ 2 ರೂ.ಗಳ difference ಇರುತ್ತದೆ, ಆ difference ಅನ್ನು ಸೆಸ್ ಮೂಲಕ ಸರ್ಕಾರ collect ಮಾಡಬಹುದು. ಅದು ಎಲ್ಲಾ ಬಿಗ್ ಬಜಾರ್ ಇರಬಹುದು..,

ಉಪಾಧ್ಯಕ್ಷರು: ಮಾನ್ಯ ರಾಜೀವ್‌ರವರೆ, ತಾವು ಮಾತನಾಡುವಾಗ ಮಾತನಾಡಿ.

ಶ್ರೀ ಪಿ.ರಾಜೀವ್: ಮಾನ್ಯ ಉಪಾಧ್ಯಕ್ಷರೆ, ನಾನು ಇದರ ಮಧ್ಯೆಯೇ ಹೇಳುತ್ತೇನೆ, ಬಿಗ್ ಬಜಾರ್ ಇರಬಹುದು, ಇನ್ನೊಂದರಲ್ಲಿ ಇರಬಹುದು. ಇವೆಲ್ಲದರಲ್ಲೂ ನಾವು ಬೆಲೆ ನಿಗದಿ ಮಾಡಿದರೆ, ಲೂಟಿಯನ್ನು ತಡೆಯಬಹುದು.

ಉಪಾಧ್ಯಕ್ಷರು: ಮಾನ್ಯ ಬಸವರಾಜ ಬೊಮ್ಮಾಯಿಯವರೆ, ಮಾತನಾಡಿ, ತಾವು yield ಆಗಬೇಡಿ.

ಶ್ರೀ ಬಸವರಾಜ ಬೊಮ್ಮಾಯಿ: ಅದು ಇರಲಿ, ತಾವು ತಮ್ಮ ಭಾಷಣದಲ್ಲಿ ಅವೆಲ್ಲವನ್ನೂ ಹೇಳಿ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಉಪಾಧ್ಯಕ್ಷರು: ಮಾನ್ಯ ಬಸವರಾಜ ಬೊಮ್ಮಾಯಿಯವರೆ, ಇವತ್ತು discussionಗೆ ಕೊನೆಯ ದಿವಸವಾಗಿದ್ದು, ಎಲ್ಲರೂ ಮಾತನಾಡುವವರಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಉಪಾಧ್ಯಕ್ಷರೆ, ನಾನು ಅದನ್ನು ಗಮನದಲ್ಲಿಟ್ಟುಕೊಂಡೆ ಮಾತನಾಡುತ್ತೇನೆ.

ಉಪಾಧ್ಯಕ್ಷರು: ತಾವು ದಯವಿಟ್ಟು ಸ್ವಲ್ಪ ಬೇಗ ಮುಗಿಸಿ, yield ಆಗಬೇಡಿ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ನಾನು drought ಹಿನ್ನೆಲೆಯಲ್ಲಿ, ಮಾನ್ಯ ಕೃಷ್ಣಬೈರೇಗೌಡರ ಗಮನ ಸೆಳೆಯುವಂಥ ಪ್ರಯತ್ನವನ್ನು ಮಾಡಿದ್ದೇನೆ. ಇದು ಬಹಳ ದೊಡ್ಡ subject ಇದೆ. ತಾವು ಹೇಳುವಂಥದ್ದು, ಈಗಾಗಲೇ ಬೇರೆ ದೇಶಗಳಲ್ಲಿದ್ದೆ, ಒಂದು seasonನ ಮೊದಲೆ Outlook Report ಎಂದು ಮಾಡುತ್ತಾರೆ. ಅದು ಹತ್ತು ವರ್ಷಗಳ ಮಳೆ, ಬೆಳೆಯನ್ನೆಲ್ಲಾ ತೆಗೆಯುತ್ತಾರೆ. ಅಂತರಾಷ್ಟ್ರೀಯ, ರಾಷ್ಟ್ರೀಯ ಮಟ್ಟದೆಲ್ಲಾ market study ಮಾಡಿ, ಒಂದು rate fix ಮಾಡುತ್ತಾರೆ. ಉದಾಹರಣೆಗೆ ಹೇಳುವುದಾದರೆ, ಜೋಳಕ್ಕೆ ಇವತ್ತು ಕ್ವಿಂಟಲ್‌ಗೆ 2,000 ರೂ.ಗಳೆಂದು ಇಟ್ಟುಕೊಳ್ಳಿ, ಅದಕ್ಕಿಂತ 15% ಕಡಿಮೆ ಬಂದರೆ, ಉತ್ಪಾದಕನಿಗೆ 15% ತುಂಬಿ ಕೊಡುತ್ತಾರೆ. 15% ಮೇಲೆ ಬಂದರೆ consumerಗೆ ಸಬ್ಸಿಡಿ ಕೊಡುತ್ತಾರೆ, ಬೇಕಾದಷ್ಟು ಉತ್ತಮವಾದಂಥ ಉದಾಹರಣೆಗಳಿವೆ. ಆದರೆ ಇವತ್ತು ನಮ್ಮ ಇಡೀ ಭಾರತ ದೇಶ, ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ರೀತಿಗಳಿರುವುದರಿಂದ, ಕೇಂದ್ರದಲ್ಲೆ ಒಂದು ಹೊಸ ಕೃಷಿಗೆ agricultural economic ನೀತಿಯನ್ನು ತರಬೇಕಾಗಿದೆ. ಉದಾಹರಣೆಗೆ rural debt system, ನಾವು ಅವರ ಬೆಳೆಗೆ ಸಾಲವನ್ನು ಏನು ಕೊಡುತ್ತೇವೆ. ಇವತ್ತು industry ಮಾಡಿದರೆ, ಅವನು ಭೂಮಿ ತೆಗೆದುಕೊಳ್ಳುವುದಕ್ಕೆ, ಕಟ್ಟಡ ಕಟ್ಟುವುದಕ್ಕೆ, machineಗೆ, working capital ಎಲ್ಲವೂ ಕೊಡುತ್ತೇವೆ. ಆದರೆ ಕೃಷಿಕನು ಅವನು ಸ್ವಂತ ಬಂಡವಾಳ ಹಾಕಿ, ಪ್ರತಿ ವರ್ಷ ಭೂಮಿಯನ್ನು ಹದದಲ್ಲಿಟ್ಟುಕೊಂಡು, ಅವರು ಭೂಮಿಯನ್ನು ಹದದಲ್ಲಿಟ್ಟುಕೊಳ್ಳುವುದಕ್ಕೆ ಖರ್ಚು ಎಷ್ಟು ಬರುತ್ತದೆ, ಮತ್ತೆ ಅವನು ಗೊಬ್ಬರ ಹಾಕಿಕೊಂಡು ಎಲ್ಲವನ್ನೂ ಮಾಡಿ, ಬೀಜವನ್ನು ಹಾಕಿ, ಬಿತ್ತಿದ ಮೇಲೆ, ಅವನಿಗೆ ನಾವು ಬರೀ ಬೆಳೆ ಸಾಲವನ್ನು ಮಾತ್ರ ಕೊಡುತ್ತೇವೆ. ಆದರೆ industryಗೆ capital loan ಎಂದು ಕೊಡುತ್ತೇವೆ, working

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

capital loan ಎಂದು ಕೊಡುತ್ತೇವೆ, subsidy ಎಂದು ಕೊಡುತ್ತೇವೆ. ಆಮೇಲೆ development loan ಎಂದು ಕೊಡುತ್ತೇವೆ, expansion loan ಎಂದು ಕೊಡುತ್ತೇವೆ, R & D loan ಎಂದು ಕೊಡುತ್ತೇವೆ. ಹಾಗಾಗಿ ಇದರ ಬಗ್ಗೆ ಸಮಗ್ರವಾದಂಥ ಒಂದು ಚಿಂತನೆಯಾಗಬೇಕಾಗಿದೆ. ಆದ್ದರಿಂದ ಮಾನ್ಯ ಕೃಷಿ ಸಚಿವರೆ, ಈ ಬಗ್ಗೆ ಸ್ವಲ್ಪ ಗಮನ ಕೊಡಿ ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಯವರಿದ್ದಾರೆ.

ಮುಂದು.. ..

27-03-2017/12.00/10/GG/VG

ಶ್ರೀ ಬಸವರಾಜ ಬೊಮ್ಮಾಯಿ (ಮುಂದುವರೆದುದು): ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ, industrial sectorನಲ್ಲಿ ಬಹಳಷ್ಟು ನಿರ್ಲಕ್ಷ್ಯ ಆಗಿದೆ. ಏಕೆ ಹೀಗಾಗಿದೆ ಎಂದು ಒಮ್ಮೊಮ್ಮೆ ನನಗೆ ಆಶ್ಚರ್ಯವಾಗುತ್ತದೆ. ಈ ವರ್ಷ industrial growth ಕೇವಲ 2.2% ಮಾತ್ರ ಆಗಿದೆ. State Level Single Window Clearance Committee ಈಗ ಮಂತ್ರಿಗಳ ನೇತೃತ್ವದಲ್ಲಿ ಇದೆ, ಮೊದಲು ಇದು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಇತ್ತು. 2012-13ರಲ್ಲಿ 677 clear ಆಗಿವೆ, 2013-14ರಲ್ಲಿ 2009 ಆಗಿವೆ, 2014-15ರಲ್ಲಿ ಕೇವಲ 72 ಆಗಿವೆ, 2015-16ರಲ್ಲಿ 252 ಆಗಿವೆ, 2016-17ರಲ್ಲಿ ಕಳೆದ ಡಿಸೆಂಬರ್‌ವರೆಗೆ 134 clear ಆಗಿವೆ. ಸಚಿವರಾದ ಸನ್ಮಾನ್ಯ ದೇಶಪಾಂಡೆಯವರ ನೇತೃತ್ವದಲ್ಲಿ ಈ ಸಮಿತಿ ಇದೆ. ಇಂಡಸ್ಟ್ರಿಗಳಿಗೆ clearance ನೀಡುವುದೇ ಬಹಳ ಕಡಿಮೆಯಾಗುತ್ತಿದೆ. ಇನ್ನು, High Level Clearance Committee ಮುಖ್ಯಮಂತ್ರಿಗಳ ನೇತೃತ್ವದಲ್ಲಿರುವಂಥ ಕಮಿಟಿ. ಇದು mega project ಗಳನ್ನು clear ಮಾಡುತ್ತದೆ. 2012-13ರಲ್ಲಿ 100 mega projectಗಳು clear ಆಗಿವೆ, 2013-14ರಲ್ಲಿ 46 ಆಗಿವೆ, 2014-15ರಲ್ಲಿ 36, 2015-16ರಲ್ಲಿ 28 ಆಗಿವೆ, 2016-17ರಲ್ಲಿ ಡಿಸೆಂಬರ್‌ವರೆಗೆ ಕೇವಲ 7 mega projects clear ಆಗಿವೆ. ಅಂದರೆ ಸಂಪೂರ್ಣವಾಗಿ industry sector ಕುಸಿಯುತ್ತಿದೆ. ಅದು GDP ಯಲ್ಲಿ ಕೂಡ ಗೊತ್ತಾಗಿದೆ. 2.2% ಮಾತ್ರ growth ಆಗಿದೆ. Applications

ಬರುವುದೇ ಕಡಿಮೆಯಾಗಿದೆಯೇ ಅಥವಾ clearance ಕಡಿಮೆಯಾಗಿದೆಯೇ ಎನ್ನುವಂಥ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಈ ವರ್ಷ ಕೇವಲ 7 mega projects clear ಆಗಿವೆ ಎಂದರೆ ಏಕೆ ಕಡಿಮೆಯಾಗಿದೆ ಎನ್ನುವುದನ್ನು ಮುಖ್ಯಮಂತ್ರಿಗಳು ಹೇಳಬೇಕಾಗುತ್ತದೆ. 2015-16ರಲ್ಲಿ ಕೇವಲ 28 clear ಆಗಿವೆ. Clear ಆಗಿರುವುದರಲ್ಲಿ ಎಷ್ಟು ಕೆಲಸ ಪ್ರಾರಂಭ ಮಾಡಿವೆ ಎನ್ನುವುದು ಇನ್ನೊಂದು ಪ್ರಶ್ನೆ. ಪ್ರಗತಿಶೀಲವಾಗಿರುವಂಥ, ಪ್ರಗತಿಪರವಾಗಿರುವಂಥ ನಮ್ಮ ರಾಜ್ಯದಲ್ಲಿ ಇದು ಹೆಚ್ಚು ಆಗುತ್ತಲೇ ಹೋಗಬೇಕು. ಆದರೆ ಈ ರೀತಿ ರಾಜ್ಯಕ್ಕೆ investment ಬರುವುದು ಕಡಿಮೆಯಾದರೆ ಅದು ಖಂಡಿತವಾಗಿಯೂ ಆರ್ಥಿಕ ವ್ಯವಸ್ಥೆಯ ಮೇಲೆ ಬಹಳ ದೊಡ್ಡ ಪರಿಣಾಮ ಬೀರುತ್ತದೆ. ಅದಕ್ಕೇ ಆಗಲೇ ನಾನು concept and creation, outlay and outcome ಎಂದು ಹೇಳಿದೆ. Expenditureಅನ್ನು ನೋಡಿ, agriculture and allied services, ಇದರಲ್ಲಿ 2014-15ರಲ್ಲಿ 13.10% ಇತ್ತು. 2016-17ರಲ್ಲಿ ಅದು 11.08% ಇದೆ. Rural Development ನಲ್ಲಿ 2014-15ರಲ್ಲಿ 5.61% ಇತ್ತು, 2016-17ರಲ್ಲಿ 5.12%ಗೆ ಇಳಿಯಿತು. ಈ ಸಲ 5.48%ಗೆ ಬಂದಿದೆ. Water and Power 17.74% ಇತ್ತು. ಇದು 16.94%ಗೆ ಇಳಿದಿದೆ. Social sector ನಲ್ಲಿ ಮಾತ್ರ 49.40% ಇದ್ದದ್ದು, 50.88%ಗೆ ಬಂದಿದೆ. Education 20.67% ಇದ್ದದ್ದು, 18.10%ಗೆ ಬಂದಿದೆ. Trends of growth. Agriculture ನಲ್ಲಿ 2014-15ರಲ್ಲಿ 15.10% ಇತ್ತು, ಈ ಸಲ 11.08% ಇದೆ. ನಮ್ಮ ಬಜೆಟ್ ಗಾತ್ರವಾಗಲೀ, ನಮ್ಮ sectoral allocation ಆಗಲೀ, ಇವೆಲ್ಲವೂ GSDP percentage ಆಧರಿಸಿ ಇರುತ್ತವೆ. GSDP ಹೆಚ್ಚಾದ ಹಾಗೆ ನಮ್ಮ ಬಜೆಟ್ ಗಾತ್ರವೂ ಹೆಚ್ಚಾಗುತ್ತದೆ, sectoral allocation ಕೂಡ proportionally ಹೆಚ್ಚಾಗುತ್ತದೆ. ಅದಕ್ಕೇ ಇವುಗಳನ್ನು ನಾವು percentageನಲ್ಲಿ ನೋಡುತ್ತೇವೆ. ಇಲ್ಲಿ ಕಡಿಮೆಯಾಗಿದೆ. Actual figure ತೆಗೆದುಕೊಂಡಾಗ ನೀವು ಹೇಳಬಹುದು, ಆವತ್ತು 3,000 ಕೋಟಿ ರೂಪಾಯಿಗಳಷ್ಟಿತ್ತು, ಇವತ್ತು 6,000 ಕೋಟಿ ರೂಪಾಯಿಗಳಷ್ಟಿದೆ ಎಂದು ಹೇಳಬಹುದು. ನಾವು inflationಅನ್ನು calculate ಮಾಡಿದ ತಕ್ಷಣವೇ ಅದು ಮತ್ತೆ original figureಗೇ ಬರುತ್ತದೆ.

Therefore, the incremental sectoral allocation is very important. ಅದರಲ್ಲಿ ನಿಮ್ಮ priority ಇರಬೇಕು. Social sector ನಲ್ಲಿ ನೀವು maintain ಮಾಡಿದ್ದೀರಿ ನಿಜ. ಆದರೆ ಅಲ್ಲಿ allocation ಆಗಿದೆ, actual expenditure ಕಡಿಮೆಯಾಗಿದೆ. Capacity to spend is not there to the State. ಇಷ್ಟು ದೊಡ್ಡ ಬಜೆಟ್‌ಅನ್ನು handle ಮಾಡುವುದಕ್ಕೆ state infrastructure ಏನಿದೆ, developmental department ಗಳೇನಿವೆ, ಅವುಗಳಿಗೆ capacity ಇಲ್ಲ. This is the hall mark of the whole budget. ಎಲ್ಲ sector ನಲ್ಲಿ ಕೂಡ ನಾವು ನೋಡುತ್ತೇವೆ. Medical and Public Health ನಲ್ಲಿ expenditure 9.84% ಇದ್ದದ್ದು ಈ ಸಲ 9.26% ಆಗಿದೆ. Agricultureಗೆ ನೇರವಾಗಿ ಸಂಬಂಧ ಇರುವಂಥದ್ದು irrigation. Irrigationನಲ್ಲಿ ನಾವು ಪ್ರತಿವರ್ಷ allocation ಹೆಚ್ಚು ಮಾಡಿದ್ದೇವೆ ಎಂದು ತಾವು ಹೇಳುತ್ತೀರಿ. ಹೆಚ್ಚು ಕೂಡ ಮಾಡಿದ್ದೀರಿ. ಆದರೆ ಮತ್ತೆ ನಾನು ಹೇಳಬೇಕಾಗುತ್ತದೆ. ಅದು ಎಷ್ಟು convert ಆಗಿದೆ ಎನ್ನುವುದು ಕೂಡ ಬಹಳ ಮುಖ್ಯ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ. ನೀವು ಈ ವರ್ಷದ ಬಜೆಟ್‌ನಲ್ಲಿ ಜಲಸಂಪನ್ಮೂಲ ಇಲಾಖೆಯ ಪ್ರಾಜೆಕ್ಟ್‌ಗಳನ್ನು ನೋಡಿದಾಗ, ಕೆರೆ ತುಂಬಿಸುವಂಥದ್ದು ಒಂದು ಒಳ್ಳೆಯ ಯೋಜನೆ. ಅದರಲ್ಲಿ ಎರಡನೆಯ ಮಾತಿಲ್ಲ. ಈ ಬರಗಾಲದ ಹಿನ್ನಲೆಯಲ್ಲಿ ಅದಕ್ಕೆ ಮಹತ್ವವಿದೆ, ಪ್ರಾಮುಖ್ಯವಿದೆ, ಅದನ್ನು ಮಾಡಬೇಕು. ಆದರೆ ಈಗ ಇರುವ ಯೋಜನೆಗಳನ್ನು ಮುಗಿಸುವುದಕ್ಕೆ ಹೆಚ್ಚಿನ ಒತ್ತನ್ನು ತಾವು ಕೊಟ್ಟಿಲ್ಲ. ನಮ್ಮ ಪಾಲಿನ ನೀರನ್ನು ನಾವು ಬಳಕೆ ಮಾಡಿಕೊಳ್ಳುವುದಕ್ಕೆ ದೊಡ್ಡದೊಡ್ಡ ಯೋಜನೆಗಳಿವೆ. Upper Bhadra ಯೋಜನೆಯಲ್ಲಿ ನಾವು ಲಿಫ್ಟ್‌ಅನ್ನು ಪೂರ್ಣಗೊಳಿಸಿ ಅಜ್ಜಂಪುರವರೆಗೂ ತರುವಂಥ ಸಂದರ್ಭದಲ್ಲಿ ಅಲ್ಲಿ ರೈತರ ಹೋರಾಟ ಬಂತು. ಮುಂದೆ ಅದು ಹೊಲಗಳಿಗೆ ಹೋಗುವುದಕ್ಕೆ 3-4 ವರ್ಷಗಳಿಂದ ಪ್ರಯತ್ನವಾದರೂ ಕೂಡ ಇನ್ನೂ ನಾವು ಹೊಲಗಳಿಗೆ ನೀರು ಕೊಡಲು ಸಾಧ್ಯವಾಗಿಲ್ಲ. Upper Thunga ಯೋಜನೆಯಲ್ಲಿ, ನಾವು ಆಡಳಿತದಲ್ಲಿದ್ದಾಗ ಸುಮಾರು ಒಂದು ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಕೊಟ್ಟೆವು. ಈಗ

ಬಹಳವೇನಿಲ್ಲ, ಎಲ್ಲ ಸೇರಿ 10-15 ಸಾವಿರ ಎಕರೆ ಪ್ರದೇಶಕ್ಕೆ ನೀರಾವರಿ ಕೊಡಬೇಕು. ಆದರೆ ಅದನ್ನು ಕೂಡ ಕೊಡುವುದಕ್ಕೆ ಆಗುತ್ತಿಲ್ಲ. ಸಿಂಗಟಾಲೂರು ಏತ ನೀರಾವರಿ ಯೋಜನೆಯಲ್ಲಿ ನಾವು ಇದ್ದಾಗ ಲಿಫ್ಟ್‌ಗಳನ್ನು ಮುಗಿಸಿದ್ದೆವು, ನೀವು ಕೆರೆಗಳನ್ನು ತುಂಬಿಸಿದ್ದೀರಿ. ಆದರೆ ಕಡೆಯ ಭಾಗಕ್ಕೆ ನೀರಾವರಿ ಏನು ಕೊಡಬೇಕು, ಅಲ್ಲಿ ಒಂದು ಎಕರೆ ಪ್ರದೇಶಕ್ಕೂ ಕೂಡ ಇವತ್ತು ನೀರನ್ನು ಹರಿಸಲು ಸಾಧ್ಯವಾಗಿಲ್ಲ. ಇವೆಲ್ಲ ಪ್ರಮುಖವಾದ ದೊಡ್ಡ ಯೋಜನೆಗಳು. ಇವೆಲ್ಲ Drought Prone Areas Programme (DPAP) area ದಲ್ಲಿ ಇರುವಂಥವು. ಇವುಗಳನ್ನು ನೀವು ಏನೂ ಮಾಡಲಿಲ್ಲ. ಈಗ 10-15 ಹೊಸಹೊಸ ಯೋಜನೆಗಳನ್ನು ಮಾಡಿದ್ದೀರಿ. ಒಂದು ರೀತಿಯಿಂದ ನೋಡಿದರೆ ಇದು ಸಣ್ಣ ನೀರಾವರಿ ಇಲಾಖೆಯ ಬಜೆಟ್ಟೋ ಅಥವಾ ದೊಡ್ಡ ನೀರಾವರಿ ಇಲಾಖೆಯ ಬಜೆಟ್ಟೋ ಎನ್ನುವುದು ಗೊತ್ತಾಗುತ್ತಿಲ್ಲ. ಹಿರೇಕೆರೂರಿನಲ್ಲಿ ಒಂದು ಕೆರೆ ತುಂಬಿಸಿದಿರಿ. ಬ್ಯಾಡಗಿಯಲ್ಲಿ 6-7 ಕೆರೆ ತುಂಬಿಸಿದಿರಿ, ಇನ್ನೊಂದರಲ್ಲಿ 8-10 ಕೆರೆಗಳನ್ನು ತುಂಬಿಸಿದಿರಿ. ಹೌದು, ಅವುಗಳನ್ನು ಮಾಡಬೇಕು, ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಒಂದು ಬೃಹತ್ ನೀರಾವರಿ ಇಲಾಖೆಗೆ ಅದೇ ಪ್ರಮುಖ ಕೆಲಸವಲ್ಲ. ನಮ್ಮ ಪಾಲಿನ ನೀರನ್ನು ಬಳಕೆ ಮಾಡುವುದಕ್ಕೆ ಬೃಹತ್ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕೆ ಏನು ಮಹತ್ವವನ್ನು ಕೊಡಬೇಕೋ ಆ ಮಹತ್ವ ಇವತ್ತು ಸಿಗುತ್ತಿಲ್ಲ. ಆದ್ದರಿಂದ ನಿಮ್ಮ focus ಎಲ್ಲಿದೆ ಎಂದು ಕೇಳುತ್ತೇನೆ. ಎರಡನೆಯದು, ನೀವು ಸಂಪೂರ್ಣ ಅಕೌಂಟ್ ತೆಗೆದುಕೊಳ್ಳಿ. ಕಳೆದ ನಾಲ್ಕು ವರ್ಷಗಳಲ್ಲಿ ತಾವು ಏನು ಖರ್ಚು ಮಾಡಿದ್ದೀರಿ, ಅದರಲ್ಲಿ ಶೇಕಡ 50ಕ್ಕಿಂತ ಹೆಚ್ಚು ಹಣವನ್ನು ಹಳೆಯ ಕೆನಾಲ್‌ಗಳನ್ನು re-enforce ಮಾಡುವುದು ಅಥವಾ ಅವುಗಳನ್ನು modernize ಮಾಡುವುದು ಇಂಥವುಗಳಿಗೆ ಖರ್ಚು ಮಾಡಿದ್ದೀರಿ. ಹೊಸ ಅಚ್ಚುಕಟ್ಟುಗಳನ್ನು ಸೃಷ್ಟಿ ಮಾಡುವುದಕ್ಕೆ ನಿಮ್ಮ focus ಇಲ್ಲ. ಹೀಗಾಗಿ ನೀವು ಖರ್ಚು ಮಾಡಿರುವಂಥ ಹಣ ಹೆಚ್ಚುವರಿಯಾಗಿ ಹೊಸ ನೀರಾವರಿಯ ಪ್ರದೇಶವನ್ನು ಸೃಷ್ಟಿ ಮಾಡುವುದರಲ್ಲಾಗಲೀ, ನೀರಾವರಿಯಿಂದ ಹೊಸ ಕೃಷಿ ಉತ್ಪನ್ನ ಮಾಡುವುದರಲ್ಲಾಗಲೀ ಆಗಿಲ್ಲ. ಇದರ ಜೊತೆಗೆ, ನಮಗೆಲ್ಲ ಗೊತ್ತಿದೆ, Upper Krishna, Stage-3 ಬಹಳ ಪ್ರಮುಖವಾಗಿರುವಂಥ ಯೋಜನೆ. ಅದಕ್ಕಿಂತ ದೊಡ್ಡ ಯೋಜನೆ ನಮ್ಮ ಕರ್ನಾಟಕದಲ್ಲಿ ಬೇರೆ ಯಾವುದೂ ಇಲ್ಲ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಕರ್ನಾಟಕದಲ್ಲಿರುವ ಎಲ್ಲ ಯೋಜನೆಗಳಿಗಿಂತ, ಅತಿ ಹೆಚ್ಚು ನೀರಾವರಿ ಮಾಡುವಂಥ ಯೋಜನೆ ಎಂದರೆ ಅದು UKP, Stage-3. ಅದರಿಂದ ನಾವು ಸುಮಾರು 16 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿಯನ್ನು ಮಾಡಬಹುದು. ಅದಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನಾವಿದ್ದಾಗ ಕೊಟ್ಟಿದ್ದೆವು. ಈಗ ಅದು ಬದಲಾವಣೆಯಾಗಿದೆ, ಸಹಜವಾಗಿ ಬದಲಾವಣೆಯಾಗುತ್ತದೆ.

(ಮುಂದುವರೆದಿದೆ)

27-08-2017:12-10[11] kkd:cp 1

ಶ್ರೀ ಬಸವರಾಜ ಬೊಮ್ಮಾಯಿ (ಮುಂದು)

ಅದು ಸಹಜವಾಗಿ ಬದಲಾವಣೆ ಆಗಿದೆ. 17 ಲಕ್ಷ ಚಿಲ್ಲರೆ ಇರುವಂಥದ್ದು ನಂತರ 25 ಎಂದರು ಈಗ 50 ಆಗುತ್ತದೆಂದು ಏನೋ ಅಂದಾಜುಗಳನ್ನು ಮಾಡುತ್ತಿದ್ದಾರೆ. ಆದರೆ, 9 ಯೋಜನೆಗಳಿಗೆ 5 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ನೀವೇ ಹೇಳಿದಿರಿ. ಒಂದು ಯೋಜನಾಬದ್ಧವಾಗಿ ಮಾಡಿದ್ದರೆ ಇಷ್ಟುಹೊತ್ತಿಗ್ಗೆ ಚಿಮ್ಮಲಗಿ, ಮುಳವಾಡ್, ಗುತ್ತಿಬಸವಣ್ಣ, ಮುಲ್ಲಾಬಾದ್ ಈ 4 ಯೋಜನೆಗಳಿಗೆಲ್ಲ ಸೇರಿ ಕನಿಷ್ಠ 2 ರಿಂದ 3 ಲಕ್ಷ ಎಕರೆ ಪ್ರದೇಶದಲ್ಲಿ ನೀರಾವರಿ ಮಾಡಬಹುದಾಗಿತ್ತು. ಆದರೆ, ತಮಗೆ ಮಾಡಲಿಕ್ಕೆ ಆಗಲಿಲ್ಲ. 2009ರಲ್ಲಿ ಇನ್ನೂ ನಮ್ಮ ಬ್ರಿಜೇಶ್ ಕುಮಾರ್ ಮಿಶ್ರಾರವರ report ಬಂದಿರಲಿಲ್ಲ. ಚಿಮ್ಮಲಗಿ, ಗುತ್ತಿಬಸವಣ್ಣ, ಮುಲ್ಲಾಬಾದ್ first stage, ಇವುಗಳನ್ನು ನಾವು ಪ್ರಾರಂಭ ಮಾಡಿದೆವು. 2010ರಲ್ಲಿ ಬ್ರಿಜೇಶ್ ಕುಮಾರ್ ಮಿಶ್ರಾರವರ report ಬಂದಮೇಲೆ ನಾವು ಮುಳವಾಡ ನೀರಾವರಿಯನ್ನು ಪ್ರಾರಂಭ ಮಾಡಿದೆವು. ಕೊಪ್ಪಳ ಪ್ರಾರಂಭ ಮಾಡಿದೆವು, ಆಡಳಿತಾತ್ಮಕ ಅನುಮೋದನೆ ಎಲ್ಲ ಅಲ್ಲಿ ground ನಲ್ಲಿ ನಾವು lift ಗಳನ್ನು ಪ್ರಾರಂಭ ಮಾಡಿದೆವು.

ಶ್ರೀ ಎ.ಎಸ್. ಪಾಟೀಲ್( ನಡಹಳ್ಳಿ): ಬೊಮ್ಮಾಯಿಯಣ್ಣರವರೆ,...

ಶ್ರೀ ಬಸವರಾಜ ಬೊಮ್ಮಾಯಿ: ಮಾತನಾಡುವುದಕ್ಕೆ ನಿಮಗೆ ಅವಕಾಶ ಬಂದಾಗ ಮಾತನಾಡಿ.

(ಗೊಂದಲ)

ಉಪಾಧ್ಯಕ್ಷರು: ಅವರು yield ಆಗಿಲ್ಲ, ಪಾಟೀಲರೆ ಕುಳಿತುಕೊಳ್ಳಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

(ಗೊಂದಲ)

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ನೀವೇ ನೀರಾವರಿ ಮಂತ್ರಿಯಾಗಿದ್ದಾಗ, ದಿನಾಂಕ: 29.11.2011, 3ನೇ ಮಹಡಿಯಲ್ಲಿ ತಾವು ಮಂತ್ರಿಯಾಗಿದ್ದಾಗ, ಸದಾನಂದಗೌಡರು ಮುಖ್ಯಮಂತ್ರಿಯಾಗಿದ್ದಾಗ, ಒಂದು ಮೀಟಿಂಗ್ ಮಾಡಿದ್ದಿರಿ, ತಮಗೆ ನೆನಪಿರಬಹುದು.

ಶ್ರೀ ಬಸವರಾಜ ಬೊಮ್ಮಾಯಿ: ಇರಲಿ ಬಿಡಿ. ಅದನ್ನು ತಾವು ಆಮೇಲೆ ಹೇಳಿ.

ಉಪಾಧ್ಯಕ್ಷರು: ಪಾಟೀಲರೆ, ಅವರು yield ಆಗಿಲ್ಲ. ತಾವು ಕುಳಿತುಕೊಳ್ಳಿ, ಅವರು ಮುಂದುವರಿಸಲಿ.

ಶ್ರೀ ಎ.ಎಸ್.ಪಾಟೀಲ್(ನಡಹಳ್ಳಿ): ತಾವು (ಬಸವರಾಜ ಬೊಮ್ಮಾಯಿ) ನೀರಾವರಿ ಮಂತ್ರಿಯಾಗಿದ್ದಾಗ ಬರೀ administrative approval ಕೊಡುವುದು ಬಿಟ್ಟರೆ ಬೇರೆ ಏನೂ ಆಗಲಿಲ್ಲ. ಈಗ ಈ ಸರ್ಕಾರ ಬಂದಮೇಲೆ canal ತೆಗೆಯುವುದು ಬಿಟ್ಟರೆ ಬೇರೆ ಏನೂ ಆಗುತ್ತಿಲ್ಲ. ಎರಡೂ ಆಗುತ್ತಿಲ್ಲವೆಂದು ಹೇಳುತ್ತಿದ್ದೇನೆ. ಏಕೆಂದರೆ 2009ರಲ್ಲಿ ಎಂದು ಹೇಳಿದಿರಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ನೀವು ಆವತ್ತು ಏನು demand ಮಾಡಿದ್ದಿರಿ? ನೀವು ಆ Tribunal notification ಆಗಲಿ, ಆಗದಿರಲಿ administrative sanction ಕೊಡಲೇಬೇಕೆಂದು ಹೇಳಿದಿರಿ. ನಿಮಗೆ ಆವಾಗ administrative sanction ಇಲ್ಲದೆ ಮುಂದೆ ನಿಮಗೆ ಮಾಡಲಿಕ್ಕೇ ಬರುತ್ತಿರಲಿಲ್ಲ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ಒಂದು ನಿಮಿಷ, A scheme, B scheme ಎಂದು ಹೇಳಿ canal ತೆಗೆಯುವುದು ಬಿಟ್ಟರೆ ಏನೂ ಆಗಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. Administrative sanction ಕೊಡುವುದಕ್ಕೆ 14 ವರ್ಷ ತೆಗೆದುಕೊಂಡಿರಿ.

(ಗೊಂದಲ)

ಉಪಾಧ್ಯಕ್ಷರು: ಪಾಟೀಲರೆ, ಅವರು yield ಆಗಿಲ್ಲ. ಅವರು ಮಾತನಾಡಲಿ. ಆಮೇಲೆ ನೀವು ಮಾತನಾಡಿ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): Percentage ಗೋಸ್ಕರ canal ತೆಗೆಯುವುದು ಬಿಟ್ಟರೆ ಬೇರೆ ಏನೂ ಆಗಿಲ್ಲ. Canal ತೆಗೆಯುವುದು, ಮುಚ್ಚುವುದು, ರಿಪೇರಿ ಮಾಡುವುದು ಇಷ್ಟು ಬಿಟ್ಟರೆ ಬೇರೆ ಏನೂ ಆಗಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ಯಾರು ಮಾಡಿದ್ದಾರೋ ಅವರಿಗೆ ಹೇಳಿ ಸ್ವಾಮಿ. ನಮ್ಮ ಉದ್ದೇಶ ಏನು? ಇಷ್ಟು ದೊಡ್ಡ ಪ್ರಮಾಣದ ಹಣ ಖರ್ಚಾದಮೇಲೆ ಅಲ್ಲಿ ಅಚ್ಚುಕಟ್ಟು ಸಿದ್ದವಾಗಬೇಕು, ಕೃಷಿಗೆ ಅನುಕೂಲವಾಗಬೇಕು, ಆಹಾರ ಉತ್ಪಾದನೆ ಆಗಬೇಕು. ಅದು ಆಗಲಿಲ್ಲವಲ್ಲ. ಯೋಜನೆ ಪ್ರಕಾರ 2013-14ರಲ್ಲಿ ಕನಿಷ್ಠ 2014ರ end ಗೆ ನಾವು ಚಿಮ್ಮಲಗಿ ಮತ್ತು ಮುಳವಾಡದಲ್ಲಿ ಕನಿಷ್ಠ 50-50 ಸಾವಿರ ಎಕರೆ ಪ್ರದೇಶಕ್ಕಾದರೂ ನೀರು ಕೊಡಬೇಕಾಗಿತ್ತು. ಮುಖ್ಯ canal ಬಿಟ್ಟರೆ ಬೇರೆ ಯಾವುದೂ channel ಗಳನ್ನು ತೆಗೆದಿಲ್ಲ, ನೀವು ನೀರು ಕೊಡುವ ಪ್ರಯತ್ನವನ್ನೂ ಮಾಡಲಿಲ್ಲ, feeder channels ಅಂತೂ ತೆಗೆಯುವ ಪ್ರಶ್ನೆಯೇ ಇಲ್ಲ. ಅಂದರೆ, ಯಾವ ದಿಕ್ಕಿನಲ್ಲಿ Irrigation Department ಇವತ್ತು ಕೆಲಸ ಮಾಡುತ್ತಿದೆ? ತಾವು ಕೊಟ್ಟಿರುವಂಥ ಹಣ ಎಷ್ಟು ಸದುಪಯೋಗವಾಗುತ್ತಿದೆ? ಅಥವಾ ದುರುಪಯೋಗವಾಗುತ್ತಿದೆ? ಬಜೆಟ್‌ನಲ್ಲಿ ಇಷ್ಟು provision ಗಳನ್ನು ತೆಗೆದುಕೊಂಡು ಹೋದ ಮೇಲೆ, ಇನ್ನು R&R ಬಗ್ಗೆ ಹೇಳುವುದಕ್ಕೆ ನನಗೆ ನಿಜವಾಗಿಯೂ ಬಹಳ ದು:ಖವಾಗುತ್ತದೆ. UPA ಸರ್ಕಾರ 2012-13ರಲ್ಲಿ R&R ಮತ್ತು Land Acquisition ಗೆ ಹೊಸ policy ಮಾಡಿದರು. ರೈತನಿಗೆ 4 ಪಟ್ಟು compensation ಕೊಡಬೇಕು ಮತ್ತು R&R ಕೆಲಸವನ್ನು ಮುಗಿಸಿ ಆಮೇಲೆ ನೀರು ಹಿಡಿಯಬೇಕೆನ್ನುವುದು. ನಾವು 2012-13ರಲ್ಲಿ ಏನು ಅನುಮೋದನೆ ಕೊಟ್ಟಿದ್ದೆವು, ಸುಮಾರು 7-7.5 ಸಾವಿರ ಕೋಟಿ ರೂಪಾಯಿ R&R ಗೆ ಬೇಕೆಂದು ಆವತ್ತಿನ rate ಗೆ ಅಂದಾಜು ಮಾಡಿದ್ದೆವು. ಆಮೇಲೆ 25 ಸಾವಿರ ಕೋಟಿ ರೂಪಾಯಿ ಎಂದರು, ಮೊನ್ನೆ ನಿಮ್ಮ R&R Commissioner ರವರು 50 ಸಾವಿರ ಕೋಟಿ ರೂಪಾಯಿ ಬೇಕೆಂದು ಹೇಳಿದ್ದಾರಂತೆ. ಯಾವ ಆಧಾರದ ಮೇಲೆ ಹೇಳಿದ್ದಾರೋ ನನಗೆ ಗೊತ್ತಿಲ್ಲ. ಆದರೆ, ಒಂದು consistent ಆದಂಥ ನೀತಿ ಸರ್ಕಾರಕ್ಕೆ ಇಲ್ಲ. ನಾವು R&R UPA ಸರ್ಕಾರದ ಮಾದರಿಯಲ್ಲಿ ಮಾಡುತ್ತೇವೆಂದು ಸನ್ಮಾನ್ಯ ಮಂತ್ರಿಗಳಿಂದ ಒಮ್ಮೆ statement ಬಂತು. ಆದರೆ, ಅದನ್ನು ಮಾಡಲಿಲ್ಲ. ಮುಂದೆ NDA ಸರ್ಕಾರದ R&R ಬಂದಾಗ ಅಧಿಕಾರಿಗಳು ಅದನ್ನು

cabinet ಮುಂದೆ ತೆಗೆದುಕೊಂಡು ಹೋದರು. ಅದರ ಬಗ್ಗೆ ಸರ್ಕಾರ ನಿರ್ಣಯ ಮಾಡಲಿಲ್ಲ. ಇವೆರಡನ್ನೂ ಬಿಟ್ಟರು, ಆಮೇಲೆ ಇಲ್ಲ ಇಲ್ಲ, ನಾವು ಗೋಡೆ ಕಟ್ಟಿಬಿಡುತ್ತೇವೆ, 11 ಗ್ರಾಮಗಳು ಮುಳುಗಡೆಯೂ ಆಗುವುದಿಲ್ಲ, ಅದಕ್ಕೆ ಹಣವೇ ಬೇಕಾಗಿಲ್ಲ, ಹಣ ಉಳಿಸುತ್ತೇವೆಂದು ಒಂದು ದಿವಸ statement ಕೊಟ್ಟರು. ಆಯಿತು, ಬಹಳ ಚಲೋ ಆಯಿತು ಎಂದು ನಾವು ಹೇಳಿದೆವು. ಇಲ್ಲಿ ಮಾನ್ಯ ಜೆ.ಟಿ. ಪಾಟೀಲರು ಇದ್ದಾರೆ. ಗೋಡೆ ಕಟ್ಟಿದರೆ ಇದು ನಿಲ್ಲುವುದಿಲ್ಲ ಸ್ವಾಮಿ, ಮತ್ತೆ ಮುಳುಗುತ್ತೈತಿ, ಯಾರು ಹೇಳಿದರು ನಿಮಗೆ ಎಂದು ಅವರೇ ಹೇಳಿದರು, ನಾನು ಹೇಳಲಿಲ್ಲ. ಒಂದು ವರ್ಷ ಅದನ್ನು ಓಡಿಸಿದರು. ಒಂದು ಒಂದೂವರೆ ವರ್ಷ ಆ ಸಿನಿಮಾವನ್ನು ಓಡಿಸಿದರು. ಆಮೇಲೆ ಅದನ್ನು ಕೈಬಿಟ್ಟರು. ಆಮೇಲೆ, ನಾವು compensation ಕೊಡುವುದಿಲ್ಲ, lease ಮೇಲೆ ತೆಗೆದುಕೊಳ್ಳುತ್ತೇವೆಂದು ಹೇಳುವ ಮತ್ತೊಂದು ಹೊಸ ವಿಚಾರ ಬಂತು.

(ಮುಂದು)

ವಿಸ:27-03-2017 12-20 (12) ಎಂಕೆಕೆ:ಸಿಪಿ

ಶ್ರೀ ಬಸವರಾಜ ಬೊಮ್ಮಾಯಿ(ಮುಂದು)

ಅಂದರೆ ನೀರು ಇದ್ದಾಗ ಅದನ್ನು ಮುಳುಗಿಸುತ್ತೇವೆ, ನೀರು ಇಲ್ಲದಿದ್ದಾಗ ಅವರು ಬೆಳೆ ಬೆಳೆಯಬಹುದು. Lease ಮೇಲೆ ತೆಗೆದುಕೊಳ್ಳುತ್ತೇವೆ, ವರ್ಷ ವರ್ಷ ಹಣ ಕೊಡುತ್ತೇವೆ ಎನ್ನುತ್ತಾರೆ. ಎಲ್ಲಿಯಾದರೂ ಉಂಟೆ? 8-9 ತಿಂಗಳು ನೀರಿನಲ್ಲಿ ಮುಳುಗಿದಮೇಲೆ ಅದು ಏನಾದರೂ ಬೆಳೆಯಲಿಕ್ಕೆ ಲಾಯಕ್ಕಿರುತ್ತದೆಯೇ? ಅದನ್ನೊಂದು ವರ್ಷ cinema ಓಡಿಸಿದರು. ಈಗ ಮತ್ತೆ ಇಲ್ಲ, 4 ಪಟ್ಟು ಕೊಟ್ಟು ಇದನ್ನು ತೆಗೆದುಕೊಳ್ಳುವಂಥದ್ದು ಮಾಡುತ್ತೇವೆಂದರು. ಈ ತರಹ ಗೊಂದಲವನ್ನು ಸೃಷ್ಟಿ ಮಾಡಿ ಅಲ್ಲಿರುವಂಥ 21 ಹಳ್ಳಿಯ ರೈತರನ್ನು ಆತಂಕದಲ್ಲಿಟ್ಟು ಅವರನ್ನು ಇವತ್ತು ಸಂಕಷ್ಟಕ್ಕೆ ತಳ್ಳಿದ್ದಾರೆ. ಅವರೆಲ್ಲರೂ ಕೂಡ ವಿಧಾನಸಭೆಗೆ(ವಿಧಾನಸೌಧಕ್ಕೆ) ಹಲವಾರು ಬಾರಿ ಬಂದಿದ್ದಾರೆ. ಅವರು rate fix ಮಾಡಿಲ್ಲ. ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಒಂದು ಸಮಿತಿ ಇದೆ. ಅವರು Rate Fixation Committee ಮಾಡಬೇಕು. ಅದನ್ನು 4 ವರ್ಷಗಳಾದರೂ ಮಾಡಿಲ್ಲ. ನೀವು land acquisition notice ಕಳುಹಿಸುತ್ತೀರಿ. ಆದರೆ, ಇವತ್ತಿನವರೆಗೂ ಯಾವುದೇ rate fix ಮಾಡಿಲ್ಲ. ಯಾವ ಧಾರಣೆಯಲ್ಲಿ(ಯಾವ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ದರದಲ್ಲಿ) ನಮ್ಮ ಹೊಲ ತೆಗೆದುಕೊಳ್ಳುತ್ತಾರೆನ್ನುವ ಆತಂಕ ರೈತರಲ್ಲಿದೆ. ಬೇರೆ ಕಡೆ ಆಗಿದ್ದರೆ ಎಷ್ಟು ಕಷ್ಟ ಇದೆ ಎಂದು ನನಗೆ ಗೊತ್ತಿದೆ. ಒಂದು ಸಣ್ಣ lift irrigation ಗೆ ಕೇವಲ pump house ಮಾಡುತ್ತೇವೆಂದರೆ ರೈತರ್ಯಾರೂ ಎರಡು ಎಕರೆ ಕೊಡುವುದಕ್ಕೆ ಮುಂದೆ ಬರುವುದಿಲ್ಲ. ಆದರೆ, ಬಾಗಲಕೋಟೆ, ವಿಜಯಪುರ(ಬಿಜಾಪುರ), ವಿಶೇಷವಾಗಿ ಬಾಗಲಕೋಟೆಯ ಜನರು ಇಲ್ಲ, ನಮ್ಮ ಊರಿಗೆ ಒಳ್ಳೆಯದಾಗುತ್ತದೆಂದರೆ, ಕೇವಲ ರೈತರಿಗೆ ಒಳ್ಳೆಯದಾಗುತ್ತದೆಂದರೆ ಮುಳುಗಡೆಯಾದರೂ ಚಿಂತೆ ಇಲ್ಲವೆಂದು ನಮಗೊಂದು ಒಳ್ಳೆಯ ಧಾರಣೆ ಕೊಡಿ ಎಂದಷ್ಟೇ ಕೇಳುತ್ತಿದ್ದಾರೆ. ಇದು ಅವರ ದೊಡ್ಡ ಗುಣ. ಇವತ್ತು ಅದನ್ನೂ ಕೂಡ ಮಾಡುವುದಕ್ಕಾಗಿಲ್ಲ. ನೀವು ನಿಮ್ಮ Mid Term Fiscal Plan ನಲ್ಲಿ ನೀವೇ, ನಿಮಗಿರುವಂಥ ಸವಾಲುಗಳೇನೆಂದು ಹೇಳುವಾಗ, UKPಗೆ ಹಣ ಕೊಡುವಂಥದ್ದು ನಮಗೊಂದು ದೊಡ್ಡ ಸವಾಲು ಎಂದು ಹೇಳಿಕೊಂಡಿದ್ದೀರಿ. UKPಗೆ ಹಣ ಒದಗಿಸುವಂಥದ್ದೇ ನಮ್ಮ ಮುಂದಿರುವಂಥ ದೊಡ್ಡ ಸವಾಲು ಎಂದು ಹೇಳಿದ್ದೀರಿ. ನಾನು ಹೇಳುತ್ತೇನೆ, ನಿಮಗೆ ಬದ್ಧತೆ ಇದ್ದರೆ, ನಮ್ಮ ಪಾಲಿನ ನೀರನ್ನು ಬಳಕೆ ಮಾಡುವಂಥ ಚಿಂತನೆ ಇದ್ದರೆ, ಆಲಮಟ್ಟಿ height ಅನ್ನು 524ಕ್ಕೆ ಏರಿಸಬೇಕೆನ್ನುವಂಥ ಕಳಕಳಿ ಇದ್ದರೆ ಹೊಸ ಕಾನೂನಿನ ನಡುವೆ ಮುಳುಗಡೆ ಪ್ರದೇಶವನ್ನು ಪುನರ್ ನಿರ್ಮಾಣ, ಪುನರ್ ಸ್ಥಾಪನೆ, R & R ಪೂರ್ತಿ ಮಾಡಿದಾಗ . . .

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಹೆಚ್.ಕೆ. ಪಾಟೀಲರೆ ಈ ಕಡೆ ಸ್ವಲ್ಪ ಗಮನ ಕೊಟ್ಟರೆ ಒಳ್ಳೆಯದಾಗುತ್ತದೆ. ನಿಮ್ಮ ವಿಚಾರಕ್ಕನುಗುಣವಾಗಿ ಅವರು ಮಾತನಾಡುತ್ತಿದ್ದಾರೆ. ನೀವು 10 ನಿಮಿಷ ಅವರು ಮಾತನಾಡುವುದು ಕೇಳಿದರೆ ಒಳ್ಳೆಯದು.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ): ಬೊಮ್ಮಾಯಿಯವರೆ, ನಿಮ್ಮ support ಗೆ ಹೇಳುತ್ತೇನೆ. 1964ರಿಂದ ಇಲ್ಲಿಯವರೆಗೆ ಕೇವಲ A Scheme, B Scheme ಎಂದು ನಮ್ಮನ್ನು, ಆ ರೈತರನ್ನು ಕತ್ತಲಿನಲ್ಲಿಟ್ಟೆವು. ಆಮೇಲೆ, ಬೊಮ್ಮಾಯಿಯವರು ನೀರಾವರಿ ಸಚಿವರಾದಾಗ first time ಬಹುಶ: 2009ರಲ್ಲಿ ಬೆಳಗಾವಿ assembly ಯಲ್ಲಿ ಉತ್ತರ ಕರ್ನಾಟಕದ ನೀರಾವರಿ ಯೋಜನೆಗಳ ಬಗ್ಗೆ Rule 69 ಅಡಿಯಲ್ಲಿ ಚರ್ಚೆ ಪ್ರಾರಂಭವಾಯಿತು. ಅಂದು 6 ಗಂಟೆ ಚರ್ಚೆಯಾಯಿತು. ಅಂದಿನಿಂದ ಇದರ ಬಗ್ಗೆ serious ಆಗಿ ಸ್ವಲ್ಪ ಚಿಂತನೆ ನಡೆಯಿತು. ಅಂದಿನಿಂದ ಇವತ್ತಿನವರೆಗೆ ಒಂದೇ ಒಂದು ಎಕರೆ ಭೂಮಿಯನ್ನು ಹೆಚ್ಚುವರಿಯಾಗಿ ನೀರಾವರಿ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಾಡಲಿಕ್ಕೆ, ನಾನು MLA ಯಾಗಿ ಇವತ್ತಿಗೆ 9 ವರ್ಷಗಳಾಯಿತು, ಪ್ರತಿ assembly ಯಲ್ಲಿ ನಾವು ಚರ್ಚೆ ಮಾಡುತ್ತೇವೆ, ಒಂದು ಎಕರೆಯನ್ನೂ addition ಮಾಡಲಿಕ್ಕೆ ಆಗಿಲ್ಲ. ಆಮೇಲೆ ಬ್ರಿಜೇಶ್‌ಕುಮಾರ್ ವರದಿ ಬರುವುದಕ್ಕಿಂತ ಮುಂಚಿತವಾಗಿ land acquisition ಮಾಡಿಕೊಳ್ಳುವುದಕ್ಕೆ ಯಾರೂ ಕೂಡ ಯಾವ ಕಾನೂನಿನಲ್ಲಿ ನಮ್ಮನ್ನು ತಡೆಹಿಡಿದಿರಲಿಲ್ಲ. ಆಗ ಯಾವ ಸರ್ಕಾರಗಳೂ ಮಾಡಲಿಲ್ಲ. 2013ರಲ್ಲಿ ಭೂಸ್ವಾಧೀನ ಕಾಯ್ದೆ ಬಂದಮೇಲೆ ನಾವು 4 ಪಟ್ಟು, 5 ಪಟ್ಟು ಹಣ ಕೊಡಬೇಕಾಗಿದೆ. ಇವತ್ತು 35 ರಿಂದ 40 ಸಾವಿರ ಕೋಟಿ ರೂಪಾಯಿ ಕೇವಲ rehabilitation ಗೆ ಖರ್ಚು ಮಾಡಬೇಕಾದಂಥ ಸ್ಥಿತಿ ನಮ್ಮ UKP stage ನಲ್ಲಿ ನಿರ್ಮಾಣವಾಗಿದೆ. ಇದಕ್ಕೆ ನಾನು ವಿನಂತಿ ಮಾಡುತ್ತೇನೆ. ಇಲ್ಲಿ ನಾವು ಉತ್ತರ ಕರ್ನಾಟಕದ ಬರಗಾಲದ ಬಗ್ಗೆ ಚರ್ಚೆ ಮಾಡುತ್ತೇವೆ. ಅದಕ್ಕೇನಾದರೂ ಮುಕ್ತಿ ಸಿಗಬೇಕಾಗಿದ್ದರೆ ಯಾವುದೇ ಸರ್ಕಾರಗಳು ಬರಲಿ, ಈ ಸರ್ಕಾರ ಇರಲಿ, ಇನ್ನೊಬ್ಬರು ಮುಂದೆ ಯಾರೇ ಬರಲಿ, ಒಂದು ಬದ್ಧತೆಯನ್ನು ತೋರಿಸಬೇಕು. ಪ್ರತಿ ವರ್ಷ ಇದಕ್ಕೆ ಕನಿಷ್ಠ 15 ರಿಂದ 20 ಸಾವಿರ ಕೋಟಿ ರೂಪಾಯಿಗಳನ್ನು ನಾವು ಕೊಡುತ್ತೇವೆಂಬ ಬದ್ಧತೆಯನ್ನು ತೋರಿಸಿದಾಗ ಮಾತ್ರ ಬೊಮ್ಮಾಯಿಯವರೆ ಯೋಜನೆಗಳು ಕೊನೆಯಾಗಲಿಕ್ಕೆ ಸಾಧ್ಯ.

ಶ್ರೀ ಬಸವರಾಜ ಬೊಮ್ಮಾಯಿ: ಪಾಟೀಲರೆ, ನಿಮ್ಮ ಸಲಹೆಯನ್ನು ನೀವು ಹೇಳಿ.

ಉಪಾಧ್ಯಕ್ಷರು: ನೀವು yield ಆದರೆ ಹೀಗೆ. ಪಾಟೀಲರೆ, ನೀವು ಮಾತನಾಡುವಾಗ ಆ ವಿಷಯ ಮಾತನಾಡಿ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ): ಈ ಕಡೆಯಾಗಲಿ, ಆ ಕಡೆಯಾಗಲಿ, ನಾವು ಕೇವಲ ಭಾಷಣ ಮಾಡಿ ಹೋದರೆ ಆಗುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ಇಲ್ಲೇನು ಮಾಡಬೇಕು ಹೇಳಿ?

ಉಪಾಧ್ಯಕ್ಷರು: ಬಸವರಾಜ ಬೊಮ್ಮಾಯಿಯವರೆ, 15 ನಿಮಿಷಗಳಲ್ಲಿ ಮಾತನಾಡಿ ಮುಗಿಸಿ. ನೀವು yield ಆದರೆ ನಿಮ್ಮ ಸಮಯ ಹಾಳಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ: ನಾನು ಸ್ವಲ್ಪವೂ, ಒಂದು ಶಬ್ಧವನ್ನೂ ಆ ಕಡೆ ಈ ಕಡೆ ಮಾತನಾಡುತ್ತಿಲ್ಲ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಉಪಾಧ್ಯಕ್ಷರು: ಗೊತ್ತಾಯಿತು, ಒಳ್ಳೆಯದೇ ಮಾತನಾಡುತ್ತಿದ್ದೀರಿ.

ಶ್ರೀ ಬಸವರಾಜ ಬೊಮ್ಮಾಯಿ: ಈ ರಾಜ್ಯದಲ್ಲಿರುವಂಥ ಪ್ರಮುಖ challenge ಬಗ್ಗೆ ಅಷ್ಟೇ ಮಾತನಾಡುತ್ತಿರುವಂಥದ್ದು.

ಉಪಾಧ್ಯಕ್ಷರು: 15 ನಿಮಿಷಗಳಲ್ಲಿ ಮಾತನಾಡಿ ಮುಗಿಸಿ.

ಶ್ರೀ ಬಸವರಾಜ ಬೊಮ್ಮಾಯಿ: Mid Term Fiscal Plan ನಲ್ಲಿರುವುದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ, ಅವರಿಗೆ ಗೊತ್ತಿದೆ, ಅವರೇ ಈ meeting Chairmanship ಮಾಡಿದ್ದರು. Need to contain the revenue expenditure especially subsidies and focus on target based subsidies approach including direct national transfers. 2nd Point: Meet huge land acquisition costs of UKP-III Project. ನಿಮ್ಮ key fiscal challenges ನಲ್ಲಿದೆ. ನಾನು ಇಷ್ಟೇ ಹೇಳಬಯಸುತ್ತೇನೆ. ನಿಮಗೆ ಗೊತ್ತಿದೆ. ಸುಮಾರು 1 ಲಕ್ಷ ಎಕರೆಯನ್ನು ನಾವು acquire ಮಾಡಬೇಕು, 22 ಹಳ್ಳಿಗಳನ್ನು ಪುನರ್ ನಿರ್ಮಾಣ ಮಾಡಬೇಕೆನ್ನುವಂಥದ್ದು ಮೊದಲೇ plan ನಲ್ಲಿದೆ, ನಿಮಗೆಲ್ಲ ಗೊತ್ತಿದೆ. ನೀವು implementation ಮಾಡುವಂಥ ಸಂದರ್ಭದಲ್ಲಿ ಮೊದಲನೇ ವರ್ಷದಿಂದ ಈ R & R ಗೋಸ್ಕರವೇ ಯಾವುದಾದರೊಂದರ ಮೇಲೆ small cess ಹಾಕಿದ್ದರೆ ಸುಮಾರು 20 ರಿಂದ 25 ಸಾವಿರ ಕೋಟಿ ರೂಪಾಯಿಗಳನ್ನು 4 ವರ್ಷಗಳಲ್ಲಿ collect ಮಾಡಬಹುದಾಗಿತ್ತು. ಈ ರಾಜ್ಯದಲ್ಲಿ ನಮ್ಮ ಮುಂದೆ ಒಂದು ಉದಾಹರಣೆ ಇದೆ. 1996-97ರಲ್ಲಿ Infrastructure Cess ಎಂದು ಹಾಕಿದ್ದರು. ಆ ಹಣದಿಂದ ಇವತ್ತು Metro Rail ಅನ್ನು ಮಾಡುತ್ತಿದ್ದೇವೆ. ಎರಡೂ stage ಗಳಲ್ಲಿ 50 ಸಾವಿರ ಕೋಟಿ ರೂಪಾಯಿಗಳಲ್ಲಿ ನಾವಿವತ್ತು Metro Rail ಮಾಡುತ್ತಿದ್ದೇವೆ. ಯಾವ ರಾಜ್ಯಕ್ಕೆ ತನ್ನ ತೆರಿಗೆ ಮುಖಾಂತರ ಒಂದು ನಗರಕ್ಕೆ ಒಂದು Metro Rail ಮಾಡುವುದಕ್ಕೆ ಸಾಧ್ಯವಿದ್ದರೆ 16 ಲಕ್ಷ ಎಕರೆ ನೀರಾವರಿಯಾಗುವಂಥ ಬೃಹತ್ ಯೋಜನೆಯನ್ನು ನಾವು ಮಾಡಿದರೆ ನೂರಾರು ವರ್ಷ ಶಾಶ್ವತವಾಗಿ ರಾಜ್ಯದ ಆರ್ಥಿಕ ಪರಿಸ್ಥಿತಿ, ಆರ್ಥಿಕ ಚಿತ್ರವನ್ನೇ ಬದಲಾವಣೆ ಮಾಡುವಂಥ ಆ ಯೋಜನೆ ಬಗ್ಗೆ ಸ್ವಲ್ಪ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಚಿಂತನೆಯಾಗಲಿಲ್ಲವಲ್ಲ. Metro ನಮ್ಮ ಪಕ್ಕದಲ್ಲಿದೆ, ನಮಗೆ ಕಾಣುತ್ತದೆಂದು ಮಾಡುವುದೇ? ಅಥವಾ ಬಿಜಾಪುರ(ವಿಜಯಪುರ) ದೂರವಿದೆ, ಅವರ ಸಂಕಷ್ಟ ನಮಗೆ ಕಾಣುವುದಿಲ್ಲ ಅಥವಾ ಕೇಳುವುದಿಲ್ಲವೆಂದು ನಾವು ನಿರ್ಲಕ್ಷ್ಯ ಮಾಡಿದ್ದೇವೆಯೇ? ನಮಗೆ ಆರ್ಥಿಕ ಸವಾಲುಗಳು ಗೊತ್ತಿದೆ. ನಾನು ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ. ಯಾವ ಧಾರಣೆಯನ್ನು fix ಮಾಡಬೇಕೆನ್ನುವಂಥದ್ದು ಕೂಡ ವೈಜ್ಞಾನಿಕವಾಗಿ ಆಗಬೇಕಾಗುತ್ತದೆ. ರೈತರಿಗೆ ಎಂದೂ ಕೂಡ ಲುಕ್ಸಾನಾಗಬಾರದು. ಅದೇರೀತಿ, ರಾಜ್ಯಕ್ಕೆ ಅತಿ ಹೆಚ್ಚು ಹೊರೆಯಾಗಬಾರದು. ಆ ನಿರ್ಣಯವನ್ನು ತೆಗೆದುಕೊಳ್ಳುವಂಥದ್ದೇ ಬುದ್ಧಿವಂತಿಕೆ ಇರುವಂಥದ್ದು. ಆದರೆ, ಇದರ ಬಗ್ಗೆ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಂಡಿದ್ದರೆ, ಇವತ್ತು ನಿಮ್ಮ ಕೈಯಲ್ಲಿ 15, 20 ಸಾವಿರ ಕೋಟಿ ರೂಪಾಯಿ ಇದ್ದಿದ್ದರೆ ಅದಕ್ಕೆ ಚಾಲನೆ ಕೊಡಬಹುದಾಗಿತ್ತೇ? Compensation ಕೊಡಬಹುದಾಗಿತ್ತೇ? ಅಷ್ಟು ಬೇಗ ನಮ್ಮ ಯೋಜನೆಗಳು ಮುಗಿಯುತ್ತಿದ್ದವು. ತಾವು ಅದನ್ನು ಮಾಡಲಿಲ್ಲ. ಚಿಂತನೆ ಮಾಡುವುದರಲ್ಲಿ ಇವತ್ತು ತಾವು ವಿಫಲರಾಗಿದ್ದೀರಿ. ಮಾನ್ಯ ಉಪಾಧ್ಯಕ್ಷರೆ, ನೀವು ನನಗೆ ಮಾತನಾಡಲು ಸಮಯ ಕೊಡುತ್ತಿಲ್ಲ. ಇಲ್ಲದಿದ್ದರೆ ನೀರಾವರಿಯಲ್ಲಿ works ಗೆ ಎಷ್ಟು ಖರ್ಚಾಗಿದೆ? ಸಾಲ ತೀರಿಸುವುದಕ್ಕೆಷ್ಟು ಖರ್ಚಾಗಿದೆ?

ಉಪಾಧ್ಯಕ್ಷರು: Demands ಮೇಲೆ ಮಾತನಾಡುವಾಗ ಮಾತನಾಡಿ. ಈಗ ಬಜೆಟ್‌ಗಷ್ಟೇ ಸೀಮಿತ ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ: Demands ಮೇಲೆ ಅದರ ವಿವರಗಳನ್ನು ಖಂಡಿತವಾಗಿ ಮಾತನಾಡುತ್ತೇನೆ.

ಉಪಾಧ್ಯಕ್ಷರು: ಸಲಹೆಗಳು ಸರಿ ಇವೆ, ಸಮಯ ಇಲ್ಲ ಅಷ್ಟೇ.

ಶ್ರೀ ಎ.ಎಸ್. ಪಾಟೀಲ್(ನಡಹಳ್ಳಿ): ನೀವು ಅಂಕಿ ಸಂಖ್ಯೆಯನ್ನೇ ಹೇಳುತ್ತಿಲ್ಲ. ಅವರೆಷ್ಟು ಖರ್ಚು ಮಾಡಿದ್ದಾರೆ? ನೀವೆಷ್ಟು ಖರ್ಚು ಮಾಡಿದ್ದಿರಿ ಎಂದು ಹೇಳಬೇಕಲ್ಲವೇ?

ಶ್ರೀ ಬಸವರಾಜ ಬೊಮ್ಮಾಯಿ: ಉದಾಹರಣೆಗೆ, ನೀವು land acquisition and R & R ಗೆ ಕೃಷ್ಣಾ ಭಾಗ್ಯ ಜಲ ನಿಗಮ ಅಂದರೆ UKP ಗೆ ಬರುತ್ತದೆ, ಅದರಲ್ಲಿ ಈ ವರ್ಷ ಅಂದರೆ 2016-17ರಲ್ಲಿ 1,750 ಕೋಟಿ ರೂಪಾಯಿ ಇಟ್ಟಿದ್ದೀರಿ. Revised estimates ನಲ್ಲಿ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅದನ್ನು 1 ಸಾವಿರ ಕೋಟಿ ರೂಪಾಯಿಗಳಿಗೆ ಕಡಿಮೆ ಮಾಡಿದಿರಿ. 470 ಕೋಟಿ ರೂಪಾಯಿ release ಮಾಡಿದ್ದೀರಿ. ಅಂದರೆ, ನೀವು 30% ಕೂಡ, 20% ಕೂಡ ಖರ್ಚು ಮಾಡಲಿಲ್ಲ. ಒಂದು ಸಣ್ಣ ಉದಾಹರಣೆ ಕೊಟ್ಟಿದ್ದೇನೆ. Capital account ನಲ್ಲಿ 429 ಕೋಟಿ ರೂಪಾಯಿ ಇಟ್ಟಿದ್ದೀರಿ, ಇಟ್ಟಿದ್ದೇ ಕಡಿಮೆ. ನೀವು ಖರ್ಚು ಮಾಡಿರುವುದು 350 ಕೋಟಿ ರೂಪಾಯಿ. ಅಲ್ಲಿ ಕೂಡ ಪೂರ್ಣವಾಗಿ ಖರ್ಚಾಗಿಲ್ಲ. ನಾನು ದಿ:28.2.2017ರವರೆಗಿನ ಮಾಹಿತಿ ಹೇಳುತ್ತಿದ್ದೇನೆ. ಅಂದರೆ, ಮೊನ್ನೆವರೆಗಿನ ಮಾಹಿತಿ ಹೇಳುತ್ತಿದ್ದೇನೆ. ಕರ್ನಾಟಕ ನೀರಾವರಿ ನಿಗಮ ಅಂದರೆ, ಹಿಂದುಳಿದ ಪ್ರದೇಶಗಳಿಗೆ ನೀರಾವರಿ ಒದಗಿಸುವಂಥದ್ದು, Special Development Plan. ಕಳೆದ ವರ್ಷ 2016-17ರಲ್ಲಿ 220 ಕೋಟಿ ರೂಪಾಯಿ ಕೊಟ್ಟಿದ್ದರು. ಅದನ್ನು revised estimates ನಲ್ಲಿ 170 ಕೋಟಿ ರೂಪಾಯಿಗಳಿಗೆ ಇಳಿಸಿದರು. Release ಆಗಿದ್ದೇ 20 ಕೋಟಿ ರೂಪಾಯಿ. ಇದನ್ನು performance ಎಂದು ಕರೆಯಬಹುದೇ? ಹಿಂದುಳಿದ ಪ್ರದೇಶದ ಅಭಿವೃದ್ಧಿ ನೀರಾವರಿಯ ಸೌಲಭ್ಯವನ್ನು ಕೊಟ್ಟಿದ್ದೇವೆಂದು ನಾವು ಹೇಳಿಕೊಳ್ಳಬಹುದೇ? ಹೇಳಿ ಸ್ವಾಮಿ? Budget supported grants 1,522 ಕೋಟಿ ರೂಪಾಯಿ ಕೊಟ್ಟಿರುವುದು. February ಅಂತ್ಯದವರೆಗೆ ಖರ್ಚಾಗಿರುವುದು 1100 ಕೋಟಿ ರೂಪಾಯಿ. ಹೀಗೆ ತಮ್ಮದೇನು claim ಇದೆ, ನಿಮ್ಮ claim ಗೂ, ವಾಸ್ತವ ಸ್ಥಿತಿಗೂ ಎಷ್ಟೊಂದು ವ್ಯತ್ಯಾಸವಿದೆ. ಆದ್ದರಿಂದಲೇ ಈ ಬಜೆಟ್‌ಗಳ ಅಂಕಿ ಅಂಶಗಳಿಗೆ ವಿಶ್ವಾಸಾರ್ಹತೆ ಕೊರತೆ ಇದೆ ಎಂದು ಹೇಳುವುದು. ಇವತ್ತು power sector ನಲ್ಲೇನಾಗಿದೆ? ನಾವು power surplus state ಅನ್ನು ಮಾಡುತ್ತೇವೆ, ಯಾವ ಕಾರಣಕ್ಕೂ ಹಿಂದೆ ಬೀಳುವುದಿಲ್ಲ ಎನ್ನುವ ಮಾತನ್ನು ಕೂಡ ತಾವು ಹೇಳಿದಿರಿ. ಆದರೇನಾಗಿದೆ? ಸುಮಾರು 600 MW ಅನ್ನು non conventional energy ಎಂದರೆ solar wind ಅದನ್ನು private ನವರೇ ಮಾಡಿರುತ್ತಾರೆ, ಅದು add ಮಾಡುವುದು ಬಿಟ್ಟರೆ, ಇವತ್ತು ನಮ್ಮ sharing Central Grid ಹೆಚ್ಚಾಗಿದೆ. Sharing Central Grid ಮತ್ತು ಹೊರಗಡೆ ಇದೆಲ್ಲ ಸೇರಿ ನಾಲ್ಕೈದು ನೂರು MW ಅಲ್ಲಿಂದ ಬಂದಿರುವಂಥದ್ದು. ಆದರೆ, ನಮ್ಮ ರಾಜ್ಯದಲ್ಲಿಯೇ ಹೊಸ ವಿದ್ಯುಚ್ಛಕ್ತಿಯ ಉತ್ಪಾದನೆ ಅಂದರೆ 1 MW ಕೂಡ add ಮಾಡಿಲ್ಲ. ನಮ್ಮ ಕಾಲದಲ್ಲಿ ಪ್ರಾರಂಭವಾಗಿರುವಂಥ Bellary

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

Thermal Plant 2nd stage, Yermaras Thermal Plant 700 MW 2013 ಮಾರ್ಚ್‌ಗೆ ಅವೆಲ್ಲ Commission ಆಗಬೇಕಾಗಿತ್ತು. ಉತ್ಪಾದನೆಯಾಗಬೇಕಾಗಿತ್ತು. ಇವತ್ತಿಗೂ ಕೂಡ ಪೂರ್ಣ ಪ್ರಮಾಣದಲ್ಲಾಗುತ್ತಿಲ್ಲ. Trial and Error ನಡೆಯುತ್ತಿದೆ. Power Department ನಲ್ಲೇನು ನಡೆಯುತ್ತಿದೆ?

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಬೊಮ್ಮಾಯಿಯವರೆ, ಇಲ್ಲೇ ಮುಖ್ಯಮಂತ್ರಿ ಇದ್ದಾರೆ. Power Sector ನಲ್ಲೇನೂ ಅಭಿವೃದ್ಧಿ ಮಾಡಿಲ್ಲ ಎಂದು ಇವರು ಹೇಳುತ್ತಾರೆ. Power Sector ನಲ್ಲಿ ಯಾವುದೇ ಅಭಿವೃದ್ಧಿಯಾಗಲಿ, ಯಾವುದೇ ದಿಟ್ಟ ನಿಲುವನ್ನು ತೆಗೆದುಕೊಂಡಿಲ್ಲ, ಯಾವುದೇ ಒಂದು progress ಆಗತಕ್ಕಂಥದ್ದನ್ನು ಕಂಡಿಲ್ಲವೆಂದು ಹೇಳುತ್ತಾರೆ. ಬಹುಶ: ಬೊಮ್ಮಾಯಿಯವರಿಗೆ ಗೊತ್ತಿಲ್ಲವೆಂದು ಕಾಣಿಸುತ್ತದೆ. ಕೇವಲ 3 ನಿಮಿಷಗಳಲ್ಲಿ ರೈತರಿಗೆ 300 MW tender ಕೊಡಲಿಲ್ಲವೇ? ಅದು ಸಾಧನೆಯಲ್ಲವೇ? ಹೇಳಬೇಕಲ್ಲವೇ? ಕೇವಲ ತೆಗಳುವುದು, ಅದರಲ್ಲಿ ಹೊಗಳುವುದೂ ಇರಬೇಕು.

ಶ್ರೀ ಬಸವರಾಜ ಬೊಮ್ಮಾಯಿ: ಅಂಥದ್ದನ್ನು ನಿಮಗೆ ಬಿಟ್ಟಿದ್ದೇನೆ. ಇಂಥವೆಲ್ಲ ಹೇಳುವುದಕ್ಕೆ ನಿಮಗೆ ಬಿಟ್ಟಿದ್ದೇನೆ. ಇಂಥವೆಲ್ಲ ನಿಮಗೇ ಜಾಸ್ತಿ ಹೊಳೆಯುತ್ತದೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಮುಖ್ಯಮಂತ್ರಿಯವರೆ, ನಿಮಗೆ ಖುಷಿ ಎನಿಸಿದರೆ ಹೇಳುತ್ತೇನೆ. ನಿಮಗೇನಾದರೂ ಖೇದವೆನಿಸಿದರೆ ನಾನು ಹೇಳುವುದಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ನಾನು ಹೇಳುವುದಿಷ್ಟೇ. Power Sector ನಲ್ಲಿ ನಾವು improve ಮಾಡದೇ ಇದ್ದರೆ ರಾಜ್ಯದ ಒಟ್ಟಾರೆ ಆರ್ಥಿಕ ಅಭಿವೃದ್ಧಿಯನ್ನೇ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇದಕ್ಕೆ ಹೆಚ್ಚಿನ ಗಮನ ಕೊಡಬೇಕು. ನಿಮ್ಮ production, T & D losses, efficiency, distribution ಇದಕ್ಕೆ ಹೆಚ್ಚಿನ ಗಮನ ಕೊಡುವುದು ಬಹಳ ಅವಶ್ಯಕತೆ ಇದೆ.

(ಮುಂದು)

27-03-2017-(13)-12-30-ಎಸ್ಕೆ-ಹೆಚ್‌ಎಸ್

ಶ್ರೀ ಬಸವರಾಜ್ ಬೊಮ್ಮಾಯಿ :- ಮುಂದು.,

ಇದು ಆಗದಿದ್ದರೆ ರಾಜ್ಯದ ಪ್ರಗತಿ 7%, 8% ಮಾಡುತ್ತೇವೆಂದು ನಾವು ಯಾವ ಆಧಾರದ ಮೇಲೆ ಹೇಳುವುದು? ಕೈಯಲ್ಲಿರುವಂಥದ್ದು, ಮುಗಿಯುವುದಕ್ಕೆ ಬಂದಿರುವಂಥ ಯೋಜನೆಗಳನ್ನು ತುದಿ ಮುಟ್ಟಿಸಿ ಅವುಗಳ ಲಾಭವನ್ನು ಜನರಿಗೆ ಮುಟ್ಟಿಸಿ. Finishing the last mile ಎನ್ನುತ್ತಾರೆ, ಈಗ industries ನಲ್ಲಿ last mile, walking the last mile, ಎನ್ನುವ ಹೊಸ ಹೊಸ ಶಬ್ದಗಳು ಬಂದಿವೆ. Last mile walk ಆಗಿಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳು ಗಮನ ಹರಿಸಬೇಕು ಎನ್ನುವುದು ನನ್ನ ಖಡಾಖಂಡಿತವಾದ ಒತ್ತಾಯ. Solar ಇಷ್ಟು ದೊಡ್ಡ ಪ್ರಮಾಣದಲ್ಲಿ ಆಗಬೇಕಾದರೆ, ಕೇಂದ್ರದಲ್ಲಿ ನರೇಂದ್ರ ಮೋದಿಯವರ ಹೊಸ ಸರ್ಕಾರ ಬಂದ ಮೇಲೆ ಹೊಸದಾಗಿ Solar Policy ಬಂದ ಮೇಲೆ ಇವತ್ತು solar ಗೆ ಬಹಳ ದೊಡ್ಡ boost ನ್ನು ಕೊಟ್ಟಿದೆ. 2019 ಕ್ಕೆ ಅದು ಸಂಪೂರ್ಣವಾಗಿ power surplus ಆಗಬೇಕೆನ್ನುವ ಚಿಂತನೆಯಿಂದ ಅದು ಬಂದಿದೆ. ಆದ್ದರಿಂದ, ಈ ರಾಜ್ಯದಲ್ಲಿ solar development ಆಗುತ್ತಿದೆ ಅದನ್ನು ನಾನು ಒಪ್ಪುತ್ತೇನೆ. ನಾನು ಈಗಾಗಲೇ ಹೇಳಿದಂತೆ social sector ನಲ್ಲಿ 13 ಸಾವಿರ ಕೋಟಿ ರೂಪಾಯಿಗಳು ಕಳೆದ ನಾಲ್ಕು ವರ್ಷಗಳಲ್ಲಿ unspent ಇದೆ. ಅದಕ್ಕೆ ಮಂತ್ರಿಗಳು, ಅದೇನು lapse ಆಗುವುದಿಲ್ಲ ಎಂದು ಉತ್ತರ ಕೊಡುತ್ತಾರೆ.

ಉಪಾಧ್ಯಕ್ಷರು : Paper ನಲ್ಲಿಯೂ ಆ ವಿಚಾರ ಬಂದಿದೆ.

ಶ್ರೀ ಬಸವರಾಜ್ ಬೊಮ್ಮಾಯಿ : ಹಾಗಾದರೆ ಒಂದು ವರ್ಷಕ್ಕೆ budget ಏಕೆ ನಾವು ಮಾಡಬೇಕು? ಈ ವರ್ಷದಲ್ಲಿ ಈ programme ಗೆ ಖರ್ಚು ಮಾಡುತ್ತೇವೆಂದು budget ಮಾಡಿರುವುದು. ಏಕೆ ಖರ್ಚು ಮಾಡಿಲ್ಲವೆಂದರೆ ಅವರು lapse ಆಗುವುದಿಲ್ಲ ಎನ್ನುತ್ತಾರೆ. ಇದ್ದ budgetನ್ನೇ ಒಂದು ವರ್ಷದಲ್ಲಿ ಖರ್ಚು ಮಾಡಿಲ್ಲ ಇನ್ನು ಮುಂದಿನ ವರ್ಷದ budgetನ್ನು ಇದಕ್ಕೆ ಸೇರಿಸಿ ಖರ್ಚು ಮಾಡುವುದಕ್ಕೆ ಸಾಧ್ಯವೇ? ಹೀಗಾಗಿ ನೀವೇನು 47 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತೀರಿ, ಅದರಲ್ಲಿ ನೀವು 13 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿಲ್ಲ. ಈಗ ಖರ್ಚು ಮಾಡದಿರುವುದೇ ಒಂದು ಸಾಧನೆಯೇ? Unspent money, ಮುಂದೆ ಇದು ಬಹಳ ದೊಡ್ಡ ಆರ್ಥಿಕ ಸಮಸ್ಯೆಯಾಗುತ್ತದೆ. ನೋಡಿ ಸ್ವಾಮಿ ಆ ವರ್ಷದ ತೆರಿಗೆಯ ಹಣ ತೆಗೆದುಕೊಂಡು plan ಮಾಡಿ ಆ ವರ್ಷದಲ್ಲಿ ಖರ್ಚು

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಾಡಿಲ್ಲದಿದ್ದರೆ ಅದು ಅಪರಾಧ. ಇದಕ್ಕೆ ಯಾರು ಹೊಣೆ? ನೀವು ದೀನದಲಿತರ ಸಾಮಾಜಿಕ ನ್ಯಾಯ ಎಲ್ಲವೂ ನಿಮ್ಮ trade mark, ನಿಮ್ಮ ಹಕ್ಕು ಎನ್ನುವ ರೀತಿಯಲ್ಲಿ ಮಾತನಾಡುತ್ತೀರಿ. ಆದರೆ, ಆ ಜನರನ್ನು ಹೋಗಿ ಕೇಳಿ. ಸ್ವಾಮಿ ಅವರಿಗೇನು ಬೇಕು, (1) Education (2) Employment (3) Empowerment. ಈ ಮೂರು E ಗಳು ಬೇಕು. ಈ ಮೂರು E ಗಳನ್ನು ನೀವು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಗಂಗಾ ಕಲ್ಯಾಣ ಯೋಜನೆ ಕೊಡುತ್ತೀರಿ power ಇಲ್ಲ. ಒಂದು ವರ್ಷ sanction ಮಾಡುವುದು, ಅದರ next year bore well ತೆಗೆಸುವುದು, ಅದರ next year power ಕೊಡುತ್ತೀರಿ. ಒಂದು ವರ್ಷದ ಕೆಲಸ ಮೂರು ವರ್ಷಗಳ ಕಾಲ ಮಾಡುತ್ತೀರಿ. ಅಷ್ಟರಲ್ಲಿ ಅವನ ಹೆಣ ಮಲಗಿರುತ್ತದೆ. ಇದು ನಡೆಯುತ್ತಿರುವ ವಾಸ್ತವಾಂಶ. SC/ST ಗಳಿಗೆ ಗಂಗಾ ಕಲ್ಯಾಣ ಯೋಜನೆ ಕೊಟ್ಟೆವು ಎಂದು ನಾವು ಇಲ್ಲಿ ಬರೆದುಕೊಳ್ಳುತ್ತೇವೆ. Budget book ನಲ್ಲಿ ಬರೆದುಕೊಂಡಿದ್ದೀರಿ. ಅದರಲ್ಲಿ ಎಷ್ಟು ನೀರು ಬಿತ್ತು, ಎಷ್ಟು ಚಾಲನೆಯಾಯಿತು, ಎಷ್ಟು ಎಕರೆ ನೀರಾವರಿಯಾಯಿತು, ಅವನ ಆರ್ಥಿಕ ಪರಿಸ್ಥಿತಿ ಏನಾಗಿದೆ, ಎಂಬುದನ್ನು ನೋಡಿ. ಒಂದು department ಗೂ ಇನ್ನೊಂದು department ಗೂ ಸಂಬಂಧವಿಲ್ಲ. ಆ ತರಹದ ವರ್ತನೆ ಇವತ್ತು ನಡೆಯುತ್ತಿದೆ. ನಿಜವಾಗಲೂ ಕೂಡ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಆ ವರ್ಗದ ಜನರಿಗೆ ನಾವು ಅನ್ಯಾಯ ಮಾಡುತ್ತಿದ್ದೇವೆ. ಈ ಬಗ್ಗೆ ಗಂಭೀರವಾಗಿ ಚರ್ಚಿಸಬೇಕಾದ ಅವಶ್ಯಕತೆಯಿದೆ. ಇಡೀ ದಿವಸ ನಾವು ಸಾಮಾಜಿಕ ವಲಯಕ್ಕೆ ಕೊಟ್ಟಿರುವ ಹಣಕಾಸಿನ ಬಗ್ಗೆ ಈ ಸದನ ಚರ್ಚಿಸಬೇಕು. ಯಾವ ಯೋಜನೆಗಳು ಆ ದೀನದಲಿತರ ಪರವಾಗಿವೆ, ಯಾವ ಯೋಜನೆಗಳು ಉಪಯೋಗ ಇವೆ, ಯಾವ ಯೋಜನೆಗಳು ಉಪಯೋಗವಿಲ್ಲ, ಎನ್ನುವುದರ ಬಗ್ಗೆ ಚಿಂತನೆ ಮಾಡಬೇಕು. Social welfare ಗಾಗಿ 39 departments ಗೆ ಹಣ ಹರಿದು ಹೋಗುತ್ತದೆ. ಆದ್ದರಿಂದ, ಆಯಾಯ department ನಲ್ಲಿ ಅವರ ಕಾರ್ಯಕ್ರಮಗಳಿರುತ್ತವೆ. ಇದು priority ಇರುವುದಿಲ್ಲ. ಅದ್ದರಿಂದ ಇದಕ್ಕೆ ನನ್ನ ಒಂದು ಸಲಹೆ ಇದೆ. ಇತ್ತೀಚಿನ ದಿನಗಳಲ್ಲಿ budget provision ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಇದಕ್ಕೆ ಗಾಂಭೀರ್ಯತೆ ಬರಬೇಕಾದರೆ, ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಒಂದು committee ಇದೆ. ಅವರು 3 ತಿಂಗಳು 6 ತಿಂಗಳಿಗೊಮ್ಮೆ review ಮಾಡಬಹುದು ನಾನು ಇಲ್ಲವೆಂದು ಹೇಳುವುದಿಲ್ಲ. ಅದಿರಲಿ, ಆದರೆ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಇಡೀ department ಆ ಎಲ್ಲಾ workಗಳನ್ನು monitor ಮಾಡಲಿಕ್ಕೆ Development Commissionerಗಳ ಕೈಗೆ ಕೊಡಿ. ಏಕೆಂದರೆ, ಮಾನ್ಯ ಹೆಚ್.ಕೆ.ಪಾಟೀಲ್‌ರೇ, ನಾನು ಏನು ತಿಳಿದುಕೊಂಡಿದ್ದೇನೆಂದರೆ, ಈ ಹಣ ಏನಿದೆ ಇದು expenditure ಅಲ್ಲ. ಇದು investment. Human development investment. ಈ ಹಣವನ್ನು ಖರ್ಚು ಮಾಡುವ ಮುಖಾಂತರ ನಮ್ಮ ರಾಜ್ಯದ ಆದಾಯ ಕೂಡ ಹೆಚ್ಚು ಮಾಡಬಹುದು. ನಾವು ಇದನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಬೇಕು. ನಮ್ಮ Social Welfare Minister ರವರು ಏನು ತಿಳಿದುಕೊಂಡಿದ್ದಾರೆಂದರೆ, ಈ ಹಣ ನನ್ನ ಕೈಯಲ್ಲಿ ನನ್ನ ಇಲಾಖೆಯಲ್ಲಿದೆ, ಇದನ್ನು ಖರ್ಚು ಮಾಡಬೇಕಾಗಿದೆ, ನಿನಗೇನು ಬೇಕು, ನಿನಗೇನು ಬೇಕು, ಎಂದು ಕೇಳಿ ಖರ್ಚು ಮಾಡುವುದೇ ಒಂದು ದೊಡ್ಡ ಸವಾಲು ಆಗಿದೆ, ಖರ್ಚು ಮಾಡುವುದೇ ಒಂದು ಸಾಧನೆಯಾಗಿದೆ. ನೀವು sanction ಮಾಡಿದ ಮೇಲೆ ಆ ಹಣ ಮುಂದೆ ಎಲ್ಲಿಗೆ ಬಂತು, ಏನು ಬಂತು, ಯಾರಿಗೆ ಉಪಯೋಗವಾಯಿತು, ಈ ಬಗ್ಗೆ ನೋಡುವುದಕ್ಕೆ ಅವರಿಗೆ ಪುರುಸೊತ್ತೇ ಇಲ್ಲ. ಏಕೆಂದರೆ, ಅವರ budget provision ಇಷ್ಟು ದೊಡ್ಡದಾಗಿದೆಯಲ್ಲವೇ? ಅವರಿಗೆ ಇಡೀ ವರ್ಷ ಬರಿ ಹಣ ಹಂಚುವುದರಲ್ಲೇ ಅವರ ಸಮಯ ಕಳೆಯುತ್ತಾರೆ. ಅದ್ದರಿಂದ, ಇದು investment ಆಗಬೇಕಾದರೆ, ಆ capacity building ಆಗಬೇಕಾದರೆ ವೈಜ್ಞಾನಿಕವಾಗಿ ಅವರಿಗೆ ಏನು ಬೇಕು, ಆ ದಲಿತ ಜನರಿಗೆ ಸದ್ಯಕ್ಕೆ ಏನು ಬೇಕು, ಆರ್ಥಿಕವಾಗಿ ಸಾಮಾಜಿಕವಾಗಿ ಮೇಲೆ ಬರುವುದಕ್ಕೆ ಏನು ಬೇಕು, ಆ ಕಾರ್ಯಕ್ರಮಗಳನ್ನು ರೂಪಿಸುವುದು ಬಹಳ ಮುಖ್ಯವಿದೆ. ಸನ್ಮಾನ್ಯ ದೇವೇಗೌಡರವರು ಮುಖ್ಯಮಂತ್ರಿಯಾಗಿದ್ದಾಗ, ಕುರಿ, ಆಡು, ಮೇಕೆ, ಕೋಳಿ ಕೊಡುವಂಥ ಕಾರ್ಯಕ್ರಮಗಳು ಮೊದಲು ಇದ್ದವು. ಅವರು ತಮ್ಮ budget ಭಾಷಣದಲ್ಲಿ ಹೇಳಿದ್ದಾರೆ. ಇವುಗಳನ್ನು ಸಣ್ಣ ಪುಟ್ಟದಲ್ಲಿ ಕೊಡುವುದರಿಂದ ಅವರು ಬಹಳ ದೊಡ್ಡ ಪ್ರಮಾಣದಲ್ಲಿ ಮೇಲೆ ಬರುವುದಿಲ್ಲ, ಅವರಿಗೆ ಆರ್ಥಿಕ ಸಶಕ್ತಿ ಕೊಡಬೇಕೆಂದರೆ, ದೊಡ್ಡ ಪ್ರಮಾಣದಲ್ಲಿ ಹಳ್ಳಿಗಾಡಿನಲ್ಲಿ ಸಣ್ಣ ಪುಟ್ಟ ಭೂಮಿಯನ್ನಿಟ್ಟುಕೊಂಡಿರುವಂಥ SC/ST ಜನಾಂಗದವರ ದೊಡ್ಡ ಜನ ಸಂಖ್ಯೆ ಇದೆ, ಅವರಿಗೆ ನೀರಿನ ಸೌಲಭ್ಯ ಕೊಡೋಣ ಎಂದು ಗಂಗಾ ಕಲ್ಯಾಣ ಯೋಜನೆಯನ್ನು ಅವತ್ತು ಪ್ರಾರಂಭಿಸಿದರು. ಇವತ್ತು ಮತ್ತೆ ನಾವು ವಾಪಸ್ ಎಲ್ಲಿಗೆ ಹೋಗುತ್ತಿದ್ದೇವೆ ಎನ್ನುವ ಚಿಂತನೆಯನ್ನು

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನಾವೆಲ್ಲರೂ ಸೇರಿ ಮಾಡಬೇಕಾಗಿದೆ. ಅದ್ದರಿಂದ, ಈ ರಾಜ್ಯದ ಸುಮಾರು 25% population ಅಭಿವೃದ್ಧಿಯಲ್ಲಿ ಹಿಂದುಳಿದರೆ ಈ ರಾಜ್ಯ ಅಭಿವೃದ್ಧಿಯಾಗಲಿಕ್ಕೆ ಸಾಧ್ಯವಿಲ್ಲ. ಅವರು ಕೂಡ ಅರ್ಥಿಕವಾಗಿ ಸದೃಢರಾದಾಗ ಮಾತ್ರ ರಾಜ್ಯದ ಒಟ್ಟಾರೆ ಅಭಿವೃದ್ಧಿಯಾಗಲಿಕ್ಕೆ ಸಾಧ್ಯವಿದೆ. ಆ ಹಿನ್ನೆಲೆಯಲ್ಲಿ ಕಾನೂನು ಕೂಡ ನಾವು ಇಲ್ಲಿ pass ಮಾಡಿದ್ದೇವೆ. ನಾನು ಮಾನ್ಯ ಮಂತ್ರಿಗಳಿಗೆ ಒಂದು ಪ್ರಶ್ನೆ ಕೇಳುತ್ತೇನೆ. ಕಳೆದ ನಾಲ್ಕು ವರ್ಷಗಳಲ್ಲಿ 13 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿಲ್ಲವಲ್ಲ, ಖರ್ಚು ಮಾಡದಿದ್ದರೆ ಅಧಿಕಾರಿಗಳನ್ನು ಜೈಲಿಗೆ ಹಾಕಲಿಕ್ಕೆ ಅಧಿಕಾರ ತೆಗೆದುಕೊಂಡರಲ್ಲ, ಒಬ್ಬರನ್ನಾದರೂ ಜೈಲಿಗೆ ಹಾಕಿದ್ದೀರಾ? ಜೈಲಿಗೆ ಹಾಕುವುದು ಬೇಡ notice ಕೊಟ್ಟಿದ್ದೀರಾ? ನಿಮ್ಮ ಕೈಗೆ ಅಸ್ತ್ರ ಕೊಟ್ಟೆವು. ನಮ್ಮ ಮಾತು ಯಾರು ಕೇಳುವುದಿಲ್ಲವೆಂದು ನಿಮ್ಮ ಕೈಗೆ ನಾವು ಅಸ್ತ್ರ ಕೊಟ್ಟೆವು. ಅಸ್ತ್ರ ಬಳಸದಿದ್ದರೆ ಹೇಗೆ? ಅಲ್ಲಮಪ್ರಭುಗಳು ಹೇಳಿದಂತೆ, "ಕೊಟ್ಟ ಕುದುರೆಯನ್ನು ಏರಲಾರದವನು ವೀರನೂ ಅಲ್ಲ, ಧೀರನೂ ಅಲ್ಲ, ಶೂರನೂ ಅಲ್ಲ." ಆ ಪರಿಸ್ಥಿತಿಯಾಗಿದೆ. ಏನು ಪ್ರಯೋಜನ? ನೀವು ತೋರಿಸಬೇಕಾಗಿತ್ತು. ಗುಲ್ಬರ್ಗಾ, ಬೆಳಗಾವಿ, ಮೈಸೂರು division ಗಳ ವ್ಯಾಪ್ತಿಯಲ್ಲಿ 2-3 ಕಡೆ ಕೆಲಸ ಮಾಡದಿರುವವರನ್ನು ಬಲೆಗೆ ಹಾಕಿ ತೋರಿಸಬೇಕಾಗಿತ್ತು. ರಾಜ್ಯ ಎಂದರೆ ಏನು? ಕಾನೂನು ಎಂದರೆ ಏನು? ವಿಧಾನ ಸಭೆಯಲ್ಲಿ ನಾವು ತೆಗೆದುಕೊಂಡಿರತಕ್ಕಂಥ ನಿರ್ಣಯಗಳನ್ನು ಅನುಷ್ಠಾನಗೊಳಸದಿದ್ದರೆ ಏನಾಗುತ್ತದೆ ಎನ್ನುವುದನ್ನು ತೋರಿಸಬೇಕಾಗಿತ್ತು ನಿಮಗೆ ಒಳ್ಳೆಯ ಅವಕಾಶ ಇತ್ತು. ನಾವು ಇವತ್ತು ಬಸವಲಿಂಗಪ್ಪ, ಕೆ.ಹೆಚ್.ರಂಗನಾಥ್‌ರವರನ್ನು ಏಕೆ ನೆನಪು ಮಾಡಿ ಕೊಳ್ಳುತ್ತೇವೆ? ಆಗ ಈ ತರಹ ಕಾನೂನು ಇರಲಿಲ್ಲ, ಅಧಿಕಾರ ಇರಲಿಲ್ಲ, ಇಚ್ಛಾಶಕ್ತಿ ಇತ್ತು. ಯಾವುದೇ ಕಾನೂನು ಬಲ ಇಲ್ಲದೆಯೂ ಬರಿ ಇಚ್ಛಾಶಕ್ತಿಯೇ ಮೇಲೆ ದೀನದಲಿತರ ರಕ್ಷಣೆ, ಅಭಿವೃದ್ಧಿ, ಉದ್ಧಾರ ಮಾಡಿರುವಂಥ ಹಲವಾರು ಉದಾಹರಣೆಗಳು ಇವೆ. ಇವತ್ತು ಕಾನೂನು ಬಲ ಇದೆ, ಇಚ್ಛಾಶಕ್ತಿ ಇಲ್ಲ. ಒಂದು ಉದಾಹರಣೆ ತೋರಿಸಿ. ಅಥವಾ ನಮಗೆ ಗೊತ್ತಿಲ್ಲದೆ ಮಾಡಿದ್ದರೆ ಅದನ್ನು ವಿಧಾನ ಸಭೆಯ ಮುಂದಿಡಿ ನಾವು ಏನಿದೆ ಎಂದು ಪರಿಶೀಲನೆ ಮಾಡುತ್ತೇವೆ. ಎರಡನೆಯದಾಗಿ, ನಿನ್ನೆ ಮಾನ್ಯ ಮುಖ್ಯಮಂತ್ರಿಗಳಿಗೆ ಸನ್ಮಾನ ಮಾಡಿದ್ದಾರೆ ನಮಗೂ ಕೂಡ ಸಂತೋಷ. ಒಳ್ಳೆಯ ಕೆಲಸ ಮಾಡಿದಾಗ ಸನ್ಮಾನ ಮಾಡುವುದು ನಮ್ಮ ಸಂಸ್ಕೃತಿ ನಾವು ಕೂಡ ಅದಕ್ಕೆ ಬೆಂಬಲ ವ್ಯಕ್ತಪಡಿಸುತ್ತೇವೆ ಇದರಲ್ಲಿ ಎರಡನೇ ಮಾತಿಲ್ಲ. ಆದರೆ, ದಯವಿಟ್ಟು ನಾವು ಪ್ರಜಾಪ್ರಭುತ್ವದಲ್ಲಿದ್ದೇವೆ. ರಾಜ ಮಹಾರಾಜರ



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಗದ್ದುಗೆಯಿಂದ ತೆಗೆದುಕೊಂಡು ಬಂದು ಪ್ರಜಾಪ್ರಭುತ್ವಕ್ಕೆ ಪ್ರಜೆಗಳೇ ಈ ನಾಡಿನ ಪ್ರಭುಗಳು ಎಂದು ಜನರಿಂದ, ಜನರಿಗೋಸ್ಕರ ಈ ಸರ್ಕಾರ ಇದೆ ಎನ್ನುವಂಥ ಧ್ಯೇಯವನ್ನಿಟ್ಟುಕೊಂಡು ಡಾ:ಬಿ.ಆರ್.ಅಂಬೇಡ್ಕರ್‌ರವರು Constitution ನ್ನು ಬರೆದಿದ್ದಾರೆ.

(ಮುಂದು)

27.03.2017 12.40 (14) ಕೆಎಸ್:ಹೆಚ್‌ಎಸ್

ಶ್ರೀ ಬಸವರಾಜ್ ಬೊಮ್ಮಾಯಿ:- (ಮುಂದು)

ಅವತ್ತು ಬಹಳಷ್ಟು ರಾಜಮಹಾರಾಜರು ರಾಜಗದ್ದುಗೆಯನ್ನು ಬಿಟ್ಟು ದೀನದಲಿತರ ಉದ್ಧಾರವನ್ನು ಮಾಡಿದ್ದಾರೆ. ಬುದ್ಧ, ಮಹಾವೀರ ಮತ್ತು ಕನಕದಾಸರು ಹಾಗೂ ಇನ್ನೂ ಹಲವರು ಮಾಡಿರುವ ಉದಾಹರಣೆಗಳನ್ನು ನಾವು ಕೊಡಬಹುದು. ಆದರೆ, ಈಗಿರುವಂಥ ಮುಖ್ಯ ಮಂತ್ರಿಗಳನ್ನು ಕರೆದುಕೊಂಡು ಹೋಗಿ ರಾಜಮಹಾರಾಜರನ್ನಾಗಿ ದಯವಿಟ್ಟು ಮಾಡುವುದಕ್ಕೆ ಹೋಗಬೇಡಿ. ಈ ಕಾಲಚಕ್ರವನ್ನು ಹಿಂದಕ್ಕೆ ತಿರುಗಿಸುವಂಥ ಪ್ರಯತ್ನವನ್ನು ದಯವಿಟ್ಟು ಮಾಡುವುದಕ್ಕೆ ಹೋಗಬೇಡಿ, ಪ್ರಜಾಪ್ರಭುತ್ವದಲ್ಲಿ ಇದು ಸರಿಯಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಬೇಡ ಬೇಡ ಎಂದು ಹೇಳುತ್ತಿದ್ದರೂ ಸಹ ಬಿಡಲಿಲ್ಲ. ನಿನ್ನೆದಿವಸ ಕಿರೀಟ ಕೊಟ್ಟರು ಮತ್ತೆ ಕೋಟ್ ಸಹ ಕೊಟ್ಟರು. ಬಹಳ ಮಂದಿಗೆ ಕಿರೀಟ ಹಾಕಿರುವುದನ್ನು ನಾವು ನೋಡಿದ್ದೇವೆ. ಆದರೆ, ಪೋಷಾಕು ಸಹ ಕೊಟ್ಟರು. ಒಮ್ಮೊಮ್ಮೆ ನನಗೆ ಏನು ಅನಿಸುತ್ತದೆ ಎಂದರೆ, ಈ ಕೋಟ್ ಅನ್ನು ಪತ್ರಕರ್ತರು ಯಾವ್ಯಾವ ಸಂದರ್ಭದಲ್ಲಿ ಯಾವ್ಯಾವ ರೀತಿಯಾಗಿ ಉಪಯೋಗ ಮಾಡುತ್ತಾರೆಂಬುದು ನಮಗೆ ಗೊತ್ತಿಲ್ಲ. ಏಕೆಂದರೆ, ಇದು ಮುಂದೆ ನಗೆಪಾಟಲು ಆಗಬಾರದು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳೇ ಸ್ವತ: ಚಿಂತನೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ಬಸವರಾಜ್ ಬೊಮ್ಮಾಯಿರವರೆ, ಬೇಗ conclude ಮಾಡಿ. ಇನ್ನೂ ಬಹಳಷ್ಟು ವಿಚಾರಗಳು ಇರಬಹುದು. Demands ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ಮಾತನಾಡಿ. ಬಜೆಟ್ ಮೇಲೆ ಮಾತನಾಡಿರುವುದು ಈಗ ಸಾಕು.

ಶ್ರೀ ಬಸವರಾಜ್ ಬೊಮ್ಮಾಯಿ:- ಮಾನ್ಯ ಉಪಾಧ್ಯಕ್ಷರೆ, ಇನ್ಮೇಲೆ departments ವಿಷಯ ಯಾವುದನ್ನು ತೆಗೆದುಕೊಳ್ಳುವುದಿಲ್ಲ.

ಉಪಾಧ್ಯಕ್ಷರು:- ಸಾಕು, ಬೇಗ conclude ಮಾಡಿ.

ಶ್ರೀ ಬಸವರಾಜ್ ಬೊಮ್ಮಾಯಿ:- Departments ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಎರಡು-ಮೂರು important ವಿಷಯಗಳನ್ನು touch ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ Revenue Departmentನಲ್ಲಿ State Owned Revenue ಎಂದು ಇರುತ್ತದೆ. ನಮ್ಮ ಹಣಕಾಸಿನ ಇಲಾಖೆಯ ಅಧಿಕಾರಿಗಳು tax collect ಮಾಡತಕ್ಕಂಥದರಲ್ಲಿ efficiency in tax collection ಎಂದು ಮಾಡುತ್ತಾರೆ. ನಮ್ಮದು highest tax collecting efficient Government ಎಂದು claim ಮಾಡಿಕೊಳ್ಳುತ್ತಾರೆ. ಆದರೆ, ನನ್ನ ಪ್ರಶ್ನೆ ಏನೆಂದರೆ, What is the potential? ಈ ರಾಜ್ಯಕ್ಕೆ ಒಟ್ಟು ಎಷ್ಟು ತೆರಿಗೆ ಬರಬೇಕು? ಅದು Commercial tax ಇರಬಹುದು ಅಥವಾ Motor vehicle tax ಅಥವಾ ಯಾವುದೇ tax ಇರಬಹುದು. Potential ಎಷ್ಟಿದೆ? ನೀವು ಎಷ್ಟು collect ಮಾಡುತ್ತಿದ್ದೀರಿ? ಇವತ್ತಿನದಿವಸ ದಿವಸ ನಾನು open ಆಗಿ ಒಂದು ಸವಾಲನ್ನು ನಿಮಗೆ ಹಾಕುತ್ತೇನೆ. ಅದೇನೆಂದರೆ, ಇವರು ಸರಿಯಾಗಿ ಕೆಲಸ ಮಾಡಿದರೆ ಬೆಂಗಳೂರು ನಗರ ಒಂದರಲ್ಲಿ ಪ್ರತಿ ವರ್ಷ ವಸೂಲಾಗುತ್ತಿರುವ ತೆರಿಗೆ ಹಣದ ಜೊತೆಗೆ 5 ಸಾವಿರ ಕೋಟಿ ರೂಪಾಯಿ ಅಧಿಕವಾಗಿ collect ಮಾಡಬಹುದು. ಹಾಗೆಯೇ ಚೆಕ್‌ಪೋಸ್ಟ್‌ಗಳಲ್ಲಿ ಸರಿಪಡಿಸಿದರೆ ಸುಮಾರು ಒಂದರಿಂದ ಒಂದೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ಹೆಚ್ಚು collect ಮಾಡಬಹುದು. ಆದರೆ, ಈ ಕೆಲಸವನ್ನು ಮಾಡುತ್ತಿಲ್ಲ. ನಮ್ಮ ರಾಜ್ಯದ tax potential ಜಾಸ್ತಿ ಇದೆ. ಕಳೆದ ನಾಲ್ಕು ವರ್ಷಗಳ tax growth ನೋಡಿದಾಗ average 8 ರಿಂದ 9% ಇದೆ. ಆದರೆ, 11.2% ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾರೆ. 2004-05ನೇ ಸಾಲಿನ base ಇಟ್ಟುಕೊಂಡಾಗ ನಿಮಗೆ 11.2% ಬರುತ್ತದೆ. ಆದರೆ, ಈಗ 2011-12ನೇ ಸಾಲಿನ base ಇಟ್ಟುಕೊಂಡಿದ್ದಾರೆ. ಈ base ಅನ್ನು ಇಟ್ಟುಕೊಂಡರೆ ನಿಮ್ಮದು 7 ರಿಂದ 8% ಬರುತ್ತದೆ. ಅಂದರೆ, ನಿಮ್ಮ tax efforts ಇನ್ನೂ ಜಾಸ್ತಿ ಆಗಬೇಕಾಗಿತ್ತು. ಆದರೆ, ಆಗಿಲ್ಲ. Capital expenditure ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. 2015-16ನೇ ಸಾಲಿನಲ್ಲಿ ನಮ್ಮದು 911 ಕೋಟಿ ರೂಪಾಯಿ revenue



ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

surplus ಆಗುತ್ತದೆಂದು ತಾವು ಹೇಳಿದ್ದೀರಿ. ಆದರೆ, ಅದು ಕೊನೆಗೆ ಸುಮಾರು 200 ಚಿಲ್ಲರೆ ಮಾತ್ರ ಆಯಿತು. 2016-17ನೇ ಸಾಲಿನಲ್ಲಿ 522 ಕೋಟಿ ರೂಪಾಯಿ ಎಂದು ಹೇಳಿದ್ದೀರಿ. ಆದರೆ, 197 ಕೋಟಿ ಮಾತ್ರ ಆಗಿದೆ. ಈಗಾಗಲೇ sector- wise ಹೇಳಿದ್ದೇನೆ. ಸನ್ಮಾನ್ಯ RDPR Minister ರವರು ಈ ಕಡೆ ಗಮನ ಕೊಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಬಹುತೇಕವಾಗಿ ಅವರ ಇಲಾಖೆಯ ಯೋಜನೆಗಳು ಇತ್ತೀಚಿನ ದಿನಗಳಲ್ಲಿ multi year ಯೋಜನೆಗಳಾಗಿವೆ. ಈ ಸಂದರ್ಭದಲ್ಲಿ ಗ್ರಾಮವಿಕಾಸ ಯೋಜನೆ ಬಗ್ಗೆ ಮಾತ್ರ ಉದಾಹರಣೆ ಕೊಡುವುದಕ್ಕೆ ಬಯಸುತ್ತೇನೆ. ಗ್ರಾಮ ವಿಕಾಸ ಯೋಜನೆ ಮಾಡುತ್ತೇವೆಂದು ಹಾಗೂ ಈ ಒಂದು ಯೋಜನೆಯನ್ನು ಮೂರು ವರ್ಷದಲ್ಲಿ ಮುಗಿಸುತ್ತೇವೆಂಬ ಮಾತನ್ನು ತಾವು 2013-14ನೇ ಸಾಲಿನಲ್ಲಿಯೇ ಹೇಳಿದ್ದೀರಿ. ಈಗ year to year ಮುಗಿಸುವಂಥ ಯೋಜನೆಗಳು ಇವತ್ತಿನದಿವಸ ಇಲ್ಲ. ಎಲ್ಲಾ ಯೋಜನೆಗಳು multi year ಯೋಜನೆಗಳಾಗಿವೆ. ಈಗ ನಗರೋತ್ಥಾನ ಯೋಜನೆ ಮಾಡಿದ್ದಾರೆ. 2018-19ನೇ ಸಾಲಿಗೆ ಸದರಿ ಯೋಜನೆ ಮಾಡುತ್ತೇವೆಂದು ಅವರು ಹೇಳಿದ್ದಾರೆ. ಈ ವರ್ಷದ ಬಜೆಟ್‌ನಲ್ಲಿ ಎಷ್ಟು ದುಡ್ಡು ಕೊಟ್ಟಿದ್ದಾರೆಂಬ ಬಗ್ಗೆ ಶಾಸಕರೆಲ್ಲರು ಮಾತನಾಡಿಕೊಳ್ಳುತ್ತೇವೆ. ಆದರೆ, ಈ ವರ್ಷ ದುಡ್ಡು ಬಿಡುಗಡೆ ಆಗುವುದಿಲ್ಲ. ಈ ವರ್ಷ ಕೇವಲ planning and tender ಕೆಲಸ ಮಾತ್ರ ಆಗುತ್ತದೆ. Next year ಹಣ ಖರ್ಚಾಗುತ್ತದೆ. ಅಂದರೆ, 2019-20ನೇ ಸಾಲಿಗೆ ಅದರ ದುಡ್ಡು ಬಿಡುಗಡೆ ಆಗುತ್ತದೆ. Mid-term Fiscal Plan ನಲ್ಲಿ ಏನು ಹೇಳುತ್ತಾರೆಂದರೆ, multi year implementation scheme ಏನಿದೆ ಇದು total expenditure rather than the expenditure during the year of approval only. ಆದ್ದರಿಂದ, ಇದರ ಬಗ್ಗೆ ಚಿಂತನೆ ಮಾಡಬೇಕು. Total expenditure ಅನ್ನು ನೀವು ensure ಮಾಡಬೇಕಾಗುತ್ತದೆ. ಆದ್ದರಿಂದ ಸನ್ಮಾನ್ಯ ಸಚಿವರು ಇದರ ಬಗ್ಗೆ ಗಮನ ಕೊಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಇವತ್ತಿನದಿವಸ ಗ್ರಾಮ ವಿಕಾಸ ಯೋಜನೆ ಡಿಲೇ ಆಗಿದೆ. Multi year schemeಗಳಿಗೆ ಸರಿಯಾದ ಸಮಯಕ್ಕೆ ಬೇಕಾಗಿರುವ ಹಣಕಾಸಿನ ವ್ಯವಸ್ಥೆ ಬಜೆಟ್‌ನಲ್ಲಿ backing ನಲ್ಲಿರಬೇಕು. ಇವತ್ತಿನದಿವಸ ಅದೇ ರೀತಿಯಾಗಿ ಹಲವಾರು ಯೋಜನೆಗಳಿವೆ. Multi village Scheme ನಲ್ಲಿ ಕುಡಿಯುವ ನೀರಿನ ಯೋಜನೆ ಕೂಡ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಎರಡು-ಮೂರು ವರ್ಷ ತೆಗೆದುಕೊಳ್ಳುತ್ತಿದ್ದೀರಿ. ಯಾವುದಾದರೊಂದು ವರ್ಷದಲ್ಲಿ ನಿಮಗೆ ಬಜೆಟ್ ಪ್ರಾವಿಜನ್ ಕಡಿಮೆ ಆದರೆ, ಮತ್ತೆ ಆ ಯೋಜನೆಗಳು ನಾಲ್ಕೈದು ವರ್ಷಕ್ಕೆ ಹೋಗುತ್ತವೆ. ಆದ್ದರಿಂದ, multi year ಯೋಜನೆಗಳನ್ನು ಮಾಡತಕ್ಕಂಥ ಸರ್ಕಾರದ ಒಂದು ಹೊಸ ರೀತಿ ಏನಿದೆ ಇದರ ಬಗ್ಗೆ ತಾವು ಸಂಪೂರ್ಣವಾದಂಥ expenditureಗೆ provision ಮಾಡಿಕೊಳ್ಳಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. Supplementary budget ಅನ್ನು ಇವತ್ತಿನದಿವಸ ಮಾಡುತ್ತಿದ್ದೇವೆ. ಮೊದಲು ಒಂದು ವರ್ಷದಲ್ಲಿ ಒಂದು ಅಥವಾ ಬಹಳ ಎಂದರೆ ಎರಡು supplementary budget ಮಾಡಲಾಗುತ್ತಿತ್ತು. ಅಂದರೆ, ಬಹಳ emergency ಅಥವಾ flood ಬಂದಂಥ ಸಂದರ್ಭದಲ್ಲಿ ಮಾಡಲಾಗುತ್ತಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಏನಾಗಿದೆ ಎಂದರೆ, ಸುಮಾರು 4 supplementary budgetಗಳನ್ನು compulsory ಯಾಗಿ ಮಾಡಲಾಗುತ್ತಿದೆ. ಅಂದರೆ, every quarterly ಒಂದು supplementary budget ಅನ್ನು present ಮಾಡುತ್ತೇವೆ. ಅಂದರೆ, ಈ ಬಜೆಟ್‌ಗೆ ಏನು sanctity ಉಳಿಯುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಮೊನ್ನೆದಿವಸ ಮಾನ್ಯ ಮುಖ್ಯ ಮಂತ್ರಿಗಳು ಓದಿದ ಬಜೆಟ್‌ಗೆ ಏನು ಅರ್ಹತೆ ಉಳಿಯುತ್ತದೆ? Supplementary budgetನ ಅವಶ್ಯಕತೆ ಇಲ್ಲದೆ ಇದ್ದರೂ ಮಾಡಿದ್ದೀರಿ, ಅದು ಉಪಯೋಗ ಇಲ್ಲ ಹಾಗೂ ಆ ಹಣವನ್ನು ಖರ್ಚು ಮಾಡುವುದಕ್ಕೆ ನಿಮಗೆ ಆಗಿಲ್ಲವೆಂದು ನಿನ್ನೆದಿವಸ ಸಿ.ಎ.ಜಿ ವರದಿಯಲ್ಲಿ ಅದರ ಬಗ್ಗೆ remark ಬಂದಿದೆ. ಈ ವಿಷಯವನ್ನು ನಾನು ಮಾತನಾಡುವುದಕ್ಕೋಸ್ಕರ ಗುರುತು ಮಾಡಿಕೊಂಡಿದ್ದೆ. ಅದೇ ವಿಷಯವನ್ನು ಸಿ.ಎ.ಜಿ.ರವರು ಹೇಳಿರುವಂಥದ್ದು ನಮಗೆ ಬಹಳ ಸಂತೋಷ ತಂದಿದೆ. Financial management and budgetary control - While supplementary provisions of Rs.936.68 crore in 36 cases were unnecessary, re-appropriation of funds in 73 cases was made injudiciously. ಮಾನ್ಯ ಜಯಚಂದ್ರರವರೆ, ತಾವು ನಮ್ಮ ಮುಂದೆ Supplementary budget ಇಟ್ಟು ಪಾಸ್ ಮಾಡಿಕೊಂಡಿದ್ದೀರಿ. ಇದಕ್ಕೆ ಸಂಬಂಧಪಟ್ಟಂತೆ

ಸಿ.ಎ.ಜಿ. ಕೊಟ್ಟಿರುವ ವರದಿಯನ್ನು ಈ ಸಂದರ್ಭದಲ್ಲಿ ಓದುತ್ತಿದ್ದೇನೆ. ಇದನ್ನು ಬಿಟ್ಟು ಬೇರೆ ಏನು ಓದುತ್ತಿಲ್ಲ. ಆ ವರದಿಯಲ್ಲಿ ಏನಿದೆ ಎಂದರೆ, While supplementary provisions of Rs.936.68 crore in 36 cases were unnecessary, re-appropriation of funds in 73 cases was made injudiciously resulting in un-utilized provisions of funds for excess provisions of funds in 15 grants. Rs.7343 crores of budget provision including supplementary budget was surrendered in the last two working days of the financial year ಎಂದು ಹೇಳಿದ್ದಾರೆ. ಅಂದರೆ, ಈ ಬಜೆಟ್‌ನಲ್ಲಿರುವ figures ಗೆ ಏನು value ಉಳಿಯುತ್ತದೆ? Rs.7343 crore is not a small amount. ನಿಮಗೆ ಅವಶ್ಯಕತೆ ಇದೆ ಎಂದು ಈ ಸದನದ ಮೂಲಕ ನೀವು ಅನುಮತಿ ತೆಗೆದುಕೊಂಡು ಅದನ್ನು ಖರ್ಚು ಮಾಡಲಿಲ್ಲ ಅಥವಾ ಖರ್ಚು ಮಾಡುವುದಕ್ಕೆ ಅಲ್ಲಿ ಅವಕಾಶವೇ ಇರಲಿಲ್ಲವೆಂದರೆ ಇದು ಒಳ್ಳೆಯ finance management ಆಗುತ್ತದೆಯೇ? Prudent finance management ಆಗುತ್ತದೆಯೇ? Rs.7343 crore is not a small amount. It is a very serious matter.

(ಮುಂದು)

27-3-2017/12-50/I5/YBG-SSD

ಶ್ರೀ ಬಸವರಾಜ ಬೊಮ್ಮಾಯಿ(ಮುಂದು)

Surrender ಮಾಡುತ್ತೀರಿ, ಹೇಗೆ ಸ್ವಾಮಿ, ಒಂದು ಸರ್ಕಾರ ಏನಾದರೂ ಮಾಡಬೇಕಾದರೆ ಇಷ್ಟು ದೊಡ್ಡ officers ಇದ್ದಾರೆ, ಲೆಕ್ಕಪತ್ರಕರು ಇದ್ದಾರೆ, ಅವರು ಏನು ಮಾಡುತ್ತಾರೆ. ಅದಕ್ಕೆ ಹೇಳಿದೆ, ಈ ಬಜೆಟ್‌ನ ವಿಶ್ವಾಸಾರ್ಹತೆ ಕಡಿಮೆ ಆಗಿದೆ. ಕಡಿಮೆ ಅಲ್ಲ, ಇಲ್ಲದಂತಾಗಿದೆ. ವಿಶ್ವಾಸಾರ್ಹತೆಯ ಕೊರತೆಯ ಬಗ್ಗೆ ನಾನು ಮೂರನೆಯ ಉದಾಹರಣೆ ಕೊಡುತ್ತಿರುವುದು. ಆದ್ದರಿಂದ ಈ ಬಜೆಟ್ ಮಾಡುವಂಥ ರೀತಿ ನೀತಿಯೇ ಪ್ರಶ್ನಾರ್ಹವಾಗಿದೆ. ಈ ಬಜೆಟ್ ಯಾರಿಗೋಸ್ಕರ್, ಅದಕ್ಕಾಗಿ ಯಾರು



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕೂಡ ನಿರೀಕ್ಷೆ ಮಾಡುತ್ತಿಲ್ಲ. ಮೊದಲು ಒಂದು ಕಾಲದಲ್ಲಿ ಈ ವ್ಯಾಪರಸ್ಥರು, ಟ್ರೇಡರ್ಸ್‌ಗಳು, ಯಾವ ಟ್ಯಾಕ್ಸ್ ಎಲ್ಲಿ ಬೀಳುತ್ತದೆಂದು ಅನ್ನುವವರು, ಆಗ ಸ್ವಲ್ಪ suspense ಇತ್ತು. ಈಗ VAT ಬಂದ ಮೇಲೆ ಅದು ಹೋಗಿ ಬಿಟ್ಟಿದೆ. ಇನ್ನು GST ಬಂದ ಮೇಲೆ ಅದು ಹೋಗಿ ಬಿಡುತ್ತದೆ. ಆದ್ದರಿಂದ ಈ ವಿಶ್ವಾಸಾರ್ಹತೆ ತುಂಬ ಬೇಕಾದರೆ ನಾವು ಇಲ್ಲಿ ಏನು ಮಾತನಾಡಿದ್ದೇವೆ, ಯಾವ ಕಾರ್ಯಕ್ರಮವನ್ನು ಕೊಟ್ಟಿದ್ದೇವೆ, ಅದು ಅನುಷ್ಠಾನಗೊಳಿಸುವಂಥ ಕೆಲಸ ಆಗಬೇಕು, ಅದು ಇಲ್ಲಿ ಆಗುತ್ತಿಲ್ಲ. Capital expenditure ಬಹಳ ಮುಖ್ಯ. Asset create ಆಗುತ್ತದೆ. Revenue expenditure ಕಡಿಮೆ ಮಾಡಬೇಕು. Capital expenditure ಹೆಚ್ಚು ಮಾಡಬೇಕು. ಇವತ್ತು ಏನಾಗಿದೆ ಎಂದರೆ, 2012-13 ರಲ್ಲಿ ಒಟ್ಟು GSTP ಯಲ್ಲಿ 2013-14 ಕ್ಕೆ 2.9 ಆಯಿತು, 2014-15 ಕ್ಕೆ 2.9 ಆಯಿತು, 2016-17 ಕ್ಕೆ 2.3 ಆಯಿತು, capital expenditure ಕಡಿಮೆ ಆಗಿದೆ. Revenue expenditure ಹೆಚ್ಚು ಆಗುತ್ತದೆ. ಹೀಗಾಗಿ ಇವತ್ತು ಆರ್ಥಿಕ ಶಿಸ್ತು ಏನಿದೆ, ಆರ್ಥಿಕ direction ಏನಿದೆ, ಅದು ಸರಿಯಾದ ದಿಕ್ಕಿನಲ್ಲಿ ಹೋಗುತ್ತಿಲ್ಲ. ಸಾಲದ ಬಗ್ಗೆ ಈಗಾಗಲೇ ಬಹಳಷ್ಟು ಚರ್ಚೆ ಆಗಿದೆ. ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಮುಖ್ಯಮಂತ್ರಿಗಳು ಈ ಕಡೆಗೆ ಕುಳಿತಾಗ ಹೇಳಿದ್ದರು. ಸಾಲ ಸಿಗುತ್ತದೆಂದು ಮಾಡಬಾರದು ಎಂದು ಹೇಳಿದ್ದರು. ಅವರು ಆ ಕಡೆಗೆ ಹೋಗಿ ಏನು ಮಾಡುತ್ತಿದ್ದಾರೆಂದರೆ, ಸಾಲ ಸಿಗುತ್ತದೆಂದು ಹೇಳಿ ಅವರು ಇವತ್ತು ತೆಗೆದುಕೊಳ್ಳುವಂಥ ಪ್ರಯತ್ನ ಮಾಡುತ್ತಿದ್ದಾರೆ. ನನಗೆ ಗೊತ್ತಿದೆ, GSDP ಹೆಚ್ಚಾದಾಗ ನಿಮಗೆ ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶ ಬಹಳ ಇದೆ. ತಾವು 2013-14 ರಲ್ಲಿ ಏನು ಹೇಳಿದಿರಿ, ಸಾಲವನ್ನು ಕಡಿಮೆ ಮಾಡುತ್ತೇವೆ, ಸಾಲ ಬಹಳ ಆಗಿ ಬಿಟ್ಟಿದೆ, ಸಾಲವನ್ನು ಕಡಿಮೆ ಮಾಡುತ್ತೇವೆನ್ನುವಂಥ ಮಾತನ್ನು ತಾವು ಹೇಳಿದ್ದೀರಿ. ಇವತ್ತು ಅದರ ವಿರುದ್ಧ ಈ ಕಡೆ ಏನು ನಿಂತು ತಾವು ಮಾತನಾಡಿದ್ದೀರಿ, ಅದರ ತದ್‌ವಿರುದ್ಧವೇ ಇವತ್ತು ಮಾಡುತ್ತಿದ್ದೀರಿ. ಒಂದು ಲಕ್ಷ ಇಪ್ಪತ್ತೊಂದು (1.21 ಲಕ್ಷ ಕೋಟಿ ರೂ.ಗಳು) ಸಾವಿರ ಕೋಟಿ ರೂ.ಗಳನ್ನು ಒಟ್ಟು 5 ವರ್ಷದಲ್ಲಿ ಸಾಲ ತೆಗೆದುಕೊಳ್ಳುತ್ತಿದ್ದೀರಿ. ಈಗಾಗಲೇ 93 ಸಾವಿರ ಕೋಟಿ ರೂ.ಗಳನ್ನು ತೆಗೆದುಕೊಂಡಿದ್ದೀರಿ, ಈಗ 37 ಸಾವಿರ ಕೋಟಿ ರೂ.ಗಳನ್ನು ತೆಗೆದುಕೊಳ್ಳುತ್ತಿದ್ದೀರಿ. 1.21 ಲಕ್ಷ ಕೋಟಿ ರೂ.ಗಳಿಗಿಂತ ಹೆಚ್ಚು ಸಾಲವನ್ನು ತಾವು 5 ವರ್ಷದಲ್ಲಿ ಮಾಡಿದ್ದೀರಿ. ಇದು ಸರಿಯೇ? ಕಳೆದ ವರ್ಷ 25% of GSDP

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನೀವು ಮುಟ್ಟಿ ಬಿಟ್ಟಿದ್ದೀರಿ. ಸಾಲದ ಶೂಲಕ್ಕೆ ರಾಜ್ಯವನ್ನು ತಳ್ಳುತ್ತಿದ್ದೀರಿ. ಸಾಲದ ಹೊರೆ ಸಾಮಾನ್ಯ ಜನರ ಮೇಲೆ ಅತೀ ಹೆಚ್ಚು ಹೊರೆ ಬೀಳುತ್ತಿದೆ. ಮುಂದಿನ ದಿನಗಳಲ್ಲಿ ಮುಂದಿನ ಸರ್ಕಾರಗಳು ಯಾವುದೇ ರೀತಿಯ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯನೇ ಇಲ್ಲ. ಆ ರೀತಿಯ ವ್ಯವಸ್ಥೆಯನ್ನು ನೀವು ಇವತ್ತು ತಂದಿ ಇಟ್ಟಿದ್ದೀರಿ. ಅದು ಆಗಿರುವುದು 5 ವರ್ಷದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಸಾಲ ತೆಗೆದುಕೊಂಡಿರುವಂಥ ದಾಖಲೆ ಬಹುತೇಕ ಇಡೀ ರಾಷ್ಟ್ರದಲ್ಲಿ ಯಾವ ರಾಜ್ಯವೂ ಇಲ್ಲ.

ಶ್ರೀ ಸಿ.ಟಿ.ರವಿ: ಸಾಲವನ್ನು ತೆಗೆದುಕೊಳ್ಳುವುದು ಮಾತ್ರ ಅಲ್ಲ, ಸಾಲ ತೀರಿಸುವುದಕ್ಕೆ ಒದ್ದಾಡಬೇಕಾದಂಥ ಸ್ಥಿತಿ ನಿರ್ಮಾಣವಾಗಿದೆ. ತೆಗೆದುಕೊಂಡಿರುವ ಸಾಲ ತೀರಿಸಬೇಕಲ್ಲವೆ? ಅವರು ಹೋಗುವುದಕ್ಕೆ ಮುಂಚೆ ತೀರಿಸಿ ಏನು ಹೋಗುವುದಿಲ್ಲವಲ್ಲಾ, ಬಿಟ್ಟೆ ಹೋಗುವುದು.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಉಪಾಧ್ಯಕ್ಷರೆ, ಸಿ.ಟಿ.ರವರು ಒಂದು ಒಳ್ಳೆಯ ಪಾಯಿಂಟ್ ಅನ್ನು ಎತ್ತಿದರು, ಸಾಲ ತೀರಿಸುವುದಕ್ಕೆ ನಾವು ಇವತ್ತು debt servicing, ಮೊದಲು ಎಲ್ಲಾ ಒಟ್ಟು ಒಂದು ರೂಪಾಯಿಯಲ್ಲಿ debt servicing 9 ಪ್ಯಸೆ, 10 ಪೈಸೆ ಇತ್ತು. ಕಳೆದ ವರ್ಷ 11 ಪೈಸೆಗೆ ಹೆಚ್ಚಾಯಿತು. ಈ ವರ್ಷ ಒಂದು ರೂಪಾಯಿಯ ಆದಾಯದಲ್ಲಿ 12 ಪೈಸೆಯನ್ನು ನಾವು debt servicing ಗೆ ತೆಗೆದುಕೊಳ್ಳುತ್ತೇವೆ. ಕಳೆದ ವರ್ಷಕ್ಕಿಂತ ಅತೀ ಹೆಚ್ಚು ಸಾಲವನ್ನು ತೀರಿಸುವುದರಲ್ಲಿಯೇ, ಮುಂದೆ ಒಂದು ಕಾಲ ಬರುತ್ತದೆ, ಸಾಲವನ್ನು ತೀರಿಸುವುದಕ್ಕಾಗಿಯೇ ಸಾಲ ಮಾಡುವಂಥ ಪರಿಸ್ಥಿತಿ ಬರುತ್ತದೆ. ಅದಕ್ಕೆ debt trap ಎನ್ನುವುದು. ಅವರು ಹೇಳಿದ್ದಾರೆ, ಈ ವರ್ಷ ನಾವು GSDP ಯ 8.9% ಅನ್ನು ನಾವು ಕಡಿಮೆ ಮಾಡಿದ್ದೇವೆಂದು ಅವರು ಬಜೆಟ್‌ನಲ್ಲಿ ಹೇಳಿದ್ದಾರೆ, ಅವರು ನಾಳೆ ಉತ್ತರವನ್ನು ಕೊಡುವಾಗ ಅದನ್ನು ಹೇಳುತ್ತಾರೆ. ಒಳಗಡೆ ಇರುವ ಪ್ರಶ್ನೆ ಏನೆಂದರೆ, ಈ GSDP ಅನ್ನು ನಿರ್ಧಾರ ಮಾಡುವುದು ಇದೆಯಲ್ಲಾ, ಎಲ್ಲವೂ ಕೂಡ estimates. GSDP ಹೆಚ್ಚಿಗೆ ನಿರ್ಧಾರ ಮಾಡಿದರೆ, ಮಾನ್ಯ ವೆಂಕಟೇಶ್‌ರವರೆ, ನಾನು ಇನ್ನು 15 ನಿಮಿಷದಲ್ಲಿ ಮುಗಿಸುತ್ತೇನೆ.

ಉಪಾಧ್ಯಕ್ಷರು: ಆಯಿತು, ಇನ್ನು 5 ನಿಮಿಷದಲ್ಲಿ ಮುಗಿಸಿ.

ಶ್ರೀ ಬಸವರಾಜ ಬೊಮ್ಮಾಯಿ: ಇನ್ನು ಬಹಳ ವಿಷಯ ಇದೆ, ಆದರೂ ನಾನು ಬೇಗ ಮುಗಿಸುತ್ತೇನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಏನಾಗಿದೆ ಎಂದರೆ, ನೀವು ಎಲ್ಲಾ ಹೇಳುತ್ತಿದ್ದೀರಿ, ಅದು ದಾಖಲೆ ಹೋಗುತ್ತಿದೆ, ಆದರೆ ಮಸ್ತಕಕ್ಕೆ ಹೋಗುತ್ತಿಲ್ಲವಲ್ಲಾ? ಮಸ್ತಕಕ್ಕೆ ಹೋಗುವುದಿಲ್ಲಾ, ಎದೆಗೂ ಹೋಗುವುದಿಲ್ಲ, ಎರಡು ಕಡೆಗೆ ಹೋಗಲಾರದ್ದಕ್ಕೆ, ಅವರು ಮುಗಿಸಿ ಎಂದು ಹೇಳುತ್ತಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ: ಯಾರು ಹೇಳಿದರೂ ಹೋಗುವುದಿಲ್ಲ. ಅದಕ್ಕೆ ಏನು ತಲೆ ಕೆಡಿಸಿಕೊಳ್ಳಬೇಡಿ. GSDP ನಿರ್ಧಾರ ಮಾಡುತ್ತಾರಲ್ಲಾ, ಅದನ್ನು ಹೆಚ್ಚು ನಿರ್ಧಾರ ಮಾಡಿರುತ್ತಾರೆ. 25% ಕಡಿಮೆ ಇದೆ, ಆರ್ಥಿಕ ಶಿಸ್ತನ್ನು ಕಾಪಾಡಿದ್ದೇವೆಂದು ಹೇಳುತ್ತಾರೆ, ಆದರೆ ಒಳಗಡೆ ಹೂರಣವೇ ಬೇರೆ. ಆದ್ದರಿಂದ ಈ ಅಂಕಿ ಅಂಶಗಳ ಆಟದಲ್ಲಿ ರಾಜ್ಯದ ಜನರನ್ನು ಬಡವರನ್ನಾಗಿ ಮಾಡಬೇಡಿ. ರಾಜ್ಯದ ಜನರನ್ನು ಸಾಲದ ಶೂಲಕ್ಕೆ ನೀವು ಸಿಗಸಬೇಡಿ ಎನ್ನುವಂಥ ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತಿದ್ದೇನೆ. We are all trustees of public money. ಅದನ್ನು ನಾವು ಅರ್ಥ ಮಾಡಿಕೊಳ್ಳಬೇಕು. 6 ಕೋಟಿ ರಾಜ್ಯದ ಜನರ ಮೇಲೆ ಪ್ರತಿಯೊಬ್ಬರಿಗೆ 40 ಸಾವಿರ ರೂ.ಗಳ ಸಾಲವನ್ನು ನಾವು ಹಾಕಿರುತ್ತೇವೆ.

ಉಪಾಧ್ಯಕ್ಷರು: ಆಯಿತು, conclude ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ: ಆಯಿತು ನಾನು conclude ಮಾಡುತ್ತೇನೆ, ನಿಮಗೂ ಕೂಡ ಬೇಗ ಮುಗಿಸುವುದಕ್ಕೆ ಹೇಳಿ ಎನ್ನುವ ಒತ್ತಡ ನಮ್ಮ ಮಿತ್ರರಿಂದ ಬರುತ್ತಿದೆ. ಇನ್ನೊಂದು ವಿಚಾರ, ಈ ವಿಚಾರಗಳಲ್ಲಿ ಚರ್ಚೆ ಆಗಿಲ್ಲವೆನ್ನುವುದಕ್ಕೆ ನಾನು ಮಾಡುತ್ತಿರುವುದು. ನಮ್ಮ revenue receipts ಮೇಲೆ ನಮ್ಮ committed expenditure ಎಷ್ಟು ಇದೆ ಎನ್ನುಂಥದ್ದು ಬಹಳ ಮುಖ್ಯ. Committed expenditureನಲ್ಲಿ salary, interest, pension, social security, subsidy ಇವೆಲ್ಲಾ ಬರುತ್ತವೆ. 78% committed expenditure ನಮ್ಮ revenue ಆದಾಯದಲ್ಲಿದೆ. ಅಂದರೆ ನಮಗೆ 22% ಮಾತ್ರ revenue ಖಾತೆಯಲ್ಲಿ ಖರ್ಚು ಮಾಡುವುದಕ್ಕೆ ಉಳಿದಿರುವುದು. ಈ ಸಲ ಏನು ಮಾಡಿದ್ದಾರೆಂದರೆ, plan and non plan ದಲ್ಲಿ revenue, capital expenditure ಅವೆಲ್ಲವನ್ನು ತೆಗೆದು ಬಿಟ್ಟಿದ್ದಾರೆ. ಹೀಗಾಗಿ ಯಾವುದಕ್ಕೆ ಖರ್ಚಾಗುತ್ತದೆ ಎನ್ನುವುದು ಗೊತ್ತಾಗುತ್ತಿಲ್ಲ. ಆದ್ದರಿಂದ ನಾನು ಮುಖ್ಯಮಂತ್ರಿಗಳಿಗೆ, ಸರ್ಕಾರಕ್ಕೆ ಆಗ್ರಹ ಮಾಡುತ್ತೇನೆ.

ಯಾವ್ಯಾವ ಬಾಬತ್ತಿನಲ್ಲಿ ಯಾವ್ಯಾವ development and non development ಗೆ ಏನು ಖರ್ಚು ಮಾಡುತ್ತೀರಿ ಅದಕ್ಕೊಂದು ಹೊಸ system ಅನ್ನು ಮಾಡಿ ಪಾರದರ್ಶಕತೆಯನ್ನು ತೆಗೆದುಕೊಂಡು ಬನ್ನಿ.

**( ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಬಂದು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು )**

ಪ್ರತಿ ಮೂರು ತಿಂಗಳಿಗೆ ಆ ವರದಿಯನ್ನು ಬಿಡುಗಡೆ ಮಾಡುವಂಥ ಕೆಲಸವನ್ನು ತಾವು ಮಾಡಬೇಕು. ಮೊದಲು plan and non plan ಇತ್ತು, ಅದು ತಮಗೆ ಗೊತ್ತಿದೆ. ಈಗ plan and non plan ತೆಗೆದು ಬಿಟ್ಟಿದ್ದಾರೆ.

ಅಧ್ಯಕ್ಷರು: ಒಂದು ನಿಮಿಷ, ಇವತ್ತು ಮೊದಲು ಮಾತನಾಡುವುದಕ್ಕೆ ಪ್ರಾರಂಭ ಮಾಡಿರುವವರು ನೀವು, ನೀವೊಬ್ಬರೇ ಇಷ್ಟೊತ್ತು ಟೈಮ್ ತೆಗೆದುಕೊಂಡರೆ ಹೇಗೆ? ನೀವು short ಮಾಡಿ ಮಾತನಾಡಬೇಕು.

ಶ್ರೀ ಬಸವರಾಜ ಬೊಮ್ಮಾಯಿ: ಸರ್, ನೀವು ಬಂದ ಮೇಲೆ ಗೊತ್ತಾಯಿತು. ನಾನು ಮುಗಿಸಬೇಕೆಂದು ನನಗೆ ಗೊತ್ತಾಗಿದೆ.

ಅಧ್ಯಕ್ಷರು: ಮುಗಿಸಬೇಕು, ನಿಮ್ಮನ್ನು ಮುಗಿಸುವುದಕ್ಕೆ ಅಲ್ಲ. ನಿಮ್ಮ speech ಅನ್ನು ಆದಷ್ಟು ಕಡಿಮೆ ಮಾಡಿ ಎಂದು.

ಶ್ರೀ ಬಸವರಾಜ ಬೊಮ್ಮಾಯಿ: Sir, give me 10 minute, I will finish.

ಅಧ್ಯಕ್ಷರು: ಆದಷ್ಟು less than ten minutesನಲ್ಲಿ ಮುಗಿಸಿ.

ಶ್ರೀ ಬಸವರಾಜ ಬೊಮ್ಮಾಯಿ: ಸರ್, ನಾನು ಮುಗಿಸುವುದಕ್ಕೆ ಈಗ ಬಂದಿದ್ದೇನೆ.

ಶ್ರೀ ಸಿ.ಟಿ.ರವಿ: ಬಸವರಾಜ ಬೊಮ್ಮಾಯಿಯವರನ್ನು ಮುಗಿಸುವುದು ಅಷ್ಟು ಸುಲಭದ ಮಾತಲ್ಲ.

ಅಧ್ಯಕ್ಷರು: ನಾನು ಮುಗಿಸುವುದಕ್ಕೆ ಹೋಗುವುದಿಲ್ಲ.

ಶ್ರೀ ಸಿ.ಟಿ.ರವಿ: ಅವರು ಯಾರ್ಯಾರನ್ನು ಮುಗಿಸಬೇಕೆಂದು ಅಂದುಕೊಂಡಿದ್ದರು ಅವರೆಲ್ಲರನ್ನೂ ಮುಗಿಸಿದ್ದಾರೆ. ಆದರೆ ಅವರನ್ನು ಯಾರು ಮುಗಿಸುವುದಕ್ಕೆ ಆಗಿಲ್ಲ.

ಅಧ್ಯಕ್ಷರು: ಮಾನ್ಯ ರವಿಯವರೆ, I always protect him.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ನೀವು ಒಂದೆ ಜಿಲ್ಲೆಯವರು, ನೀವು ಹೆಂಗೆಂಗೆ ತಾಳ ಮೇಳ ಎನ್ನುವುದು ನಮಗೆ ಗೊತ್ತಿದೆ.

ಅಧ್ಯಕ್ಷರು: ಬೆಳಗಾವಿಯಷ್ಟು ನಮ್ಮಲ್ಲಿ ಇಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ಬೆಳಗಾವಿಯಷ್ಟು ತಾಳ ಮೇಳ ಈ ರಾಜ್ಯದಲ್ಲಿ ಎಲ್ಲಿಯೂ ಇಲ್ಲ. ಯಾವಾಗಲೂ ನಮ್ಮ ಹಿರಿಯರ ಮಾರ್ಗದರ್ಶನದಲ್ಲಿ ನಾವು ಕೆಲಸ ಮಾಡುತ್ತಿರುತ್ತೇವೆ. ಈ committed expenditure ಅನ್ನು ಕಡಿಮೆ ಮಾಡಬೇಕು ಎನ್ನುವಂಥ ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತಿದ್ದೆ.

(ಮುಂದು)

27.3.2017/1.00(16)/UD.SSD

ಶ್ರೀ ಬಸವರಾಜ ಬೊಮ್ಮಾಯಿ (ಮುಂದು. . .):

ಇನ್ನೊಂದು ವಿಚಾರ, ಇವತ್ತು ನಾವು ಹೈದರಾಬಾದ್-ಕರ್ನಾಟಕದ ಬಗ್ಗೆ amendment ಅನ್ನು Parliament ನಲ್ಲಿ ಮಾಡಿದ್ದೇವೆ. ಆಗಲೇ ನಾನು ಹೇಳಿದೆನಲ್ಲಾ, SCP/TSP ಹಣ ಖರ್ಚು ಮಾಡಲು ಏನು ಕಾನೂನು ಮಾಡಿದ್ದೇವೆ ಅದು implement ಆಗಲಿಲ್ಲ. ಅದೇ ರೀತಿ ಹೈದರಾಬಾದ್-ಕರ್ನಾಟಕಕ್ಕೆ ನಾವು Constitutional amendment ಮಾಡಿದ್ದೇವೆ. Amendment ಚೆನ್ನಾಗಿದೆ. ಆದರೆ implementation ಯಾವ ರೀತಿ ಇದೆ? ತಾವು 2014-15 ರಲ್ಲಿ 600 ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ. ಅದರಲ್ಲಿ 123 ಕೋಟಿ ರೂ.ಗಳು ಮಾತ್ರ ಖರ್ಚಾಗಿದೆ. 700 works pending ಇತ್ತು. 2015-16 ರಲ್ಲಿ 1,000 ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ, ಅದರಲ್ಲಿ 388 ಕೋಟಿ ರೂ.ಗಳು ಮಾತ್ರ ಖರ್ಚಾಗಿದೆ. 1,644 ಕೆಲಸಗಳು pending ಇವೆ. 2016-17 ರಲ್ಲಿ ಮತ್ತೆ 1,000 ಕೋಟಿ ರೂ.ಗಳನ್ನು ಕೊಟ್ಟಿದ್ದೀರಿ, ಅದರಲ್ಲಿ 621 ಕೋಟಿ ರೂ.ಗಳು expenditure ಆಗಿದೆ. ಅಂದರೆ ನೀವು ಸುಮಾರು 3,000 ಕೋಟಿ ರೂ.ಗಳನ್ನು ಕೊಟ್ಟರೆ ಅದರಲ್ಲಿ ಎಲ್ಲವೂ ಸೇರಿ ಸುಮಾರು 1,700, 1,800 ಕೋಟಿ ರೂ.ಗಳು ಮಾತ್ರ ಖರ್ಚಾಗಿದೆ. ಈ ವರ್ಷ ಮತ್ತೆ 1,000 ಕೋಟಿ ರೂ.ಗಳು 4,000 ಕೋಟಿ ರೂ.ಗಳು ಆಯಿತು. ಸುಮಾರು ಇನ್ನೂ 700, 800 works pending ಇವೆ. ಇನ್ನೊಂದು ಮಾತು ಹೈದರಾಬಾದ್-ಕರ್ನಾಟಕ



ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಪ್ರಾದೇಶಿಕ ಅಸಮಾನತೆಯ ಬಗ್ಗೆ ನಾವೆಲ್ಲಾ ಮಾತನಾಡಿ, ಹೋರಾಟ ಮಾಡಿ Parliament ನಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಜಗದೀಶ್ ಶೆಟ್ಟರ್‌ರವರು ಇಲ್ಲಿ ಸರ್ವಾನುಮತ ತೆಗೆದುಕೊಂಡು ಅದನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟ ಮೇಲೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬಹಳ ಆಸಕ್ತಿ ತೆಗೆದುಕೊಂಡು ಮಾಡಿದರು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ ಮಾನ್ಯ ಮುಖ್ಯಮಂತ್ರಿಯವರಿಗೆ ನೀವು ಕೊಟ್ಟಂತಹ ಹಣವನ್ನು ಖರ್ಚು ಮಾಡಿಲ್ಲ. ಹಣ ಖರ್ಚು ಮಾಡಬೇಕು. Priority ಕೊಡಬೇಕು ಎಂದು ಪತ್ರ ಬರೆದರು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಮಾತಿಗೂ ಬೆಲೆ ಇಲ್ಲ. ಆ ಭಾಗದಿಂದ ಬಂದಂತಹ ಹಿರಿಯ ನಾಯಕರು, ಸಂಸತ್ ಸದಸ್ಯರು, ಪಾರ್ಲಿಮೆಂಟ್ ನಾಯಕರು, ಅವರು open ಪತ್ರ ಬರೆದಿದ್ದಾರೆ. ಅವರ ಮಾತಿಗೂ ಕೂಡ ಇವತ್ತು ಬೆಲೆ ಇಲ್ಲ. ಎರಡನೆಯದಾಗಿ, ಪ್ರಾದೇಶಿಕ ಅಸಮಾನತೆಯೊಳಗೆ ಮತ್ತೆ ಅಸಮಾನತೆ ಬೇರೆ ಇದೆ. ಉದಾಹರಣೆಗೆ ಎರಡೇ ಎರಡು ಕ್ಷೇತ್ರಕ್ಕೆ ಅತಿ ಹೆಚ್ಚು ಹಣ ಖರ್ಚಾಗಿದೆ. ಬಳ್ಳಾರಿ ಎಲ್ಲಾ ಸೇರಿ ಸುಮಾರು 47- 48 ಕ್ಷೇತ್ರಗಳು ಬರುತ್ತವೆ. ಅದರಲ್ಲಿ ಎರಡು ಕ್ಷೇತ್ರಗಳಿಗೆ ಮಾತ್ರ ಅತಿ ಹೆಚ್ಚು ಹಣ ಖರ್ಚಾಗಿದೆ. ನೀವು ಯಾವ್ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಹಣ sanction ಮಾಡಿದ್ದೀರಿ, ಎಷ್ಟೆಷ್ಟು ಹಣ ಖರ್ಚು ಮಾಡಿದ್ದೀರಿ? ಕ್ಷೇತ್ರವಾರು ಎಷ್ಟೆಷ್ಟು ಹಣ ಖರ್ಚು ಮಾಡಿದ್ದೀರಿ ಎಂದು ವರದಿಯನ್ನು ಇಲ್ಲಿಡಿ. ಆಗ ಪ್ರಾದೇಶಿಕ ಅಸಮಾನತೆಯೊಳಗೆ ಅಸಮಾನತೆ ಹೇಗಿದೆ ಎನ್ನುವುದು ಗೊತ್ತಾಗುತ್ತದೆ. ಅತಿ ಹೆಚ್ಚು ಹಣ ಎರಡೇ ಕ್ಷೇತ್ರಕ್ಕೆ ಖರ್ಚಾಗಿರುವುದು. ನನ್ನ ಪ್ರಶ್ನೆ ಇಷ್ಟೆ. ಆ ಎರಡು ಕ್ಷೇತ್ರದ ಶಾಸಕರ ಕ್ಷಮತೆ ಬಹಳ ಚೆನ್ನಾಗಿದೆ ಮಿಕ್ಕಿದವರದ್ದು ಇಲ್ಲವೋ ಅಥವಾ ಅವರಿಗೆ special privilege ಇದೆ ಮಿಕ್ಕಿದವರಿಗೆ ಇಲ್ಲವೋ?

ಅಧ್ಯಕ್ಷರು: ಈ ಅಸಮಾನತೆಯನ್ನು ಪ್ರತಿಯೊಂದು demand ನಲ್ಲಿಯೂ ನೀವು ಹೇಳಬಹುದಲ್ಲಾ. ಸ್ವಲ್ಪ short ಮಾಡಿ ಹೇಳಿ.

ಶ್ರೀ ಬಸವರಾಜ ಬೊಮ್ಮಾಯಿ: ನಾನು ಇಷ್ಟೇ ಹೇಳುವುದು. ಯಾವ ಉದ್ದೇಶಕ್ಕಾಗಿ ಅದನ್ನು ಮಾಡಿದ್ದಾರೆ ಅದು ಸಫಲತೆ ಆಗಲಿ ಎನ್ನುವ ಕಳಕಳಿಯಿಂದ ಮಾತನಾಡುತ್ತಿದ್ದೇನೆ ಹೊರತಾಗಿ ಅದನ್ನು highlight ಮಾಡಿದರೆ ತಾನೆ ಅವರು ಮುಂದೆ ಅದನ್ನು ಉಪಯೋಗ ಮಾಡಲು ಸಾಧ್ಯವಿದೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಹುದ್ದೆಗಳನ್ನು ಭರ್ತಿ ಮಾಡುವುದರಲ್ಲಿಯೂ ಕೂಡ ಸುಮಾರು 35,000, 40,000 ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂದು ಹೇಳಿದರು. ಈಗ 12,000, 13,000 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿದ್ದಾರೆ. ಮಿಕ್ಕಿದ್ದು ಯಾವುದೂ ಆಗಿಲ್ಲ. ಅಂದರೆ ಯಾವ ಉದ್ದೇಶಕ್ಕಾಗಿ ತಾವು ಇದನ್ನು ಮಾಡಿದ್ದೀರಿ ಅದು ಆಗುತ್ತಿಲ್ಲ. ಪ್ರಾದೇಶಿಕ ಅಸಮಾನತೆ ಮುಂದುವರೆದಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಇದರ ಬಗ್ಗೆ ಬಹಳಷ್ಟು ಮಾತಾಗಿವೆ. ಆದರೆ ಕೃತಿಯಲ್ಲಿ ಯಾವುದೂ ಆಗದೇ ಇರುವ ಕಾರಣದಿಂದ ಅದು ಮುಂದುವರೆದಿದೆ. ಅದಕ್ಕಾಗಿ ಈ ಬಜೆಟ್‌ನಲ್ಲಿ ತಾವು ಏನು 1,000 ಕೋಟಿ ರೂ.ಗಳನ್ನು ಇಡುತ್ತೇವೆ ಎಂದು ಹೇಳುತ್ತೀರಿ ಇದರ ಬಗ್ಗೆ ಜನರಿಗೆ ವಿಶ್ವಾಸವಿಲ್ಲ. ಈ ಬಜೆಟ್ ಬಗ್ಗೆ ಜನರಲ್ಲಿ ವಿಶ್ವಾರ್ಹತೆ ಇಲ್ಲ ಎನ್ನುವುದಕ್ಕೆ ಇನ್ನೊಂದು ವರದಿ. ಹೀಗಾಗಿ ಇವತ್ತು ಒಂದು ರಾಜ್ಯದ ಸಮಗ್ರ ಅಭಿವೃದ್ಧಿ ಆಗಬೇಕಾದರೆ ಯಾವ ಆರ್ಥಿಕ ಶಿಸ್ತು, ಯಾವ ಹಣಕಾಸಿನ ಶಿಸ್ತು ಇರಬೇಕಾಗಿತ್ತು. ಯಾವ ಬದ್ಧತೆಯಿಂದ ಆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕಾಗಿತ್ತು, ಆರ್ಥಿಕವಾಗಿ ಸಮಗ್ರ ಅಭಿವೃದ್ಧಿಗಾಗಿ ಎಲ್ಲರ ಪಾಲ್ಗೊಳ್ಳುವಿಕೆ ಯಾವ ರೀತಿ ಆಗಬೇಕಾಗಿತ್ತು ಅದು ಆಗಲು ವಿಫಲವಾಗಿದೆ. ಆರ್ಥಿಕ ಹೊರೆ, ಆರ್ಥಿಕ ಶಿಸ್ತು, ಸಾಲದ ಹೊರೆ, ಸಾಲದ ಶೂಲಕ್ಕೆ ತಳ್ಳಿರುವಂತಹ ಒಂದು ಆರ್ಥಿಕ ನಿರ್ವಹಣೆ ಕಳೆದ ನಾಲ್ಕು ವರ್ಷದಲ್ಲಿ ಆಗಿದೆ. ಅದೇ ಈ ವರ್ಷದ ಬಜೆಟ್‌ನಲ್ಲಿ ಕೂಡ ಮುಂದುವರೆದಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದ್ದರಿಂದ ಇವತ್ತು ಈ ಬಜೆಟ್ ಅದರ ಗಾತ್ರ ದೊಡ್ಡದಾಗಿದೆ. ಆದರೆ ಅದರ ವಿಶ್ವಾಸರ್ಹತೆ ಕಡಿಮೆಯಾಗಿದೆ. ಮಾನ್ಯ ಮುಖ್ಯಮಂತ್ರಿಯವರ 13ನೇ ಬಜೆಟ್‌ನ ನಿರೀಕ್ಷೆ ಏನಿತ್ತು ಆ ನಿರೀಕ್ಷೆ ಹುಸಿಯಾಗಿದೆ. ಈ ಸರ್ಕಾರದ ಮೇಲೆ ಆರ್ಥಿಕ ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳ ಮೇಲೆ ಜನರ ಒಂದು ನಿರೀಕ್ಷೆ ಏನಿತ್ತು ಅದು ಸಂಪೂರ್ಣವಾಗಿ ಹುಸಿಯಾಗಿದೆ. ಇವತ್ತು ಜನರು ಯಾವುದೇ ಸರ್ಕಾರ ಬಂದರೂ ಕೂಡ ನಮ್ಮ ಹಣೆಬರಹ ಬದಲಾಗದೇ ಇರುವ ಮಾತನ್ನು ಆಡುತ್ತಿದ್ದಾರೆ. ಅದರ ದೊಡ್ಡ ಪಾಲು ಈ ಸರ್ಕಾರಕ್ಕೆ ಆಗುತ್ತಿದೆ. ಆದ್ದರಿಂದ ಈ ಬಜೆಟ್ ಮಂಡನೆ ಮಾಡಿರುವ ಹಿನ್ನೆಲೆಯಲ್ಲಿ ವಿಶೇಷವಾಗಿ ರೈತರ ಸಾಲ ಮನ್ನಾ ಮಾಡುವ ವಿಚಾರದಲ್ಲಿ ದ್ವಿಮುಖ ಧೋರಣೆಯನ್ನು ಏನು ತೋರುತ್ತಿದ್ದಾರೆ, ಅದಕ್ಕೆ ಜನ ಕೆಲವೇ ದಿನಗಳಲ್ಲಿ ಪ್ರತಿಕ್ರಿಯೆಯನ್ನು ದೊಡ್ಡ ಪ್ರಮಾಣದಲ್ಲಿ ಕೊಡಲಿದ್ದಾರೆ ಎನ್ನುವ ಎಚ್ಚರಿಕೆಯನ್ನು ಕೊಡಲು ಇಚ್ಛೆಪಡುತ್ತೇನೆ. ಹಿಂದೆ ಸಾಲ ಮನ್ನಾ ಮಾಡಿದಾಗಲೆಲ್ಲಾ ರಾಮಕೃಷ್ಣ

ಹೆಗಡೆಯವರಿಂದ ಹಿಡಿದು ಜಗದೀಶ್ ಶೆಟ್ಟರ್‌ರವರೆಗೂ ಯಾರೂ ಕೂಡ ಬೆಟ್ಟು ಮಾಡಿ ತೋರಿಸಿರಲಿಲ್ಲ. ಮಾನ್ಯ ಸಿದ್ದರಾಮಯ್ಯಯವರು ಮೊದಲನೆ ಮುಖ್ಯಮಂತ್ರಿಯವರು ಬೆಟ್ಟು ಮಾಡಿ ತೋರಿಸಿದ್ದಾರೆ. ಹಿಂದೆ ಒಂದು ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಸ್ವಾಮ್ಯದ ಬ್ಯಾಂಕಿನ ಬಡ್ಡಿ, ರಾಜ್ಯ ಸರ್ಕಾರದ ಬೊಕ್ಕಸದಿಂದ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ನಾವು ಕೊಟ್ಟಿದ್ದೆವು. ಉತ್ತಮವಾದಂತಹ ಉದಾಹರಣೆಗಳು ಇವೆ. ನಮ್ಮ ಮನಸ್ಸಿದ್ದರೆ ಉತ್ತಮವಾದಂತಹ ಉದಾಹರಣೆಗಳನ್ನು ತೆಗೆದುಕೊಳ್ಳುತ್ತೇವೆ. ಮಾಡುವ ಮನಸ್ಸು ಇಲ್ಲವೆಂದರೆ ಹಲವಾರು ನೆಪಗಳನ್ನು ಮಾಡುತ್ತೇವೆ. ಆದ್ದರಿಂದ ಆರ್ಥಿಕ ವಲಯದಲ್ಲಿ ಪದೇ ಪದೇ ನಾವು ಕೇಂದ್ರದ ಜೊತೆ ಸಂಘರ್ಷ ಮಾಡುವುದರಿಂದ ರಾಜ್ಯಕ್ಕೆ ಹೊಡೆತ ಬೀಳುತ್ತದೆ ಹೊರತಾಗಿ, ರಾಜ್ಯದ ಜನರಿಗೆ ತೊಂದರೆಯಾಗುತ್ತದೆ ಹೊರತಾಗಿ ಆ ಎಚ್ಚರಿಕೆ, ಸೂಕ್ಷ್ಮತೆಯನ್ನೂ ಕೂಡ ಅರ್ಥ ಮಾಡಿಕೊಳ್ಳಬೇಕು. ಮತ್ತೆ ನಾನು ಆಗಲೇ ಹೇಳಿದಂತೆ. . . .

ಶ್ರೀ ಬಿ.ಆರ್.ಪಾಟೀಲ್: ಮಾನ್ಯ ಬೊಮ್ಮಾಯಿಯವರೆ. . .

ಶ್ರೀ ಬಸರಾಜ್ ಬೊಮ್ಮಾಯಿ: ಒಂದು ನಿಮಿಷ ನಾನು conclude ಮಾಡಿಬಿಡುತ್ತೇನೆ.

ಅಧ್ಯಕ್ಷರು: ಮಾನ್ಯ ಬಿ.ಆರ್.ಪಾಟೀಲ್‌ರವರೆ, ಬೊಮ್ಮಾಯಿಯವರು conclude ಮಾಡಿಬಿಡುತ್ತಾರೆ. ಆನಂತರ ತಾವು ಮಾತನಾಡಿ.

ಶ್ರೀ ಬಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಬೊಮ್ಮಾಯಿಯವರಲ್ಲಿ ಒಂದು ಮಾತು. ಏಕೆಂದರೆ ಬಹಳ ಉತ್ತಮವಾದಂತಹ subject. ನಾನು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಎನ್ನುವುದಕ್ಕಿಂತ ಹಿಂದೆ ದೇವಿಲಾಲ್‌ರವರು ಕೃಷಿ ಸಚಿವರಾಗಿದ್ದರು. ಇಡೀ ದೇಶಕ್ಕೆ 10,000 ಕೋಟಿ ರೂ.ಗಳ ಸಾಲ ಸಂಪೂರ್ಣವಾಗಿ ಮನ್ನಾ ಮಾಡಿದ್ದ ಕಾರಣಕ್ಕಾಗಿ ಎಷ್ಟೋ ಕೋಟಿ ಕೋಟಿ ರೈತರಿಗೆ ಅನುಕೂಲವಾಯಿತು. ವಿ.ಪಿ.ಸಿಂಗ್‌ರವರು ಪ್ರಧಾನಮಂತ್ರಿಗಳಾಗಿದ್ದಾಗ ದೇವಿಲಾಲ್‌ರವರು ಕೃಷಿ ಸಚಿವರಾಗಿದ್ದರು. ಏಕೆ ಈ ಕೀರ್ತಿಯನ್ನು ತಾವು ಮಾಡಿ ಪಡೆಯಬಹುದಲ್ಲಾ? ಈ ಕೆಲಸವನ್ನು ತಾವು ಮಾಡಬಹುದಲ್ಲಾ, ಏಕೆಂದರೆ demonetization ಆದ ಮೇಲೆ ದುಡ್ಡು ಬಂದಿದೆ, ಬ್ಯಾಂಕ್‌ಗಳು ತುಂಬಿಬಿಟ್ಟಿವೆ.

(ಗೊಂದಲ)

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ಬಿ.ಆರ್.ಪಾಟೀಲ್‌ರವರೆ ಮನಮೋಹನ್‌ಸಿಂಗ್‌ರವರು ಪ್ರಧಾನಮಂತ್ರಿಗಳಾಗಿದ್ದಾಗ 72,000 ಕೋಟಿ ರೂ.ಗಳ ಸಾಲ ಮನ್ನಾ ಮಾಡಿದ್ದಾರೆ ಅದನ್ನು ಏಕೆ ತಾವು ಯೋಚನೆ ಮಾಡಲಿಲ್ಲ.?

(ಗೊಂದಲ)

ಶ್ರೀ ಬಿ.ಆರ್.ಪಾಟೀಲ್: ಹೌದು. ಮಾನ್ಯ ಜಾರ್ಜ್‌ರವರೆ, ಅವತ್ತಿನ ರಾಜಕೀಯ ಸನ್ನಿವೇಶ ವಿ.ಪಿ.ಸಿಂಗ್‌ರವರು ಪ್ರಧಾನ ಮಂತ್ರಿಗಳಾಗಿದ್ದ ಸನ್ನಿವೇಶ ಬೇರೆ ಆಗಿತ್ತು.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಒಂದು ನಿಮಿಷ ನಾನು ಇಬ್ಬರಿಗೂ ಉತ್ತರ ಕೊಡುತ್ತೇನೆ. ಮಾನ್ಯ ಬಿ.ಆರ್.ಪಾಟೀಲ್‌ರವರೆ ಆ ಸಂದರ್ಭದಲ್ಲಿ ದೇವಿಲಾಲ್‌ರವರು ಕೃಷಿ ಸಚಿವರಾಗಿದ್ದರು, ವಿ.ಪಿ.ಸಿಂಗ್‌ರವರು ಪ್ರಧಾನ ಮಂತ್ರಿಗಳಾಗಿದ್ದಾಗ ಮಾಡಿದ್ದು ನಿಜ. ಮನಮೋಹನ್ ಸಿಂಗ್‌ರವರು ಬಡ್ಡಿ ಮನ್ನಾ ಮಾಡಿರುವಂಥದ್ದು ನಿಜ.

ಅಧ್ಯಕ್ಷರು: ಅಸಲು ಬಡ್ಡಿ ಮನ್ನಾ ಮಾಡಿದ್ದಾರಲ್ಲಾ.

ಶ್ರೀ ಕೆ.ಶಿವಮೂರ್ತಿ: ಬಡ್ಡಿ ಅಲ್ಲ. ಸಾಲ ಮನ್ನಾ ಮಾಡಿರುವುದು.

ಶ್ರೀ ಬಸವರಾಜ ಬೊಮ್ಮಾಯಿ: ಇರಲಿ. ನಾನು ಏನು ಹೇಳಿದ್ದೇನೆಂದರೆ, ಇವತ್ತು ನಮ್ಮ ರಾಜ್ಯದ ಬಜೆಟ್ ಮೇಲೆ ಚರ್ಚೆ ಮಾಡುತ್ತಿದ್ದೇವೆ. ಈ ರೈತರು ನಮ್ಮ ಕರ್ನಾಟಕದ ರೈತರು. ಕೃಷಿ State list ನಲ್ಲಿ ಬರುತ್ತದೆ. ರಾಜ್ಯದ ಜವಾಬ್ದಾರಿ ಇದೆ. ಹಿಂದೆ ದೇವಿಲಾಲ್‌ರವರು ಮಾಡಿದರು ಎಂದು ಯಡಿಯೂರಪ್ಪನವರೆ ದೇವಿಲಾಲ್‌ರವರು ಮಾಡಿದರು ನೀವು ಮಾಡಿ ಎಂದು UPA ಸರ್ಕಾರಕ್ಕೆ ಹೇಳಲಿಲ್ಲ. ಜಗದೀಶ್ ಶೆಟ್ಟರ್‌ರವರು UPA ಸರ್ಕಾರ ಮಾಡಿದೆ ಅದಕ್ಕೆ ನಾನು ಮಾಡುತ್ತೇನೆ ಎಂದು ಹೇಳಲಿಲ್ಲ. ಬರಗಾಲ ಬಂದಿತು ಮಾಡಿದರು. ಈಗಲೂ ಕೂಡ ನೀವೂ ಮಾಡಿ. ಅದರ ಅರ್ಥ ಅಲ್ಲಿ claim ಮಾಡಬಾರದು ಎಂದು ಅಲ್ಲ. ಅಲ್ಲಿಯೂ ಕೂಡ ಇದರ ಬಗ್ಗೆ ಚಿಂತನೆ ನಡೆಯುತ್ತಿದೆ. ಅಲ್ಲಿಯೂ ಕೂಡ ಸೂಕ್ತ ನಿರ್ಧಾರ ಮಾಡುವುದಕ್ಕೆ ನಮ್ಮ ರಾಜಕೀಯ ಶಕ್ತಿಯನ್ನು ಪ್ರಯೋಗ ಮಾಡೋಣ. ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ರೈತರು ಯಾವುದೇ ಪಕ್ಷಕ್ಕೆ ಸೇರಿಲ್ಲ. ಆದರೆ ಎಲ್ಲಾ ರಾಜಕೀಯ ಪಕ್ಷಗಳು ರೈತರಿಗೆ ಸೇರಿವೆ. ಇದನ್ನು ನಾವು ಅರ್ಥ ಮಾಡಿಕೊಂಡು



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

debate ಮಾಡಬೇಕಾಗಿದೆ. ರೈತರು ಯಾವುದೇ ಪಕ್ಷಕ್ಕೆ ಸೇರಿಲ್ಲ. ಎಲ್ಲಾ ರಾಜಕೀಯ ಪಕ್ಷಗಳು ರೈತರಿಗೆ ಸೇರಿವೆ. ನಾವು ಹೇಳಬೇಕು, ನಮ್ಮ ರೈತ, ನಾವು ಇದನ್ನು ಮಾಡುತ್ತೇನೆ. ನೀವು ಅಲ್ಲಿ ಅದನ್ನು ಮಾಡಿ ಎಂದಾಗ ಅದು ದೊಡ್ಡಪ್ರಮಾಣದಲ್ಲಿ ಸಹಾಯವಾಗುತ್ತದೆ. ವಾದಕ್ಕೆ ವಾದ ಮಾಡಿಕೊಂಡು ಹೋದರೆ ಏನು ಪ್ರಯೋಜನ? ತುರ್ತಾಗಿ ಏನಾಗಬೇಕಾಗಿದೆ? ನಮ್ಮ ಕೈಯಲ್ಲಿ ಏನಿದೆ ಅದನ್ನು ಮಾಡೋಣ. ಕೈಯಲ್ಲಿ ಇರುವುದನ್ನು ಮಾಡುವುದು ಬಿಟ್ಟು ಇನ್ನೊಬ್ಬರ ಕಡೆ ಬೆಟ್ಟು ಮಾಡಿ ತೋರಿಸುವುದು ಎಷ್ಟು ಸರಿ?

ಶ್ರೀ ಕೆ.ಶಿವಮೂರ್ತಿ: ಸಾಲ ಎನ್ನುವುದು Concurrent List, ರಾಜ್ಯಕ್ಕೂ ಜವಾಬ್ದಾರಿ ಇದೆ. ಕೇಂದ್ರಕ್ಕೂ ಜವಾಬ್ದಾರಿ ಇದೆ. ರೈತರ ಸಾಲ.

(ಗೊಂದಲ)

ಶ್ರೀ ಬಸವರಾಜ ಎಸ್.ಬೊಮ್ಮಾಯಿ: ಆದ್ದರಿಂದ ಕೃಷಿ ವಲಯಕ್ಕೆ ಪ್ರಾಮುಖ್ಯತೆ ಕೊಡದೇ ಇವತ್ತು industries growth ಕಡಿಮೆ ಆಗಿದೆ.

ಮುಂದು. . . .

27-03-2017-1-10-17-MS-VR.

ಶ್ರೀ ಬಸವರಾಜ ಬೊಮ್ಮಾಯಿ: (ಮುಂದು)

GSDP growth rate ಕಡಿಮೆಯಾಗಿದೆ. ಆರ್ಥಿಕ ಶಿಸ್ತು ನಿರ್ವಹಣೆಯಲ್ಲಿ ವಿಫಲರಾಗಿದ್ದಾರೆ. ಇಂತಹ ಬಜೆಟ್ ಜನರಿಗೆ ಉಪಯೋಗವಾಗುವುದಿಲ್ಲ ಇದು ಜನರಿಗೆ ಮಾರಕವಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಕುಮಾರಸ್ವಾಮಿಯವರೆ ತಾವು ಮಾತನಾಡಿ.

ಶ್ರೀ ಅಶೋಕ ಖೇಣಿ: ರೈತರಿಗೆ ಸಾಲವನ್ನು ಮಾಫ್ ಮಾಡಬೇಕು. ನೀವು ಸಾಲವನ್ನು ಮಾಫ್ ಮಾಡುವುದಿಲ್ಲ ನೀರನ್ನು ಸಹ ಕೊಡುವುದಿಲ್ಲ. ಅವರಿಗೆ Bhagya Scheme ಬೇಕಾಗಿಲ್ಲ. ಚೆನ್ನಾಗಿ ನೀರು ಕೊಡಿ, ಸಾಲ cancel ಮಾಡಿ. Your economy will improve. Bhagya schemeನಿಂದ economy improve ಆಗುವುದಿಲ್ಲ waste ಆಗುತ್ತಿದೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಧ್ಯಕ್ಷರು: ಆಯಿತು ಬಿಡಿ.

ಶ್ರೀ ಮಾನಪ್ಪ ಡಿ ವಜ್ಜಲ :ಮಾನ್ಯ ಅಧ್ಯಕ್ಷರೆ, ರಾಯಚೂರು ಜಿಲ್ಲಾ ಪಂಚಾಯಿತಿಯ CEO Kurma Raoರವರ ಬಗ್ಗೆ ಸರ್ಕಾರವು ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದರು ಇಲ್ಲಿಯವರೆಗೂ ಕೊಟ್ಟಿರುವುದಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಅವರ ಕ್ಷೇತ್ರದ ಸಿಇಒ ಬಗ್ಗೆ ಕೇಳುತ್ತಿದ್ದಾರೆ.

ಶ್ರೀ ಮಾನಪ್ಪ ಡಿ ವಜ್ಜಲ: ಯಾವಾಗ ಉತ್ತರವನ್ನು ಕೊಡಿಸುತ್ತೀರಿ?

ಅಧ್ಯಕ್ಷರು: ಸರ್ಕಾರವನ್ನು ಕೇಳಿ ಹೇಳುತ್ತೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಸರ್ಕಾರವು ಉತ್ತರ ಕೊಡುವುದಕ್ಕಿಂತ ಅವರನ್ನು ಸ್ವಲ್ಪ ದಿವಸಗಳ ಕಾಲ suspend ಮಾಡುವುದು ಒಳ್ಳೆಯದು. Shoe ಹಾಕಿಕೊಂಡು...

ಶ್ರೀ ಮಾನಪ್ಪ ಡಿ ವಜ್ಜಲ: ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ ಎಂದು ಹೇಳಬೇಕು. ಈಗಾಗಲೇ ರಾಜ್ಯದ ಜನರ ಮಾನಮರ್ಯಾದೆಯನ್ನು ಹರಾಜು ಹಾಕಿರುವ ಬಗ್ಗೆ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಅವರು ಏನು ಮಾಡುತ್ತಿದ್ದಾರೆಂದರೆ ತಾಲ್ಲೂಕಿನಲ್ಲಿರುವ ಇಡೀ ರೈತರನ್ನು ಎತ್ತಿಕಟ್ಟಿ ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗಿಸುವಂತಹ ಕೆಲಸ ಮಾಡುತ್ತಿದ್ದಾರೆ. ಸದನದಲ್ಲಿ ನಡೆದಿರುವಂತಹ ಚರ್ಚೆಗೆ ಸರ್ಕಾರಿ ನೌಕರರನ್ನು ಎತ್ತಿಕಟ್ಟಿ ಸದನದ ವಿರುದ್ಧ ಮಾತನಾಡುವಂತಹದ್ದರ ಬಗ್ಗೆ ರೂಲ್ಸ್‌ನಲ್ಲಿ ಇದೆಯಾ? ಮಾನ್ಯ ಅಧ್ಯಕ್ಷರೆ, ಇದನ್ನು ತಾವು serious ಆಗಿ ತೆಗೆದುಕೊಳ್ಳಬೇಕು. ಪ್ರತಿ ತಾಲ್ಲೂಕಿನಲ್ಲಿ ಸರ್ಕಾರಿ ನೌಕರರನ್ನು ವಿರೋಧ ಕಟ್ಟಿಸುತ್ತಿದ್ದಾರೆ. ಸರ್ಕಾರದ ವಿರುದ್ಧ ಘೋಷಣೆಯನ್ನು ಕೂಗಿಸುತ್ತಿದ್ದಾರೆ. ಇಂತಹ ಕೆಲಸವನ್ನು ಅಧಿಕಾರಿಗಳು ಮಾಡುವುದು ಯೋಗ್ಯವೇ, ಈ ಸದನದ ಬಗ್ಗೆ ವಿರೋಧ ಮಾಡುವ ಬಗ್ಗೆ ಸರ್ಕಾರಿ ಅಧಿಕಾರಿಗಳಿಗೆ ಏನಾದರೂ ಅಧಿಕಾರ ಇದೆಯಾ?

ಅಧ್ಯಕ್ಷರು: ಸರ್ಕಾರದಿಂದ ಉತ್ತರ ಕೊಡಿಸುತ್ತೇನೆ.

ಶ್ರೀ ಮಾನಪ್ಪ ಡಿ ವಜ್ಜಲ: ಸದನದಲ್ಲಿ ಚರ್ಚೆ ಮಾಡಿರುವಂತಹ ವಿಷಯವನ್ನು ಸರ್ಕಾರಿ ಅಧಿಕಾರಿಗಳು ಚರ್ಚೆ ಮಾಡುವುದಕ್ಕೆ ಏನಾದರೂ ಅವಕಾಶ ಇದೆಯಾ?

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಅಧ್ಯಕ್ಷರು: ಇವತ್ತು ಉತ್ತರ ಕೊಡಿಸುತ್ತೇನೆ. ಆಗ ಅವರು ಎಲ್ಲವನ್ನೂ ಹೇಳುತ್ತಾರೆ. ತಾವು ಕುಳಿತುಕೊಳ್ಳಿ. ಕುಮಾರಸ್ವಾಮಿಯವರೆ ತಾವು ಮಾತನಾಡಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ(ರಾಮನಗರ): ಸನ್ಮಾನ್ಯ ಅಧ್ಯಕ್ಷರೆ, 2017-18ನೇ ಸಾಲಿನ ಆಯವ್ಯಯದ ಬಗ್ಗೆ ಚರ್ಚೆಮಾಡುವುದಕ್ಕೆ ಇವತ್ತು ಅವಕಾಶ ಏನು ಕೊಟ್ಟಿದ್ದೀರಿ ಇಲ್ಲಿ ಸಮಯದ ಅಭಾವ ಇರುವುದನ್ನು ಸಹ ನಾನು ಮನಗಂಡಿದ್ದೇನೆ. ನಾಳೆ ದಿನ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕಾದಂತಹ ಹಿನ್ನೆಲೆಯಲ್ಲಿ ಈ ಒಂದು ಆಯವ್ಯಯದ ಬಗ್ಗೆ ಚರ್ಚೆ ಮಾಡುವುದಕ್ಕಾಗಿ ಸಮಯ ನನಗೆ ದೊರಕುತ್ತದೆಯೋ ಅಥವಾ ಇಲ್ಲವೊ ಎನ್ನುವ ಅಭಿಪ್ರಾಯದಲ್ಲಿದ್ದೆ. ಈ ರಾಜ್ಯದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರ ನಂತರ ಅತ್ಯಂತ ಹೆಚ್ಚಿನ ಬಜೆಟ್ ಅನ್ನು ಮಂಡನೆ ಮಾಡತಕ್ಕಂತಹ ಒಂದು ಸದಾವಕಾಶ ರಾಜ್ಯದ ಇವತ್ತಿನ ಮುಖ್ಯಮಂತ್ರಿಗಳಾಗಿರತಕ್ಕಂತಹ ಸಿದ್ದರಾಮಯ್ಯನವರ ಪಾಲಿಗೆ ಸಿಕ್ಕಿರುವುದು ಏನಿದೆ, ಬಹುಶ: ಇಂತಹ ಒಂದು ಉತ್ತಮವಾದಂತಹ ಅವಕಾಶ ಸಿದ್ದರಾಮಯ್ಯನವರು ಉಪಯೋಗ ಮಾಡಿಕೊಳ್ಳುತ್ತಾರೆಂದು ನನ್ನ ಭಾವನೆ ಇತ್ತು. ಅದಕ್ಕೆ ಕಾರಣ ಅವರು ಜನತಾದಳದಲ್ಲಿದ್ದಾಗ 7 ಬಜೆಟ್ ಅನ್ನು ಏನು ಮಂಡನೆ ಮಾಡಿದ್ದಾರೆ, ಈಗ ಮುಖ್ಯಮಂತ್ರಿಗಳಾಗಿ ಕಾಂಗ್ರೆಸ್ ಪಕ್ಷದ ನಾಯಕತ್ವವನ್ನು ವಹಿಸಿ 5ನೇ ಬಜೆಟ್ ಅನ್ನು ಮಂಡನೆ ಮಾಡಿದ್ದಾರೆ. ಈ ಒಂದು ಕೆಟ್ಟ ಪರಿಸ್ಥಿತಿಯನ್ನು ಎದುರಿಸುತ್ತಿರುವಂತಹ ರಾಜ್ಯದಲ್ಲಿ ಒಂದು ಉತ್ತಮವಾದಂತಹ ರೀತಿಯಲ್ಲಿ ರಾಜ್ಯದ ಹಣವನ್ನು ಸದ್ಬಳಕೆ ಮಾಡಿಕೊಳ್ಳತಕ್ಕಂತಹ, ಯೋಜನೆಗಳನ್ನು ಅನುಷ್ಠಾನಕ್ಕೆ ತರುವಂತಹ ಕಾರ್ಯಕ್ರಮಗಳು ಈ ಒಂದು ಬಜೆಟ್‌ನಲ್ಲಿ ಬರಬಹುದು ಎನ್ನುವಂತಹ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೆ. ಅದರಲ್ಲಿಯೂ ಮುಂದಿನ ಒಂದು ವರ್ಷದಲ್ಲಿ ಚುನಾವಣೆಗೆ ಹೋಗಬೇಕಾದಂತಹ ಸಮಯ ಏನಿದೆ, ಇಂತಹ ಸಮಯದಲ್ಲಿ ಸಿದ್ದರಾಮಯ್ಯನವರು ಒಂದು ಉತ್ತಮವಾದಂತಹ ಬಜೆಟ್ ಅನ್ನು ಕೊಡಬಹುದು ಎನ್ನುವಂತಹ ನಿರೀಕ್ಷೆಯನ್ನಿಟ್ಟುಕೊಂಡಿದ್ದೆ ಅದನ್ನು ಹುಸಿಗೊಳಿಸಿದ್ದಾರೆಂದು ನನ್ನ ಅಭಿಪ್ರಾಯವಾಗಿದೆ. ಇವತ್ತು ಈ ಒಂದು ಬಜೆಟ್‌ನಲ್ಲಿ ಕೃಷಿ ವಲಯಕ್ಕೆ ಬಡ ಮತ್ತು ಮಧ್ಯಮ ವರ್ಗದವರಿಗೆ, ನಿರುದ್ಯೋಗಿ ಯುವಕರಿಗೆ, ಸಂಕಷ್ಟದಲ್ಲಿರತಕ್ಕಂತಹ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇವರೆಲ್ಲರ ದೃಷ್ಟಿಯಲ್ಲಿ ಇವರ ಬದುಕಿಗೆ ಆಸರೆಯಾಗತಕ್ಕಂತಹ ಚೇತರಿಕೆಯನ್ನು ತುಂಬತಕ್ಕಂತಹ ಒಂದು ಬಜೆಟ್ ಅನ್ನು ಈ ಸರ್ಕಾರ ಮಂಡನೆ ಮಾಡಬಹುದು, ಆ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನಿರೀಕ್ಷೆಗಳು ಇವತ್ತು ಕಾಣಲಿಲ್ಲ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಈಗಾಗಲೇ ಸನ್ಮಾನ್ಯ ವಿರೋಧಪಕ್ಷದ ನಾಯಕರು ಸುದೀರ್ಘವಾಗಿ 4 ಗಂಟೆಗಳ ಕಾಲ ಮಾತನಾಡಿದ್ದಾರೆ. ನಮ್ಮ ಬಸವರಾಜ ಬೊಮ್ಮಾಯಿಯವರು ಬಹುಶ: ಎರಡೂಕಾಲು ಗಂಟೆಗಳ ಕಾಲ ಮಾತನಾಡಿದ್ದಾರೆ. ಸುದೀರ್ಘವಾಗಿ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿಯೂ ವಿರೋಧಪಕ್ಷದ ನಾಯಕರು ರಾಜ್ಯದ GSDPಯ ಬಗ್ಗೆ ಅಲ್ಲಿಂದ ಕೇಂದ್ರಸರ್ಕಾರದ ಇತ್ತೀಚಿನ demonetization ನ ಹಿನ್ನೆಲೆಯಲ್ಲಿ ಅದಕ್ಕೆ ಸಂಬಂಧಪಟ್ಟ ವಿಷಯಗಳ ಜೊತೆಗೆ ಬೇರೆ ಬೇರೆ ವಿಷಯಗಳನ್ನು ಸಹ ಪ್ರಸ್ತಾಪಮಾಡಿದ್ದಾರೆ. ಒಟ್ಟಾರೆ ಈ ಆಯವ್ಯಯದಲ್ಲಿ ಪ್ರಮುಖವಾಗಿ ಐದು ಅಂಶಗಳ ಆಧಾರದ ಮೇಲೆ ನಾವು ಏನು ವಿಶ್ಲೇಷಣೆ ಮಾಡಬಹುದು. ಅದರಲ್ಲಿ ಒಂದು ಈ ಸರ್ಕಾರದ ಆರ್ಥಿಕ ಶಿಸ್ತು, ಸಂಪನ್ಮೂಲಗಳ ಕ್ರೋಢೀಕರಣಕ್ಕೆ ಆದ್ಯತಾ ವಲಯಗಳಿಗೆ ಹಂಚಿಕೆ ಮತ್ತು ವೆಚ್ಚ, ಉದ್ಯೋಗ ಸೃಜನೆ, ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸುವುದು, ಈ ಐದು ವಲಯಗಳಲ್ಲಿ ಐದು ಅಂಶಗಳ ಆಧಾರದ ಮೇಲೆ ಈ ಸರ್ಕಾರವು ಯಾವ ರೀತಿಯಲ್ಲಿ ಕೆಲಸವನ್ನು ನಿರ್ವಹಣೆ ಮಾಡಬೇಕಾಗಿತ್ತು. ಅದರಲ್ಲಿ ಮೊದಲನೆಯದಾಗಿ ಆರ್ಥಿಕ ಶಿಸ್ತಿನ ಬಗ್ಗೆ ನಮ್ಮ ಬಸವರಾಜ ಬೊಮ್ಮಾಯಿಯವರು ಈಗ ಸದನದ ಗಮನವನ್ನು ಸೆಳೆದಿದ್ದಾರೆ. ಈ GSDP ಏನು ಒಂದು ವರದಿಯನ್ನು ಕೊಡುತ್ತಾರೆ. ಈ GSDP manipulated ಎನ್ನತಕ್ಕಂಥದ್ದನ್ನು ಇವತ್ತು ಏನು ಪ್ರಸ್ತಾಪ ಮಾಡುತ್ತಿದ್ದೀರಿ. ಬಹುಶ: ನಾನು ಸಹ ಅದಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಏಕೆಂದರೆ ಇವತ್ತಿನ GSDP ಯನ್ನು ನಾವು ಪ್ರಮುಖವಾಗಿ ಚರ್ಚೆ ಮಾಡುತ್ತಿದ್ದೇವೆ. ಮೊದಲು 2004-2005ನೇ ಇಸವಿಯ ಅವತ್ತಿನ GSDPಯ ವರ್ಷವನ್ನು ಆಧಾರವಾಗಿಟ್ಟುಕೊಳ್ಳುತ್ತಿದ್ದರು. 14ನೇ ಹಣಕಾಸಿನ ಆಯೋಗ 2011-12ನೇ ವರ್ಷದ ಆರ್ಥಿಕ ವರ್ಷವನ್ನು ಇವತ್ತು ಗಣನೆಗೆ ಆಧಾರವಾಗಿಟ್ಟುಕೊಳ್ಳುವುದರ ಮುಖಾಂತರ ಈ ಲೆಕ್ಕವನ್ನು ಇವತ್ತು ಈ ಸದನದ ಮುಂದಿಡುತ್ತಿದ್ದಾರೆ. ರಾಜ್ಯಸರ್ಕಾರದ ಏನೊಂದು ವಲಯವಾರು ಅಭಿವೃದ್ಧಿ ದರ ಇವತ್ತು ಏನು ಸದನದಲ್ಲಿ ಬಜೆಟ್‌ನಲ್ಲಿ ಮಂಡನೆ ಮಾಡಿದ್ದಾರೆ. ಮೊನ್ನೆ ದಿನ ನಮ್ಮ ವಿರೋಧಪಕ್ಷದ ನಾಯಕರು ಮಾತನಾಡಬೇಕಾದರೆ ಸ್ವಲ್ಪ ದೊಡ್ಡಮಟ್ಟದಲ್ಲಿ ಚರ್ಚೆ ನಡೆಯುತ್ತಿರಬೇಕಾದರೆ ಆ ಕಡೆ ಮತ್ತು ಈ ಕಡೆಯಲ್ಲಿ ಸಂಘರ್ಷವು ನಡೆದಿತ್ತು. ಇಲ್ಲಿ ಪ್ರಮುಖವಾಗಿ ಕೃಷಿ ವಲಯವು ಕಳೆದ ಮೂರು ವರ್ಷಗಳಲ್ಲಿ ಬರಗಾಲದಿಂದ ಈ ವಲಯವು ಅತ್ಯಂತ ಕೆಳಗಡೆ

27-03-2017

ಹೋಗುವಂತಹ ಪರಿಸ್ಥಿತಿ ಏನಿದೆ. ಇವತ್ತು 2016-17ನೇ ಸಾಲಿನಲ್ಲಿ ರಾಜ್ಯಸರ್ಕಾರದ ನಿರೀಕ್ಷೆ 1.5 ಕ್ಕೆ growth rate ಇಳಿಕೆ ಆಗುತ್ತದೆ ಎಂದು ವಿಷಯವನ್ನು ಪ್ರಸ್ತಾಪಮಾಡಿದ್ದಾರೆ. ಬಹುಶ: ಅದು ಇನ್ನು ಕಡಿಮೆಯಾಗಬಹುದು ಎಂದು ನನ್ನ ಅಭಿಪ್ರಾಯವಾಗಿದೆ. ಬಹುಶ: ಈ ಬಾರಿ agricultural Sectorನಲ್ಲಿ minus 2 ಗೆ ಹೋದರೂ ಕೂಡ ಆಶ್ಚರ್ಯಪಡಬೇಕಾಗಿಲ್ಲ ಎನ್ನುವುದು ಕೆಲವು ಕೃಷಿತಜ್ಞರು ಹೇಳುತ್ತಿದ್ದಾರೆಂದು ಸದನದ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ. ಅದೇ ರೀತಿಯಲ್ಲಿ ನಾನು ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಸಮಯದ ಅಭಾವದಿಂದ ಆದಷ್ಟುಬೇಗನೆ ವಿಷಯವನ್ನು ಮೊಟಕುಗೊಳಿಸಬೇಕೆಂದು ತೀರ್ಮಾನಕ್ಕೆ ಬಂದಿದ್ದೇನೆ. ಅದರ ಜೊತೆಗೆ ಕೈಗಾರಿಕಾ ವಲಯವು ಕಳೆದ ವರ್ಷ 4.9% ಇದ್ದಂತಹ growth 2.2% ಎಂದು ಏನು ನಿರೀಕ್ಷೆಯನ್ನಿಟ್ಟುಕೊಂಡಿದ್ದಾರೆ. ಇದರಿಂದ ಇವತ್ತು ಯುವಕರ ಬದುಕಿಗೆ ಯಾವ ರೀತಿಯಲ್ಲಿ ಈ ಸರ್ಕಾರದ ಕಾರ್ಯಕ್ರಮಗಳು ಇದೆ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಹಲವಾರು ಮಾಧ್ಯಮಗಳಲ್ಲಿ ಇವತ್ತು ಯುವಕರ ಉದ್ಯೋಗದ ಬಗ್ಗೆ ಏನು ಚರ್ಚೆಗಳಾಗುತ್ತದೆ. ಬಹುಶ: ಮೋಹನ್‌ದಾಸ್ ಪೈ ರವರು 3-4 ಬಾರಿ ಪತ್ರಿಕೆಗಳಲ್ಲಿ ಹೇಳಿಕೆಗಳನ್ನು ಕೊಟ್ಟಿರುವುದನ್ನು ಸಹ ನಾನು ಗಮನಿಸಿದ್ದೇನೆ. ಇವತ್ತು ಈ ಒಂದು ಕೈಗಾರಿಕಾ sector ಮತ್ತು service sectorನಲ್ಲಿ ಏನೊಂದು decrease ಅನ್ನು ಕಾಣುತ್ತಿದ್ದೇವೆ. ಇದರ ಹಿನ್ನೆಲೆಯಲ್ಲಿ ಇವತ್ತು ಯುವಕರಿಗೆ ಉದ್ಯೋಗವನ್ನು ಕೊಡುವುದರಲ್ಲಿಯೂ ನಾವು ಎಡವುತ್ತಿರುವಂತಹ ಪರಿಸ್ಥಿತಿಗೆ ದೂಡಿಕೊಳ್ಳುತ್ತಿದ್ದೇವೆ.

(ಮುಂದು)

ವಿಸ.27.03.2017/120/18/ಎನ್.ಸಿ.ಕೆ/ವಿ.ಆರ್

ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಂದು)

ಇವತ್ತು ಕೈಗಾರಿಕಾ ವಲಯ 2.2%ಗೆ ಇಳಿಯುತ್ತದೆ ಎಂದು growth rate ಹೇಳುತ್ತಿದ್ದೀರಿ. ಅದಕ್ಕೆ ಬಹುಶ: ಕಾರಣ ರಾಜ್ಯದಲ್ಲಿ infrastructure development ವಿಚಾರದಲ್ಲಿ ಎಲ್ಲೋ ಒಂದು ಕಡೆ ಎಡವಿದ್ದೇವೇನೊ ಎಂಬುದು ನನ್ನ ಅಭಿಪ್ರಾಯ. ನಾವು ನಿರೀಕ್ಷೆ ಇಟ್ಟುಕೊಂಡಂಥ ಮಟ್ಟದಲ್ಲಿ infrastructure ಕೊಡುವುದಕ್ಕೆ ಸಾಧ್ಯವಿಲ್ಲವೇನೋ ಎಂಬುದು ನನ್ನ ಅಭಿಪ್ರಾಯವಾಗಿದೆ. ಈ service sector ನಲ್ಲಿ ಕಳೆದ 7-8 ವರ್ಷಗಳಿಂದ ಸತತವಾಗಿ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

double digit ನಲ್ಲಿ ಇದ್ದಂಥ ನಮ್ಮ ಒಂದು growth rate ಇವತ್ತು 8.5% ಗೆ ಬರುತ್ತದೆಂದು ಇವತ್ತೇನು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಇದು ಅತ್ಯಂತ ಸರ್ಕಾರದ ಕೆಲವು ನಿರ್ಧಾರಗಳು ಯಾವರೀತಿಯಲ್ಲಿ ಈ ವಲಯಗಳು ಹಂತಹಂತವಾಗಿ ಇವತ್ತು growth rate ನಲ್ಲಿ ಹಿನ್ನಡೆಯನ್ನು ಸಾಧಿಸುತ್ತಿದ್ದೇವೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಉತ್ತರ ಕೊಡಬೇಕಾಗುತ್ತದೆ. ನಾನು ಮೊದಲೇ ಹೇಳಿದೆ, ಇವತ್ತು ಮಧ್ಯಮ ವರ್ಗದ ಯುವಕರಿಗೆ ದೊಡ್ಡ ಹೊಡೆತ ಬಿದ್ದಿದೆ ಎಂದು ಏನು ಹೇಳಿದ್ದೇನೆ ಅಧ್ಯಕ್ಷರೆ, ಬಹುಶ: ನಮ್ಮ ಸರ್ಕಾರದ ಮಂತ್ರಿಗಳು ಬಸವರಾಜ ರಾಯರೆಡ್ಡಿಯವರು ಎಲ್ಲೋ ಒಂದು ಹೇಳಿಕೆಯನ್ನು ಕೊಟ್ಟಿರುವುದನ್ನು ಗಮನಿಸಿದ್ದೇನೆ. ಇವತ್ತು ಯುವಕರು, engineering students ಗೆ ಯಾರು ಉತ್ತೀರ್ಣರಾಗಿ ಹೊರಗೆ ಬರುತ್ತಿದ್ದಾರೆ ಅವರಲ್ಲಿ ಶೇಕಡ 6.8% ಅಭ್ಯರ್ಥಿಗಳಿಗೆ ಮಾತ್ರ ಉದ್ಯೋಗ ಸಿಗುತ್ತಿದೆ ಎಂದು ನಮ್ಮ ಬಸವರಾಜ ರಾಯರೆಡ್ಡಿಯವರು ಎಲ್ಲೋ ಒಂದು ಕಡೆ ಹೇಳಿಕೆಯನ್ನು ಕೊಟ್ಟಿರುವುದನ್ನು ನಾನು ಗಮನಿಸಿದೆ. ಕರ್ನಾಟಕ ರಾಜ್ಯದಲ್ಲಿ ಯಾವ engineering sector ನಲ್ಲಿ students ಸುಮಾರು 40-50 ಸಾವಿರ ಯುವಕರು ಹೊರಗೆ ಬರುತ್ತಾರೆ. ಇವತ್ತು 6.8% ಯುವಕರಿಗೆ ಉದ್ಯೋಗ ದೊರಕುತ್ತಿದೆ. ಇನ್ನುಳಿದ 90% ಯುವಕರಿಗೆ ಉದ್ಯೋಗ ಇಲ್ಲವೆಂದರೆ ಅಲ್ಲಿಗೆ ನಾವು ಎಲ್ಲಿ ಹೋಗುತ್ತಿದ್ದೇವೆ. ಇವತ್ತು ಯುವಕರಿಗೆ ಉದ್ಯೋಗವನ್ನು ಸೃಷ್ಟಿ ಮಾಡುವುದರಲ್ಲಿ ಯಾವರೀತಿ ಎಡವಿದ್ದೇವೆ. ಇವತ್ತು ಬಿಜೆಪಿ ಸರ್ಕಾರ ಇದ್ದಾಗಲೂ Global Investors Meet ಮಾಡಿದರು. ಮೊನ್ನೆ ಕಾಂಗ್ರೆಸ್ ಸರ್ಕಾರ ಬಂದ ಮೇಲೆಯೂ ಈ Global Investors Meet ಏನು ಮಾಡಿದ್ದೀರಿ, ಬಹುಶ: ಅದಕ್ಕೆ 30 ಕೋಟಿ ರೂಪಾಯಿಗಳು, 50 ಕೋಟಿ ರೂಪಾಯಿಗಳು ಹಣ ಖರ್ಚು ಮಾಡಿರುವಂಥ ಘಟನೆಗಳೇನಿವೆ ಅದೇ ಸರ್ಕಾರಕ್ಕೆ ಗಟ್ಟಿಯಾಗಿ ಉಳಿದುಕೊಂಡಿರುವ ಆಸ್ತಿ ಎಂದು ನನ್ನ ಅಭಿಪ್ರಾಯವಾಗಿದೆ. ಹಿಂದೆ 700-800 ಜನ ಅರ್ಜಿಗಳನ್ನು ಹಾಕಿದ್ದರು ತಾವು ಹೇಳುತ್ತಿದ್ದಿರಿ. ಆದರೆ ಇವತ್ತು ಇವೆಲ್ಲ extremeಗೆ ಹೊರಟು ಹೋಗಿವೆ. ನಾವೇನು ನಿರೀಕ್ಷೆ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಹಿಂದಿನ 10-15 ವರ್ಷಗಳಲ್ಲಿ ಹಲವಾರು ಜನ investors ನಾವು ಇಲ್ಲಿ invest ಮಾಡುತ್ತೇವೆಂದು ಹಲವಾರು ಕ್ಷೇತ್ರಗಳಲ್ಲಿ ಹಣ ತೊಡಗಿಸುತ್ತೇವೆಂದು ಹೇಳಿದಾಗ ಅದಕ್ಕೆ ನಾವೇನು permission ಕೊಟ್ಟಿದ್ದೇವೆ. ಅವೆಲ್ಲ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಎಷ್ಟರಮಟ್ಟಿಗೆ implementation ಆಗಿದೆ. ಇದರ ಬಗ್ಗೆ ಸರ್ಕಾರ ಉತ್ತರ ಕೊಡುವ ಸಂದರ್ಭದಲ್ಲಿ ಹೇಳಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇಂಥ ಒಂದು ಪರಿಸ್ಥಿತಿಯಲ್ಲಿ ಯಾವ ಒಂದು ಸರ್ಕಾರ ಇವತ್ತು ಉದ್ಯೋಗವನ್ನು ಸೃಷ್ಟಿ ಮಾಡುವುದರಲ್ಲಿ, ಸರ್ಕಾರಿ ಕೆಲಸಗಳನ್ನು ಕೊಡುವುದರಲ್ಲಿ ಎಷ್ಟರಮಟ್ಟಿಗೆ ಸರ್ಕಾರ ಇವತ್ತು ಈ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಕೆಲಸ ನಿರ್ವಹಣೆ ಮಾಡುತ್ತಿದ್ದಾರೆ ಎನ್ನುವುದಕ್ಕೆ ಒಂದು ವಿಷಯವನ್ನು ಪ್ರಸ್ತಾಪಿಸಬಯಸುತ್ತೇನೆ. ಬಸವರಾಜ ಬೊಮ್ಮಾಯಿಯವರು ಉದ್ಯೋಗದ ವಿಷಯದಲ್ಲಿ ಹೇಳುತ್ತಿದ್ದರು. ಇವತ್ತು ಏನೇನು ಆಗುತ್ತಿದೆ ಎಂಬ ಬಗ್ಗೆ ಸದನದ ಗಮನವನ್ನು ಸೆಳೆದಿದ್ದೀರಿ. ಸರ್ಕಾರದಲ್ಲಿ ಖಾಲಿ ಇರುವಂಥ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಸರ್ಕಾರಕ್ಕೆ ಮನಸ್ಸಿಲ್ಲ ಎಂಬುದು ನನ್ನ ಅಭಿಪ್ರಾಯವಾಗಿದೆ. ನಮ್ಮ ವಿತ್ತೀಯ ನಿರ್ವಹಣೆ ಮತ್ತು ಪರಿಶೀಲನಾ ಸಮಿತಿಯನ್ನು ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಇಟ್ಟುಕೊಂಡಿದ್ದಾರೆ. ಮಧ್ಯಮಾವಧಿ ವಿತ್ತೀಯ ಯೋಜನೆ ಅಧ್ಯಾಯ-1 ಕಂಡಿಕೆ 18(ಸಿ)ಯಲ್ಲಿ ಹೊಸ ಉದ್ಯೋಗಗಳ ಸೃಜನೆ ಮತ್ತು ಖಾಲಿ ಹುದ್ದೆಗಳನ್ನು ತುಂಬುವುದಕ್ಕೆ ನಿಯಂತ್ರಣಕ್ಕೆ ಒಳಪಡಿಸುವ ಅವಶ್ಯಕತೆಯನ್ನು ಈ ಒಂದು ವಿತ್ತೀಯ ನಿರ್ವಹಣೆ ಮತ್ತು ಪರಿಶೀಲನಾ ಸಮಿತಿಯವರು ನಿಯಂತ್ರಣಕ್ಕೆ ಒಳಪಡಿಸುವ ಅವಶ್ಯತೆ ಬಗ್ಗೆ ಏನು ಹೇಳುತ್ತಾರೆ, ಆದರೆ ಸಾಮರ್ಥ್ಯವನ್ನು ಉತ್ತಮಪಡಿಸುವ ಸಲುವಾಗಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಮಧ್ಯಮಾವಧಿ ಮುನ್ನೋಟ ಕೈಗೊಳ್ಳಲು ಮಾರ್ಗವನ್ನು ಆರ್ಥಿಕ ಇಲಾಖೆ ಅನ್ವೇಷಿಸಬೇಕೆಂದು ಸಲಹೆ ಕೊಡುತ್ತಾರೆ. ಇವರು ಮಧ್ಯಮಾವಧಿ ವರದಿಯನ್ನು ಕೊಟ್ಟಿದ್ದಾರೆ. ಇದರ ಜೊತೆಗೆ ಕಂಡಿಕೆ-20 ರಲ್ಲಿ ``ಹಣಕಾಸು ಮಂತ್ರಿಗಳಾಗಿರುವ ಮಾನ್ಯ ಮುಖ್ಯಮಂತ್ರಿಗಳು ವಿತ್ತೀಯ ನಿರ್ವಹಣೆ ಪರಿಶೀಲನಾ ಸಮಿತಿಯ ಈ ಶಿಫಾರಸ್ಸುಗಳನ್ನು ಅನುಮೋದಿಸಿರುತ್ತಾರೆ.`` ಆದ್ದರಿಂದ ಇಲ್ಲಿ ಸರ್ಕಾರದ ಹುದ್ದೆಗಳಿಗೆ ಭರ್ತಿ ಮಾಡತಕ್ಕಂಥ ವಿಷಯದಲ್ಲಿ ಈ ಸರ್ಕಾರ ಸಂಪೂರ್ಣವಾಗಿ ಹಿಂದೆ ಸರಿಯುವಂಥ ತೀರ್ಮಾನಗಳನ್ನು ಮಾಡಿಕೊಂಡಿದ್ದಾರೆ. ಇಲ್ಲಿ ನೀವೇ ಕೊಟ್ಟಿರುವಂಥ ವರದಿಯನ್ನು ಗಮನಿಸಿದಾಗ, ಸರ್ಕಾರದ ಹುದ್ದೆಗಳನ್ನು ಭರ್ತಿ ಮಾಡುವ ಮನಸ್ಸು ಈ ಸರ್ಕಾರಕ್ಕೆ ಇಲ್ಲವೆಂದು ನನ್ನ ಅಭಿಪ್ರಾಯವಾಗಿದೆ. ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ನಾನು ತರುವುದೇನೆಂದರೆ ಇಲ್ಲಿ ಎಲ್ಲೋ ಒಂದು ಕಡೆ ನಾನು ಮೊದಲೇ ಹೇಳಿದ ಹಾಗೆ ಅವರಿಗಿರುವಂಥ ಅನುಭವ. ಬಹುಶ: ಅವರಿಂದ ನಾನು ಈ ರೀತಿಯ ಬಜೆಟ್ ಅನ್ನು ನಿರೀಕ್ಷೆ

ಮಾಡಿರಲಿಲ್ಲವೆಂಬ ಮಾತನ್ನು ಹೇಳಿದೆ. ಇಲ್ಲಿ ತೆರಿಗೆ ಪ್ರಯತ್ನದಲ್ಲಿ ಎಲ್ಲೊ ಒಂದು ಕಡೆ ಈ ಸರ್ಕಾರ ಇನ್ನು ದೊಡ್ಡ ಮಟ್ಟದಲ್ಲಿ ಯಾವ ಒಂದು demonetization ವಿಷಯದಲ್ಲಿ Governor's address ಮೇಲೆ ಮಾತನಾಡಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಅಂದು ಏನೂ ಚರ್ಚೆ ಮಾಡಿರಲಿಲ್ಲ. ಆದರೆ ಈಗ ಈ ಬಜೆಟ್‌ನಲ್ಲಿ demonetizationನಿಂದ ಸ್ವಲ್ಪ effect ಆಗಿರುವ ಬಗ್ಗೆ ಒಂದು ಪ್ಯಾರಾ ಸೇರಿಸಿದ್ದಾರೆ. ಎರಡು ಮೂರು ಸಾಲುಗಳನ್ನು ಸೇರಿಸಿದ್ದಾರೆ. ಇವತ್ತು ನಾವು demonetization effect ಹಿನ್ನೆಲೆಯಲ್ಲಿ ಅಬಕಾರಿ ತೆರಿಗೆ, ವಾಹನ ತೆರಿಗೆ ಮತ್ತು ವಾಣಿಜ್ಯ ತೆರಿಗೆಯಲ್ಲಿ ಅವರ ನಿರೀಕ್ಷೆಯಂತೆ ಗುರಿ ಮುಟ್ಟಿದ್ದರು. ಇನ್ನು ಹೆಚ್ಚಿನ ರೀತಿಯಲ್ಲಿ ಹಣ ಸಂಗ್ರಹಣೆ ಮಾಡುವುದಕ್ಕೆ ಅವಕಾಶವಿತ್ತು. ಅದರಲ್ಲಿ ಎಡವಿದ್ದಾರೆ. ಅಧ್ಯಕ್ಷರೆ, 2015-16, 2016-17 ನೇ ಸಾಲಿನಲ್ಲಿ GSDP ಅನುಪಾತ ಒಟ್ಟಾರೆ ಸಂಗ್ರಹಣೆ 2012ನೇ ಸಾಲಿನಲ್ಲಿ 7.26% ಮತ್ತು 7.36% ಆಗಿತ್ತು. 2013-14 ಮತ್ತು 2014-15ನೇ ಸಾಲಿನಲ್ಲಿ ಇದು 7.65% ಹಾಗೂ 7.63% ಇತ್ತು. GSDP ಬೆಳೆದಂತೆ ತೆರಿಗೆ ಪ್ರಯತ್ನ ಕೂಡ ಹೆಚ್ಚಾಗಬೇಕು. ಆದರೆ ರಾಜಸ್ವ ಸಂಗ್ರಹಣೆ ಸರ್ಕಾರದ ನಿರ್ಲಕ್ಷ್ಯ ಮತ್ತು ಸೋರಿಕೆಯಿಂದ ನಿರೀಕ್ಷಿತ ಮಟ್ಟದಲ್ಲಿ ರಾಜಸ್ವ ಸಂಗ್ರಹಣೆ ಆಗುತ್ತಿಲ್ಲವೆನ್ನುವುದನ್ನು ನಾವು ಇಲ್ಲಿ ಗಮನಿಸಬಹುದು. ಕರ್ನಾಟಕ ಆರ್ಥಿಕ ಸಮೀಕ್ಷೆ ಮತ್ತು ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ 2016-17ನೇ ಸಾಲಿನ ತೆರಿಗೆ ಪ್ರಯತ್ನ ಕ್ರಮವಾಗಿ 6.92% ಮತ್ತು 7.36% ಎಂದು ಇದೆ. ಆದರೆ ಇದನ್ನು ಆರ್ಥಿಕ ಸಮೀಕ್ಷೆ ವರದಿ ಸರಿಯಿದೆಯೋ ಇಲ್ಲವೇ ಮಧ್ಯಮಾವಧಿ ವಿತ್ತೀಯ ಸಮೀಕ್ಷೆ ವರದಿ ಸರಿಯಿದೆಯೋ ಎಂಬ ಬಗ್ಗೆ ಸರ್ಕಾರ ಉತ್ತರ ಕೊಡಬೇಕಾದರೆ ಗಮನ ಸೆಳೆಯಬೇಕು. ಅಧ್ಯಕ್ಷರೆ, ಇಲ್ಲಿ ಸರಿಯಾದ ರೀತಿಯಲ್ಲಿ ತೆರಿಗೆಯನ್ನು ಸಂಗ್ರಹಣೆ ಮಾಡುವಲ್ಲಿ ಎಡವಿದ್ದಾರೆ. ಇನ್ನು 2000 ಕೋಟಿ ರೂಪಾಯಿಗಳ ತೆರಿಗೆಯನ್ನು ಸಂಗ್ರಹಿಸಲು ಅವಕಾಶಗಳೇನಿತ್ತು , ಈ ತೆರಿಗೆ ಸಂಗ್ರಹದಲ್ಲಿಯೂ ಸರ್ಕಾರ ಎಡವಿದ್ದಾರೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಈ ರಾಜ್ಯದಲ್ಲಿ ಈ ಸರ್ಕಾರ ಬಂದ ಮೇಲೆ ಸಾಲವನ್ನು ಮಾಡತಕ್ಕಂಥದ್ದರಲ್ಲಿ ದೊಡ್ಡ ಮಟ್ಟದ ಕೀರ್ತಿ ಸಿದ್ದರಾಮಯ್ಯನವರ ಸರ್ಕಾರಕ್ಕೆ ಹೋಗಬೇಕೆಂದು ಚರ್ಚೆ ಮಾಡುತ್ತಾರೆ. ಬಹುಶ: ಮೊನ್ನೆ ಜಗದೀಶ್ ಶೆಟ್ಟರ್‌ರವರು ಮಾತನಾಡಬೇಕಾದರೆ ಈ ಸಾಲ ಮನ್ನಾ ಬಗ್ಗೆ ಚರ್ಚೆ ಮಾಡಿದಾಗ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಟ್ಟಿರುವುದನ್ನು ಗಮನಿಸಿದ್ದೇನೆ. ಸರ್ಕಾರ ಸಾಲ ಮಾಡುವಾಗ availability ಮತ್ತು



ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

affordability ಆಧಾರದ ಮೇಲೆ ಸಾಲ ಮಾಡುತ್ತೇವೆಂಬ ಮಾತನ್ನು ಅವರು ಹೇಳಿದ್ದಾರೆ. ನಾನು ಸಾಲದ ಬಗ್ಗೆ ನಾನು ಚರ್ಚೆ ಮಾಡುವುದಾದರೆ ಮುಂದೆ 2017-18 ಕ್ಕೆ 2,42,420 ಕೋಟಿ ರೂಪಾಯಿಗಳವರೆಗೆ ಸಾಲದ ಹೊರೆ ಇರುವಂಥ ಪರಿಸ್ಥಿತಿಯನ್ನು ಈ ಸರ್ಕಾರವೇನು ಇವತ್ತು ದೂಡಿಕೊಂಡು ಹೋಗಿದ್ದಾರೆ. ಇವತ್ತು ಈ ರಾಜ್ಯದ 6 ಕೋಟಿ ಜನರ ಪ್ರತಿಯೊಬ್ಬರ ತಲೆಯ ಮೇಲೆ ಸಾಲದ ಹೊರೆ ತಲಾ 37,295/- ರೂಪಾಯಿಗಳು. ಸರ್ಕಾರ ನಾವು Karnataka Fiscal Responsibility Act ಒಳಗೆ ನಾವು ಸಾಲ ಮಾಡಿದ್ದೇವೆ ಎಂದು ಹೇಳುತ್ತದೆ. ಬಸವರಾಜ ಬೊಮ್ಮಾಯಿಯವರು ಹೇಳಿದ ರೀತಿಯಲ್ಲಿ GSDP ನಿಗದಿ ಮಾಡಿ ವರದಿ ಕೊಡುವಂಥದ್ದು manipulation ಎಂದು ಏನು ಹೇಳುತ್ತಾರೆ, ಬಹುಶಃ ಅದಕ್ಕೂ ಸಹ ನಾನು ನನ್ನ ಸಹಮತ ವ್ಯಕ್ತಪಡಿಸಬೇಕಾಗುತ್ತದೆ. ಸಾಲದ ಬಗ್ಗೆ ಹೇಳುವಾಗ, GSDPಯಲ್ಲಿ 18% ಇದೆಯೋ, 24% ಇದೆಯೋ ಅಥವ 25% ದಾಟಿದೆಯೋ ಅದರ ಬಗ್ಗೆ ಈ ಅಂಕಿಅಂಶಗಳ ಆಧಾರದ ಮೇಲೆ ಈಗ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಪ್ರಮುಖವಾಗಿ ರಾಜ್ಯ ಸರ್ಕಾರ ಮಾಡುತ್ತಿರುವಂಥ ಸಾಲ, ಮಾರುಕಟ್ಟೆಯಲ್ಲಿ ಸಾಲ ಮಾಡುತ್ತಿರುವಂಥದ್ದು ಇವತ್ತು ಬಡ್ಡಿಯ ದರ ಎಷ್ಟಾಗುತ್ತದೆ ಎಂದು ನಾವು ಯೋಚನೆ ಮಾಡಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ:- GSDPದು ಇದು ಇಂಗ್ಲಿಷ್‌ನಲ್ಲಿ third pageನಲ್ಲಿ.. ಇಲ್ಲ ಸರ್ ನಾನು technical point ಬಗ್ಗೆ ಮಾತ್ರ ಹೇಳುತ್ತೇನೆ. ಬೇರೆ ಏನಿಲ್ಲ. 2016-17ಕ್ಕೆ as conveyed by Ministry of Finance, Government of India, 11,17,334-00 ರೂಪಾಯಿಗಳಿವೆ. ಆದರೆ ಬಜೆಟ್ estimate ನಲ್ಲಿ ತಾವು ಅಲ್ಲಿ 11 ಲಕ್ಷ ರೂಪಾಯಿಗಳಿದ್ದರೆ ನೀವು 12 ಲಕ್ಷ ರೂಪಾಯಿಗಳನ್ನು adopt ಮಾಡಿಕೊಂಡಿದ್ದೀರಿ.

(ಮುಂದು)

27.03.2017/1.30(19)DL.PS

ಶ್ರೀ ಬಸವರಾಜ್ ಬೊಮ್ಮಾಯಿ( ಮುಂದು . . . . .)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ನೀವು calculation ಹೇಗೆ ತೆಗೆದುಕೊಳ್ಳುತ್ತೀರಿ ಅದರ ಆಧಾರದ ಮೇಲೆ percentage ಅನ್ನು ಈ ಬಜೆಟ್‌ನಲ್ಲಿ ಹೇಳುತ್ತೀರಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಮಾಡುತ್ತಿರುವಂತಹ ಸಾಲದ ವಿಷಯದಲ್ಲಿ ಈ ಸರ್ಕಾರ ಮಾಡುತ್ತಿರುವಂತಹ ಶೇಕಡವಾರು ಸಾಲಗಳಲ್ಲಿ ಮಾರುಕಟ್ಟೆ ಸಾಲಗಳ ಪ್ರಮಾಣ ಶೇಕಡಾ 71. ಹಣಸಕಾಸಿನ ಸಂಸ್ಥೆಗಳಿಂದ ಸಾಲಗಳು ಶೇಕಡಾ 4. ರಾಷ್ಟ್ರೀಯ ಸಣ್ಣ ಉಳಿತಾಯ ಶೇಕಡಾ 15. ಭಾರತ ಸರ್ಕಾರದಿಂದ ಸಾಲಗಳ ಪ್ರಮಾಣ ಶೇಕಡಾ 10. ಅತಿ ಹೆಚ್ಚು ಬಡ್ಡಿ ನೀಡಿ ಮುಕ್ತ ಮಾರುಕಟ್ಟೆಯಿಂದ ಸಾಲವನ್ನು ತೆಗೆದುಕೊಳ್ಳುತ್ತಿದ್ದಾರೆ. ಅದರ ಫಲ, ಮುಂದೆ ನಾವು ಎಲ್ಲಿಗೆ ಹೋಗುತ್ತೇವೆ? ಒಟ್ಟು ಸಾಲದಲ್ಲಿ ಇದರ ಪ್ರಮಾಣ ಶೇಕಡಾ 71. LIC, RBI ಮತ್ತು NABARD ನಿಂದ ಸಾಲ ಪಡೆಯುವುದನ್ನು ಬಿಟ್ಟು, ಹೆಚ್ಚು ಬಡ್ಡಿ ನೀಡಿ ಸಾಲ ಪಡೆಯುತ್ತಿರತಕ್ಕಂಥದ್ದು ಉತ್ತಮ ಆರ್ಥಿಕತೆಯ ಲಕ್ಷಣವಲ್ಲ ಎನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಮೀಟರ್ ಬಡ್ಡಿ ವ್ಯವಹಾರ ನಡೆಯತಕ್ಕಂತಹ ರೀತಿಯಲ್ಲಿ ಮಾರುಕಟ್ಟೆಯಲ್ಲಿ ಸಾಲವನ್ನು ಮಾಡುವುದರ ಮೂಲಕ ಕರ್ನಾಟಕದ ಆರೂವರೆ ಕೋಟಿ ಕನ್ನಡಿಗರ ಮೇಲೆ ಈ ಮೀಟರ್ ಬಡ್ಡಿಯನ್ನು ಹಾಕತಕ್ಕಂತಹ ಪರಿಸ್ಥಿತಿಗೆ ಬಂದು ನಿಲ್ಲಿಸಿದ್ದೇವೆ. ಇವೆಲ್ಲವನ್ನೂ ಗಮನಿಸಿದಾಗ ರಾಜ್ಯದ ಮುಖ್ಯಮಂತ್ರಿಗಳು ಈ ಆರ್ಥಿಕ ಶಿಸ್ತನ್ನು ಕಾಪಾಡತಕ್ಕಂಥದ್ದರಲ್ಲಿ ವಿಫಲರಾಗಿದ್ದಾರೆ ಎಂದು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ದೇಶದಲ್ಲಿ GST ಬಗ್ಗೆ ದೊಡ್ಡ ಮಟ್ಟದಲ್ಲಿ ಚರ್ಚೆ ಆಗುತ್ತಿದೆ. ನಾನು ಇದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. GST implementation ಗೆ ಎಲ್ಲಾ ರೀತಿಯ ತೀರ್ಮಾನಗಳನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಮಾಡಿಕೊಂಡಿವೆ. ನಾನು, GST implementationಗಿಂತ ಮುಂಚೆ ಬಹುಶ: ಸದನದ ಕಲಾಪವನ್ನು ಕರೆಯುತ್ತಾರೆ ಎಂದು ಒಂದು ಅಭಿಪ್ರಾಯದಲ್ಲಿದ್ದೆ. ಯಾವುದೋ ಒಂದು ಚಾನೆಲ್‌ನಲ್ಲಿ panel discussion ನಲ್ಲಿ ಈ GST implementation ಆದರೆ ಈ ವರ್ಷವೇ ರಾಜ್ಯ ಸರ್ಕಾರಕ್ಕೆ ರೂ. 2,25,000 ಕೋಟಿ ಖರ್ಚು ಮಾಡತಕ್ಕಂತಹ ಶಕ್ತಿ ಬರುತ್ತದೆ ಎಂದು ಚರ್ಚೆ ಮಾಡುತ್ತಿದ್ದರು. ನನಗೆ ಆಶ್ಚರ್ಯ ಆಯಿತು. GST implementation ಮಾಡಬೇಕೆಂಬ ಕಾರ್ಯಕ್ರಮವನ್ನು ತಂದಿರುವ ಬಗ್ಗೆ ಕಾಂಗ್ರೆಸ್ ಸರ್ಕಾರ ಆಡಳಿತದಲ್ಲಿದ್ದಾಗ ಇದನ್ನು

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

implement ಮಾಡುವುದಕ್ಕೆ ಹೊರಟಿದ್ದಾರೆ ಎಂದು ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಸಹಮತ ವ್ಯಕ್ತಪಡಿಸಿದ್ದಾರೆಯೇ? ಕಾಂಗ್ರೆಸ್ ಸರ್ಕಾರ, UPA ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಈ GST ಅನ್ನು implement ಮಾಡತಕ್ಕಂತಹ ಒಂದು ಯೋಜನೆಯನ್ನು ತರುವುದಕ್ಕೆ ಹೋದಾಗ ಅವತ್ತಿನ ದಿವಸ ಗುಜರಾತಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ನರೇಂದ್ರ ಮೋದಿ ಅವರು ಈ GST ಅನ್ನು ವಿರೋಧ ಮಾಡಿದರು. ಆದರೆ, ಅವರು ಪ್ರಧಾನ ಮಂತ್ರಿಗಳಾದ ಮೇಲೆ ಅವರು GST ಅನ್ನು implementation ಮಾಡುವಂಥದ್ದಕ್ಕೆ ತರಾತುರಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಏನು ಹೊರಟಿದ್ದಾರೆ ಅದಕ್ಕೆ ನಮ್ಮ ರಾಜ್ಯ ಸರ್ಕಾರವೂ ಕೈಜೋಡಿಸಿದೆ.

**(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)**

ನನಗೆ ಇರುವ ಮಾಹಿತಿ ಪ್ರಕಾರ, ಇದು ಬಹುಶ: ನಮ್ಮ ರಾಜ್ಯ ಸರ್ಕಾರಕ್ಕೆ ಇನ್ನು ಮುಂದಿನ ದಿನಗಳಲ್ಲಿ GST implementation ಆದಮೇಲೆ ನಾವು ಯಾವುದೇ ಹೊಸ ಕಾರ್ಯಕ್ರಮಗಳನ್ನು ನಮಗೆ ಬೇಕಾದಂತಹ ರೀತಿಯಲ್ಲಿ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತಿನ ದಿವಸ Excise Department ನಲ್ಲಿ ಬರತಕ್ಕಂತಹ ತೆರಿಗೆ ಒಂದು ಹೊರತುಪಡಿಸಿ ಯಾವುದೇ ತೆರಿಗೆಗಳನ್ನು ಕರ್ನಾಟಕ ರಾಜ್ಯ ಸರ್ಕಾರವು collection ಮಾಡುವುದಕ್ಕೆ ಸಾಧ್ಯವಿಲ್ಲ. ಕೇವಲ Excise Department ನಲ್ಲಿ ಮಾತ್ರ ನಮಗೆ ಏನು ಆದಾಯ ಇದೆ ಅದರಲ್ಲಿ ನಾವು ಸ್ವಂತ ತೆರಿಗೆ collection ಮಾಡತಕ್ಕಂತಹ ಶಕ್ತಿ ನಮಗಿದೆ ಹೊರತು ಇನ್ನು ಉಳಿದಿದ್ದು ಎಲ್ಲಾ ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ನಾವು ಯಾವುದೇ ಒಂದು ಕಾರ್ಯಕ್ರಮವನ್ನು ಮಾಡಬೇಕಾದರೆ ಮತ್ತು ಯಾವುದಾದರೂ assistance ಬೇಕಾದರೆ ನಾವು ಕೇಂದ್ರ ಸರ್ಕಾರದ ಮುಂದೆ ಹೋಗಿ ನಿಂತುಕೊಳ್ಳಬೇಕಾಗುತ್ತದೆ. ಅವರ ಮುಲಾಜಿನಲ್ಲಿ ರಾಜ್ಯ ಸರ್ಕಾರ ನಡೆಯಬೇಕಾಗುತ್ತದೆ. ಬಹುಶ: ಮುಂದಿನ ದಿನಗಳಲ್ಲಿ ನನ್ನ ಅಭಿಪ್ರಾಯದ ಪ್ರಕಾರ ಹಾಗೂ ನಾನು ಕೆಲವರೊಂದಿಗೆ ಚರ್ಚೆ ಮಾಡಿ ಮಾಹಿತಿಯನ್ನು ಸಂಗ್ರಹ ಮಾಡಿರುವ ಪ್ರಕಾರ GST implementation ಆದ ಮೇಲೆ ಒಂದು ರಾಜ್ಯದ ಮುಖ್ಯಮಂತ್ರಿಗಳ ಒಂದು ಅಧಿಕಾರ ಒಬ್ಬ ಮುನ್ಸಿಪಾಲಿಟಿ ಅಧ್ಯಕ್ಷನಿಗಿಂತಲೂ ಕಡೆಯಾಗಿ ಹೋಗುತ್ತದೆ ಎಂದು ಕೆಲವರು ಹೇಳುತ್ತಾರೆ. ಅದಕ್ಕಾಗಿ ಅದರ ಬಗ್ಗೆ ಹೆಚ್ಚಿನ ಚರ್ಚೆ ಆಗಬೇಕಾಗಿತ್ತು ಎನ್ನುವುದು ನನ್ನ ಅಭಿಪ್ರಾಯ. ಈ ಸರ್ಕಾರದ ಪ್ರತಿ ವರ್ಷದ ಕೆಲವು ಬಜೆಟ್ ಏನಿದೆ

ಅದರ ಬಗ್ಗೆ ನಾನು ಸಮಯದ ಅಭಾವದಿಂದ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. 2012-13ರಿಂದ ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ಪ್ರತಿ ವರ್ಷ ಸರ್ಕಾರದಿಂದ ಅನುದಾನ ಬಿಡುಗಡೆ ಆಗಿದೆ. 2012-13, 2013-14, 2014-15, 2015-16 ಮತ್ತು 2016-17ನೇ ಸಾಲಿನಲ್ಲಿ ಒಟ್ಟು ಐದು ವರ್ಷಕ್ಕೆ ರೂ.26,473 ಕೋಟಿ ಅನುದಾನ ಬಿಡುಗಡೆ ಆಗಿದೆ. ಅದರಲ್ಲಿ ರೂ. 18,784 ಕೋಟಿ ಹಣ ವ್ಯಯ ಮಾಡಿದ್ದಾರೆ. ಬಳಕೆ ಆಗದೆ ಉಳಿದಿರತಕ್ಕಂತಹ ಹಣ ರೂ.7,689 ಕೋಟಿ. ಇಲ್ಲಿ ಕಳೆದ ಐದು ವರ್ಷದಲ್ಲಿ ಬಿಡುಗಡೆ ಆದ ಅನುದಾನವನ್ನು ಸಂಪೂರ್ಣವಾಗಿ ಉಪಯೋಗ ಮಾಡದೆ ರೂ. 7,689 ಕೋಟಿ ಹಣವು ಉಳಿದಿರುತ್ತದೆ. ಸರ್ಕಾರವು ಯಾವ ರೈತ ಸಾಯುತ್ತಿದ್ದಾನೆ, ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ ಆತನ ಕಷ್ಟಕ್ಕೆ ಸ್ಪಂದಿಸುತ್ತಿದೆಯೇ? ಉದಾಹರಣೆಗೆ, ಉತ್ತರ ಕರ್ನಾಟಕದಲ್ಲಿ ಕಳೆದ ಹತ್ತು ವರ್ಷಗಳಿಂದ ದ್ರಾಕ್ಷಿ ಬೆಳೆಗಾರರು ಮನವಿ ಸಲ್ಲಿಸುತ್ತಿದ್ದಾರೆ. ದಾಳಿಂಬೆ ಬೆಳೆಗಾರರು ಅರ್ಜಿಯನ್ನು ಹಿಡಿದುಕೊಂಡು ಬಂದರು. ಕಳೆದ ಹತ್ತು ವರ್ಷಗಳಲ್ಲಿ ಅವರು ಪಡೆದಂತಹ ಸುಮಾರು ರೂ.600 ಕೋಟಿ ಸಾಲವನ್ನು ತೀರಿಸುವುದಕ್ಕೆ ಆಗದೆ ಪ್ರತಿ ಸರ್ಕಾರಗಳ ಮುಂದೆ ಗಮನ ಸೆಳೆದರು. ತಾವು ರೂ.7,689 ಕೋಟಿ ಹಣವನ್ನು ಏನು ಖರ್ಚು ಮಾಡದೆ ಹಾಗೆ ಉಳಿಸಿಕೊಂಡಿದ್ದೀರಿ ಆ ಹಣವನ್ನು ಆ ರೈತರಿಗೆ ಕೊಟ್ಟಿದ್ದರೆ ಆತ ರೈತರು ಉಳಿಯುತ್ತಿರಲಿಲ್ಲವೇ? ಸುಮಾರು 33-34 ಜನ ದ್ರಾಕ್ಷಿ ಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೊನ್ನೆ ದಿವಸ ಅಕಾಲಿಕ ಮಳೆಯಲ್ಲಿ ರೈತರು ಬೆಳೆದಂತಹ ಸುಮಾರು ರೂ.400 ಕೋಟಿ ಅಷ್ಟು ದ್ರಾಕ್ಷಿ ಬೆಳೆ ಸಂಪೂರ್ಣವಾಗಿ ನಾಶ ಆಗಿದೆ. ಗುಲಬರ್ಗಾ, ಬಿಜಾಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ತೊಗರಿಬೆಳೆ ಬೆಳೆಯತಕ್ಕಂತಹ ರೈತರು ಮಾರಾಟ ಮಾಡುವುದಕ್ಕೆ ಆಗದೆ ಖರೀದಿ ಕೇಂದ್ರಗಳಲ್ಲಿ ಅದನ್ನು ಖರೀದಿ ಮಾಡದೆ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಬಿಡುಗಡೆ ಆದ ಅನುದಾನದಲ್ಲಿ ರೂ.7,689 ಕೋಟಿ ಅನುದಾನ ಖರ್ಚು ಆಗದೆ ವಾಪಸ್ಸು ಬರುತ್ತದೆ. ರಾಜ್ಯ ಸರ್ಕಾರಕ್ಕೆ ಇದೇ ಹಣವನ್ನು ರೈತರಿಗೆ ಕೊಡುವುದಕ್ಕೆ ಸಾಧ್ಯವಿರಲಿಲ್ಲವೆ? ಇದೇ ಹಣವನ್ನು ರೈತರ ಸಾಲ ಮನ್ನಾ ಮಾಡುವುದಕ್ಕೆ ನೀವು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುತ್ತಿರಲಿಲ್ಲವೇ? ಆವರ್ತ ನಿಧಿ ಎಂದು ಹೇಳುತ್ತಾರೆ ಅಷ್ಟೆ. ಈರುಳ್ಳಿ ಬೆಳೆಗಾರರು ಅದಕ್ಕೆ grading ಎಂದು ಮಾಡಿಕೊಂಡರು. ಪ್ರತಿಯೊಂದಕ್ಕೂ ಕೆಲವೊಂದು ಕಂಡೀಷನ್‌ಗಳು. ಚೀಲ ಇಲ್ಲದೆ ಇರುವುದರಿಂದ ತೊಗರಿ ಕೊಂಡುಕೊಳ್ಳುವುದಕ್ಕೆ ಆಗುತ್ತಿಲ್ಲ ಎಂದು ಕಾರಣ ಕೊಡುತ್ತಾರೆ. ಯಾವ ರೀತಿಯಲ್ಲಿ ಸರ್ಕಾರ

ನಡೆಯುತ್ತಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ಹಿಂದಿನ ಬಿಜೆಪಿ ಸರ್ಕಾರದಲ್ಲಿಯೂ ರೈತರನ್ನು ಇಸ್ರೇಲ್, ಚೈನಾಗಳಿಗೆ ಕಳುಹಿಸುತ್ತಿದ್ದರು. ಆದರೆ, ಅಲ್ಲಿ ಹೋಗಿ ರೈತರು ಏನು ಕಲಿತುಕೊಂಡು ಬಂದಿದ್ದಾರೆ? ಇವತ್ತಿನ ದಿವಸ ಸಣ್ಣ ದೇಶಗಳಲ್ಲಿರತಕ್ಕಂತಹ ಒಂದು commitment ನಮ್ಮಂತಹ ರಾಜ್ಯಗಳಲ್ಲಿ ಇಲ್ಲವೆಂದರೆ ನಾವೆಲ್ಲರೂ ತಲೆತಗ್ಗಿಸಬೇಕಾಗುತ್ತದೆ. ವೈಜ್ಞಾನಿಕ ಬೆಳೆ ಕೊಡುತ್ತೇವೆ ಎಂದು 'ಕೃಷಿ ಬೆಲೆ ಆಯೋಗ'ವನ್ನು ಮಾಡಿದರು. ಆ ಕೃಷಿ ಬೆಲೆ ಆಯೋಗದ ಅಧ್ಯಕ್ಷರನ್ನು ಮಾಡಿಕೊಂಡಿರುವುದು, ಅವರಿಗೆ ಒಂದು ಗೂಟದ ಕಾರು ಕೊಟ್ಟಿರುವಂಥದ್ದೇ ಒಂದು ಸಾಧನೆ ಇರಬಹುದೇನೋ? ನನಗೆ ಗೊತ್ತಿಲ್ಲ. ಇವತ್ತಿನ ದಿವಸ ಬೆಳೆ ಬೆಳೆಯುತಕ್ಕಂತಹ ಯಾವ ರೈತ ಉಳಿದುಕೊಂಡಿದ್ದಾನೆ? ಕಳೆದ ವರ್ಷ ರಾಯಚೂರಿನಲ್ಲಿ ರೈತರು ಹತ್ತಿ ಬೆಳೆದರು. ಕಳಪೆ ಬಿತ್ತನೆ ಬೀಜ ಕೊಟ್ಟಿದ್ದರಿಂದ ಹತ್ತಿ ಬೆಳೆಯೇ ಆಗಲಿಲ್ಲ. ರೈತರು ಸಾವಿರಾರು ಕೋಟಿ ರೂ.ಗಳನ್ನು ನಷ್ಟ ಮಾಡಿಕೊಂಡರು. ಆದರೆ, ಸರ್ಕಾರ ಆ ರೈತರ ನೆರವಿಗೆ ಬರಲಿಲ್ಲ. ಕಳೆದ ನಾಲ್ಕು ವರ್ಷದಲ್ಲಿ ಬಿಡುಗಡೆ ಆದ ಅನುದಾನದಲ್ಲಿ ರೂ.7,689 ಕೋಟಿ ಹಣವನ್ನು ಉಪಯೋಗ ಮಾಡಿಕೊಳ್ಳಲಿಲ್ಲ. ಅದೇ ರೀತಿಯಲ್ಲಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯಲ್ಲಿ ಒಟ್ಟು ಬಿಡುಗಡೆ ಆಗಿರತಕ್ಕಂತಹ ಹಣ ರೂ. 9,339 ಕೋಟಿ. ಅದರಲ್ಲಿ ವೆಚ್ಚ ಆಗಿರುವುದು ರೂ. 7,676 ಕೋಟಿ. ಅನುದಾನ ಬಳಕೆ ಮಾಡದೆ ಇರುವುದು ರೂ. 1,662 ಕೋಟಿ. ಶ್ರೀಲಂಕಾದಲ್ಲಿ ಮೀನುಗಾರರಿಗೆ ಕೊಡತಕ್ಕಂತಹ ಪಾಲಿಸಿ ಏನಿದೆ ಅಂಥ ಕಾರ್ಯಕ್ರಮಗಳನ್ನು ಇಲ್ಲಿ ಕೊಟ್ಟಿದ್ದರೆ ಸಾವಿರಾರು ಜನ ಮೀನುಗಾರರಿಗೆ ಉದ್ಯೋಗ ಕೊಡಬಹುದಾಗಿತ್ತು. ಆದರೆ, ಆ ರೀತಿ ಕಾರ್ಯಕ್ರಮಗಳು ಇಲ್ಲಿ ಕಾಣುತ್ತಿಲ್ಲ. ಬಜೆಟ್‌ನಲ್ಲಿ ಇಷ್ಟು ಹಣ ಕೊಟ್ಟಿದ್ದೇವೆ, ಇಷ್ಟು ನಮ್ಮ ಸಾಧನೆ ಎಂದು ಹೇಳಿಕೊಳ್ಳುತ್ತಾರೆ. ಆದರೆ, ವಾಸ್ತವಾಂಶದಿಂದ ನೋಡಿದಾಗ ಈ ಸರ್ಕಾರ ಏನು ಅನುದಾನವನ್ನು ಬಿಡುಗಡೆ ಮಾಡುತ್ತದೆ ಅದರಲ್ಲಿ 20%, 25% ಉಪಯೋಗ ಮಾಡದೆ ಪುನ: ವಾಪಸ್ಸು ಖಜಾನೆಗೆ ಬರತಕ್ಕಂತಹ ಒಂದು ವಾತಾವರಣವನ್ನು ಕಾಣುತ್ತಿದ್ದೇವೆ. ರೇಷ್ಮೆ ಇಲಾಖೆಯಲ್ಲಿ ಚನ್ನಪಟ್ಟಣದಲ್ಲಿ ಒಬ್ಬರು 25 ಕೋಟಿ ರೂ.ಗಳನ್ನು investment ಮಾಡಿದ್ದಾರೆ.

(ಮುಂದು. . . .)

27.03.2017 / 1.40 (20) / JB-PS

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಂದು . . . ): ಮಾನ್ಯ ಉಪಾಧ್ಯಕ್ಷರೆ, ಇವತ್ತು ರೇಷ್ಮೆ ಇಲಾಖೆಗೆ ಸಂಬಂಧಿಸಿದಂತೆ ಚೆನ್ನಪಟ್ಟಣದಲ್ಲಿ ಒಬ್ಬರು ರೂ.25 ಕೋಟಿಗಳನ್ನು investment ಮಾಡಿದ್ದಾರೆ. ಅವರು ಯಾವುದೋ reeling unit ಅನ್ನು ರೂ.25 ಕೋಟಿಗಳ ಬಂಡವಾಳ ಹಾಕಿ 400 ಜನರಿಗೆ ಉದ್ಯೋಗ ಕೊಟ್ಟಿದ್ದಾರೆ. ಇವತ್ತು ಸರ್ಕಾರ ಅಂತಹ ಕಾರ್ಯಕ್ರಮಗಳಿಗೆ ಎಲ್ಲಾದ್ರು ಯುವಕರಿಗೆ encouragement ಕೊಟ್ಟು, subsidy ಮುಖಾಂತರ 500 reeling centersಅನ್ನು ಹಾಕುವುದಕ್ಕೆ ಎಂದು encouragement ಕೊಟ್ಟರೆ ಸಾವಿರಾರು ಜನರಿಗೆ ಉದ್ಯೋಗಗಳನ್ನು ಕೊಡಬಹುದು. ಆದರೆ, ಅಂತಹ ಕಾರ್ಯಕ್ರಮಗಳಿಗೆ ಸರ್ಕಾರ ದುಡ್ಡು ಕೊಡುವುದಿಲ್ಲ. ಇವತ್ತು ಯಾವುದೋ ಅಲ್ಲಿಗೆ ರೂ.5 ಕೋಟಿಗಳು, ಇಲ್ಲಿಗೆ ರೂ.3 ಕೋಟಿಗಳು ಹೀಗೆ ಕೊಟ್ಟುಕೊಂಡು ಅದು ಯಾವುದಕ್ಕೂ ಸಹ ಬಳಕೆಯಾಗದೇ ಇರತಕ್ಕಂತಹ, ಉಪಯೋಗಕ್ಕೆ ಬರದೇ ಇರತಕ್ಕಂತಹ ಕಾರ್ಯಕ್ರಮಗಳಾಗಿದೆ. ಮಾನ್ಯ ಉಪಾಧ್ಯಕ್ಷರೆ, ಇವತ್ತು ಆರ್ಥಿಕ ಇಲಾಖೆಯಲ್ಲಿ ಯಾವ ಒಂದು ಕೆಲಸ ಸೃಷ್ಟಿ ಮಾಡುವುದಕ್ಕೆ ತಾವು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿತ್ತು, ಕಳೆದ 5 ವರ್ಷಗಳಲ್ಲಿ ಆರ್ಥಿಕ ಇಲಾಖೆಗೆ ರೂ.74,611 ಕೋಟಿ ಅನುದಾನವನ್ನು ಬಿಡುಗಡೆ ಮಾಡಿ, ವೆಚ್ಚ ಮಾಡಿರುವಂತಹದ್ದು ರೂ.55,427 ಕೋಟಿಗಳು. ಆರ್ಥಿಕ ಇಲಾಖೆಯಲ್ಲಿ ಬಳಕೆಯಾಗದೇ ಉಳಿದಿರುವಂತಹ ಹಣ ರೂ.19,184 ಕೋಟಿಗಳು. ಅಂದರೆ, ಉದ್ಯೋಗವನ್ನು ಕೊಡತಕ್ಕಂತಹದ್ದರಲ್ಲಿ, ಉದ್ಯೋಗಗಳನ್ನು ಭರ್ತಿ ಮಾಡುವಂತಹದ್ದರಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳದೇ ಇದ್ದುದ್ದರಿಂದ ಈ ರೂ.19,000 ಕೋಟಿಗಳು ಸರ್ಕಾರದ ಖಜಾನೆಯಲ್ಲಿಯೇ ಉಳಿದುಕೊಂಡಿತು. ಇನ್ನು ಏನೂ ಯಾವುದಕ್ಕೂ ಉಪಯೋಗ ಮಾಡಿಕೊಳ್ಳಲಿಲ್ಲ. ಅದೇ ರೀತಿ ಜಲಸಂಪನ್ಮೂಲ ಇಲಾಖೆಯಲ್ಲಿ ನೀವು ರೂ.47 ಸಾವಿರ ಕೋಟಿಯೋ ಅಥವಾ ರೂ. 48 ಸಾವಿರ ಕೋಟಿಯೋ ಕೊಟ್ಟಿದ್ದೇವೆಂದು ಹೇಳುತ್ತೀರಿ. ಆದರೆ, ನೀವು ಕಳೆದ 5 ವರ್ಷಗಳಲ್ಲಿ ಖರ್ಚು ಮಾಡಿರುವಂತಹದ್ದು ರೂ.32 ಸಾವಿರ ಕೋಟಿಗಳು. ನಾನು ಹೇಳಿದೆ, ನೀರಾವರಿ ಇಲಾಖೆಯ issue ಬಂದಾಗ ನಾನು ಕೃಷ್ಣಾ ನೀರಿನ Upper Bhadra project ಬಗ್ಗೆ ಚರ್ಚೆ ಮಾಡಿದ್ದೇನೆ. ಕಳೆದ ಬಾರಿ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿಯೂ ಸಹ ಹೇಳಿದೆ, ನೀವು ಇದೇ ರೀತಿಯಲ್ಲಿಯೇ ಹೋದರೆ ಬಹುಶ: ಇನ್ನು 50 ವರ್ಷಗಳಾದರೂ ಅಲ್ಲಿನ ನೀರನ್ನು ನಾವು ಸದ್ಬಳಕೆ ಮಾಡಿಕೊಳ್ಳುವುದಿಲ್ಲವೆಂಬ ಮಾತನ್ನು ಹೇಳಿದ್ದೇನೆ.

27-03-2017

ಇವತ್ತು ಪ್ರಜಾವಾಣಿ ಪತ್ರಿಕೆಯಲ್ಲಿ ಬರೆದಿದ್ದಾರೆ. ಸುಮಾರು 200-250 ಟಿ.ಎಂ.ಸಿ. ನೀರು ನಮ್ಮ ರಾಜ್ಯದಿಂದ ಆಂಧ್ರಪ್ರದೇಶಕ್ಕೆ ಹರಿದು ಹೋಗುತ್ತಿದೆ. ಕೆಲವು ವರ್ಷಗಳಲ್ಲಿ ಹೆಚ್ಚಿನ ಮಳೆಯಾದಂತಹ ಸಂದರ್ಭದಲ್ಲಿ 400 ಟಿ.ಎಂ.ಸಿ. ನೀರು ಹರಿದು ಹೋಗುತ್ತಿದೆ ಎಂದು ಬರೆಯುತ್ತಾರೆ. ಇವತ್ತು ನಾವು ಆ ನೀರನ್ನು ಸದ್ಬಳಕೆ ಮಾಡಿಕೊಳ್ಳುವಂತಹದ್ದರಲ್ಲಿ ಎಷ್ಟರಮಟ್ಟಿಗೆ ನಮ್ಮ ಬದ್ಧತೆಯನ್ನು ತೋರಿಸಿದ್ದೇವೆ, ಇವತ್ತು ಸರ್ಕಾರ ಅದರ ಬಗ್ಗೆ ಯೋಚನೆ ಮಾಡಬೇಕು. ಕೇವಲ ದೊಡ್ಡ ದೊಡ್ಡ ಜಾಹೀರಾತುಗಳನ್ನು ಕೊಟ್ಟರೆ ಆಗುವುದಿಲ್ಲ. ಇವತ್ತು ನೋಡಿದೆ. ಯಾವುದೋ ಒಂದು ಇಂಗ್ಲೀಷ್ ಪತ್ರಿಕೆಯಲ್ಲಿ ನಮ್ಮ ನೀರಾವರಿ ಸಚಿವರ ಜಾಹೀರಾತು ನೋಡಿದೆ. ಅದಕ್ಕೆ ನಮ್ಮ ಮಾನ್ಯ ಮುಖ್ಯಮಂತ್ರಿಗಳೂ certificate ಕೊಟ್ಟಿದ್ದಾರೆ. ಬಹುಶ: ಇಂತಹ ನೀರಾವರಿ ಸಚಿವರು ಬಂದೇ ಇಲ್ಲವೆಂದು ಹೇಳಿದ್ದಾರೆ. ನಾಲ್ಕು pageಗಳ ಜಾಹೀರಾತನ್ನು ಕೊಟ್ಟಿದ್ದಾರೆ. ಆದರೆ, ಇವತ್ತು Upper Krishna Project ನಲ್ಲಿ ಎಲ್ಲಿಗೆ ಹೋಗಿ ನಿಂತಿದ್ದೇವೆಂದರೆ, ಇವತ್ತು 1 ಲಕ್ಷ 32 ಸಾವಿರ ಎಕರೆ ಭೂಮಿಯನ್ನು ನೀವು ಏನು ಸ್ವಾಧೀನಮಾಡಿಕೊಳ್ಳಬೇಕಾಗುತ್ತದೆ, ಅದಕ್ಕೆಲ್ಲಾ ಇವತ್ತು ಎಲ್ಲಿ ಹಣ ಇಟ್ಟಿದ್ದೀರಿ? ಮೇಕೆದಾಟಿನ ಬಗ್ಗೆ ಚರ್ಚೆ ಮಾಡಿದ್ದೀರಿ. ಈ ವರ್ಷ ಏನು ನೀವು ಮೇಕೆದಾಟು ಯೋಜನೆಯನ್ನು take off ಮಾಡುವುದಕ್ಕೇ ಆಗುವುದಿಲ್ಲ. ಅದಕ್ಕೆ ನಯಾಪೈಸೆ investment ಅನ್ನೂ ಸಹ ಮಾಡುವುದಕ್ಕೆ ಆಗುವುದಿಲ್ಲ. ಇವೆಲ್ಲಾ preliminary ಹಂತದಲ್ಲಿರತಕ್ಕಂತಹವು. ಇವತ್ತು UKP project ನಲ್ಲಿ 172 ಟಿ.ಎಂ.ಸಿ. ನೀರನ್ನು 'ಬಿ' ಸ್ಕೀಂನಲ್ಲಿ ಕೊಟ್ಟಿರುವಂತಹ ನೀರು ಇರಲಿ ಅಥವಾ ಹಳೆಯ ಕೆಲವು ನೀರಾವರಿ ಯೋಜನೆಗಳಿರಲಿ ಇದಕ್ಕೆ ನಾವು ಯಾವ ರೀತಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಬೇಕು, ಇದನ್ನು ನಾವು ಮಾಡುತ್ತಿದ್ದೀವಾ? ಸರ್ಕಾರ ಇದರ ಬಗ್ಗೆ ಇವತ್ತು ಚಿಂತನೆ ಮಾಡಬೇಕಾಗಿದೆ. ಕೇವಲ ನಾವು ಹಣ ಇಟ್ಟಿದ್ದೇವೆಂದು ಹೇಳುತ್ತೀರಿ. ಇಲ್ಲಿ ಜಲಸಂಪನ್ಮೂಲ ಇಲಾಖೆಯಲ್ಲಿ ಕಳೆದ ಐದು ವರ್ಷಗಳಲ್ಲಿ ನೀವು ಬಿಡುಗಡೆ ಮಾಡಿರತಕ್ಕಂತಹ ಅನುದಾನದಲ್ಲಿ ಸುಮಾರು ರೂ.12,800 ಕೋಟಿ ಹಣ ಖರ್ಚು ಮಾಡಿಲ್ಲ. ಈ ರೀತಿಯ ಸರ್ಕಾರದ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಆಗುತ್ತಿವೆ ಹಾಗೂ ದುಡ್ಡು ಎಲ್ಲಿ ಹೋಗುತ್ತಿದೆ ಎಂದು ಹೇಳಿ. ಸಾಲ ಮಾಡುತ್ತಿದ್ದೀರಿ, ಪ್ರತಿ ವರ್ಷ ರೂ.20 ಸಾವಿರ ಕೋಟಿಗಳು - 25 ಸಾವಿರ ಕೋಟಿಗಳು ಬಜೆಟ್‌ನಲ್ಲಿ ನೀವು ತೋರಿಸುವಂತಹ ಕಾರ್ಯಕ್ರಮದಲ್ಲಿ ಆ ಹಣವನ್ನೇ ಆ ಇಲಾಖೆಗಳಲ್ಲ ಒಟ್ಟಾರೆಯಾಗಿ ಖರ್ಚು

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಾಡಿಲ್ಲ. ಪ್ರತಿ ವರ್ಷ ರೂ.25 ಸಾವಿರ ಕೋಟಿಗಳನ್ನು ಖರ್ಚು ಮಾಡಿಲ್ಲ. ಹಾಗಾದರೆ ಈ ಹಣ ಯಾವುದಕ್ಕೆ ಹೋಗುತ್ತಿದೆ? ಯಾವ ಒಂದು capital investment ಆಗುತ್ತಿದೆ? ಯಾವ growthಗೆ ಇವತ್ತು ನಾವು ಖರ್ಚು ಮಾಡುತ್ತಿದ್ದೇವೆ? ಇವತ್ತು ಮಾನ್ಯ ಉಪಾಧ್ಯಕ್ಷರೆ, ಶಿಕ್ಷಣ ಇಲಾಖೆಯಲ್ಲಿ ಕಳೆದ 5 ವರ್ಷಗಳಲ್ಲಿ ರೂ.10 ಸಾವಿರ ಕೋಟಿ ಹಣ ಖರ್ಚು ಮಾಡದೇ ಇರುವಂತಹ ಹಣ ವಾಪಸ್ಸು ಹೋಗಿದೆ. ರೂ.98 ಸಾವಿರ ಕೋಟಿ ಹಣ ಬಿಡುಗಡೆಯಾಗಿದೆ. ವೆಚ್ಚ ಮಾಡಿರುವಂತಹದ್ದು ರೂ.82 ಸಾವಿರ ಕೋಟಿಗಳು, ಬಳಕೆಯಾಗಿರದೇ ಇರುವಂತಹದ್ದು ರೂ.10 ಸಾವಿರ ಕೋಟಿಗಳು, ಇವತ್ತು ಇಂತಹ ಪರಿಸ್ಥಿತಿಯಲ್ಲಿದ್ದೇವೆ. ಇವತ್ತು ಸರ್ಕಾರಿ ಶಾಲೆಗಳನ್ನು ಮುಚ್ಚಬೇಕೆಂದು ಹೇಳುತ್ತೀರಿ. ಶಾಲೆಗಳಲ್ಲಿ ಮಕ್ಕಳಿಲ್ಲವೆಂದು ಮುಚ್ಚಬೇಕೆಂದು ಹೇಳುತ್ತೀರಿ. ನೀವು infrastructure ಅನ್ನು build up ಮಾಡದೇ ಇದ್ದರೆ, ಸರಿಯಾದ ರೀತಿಯಲ್ಲಿ ನೀವು ಟೀಚರ್‌ಗಳನ್ನೇ appointment ಮಾಡದೇ ಇದ್ದರೆ, ಪ್ರತಿನಿತ್ಯ ನಮ್ಮ ಅತಿಥಿ ಉಪನ್ಯಾಸಕರದು ಸಹ ಒಂದು strike ಇರುತ್ತದೆ, ಬೆಳಗಾವಿಯಲ್ಲಿ ವಿಧಾನಸಭೆ ಅಧಿವೇಶನ ನಡೆಯುತ್ತಿದ್ದರೆ ಅಲ್ಲಿಗೆ ಬಂದು ಡೇರೆ ಹಾಕುತ್ತಾರೆ. ಇಲ್ಲಿಗೂ ಸಹ ಬಂದು ಡೇರೆ ಹಾಕಿಕೊಂಡು ಕುಳಿತುಕೊಳ್ಳುತ್ತಾರೆ. ಹಲವಾರು ರೀತಿಯ ಸಮಸ್ಯೆಗಳನ್ನು ಇವತ್ತು ನಾವೇ ಉದ್ಭವ ಮಾಡಿಕೊಳ್ಳುತ್ತಿದ್ದೇವೆ. ಯಾವುದಕ್ಕೂ ಪರಿಹಾರಗಳಿಲ್ಲ. ಇಂತಹ ಒಂದು ಆಡಳಿತ ಏನು ನಡೆಯುತ್ತಿದೆ, ಇವತ್ತು ರೂ.10 ಸಾವಿರ ಕೋಟಿ ಹಣ ಶಿಕ್ಷಣ ಇಲಾಖೆಯಲ್ಲಿ, ಈ ದುಡ್ಡನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡಿದ್ದರೆ ಉತ್ತಮವಾದಂತಹ ಒಂದು ಖಾಸಗಿ ಶಾಲೆಗಳಿಗೆ ಪೈಪೋಟಿ ಕೊಡುವಂತಹ, ಪ್ರತಿ ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ, ಗ್ರಾಮಪಂಚಾಯಿತಿ ಮಟ್ಟದಲ್ಲಿ ಒಂದು ಉತ್ತಮವಾದಂತಹ convent ಗಳನ್ನು ಮಾಡುವುದಕ್ಕೆ ನಮಗೆ ಸಾಧ್ಯತೆಯಿರಲಿಲ್ಲವೇ? ಇಂತಹ ಒಂದು ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಆರೋಗ್ಯ ಇಲಾಖೆಯ ವಿಷಯಕ್ಕೆ ಬಂದರೆ ಇಲ್ಲಿಯೂ ಹಲವಾರು ರೀತಿಯ ನ್ಯೂನತೆಗಳಿವೆ. ಮಾನ್ಯ ಉಪಾಧ್ಯಕ್ಷರೆ, ಕಳೆದ 5 ವರ್ಷಗಳಲ್ಲಿ ರೂ.29 ಸಾವಿರ ಕೋಟಿಗಳು ಬಿಡುಗಡೆಯಾಗಿದೆ, ಬಳಕೆಯಾಗದೇ ಇರುವಂತಹದ್ದು ರೂ.5,700 ಕೋಟಿಗಳು. ಹಲವಾರು ಆಸ್ಪತ್ರೆಗಳಲ್ಲಿ ಇವತ್ತು ವೈದ್ಯರಿಲ್ಲ, ಸಿಬ್ಬಂದಿಗಳಿಲ್ಲ. ಇವತ್ತು ಹೀಗೆ ಹಲವಾರು ರೀತಿಯ ಸಮಸ್ಯೆಗಳೇನಿದೆ, ಈ ಸರ್ಕಾರ ಎಷ್ಟರಮಟ್ಟಿಗೆ ಸರ್ಕಾರದ ಅನುದಾನಗಳನ್ನು

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಇವತ್ತು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಕೇಳುವುದಕ್ಕೆ ಬಯಸುತ್ತೇನೆ. (ಗೊಂದಲ) ಮುಗಿಸಿಬಿಡುತ್ತೇನೆ. ಏಕೆಂದರೆ, ಮತ್ತೆ ಎಳೆಯುವುದು ಬೇಡ.

ಉಪಾಧ್ಯಕ್ಷರು: 2 ಗಂಟೆಯವರೆಗೆ ಮಾತನಾಡಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: 2 ಗಂಟೆಯವರೆಗೆ ಮಾತನಾಡುತ್ತೇನೆ. ಆಮೇಲೆ ಬೇಕಾದರೆ lunch hour ಆದಮೇಲೆ ಮಾತನಾಡುತ್ತೇನೆ. ಇಲ್ಲಿ ಮಾನ್ಯ ಉಪಾಧ್ಯಕ್ಷರೆ, ಏಕೆ ಹೇಳುತ್ತಿದ್ದೇನೆಂದರೆ, ಇವತ್ತು ಆರೋಗ್ಯ ಇಲಾಖೆಯ ಬಗ್ಗೆ ಮಾತನಾಡೋಣವೆಂದರೆ, ಮಾನ್ಯ ರಮೇಶ್ ಕುಮಾರ್‌ರವರು ಬರಲಿಲ್ಲ. ಅವರು ಹಲವಾರು ಬಾರಿ ಹೇಳಿದರು. ನನ್ನ ತಾಕತ್ತು ಏನು ಎಂದು ತೋರಿಸುವುದಕ್ಕಾದರೂ ನಾನು ಮಂತ್ರಿಯಾಗಬೇಕೆಂದು ಹೇಳಿದ್ದರು. ಬಹುಶಃ ಅವರಿಗೆ ಈಗ ಅದರ ಅನುಭವವಾಗಿದೆ. ಈಗಾಗಲೇ ಅವರು ಕೆಲವು ಬಾರಿ ಮಾತನಾಡುವಂತಹ ಪರಿಸ್ಥಿತಿ ನೋಡಿದರೆ ಗೊತ್ತಾಗುತ್ತದೆ. ಈಗಿನ ವ್ಯವಸ್ಥೆ ನೋಡಿದರೆ ಆ ತಾಕತ್ತು ಪರೀಕ್ಷೆ ಮಾಡುವಂತಹ ಪರಿಸ್ಥಿತಿ ಉಳಿದಿಲ್ಲ. ಮಾನ್ಯ ಉಪಾಧ್ಯಕ್ಷರೆ, ಅವರ ಇಲಾಖೆಯ ಬಗ್ಗೆ ಹೇಳುವುದಾದರೆ, A.G.ರವರು ವರದಿ ಕೊಟ್ಟಿದ್ದಾರೆ. ಇಲ್ಲಿ '2006-07ರ ಅವಧಿಯಲ್ಲಿ 100 ಹಾಸಿಗೆಗಳುಳ್ಳ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಿ 113 ತಾಲ್ಲೂಕು ಆಸ್ಪತ್ರೆಗಳಲ್ಲಿ ಕೇವಲ 63 ಆಸ್ಪತ್ರೆಗಳು ಮಾತ್ರ 100 ಹಾಸಿಗೆ ಸಾಮರ್ಥ್ಯದೊಂದಿಗೆ ಕಾರ್ಯನಿರ್ವಹಿಸುತ್ತಿದ್ದವು ಹಾಗೂ ಉಳಿದ 50 ಆಸ್ಪತ್ರೆಗಳು 100 ಹಾಸಿಗೆ ಸಾಮರ್ಥ್ಯಕ್ಕಿಂತ ಕಡಿಮೆಯೊಂದಿಗೆ ಕಾರ್ಯನಿರ್ವಹಿಸುತ್ತಿದ್ದವು.' ಎಂದು A.G.ರವರು ರಿಪೋರ್ಟ್ ಕೊಡುತ್ತಾರೆ. ಆಮೇಲೆ 'ಪರೀಕ್ಷಾ ತನಿಖೆ ನಡೆಸಿದ 28 ಆಸ್ಪತ್ರೆಗಳಲ್ಲಿ ಹೆಚ್ಚಿನ ಸಂಖ್ಯೆಯ ಆಸ್ಪತ್ರೆಗಳು ಅಗ್ನಿಶಾಮಕ ಪ್ರಾಧಿಕಾರದಿಂದ ಅನುಪಾಲನಾ ಸಮ್ಮತಿ, ಅಣುಶಕ್ತಿ ನಿಬಂಧನಾ ಮಂಡಳಿಯಿಂದ ಕ್ಷ-ಕಿರಣ ಮತ್ತು ಸಿ.ಟಿ. ಸ್ಕ್ಯಾನ್ ಘಟಕಗಳಿಗೆ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಜೈವಿಕ ತ್ಯಾಜ್ಯ ನಿರ್ವಹಣೆಗೆ ಮದ್ಯಸಾರವನ್ನು ಸಂಗ್ರಹಿಸಿಡಲು, ಅಬಕಾರಿ ಅನುಮತಿ ಮತ್ತು ರಕ್ತನಿಧಿ ರಕ್ತವನ್ನು ಸಂಗ್ರಹಿಸಿಡಲು ಅಧಿಕಾರವನ್ನು ಪರವಾನಗಿಯನ್ನು ಪಡೆದಿರಲಿಲ್ಲ ಎಂಬುದು ಗಮನಕ್ಕೆ ಬಂದಿದೆ' ಎಂದು A.G.ರವರು ರಿಪೋರ್ಟ್ ಕೊಡುತ್ತಾರೆ. 'ಶೇಕಡಾ 75ರಷ್ಟು ಆಸ್ಪತ್ರೆಗಳು ತಜ್ಞರು, ಸಿಬ್ಬಂದಿ, ದಾದಿಯರು ಮತ್ತು ಪ್ರಯೋಗಶಾಲಾ ತಜ್ಞೇತರ ಸಂಬಂಧವಾಗಿ IPHS ಮಾರ್ಗದರ್ಶಿ ಸೂತ್ರಗಳಡಿಯಲ್ಲಿ ನಿಗದಿಪಡಿಸಿರುವುದಕ್ಕಿಂತ ಕಡಿಮೆ ಸಿಬ್ಬಂದಿ ವಲಯವನ್ನು ಹೊಂದಿದ್ದರಿಂದ ಆರೋಗ್ಯ ಸೇವೆಗಳು

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕುಂಠಿತವಾದವು.' ಹಾಗಾದರೆ ಇಷ್ಟೆಲ್ಲಾ ಸಮಸ್ಯೆಗಳಿದ್ದಾಗ ಈ ಹಣವನ್ನು ಖರ್ಚು ಮಾಡದೇ ಏತಕ್ಕೆ ಇವತ್ತು treasuryಗೆ ವಾಪಸ್ಸು ಹೋಯಿತು? ಹೀಗೆ ಹಲವಾರು ನ್ಯೂನತೆಗಳನ್ನು ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಇವತ್ತು ನಮ್ಮ ರಾಜ್ಯದಲ್ಲಿ ನಮ್ಮ post graduationಗೆ, ಇವತ್ತು ಕೇಂದ್ರ ಸರ್ಕಾರಕ್ಕೆ ನಾವು 5:1, 4:1 ಮಾಡಿಕೊಂಡಿದ್ದೇವೆ. ಇವತ್ತು ಹಲವಾರು ಜನರು ಬೇರೆ ರಾಜ್ಯಗಳಿಂದ ಬಂದು ಇಲ್ಲಿ ಸ್ನಾತಕೋತ್ತರ ಪದವಿಗಳನ್ನು ಪಡೆದು, ಮತ್ತೆ ಅವರು ರಾಜ್ಯದಲ್ಲಿ ಕೆಲಸ ಮಾಡುವುದಿಲ್ಲ, ಇದು ಒಂದು ಕಡೆ ದೊಡ್ಡ ಮಾಫಿಯಾ ಇದೆ. ಇದನ್ನು ಸರಿಪಡಿಸತಕ್ಕಂತಹ ನಿಟ್ಟಿನಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವಂತಹದ್ದನ್ನು ಸರ್ಕಾರಕ್ಕೆ ನಾನು ಕೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಕಳೆದ 5 ವರ್ಷಗಳಲ್ಲಿ ಬಿಡುಗಡೆಯಾದಂತಹ ಹಣ ರೂ.19 ಸಾವಿರ ಕೋಟಿಗಳು. ಬಳಕೆಯಾಗದೇ ಉಳಿದ ಅನುದಾನ ರೂ.1,955 ಕೋಟಿಗಳು. ಸುಮಾರು ರೂ.2,000 ಕೋಟಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಬಿಡುಗಡೆಯಾಗಿರುವಂತಹ ಹಣವನ್ನೇ ಇವತ್ತು ಉಪಯೋಗ ಮಾಡಿಕೊಂಡಿಲ್ಲ. ಅದೇ ರೀತಿ ವಸತಿ ಇಲಾಖೆಗೆ ಬಂದರೆ, ಬಳಕೆಯಾಗದೇ ಉಳಿದಿರುವಂತಹ ಹಣ ರೂ.2,288 ಕೋಟಿಗಳು. ಯಾವುದೇ ವರ್ಷದಲ್ಲಿಯಾಗಲಿ, ಸರ್ಕಾರ ಏನು ನಮ್ಮ ಆಯವ್ಯಯದಲ್ಲಿ allotment ಮಾಡಿರುತ್ತದೆ, ಆ allotment ನಲ್ಲಿ 15% ನಿಂದ 30% ಹಾಗೂ 35%ನಷ್ಟು ಹಣವನ್ನು ಇವತ್ತು ಖರ್ಚೇ ಮಾಡಿಲ್ಲ. ಇದು ಸರ್ಕಾರ ನಡೆಯುತ್ತಿರುವಂತಹ ಮಾರ್ಗವೇನಿದೆ, ಇಲ್ಲಿ ಒಂದು ಕಡೆಯಲ್ಲಿ ಹೇಳುತ್ತಾರೆ. "Karnataka worst performer in center's Housing schemes for Urban poor." ಇಲ್ಲಿ ಹೇಳುತ್ತಾರೆ. ' Karnataka is the worst performer in the centrally sponsored Pradhanamanthri Awas Yojana Scheme to provide Houses to poor living in urban areas as the state constructed only 10,408 houses against the sanctioned 1 lakh, 15 thousand houses in the past four years. ಮಾನ್ಯ ಉಪಾಧ್ಯಕ್ಷರೆ, ಒಂದು ಲಕ್ಷದ 15 ಸಾವಿರ sanction ಆಗಿರುವಂತಹ ಮನೆಗಳ ಪೈಕಿ ಕೇವಲ 10

ಸಾವಿರ ಮನೆಗಳನ್ನು ಕಟ್ಟಿದ್ದಾರೆ. ಇದು ಈಗಲೂ ಏನಾಗಿದೆ, ಎಂದರೆ; in 2016-17 against the sanction of 75,214 houses, only 6,645 have been constructed so far With just 15 days left for the completion of the Financial Year. It is doubtful, Whether the state will be able to complete remaining houses, the official said. ಇದು Housing scheme.

(ಮುಂದು . . )

ದಿನಾಂಕ: 27-03-2017-1.50(21)-ಜೆ.ಎಲ್&ವಿ.ಜಿ

ಶ್ರೀ ಎಚ್.ಡಿ.ಕುಮಾರಸ್ವಾಮಿ (ಮುಂದುವರೆದುದು): ಇಷ್ಟೆಲ್ಲಾ ಈ ಸರ್ಕಾರ ನಡೆಯುತ್ತಿರುವ ಮಾರ್ಗಗಳೇನಿವೆ, Whatsapp ವಿಷಯ ಚರ್ಚೆ ಮಾಡುತ್ತಾ ಮೊನ್ನೆ ಜಗದೀಶ್ ಶೆಟ್ಟರ್‌ರವರು ಒಂದು ಮಾತು ಹೇಳಿದರು. ನಾನು Whatsapp ಬಗ್ಗೆ ಎಲ್ಲಾ ಚರ್ಚೆ ಮಾಡುವುದಿಲ್ಲ. ಪದ್ಮರಾಜ್ ದಂಡಾವತಿರವರು ಸ್ವಲ್ಪ ಒಳ್ಳೆಯ article ಬರೆಯುತ್ತಾರೆ, ಅವರು ಬರೆದಿರುವ ಒಂದು article ನೋಡಿದೆ. ಒಂದು ಪ್ಯಾರಾದಲ್ಲಿ ಈ ಬಾರಿಯ ಬಜೆಟ್‌ನಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಆಗಿರುವ ಸಾಧನೆಯನ್ನು ಪ್ರಸ್ತಾಪಿಸುತ್ತಾ, 2013-14 ಮತ್ತು 2016-17ನೇ ಸಾಲುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸರ್ವತೋಮುಖ ಅಭಿವೃದ್ಧಿಗಾಗಿ ಒದಗಿಸಿದ್ದ 60,350 ಕೋಟಿ ರೂ.ಗಳಲ್ಲಿ 47,186 ಕೋಟಿ ರೂ.ಗಳನ್ನು ವ್ಯಯ ಮಾಡಲಾಗಿದೆಯೆಂದು ಮುಖ್ಯಮಂತ್ರಿಯವರು ಪ್ರಕಟಿಸಿದ್ದಾರೆಂದು ಪ್ಯಾರಾದಲ್ಲಿ ಬರೆದಿದ್ದಾರೆ. 60,350 ಕೋಟಿ ರೂ.ಗಳನ್ನು ಏಕೆ ಖರ್ಚು ಮಾಡುವುದಕ್ಕಾಗಲಿಲ್ಲ ಎಂಬ ವಿವರಣೆಯನ್ನು ಅವರು ಕೊಟ್ಟಿಲ್ಲ. ಆದರೆ ಈಗ ವ್ಯಯವಾಗಿರುವ 47,186 ಕೋಟಿ ರೂ.ಗಳು ದಲಿತರ ಜೀವನವನ್ನು ಎಷ್ಟು ಸುಧಾರಿಸಿವೆ? ಈ ಬಾರಿ ಬಜೆಟ್‌ನಲ್ಲಿ ಪ್ರಕಟಿಸಿರುವ ಹೊಸ ಸವಲತ್ತುಗಳನ್ನು ನೋಡಿದರೆ ಕೊಳೆಗೇರಿ ಜನರಿಗೆ ಈಗಲೂ ಸರಿಯಾಗಿ ಕುಡಿಯಲು ನೀರಿಲ್ಲ ಮತ್ತು ಮನೆಯಲ್ಲಿ ಅಡುಗೆ ಅನಿಲ ಸಂಪರ್ಕ ಇಲ್ಲ. ಹಣವನ್ನು ಖರ್ಚು ಮಾಡಲಾಗಿದೆಯೆಂದು ಹೇಳುವುದು ಬೇರೆ ಮತ್ತು ಅದರಿಂದ ಜನರ ಬದುಕಿನಲ್ಲಿ ಏನು ಬದಲಾವಣೆ

27-03-2017

ಆಯಿತೆಂದು ಖಚಿತವಾಗಿ ವಿವರಿಸುವುದು ಬೇರೆ. ಹಣವನ್ನು ಖರ್ಚು ಮಾಡಲಾಯಿತೆಂದರೆ, ಸಚಿವರು, ಅಧಿಕಾರಿಗಳು ಮತ್ತು ಗುತ್ತಿಗೆದಾರರು ಸೇರಿಕೊಂಡು ಲೂಟಿ ಹೊಡೆದರೆಂದು ಅರ್ಥ ಮಾಡಿಕೊಳ್ಳಬಹುದು. ಹಾಗೇ ಆಗಿರಲಾರದೆ ಹೇಗೆ ಹೇಳುವುದು. ಇದು ಪದ್ಮರಾಜ್ ದಂಡಾವತಿ ರವರು ಬರೆದಿರುವ article ಆಗಿದೆ. ಇದನ್ನು ನಾನು ಹೇಳುತ್ತಿರುವುದಲ್ಲ, ಅವರು ಹೇಳಿರುವುದರಲ್ಲಿಯೂ ಸತ್ಯವಿದೆ. ಬಹುಶಃ ಬಸವರಾಜ ಬೊಮ್ಮಾಯಿ ರವರು ಇರಬಹುದು, ಸರ್ಕಾರ ಯಾವ್ಯಾವ ಇಲಾಖೆಗಳಿಗೆ ಹಣ ಕೊಟ್ಟಿದೆ, ಇವತ್ತು ಯಾವ ರೀತಿ progress ಆಗಿದೆ, ಅದರಿಂದ ಆಗಿರುವಂತಹ growth ಏನು, negatives ಏನಿರುತ್ತದೆ? ಅದರ ಒಂದು ವರದಿಯನ್ನು ಸದನಲ್ಲಿ ಇಟ್ಟರೆ ತುಂಬಾ ಒಳ್ಳೆಯದೆಂಬ ಒಂದು ಮಾತು ಹೇಳಿದರು. ಇದಕ್ಕೆ ನಾನು ಕೂಡ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಇವತ್ತು ನಿಮ್ಮ ಉದ್ದೇಶ ಉತ್ತಮವಾದಂತಹ ಉದ್ದೇಶವೇ ಆಗಿದೆ. ಮೊದಲಿಂದಲೂ ಸಮಾಜದಲ್ಲಿ ಹಿಂದುಳಿದ ವರ್ಗಗಳನ್ನು ಹಿನ್ನಡೆಸುವ ರೀತಿಯಲ್ಲಿ ಅವರು ತುಳಿತಕ್ಕೆ ಒಳಗಾಗುವ ವಾತಾವರಣ ನಿರ್ಮಾಣವಾಗಿತ್ತು. ಆ ವರ್ಗದ ಜನರನ್ನು ಮೇಲೆತ್ತಬೇಕೆಂಬ ನಿಮ್ಮ ಭಾವನೆಗೆ ನಾನು ಸ್ಪಂದಿಸುತ್ತೇನೆ. ಇದಕ್ಕೆ ನನ್ನ ಸಹಮತವಿದೆ, ನಿಜವಾಗಿಯೂ ಒಪ್ಪಿಕೊಳ್ಳುತ್ತೇನೆ. ಇವತ್ತು ಸಮಾಜದಲ್ಲಿರುವ ಪ್ರತಿಯೊಬ್ಬರು ಮೇಲೆ ಬರುವ ನಿಟ್ಟಿನಲ್ಲಿ ಕೆಲಸ ಮಾಡಬೇಕಾಗಿರುವುದು ನಮ್ಮ ಕರ್ತವ್ಯವಾಗಿದೆ. ಆದರೆ ಇವತ್ತು ಈ ಹಣ ಎಷ್ಟರಮಟ್ಟಿಗೆ ಉಪಯೋಗವಾಗುತ್ತಿದೆ? ಇವತ್ತು ಬಹಳ ಸಣ್ಣ ರೀತಿಯಲ್ಲೆಲ್ಲಾ ಬರೆದರು, ಹಾಸಿಗೆ, ದಿಂಬು ಎಂದೆಲ್ಲಾ ಚರ್ಚೆ ಮಾಡಿ, ಅದರಲ್ಲಿಯೂ ಹಣ ಲೂಟಿ ಮಾಡಿದ್ದಾರೆಂದು ಹೇಳಿದರು. ಸರ್ಕಾರ ಇಷ್ಟು ಹಣವನ್ನು ಖರ್ಚು ಮಾಡಿದ್ದೇವೆಂದು ಹೇಳಿಕೊಂಡರೆ ಆಗುವುದಿಲ್ಲ. ಹಣ ಎಷ್ಟರಮಟ್ಟಿಗೆ ಸದ್ಬಳಕೆ ಆಗಿದೆ, ಸಮಾಜದಲ್ಲಿರುವ ಆ ವರ್ಗದ ಜನರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮೇಲೆ ಬರುವ ನಿಟ್ಟಿನಲ್ಲಿ ನೀವು ಇವತ್ತು ಯಾವ ಕಾರ್ಯಕ್ರಮಗಳನ್ನು implementation ಮಾಡುವುದಕ್ಕೆ ಹೊರಟಿದ್ದೀರಿ, ಇದು ಅವರನ್ನು ಎಷ್ಟರಮಟ್ಟಿಗೆ ಮೆಲೆತ್ತುವುದಕ್ಕೆ ಸಾಧ್ಯವಾಗಿದೆ? ಅವರು ಇಂದು ಸಮಾಜದಲ್ಲಿ ಮೇಲೆ ಬರುವುದಕ್ಕೆ ಎಷ್ಟರಮಟ್ಟಿಗೆ ಅನುಕೂಲ ಮಾಡಿಕೊಟ್ಟಿದ್ದೀರಿ, ಈ ಬಗ್ಗೆ ಒಂದು ಸರ್ವೆ ಮಾಡಿಸಿ, ಕಳೆದ ನಾಲ್ಕು ವರ್ಷಗಳಲ್ಲಿ 19,000, 16,000, 15,000 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದೇವೆಂದು ಹೇಳಿಕೊಂಡು ಬಂದಿದ್ದೀರಿ. ಪ್ರತಿ ವರ್ಷ ಈ ಹಣ ಆ ವರ್ಗದ ಜನರಿಗೆ ಹೋಗಿದೆ, ಅವರು ಆರ್ಥಿಕವಾಗಿ

ಎಷ್ಟರಮಟ್ಟಿಗೆ ಮೇಲೆ ಬಂದರು, ಯಾವ್ಯಾವುದಕ್ಕೆ ಖರ್ಚು ಮಾಡಿದ್ದೀರಿ ಎಂಬ ಬಗ್ಗೆ ಸರ್ವೆ ಮಾಡಿಸಿ ಮುಂದಿನ ಜೂನ್, ಜುಲೈ ತಿಂಗಳೊಳಗೆ ಒಂದು ವರದಿಯನ್ನು ಸದನದ ಮುಂದೆ ಇಟ್ಟರೆ ನಾವು ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಪ್ರಮುಖವಾದಂತಹ ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡಲೇಬೇಕಾಗಿದೆ. ನಂಜುಂಡಪ್ಪ ವರದಿಯ ಅನುಷ್ಠಾನದ ಬಗ್ಗೆ ಕೆಲವು ನೋಡಲ್ ಅಧಿಕಾರಿಗಳನ್ನು ಸರ್ಕಾರದಿಂದ ನೇಮಕ ಮಾಡಿದ್ದಾರೆ. ಸರ್ಕಾರದ ಆದೇಶ ಸಂಖ್ಯೆ: PSD-2015, ದಿನಾಂಕ: 22-11-2015ರನ್ವಯ ಪ್ರಾದೇಶಿಕ ಸಮತೋಲನ ನಿವಾರಣಾ ಉನ್ನತಾಧಿಕಾರ ಸಮಿತಿ ಡಾ: ಡಿ.ಎಂ.ನಂಜುಡಪ್ಪ ರವರ ವರದಿಯ ಪ್ರಕಾರ 39 ಅತ್ಯಂತ ಹಿಂದುಳಿದ ತಾಲ್ಲೂಕುಗಳ ಮೇಲ್ವಿಚಾರಣೆಗಾಗಿ KAS ಅಧಿಕಾರಿಗಳನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ ವರದಿ ಪಡೆಯಲಾಗಿದೆ. ನೋಡಲ್ ಅಧಿಕಾರಿಗಳು ಕೊಟ್ಟಿರುವ ವರದಿಯನ್ನು RTI ಮುಖಾಂತರ ತೆಗೆದುಕೊಂಡಿದ್ದೇನೆ. ಅದರಲ್ಲಿ ಕೆಲವು ಅಂಶಗಳನ್ನು ಸರ್ಕಾರದ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ. ಸರ್ಕಾರ ಎಷ್ಟರಮಟ್ಟಿಗೆ ಕೆಲಸ ಮಾಡಿದೆ, ಮಾಡುತ್ತಿದೆ ಎನ್ನುವುದಕ್ಕೆ ಈ ನೋಡಲ್ ಅಧಿಕಾರಿಗಳು ಕೊಟ್ಟಿರುವಂತಹ ವರದಿಯೇ ಸಾಕ್ಷಿಯಾಗಿದೆ. ಸಂಡೂರು ತಾಲ್ಲೂಕಿನ ಬಗ್ಗೆ ಹೇಳುವುದಾದರೆ, ಈ ತಾಲ್ಲೂಕಿನಲ್ಲಿ ಇರುವ ಒಂದು ಆರೋಗ್ಯಾಧಿಕಾರಿಯವರ ಹುದ್ದೆ ಖಾಲಿಯಿರುತ್ತದೆ. ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಒಂದು ಮುಖ್ಯ ವೈದ್ಯಾಧಿಕಾರಿಯವರ ಹುದ್ದೆಯಿದ್ದು ಅದೂ ಸಹ ಖಾಲಿಯಿರುತ್ತದೆ. 11 ಹಿರಿಯ ತಜ್ಞರ ಹುದ್ದೆಗಳ ಪೈಕಿ 6 ಹುದ್ದೆಗಳು ಖಾಲಿಯಿರುತ್ತವೆ. ಜಿಲ್ಲೆಯಲ್ಲಿರುವ ಸಂಡೂರು ತಾಲ್ಲೂಕು ಆರೋಗ್ಯ ಕ್ಷೇತ್ರದಲ್ಲಿ 7 ನೇ ಹಾಗೂ ಕಟ್ಟಕಡೆಯ ಸ್ಥಾನದಲ್ಲಿದ್ದು, ಇದನ್ನು ಸುಧಾರಿಸಲು, ಆರೋಗ್ಯ ಕ್ಷೇತ್ರದಲ್ಲಿ ಸಮಗ್ರ ಬದಲಾವಣೆ ತರಲು ಹಾಗೂ ಆರೋಗ್ಯ ಸುಧಾರಣೆಯನ್ನು ಅಭಿವೃದ್ಧಿಪಡಿಸಲು ಮತ್ತು ಮೇಲುಸ್ತುವಾರಿ ವಹಿಸಲು ಆಯುಕ್ತರ ಕಛೇರಿಯಿಂದ ಒಬ್ಬ ಹಿರಿಯ ಅಧಿಕಾರಿಯನ್ನು ನೇಮಕ ಮಾಡಲು ಕ್ರಮ ಜರುಗಿಸಬೇಕಾಗಿದೆ ಎಂದು ಅಲ್ಲಿರುವ ನೋಡಲ್ ಅಧಿಕಾರಿಯು 2015ರಲ್ಲಿ ಕೊಟ್ಟಿರುವ ವರದಿಯಾಗಿದೆ. ಇದಕ್ಕೆ ಸಂಬಂಧಿಸಿದಂತೆ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಒಂದು ವೇಳೆ ಕ್ರಮ ತೆಗೆದುಕೊಂಡಿದ್ದರೆ ಅದನ್ನು ಸದನದಲ್ಲಿ ಹೇಳಬೇಕು. ಇದೇ ರೀತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಾಂಗವಿರುವ ಹೆಚ್ಚಿನ ಪ್ರದೇಶವಿದ್ದು, ಹೆಣ್ಣು ಮಕ್ಕಳಲ್ಲಿ ಅದರಲ್ಲಿಯೂ ಗರ್ಭವತಿ ಮತ್ತು ಬಾಣಂತಿಯರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಪೌಷ್ಠಿಕತೆ ಇದೆ.

27-03-2017

ಸಮಾಜ ಕಲ್ಯಾಣ ಇಲಾಖೆಯಲ್ಲಿ 19,000 ಕೋಟಿ ರೂ.ಗಳ ಬಜೆಟ್ ನೀಡಿದ್ದು, ಪರಿಶಿಷ್ಟ ಜಾತಿ ಮತ್ತು ಪಂಗಡದವರ ಪರಿಸ್ಥಿತಿಗಳಿಗೆ ಮತ್ತು ಅವರನ್ನು ಸಮಾಜದಲ್ಲಿ ಮೇಲೆತ್ತುವ ಕಾರ್ಯಕ್ರಮಗಳಿಗೆ ಹಣವನ್ನು ಕೊಡುತ್ತೇವೆಂದು ಹೇಳಿದ್ದೀರಿ. ಇವೆಲ್ಲವೂ ನಿಮ್ಮ ನೋಡಲ್ ಅಧಿಕಾರಿಗಳು ಕೊಟ್ಟಿರುವಂತಹ ವರದಿಗಳು. ಇದರ ಬಗ್ಗೆ ಏನಾಗಿದೆ ಎಂದು ಹೇಳಿ. ಇದೇ ರೀತಿ ಕೂಡ್ಲಿಗಿ ತಾಲ್ಲೂಕಿನಲ್ಲಿ ನೋಡಲ್ ಅಧಿಕಾರಿಯವರು ಈ ರೀತಿ ವರದಿಯನ್ನು ಕೊಟ್ಟಿರುತ್ತಾರೆ. ಕೂಡ್ಲಿಗಿ ತಾಲ್ಲೂಕಿನಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆ ಮಳೆ ನೀರಿನ ಮೇಲೆ ಅವಲಂಬಿತವಾಗಿದೆ. ಶಿಕ್ಷಕ, ಪ್ರಾಧ್ಯಾಪಕರ, ವೈದ್ಯರ, ಎ.ಎನ್.ಎಂ.ಗಳ ಕೊರತೆ, ಅಂಗನವಾಡಿ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳು, ಜಾಗ, ಕಟ್ಟಡ, ಪೀಠೋಪಕರಣದ ಕೊರತೆ, ಶೈಕ್ಷಣಿಕ ಕಟ್ಟಡಗಳ ಕಾಮಗಾರಿಗಳ ತಾಂತ್ರಿಕ ಮೌಲ್ಯ ಮಾಪನ ಮಾಡಲು ತಜ್ಞರಿಲ್ಲದ ಕಾರಣ ವಿಶೇಷ ಅಭಿವೃದ್ಧಿ ಯೋಜನೆಯಡಿಯ ಕಾಮಗಾರಿಗಳಲ್ಲಿ ವಿಳಂಬ, ಪ್ರೌಢಶಾಲೆ ಗಳಲ್ಲಿ ಪ್ರಯೋಗಾಲಯ ಮತ್ತು ಗ್ರಂಥಾಲಯಗಳ ಕೊರತೆ, ಬಸವ ಸಮಿತಿ ಆಶ್ರಯ ಯೋಜನೆಯಡಿ ಮನೆ ನಿರ್ಮಾಣ ಮಾಡಲು ಸರ್ಕಾರಿ ಜಮೀನು ಮಂಜೂರಾತಿ ಭೂಸ್ವಾಧೀನದಲ್ಲಿ ವಿಳಂಬ, ಯೋಜನೆಗಳ ಅನುಷ್ಠಾನಕ್ಕೆ ಅಗತ್ಯವಾದ ಹುದ್ದೆಗಳು ಖಾಲಿಯಿರುವುದು ಹೀಗೆ ನೋಡಲ್ ಅಧಿಕಾರಿಗಳು ಡಾ: ಡಿ.ಎಂ.ನಂಜುಂಡಪ್ಪ ವರದಿಯಲ್ಲಿ 39 ಕ್ಷೇತ್ರಗಳ ಬಗ್ಗೆ ವರದಿ ನೀಡಿರುತ್ತಾರೆ. ಅದರಲ್ಲಿ ಆಳಂದ ತಾಲ್ಲೂಕು ಇರಬಹುದು, ಔರಾದ್, ಬಸವಕಲ್ಯಾಣ, ಅಫ್ಜಲ್‌ಪುರ, even ಕನಕಪುರ ಕ್ಷೇತ್ರ, ಕುಣಿಗಲ್ ಈ ಕಡೆಗಳಲ್ಲಿ ನೋಡಲ್ ಅಧಿಕಾರಿಗಳು ಸಂಪೂರ್ಣವಾದ ಮಾಹಿತಿಯನ್ನು ನೀಡಿ ಈಗಾಗಲೇ ಒಂದೂವರೆ ವರ್ಷವಾಗಿದ್ದು, ಇವತ್ತಿನವರೆವಿಗೂ ಕ್ರಮ ತೆಗೆದುಕೊಂಡಿರುವುದಿಲ್ಲ. ಇವರನ್ನು ಏಕೆ ನೇಮಕ ಮಾಡಿಕೊಂಡಿರಿ? ಏತಕ್ಕೋಸ್ಕರ ಅವರನ್ನು ಕಳುಹಿಸಿದಿರಿ? ನಂಜುಂಡಪ್ಪ ವರದಿ ಬಗ್ಗೆ ಇಲ್ಲಿ ಚರ್ಚೆ ಮಾಡುತ್ತೀರಿ. ನೋಡಲ್ ಅಧಿಕಾರಿಗಳು ಕೊಟ್ಟಿರುವಂತಹ ವಿಷಯದಲ್ಲಿ ಯಾವ ರೀತಿಯ ಕ್ರಮ ತೆಗೆದುಕೊಂಡಿದ್ದೀರಿ? ಇಷ್ಟೆಲ್ಲಾ ಚರ್ಚೆ ಮಾಡುತ್ತೇವೆ. ನಿನ್ನೆಯಷ್ಟೇ ಮಾನ್ಯ ಮುಖ್ಯಮಂತ್ರಿಗಳಿಗೆ ಸನ್ಮಾನ ಸಹ ಮಾಡಿದ್ದಾರೆ. ಯಲಬುರ್ಗಾ ತಾಲ್ಲೂಕಿನಲ್ಲಿ ಕಂಡು ಬಂದಂತಹ ಸಾಮಾಜಿಕ ಪಿಡುಗು, ಮಕ್ಕಳ ಮತ್ತು ಮಹಿಳೆಯರ ಸಾಗಾಣಿಕೆ ಬಗ್ಗೆ ಪ್ರಮುಖ ಕಾರಣಗಳನ್ನು ಕೊಡುತ್ತಾರೆ. ಬಡತನ ಕಾರಣದಿಂದ ಆಮಿಷಕ್ಕೆ ಬಲಿಯಾಗಿರುವುದು, ಉದ್ಯೋಗ ಕೊಡಿಸುವ ನೆಪದಿಂದ, ಮಕ್ಕಳನ್ನು ಹೊಲದಲ್ಲಿ ದುಡಿಸಲು ಜೀತಕ್ಕಿಟ್ಟುಕೊಳ್ಳುವ ಸಲುವಾಗಿ,

ತಿದ್ದುಪಡಿಯಾಗದ/uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ವೇಶ್ಯಾವಾಟಿಕೆ ನಡೆಸಲು, ಬಾರ್‌ಗಳಲ್ಲಿ ಮಕ್ಕಳನ್ನು ದುಡಿಸುವ ಸಲುವಾಗಿ, ಪ್ರವಾಸೋದ್ಯಮದ ಪ್ರತಿಷ್ಠಿತ ಬಾರ್‌ಗಳಲ್ಲಿ ಮನರಂಜನೆಗಾಗಿ ಹಾಡು ಮತ್ತು ನೃತ್ಯದ ಸಲುವಾಗಿ, ಲೈಂಗಿಕ ಪೀಡಣೆಗಾಗಿ ಮಕ್ಕಳ ಮತ್ತು ಮಹಿಳೆಯರನ್ನು ಉಪಯೋಗಿಸುವ ಸಲುವಾಗಿ, ಶಿಕ್ಷಣ ಕೊಡಿಸುವ ನೆಪದಲ್ಲಿ ಭಯೋತ್ಪಾದನೆ ಚಟುವಟಿಕೆಗಳಲ್ಲಿ ತೊಡಗಿಸಲು, blue film ತೆಗೆಯುವುದು, ದತ್ತು ಪಡೆಯುವ ನೆಪದಲ್ಲಿ ಕೊಂಡೊಯ್ದು ಅಂಗಾಂಗ ಹೀನರನ್ನಾಗಿ ಮಾಡಿ ಭಿಕ್ಷಾಟನೆಗೆ ತಳ್ಳುವುದು, ಮಕ್ಕಳು ಮತ್ತು ಮಹಿಳೆಯರನ್ನು ಜನರು ಅನುಮಾನದಿಂದ ಮತ್ತು ಸಂಶಯದಿಂದ ನೋಡುವುದು ಕಡಿಮೆಯಿರುವುದರಿಂದ ಇವರ ಮೂಲಕ ಕಳ್ಳತನ ಮತ್ತು ಶಸ್ತ್ರಾಸ್ತ್ರಗಳನ್ನು ಸಾಗಿಸಲು ಇವರನ್ನು ಬಳಸಲು, 18 ವರ್ಷಗಳ ಒಳಗಿನ ಮಕ್ಕಳು ಅಪರಾಧ ಮಾಡಿದರೆ ಶಿಕ್ಷೆ ಕಡಿಮೆ ಎನ್ನುವ ಸಲುವಾಗಿ ಇವರನ್ನು ಅಪರಾಧ ಚಟುವಟಿಕೆಗಳಿಗೆ ಬಳಸುವುದು. ನಿಧಿ ಆಸೆಗೆ ಮೂಢನಂಬಿಕೆಯಿಂದ ಮಕ್ಕಳನ್ನು ಬಲಿ ಕೊಡುವುದು. ಈ ರೀತಿ ಯಲಬುರ್ಗಾದಲ್ಲಿ ಮಕ್ಕಳು ಮತ್ತು ಮಹಿಳೆಯರ ಸಾಗಾಣಿಕೆ ಆಗುತ್ತಿದೆ ಎನ್ನುವ ಬಗ್ಗೆ ವರದಿಯನ್ನು ಕೊಟ್ಟಿರುತ್ತಾರೆ. ಈ ರೀತಿಯ ಒಂದು ನಡವಳಿಕೆಗಳು ರಾಜ್ಯದಲ್ಲಿ ಇವತ್ತಿಗೂ ನಡೆಯುತ್ತಿವೆ. ನೀವು ಸಮಾಜ ಕಲ್ಯಾಣ ಇಲಾಖೆಯಲ್ಲಿ ಹಲವಾರು ಉತ್ತಮವಾದ ಕಾರ್ಯಕ್ರಮಗಳನ್ನು ಜಾರಿಗೆ ತಂದು, ಈ ಬಾರಿಯ ಬಜೆಟ್‌ನಲ್ಲಿ ಕಾಡುಕುರುಬರು ಇತ್ಯಾದಿ ಪಂಗಡಗಳ ಹೆಸರುಗಳನ್ನು ಸಹ ನಮೂದಿಸಿದ್ದಾರೆ. ನಮಗೂ ಸಹ ಎಷ್ಟೋ ಜಾತಿಯ ಹೆಸರುಗಳು ತಿಳಿದಿರುವುದಿಲ್ಲ. ಅವೆಲ್ಲವನ್ನೂ ನೆನಪಿಸಿಕೊಟ್ಟಿದ್ದಾರೆ. ಅವರೆಲ್ಲರಿಗೂ ಒಂದು, ಎರಡು ಮತ್ತು ಮೂರು ಕೋಟಿಗಳೆಂದು ಕೊಟ್ಟಿದ್ದೀರಿ. ಈ ಹಣದಿಂದ ಅವರನ್ನು ಉದ್ಧಾರ ಮಾಡುತ್ತೀರಾ? ಇದರಿಂದ ಅವರ ಬಡತನವನ್ನು ನೀಗಿಸುತ್ತೀರಾ ಎಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ನೀವು ಮಾಡುವುದೇ ಆದರೆ ಅವರಿಗಾಗಿ ಶಾಶ್ವತವಾದ ಕಾರ್ಯಕ್ರಮಗಳನ್ನು ಕೊಡಿ. (ಮುಂದುವರೆದಿದೆ)

ದಿನಾಂಕ: 27-03-2017-2.00(22) AJ/VG

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಂದು . . .)

ನೀವು ಒಂದು ರೀತಿಯ plate meals ಕೊಟ್ಟರೆ ಅದರಿಂದ ಏನೂ ಉಪಯೋಗ ಆಗದೇ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಹಾಗಾಗಿ ನಿಮ್ಮ ಭಾವನೆಗಳಿಗೆ ತಕ್ಕಂತೆ ಅವರು ಶಾಶ್ವತವಾಗಿ ಪರಿಹಾರಗಳನ್ನು ಉಪಯೋಗ ಮಾಡಿಕೊಳ್ಳದೇ ಹೋದರೆ ಮುಂದೆ ಜನರು

ನೆನೆಸಿಕೊಳ್ಳುವುದಿಲ್ಲ. ಇವತ್ತು ತಾತ್ಕಾಲಿಕವಾಗಿ ನೀವು ಹೇಳಿಕೊಳ್ಳಬಹುದು. ಯಾರು ಕೊಟ್ಟಿರದಷ್ಟು ನಾವು ಕೊಟ್ಟಿದ್ದೇವೆಂದು ಹೇಳಿಕೊಳ್ಳಬಹುದು. ಆದರೆ ಮುಂದೆ ಅದರ effect ಏನಿದೆ, ಅದರಿಂದ ನೀವು ಅವರನ್ನು ಯಾವ ರೀತಿ ಮೇಲೆ ತೆಗೆದುಕೊಂಡು ಬಂದಿದ್ದೀರಿ ಎನ್ನುವ ಬಗ್ಗೆ ಚರ್ಚೆಗೆ ಬಂದಾಗ ಎಲ್ಲೋ ಕಡೆ ನಮ್ಮ ಹೆಸರಿನಲ್ಲಿ ಹಣ ದುರ್ಬಳಕೆ ಮಾಡಿಕೊಂಡಿದ್ದೀರಿ ಎನ್ನುವ ಕೆಟ್ಟ ಹೆಸರನ್ನು ಶಾಶ್ವತವಾಗಿ ತೆಗದುಕೊಳ್ಳುತ್ತೀರಿ. ಹಾಗಾಗಿ ಅದಕ್ಕೆ ದಯವಿಟ್ಟು ಅವಕಾಶ ಕೊಡಬೇಡಿ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, demonetization ವಿಚಾರದಲ್ಲಿ ಸರ್ಕಾರಕ್ಕೆ ಒಂದು ಮಾತನ್ನು ಹೇಳಬಯಸುತ್ತೇನೆ. ತಾವು ಒಂದು ಮಾತನ್ನು ಹೇಳಿದ್ದೀರಿ.

ಉಪಾಧ್ಯಕ್ಷರು : ಕುಮಾರಸ್ವಾಮಿ ಅವರೆ, ಈಗ ಊಟಕ್ಕೆ ಬಿಡೋಣ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಹಾಗೇ ಆಗಲಿ ಅಧ್ಯಕ್ಷರೆ, ಊಟವಾದ ನಂತರ ಅರ್ಧ ಗಂಟೆ ಕಾಲ ಕೊಟ್ಟರೆ ನನ್ನ ಚರ್ಚೆಯನ್ನು ಮುಗಿಸುತ್ತೇನೆ.

ಶ್ರೀ ಕೆ. ಶಿವಮೂರ್ತಿ : Demonetization ಹೇಳಿದ ಮೇಲೆ ಮುಗಿಸೋಣ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : Demonetization ಬಗ್ಗೆ ಹೇಳುತ್ತಾ ಹೋದರೆ ಇನ್ನು ಅರ್ಧ ಗಂಟೆ ಕಾಲ ಆಗುತ್ತದೆ.

ಉಪಾಧ್ಯಕ್ಷರು : ಭೋಜನ ವಿರಾಮದ ನಂತರ ತೆಗೆದುಕೊಳ್ಳೋಣ. ಈಗ ಸಭೆಯನ್ನು 3.00 ಗಂಟೆಗೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 2 ಗಂಟೆ 2 ನಿಮಿಷಕ್ಕೆ ಮುಕ್ತಾಯಗೊಂಡು, ಪುನ: 3.00 ಗಂಟೆಗೆ ಸೇರಲು ನಿಶ್ಚಯಿಸಿತು)**

27.03.2017-3.20-(25) BR-HS

**(ಸದನವು ಪುನ: ಮಧ್ಯಾಹ್ನ 3 ಗಂಟೆ 28 ನಿಮಿಷಕ್ಕೆ ಪ್ರಾರಂಭವಾಯಿತು. ಸಭಾಧ್ಯಕ್ಷರಾದ ಶ್ರೀ ಕೆ.ಬಿ.ಕೋಳಿವಾಡ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)**

ಶ್ರೀ ಎಂ.ಟಿ.ಕೃಷ್ಣಪ್ಪ: ಅಧ್ಯಕ್ಷರೆ, ಪಶುಭಾಗ್ಯ ಯೋಜನೆಯನ್ನು ಇಡೀ ರಾಜ್ಯಕ್ಕೆ ಕೊಟ್ಟಿದ್ದಾರೆ. ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ, ನಮ್ಮಲ್ಲಿ ಐದಾರು ಮೀಟಿಂಗ್ ಮಾಡಿ, ನಾವೆಲ್ಲ ಫಲಾನುಭವಿ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಗಳನ್ನು ಸೆಲೆಕ್ಟ್ ಮಾಡಿದ್ದೇವೆ. ಆದರೂ ಏಕೋ ಏನೋ ಕಾಣೆ, ನಮ್ಮ ತುರುವೇಕೆರೆ, ಗುಬ್ಬಿ ಪಾವಗಡ, ಇವೆಲ್ಲವನ್ನೂ ತೆಗೆದುಕೊಂಡು ಹೋಗಿ ಮಧುಗಿರಿಗೆ transfer ಮಾಡಿದ್ದಾರೆ. ಇದು ಏಕೆಂದು ನನಗೆ ಅರ್ಥವಾಗಲಿಲ್ಲ. ಅದಕ್ಕಾಗಿ ನಮಗೆ clarification ಬೇಕು. ಇದು ಶಾಸಕರಿಗೆ ಆಗಿರುವ ಅವಮಾನ. ಇದರ ಬಗ್ಗೆ Privilege ಅನ್ನೂ ಸಹ ನಾನು ತಮ್ಮ ಮುಂದೆ ಕೊಟ್ಟಿದ್ದೇನೆ. ನಮಗೆ ಅವಮಾನ ಮಾಡಿದ್ದಾರೆ.

ಅಧ್ಯಕ್ಷರು: ನೀವು ಯಾವ form ನಲ್ಲಿ ಕೊಟ್ಟಿದ್ದೀರಿ? What is your request?

ಶ್ರೀ ಎಂ.ಟಿ.ಕೃಷ್ಣಪ್ಪ: ನಾವು ಸರ್ಕಾರದ ಆದೇಶ ಏನಿದೆ, ಅದನ್ನು ಕೊಟ್ಟಿದ್ದೇವೆ. ಅದನ್ನು ಬದಲಾವಣೆ ಮಾಡಿದ್ದಾರೆ. ನಮ್ಮ request ಏನೆಂದರೆ, ನಾವು ಏನು ಕೊಟ್ಟಿದ್ದೇವೋ ಅದನ್ನು ಸರ್ಕಾರ approve ಮಾಡಿ ಕೊಡಬೇಕು. ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಕಳುಹಿಸಿಕೊಡಿ. ನೀವು ಕೊಟ್ಟರೆ ನಾನು ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ.

ಶ್ರೀ ಕೆ.ಎಂ.ತಿಮ್ಮರಾಯಪ್ಪ: ಅಧ್ಯಕ್ಷರೆ, ನಾವು ಸಹ ಸಭೆಯನ್ನು ಮಾಡಿದ್ದೇವೆ. ಸಭೆ ಮಾಡಿ, ಫಲಾನುಭವಿಗಳ ಪಟ್ಟಿಯನ್ನು ಕೊಟ್ಟಿದ್ದೇವೆ. ಕೊಟ್ಟ ಮೇಲೂ ಸಹ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಅದರ ಅನುಷ್ಠಾನ ಮಾಡದೇ, ನಮ್ಮ ಫಲಾನುಭವಿಗಳಿಗೆ ಕೊಟ್ಟಂಥ target ಅನ್ನು ಬೇರೆ ತಾಲ್ಲೂಕುಗಳಿಗೆ ವರ್ಗಾವಣೆ ಮಾಡಿದ್ದಾರೆ. ನಾವು Committee members ಅನ್ನು ಕರೆಸಿ meeting ಮಾಡಿದ್ದೇವೆ, ಇಷ್ಟೆಲ್ಲಾ ಮಾಡಿದರೂ ನಮ್ಮ ಫಲಾನುಭವಿಗಳನ್ನು ಆಯ್ಕೆ ಮಾಡದೇ ಅದನ್ನು ಬೇರೆ ಕಡೆಗೆ transfer ಮಾಡಿದ್ದಾರೆ.

ಅಧ್ಯಕ್ಷರು: ನೀವು ಈಗ ನನಗೆ ಕೊಟ್ಟರೆ, ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ.

(ಮುಂದುವರೆದಿದೆ)

27-03-2017/3-30/26/HRV/HS

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಹೇಳುತ್ತಿರುವುದರಲ್ಲಿ ಒಟ್ಟಾರೆಯಾಗಿ ಅಂಶವೇನೆಂದರೆ, ಪಶುಭಾಗ್ಯ ಸಮಿತಿಗೆ ಶಾಸಕರು ಅಧ್ಯಕ್ಷರು, ಮೊದಲೇನಿತ್ತು, ಶಾಸಕರು ಆ ಪಶುಭಾಗ್ಯ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಪಟ್ಟಿ ಮಾಡಿ ಶಾಸಕರು ರುಜು ಮಾಡಿ ಕಳುಹಿಸುವುದು ಎಂದು ಇತ್ತು. ಸರ್ಕಾರ ಅದಕ್ಕೆ approve ಮಾಡುತ್ತಿತ್ತು. ಈಗೇನಾಗಿದೆಯೆಂದರೆ ಆ ಪಶುಭಾಗ್ಯ ಸಮಿತಿಗೆ ಸರ್ಕಾರದಿಂದ ಕೆಲವರು ನಾಮಕರಣಗೊಂಡ ಸದಸ್ಯರುಗಳು ಬಂದಿದ್ದಾರೆ. ಆ ನಾಮಕರಣಗೊಂಡ ಸದಸ್ಯರನ್ನುಗಳನ್ನು ಸೇರಿಸಿಕೊಂಡೇ ಶಾಸಕರುಗಳು ಮೀಟಿಂಗ್ ಮಾಡಿ ಫಲಾನುಭವಿಗಳ ಪಟ್ಟಿ ಮಾಡಿ ಸರ್ಕಾರಕ್ಕೆ ಕಳುಹಿಸಿದರೆ ಈ ನಾಮಕರಣಗೊಂಡ ಸದಸ್ಯರುಗಳು ತಕರಾರು ತೆಗೆದು ಶಾಸಕರು ಕಳುಹಿಸಿರುವ ಪಟ್ಟಿಗೆ ಅಲ್ಲಿ ಅಡತಡೆ ಮಾಡಿ, ಅಡ್ಡಿ ಮಾಡಿ ಅನುಮೋದನೆಯಾಗದೆ ಪಟ್ಟಿ ಹಾಗೆಯೇ ಬೀಳುವ ಹಾಗೆ ಮಾಡಿದ್ದಾರೆ. ಹೀಗಾಗಿ ನಾಮಕರಣಗೊಂಡ ಸದಸ್ಯರುಗಳದ್ದು ಜಾಸ್ತಿಯೋ ಅಥವಾ ಶಾಸಕರು ಹೆಚ್ಚೋ ಎನ್ನುವಂಥ ಪ್ರಶ್ನೆ, ಶಾಸಕರಾದ ನಮ್ಮ ಹಕ್ಕಿಗೆ ಚ್ಯುತಿ ಬಂದಿದೆ ಎನ್ನುವಂಥ ಪ್ರಶ್ನೆ ಈಗ ಉದ್ಭವವಾಗಿದೆ.

ಅಧ್ಯಕ್ಷರು:- ಹಕ್ಕುಚ್ಯುತಿಗೆ ಕೊಟ್ಟರೆ ಬೇಕಾದರೆ ನಾನು refer ಮಾಡಬಲ್ಲೆ.

**( ಗೊಂದಲ )**

ಅಧ್ಯಕ್ಷರು:- ಹೀಗೆ ಒಟ್ಟಿಗೆ ಮಾತನಾಡಿದರೆ ಹೇಗೆ? ಈಗ ನಿಮ್ಮ ಅಭಿಪ್ರಾಯವನ್ನು ಹೇಳಿದ್ದೀರಲ್ಲವೆ, ಒಂದು ನಿಮಿಷ ಎಲ್ಲರೂ ಸುಮ್ಮನಿರಿ. ಈಗ ನಿಮ್ಮ ಅಭಿಪ್ರಾಯವನ್ನು ಹೇಳಿದ್ದೀರಿ. ಹಕ್ಕುಚ್ಯುತಿಗೆ ಬೇಕಾದರೆ ನೀವು ಕೊಟ್ಟರೆ I may refer it ಅಥವಾ ಸರ್ಕಾರದಿಂದ ಉತ್ತರ ಬೇಕೆಂದರೆ ನೀವು ನನಗೆ ಕಳುಹಿಸಿ, ನಾನು ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ಈಗ ಹಕ್ಕುಚ್ಯುತಿಯಾಗುತ್ತದೋ, ಇಲ್ಲವೊ, ಸರ್ಕಾರ ಇದರ ಬಗ್ಗೆ ಸ್ಪಷ್ಟವಾಗಿ, ನೋಡಪ್ಪಾ ಆ ಕ್ಷೇತ್ರದ ಶಾಸಕರು ಆ ಪಶು ಭಾಗ್ಯ ಸಮಿತಿಯ ಸದಸ್ಯರುಗಳನ್ನು ಸೇರಿಸಿಕೊಂಡು ಮಾಡಿರುವ ಪಟ್ಟಿಯನ್ನು ಅನುಮೋದನೆ ಮಾಡಿ ಕಳುಹಿಸಿ ಎಂದು ಹೇಳಿದರೆ ಅದು ಆಗುತ್ತದೆ.

ಅಧ್ಯಕ್ಷರು:- ಆ ರೀತಿ ಮಾಡಬೇಕೆಂದು ಹೇಳಿ ನನಗೆ ನೀವು ಕಳಹಿಸಿಕೊಡಿ, ನಾನು ಸರ್ಕಾರಕ್ಕೆ ಕಳಹಿಸಿಕೊಡುತ್ತೇನೆ. ನೀವು ನನಗೆ ಕಳುಹಿಸಿಕೊಟ್ಟರೆ ನಾನು ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ.

27-03-2017

**( ಗೊಂದಲ )**

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):-ಮಾನ್ಯ ಅಧ್ಯಕ್ಷರೆ, ಸರ್ಕಾರ ಈಗ nominated members ಎಂದು ಮಾಡಿ, , ,

ಅಧ್ಯಕ್ಷರು:-ಸ್ವಲ್ಪ ತಾಳಿ, ಸರ್ಕಾರದವರೇನೋ ಹೇಳುತ್ತಾರೆ. ಒಂದು ನಿಮಿಷ ಇರಿ, ಸರ್ಕಾರದವರೇನೋ ಹೇಳುತ್ತಾರೆ.

ಶ್ರೀ ಕೆ.ಎಸ್. ಮಂಜುನಾಥಗೌಡ:- ಮಾನ್ಯ ಅಧ್ಯಕ್ಷರೆ, nominated members power ಏನು ಎಂದು ಹೇಳಬೇಕು. Nominated members powers ಏನು ಎಂದು ಸ್ಪಷ್ಟವಾಗಿ ಹೇಳಿದರೆ ಇದಕ್ಕೆ ಅರ್ಥ ಸಿಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):-ಮಾನ್ಯ ಅಧ್ಯಕ್ಷರೆ, ಫಲಾನುಭವಿಗಳ ಸೆಲೆಕ್ಷನ್‌ನಲ್ಲಿ ಈ ರೀತಿ nominated members ಬಂದು ಅವರು overtake ಮಾಡಿಕೊಂಡು, ಮತ್ತೊಂದು ಮಾಡಿಕೊಂಡು ಈ ರೀತಿ ಶಾಸಕರ ಹಕ್ಕಿಗೆ ಚ್ಯುತಿ ಮಾಡಿರುವುದರಿಂದ ಶಾಸಕರ ಹಕ್ಕನ್ನು ಮೊಟಕು ಮಾಡುವಂಥ ಕೆಲಸ ಮಾಡಿದ್ದಾರೆ. ಈ ರೀತಿಯಾಗುವುದಾದರೆ ಶಾಸಕರ ಅಧ್ಯಕ್ಷತೆಯಲ್ಲಿರುವಂಥ ಕಮಿಟಿಯಾದರೂ ಏಕೆ ಬೇಕು ಎಂದು ನಾನು ಹೇಳುತ್ತೇನೆ. ಇದು ಏಕೆ ಬೇಕು? ನಾಮಕರಣಗೊಂಡಂಥವರು elected representative ಇದ್ದರೆ ಅಡ್ಡಿಯಿಲ್ಲ, ಅವರಿಗೆ ಗೌರವವಿರಬೇಕು. ಅದನ್ನು ಬಿಟ್ಟು nominated ಇದ್ದಂಥವರನ್ನು ಕರೆದುಕೊಂಡು ಬಂದು ಅವರು dominate ಮಾಡುವುದು, ಕೊನೆಗೆ ಈಗಾಗಲೇ ಸುರೇಶ್‌ಗೌಡರು ನಮಗೆ ಹೇಳುತ್ತಿದ್ದರು, ಎಲ್ಲವೂ ಆಯಿತು, ನೀವು ಹೇಳಿದಂತೆ ಆಗಿಲ್ಲವೆಂದರೆ ಕೊನೆಗೆ ಯಾರು ಹೇಳುವುದು ಬೇಡ, ಕೊನೆಗೆ ಲಾಟರಿ ಮುಖಾಂತರ ಮಾಡಿದರಂತೆ. ಆ ರೀತಿ ಲಾಟರಿ ಮುಖಾಂತರ ಮಾಡಿದ್ದಾಗಲೂ ಕೂಡ ಆ ಲಿಸ್ಟ್‌ನ್ನು ತೆಗೆದು ಹಾಕಿ ಬೇರೆ ರೀತಿ ಮಾಡುತ್ತಾರೆಂದರೆ ಇದಕ್ಕೆ ಏನರ್ಥವಿದೆ ಹೇಳಿ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ನಾಮಕರಣಗೊಂಡ ಸದಸ್ಯರುಗಳು ಜನರಿಂದ ಆಯ್ಕೆಯಾದ ಪ್ರತಿನಿಧಿಗಳ ಮೇಲೆ ಸವಾರಿ ಮಾಡಬಹುದೆ? ಇಷ್ಟೇ ನಾನು ಕೇಳುವುದು.

ಅಧ್ಯಕ್ಷರು:- ಈಗ ಹೇಳಿದ್ದೀರಲ್ಲವೆ, ಸರ್ಕಾರ ಇದಕ್ಕೆ ಏನು ಹೇಳುತ್ತದೆ ಎಂಬುದನ್ನು ಕೇಳೋಣ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಹೆಚ್.ಕೆ. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರುಗಳ ಅನಿಸಿಕೆ, ಅಭಿಪ್ರಾಯವನ್ನು ಕೇಳಿದ್ದೇನೆ. ಈಗೇನು ವ್ಯವಸ್ಥೆಯನ್ನು ಮಾಡಿದ್ದಾರೆ ಅದರಲ್ಲಿ ಕೆಲವು ನ್ಯೂನತೆಗಳನ್ನು ಅವರು ಹುಡುಕುತ್ತಿದ್ದಾರೆ. ನಾನು ಇಷ್ಟೇ ಹೇಳಬಯಸುತ್ತೇನೆ, ಸಂಬಂಧಪಟ್ಟಂಥ ಮಂತ್ರಿಗಳಿಂದ, ಈಗ ನೀವೇನು ಪ್ರಶ್ನೆ ಎತ್ತಿದ್ದೀರಿ ಇದಕ್ಕೆ ಉತ್ತರವನ್ನು ಕೊಡಿಸುತ್ತೇನೆ.

**( ಗೊಂದಲ )**

ಶ್ರೀ ಎಂ.ಟಿ. ಕೃಷ್ಣಪ್ಪ:- ಈಗ ಏನು ಬೇರೆ ತಾಲ್ಲೂಕಿಗೆ ಅದು transfer ಆಗಿದೆಯೋ ಅದನ್ನು ಈಗ ರದ್ದು ಮಾಡಿ. ನೀವು ಈಗ ಮಾಡಿರುವ decision ಅನ್ನು ರದ್ದು ಮಾಡಿ.

ಶ್ರೀ ಸಿ.ಎನ್. ಬಾಲಕೃಷ್ಣ:- ಮಾನ್ಯ ಅಧ್ಯಕ್ಷರೆ, ಒಟ್ಟಾರೆ ಶಾಸಕರ ಶಾಸನಬದ್ಧ ಅಧಿಕಾರಕ್ಕೆ ಧಕ್ಕೆಯಾಗುತ್ತಿದೆ. ಈಗಾಗಲೇ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ.

ಅಧ್ಯಕ್ಷರು:- ಆಯಿತು, ಆಯಿತು, ಈಗ ಏನು ಮಾಡುವುದಕ್ಕೆ ಬರುತ್ತದೆ?

ಶ್ರೀ ಎಂ.ಟಿ. ಕೃಷ್ಣಪ್ಪ:- ಈಗ ಮಾಡಿರುವ decision ರದ್ದು ಮಾಡಲಿ.

ಅಧ್ಯಕ್ಷರು:- ಈಗ ತಾವೆಲ್ಲರೂ ನನ್ನ ಗಮನಕ್ಕೆ ತಂದಿದ್ದೀರಿ. ಸರ್ಕಾರ ಇದನ್ನು ಗಣನೆಗೆ ತೆಗೆದುಕೊಂಡು ಸರಿಯಾದ , , ,

**( ಗೊಂದಲ )**

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ಶಾಸಕರ ಹಕ್ಕನ್ನು ಕಾಪಾಡಬೇಕಾದವರು ತಾವು. ಹೀಗಾಗಿ ನಮ್ಮ ಹಕ್ಕನ್ನು ನೀವು ಕಾಪಾಡಿ.

ಅಧ್ಯಕ್ಷರು:- ಖಂಡಿತ, ಈಗ ನಿಮ್ಮ ಹಕ್ಕನ್ನು ಕಾಪಾಡಬೇಕೆಂದರೆ ನೀವು privilege ಗೆ ಕೊಡುತ್ತೀವೆಂದರೆ privilege ಗೆ refer ಮಾಡುತ್ತೇನೆ, ಇಲ್ಲದಿದ್ದರೆ ಉತ್ತರ ಬೇಕೆಂದರೆ ಸಂಬಂಧಪಟ್ಟ ಮಂತ್ರಿಯವರಿಂದ ಉತ್ತರ ಕೊಡಿಸುತ್ತೇನೆ.

ಶ್ರೀ ವೈ.ಎಸ್.ವಿ. ದತ್ತಾ:- Privilege motion ಗೆ ಹಾಕಬಹುದಿತ್ತು. ಉಗುರಲ್ಲಿ ಹೋಗುವುದಕ್ಕೆ ಕೊಡಲಿ ತೆಗೆದುಕೊಳ್ಳುವುದು ಬೇಡ ಸುಮ್ಮನಿದ್ದೀವಿ. ನೀವೇ ಹೇಳಿ ಮಾಡಿಸಿ.

ಅಧ್ಯಕ್ಷರು:- ನಾನು ಹೇಳುತ್ತೇನೆ, ನಾನೇ ಹೇಳುತ್ತೇನೆ, ಶಾಸಕರ ಹಕ್ಕನ್ನು ಮೊಟಕುಗೊಳಿಸಬೇಡಿ ಎಂದು ನಾನು ಹೇಳುತ್ತೇನೆ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

**( ಶಾಸಕರ ಹಕ್ಕಿಗೆ ಧಕ್ಕೆಯಾಗುತ್ತಿದೆಯೆಂದು ಮಾನ್ಯ ಸದಸ್ಯರುಗಳಾದ ಶ್ರೀ ಎಂ.ಟಿ. ಕೃಷ್ಣಪ್ಪ, ಶ್ರೀ ಯು.ಬಿ. ಬಣಕಾರ್, ಶ್ರೀ ಸಿ.ಎನ್. ಬಾಲಕೃಷ್ಣ, ಶ್ರೀ ಸಾ.ರಾ. ಮಹೇಶ್ ಹಾಗೂ ಇತರ ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿ ನಿರತರಾದರು )**

**( ಗೊಂದಲ )**

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಮೊದಲು ಈ ರೀತಿಯ ಸಿಸ್ಟಂ ಇರಲಿಲ್ಲ. ಈ ರೀತಿ ಹಿಂದೆ ಯಾವಾಗಲೂ ಇಂಥ ವ್ಯವಸ್ಥೆಯಿರಲಿಲ್ಲ. Nominated members ಕರೆದುಕೊಂಡು ಬಂದು ವಿರೋಧ ಪಕ್ಷದ ಶಾಸಕರು ಎಲ್ಲಿದ್ದಾರೋ ಅಲ್ಲಿಗೆ ಹಾಕಿ ಅಲ್ಲಿ completely ಶಾಸಕರಾದವರು ಕೆಲಸವನ್ನೇ ಅಲ್ಲಿ ಮಾಡುವುದಕ್ಕೆ ಆಗದಂಥ ಪರಿಸ್ಥಿತಿ ಮಾಡಿದ್ದಾರೆ. ಇದು ಒಳ್ಳೆಯದಲ್ಲ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ಇದರ ಬಿಸಿ ಮುಟ್ಟುತ್ತಿರುವುದು ವಿರೋಧ ಪಕ್ಷದ ಶಾಸಕರುಗಳ ಕ್ಷೇತ್ರದಲ್ಲಿ. ಆಡಳಿತ ಪಕ್ಷದವರಿಗೆ ತೊಂದರೆಯಾಗುತ್ತಿಲ್ಲ. ಏಕೆಂದರೆ ನಾಮಕರಣಗೊಂಡ ಸದಸ್ಯರುಗಳು ಆಡಳಿತ ಪಕ್ಷದವರಾಗಿರುತ್ತಾರೆ. ಹೀಗಾಗಿ ಬಿಸಿ ಮುಟ್ಟಿತ್ತಿರುವುದು ವಿರೋಧ ಪಕ್ಷದ ಶಾಸಕರುಗಳ ಕ್ಷೇತ್ರದಲ್ಲಿ.

ಶ್ರೀ ಜಗದೀಶ್ ಶೆಟ್ಟರ್:- ದತ್ತಾರವರೆ, ಹಿಂದೆ ಗಂಗಾ ಕಲ್ಯಾಣ ಯೋಜನೆಯಲ್ಲಿಯೂ ಇದೇ ರೀತಿ ಮಾಡಿದ್ದರು. ಇಲ್ಲಿ ಒತ್ತಡ ತೆಗೆದುಕೊಂಡ ಮೇಲೆ ಗಂಗಾ ಕಲ್ಯಾಣ ಸಮಿತಿಯಲ್ಲಿ ಮಾಡಿದ್ದ nomination cancel ಆಯಿತು. ನೀವು elected representativeಗೆ ಕೊಡಿ.

ಅಧ್ಯಕ್ಷರು:- ಒಂದು ನಿಮಿಷ ಇರಿ. ನಾನು ತಿಳಿದುಕೊಳ್ಳುವುದಕ್ಕೆ ನಿಮ್ಮನ್ನು ಕೇಳುತ್ತಿದ್ದೇನೆ. ಆ ಕಮಿಟಿ ಛೇರ್ಮನ್ ನೀವೇ ಆಗಿರುತ್ತೀರಿ. ನೀವು ಆ ಕಮಿಟಿಯಲ್ಲಿ ಪಾಸ್ ಮಾಡಿ ಕಳುಹಿಸಿರುತ್ತೀರಿ. ಆಗ ತಕರಾರಿದ್ದರೆ ಆಗಲೇ ತಕರಾರನ್ನು ಮಾಡಬೇಕಾಗಿತ್ತು. ಮಾಡಿಲ್ಲ. ಈಗಾಗಲೇ ಕಳುಹಿಸಿದ ಮೇಲೆ ಡಿ.ಡಿ.ಯವರು ಹೇಗೆ change ಮಾಡುತ್ತಾರೆ?

**( ಗೊಂದಲ )**

ಅಧ್ಯಕ್ಷರು:- ಒಂದು ನಿಮಿಷ ಇರಿ. ಕುಮಾರಸ್ವಾಮಿಯವರು ಏನೋ ಹೇಳುತ್ತಾರೆ ಕೇಳೋಣ.

ಶ್ರೀ ಎಂ.ಕೆ. ಅಶೋಕ್ ಪಟ್ಟಣ್(ಮುಖ್ಯ ಸಚೇತಕರು):- ಮಾನ್ಯ ಅಧ್ಯಕ್ಷರೆ, ಇನ್ನು ಹತ್ತು ನಿಮಿಷದಲ್ಲಿ ಸಂಬಂಧಪಟ್ಟ ಇಲಾಖೆಯ ಸಚಿವರು ಬರುತ್ತಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಉದಾಹರಣೆಗೆ ಹೇಳಬೇಕೆಂದರೆ, ಅಲ್ಲೇನಾಗಿದೆಯೆಂದರೆ, ಮೊದಲು ಆ ಕಮಿಟಿ ಮೆಂಬರ್‌ಗಳು ಆ ಲಿಸ್ಟ್‌ಗೆ ಸೈನ್ ಹಾಕಿದ್ದಾರೆ. ಆಮೇಲೇನಾಗಿದೆಯೆಂದರೆ ಆ ಲಿಸ್ಟ್‌ನ್ನು ತಡೆಹಿಡಿಸುತ್ತಾರೆ. ಏಕೆಂದರೆ ಮತ್ತೆ ಅವರುಗಳು ಹೆಸರುಗಳನ್ನು change ಮಾಡಿ ಎಂದು ಹೋದರು. ಇದೇನಾಗಿದೆಯೆಂದರೆ, ಆ ಮೆಂಬರ್‌ಗಳು ವ್ಯಾಪಾರ ಮಾಡಿಕೊಂಡು ಹೊರಟಿದ್ದಾರೆ. ಅದರಿಂದಾಗಿ ಈ ವಿರೋಧ ಪಕ್ಷದಲ್ಲಿರತಕ್ಕಂಥ , , ,

ಶ್ರೀ ಕೆ.ಎನ್. ರಾಜಣ್ಣ:- ವ್ಯಾಪಾರ ಮಾಡಿಕೊಂಡು ಎಂದು ಹೇಳುವುದು ಸರಿಯಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನಡೆಯುತ್ತಿದೆ, ನಡೆಯುತ್ತಿದೆ ಅಷ್ಟೆ.

**( ಗೊಂದಲ )**

ಅಧ್ಯಕ್ಷರು:- ಕುಮಾರಸ್ವಾಮಿಯವರೆ ಒಂದು ನಿಮಿಷ ಕೇಳಿ. ಎಂ.ಎಲ್.ಎ. ಗಳೇ ಅಧ್ಯಕ್ಷ ರಾಗಿರುತ್ತಾರೆ. Nominated member ಒಂದು ನಿಮ್ಮ ಕಮಿಟಿಯಲ್ಲಿರುತ್ತಾರೆ. ನಿಮ್ಮ ಕಮಿಟಿಯಲ್ಲಿ resolution ಕಳುಹಿಸುತ್ತೀರಿ ತಾನೆ. ಆ ರೀತಿ ಕಳುಹಿಸಿದ್ದನ್ನು ಡಿ.ಡಿ. ಯವರು change ಮಾಡುತ್ತಾರೆಯೆ? ಸಮಿತಿಯಲ್ಲಿ ಆದ ನಿರ್ಣಯವನ್ನು ಡಿ.ಡಿ.ಯವರು ಹೇಗೆ change ಮಾಡುತ್ತಾರೆ? ಅವರಿಗೆ ಯಾವ ಅಧಿಕಾರವಿದೆ?

**( ಗೊಂದಲ )**

ಶ್ರೀ ಕೆ.ಎನ್. ರಾಜಣ್ಣ:- ಮಾನ್ಯ ಅಧ್ಯಕ್ಷರೆ, ನಮ್ಮ ಕುಮಾರಸ್ವಾಮಿಯವರು ಆಯವ್ಯಯದ ಮೇಲೆ ಭಾಷಣ ಮಾಡುತ್ತಾರೆಂದು ನಾವೆಲ್ಲರೂ ಬಂದಿದ್ದೇವೆ.

**( ಗೊಂದಲ )**

ಶ್ರೀ ಹೆಚ್.ಕೆ. ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರ ಎಲ್ಲಾ ಗೌರವಾನ್ವಿತ ಸದಸ್ಯರು ಹೇಳಿದ್ದನ್ನು ನಾವು ಕೇಳಿಸಿಕೊಂಡಿದ್ದೇವೆ. ಸರ್ಕಾರದ ನಿಲುವು ಹಾಗೂ ಇವತ್ತೇನು ಆಗಿರುವ ಬೆಳವಣಿಗೆಗಳ ಬಗ್ಗೆ ಇವರೇನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಈ ಸದನದಲ್ಲಿ ಉತ್ತರವನ್ನು

ಕೊಡುತ್ತೇವೆ. ಯಾವುದೇ ಕಾರಣಕ್ಕೂ ನಾಮಾಂಕಿತವಾಗಿರತಕ್ಕಂಥ ಸದಸ್ಯರುಗಳ ಬಗ್ಗೆ ಅನಾವಶ್ಯಕ ವಾಗಿರತಕ್ಕಂಥ ಆಪಾದನೆ ಮಾಡತಕ್ಕಂಥದ್ದು ಸರಿಯಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಅಲ್ಲಿ ನಡೆಯುತ್ತಿರುವುದನ್ನು ಹೇಳುತ್ತಿದ್ದೇವೆ. ಆ ತರಹ ನಡೆಯುತ್ತಿದೆ. ಅನಾವಶ್ಯಕವಾಗಿ ಹೇಳುತ್ತಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್:- ಫಲಾನುಭವಿಗಳ ಲಿಸ್ಟ್‌ನ್ನು ನಾಮಕರಣಗೊಂಡ ಸದಸ್ಯರುಗಳು ತಡೆ ಹಿಡಿಯುತ್ತಾರೆಯೆ? ಯಾರು ತಡೆ ಹಿಡಿದಿದ್ದಾರೆ ಎಂಬುದನ್ನು ನೋಡೋಣ. ನಮ್ಮ ಹೇಳಿಕೆಯ ನಂತರ ಮುಂದೆ ಇದರ ಬಗ್ಗೆ ಚರ್ಚೆ ಮಾಡಿ. ಈಗ ಮಾಜಿ ಮುಖ್ಯಮಂತ್ರಿಗಳು ಆಯವ್ಯಯದ ಮೇಲೆ ತಮ್ಮ ಭಾಷಣವನ್ನು ಮುಂದುವರೆಸುತ್ತಾರೆ. ಆ ನಂತರ ಅಷ್ಟರೊಳಗೆ ಇದರ ಬಗ್ಗೆ ಉತ್ತರವನ್ನು ಮಾನ್ಯ ಸಚಿವರು ಉತ್ತರ ಕೊಟ್ಟಮೇಲೆ ಚರ್ಚೆ ಮಾಡುವಿರಂತೆ.

**( ಗೊಂದಲ )**

ಅಧ್ಯಕ್ಷರು:- ಮಾನ್ಯ ಸದಸ್ಯರುಗಳೆ, ಈಗಾಗಲೇ ನಿಮ್ಮ ಅಭಿಪ್ರಾಯಗಳನ್ನು ಹೇಳಿದ್ದೀರಿ. ಅದು ಈಗ ಸರ್ಕಾರದ ಗಮನಕ್ಕೂ ಹೋಗಿದೆ. ಸರ್ಕಾರದಿಂದ ಅದಕ್ಕೆ ಸರಿಯಾದಂಥ ಉತ್ತರವನ್ನು ಕೂಡ ಕೊಡಿಸುತ್ತೇನೆ. ಆದರೆ ಅನಾವಶ್ಯಕವಾಗಿ ವ್ಯಾಪಾರ ಬರೀ nominated member ಮಾಡುತ್ತಾರೆಂದರೆ ಹೇಗಾಗುತ್ತದೆ ಹೇಳಿ. ಆ ರೀತಿಯೆಲ್ಲಾ ಆಪಾದನೆ ಮಾಡುವುದಕ್ಕೆ ಹೋಗಬಾರದು.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ಇನ್ನೊಂದೇನು ಗೊತ್ತಾ, ,

ಶ್ರೀ ಜಗದೀಶ್ ಶೆಟ್ಟರ್:- ದತ್ತಾರವರೆ ಒಂದು ನಿಮಿಷ, , ಮಾನ್ಯ ಅಧ್ಯಕ್ಷರೆ, ಮಾನ್ಯ ಬಣಕಾರ್ ಕ್ಷೇತ್ರದಲ್ಲಿ nominated member ಆದವರು ಕೇಳುತ್ತಾರೆ, nominated member ನಾವು ನಾಲ್ಕು ಮಂದಿ ಇದ್ದೇವೆ, ನೀವು ಒಬ್ಬರೇ ಇದ್ದೀರಿ, ನಾವು 80% ಫಲಾನುಭವಿ ಗಳನ್ನು ತೆಗೆದುಕೊಳ್ಳುತ್ತೇವೆ, ನೀವು 20% ತೆಗೆದುಕೊಳ್ಳಿ ಎಂದು ಹೇಳುತ್ತಾರಂತೆ. ಈ ರೀತಿ percentage ನಲ್ಲಿ ಕೇಳುತ್ತಾರಂತೆ.

**( ಗೊಂದಲ )**

ಅಧ್ಯಕ್ಷರು:- ಸರ್ಕಾರದವರು ಇದರ ಬಗ್ಗೆ ಏನು ಹೇಳುತ್ತಾರೆ ಎಂಬುದನ್ನು ಕೂಡ ನಾನು ಕೇಳಬೇಕಾಗುತ್ತದಲ್ಲವೆ?

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

**( ಸದನದ ಬಾವಿಯಿಂದ ಮಾನ್ಯ ಸದಸ್ಯರು ಮಾತನಾಡಿದ್ದನ್ನು ದಾಖಲಿಸಿರುವುದಿಲ್ಲ )**

ಶ್ರೀ ವೈ.ಎಸ್.ವಿ. ದತ್ತಾ:- ಲಾಟರಿ ಏಕೆ ಮಾಡಬೇಕು? ಲಾಟರಿಯಲ್ಲಾರಿ, ಸಮಿತಿಯಿಂದ ಫಲಾನುಭವಿಗಳ ಆಯ್ಕೆ ಮಾಡಿ ಕಳುಹಿಸಿರುವಾಗ ಲಾಟರಿ ಏಕೆ ಮಾಡಬೇಕು?

ಅಧ್ಯಕ್ಷರು:- ನೋಡಿ, ಈಗ ನನ್ನ ಗಮನಕ್ಕೆ ತಂದ ಮೇಲೆ ನಾನು ಸರ್ಕಾರಕ್ಕೆ ಕೇಳಬೇಕೋ ಬೇಡವೋ, ಈ ಸರ್ಕಾರದ ಕಡೆಯಿಂದ ಸಂಬಂಧಪಟ್ಟ ಸಚಿವರು ಬರುತ್ತಾರೆ. ನಾನು ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರವನ್ನು ಕೊಡಿಸುತ್ತೇನೆ. ಉತ್ತರ ನಿಮಗೆ ಸಮಾಧಾನವಾಗಲಿಲ್ಲವೆಂದರೆ ಮುಂದೆ ನೋಡೋಣ. ದಯಮಾಡಿ ಸದನದ ಬಾವಿಯಲ್ಲಿರುವವರು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ.

**( ಗೊಂದಲ )**

ಶ್ರೀ ಹೆಚ್.ಕೆ. ಪಾಟೀಲ್:- ಮಾನ್ಯ ಕೃಷ್ಣಪ್ಪನವರೆ, ಈಗ ನೀವು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ನಿಮ್ಮ ಅಭಿಪ್ರಾಯವನ್ನು ನಾವು ಕೇಳಿದ್ದೇವೆ. ಸರ್ಕಾರದಿಂದ ಅದಕ್ಕೆ ಉತ್ತರವನ್ನು ಕೊಡುತ್ತೇವೆ. ಉತ್ತರವನ್ನು ಕೊಟ್ಟಮೇಲೆ ನೀವು ಅದರ ಬಗ್ಗೆ ಚರ್ಚೆ ಮಾಡಬಹುದು.

ಅಧ್ಯಕ್ಷರು:- ಅವರ ಉತ್ತರ ನಿಮಗೆ ಸಮಾಧಾನವಿಲ್ಲವೆಂದರೆ ಮುಂದೆ ನೋಡೋಣವಂತೆ. ದಯವಿಟ್ಟು ಸದನದ ಬಾವಿಯಲ್ಲಿರುವವರು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ. Please resume there.

**( ಶಾಸಕರ ಹಕ್ಕಿಗೆ ಧಕ್ಕೆಯಾಗುತ್ತಿದೆಯೆಂದು ಸದನದ ಬಾವಿಗೆ ಬಂದು ಧರಣಿ ನಿರತರಾಗಿದ್ದ ಮಾನ್ಯ ಸದಸ್ಯರುಗಳಾದ ಶ್ರೀ ಎಂ.ಟಿ. ಕೃಷ್ಣಪ್ಪ, ಶ್ರೀ ಯು.ಬಿ. ಬಣಕಾರ್, ಶ್ರೀ ಸಿ.ಎನ್. ಬಾಲಕೃಷ್ಣ, ಶ್ರೀ ಸಾ.ರಾ. ಮಹೇಶ್ ಹಾಗೂ ಇತರ ಸದಸ್ಯರುಗಳು ಸದನದ ಬಾವಿಯಿಂದ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು )**

(ಮುಂದು)

D-27.03.2017/3.40/27/HBU-SSD

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಒಂದು ಮಾತು ಹೇಳುತ್ತೇನೆ. ಮಾನ್ಯ ಕುಮಾರಸ್ವಾಮಿಯವರು ಇವತ್ತು ಬಜೆಟ್ ಮೇಲೆ ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ನಾವೆಲ್ಲ ಅವರ ಮಾತುಗಳನ್ನು ಕೇಳಬೇಕೆಂದು ಬಹಳ ಕಾತುರರಾಗಿದ್ದೇವೆ. ಈ ಮಧ್ಯೆ ಮಾನ್ಯ ಕುಮಾರಸ್ವಾಮಿಯವರು

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಏನು ಹೇಳಿದರೋ ಗೊತ್ತಿಲ್ಲ. ಮೆಂಬರುಗಳು ವ್ಯಾಪಾರ ಮಾಡುತ್ತಾರೆನ್ನುವ ಆಪಾದನೆ ಸರಿಯಾದುದಲ್ಲ.

ಅಧ್ಯಕ್ಷರು : ಸರಿಯಾದುದಲ್ಲ ಎಂದು ನಾನೂ ಹೇಳಿದ್ದೇನೆ.

ಶ್ರೀ ಕೆ.ಎನ್. ರಾಜಣ್ಣ : ಅದೇ ಮೆಂಬರ್‌ಗಳು ಎಂ.ಎಲ್.ಎ.ಗಳು ವ್ಯಾಪಾರ ಮಾಡುತ್ತಾರೆಂದು ಹೇಳಿದರೆ ನಮ್ಮ ಗತಿಯೇನಾಗುತ್ತದೆ? ಅದಕ್ಕೆ ಆ ರೀತಿ ಆಪಾದನೆ ಅವರು ಹಿಂಪಡೆಯಬೇಕೆಂದು ನಾನು ಅವರಿಗೆ ಮನವಿ ಮಾಡುತ್ತೇನೆ.

ಶ್ರೀ ಸಾ.ರಾ. ಮಹೇಶ್ : ಹಾಗಿದ್ದಮೇಲೆ ಡಿ.ಡಿ. ಹತ್ತಿರ ಹೋದಾಗ ಏಕೆ ತಡೆಹಿಡಿಯಬೇಕು? ಮೀಟಿಂಗ್‌ನಲ್ಲಿ ಮಾಡುವಾಗ ಮೆಂಬರ್‌ಗಳು ಏನು ಮಾಡುತ್ತಿರುತ್ತಾರೆ? ಡಿ.ಡಿ. ಹತ್ತಿರ ಹೋಗಿ ಏಕೆ ತಡೆಹಿಡಿಯಬೇಕು?

ಅಧ್ಯಕ್ಷರು : ಏಕೆ ತಡೆಹಿಡಿದಿದ್ದಾರೆ, ಏನು ಎನ್ನುವುದನ್ನು ಕೇಳೋಣ.

ಶ್ರೀ ಸಾ.ರಾ. ಮಹೇಶ್ : ರಾಜಣ್ಣನವರೆ, ನೀವು ವಹಿಸಿಕೊಳ್ಳುವವರಿಗೆ ಹೇಳಿ. ಇಲ್ಲಿ ಮಾಡುವಾಗ ಸೈನ್ ಹಾಕಿರುತ್ತಾರೆ. ಅಲ್ಲಿ ಏಕೆ ಬೇಡ ಎನ್ನುತ್ತಾರೆ.

(ಗೊಂದಲ)

ಅಧ್ಯಕ್ಷರು : ಅದಕ್ಕೆ ನಾನು ಸರಿಯಾದ ಉತ್ತರ ಕೊಡಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಈಗ ವರದಿಯನ್ನೊಪ್ಪಿಸುವುದು. Mr.Haris, submit your report.

**ವರದಿಯನ್ನೊಪ್ಪಿಸುವುದು**

ಶ್ರೀ ಎನ್.ಎ. ಹ್ಯಾರೀಸ್ (ಶಾಂತಿನಗರ): ಮಾನ್ಯ ಅಧ್ಯಕ್ಷರೆ, 2016-17ನೇ ಸಾಲಿನ ಕರ್ನಾಟಕ ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷನಾದ ನಾನು 32ನೇ ವರದಿಯನ್ನು ಸಮಿತಿಯ ಪರವಾಗಿ ಸದನದಲ್ಲಿ ಮಂಡಿಸುತ್ತಿದ್ದೇನೆ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಅಧ್ಯಕ್ಷರು : ವರದಿಯನ್ನು ಮಂಡಿಸಲಾಯಿತು. ಈಗ ಕುಮಾರ ಸ್ವಾಮಿಯವರು ಬಜೆಟ್ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿ.

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, ವಿಧೇಯಕವನ್ನು ಮಂಡನೆ ಮಾಡುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡನೆ ಮಾಡುತ್ತೀರ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಮ್ಮದು protest ಇದೆ. ಈ ರೀತಿ ಕೊನೆಯ ದಿವಸ ಬಿಲ್‌ಗಳನ್ನು ತೆಗೆದುಕೊಂಡು ಬಂದು ಮಂಡನೆ ಮಾಡುವುದು, ಅದನ್ನು ಪಾಸ್ ಮಾಡುವುದನ್ನು ನಾನು ಮೊದಲಿನಿಂದಲೂ ವಿರೋಧ ಮಾಡುತ್ತಿದ್ದೇನೆ. ಈ ಬಿಲ್ ಅನ್ನು ಕೊನೆಯ ದಿವಸ ತರಾತುರಿಯಿಂದ ತೆಗೆದುಕೊಂಡು ಬಂದರೆ ಯಾವಾಗ ಚರ್ಚೆ ಮಾಡಬೇಕು? ಅದರ ಬಗ್ಗೆ ಚರ್ಚೆಯಾಗುವುದು ಬೇಡವೇ? ಇವತ್ತು ಆ ಬಿಲ್ regular agenda ದಲ್ಲಿ ಕೂಡ ಇಲ್ಲ, additional agenda ತಂದು, ಅದನ್ನು ಮಂಡನೆ ಮಾಡಿ ಇವತ್ತೇ ಅದರ ಬಗ್ಗೆ ಚರ್ಚೆ ಮಾಡುವುದು ಎಂದು ಹೇಳುತ್ತೀರಿ. ಇದಕ್ಕೆ ಅರ್ಥವಿದೆಯೇ?

ಅಧ್ಯಕ್ಷರು : ನಾಳೆ ಮಾನ್ಯ ಮುಖ್ಯಮಂತ್ರಿಗಳ ಉತ್ತರ ಕೊಟ್ಟ ಮೇಲೆ ಚರ್ಚೆ ಮಾಡೋಣವೇ?

ಶ್ರೀ ಜಗದೀಶ್ ಶೆಟ್ಟರ್ : ಈ ರೀತಿ ತರುವಂಥ ಪದ್ಧತಿ ಸರಿಯಲ್ಲ.

ಅಧ್ಯಕ್ಷರು : ಇದು ಪದ್ಧತಿ ಸರಿಯಲ್ಲವೆಂದು ನೀವು ಆಗ ಹೇಳಿದ್ದಿರಿ.

ಶ್ರೀ ಜಗದೀಶ್ ಶೆಟ್ಟರ್ : ನೀವು ಇಷ್ಟೊಂದು ತರಾತುರಿ ಇದ್ದರೆ ಬೇಕಾದರೆ ಅಧಿವೇಶನ ಮುಗಿದಮೇಲೆ ಸುಗ್ರೀವಾಜ್ಞೆ ತೆಗೆದುಕೊಂಡು ಬನ್ನಿ. ಬೇಡ, ಈ ವಿಧೇಯಕವನ್ನು introduction ಮಾಡುವುದಕ್ಕೂ ಕೂಡ ನಮ್ಮ ವಿರೋಧವಿದೆ. ಈ ರೀತಿ ತರಾತುರಿಯಲ್ಲಿ ತಂದರೆ ನಾವು ಶಾಸಕರು ಅದರ ಬಗ್ಗೆ ಸ್ಟಡಿ ಮಾಡಬೇಕಲ್ಲ. ಅದನ್ನು ತಂದುಬಿಡುವುದು. ನಿಮಗೆ ಅಷ್ಟೊಂದು urgency ಇದ್ದರೆ session ಮುಗಿದಮೇಲೆ ಬುಧವಾರ ಒಂದು ordinance ತೆಗೆದುಕೊಂಡು ಬನ್ನಿ, ಯಾರೂ ಬೇಡವೆನ್ನುವುದಿಲ್ಲ. ಈ ರೀತಿ ತರಾತುರಿಯಲ್ಲಿ ತರುವುದಕ್ಕೆ ಹೋಗಬೇಡಿ. ಇದಕ್ಕೆ ನಮ್ಮ ವಿರೋಧ ಇದೆ. ಮಾನ್ಯ ಅಧ್ಯಕ್ಷರೆ, ಇದು ನಿಮಗೆ ಬಿಟ್ಟ ವಿಚಾರ. ಇದು ಒಳ್ಳೆಯದಲ್ಲ. ನೀವು ಅಧಿವೇಶನದ ಕೊನೆಯ ಹಂತದಲ್ಲಿ ತರುವುದು ಸರಿಯಲ್ಲ. ಇದನ್ನು introduction ಮಾಡುವುದಕ್ಕೆ ಹೋಗಬೇಡಿ.

27-03-2017

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ವಿರೋಧ ಪಕ್ಷದ ನಾಯಕರ ಮತ್ತು ಸದನದ ಸದಸ್ಯರ ಗಮನಕ್ಕೆ ತರುತ್ತೇನೆ. ಇದು ಮಕ್ಕಳ ರಕ್ಷಣೆ ಮಾಡುವ . . .

ಶ್ರೀ ಜಗದೀಶ್ ಶೆಟ್ಟರ್ : ಬಜೆಟ್ ಚರ್ಚೆ ಪ್ರಾರಂಭವಾಗಿದೆ, ಮಾನ್ಯ ಕುಮಾರಸ್ವಾಮಿಯವರು ಚರ್ಚೆಯನ್ನು ಪೂರ್ತಿ ಮಾಡಲಿ. ಒಂದೊಂದು ಸಬ್ಜೆಕ್ಟ್ ತೆಗೆದುಕೊಂಡು ಚರ್ಚೆಯಾಗಲಿ. ಪಾರ್ಟ್ ಪಾರ್ಟ್ ಚರ್ಚೆ ಮಾಡುವುದು ಸರಿಯಲ್ಲ

ಶ್ರೀ ತನ್ವೀರ್ ಸೇಠ್ : ತಾವು ತಮ್ಮ ಅನಿಸಿಕೆಯನ್ನು ಹೇಳಿದ್ದೀರಿ. ಸರ್ಕಾರದ ಕಡೆಯಿಂದ ನಮಗೂ ಹೇಳುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಹೇಳಿ.

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, ಮಕ್ಕಳ ಸಂರಕ್ಷಣೆ ಮಾಡುವಂಥ Child Right Policy ಏನಿದೆ, ಇದು ಕಳೆದ ವರ್ಷ ಕ್ಯಾಬಿನೆಟ್‌ನಲ್ಲಿ ಆದಮೇಲೆ ನಾವು ಒಂದು ಆಕ್ಷನ್ ಪ್ಲಾನ್ ಮಾಡಿದ್ದೇವೆ. ಈ ಆಕ್ಷನ್ ಪ್ಲಾನ್ ಮಾಡಿದ ಮೇಲೆ ಕೂಡ ನಮ್ಮ ಕಾಯಿದೆಯಲ್ಲಿ ಸೂಕ್ತ ತಿದ್ದುಪಡಿ ತರುವಂಥ ಅಗತ್ಯ ಇತ್ತು. ಇತ್ತೀಚೆಗೆ baby sitting, ಮತ್ತೊಂದು ಆಗಿರಬಹುದು, ಇಳಿ ವಯಸ್ಸಿನ ಮಕ್ಕಳ ಮೇಲೆ ಆಗುತ್ತಿರುವಂಥ ಅನೇಕ ಸಮಸ್ಯೆಗಳನ್ನು ಮನಗಂಡು ಇದಕ್ಕೆ ಬಹಳ ಸ್ಪಷ್ಟವಾಗಿ ಒಂದು ತಿದ್ದುಪಡಿ ತರುವಂಥ ಆಗತ್ಯತೆ ಮನಗಂಡು ತಂದಿದ್ದೇವೆ. ಇದನ್ನು ತರುವುದಕ್ಕೆ ವಿಳಂಬವಾಗಿರುವುದನ್ನು ನಾನು ಸದನದ ಕ್ಷಮೆ ಕೇಳುತ್ತೇನೆ. ಆದರೆ ಇದು ಅತ್ಯಂತ ಅವಶ್ಯಕವಾಗಿರುವುದರಿಂದ ತಂದಿರುವುದು. ಇದು ಯಾವುದೇ ರೀತಿಯಲ್ಲಿ ಹೊಸ ಕಾರ್ಯಕ್ರಮ, ಮತ್ತೊಂದು ಕೊಡುವಂಥಾದ್ದಲ್ಲ. ರಾಜ್ಯದಲ್ಲಿರುವಂಥ ಎಲ್ಲಾ ಶಾಲೆಗಳನ್ನು ಒಳಗೊಂಡಂತೆ ಮಕ್ಕಳ ಮೇಲೆ ಏನು ಲೈಂಗಿಕ ಕಿರುಕುಳ ಆಗುತ್ತಿದೆ, ಅದಕ್ಕೆ ಮಕ್ಕಳ safety and security ಮಾಡುವುದಕ್ಕೆ ಸ್ಪಷ್ಟವಾದಂಥ ವ್ಯಾಖ್ಯಾನ ಮಾಡಿ, ದಂಡ ವಿಧಿಸುವ ಮತ್ತು ಅಧಿಕಾರ ತೆಗೆದುಕೊಳ್ಳುವುದಕ್ಕೆ ಈ ವಿಧೇಯಕ ತಂದಿರುವುದು. ಮಕ್ಕಳ ಸುರಕ್ಷತೆಗೆ ನಾವು ಏನು ಆದ್ಯತೆ ಕೊಡಬೇಕಾಗಿದೆ, ಆ ವಿಚಾರದಲ್ಲಿ ವಿಧೇಯಕವನ್ನು ತರಾತುರಿಯಲ್ಲಿ ತರುತ್ತಿದ್ದೀರಿ ಎಂದು ಏನು ಹೇಳುತ್ತಿದ್ದೀರಿ, ಇದು ತರಾತುರಿಯಲ್ಲಿ ತಂದಿರುವುದಲ್ಲ. ಇದರ ಬಗ್ಗೆ ಸಿದ್ದತೆ ಮಾಡಿಕೊಂಡು ತಂದಿರುವುದು. ಸುಗ್ರೀವಾಜ್ಞೆ ತನ್ನಿ ಎಂದು ತಾವು ಏನು ಹೇಳಿದಿರಿ, ಅದು ನಮ್ಮ ಅಧಿಕಾರ ಇರಬಹುದು.

ತಿದ್ದುಪಡಿಯಾಗದ/ uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಆದರೆ ಸದನಕ್ಕೆ ಗೌರವ ಕೊಟ್ಟು ನಾನು ತಂದಿರುವುದನ್ನು ತಾವು ಮೆಚ್ಚಿಕೊಳ್ಳಲೇಬೇಕು. ಇದನ್ನು ನನ್ನಷ್ಟಕ್ಕೆ ನಾನು ಮಾಡಬೇಕೆಂದಿದ್ದರೆ . . .

ಶ್ರೀ ಜಗದೀಶ್ ಶೆಟ್ಟರ್ : ಇಷ್ಟೊಂದು ಕಳಕಳಿ ಇದ್ದಿದ್ದರೆ ಅಧಿವೇಶನ ಮಾರ್ಚ್ 15ನೇ ತಾರೀಖಿನಿಂದ ಪ್ರಾರಂಭವಾಗಿದೆ. ಆಗಲೇ ಇಡಬಹುದಾಗಿತ್ತಲ್ಲ. ಹಾಗಾದರೆ ಎರಡು ದಿವಸದಲ್ಲಿ ಅನಾಹುತಗಳು ಜಾಸ್ತಿಯಾಯಿತೇ?

ಶ್ರೀ ವೈ.ಎಸ್.ವಿ. ದತ್ತ : ಮಾನ್ಯ ಅಧ್ಯಕ್ಷರೆ, ಇವತ್ತು ವಿಧೇಯಕವನ್ನು ಮಂಡನೆ ಮಾಡೋಣ, ನಾಳೆ ಚರ್ಚೆ ಮಾಡಿ ತೀರ್ಮಾನ ಮಾಡೋಣ.

ಶ್ರೀ ತನ್ವೀರ್ ಸೇಠ್ : ಅದನ್ನು ಆಮೇಲೆ ಮಾಡಿ. ವಿಧೇಯಕವನ್ನು ಮಂಡನೆ ಮಾಡುವಂಥ ಅವಕಾಶ ಮಾಡಿಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇನ್ನುಳಿ ಮುಂದಾದರೂ ಇದರ ಬಗ್ಗೆ ತಾವು ಸರ್ಕಾರಕ್ಕೆ ಎಚ್ಚರಿಕೆ ಕೊಡಿ. ನಾವು ಪ್ರತಿ ಬಾರಿ ಬಿಎಸಿ ಸಭೆಯಲ್ಲಿ ನೀವು ಹತ್ತು ಅಥವಾ ಇಪ್ಪತ್ತು ಬಿಲ್ ತೆಗೆದುಕೊಂಡು ಬನ್ನಿ, ಅದಕ್ಕೆ ನಮ್ಮದೇನೂ ತಕರಾರಿಲ್ಲ. ಅದನ್ನು ಮೊದಲಿನ ದಿನ ಅಥವಾ ಎರಡನೆ ದಿನ introduction ಮಾಡಿ. ಅದರ ಬಗ್ಗೆ ನಾಲ್ಕು ದಿವಸ ಡಿಬೇಟ್ ಆಗಲಿ, ಸಾರ್ವಜನಿಕ ಚರ್ಚೆಯಾಗಲಿ. ಅದು ಬಿಟ್ಟು ಕೊನೆ ದಿವಸ ತಂದು, ಅರ್ಜೆಂಟ್ ಇದೆ, ಈ ಬಿಲ್ ಪಾಸ್ ಮಾಡಿ ಎಂದು ಹೇಳುವುದು ಒಳ್ಳೆಯ ಬೆಳವಣಿಗೆ ಅಲ್ಲ. ಅದಕ್ಕೆ ದಯವಿಟ್ಟು ತಾವು ಸರ್ಕಾರಕ್ಕೆ ವಾರ್ನಿಂಗ್ ಮಾಡಬೇಕು. ಇದರ ಬಗ್ಗೆ ನಾಳೆ ಮಧ್ಯಾಹ್ನ ಮೇಲೆ ಚರ್ಚೆ ಮಾಡುವುದರ ಬಗ್ಗೆ ನೋಡೋಣ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರ ಅಭಿಪ್ರಾಯ ಸರಿಯಿದೆ. ಬಿಲ್‌ಗಳನ್ನು ಆದಷ್ಟು ಬೇಗ ತಂದು, ಚರ್ಚೆ ಮಾಡಿ, ಆ ಬಿಲ್ ಪಾಸ್ ಮಾಡಿಕೊಳ್ಳುವುದು ಒಳ್ಳೆಯದು. ಆದರೆ ಅದು ಅನಿವಾರ್ಯ ಇದೆ, ಈಗ ನೀವು introduce ಮಾಡಿ, ಅದರ ಬಗ್ಗೆ ನಾಳೆ ಚರ್ಚೆ ಮಾಡೋಣ.

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ನನ್ನ ಇಲಾಖೆಯ ವ್ಯಾಪ್ತಿಗೆ ಬರುವ ಪಿ.ಯು.ಸಿ. ಪರೀಕ್ಷೆ ಅತ್ಯಂತ ಯಶಸ್ವಿಯಾಗಿ ಮುಗಿದಿದೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಈ ಸಂತೋಷವನ್ನು ಹಂಚಿಕೊಳ್ಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಜಗದೀಶ್ ಶೆಟ್ಟರ್ : ಪರೀಕ್ಷೆಯಲ್ಲಿ ಯಾವುದು ಕಾಪಿ ಆಗಲಿಲ್ಲ ಹಾಗೂ ಪ್ರಶ್ನೆಪತ್ರಿಕೆ ಲೀಕ್ ಆಗಲಿಲ್ಲವೆನ್ನುವುದು ಸಂತೋಷ.

ಅಧ್ಯಕ್ಷರು : ಈಗ ನಿಮ್ಮ ಬಿಲ್ ಅನ್ನು ಮಂಡನೆ ಮಾಡಿ.

ಶ್ರೀ ವೈ.ಎ.ನಾರಾಯಣಸ್ವಾಮಿ : ಇದು ಸರ್ಕಾರದ ಸಾಧನೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

**ಶಾಸನ ರಚನೆ**

**ವಿಧೇಯಕದ ಮಂಡನಗೆ ಅನುಮತಿ ಕೋರಿಕೆ**

**ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ)(ತಿದ್ದುಪಡಿ) ವಿಧೇಯಕ 2017**

ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ)(ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು : ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ, " 2017ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ)(ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು.
ಪ್ರಸ್ತಾವ ಹೌದು ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವ ಹೌದು ಎನ್ನುವವರ ಪರವಾಗಿದೆ
ಪ್ರಸ್ತಾವ ಹೌದು ಎನ್ನುವವರ ಪರವಾಗಿದೆ

27-03-2017

ಪ್ರಸ್ತಾವವು ಅಂಗೀಕೃತವಾಗಿದೆ.

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ)(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

**(ಅನುಬಂಧ-1)**

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

**ಕರ್ನಾಟಕ ಶಿಕ್ಷಣ (ಎರಡನೇ ತಿದ್ದುಪಡಿ) ವಿಧೇಯಕ, 2017**

ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ಕರ್ನಾಟಕ ಶಿಕ್ಷಣ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು : ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ, "2017ನೇ ಸಾಲಿನ ಕರ್ನಾಟಕ ಶಿಕ್ಷಣ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡುವುದು"

ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು.
ಪ್ರಸ್ತಾವ ಹೌದು ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವ ಹೌದು ಎನ್ನುವವರ ಪರವಾಗಿದೆ
ಪ್ರಸ್ತಾವ ಹೌದು ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕೃತವಾಗಿದೆ.

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, 2017ನೇ ಸಾಲಿನ ಕರ್ನಾಟಕ ಶಿಕ್ಷಣ(ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಯಿತು.

(ಅನುಬಂಧ-2)

ಶ್ರೀ ತನ್ವೀರ್ ಸೇಠ್ : ಮಾನ್ಯ ವಿರೋಧ ಪಕ್ಷದ ನಾಯಕರು ಮಾತಿನಲ್ಲಿ ವಿರೋಧ ಮಾಡಿರಬಹುದು, ಆದರೆ ಇಲ್ಲ ಎಂದು ಎಲ್ಲಿಯೂ ಹೇಳಿಲ್ಲ, ಧನ್ಯವಾದಗಳು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ನಿಮಗೆ ಹೌದು ಎಂದು ಹೇಳಲಿಲ್ಲ.

ಶ್ರೀ ತನ್ವೀರ್ ಸೇಠ್ : ಹೌದು ಎಂದು ಹೇಳಿದರು, ಇಲ್ಲ ಎಂದು ಹೇಳದಿರುವುದಕ್ಕೆ ಧನ್ಯವಾದಗಳು. ಪರ್ಯಾಲೋಚನಾ ಪ್ರಸ್ತಾವವನ್ನು ತೆಗೆದುಕೊಂಡು ಬಿಡೋಣವೇ?



ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಧ್ಯಕ್ಷರು : ಇಲ್ಲ, ಪರ್ಯಾಲೋಚನಾ ಪ್ರಸ್ತಾವ ಬೇಡ, ನಾಳೆ ತೆಗೆದುಕೊಳ್ಳೋಣ.

**ವಿತ್ತೀಯ ಕಾರ್ಯಕಲಾಪಗಳು**

**2017-18ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಚರ್ಚೆ**

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ) : ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನ ಮಂಡನೆ ಮಾಡಬೇಕಾದರೆ ಪ್ಯಾರ 13 ರಲ್ಲಿ ಅಪಮೌಲ್ಯೀಕರಣದ ಪರಿಣಾಮ ಎಂಬ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದು 'ಯಾವುದೇ ಸಾರ್ವಜನಿಕ ನೀತಿಯು ನಿಗದಿತ ಗುರಿಯನ್ನು ಸಾಧಿಸುವ ಉದ್ದೇಶದ ಜೊತೆಗೆ ಅದನ್ನು ಕಾರ್ಯಗತಗೊಳಿಸುವುದರಲ್ಲಿಯೂ ಹೆಚ್ಚು ಸಮರ್ಥವಾಗಿರಬೇಕು. ಅಪಮೌಲ್ಯೀಕರಣವು ಜನ ಸಾಮಾನ್ಯರಿಗೆ ಅಪಾರ ಸಂಕಷ್ಟ ಉಂಟು ಮಾಡಿತು. ಆದರೆ ಅದರಿಂದ ಸಾಧಿಸಿದ ಫಲಶೃತಿಯೇನು ಎಂಬುದನ್ನು ಕೇಂದ್ರ ಸರ್ಕಾರವೂ ಇನ್ನು ತಿಳಿಸಬೇಕಾಗಿದೆ. ರೈತರು ಹಾಗೂ ಗ್ರಾಮೀಣ ಜನತೆಗೆ ಸೇವೆ ನೀಡುವಲ್ಲಿ ಅತ್ಯಂತ ನಿರ್ಣಾಯಕ ಪಾತ್ರವಹಿಸುವ ಇಡೀ ಸಹಕಾರ ವಲಯವು ಅಕ್ಷರಶ: ಸ್ಥಬ್ಧಗೊಂಡಿತು. ತಮಗೆ ವಹಿಸಿದ್ದ ಜಬಾಬ್ದಾರಿಯನ್ನು ನಿರ್ವಹಿಸಲು ಬ್ಯಾಂಕಿಂಗ್ ವ್ಯವಸ್ಥೆಯು ಸನ್ನದ್ದರಾಗಿಲ್ಲದೆ ಇದ್ದದ್ದು ಅದರ ಅನುಷ್ಟಾನದ ರೀತಿಯಲ್ಲಿನ ಸಿದ್ದತೆಯ ಕೊರತೆಯನ್ನು ಜಾಹೀರುಪಡಿಸಿತು. ಅನುಷ್ಠಾನದ ನಡುವೆಯೇ ಗುರಿಯ ದಿಕ್ಕನ್ನು ಬದಲಿಸಲಾಯಿತು ಹಾಗೂ ನಿಯಮಗಳನ್ನು ಪದೇ ಪದೇ ಪರಿಷ್ಕರಿಸಲಾಯಿತು. ಅಪಮೌಲ್ಯೀಕರಣದ ಅಗತ್ಯತೆಯೇ ಚರ್ಚಾಸ್ಪದವಾಗಿದ್ದು, ಕೇಂದ್ರ ಸರ್ಕಾರ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್‌ಗಳು ಕನಿಷ್ಟ ಪಕ್ಷ ಮುಂದೆ ಒದಗಬಹುದಾದ ತೊಂದರೆಗಳನ್ನು ಮುಂದಾಲೋಚಿಸಿ, ಸಾಮಾನ್ಯ ಜನರಿಗೆ ಯಾವುದೇ ತೊಂದರೆಯಾಗದಂತೆ ಕಾರ್ಯಸಾಧ್ಯ ಹಾಗೂ ಸಶಕ್ತವಾದ ವ್ಯವಸ್ಥೆಯನ್ನು ಆಚರಣೆಗೆ ತರಬೇಕಿತ್ತು ಎಂಬುದು ನನ್ನ ಅನಿಸಿಕೆ ' ಎನ್ನುವುದನ್ನು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಇಷ್ಟಕ್ಕೆ ಈ ವಿಷಯವನ್ನು ಅಂತ್ಯಗೊಳಿಸದೆ, ಈ ಅಪಮೌಲ್ಯೀಕರಣದ ನಂತರ ಆದಂಥ ಬೆಳವಣಿಗೆಗಳು ಏನಿದೆ, ಜನಸಾಮಾನ್ಯರ ಮೇಲೆ ಆಗಿರುವಂಥ ಪರಿಣಾಮಗಳೇನು, ಅದಕ್ಕೆ ಸಂಬಂಧಪಟ್ಟ ಒಂದು ವರದಿಯನ್ನು ಸರ್ಕಾರದ ಮುಖಾಂತರ ಇವತ್ತು ಸಂಗ್ರಹ ಮಾಡಿ ಜನ ಸಾಮಾನ್ಯರು ಈ ಅಪಮೌಲ್ಯೀಕರಣದ ವ್ಯವಸ್ಥೆಯಲ್ಲಿ ಯಾವ ರೀತಿ ಪೆಟ್ಟು ತಿಂದಿದ್ದಾರೆ ಎನ್ನುವ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ವಿಷಯಗಳನ್ನು ಸದನದ ಮುಂದೆ ಇಟ್ಟಿದ್ದರೆ ನಮ್ಮೆಲ್ಲರಿಗೆ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು ಎನ್ನುವುದು ನನ್ನ ಅಭಿಪ್ರಾಯ.

(ಮುಂದು)

27.03.17 3.50 (28) RD-SSD

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮುಂದು.. ..

ಈ ಒಂದು ವಿಷಯದಲ್ಲಿ, ಇವತ್ತು ಅಪಮೌಲ್ಯೀಕರಣದ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಹಲವಾರು ವ್ಯಾಖ್ಯಾನಗಳು ಬಂದಿವೆ. ಹಲವಾರು ಲೇಖನಗಳನ್ನು ಬರೆದಿರುವಂಥ ಹಿರಿಯ ಮಾಧ್ಯಮಗಳ ಮಿತ್ರರುಗಳು, ಅವರವರದೇ ಆದಂಥ ರೀತಿಯಲ್ಲಿ ಈ ಒಂದು ವಿಷಯದಲ್ಲಿ ಪರ ವಿರೋಧಗಳ ಒಂದು ಲೇಖಗಳನ್ನು ಏನು ಬರೆದಿದ್ದಾರೆ. ಆದರೆ ಈ ಅಪಮೌಲ್ಯೀಕರಣದ ನಂತರವೂ ಕೆಲವು ಚುನಾವಣೆಗಳಲ್ಲಿ ಕೇಂದ್ರಸರ್ಕಾರದ ಬಿ.ಜೆ.ಪಿ. ಪಕ್ಷದ ಪರವಾಗಿ ಮತಗಳನ್ನು ಕೊಟ್ಟಿರುವಂಥದ್ದು, ಜನತೆ ಅದಕ್ಕೆ ಬೆಂಬಲ ಸೂಚಿಸಿ ಕೊಟ್ಟಿದ್ದಾರೆನ್ನುವ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಾರೆ. ಆದರೆ ಇಲ್ಲಿ ಅಪಮೌಲ್ಯೀಕರಣದಲ್ಲಿ ಪೆಟ್ಟು ತಿಂದಂಥವರು ಪ್ರಮುಖವಾಗಿ ರೈತರು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ನಾನೇ ಕಂಡ ಹಾಗೆ ರಾಜ್ಯದ ಹಲವಾರು ಪ್ರದೇಶದಲ್ಲಿ ಬೆಳೆದಂಥ ತರಕಾರಿಗಳಿರಬಹುದು, ಬೆಳೆದಂಥ ತೋಟಗಾರಿಕೆ ಬೆಳೆಯನ್ನು ಮಾರಾಟ ಮಾಡಲು ಆಗದೇ ಇರುವಂಥ ಪರಿಸ್ಥಿತಿಗಳು ನಿರ್ಮಾಣವಾಯಿತು. ಉದಾಹರಣೆಗೆ, ಬೆಳಗಾಂನಲ್ಲಿ ಆಲೂಗಡ್ಡೆ ಬೆಳೆದಂಥ ರೈತರು, ಮಾರಾಟ ಮಾಡುವುದಕ್ಕೆ ಅದನ್ನು ತೆಗೆದುಕೊಂಡು ಹೋಗಲು ಆಗದೇ ಒಂದು ಕಡೆ ಲಾರಿ ಮಾಲೀಕರು ಪೆಟ್ಟು ತಿಂದಿದ್ದಾರೆ. ಒಂದು ಕಡೆ ಸಣ್ಣ-ಪುಟ್ಟ ಅಂಗಡಿಯವರು ಪೆಟ್ಟು ತಿಂದಿದ್ದಾರೆ. ಒಟ್ಟಾರೆ ಜನ ಸಾಮಾನ್ಯರ ಮೇಲೆ ಹಲವಾರು ರೀತಿಯಲ್ಲಿ ದುಷ್ಪರಿಣಾಮಗಳು ಬೀರಿದೆ. ಇವತ್ತು ಎ.ಪಿ.ಎಂ.ಸಿ.ಯಾರ್ಡ್‌ನಲ್ಲಿ ಕೆಲಸ ಮಾಡುವಂಥ ಹಮಾಲಿಗಳಿರಬಹುದು, ಅಂಥ ಒಂದು sectorನ ಜನ್ನು ಯಾರಿದ್ದಾರೆ. ಅವರಿಗೆ ಆದಂಥ ತೊಂದರೆಗಳು ಏನಿವೆ, ಬಹುಶ: ಅದಕ್ಕೆ ಸರ್ಕಾರಕ್ಕೆ ಅವಕಾಶಗಳಿತ್ತು. ಇವತ್ತು ಇಂಥ ಒಂದು ತೀರ್ಮಾನದಿಂದ ಜನ ಸಾಮಾನ್ಯರ ಪ್ರತಿನಿತ್ಯದ ಬದುಕಿನಲ್ಲಿ ಇಂಥ ಒಂದು ಕಾರ್ಯಕ್ರಮದಿಂದ ಚೆಲ್ಲಾಟವಾಡಿದ್ದೀರಿ. ಹೊರ ನೋಟಕ್ಕೆ ಈ ದೇಶದಲ್ಲಿರುವಂಥ ಕಪ್ಪು ಹಣವನ್ನು ಇವತ್ತು ಸಂಪೂರ್ಣವಾಗಿ control ಮಾಡುವಂಥದ್ದಕ್ಕೆ ಮತ್ತು ನಕಲಿ ನೋಟುಗಳನ್ನು

control ಮಾಡುವಂಥದ್ದಕ್ಕೆ ಮತ್ತು ಭಯೋತ್ಪಾದನ ಚಟುವಟಿಕೆಗಳನ್ನು ನಿಲ್ಲಿಸುವಂಥಕ್ಕೆ ಇದು ಪ್ರಮುಖವಾದ ಪಾತ್ರವನ್ನು ವಹಿಸಿದೆಯೆನ್ನುವ ಮಾತನ್ನು ಹೇಳಿದ್ದಾರೆ. ಆದರೆ ಜನ ಸಾಮಾನ್ಯರು ಅನುಭವಿಸಿರುವ ನೋವುಗಳು ಏನಿವೆ. ಅದರ ಬಗ್ಗೆ ಸರ್ಕಾರ ಒಂದು ಸರಿಯಾದ ರೀತಿಯ ವರದಿಯನ್ನು ತರಿಸಿಕೊಂಡು, ಇವತ್ತು ಸದನದ ಮುಂದೆ ಇಡುವಂಥದ್ದಕ್ಕೆ ಅವಕಾಶಗಳಿತ್ತು. ಅದನ್ನು ಎಲ್ಲೋ ಒಂದು ಕಡೆ ಸರ್ಕಾರ ಕೇವಲ passing remarks ಏನು ಮಾಡಿ ಕೊಂಡಿದ್ದಾರೆ. ಇದನ್ನು ಇವತ್ತು ಬಡ ವರ್ಗದ ಜನತೆ livelihood ಮೇಲೆ ಆಗಿರುವಂಥ ಪ್ರತಿ ದಿನದ ಅನಾನುಕೂಲಗಳು ಏನಿತ್ತು, ಅದೆಲ್ಲವನ್ನೂ ತಂದಿದ್ದರೆ ಚೆನ್ನಾಗಿತ್ತೆಂದು ನನ್ನ ಅಭಿಪ್ರಾಯ. ಇಲ್ಲಿ ಇವತ್ತು ಪ್ರಮುಖವಾಗಿ ರಾಜ್ಯದಲ್ಲಿ ರೈತರ ಸಾಲ ಮನ್ನಾ ಬಗ್ಗೆ, ವಿಶೇಷವಾದಂಥ ರೀತಿಯಲ್ಲಿ ಚರ್ಚೆ ನಡೆಯುತ್ತಿದೆ. ಮೊನ್ನೆ ನಮ್ಮ ಗೌರವಾನ್ವಿತ ವಿರೋಧಪಕ್ಷ ನಾಯಕರು ಅವರು ಬಜೆಟ್ ಭಾಷಣದ ಮೇಲೆ ಮಾತನಾಡಬೇಕಾದರೆ, ಪ್ರಮುಖವಾಗಿ ರೈತರ ಸಾಲ ಮನ್ನಾ ವಿಷಯದಲ್ಲಿ, ಸರ್ಕಾರಕ್ಕೆ ಅತ್ಯಂತ ಕಠಿಣವಾದಂಥ ಪದಗಳನ್ನು ಬಳಸಿರುವಂಥದ್ದನ್ನು ನಾನು ಗಮನಿಸಿದ್ದೇನೆ. ಅವರು ಯಾವ ಮಟ್ಟಕ್ಕೆ ಹೋಗಿದ್ದಾರೆಂದರೆ, ಇವತ್ತು ಸರ್ಕಾರ ನಿಜಕ್ಕೂ ರೈತರ ಸಾಲ ಮನ್ನಾ ಮಾಡದೇ, ಹೇಡಿತನದ ಕೆಲಸ ಮಾಡಿದ್ದಾರೆ. ಸರ್ಕಾರಕ್ಕೆ ನಿಜಕ್ಕೂ ರೈತರ ಬಗ್ಗೆ ಕಾಳಜಿ ಇದ್ದಿದ್ದರೆ, ಸರ್ಕಾರಕ್ಕೆ ದಮ್ಮಿದ್ದಿದ್ದರೆ, ಇವತ್ತು ರೈತರ ಸಾಲ ಮನ್ನಾ ಮಾಡಬೇಕಾಗಿತ್ತೆಂಬ ಮಾತುಗಳನ್ನು ಹೇಳಿದ್ದಾರೆ. ಹಲವಾರು ದೊಡ್ಡ ಮಟ್ಟದಲ್ಲೆ ಚರ್ಚೆ ಮಾಡಿದ್ದಾರೆ. ಅದರ ಜೊತೆಗೆ ಮಾನ್ಯ ಜಗದೀಶ್ ಶೆಟ್ಟರ್‌ರವರೆ, 10 ತಿಂಗಳುಗಳು ಮುಖ್ಯಮಂತ್ರಿಯಾಗಿದ್ದಾಗ, ನನ್ನ ಕಾಲದಲ್ಲೂ ಸುಮಾರು 3,000 ಕೋಟಿ ರೂ.ಗಳನ್ನು ಸಾಲ ಮನ್ನಾ ಮಾಡುವಂಥದ್ದಕ್ಕೆ, ನಮ್ಮ ಸರ್ಕಾರವಿದ್ದಾಗ 900 ಕೋಟಿ ರೂ.ಗಳನ್ನು ಪ್ರಾರಂಭಿಕ ಹಂತದಲ್ಲಿ ಬಿಡುಗಡೆ ಮಾಡಿದ್ದೇವೆ, ಅದರ ಜೊತೆಗೆ 3,600 ಕೋಟಿ ರೂ.ಗಳ ಹಣವನ್ನು ಇವತ್ತು ಯಾವ ರೀತಿ ಸರ್ಕಾರದ ಖಜಾನೆಗೆ compensate ಮಾಡಿಕೊಳ್ಳಬೇಕು. ಅದರ ದೃಷ್ಟಿಯಿಂದ 14% ಇದ್ದಂಥ ವ್ಯಾಟ್ ತೆರಿಗೆಯನ್ನು ಹದಿನಾಲ್ಕೂವರೆ ಪರ್ಸೆಂಟ್‌ಗೆ ಏರಿಸುವ ಮುಖಾಂತರ ಇವತ್ತು ಸರ್ಕಾರಕ್ಕೆ ಹಣವನ್ನು ಸಂಗ್ರಹಣೆ ಮಾಡುವಂಥದ್ದಕ್ಕೆ ಒಂದು ದಾರಿಯನ್ನು ಮಾಡಿ ಕೊಟ್ಟು, ನಾನು ಹೋಗಿದ್ದೇನೆಂಬ ಮಾತನ್ನು ಹೇಳಿ ಹೋಗಿದ್ದಾರೆ. ಅದರ ಜೊತೆಗೆ ಇವತ್ತು ಹೊರಗಡೆಯೂ ಹಲವಾರು ರೀತಿಯಲ್ಲಿ ಚರ್ಚೆಗಳಾಗಿವೆ. ಇವತ್ತು ರೈತರ ಸಾಲ ಮನ್ನಾ ವಿಷಯದಲ್ಲಿ, ಒಂದು ಕಡೆ ರಾಜ್ಯ ಸರ್ಕಾರದ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮುಖ್ಯಮಂತ್ರಿಯವರು ಹೇಳವುದೇನೆಂದರೆ, ಕೇಂದ್ರ ಸರ್ಕಾರ 50% ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲ ಮನ್ನಾ ಮಾಡಿದರೆ, ನಾವು ಸಹಕಾರಿ ಬ್ಯಾಂಕಿನ 50% ಸಾಲ ಮನ್ನಾ ಮಾಡತಕ್ಕಂಥ ನಿರ್ಧಾರ ಮಾಡುತ್ತೇವೆಂಬ ಮಾತನ್ನು ಹೇಳುತ್ತಾರೆ. ಇಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಬಿ.ಜೆ.ಪಿ.ಪಕ್ಷದ ನಾಯಕರುಗಳು ನಿಮಗೆ ತಾಕತ್ತು ಇದ್ದರೆ, ದಮ್ಮಿದ್ದರೆ, 1,86,000 ಕೋಟಿ ಬಜೆಟ್ ಮಂಡನೆ ಮಾಡಿರುವವರಿಗೆ 10,000 ಕೋಟಿ ರೂ.ಗಳನ್ನು ಮನ್ನಾ ಮಾಡವಂಥದ್ದು ಏನು ದೊಡ್ಡ ವಿಷಯ, ಅದನ್ನು ಮನ್ನಾ ಮಾಡಿ ಎಂದು ಹೇಳುತ್ತಾರೆ. ನಾನು ಹಿಂದೆ ಸದನದಲ್ಲಿ ಕಲಾಪದಲ್ಲಿ ನಡೆದಿರುವಂಥ ಕೆಲವು ವಿಷಯಗಳನ್ನು ಸದನದ ಮುಂದೆ ಹೇಳಬೇಕಾಗುತ್ತದೆ. ಇವತ್ತು ರೈತರ ಇಂಥ ಒಂದು ಸಂಕಷ್ಟದ ಪರಿಸ್ಥಿತಿಯಲ್ಲಿ, ಈ ರೀತಿ ನಮ್ಮ ಅಧಿಕೃತ ವಿರೋಧ ಪಕ್ಷ ದೆಹಲಿಯಲ್ಲಿ ಆಳ್ವಿಕೆ ನಡೆಸುತ್ತಿದ್ದಾರೆ. ಇಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ರಾಜ್ಯದಲ್ಲಿ ಆಡಳಿತ ಏನು ನಡೆಯುತ್ತಿದೆ. ಇವತ್ತು ಈ ರೀತಿಯ ಚರ್ಚೆಗಳಿಂದ, ಬಹುಶ: ರಾಜ್ಯದ ರೈತರಿಗೆ ಪರಿಹಾರ ಸಿಗುವುದಿಲ್ಲ. ಇವತ್ತು ರಾಜ್ಯದ ರೈತರು ಸಾಲ ಮನ್ನಾ ಆಗಬೇಕೆನ್ನುವ ಒಂದು ಬೇಡಿಕೆಯನ್ನು ಏನು ಇಡುತ್ತಿದ್ದಾರೆ. ಇದಕ್ಕೆ ಉತ್ತರವಲ್ಲವೆನ್ನುವುದು ನನ್ನ ಅಭಿಪ್ರಾಯವಾಗಿದೆ. ದೆಹಲಿಯಲ್ಲಿ 15-20 ದಿವಸಗಳ ಹಿಂದೆ ಜಂತರ್-ಮಂತರ್ ರಸ್ತೆಯಲ್ಲಿ ಇನ್ನೂ ಇರಬಹುದು, ಅಲ್ಲಿ ಪಕ್ಕದ ರಾಜ್ಯ ತಮಿಳುನಾಡಿನಿಂದ ರೈತರು ಹೋಗಿ ಧರಣಿ ನಡೆಸುತ್ತಿದ್ದಾರೆ. ಅಲ್ಲಿಗೆ ತಲೆ ಬುರುಡೆಗಳನ್ನು ತೆಗೆದುಕೊಂಡು ಪ್ರತಿಭಟನೆಯನ್ನು ನಡೆಸುತ್ತಿದ್ದಾರೆ. ಅವರು ದೇಹಕ್ಕೆ ಬೇವಿನ ಸೊಪ್ಪಿನ ಕಡ್ಡಿಯನ್ನು ಕಟ್ಟಿಕೊಂಡು, ದೆಹಲಿಯಲ್ಲಿ ಕೇಂದ್ರಸರ್ಕಾರದ ಗಮನವನ್ನು ಸೆಳೆಯುವಂಥದ್ದಕ್ಕೆ ಅಲ್ಲಿ ಇವತ್ತು ಧರಣಿ ನಡೆಯುತ್ತಿದೆ. ಇವತ್ತು ಅಂಥ ಒಂದು ಕೆಟ್ಟ ಪರಿಸ್ಥಿತಿಯನ್ನು ಏನು ನೋಡುತ್ತಿದ್ದೇವೆ. ಇವತ್ತು ಸಾಲ ಮನ್ನಾದ ವಿಷಯಕ್ಕೆ ಬಂದಾಗ, ಇವತ್ತು ನಮ್ಮ ಬ್ಯಾಂಕ್‌ನ Chairmanಗಳು, M.D.ಗಳು ಅದರ ಜೊತೆಗೆ ನಮ್ಮ CAGಯವರು, ರೈತರ ಸಾಲ ಮನ್ನಾ ಮಾಡುತಕ್ಕಂಥದ್ದು ಸರಿಯಲ್ಲವೆನ್ನುವಂಥ ಮಾತುಗಳನ್ನು ಹೇಳಿರುವಂಥದ್ದನ್ನು ನಾನು ಗಮನಿಸಿದ್ದೇನೆ. ರೈತರ ಸಾಲ ಮನ್ನಾ ವಿಚಾರದಲ್ಲಿ ಈ ರೀತಿ ಮಾತನಾಡುವಂಥವರು, ಇವತ್ತು ಕೇಂದ್ರ ಸರ್ಕಾರದಲ್ಲಿ 2004 ರಿಂದ 2015ರವರೆಗೆ ಬಂಡವಾಳ ಶಾಹಿಗಳ corporate ಕುಳಗಳ ಸುಮಾರು 2.77 ಲಕ್ಷ ಕೋಟಿ ರೂ.ಗಳ ಸಾಲ ಮನ್ನಾ ಮಾಡಿದ್ದಾರೆ. ಕಳೆದ ಮೂರು ವರ್ಷಗಳಲ್ಲಿ ಮನ್ನಾ ಮಾಡಲಾದ ಸಾಲದ ಮೊತ್ತ 1.14 ಲಕ್ಷ ಕೋಟಿ ರೂ.ಗಳು, ಪ್ರಸ್ತುತ ಬ್ಯಾಂಕ್‌ಗಳ NP

ಯಾಗಿರುವಂಥದ್ದು ಸುಮಾರು 6.8 ಲಕ್ಷ ಕೋಟಿ ರೂ.ಗಳು ಆಗಿದೆ. ಇದರಲ್ಲಿ corporate ಕುಳಗಳ ಪಾಲು ಸುಮಾರು 70%, ರೈತರ ಪಾಲು ಶೇ.1% ಮಾತ್ರ ಇದೆ. ಇವತ್ತು ಉತ್ತರ ಪ್ರದೇಶದ ಚುನಾವಣೆಯಲ್ಲೂ ಕೇಂದ್ರದ ಮಾನ್ಯ ಪ್ರಧಾನ ಮಂತ್ರಿಯವರು ಮತ್ತು ಮಾನ್ಯ ಗೃಹ ಮಂತ್ರಿಯವರು, ಉತ್ತರ ಪ್ರದೇಶದಲ್ಲಿ ಅವರ ಪಕ್ಷ ಅಧಿಕಾರಕ್ಕೆ ಬಂದರೆ, ಸಾಲ ಮನ್ನಾ ಮಾಡುತ್ತೇವೆಂದು ಚುನಾವಣೆಯಲ್ಲಿ ಘೋಷಣೆ ಮಾಡಿದ್ದಾರೆ. ಈಗ ಅಲ್ಲಿ ಸರ್ಕಾರ ರಚನೆಯಾಗಿದೆ, ನೋಡೋಣ ಎಷ್ಟರ ಮಟ್ಟಿಗೆ ಆ ಮಾತನ್ನು ಉಳಿಸಿಕೊಳ್ಳುತ್ತಾರೆಂಬುದನ್ನು ನಾನು ಕುತೂಹಲದಿಂದ ಕಾದು ನೋಡುತ್ತಿದ್ದೇನೆ. ಕೇಂದ್ರ ಸರ್ಕಾರದಿಂದ ಕೊಡುವುದಿಲ್ಲ, ಅದನ್ನು ರಾಜ್ಯ ಸರ್ಕಾರದಿಂದ ಮಾಡಿ ಕೊಳ್ಳಿ ಎಂದು ಹೇಳಿದ್ದಾರೆ. ರಾಜ್ಯ ಸರ್ಕಾರದಿಂದ ಮಾಡಿಕೊಳ್ಳುವುದಾದರೆ, ಮಾಡಿ ಕೊಳ್ಳಲಿ ಎಂಬ ಮಾತನ್ನು ಹೇಳಿದ್ದಾರೆ. ಇದರ ಜೊತೆಗೆ 2004-05ನೇ ಸಾಲಿನಿಂದ ಭಾರತದ corporate ಜಗತ್ತಿಗೆ 31 ಲಕ್ಷ ಕೋಟಿ ರೂ.ಗಳ ತೆರಿಗೆ ವಿನಾಯಿತಿಯನ್ನು ನೀಡಿದ್ದಾರೆ. ಆದರೆ ಇದನ್ನು ಕೊಡುವುದಕ್ಕೆ ಕಾರಣ ಕೈಗಾರಿಕೆಯನ್ನು ಬೆಳೆಸುವುದರಿಂದ, ಪ್ರೋತ್ಸಾಹ ಮಾಡುವುದರಿಂದ ಉದ್ಯೋಗಗಳು ಹೆಚ್ಚು ಸೃಷ್ಟಿಯಾಗುತ್ತವೆ. ಈಗ ವರ್ಷಕ್ಕೆ ಒಂದೂವರೆ ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆನ್ನುವ ಮಾತುಗಳನ್ನು ಹೇಳಿದಂಥವರು, ಹತ್ತು ವರ್ಷಗಳಲ್ಲಿ ಒಂದೂವರೆ ಕೋಟಿ ಉದ್ಯೋಗವನ್ನು ಇವತ್ತು ಸೃಷ್ಟಿ ಮಾಡುವುದಕ್ಕೆ ಆಗಿಲ್ಲ. ಇವತ್ತು ಇವೆಲ್ಲದರ ಜೊತೆಗೆ ಭಾರತದ corporate ಜಗತ್ತು ಸುಮಾರು ಹತ್ತು ಲಕ್ಷ ಕೋಟಿಗೂ ಮೀಗಿಲಾದ ಹೆಚ್ಚುವರಿ ಹಣವನ್ನು ಇಟ್ಟುಕೊಂಡಿದ್ದಾರೆ, ಮತ್ತೆ ಅಷ್ಟೆ ಮೊತ್ತದ ಹಣವನ್ನು ಬ್ಯಾಂಕ್, ಹೂಡಿಕೆ ಸಂಸ್ಥೆಗಳಿಗೆ ಪಂಗನಾಮವಿಟ್ಟಿದೆ. ಭಾರತದ ಆರ್ಥಿಕ ಚಿಂತನೆ ಯಾವ ರೀತಿ ಇದೆಯೆನ್ನುವಂಥದ್ದಕ್ಕೆ ಇದೊಂದು ಉದಾಹರಣೆಯಾಗಿದೆ. ದೈತ್ಯ ಕಂಪನಿಗಳಿಗೆ ಯಾವ ಬಗೆಯ ಅನುದಾನಗಳು ಸಿಗುತ್ತವೆ? ಆದರೆ ಹಳ್ಳಿಗರ, ಕೃಷಿಕರ ಬದುಕಿನ ಜೊತೆಯಲ್ಲಿ ಅವರು ಮಾಡಿರುವಂಥ ಸಾಲ ಮನ್ನಾ ಮಾಡಿ ಎಂದರೆ, ಇವತ್ತು ಏನೋ ಒಂದು ದೇಶದ ಆರ್ಥಿಕ ವ್ಯವಸ್ಥೆಯೇ ಕುಸಿದು ಹೋಗುತ್ತದೆನ್ನುವ ರೀತಿಯಲ್ಲಿ ಬಿಂಬಿಸತಕ್ಕಂಥದ್ದು ಏನಿದೆ. ಬಹುಶ: ರೈತರ ಬಗ್ಗೆ ನಾವೆಲ್ಲರೂ ಮೊಸಳೆ ಕಣ್ಣೀರು ಸುರಿಸುತ್ತಿದ್ದೇವೆಂಬುದು ನನ್ನ ಅಭಿಪ್ರಾಯವಾಗಿದೆ. ನಿನ್ನೆ ಗುಂಡ್ಲುಪೇಟೆ ಚುನಾವಣೆಯಲ್ಲೂ ನಮ್ಮ ರಾಜ್ಯದ ಮಾಜಿ ಮುಖ್ಯಮಂತ್ರಿಯವರು ಒಂದು ಭಾಷಣವನ್ನು ಮಾಡಿದ್ದಾರೆ. ಇವತ್ತು ಕೇಂದ್ರಸರ್ಕಾರದ ಪ್ರಧಾನ ಮಂತ್ರಿಯವರ ಹೆಸರನ್ನು ರಾಜ್ಯ ಸರ್ಕಾರವು ಪದೇ ಪದೇ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಎಳೆಯಬೇಡಿ, ನಿಮ್ಮ ಕೈಯಲ್ಲಿ ಆಗಲಿಲ್ಲವೆಂದರೆ, ಬಿಟ್ಟು ಬಿಡಿ. ನಾನೇ 2018ಕ್ಕೆ ಮುಖ್ಯಮಂತ್ರಿಯಾಗುತ್ತೇನೆ, 2018ಕ್ಕೆ ನಾನೇ ಈ ರಾಜ್ಯದ ರೈತರ ಸಾಲ ಮನ್ನಾ ಮಾಡುತ್ತೇನೆಂಬ ಮಾತನ್ನು ರಕ್ತದಲ್ಲಿ ಬರೆದು ಕೊಡುತ್ತೇನೆಂದು ಮೊನ್ನೆ ಗುಂಡ್ಲುಪೇಟೆಯಲ್ಲಿ ಮಾಡಿದ ಭಾಷಣದಲ್ಲಿ ಹೇಳಿದ್ದಾರೆ. ಆದರೆ 2010ರ ಜನವರಿ 11ನೇ ತಾರೀಖಿನಂದು ವಿಧಾನ ಪರಿಷತ್ತಿನಲ್ಲಿ ಅವತ್ತು ಇಲ್ಲಿ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿರುತ್ತಾರೆ. ಅವತ್ತು ಉತ್ತರ ಕರ್ನಾಟಕ ಅತಿವೃಷ್ಟಿಯಿಂದ ಹಲವಾರು ಹಳ್ಳಿಗಳಲ್ಲಿ.. .

ಶ್ರೀ ಜಗದೀಶ್ ಶೆಟ್ಟರ್: ಒಂದೇ ಒಂದು ವಿಷಯ.. ..

ಅಧ್ಯಕ್ಷರು: ಅವರು ಮಾತನಾಡುತ್ತಿದ್ದಾರೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಒಂದು ನಿಮಿಷ, ನಾನು ರೈತರ ಬಗ್ಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು: ಅವರು yield ಆದರೆ ನೀವು ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, Point of order.

ಅಧ್ಯಕ್ಷರು: Point of order ಎನ್ನುವುದಾದರೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಸದಸ್ಯರಲ್ಲದೇ ಇರುವವರ ಬಗ್ಗೆ, ಅವರ statement ಬಗ್ಗೆ, ಅವರು ಮಾತನಾಡಿದರೆ, ಅದಕ್ಕೆ ಉತ್ತರ ಯಾರು ಕೊಡಬೇಕು? ಇದು ಒಳ್ಳೆಯದಲ್ಲ. ಅದೇ ನನ್ನ point of order. ಅವರು ಬೇಕಾದರೆ ನಾನು ಹೇಳಿದ ವಿಷಯದ ಬಗ್ಗೆ ಮಾತನಾಡಲಿ.

ಮುಂದು.. ..

27-03-2-17/4.00/29/GG/VR

ಶ್ರೀ ಜಗದೀಶ್ ಶೆಟ್ಟರ್ (ಮುಂದುವರೆದುದು): ಸದನದಲ್ಲಿಲ್ಲದಂಥ ಸದಸ್ಯರ ಬಗ್ಗೆ, ಅವರು ಹೊರಗಡೆ ಕೊಟ್ಟಂಥ ಸ್ಟೇಟ್‌ಮೆಂಟ್ ಬಗ್ಗೆ, ಚುನಾವಣೆಯ ಸಂದರ್ಭದಲ್ಲಿ ಅವರು ಕೊಟ್ಟಂಥ ಸ್ಟೇಟ್‌ಮೆಂಟ್‌ಅನ್ನು ಇಲ್ಲಿ refer ಮಾಡಿದರೆ ಅವರಿಗೆ defense ಮಾಡಿಕೊಳ್ಳಲು

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಆಗುತ್ತದೆಯೇ? Counter ಮಾಡಲಿಕ್ಕೆ ಆಗುತ್ತದೆಯೇ? ಇದು ಸರಿಯಲ್ಲ. ಅದಕ್ಕೆ ನನ್ನ Point of Order ಇದೆ.

ಶ್ರೀ ವೈ.ಎಸ್.ವಿ. ದತ್ತ: ಮಾನ್ಯ ಸಭಾಧ್ಯಕ್ಷರೆ, ಕುಮಾರಸ್ವಾಮಿಯವರು ಹೇಳುತ್ತಿರುವುದು ವಿಧಾನ ಪರಿಷತ್ತಿನಲ್ಲಿ ಮಾಡಿದ ಭಾಷಣದ ದಾಖಲೆ, ಇದು ಎಲ್ಲೋ ಹೊರಗಡೆ ಮಾಡಿದ್ದಲ್ಲ. ಸದನದಲ್ಲಿ ಮಾಡಿರುವುದು.

ಶ್ರೀ ಜಗದೀಶ್ ಶೆಟ್ಟರ್: ಅದು ಯಾರೋ ಸಚಿವರದ್ದು ಅಥವಾ ಇವತ್ತಿನ ಮುಖ್ಯಮಂತ್ರಿಗಳದ್ದಲ್ಲ. ಹಿಂದಿನ ಮುಖ್ಯಮಂತ್ರಿಗಳು ಈಗ ಈ ಸದನದ ಸದಸ್ಯರಲ್ಲ. ಅದು ನನ್ನ Point of Order.

ಅಧ್ಯಕ್ಷರು: Ok., ಸರ್ಕಾರದವರು ಏನು ಹೇಳುತ್ತಾರೆ ಕೇಳೋಣ.

ಶ್ರೀ ಹೆಚ್.ಕೆ. ಪಾಟೀಲ್: ಸನ್ಮಾನ್ಯ ದತ್ತಾರವರು ಬಹಳ defensive ಆದರು. ಯಡಿಯೂರಪ್ಪನವರು ವೈಯಕ್ತಿಕವಾಗಿ ಅವರ ಸ್ವಂತ ವಿಚಾರಗಳನ್ನೇನಾದರೂ ಅಲ್ಲಿ ಬಿಂಬಿಸುವುದಕ್ಕೆ ಪ್ರಯತ್ನ ಮಾಡಿದ್ದರೆ, ನಿಮ್ಮ ಅಭಿಪ್ರಾಯದಂತೆ, ಅದನ್ನು ಇಲ್ಲಿ ಕುಮಾರಸ್ವಾಮಿಯಂಥವರು, ಮಾಜಿ ಮುಖ್ಯಮಂತ್ರಿಗಳು, ಪ್ರಸ್ತಾಪ ಮಾಡಿ ಟೀಕೆ ಮಾಡುವುದಾಗಲೀ, ವಿಮರ್ಶೆ ಮಾಡುವುದಾಗಲೀ ಅಷ್ಟು ಶೋಭೆ ತರುವುದಿಲ್ಲ. ಆದರೆ ಅಲ್ಲಿ ಅವರು ಒಂದು ಪಕ್ಷದ ಅಧ್ಯಕ್ಷರಾಗಿ ಮಾತನಾಡುವಾಗ, ಆ ಪಕ್ಷಕ್ಕೆ ಸೇರಿರುವಂಥ ತಮ್ಮಗಳೆಲ್ಲರ ನಿಲುವು ಅದು ಎಂದು ಜನರು ಭಾವಿಸಿಕೊಳ್ಳುತ್ತಾರೆ. ಆ ಕಾರಣಕ್ಕಾಗಿ, ಅಲ್ಲಿ ಯಡಿಯೂರಪ್ಪನವರು ಸಾರ್ವಜನಿಕ ಭಾಷಣದಲ್ಲಿ ಏನಾದರೂ ಹೇಳಿದ್ದರೂ ಸಹ ಅದರ ಬಗ್ಗೆ ಪ್ರಸ್ತಾಪ ಮಾಡಿ, ಮಾತನಾಡುವ ಹಕ್ಕು ಈ ಸದನದಲ್ಲಿ ಯಾವುದೇ ಸದಸ್ಯನಿಗಾಗಲಿ ಇದೆ.

ಶ್ರೀ ಜಗದೀಶ್ ಶೆಟ್ಟರ್: ನನ್ನದು Point of Order ಇದೆ, ದಯವಿಟ್ಟು ಅದರ ಮೇಲೆ ruling ಕೊಡಿ Sir. ಹಿರಿಯ ಸಚಿವರಾದಂಥ ಹೆಚ್.ಕೆ.ಪಾಟೀಲರು ಈ ರೀತಿ, ಏನೋ ಒಂದು opportunity ಸಿಕ್ಕಿದೆ ಎಂದು ಒಂದು ಅಂದಾಜು ಸ್ಟೇಟ್‌ಮೆಂಟ್ ಮಾಡುವುದಾದರೆ, ನಾಳೆ ನಿಮ್ಮ ವಿಚಾರಕ್ಕೆ ಬಂದಾಗ ನಿಮಗೆ ಗೊತ್ತಾಗುತ್ತದೆ. ಹಾಗಾಗಿ, ನನ್ನದು Point of Order ಇದೆ.

(ಗೊಂದಲ)

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

27-03-2017

ಶ್ರೀ ವೈ.ಎಸ್.ವಿ. ದತ್ತ: ನಮ್ಮ ನಾಯಕರು ಪ್ರಸ್ತಾಪ ಮಾಡುತ್ತಿರುವುದು, ಮಾಜಿ ಮುಖ್ಯಮಂತ್ರಿಗಳ, ಬಿಜೆ.ಪಿ. ಅಧ್ಯಕ್ಷರ ಕೌಟುಂಬಿಕ ವಿಷಯವಲ್ಲ. ಅದು ರೈತರ ಸಾಲ ಮನ್ನಾ ವಿಷಯ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈ ರೀತಿ ಹೊರಗಡೆ ಇರುವವರ ಸ್ಟೇಟ್‌ಮೆಂಟ್ ಮತ್ತು ಸದನದ ಸದಸ್ಯರಲ್ಲದವರ ಸ್ಟೇಟ್‌ಮೆಂಟ್‌ಅನ್ನು quote ಮಾಡಲು ನೀವು allow ಮಾಡಿದರೆ ನಾಳೆ ಸಮಸ್ಯೆಯಾಗುತ್ತದೆ. ಅದರ ಬಗ್ಗೆ ನನ್ನ Point of Order ಇದೆ. ಹೊರಗಿನ ವ್ಯಕ್ತಿಗಳ ಬಗ್ಗೆ ಈ ರೀತಿ ಮಾತನಾಡುವುದು ಸರಿಯಲ್ಲ, refer ಮಾಡುವುದು ಸರಿಯಲ್ಲ. ಆ ಬಗ್ಗೆ ನನ್ನ Point of Order ಇದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇಲ್ಲಿ ನಾನು ಎತ್ತಿರುವ ಪ್ರಶ್ನೆಗೆ, ಅವರು defend ಮಾಡಿಕೊಳ್ಳಲು ಇಲ್ಲಿಗೆ ಈಗ ಬರಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದನ್ನು ಹೇಳಿದ್ದಾರೆ. ಇದು ರಾಜ್ಯದ ಜ್ವಲಂತ ಸಮಸ್ಯೆ. ಇದೇ ವಿಷಯವಾಗಿಯೇ ಜಗದೀಶ್ ಶೆಟ್ಟರ್‌ರವರು ಚರ್ಚೆ ಮಾಡಿದ್ದಾರೆ. ಅವರು ಮೊನ್ನೆ ಇದೇ ಸದನದಲ್ಲೇ ಪುಟಗಟ್ಟಳೆ ಚರ್ಚೆ ಮಾಡಿದ್ದಾರೆ. ಇಲ್ಲಿ ಪ್ರಶ್ನೆ ಇರುವುದು ರಾಜ್ಯದ ರೈತರ ಸಾಲ ಮನ್ನಾ ಬಗ್ಗೆ ತೀರ್ಮಾನ ತೆಗೆದುಕೊಳ್ಳುವವರು ಯಾರು? ಈಗ ಅವರು ಚುನಾವಣೆಯಲ್ಲಿ ಭರವಸೆ ಕೊಡುತ್ತಿದ್ದಾರೆ. ನಾನು ಹೇಳುತ್ತಿರುವುದು, ಅಲ್ಲಿ ಭರವಸೆ ಕೊಟ್ಟಿರುವ ಮಾತು ಇರಲಿ, ವಿಧಾನ ಪರಿಷತ್ತಿನಲ್ಲಿ ಆವತ್ತು ರಾಜ್ಯದ ಉತ್ತರ ಕರ್ನಾಟಕ ಭಾಗದಲ್ಲಿ ಹಲವಾರು ಹಳ್ಳಿಗಳು ಪ್ರವಾಹದಲ್ಲಿ ಮುಳುಗಿಹೋದಾಗ, ಆವತ್ತು ವಿರೋಧ ಪಕ್ಷಗಳು ರೈತರ ಸಾಲ ಮನ್ನಾ ಮಾಡಬೇಕೆಂದು ವಿಧಾನ ಪರಿಷತ್ತಿನಲ್ಲಿ ಮತ್ತು ವಿಧಾನಸಭೆಯಲ್ಲಿ ಚರ್ಚೆ ಮಾಡಿದ್ದಾರೆ. ಆಗ ಅವರು ಏನು ಉತ್ತರ ಕೊಟ್ಟಿದ್ದಾರೆ ಎನ್ನುವುದನ್ನು ಇಲ್ಲಿ ಹೇಳುತ್ತಿದ್ದೇನೆ. ನಾನು quote ಮಾಡುತ್ತಿರುವುದು ಅವರು ವಿಧಾನ ಪರಿಷತ್ತಿನಲ್ಲಿ ಹೇಳಿರುವುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈ ರೀತಿ ಮಾನ್ಯ ಬಿ.ಎಸ್. ಯಡಿಯೂರಪ್ಪನವರ ಸ್ಟೇಟ್‌ಮೆಂಟ್‌ಅನ್ನು ಇಲ್ಲಿ refer ಮಾಡುವುದಾದರೆ ಅದಕ್ಕೆ ನನ್ನ Point of Order ಇದೆ. ದಯವಿಟ್ಟು ಅದರ ಮೇಲೆ ruling ಕೊಡಿ. ಆ ಬಗ್ಗೆ ನನ್ನದು ತಕರಾರಿದೆ. ಅದನ್ನು ಯಾವ ರೀತಿ

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲ್ಲಿ refer ಮಾಡಿದರು? ನನ್ನ ಹೇಳಿಕೆ refer ಮಾಡಲಿ, ನನ್ನನ್ನು counter ಮಾಡಲಿ ಅಥವಾ ಸರ್ಕಾರದ ಬಗ್ಗೆ comment ಮಾಡಲಿ. ಆದರೆ ಹೊರಗಡೆ ಇರುವ ವ್ಯಕ್ತಿಗಳ ಬಗ್ಗೆ, ಸದನದ ಸದಸ್ಯರಲ್ಲದವರ ಬಗ್ಗೆ, ಈ ರೀತಿ ಅವರ ಹೇಳಿಕೆಗಳನ್ನು ಓದುವುದು, ಅದರ ಬಗ್ಗೆ comment ಮಾಡುವುದು, ಅದನ್ನು criticize ಮಾಡುವಂಥಾದ್ದು ಸರಿಯಲ್ಲ. ನನ್ನದು Point of Order ಇದೆ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇದು ಯಾರದೋ ವೈಯಕ್ತಿಕವಾದ ವಿಷಯವಲ್ಲ. ಇದನ್ನು ಯಾರೂ ಇಲ್ಲಿ suppress ಮಾಡುವುದಕ್ಕೂ ಆಗುವುದಿಲ್ಲ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತ: ನಾವು ಯಾರ ಬಗ್ಗೆಯೂ ಆರೋಪ ಮಾಡುತ್ತಿಲ್ಲ, ಮಾನಹಾನಿಯನ್ನೂ ಮಾಡುತ್ತಿಲ್ಲ. ಅವರು ಜನರನ್ನು ಮೂರ್ಖರನ್ನಾಗಿ ಮಾಡುವುದಕ್ಕೆ ಆಗುವುದಿಲ್ಲ ಎನ್ನುವುದಕ್ಕಾಗಿ ಹೇಳುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು: ಕುಮಾರಸ್ವಾಮಿಯವರೆ, ನೀವು continue ಮಾಡಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇವತ್ತು ಮುಖ್ಯಮಂತ್ರಿಗಳು, ಕೇಂದ್ರದಲ್ಲಿ ಪ್ರಧಾನ ಮಂತ್ರಿಗಳು 50% ರಾಷ್ಟ್ರೀಕೃತ ಬ್ಯಾಂಕುಗಳ ಸಾಲವನ್ನು ಮನ್ನಾ ಮಾಡಲಿ ಎಂದು ಹೇಳುತ್ತಿದ್ದಾರೆ. ಇಲ್ಲಿ ಇವರು ಏನು ಹೇಳುತ್ತಿದ್ದಾರೆ ಎಂದರೆ, ನೀವು ಕೇಂದ್ರ ಸರ್ಕಾರದ್ದು ಬಿಟ್ಟುಬಿಡಿ, ರಾಜ್ಯ ಸರ್ಕಾರದಿಂದ ನೀವು ಸಹಕಾರಿ ಬ್ಯಾಂಕುಗಳ ಹತ್ತು ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿ ಎಂದು ಹೇಳುತ್ತಿದ್ದಾರೆ. ಪ್ರಧಾನ ಮಂತ್ರಿಗಳ ಹೆಸರನ್ನು ಇಲ್ಲಿ ಏಕೆ ತರುತ್ತೀರಿ ಎಂದು ಹೇಳುತ್ತಾರೆ. ವಿಧಾನ ಪರಿಷತ್ತಿನಲ್ಲಿ ಆವತ್ತಿನ ಮುಖ್ಯಮಂತ್ರಿಗಳು ಹೇಳಿದ್ದಾರೆ, ಸಾಲ ಮನ್ನಾ ಮಾಡಲು ಹಣ ಎಲ್ಲಿಂದ ತರಲಿ? ಈ ಸಂಬಂಧ ಪ್ರಧಾನ ಮಂತ್ರಿಗಳು ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು ಅಂತಿಮ ತೀರ್ಮಾನ ತೆಗೆದುಕೊಳ್ಳಲಿ ಎಂದು ಆವತ್ತಿನ ಮುಖ್ಯಮಂತ್ರಿಗಳು ಹೇಳುತ್ತಾರೆ. ಈಗ ನಮ್ಮ ಪ್ರಧಾನ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಂತ್ರಿಗಳನ್ನು ಏಕೆ ಇದಕ್ಕೆ ಎಳೆಯುತ್ತೀರಿ ಎನ್ನುತ್ತಾರೆ. ಇದು ಸತ್ಯ, ಇದು ವಿಧಾನ ಪರಿಷತ್ತಿನಲ್ಲಿ ಕೊಟ್ಟಿರುವ ಉತ್ತರ. ಅವರು ಆಗ ಮತ್ತೊಂದು ಹೇಳುತ್ತಾರೆ, ಹೌದು, ನಾವು ಚುನಾವಣೆಯಲ್ಲಿ ಮತ ಪಡೆಯಲಿಕ್ಕೋಸ್ಕರವಾಗಿ ಹೇಳಿಕೆ ಕೊಟ್ಟಿರುತ್ತೇವೆ, ಚುನಾವಣೆಯಲ್ಲಿ ಹೇಳಿದ ಭರವಸೆಯನ್ನೆಲ್ಲ ನಾವು ಮಾಡುವುದಕ್ಕಾಗುತ್ತದೆಯೇ? ನೀವು ಹೇಳಿರುತ್ತೀರಿ, ನಾವೂ ಹೇಳಿರುತ್ತೇವೆ ಎಂದು ಹೇಳುತ್ತಾರೆ. ಸಾಲ ಮನ್ನಾ ಬಗ್ಗೆ ಚುನಾವಣಾ ಸಂದರ್ಭದಲ್ಲಿ ಘೋಷಣೆ ಮಾಡಿದ್ದನ್ನು ನೆನಪು ಮಾಡಿಕೊಟ್ಟ ಪ್ರತಿಪಕ್ಷದ ಮುಖಂಡರ ಮಾತಿಗೆ ಉತ್ತರ ಕೊಡುತ್ತಾ, ಚುನಾವಣೆ ಸಂದರ್ಭದಲ್ಲಿ ಓಟಿಗಾಗಿ ರೈತರ ಸಾಲ ಮನ್ನಾ ಮಾಡುತ್ತೇನೆ ಎಂದು ಹೇಳಿದ್ದೇನೆ, ನಿಜ. ಆದರೆ ಈಗಿನ ಪರಿಸ್ಥಿತಿಯಲ್ಲಿ ಸಾಲ ಮನ್ನಾ ಮಾಡುವ ಪ್ರಶ್ನೆಯೇ ಇಲ್ಲ. ನಾನು, ನೀವು ಚುನಾವಣೆ ಬಂದಾಗ ಈ ರೀತಿಯ ಆಶ್ವಾಸನೆ ನೀಡುತ್ತೇವೆ, . . .

ಶ್ರೀ ಜಗದೀಶ್ ಶೆಟ್ಟರ್: ನನ್ನದು Point of Order ಇದೆ. ಅದನ್ನು ಬಿಟ್ಟು ನೀವು ಅದನ್ನು allow ಮಾಡುತ್ತೇನೆ ಎಂದರೆ ಮಾಡಿ. ಆದರೆ atleast ನನ್ನ Point of Order ಗೆ ruling ಕೊಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ದಯಮಾಡಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ನನ್ನ Point of Orderಗೆ ruling ಕೊಡಿ. ಈ ರೀತಿ ಅವರು ಸ್ಟೇಟ್‌ಮೆಂಟ್ ಮಾಡುತ್ತಾ ಹೋದರೆ ಹೇಗೆ?

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತ: ಇದು Point of Orderಗೆ ಬರುತ್ತದೆಯೇ? ಅವರು ಹೇಳಿದ್ದನ್ನು ಹೇಳಿದ್ದೇವೆ.

(ಗೊಂದಲ)

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಧ್ಯಕ್ಷರು: ಒಂದು ನಿಮಿಷ ಕೇಳಿ. ಕುಮಾರಸ್ವಾಮಿಯವರು ಸನ್ಮಾನ್ಯ ಯಡಿಯೂರಪ್ಪನವರ ಚುನಾವಣಾ ಭಾಷಣ refer ಮಾಡಿದ್ದರೆ ಅದು ಬೇಡ. ಅವರು ಕೌನ್ಸಿಲ್‌ನಲ್ಲಿ ಮಾಡಿರುವ ಸ್ಟೇಟ್‌ಮೆಂಟ್‌ಅನ್ನು refer ಮಾಡುತ್ತಿದ್ದೇನೆ ಎಂದು ಕುಮಾರಸ್ವಾಮಿಯವರು explain ಮಾಡುತ್ತಿದ್ದಾರೆ. ಚುನಾವಣೆ declare ಆದಮೇಲೆ ಯಡಿಯೂರಪ್ಪನವರು ಅಲ್ಲಿ ಹೋಗಿ ಭಾಷಣ ಮಾಡುವುದು ಚುನಾವಣಾ ನೀತಿ ಸಂಹಿತೆಯನ್ನು ಮೀರುತ್ತದೋ, ಇಲ್ಲವೋ ಗೊತ್ತಿಲ್ಲ. ಆದರೆ, if it is with reference to the statement made in Council, it is O.k. ಆದರೆ ಹೊರಗೆ ಮಾಡಿದ್ದನ್ನು ಇಲ್ಲಿ ಹೇಳಬೇಡಿ.

ಶ್ರೀ ವೈ.ಎಸ್.ವಿ. ದತ್ತ: House ನಲ್ಲಿ ಹೇಳಿರುವುದು, date, time, record ಪ್ರಕಾರ ಹೇಳುತ್ತಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇದು 31ನೇ ಡಿಸೆಂಬರ್ 2009ರಲ್ಲಿ ಅವರು ವಿಧಾನ ಪರಿಷತ್ತಿನಲ್ಲಿ ಕೊಟ್ಟಿರುವಂಥ ಹೇಳಿಕೆ. ಮುಖ್ಯಮಂತ್ರಿಗಳಾಗಿ ಅವರು ಅಲ್ಲಿ ಕೊಟ್ಟಿರುವಂಥ ಹೇಳಿಕೆ.

ಶ್ರೀ ಶಿವರಾಜ್ ಎಸ್ ತಂಗಡಗಿ: ಕುಮಾರಸ್ವಾಮಿಯವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ, ಮಾಡಲಿ ಬಿಡಿ.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಇಲ್ಲಿ ನಾನು ಯಾರನ್ನೂ ತೇಜೋವಧೆ ಮಾಡಬೇಕು ಎಂದೇನೂ ಇಲ್ಲ. ಇಲ್ಲಿ ಪ್ರಶ್ನೆ ಇರುವುದೇನೆಂದರೆ, ರಾಜ್ಯದ ಎರಡೂವರೆ ಸಾವಿರ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್: ತಾವು ಅವರಿಗೆ allow ಮಾಡಿರುವಿರಾ? Allow ಮಾಡಿದ್ದರೆ ಮಾಡಿ. ಆದರೆ ನನ್ನ Point of Order ಗೆ ruling ಕೊಡಿ.

ಅಧ್ಯಕ್ಷರು: ನಾನು ಏನು ನಿರ್ಣಯ ಕೊಟ್ಟಿದ್ದೇನೆ ಎಂದರೆ, ಅವರ speech, if it is with reference to the statement made by Hon. Yediyurappaji in Council, it is O.k., allowed. ಆದರೆ ಹೊರಗಿನದು

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಾಡುವುದು ಬೇಡ. ಏಕೆಂದರೆ ಅವರು ಇಲ್ಲಿ ಬಂದು defend ಮಾಡಿಕೊಳ್ಳಲು ಆಗುವುದಿಲ್ಲ. ಕೌನ್ಸಿಲ್‌ದು reference ತೆಗೆದುಕೊಂಡು ಮಾತನಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ನಾನು ಈ ವಿಷಯವನ್ನು ಪ್ರಸ್ತಾಪ ಮಾಡಲು ಕಾರಣವೆಂದರೆ, ಇವತ್ತು ನಾವು, ಅದು ಬಿ.ಜೆ.ಪಿ.ಯವರಿರಬಹುದು, ಕಾಂಗ್ರೆಸ್‌ನವರಿರಬಹುದು, ಜೆ.ಡಿ.(ಎಸ್)ನವರಿರಬಹುದು, ನಾವು ಜನರಿಗೆ ಉತ್ತರದಾಯಿಗಳು. ನಮಗೆ ಬೇಕುಬೇಕಾದಂಥ ರೀತಿಯಲ್ಲಿ ನಾವು ಏನು ಬೇಕಾದರೂ ಹೇಳುತ್ತೇವೆ ಎಂದು ಹೇಳಲು ಆಗುವುದಿಲ್ಲ. ನಿಮಗೆ ಧಂ ಇದ್ದರೆ ಸಾಲ ಮನ್ನಾ ಮಾಡಿ ಎಂದು ಮೊನ್ನೆ ಇಲ್ಲಿ ಜಗದೀಶ್ ಶೆಟ್ಟರ್‌ರವರು ಹೇಳಿದ್ದಾರೆ. ಹತ್ತು ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡದಿದ್ದರೆ ನೀವು ಹೇಡಿಗಳು ಎನ್ನುವ ಪದವನ್ನು ಬಳಸಿ ಇವತ್ತು ಇಲ್ಲಿ ಹೇಳಿದ್ದಾರೆ. ಆವತ್ತು ನಾವು 3,600 ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡಿದೆವು ಎಂದು ಅವರು ಹೇಳಿದರಲ್ಲ. ಮೊನ್ನೆ ಅವರೇ ಹೇಳಿದ್ದಾರೆ, ಈ 3,600 ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡಬೇಕಾದರೆ, ಈ ರಾಜ್ಯದ ಆರು ಕೋಟಿ ಜನತೆಯ ಮೇಲೆ ಹೊರೆ ಹಾಕಿದ್ದಾರೆ, 14% ಇದ್ದಂಥ VATಅನ್ನು 14.5%ಗೆ ಏರಿಕೆ ಮಾಡಿದೆ ಎಂದು ಅವರೇ ಹೇಳಿದ್ದಾರೆ. ಅಂದರೆ ಆ ಸಾಲ ಮನ್ನಾ ಮಾಡಲು, ರಾಜ್ಯದ ರೈತರೂ ಸೇರಿದ್ದ ಹಾಗೆ ರಾಜ್ಯದ ಆರು ಕೋಟಿ ಜನರ ಮೇಲೆ 0.5% ತೆರಿಗೆ ಹಾಕಿ, ಆವತ್ತು ಆ ತೀರ್ಮಾನವನ್ನು ಮಾಡಿದ್ದಾರೆ. ಇವರು ಜನಗಳ ಮುಂದೆ ಯಾವ ರೀತಿ ಚರ್ಚೆ ಮಾಡುತ್ತಾರೆ, ಯಾವ ರೀತಿ ನಡೆದುಕೊಳ್ಳುತ್ತಾರೆ ಎನ್ನುವುದಕ್ಕೆ ಇದನ್ನು ಹೇಳುತ್ತಿದ್ದೇನೆ. ವಿಧಾನ ಪರಿಷತ್ತಿನಲ್ಲಿ ಹೇಳುತ್ತಾರೆ, ಚುನಾವಣೆಯಲ್ಲಿ ನಾವು, ನೀವು ಎಲ್ಲರೂ ಮಾತು ಕೊಡುತ್ತೇವೆ, ಹೌದು, ಚುನಾವಣಾ ಸಂದರ್ಭದಲ್ಲಿ ಹೇಳಿದ್ದೇನೆ, ಈಗ ಪ್ರಧಾನ ಮಂತ್ರಿಗಳ ಬಳಿಗೆ ಒಂದು ನಿಯೋಗ ಹೋಗೋಣ ಎಂದು ಆವತ್ತು ಹೇಳುತ್ತಾರೆ. ಆದರೆ ಈಗ ಕೇಂದ್ರ ಸರ್ಕಾರದ ಬಗ್ಗೆ ಚರ್ಚೆ ಮಾಡಬೇಡಿ ಎಂದು ಹೇಳುತ್ತಾರೆ. ನೀವು ಸಾಲ ಮನ್ನಾ ಮಾಡಿ ಎಂದು ಹೇಳುತ್ತಾರೆ. ಈ double standard ಅನ್ನು ಬಿಡಿ ಎನ್ನುವುದಕ್ಕೆ ನಾನು ಇದನ್ನು ಹೇಳಿದ್ದು ಅಷ್ಟೇ. ಇದರಲ್ಲಿ ಬೇರೆ ಏನೂ ಇಲ್ಲ. ನನಗೆ ಬೇಕಾಗಿರುವುದು ರೈತರ ಸಾಲ ಮನ್ನಾ ಮಾಡುವುದು.

(ಮುಂದುವರೆದಿದೆ)

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ವಿಸ:27-03-2017 4-10 (30) ಎಂಕೆಕೆ:ವಿಆರ್

ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ: ಕುಮಾರಸ್ವಾಮಿಯವರೆ, ಸಾಲ ಮನ್ನಾ ಬಗ್ಗೆ ಸ್ವಲ್ಪ ಮಾಹಿತಿ ಇದೆ ನಿಮಗೆ ಪೂರಕವಾಗಿ ಹೇಳುತ್ತೇನೆ. ಸಾಲ ಮನ್ನಾ ಮಾಡಬೇಕು ಎನ್ನುವ ಕಳಕಳಿ ಇಲ್ಲಿರತಕ್ಕಂಥ ಎಲ್ಲಾ ಸದಸ್ಯರದೂ ಇದೆ ಎನ್ನತಕ್ಕಂಥದ್ದು ನಿರ್ವಿವಾದ. ಆದರೆ, ಸಾಲ ಮನ್ನಾ ಮಾಡತಕ್ಕಂಥದ್ದಕ್ಕೆ ಒಂದು ಮಾಹಿತಿಯನ್ನು ಸಭೆಯಲ್ಲಿ ಎಲ್ಲರ ಗಮನಕ್ಕೆ ತರಬಯಸುತ್ತೇನೆ. ಇಲ್ಲಿ ಶಿವಾನಂದ ಪಾಟೀಲರು ವಿಜಯಪುರ DCC Bank ಅಧ್ಯಕ್ಷರಿದ್ದಾರೆ, ಹಾಸನದವರು ಬಾಲಕೃಷ್ಣ ಇದ್ದಾರೆ. ಸ್ವಾಮಿಯವರು ಮಾಜಿ ಇದ್ದಾರೆ. ಹಾಗೆಯೇ ಹೆಬ್ಬಾರ್ ಇದ್ದಾರೆ. ಅಂಕಿ ಸಂಖ್ಯೆ ಪ್ರಕಾರ ನಮ್ಮ ರಾಜ್ಯದಲ್ಲಿ ಸುಮಾರು 85 ಲಕ್ಷ ರೈತರು ಇದ್ದಾರೆ. ಈ ಸಹಕಾರಿ ಸಂಸ್ಥೆಗಳಲ್ಲಿ ಸಾಲವನ್ನು ಸುಮಾರು 23.5 ಲಕ್ಷ ಜನ ತೆಗೆದುಕೊಂಡಿದ್ದಾರೆ. ಸುಮಾರು 10,800 ಕೋಟಿ ರೂಪಾಯಿ ಇದೆ. ಆದರೆ, Commercial Bank ಗಳಲ್ಲಿ ತೆಗೆದುಕೊಂಡಿರುವವರು 32 ಲಕ್ಷ ಜನ. ಸುಮಾರು 48 ಸಾವಿರ ಕೋಟಿ ರೂಪಾಯಿಗಳಷ್ಟು ಆಗುತ್ತದೆ. 85 ಲಕ್ಷ ಜನ ರೈತರಲ್ಲಿ ಸಹಕಾರಿ ಸಂಸ್ಥೆಗಳಲ್ಲಿ ತೆಗೆದುಕೊಂಡಿರುವವರು ಮತ್ತು ರಾಷ್ಟ್ರೀಯ ಬ್ಯಾಂಕುಗಳಲ್ಲಿ ತೆಗೆದುಕೊಂಡಿರುವವರನ್ನು ಲೆಕ್ಕ ಹಾಕಿದರೆ ಸುಮಾರು 55 ಲಕ್ಷ ಜನರಾಗುತ್ತಾರೆ. ಇನ್ನೂ ಸುಮಾರು 30 ಲಕ್ಷ ರೈತರಿಗೆ ಯಾವುದೇ ರೀತಿಯ ಸಾಲ ಸೌಲಭ್ಯವನ್ನು ನೀವು Commercial Bankನಲ್ಲಾಗಲಿ, ಸಹಕಾರಿ ಸಂಸ್ಥೆಗಳಲ್ಲಾಗಲಿ ಕೊಡಲಿಕ್ಕೆ ಸಾಧ್ಯವಾಗಿಲ್ಲ. ನಾವು ಕೇವಲ 23 ಲಕ್ಷ ಜನರಿಗೆ 10,800 ಕೋಟಿ ರೂಪಾಯಿ ಸಾಲ ಮನ್ನಾ ಮಾಡಿದರೆ ಬೇರೆ ರೈತರೆಲ್ಲ ಏನು ಪಾಪ ಮಾಡಿದ್ದಾರೆ? ಅದಕ್ಕೋಸ್ಕರ ನಾನು ಅದಕ್ಕೆ ಪರ್ಯಾಯವಾಗಿ ಕೆಲವು ವಿಚಾರ ಹೇಳುವುದೇನೆಂದರೆ, ಮಳೆಯಾಶ್ರಯದಲ್ಲಿ ಎಲ್ಲಿ ಬೆಳೆ ಬೆಳೆಯುತ್ತಾರೆ ಈಗ ಹೆಚ್ಚು ರೈತರು ಇಂದು ಸಂಕಷ್ಟಕ್ಕೊಳಗಾಗಿರತಕ್ಕಂಥವರು. ಆ ರೈತರಿಗೆ ಎಕರೆವಾರು ಪರಿಹಾರವನ್ನು ಕೊಡತಕ್ಕಂಥದ್ದು ಮಾಡಿದರೆ, ಸಾಲ ಮನ್ನಾಕ್ಕಿಂತ ಹೆಚ್ಚು ರೈತರಿಗೆ, ಅರ್ಹರಿಗೆ ಸಹಾಯವಾಗುತ್ತದೆ. ಇವತ್ತು ಕಬ್ಬು ಬೆಳೆಯುವವರು ತೊಂದರೆಯಲ್ಲಿರಬಹುದು, ಇಲ್ಲವೆಂದು ನಾನು ಹೇಳುವುದಿಲ್ಲ. ದ್ರಾಕ್ಷಿ ಬೆಳೆಯುವವರೂ ತೊಂದರೆಯಲ್ಲಿದ್ದಾರೆ. ಆದರೆ, ಮಳೆಯಾಶ್ರಯದಲ್ಲಿ ಜೋಳ ಬೆಳೆಯುವಂಥವರು, ರಾಗಿ ಬೆಳೆಯುವಂಥವರು, ಉರುಳಿ ಬೆಳೆಯುವಂಥ ರೈತರ ಬಗ್ಗೆ ಹೆಚ್ಚು ಕಳಕಳಿ ಇರುವುದು ಸೂಕ್ತ. ಅದಕ್ಕೋಸ್ಕರವೇ, ಮಳೆಯಾಶ್ರಯದಲ್ಲಿ ಬೇಸಾಯ ಮಾಡತಕ್ಕಂಥ ರೈತಾಪಿ ಕುಟುಂಬದವರೇನಿದ್ದಾರೆ,

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಅವರು ಸಾಲ ತೆಗೆದುಕೊಂಡಿದ್ದಾರೆಯೋ, ಬಿಟ್ಟಿದ್ದಾರೆಯೋ? ಅವರಿಗೆ ಒಂದು ಎಕರೆಗೆ 5 ಸಾವಿರ ರೂಪಾಯಿಗಳಂತೆ 5 ಎಕರೆಗೆ capping ಇಟ್ಟು 25 ಸಾವಿರ ರೂಪಾಯಿಗಳವರೆಗೆ ಪರಿಹಾರವನ್ನು ಕೊಡತಕ್ಕಂಥದ್ದು ಮಾಡಿದರೆ ಈಗ 23 ಲಕ್ಷ ಜನರಿಗೆ ನೀವು 25 ಸಾವಿರ ರೂಪಾಯಿಗಳಂತೆ ಮನ್ನಾ ಮಾಡಿದರೂ ಕೂಡ 5750 ಕೋಟಿ ರೂಪಾಯಿಗಳಾಗುತ್ತದೆ. ಆ 5750 ಕೋಟಿ ರೂಪಾಯಿಗಳಲ್ಲಿ ರೈತರಲ್ಲಿರುವ ಬಡವರು, ಈ ಭಾಗದಲ್ಲಿ, ಈ ಭಾಗದಲ್ಲಿ ಎಂದು ಹೇಳಿದರೆ ಈ ರೀತಿಯ ಬೆಳೆಗಳನ್ನು ಬೆಳೆಯತಕ್ಕಂಥವರೇನಿದ್ದಾರೆ ಅವರಿಗೆ ಸಹಾಯ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಮತ್ತೆ ಇನ್ನೂ ಮುಂದೆ ಹೋಗಿ ಹೇಳಬೇಕೆಂದರೆ, ಸಹಕಾರಿ ಸಂಸ್ಥೆಗಳಲ್ಲಿ ಸಾಲ ಮನ್ನಾ ಮಾಡಿದಾಕ್ಷಣಕ್ಕೆ ಅಲ್ಲಿ ಸರ್ಕಾರದ ಯಾವುದೇ ರೀತಿಯ ಬಂಡವಾಳ ಇಲ್ಲ. ಇರತಕ್ಕಂಥದ್ದು deposit ಹಣ. ಇವರು ಸಾಲ ಮನ್ನಾ ಮಾಡಬೇಕೆಂದು ಹೇಳಿದರೆ, ಮೊದಲು ಆ ಸಂಸ್ಥೆಗಳಿಗೆ ಹಣ ಕೊಟ್ಟು, ಆಮೇಲೆ ಸಾಲ ಮನ್ನಾ ಮಾಡಬೇಕು. ಸುಮ್ಮನೆ ಸಾಲ ಮನ್ನಾ ಮಾಡಿದ್ದೇವೆಂದು announce ಮಾಡಿಬಿಟ್ಟರೆ, ಅಲ್ಲಿ ಹಣ ಇಲ್ಲದಿದ್ದರೆ deposit ಮಾಡಿರುವವರು ಬಂದರೆ ಹಣ ಎಲ್ಲಿ ಕೊಡುತ್ತಾರೆ? ಬಡ್ಡಿಯನ್ನು ಎಲ್ಲಿಂದ ತಂದುಕೊಡುತ್ತಾರೆ? ಇದೆಲ್ಲ ಬಹಳ ತೊಂದರೆಯಾಗುತ್ತದೆ.

ಅಧ್ಯಕ್ಷರು: ಸರ್ಕಾರದವರು ಸಾಲ ಮನ್ನಾ ಮಾಡಿದರೆ society ಗಳಿಗೆ ಹಣವೇ ಹೋಗುವುದಿಲ್ಲ. Society ಯಲ್ಲಿರುವವರಿಗೆ ಪಗಾರ ಕೊಡುವುದಕ್ಕೆ . . . . ಇಲ್ಲ.

ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ: ಹಣ ಹೋಗುವುದಿಲ್ಲ. ಅವಕ್ಕೆಲ್ಲ ಬೀಗ ಹಾಕಬೇಕು, ಕೀಲಿ ಹಾಕಬೇಕು.ಕುಮಾರಸ್ವಾಮಿಯವರಿಗೆ ಇದರ ಜೊತೆಯಲ್ಲಿ ಹೇಳುವುದೇನೆಂದರೆ, de monetization ಬಗ್ಗೆ ಪ್ರಸ್ತಾಪ ಮಾಡಿದರು. ಕೇಂದ್ರಸರ್ಕಾರದವರಿಗೆ ಹೇಳಬೇಕು. ಇವತ್ತು ನಮ್ಮ ರಾಜ್ಯದಲ್ಲಿರತಕ್ಕಂಥ 21 ಜಿಲ್ಲಾ ಬ್ಯಾಂಕುಗಳಲ್ಲಿ ಸುಮಾರು 473 ಕೋಟಿ ರೂಪಾಯಿ SBI ನ ಹಣವಿದೆ. ಈ 31ನೇ ತಾರೀಖಿನೊಳಗೆ ಏನಾದರೂ Reserve Bank ನವರು accept ಮಾಡಲಿಲ್ಲವೆಂದರೆ, ಯಾವ್ಯಾವ ಬ್ಯಾಂಕ್‌ನಲ್ಲಿ ಹಣವಿದೆ, ನಮ್ಮ ಶಿವಾನಂದ ಪಾಟೀಲ ಅಧ್ಯಕ್ಷರಾಗಿರುವ ಬ್ಯಾಂಕ್‌ನಲ್ಲಿ 80 ಕೋಟಿ ರೂಪಾಯಿ ಇದೆ, ನಿಮ್ಮ ಹತ್ತಿರ ಎಷ್ಟಿದೆ? ಇವರ ಹತ್ತಿರ 189 ಕೋಟಿ ರೂಪಾಯಿ ಬೆಳಗಾವಿಯಲ್ಲಿದೆ. ಹೀಗೆ ಇಡೀ ರಾಜ್ಯದಲ್ಲಿ all put together 472 crores of rupees ಇದೆ. ಈ ಹಣವನ್ನು ಈ ಮಾರ್ಚ್ 31ರೊಳಗೆ Reserve Bank ನವರು

ತಿದ್ದುಪಡಿಯಾಗದ / uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

accept ಮಾಡಲಿಲ್ಲವೆಂದರೆ, ಇಷ್ಟು ಹಣವೂ ಕೂಡ ಆಯಾ ಸಂಸ್ಥೆಗಳಿಗೆ . . . . . ಆಗುವುದಿಲ್ಲವೆಂದರೆ, ಅವರೆಲ್ಲ Section 11 ಗೆ ಬಂದು ಸರ್ಕಾರ ಎಲ್ಲ ದೊಡ್ಡ ದೊಡ್ಡ ಬೀಗಗಳನ್ನು ತೆಗೆದುಕೊಂಡು ಹೋಗಿ ಹಾಕಬೇಕಾಗುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ರಾಜಣ್ಣನವರು ಹೇಳಿದ್ದು ಅರ್ಥವಾಯಿತು. ಇಲ್ಲಿ ಪ್ರಶ್ನೆ ಏನೆಂದರೆ, ಸಹಕಾರಿ ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಂಡಿರುವವರು 23 ಲಕ್ಷ ರೈತರು ಎಂದು ಹೇಳುತ್ತಾರೆ. ನಾವು ಸರ್ಕಾರದ ಹಲವಾರು ಕಾರ್ಯಕ್ರಮಗಳನ್ನು ಘೋಷಣೆ ಮಾಡುತ್ತೇವೆ. ಪಶು ಭಾಗ್ಯ ಯೋಜನೆಯಲ್ಲಿ ನೀವು ಒಂದು ಕ್ಷೇತ್ರದಲ್ಲಿ 50 ಜನರನ್ನೋ, 100 ಜನರನ್ನೋ select ಮಾಡಿಕೊಳ್ಳುತ್ತೀರಿ. ಆ ಕಾರ್ಯಕ್ರಮ ಎಲ್ಲರಿಗೂ ಏನೂ ತಲುಪುವುದಿಲ್ಲ. ನೀವು ಅಲ್ಲಲ್ಲೇ ಕೊಡುತ್ತೀರಿ. ಎಲ್ಲರಿಗೂ ಏನೂ ಕೊಡುತ್ತಿಲ್ಲ. ಕಳೆದ 3 ವರ್ಷಗಳಿಂದ ಬರಗಾಲವಿದೆ. ಕಳೆದ 3 ವರ್ಷಗಳಿಂದ ಸರ್ಕಾರದ ಮಾಹಿತಿ ಪ್ರಕಾರವೇ ರೈತರು ಬೆಳೆದಿರುವ ಬೆಳೆ ಇಂದು ಸುಮಾರು 60 ಸಾವಿರ ಕೋಟಿ ರೂಪಾಯಿ loss ಆಗಿರುವುದು. ಆ ರೈತ ಬದುಕುವುದು ಹೇಗೆ? ಉದಾಹರಣೆಗೆ, Supreme Court ಆದೇಶದ ಮೇರೆಗೆ ಕಾವೇರಿ ನೀರನ್ನು ತಮಿಳುನಾಡಿಗೆ ಬಿಡಲಿಕ್ಕೋಸ್ಕರವಾಗಿ ಇಂದು ಹಾಸನ ಜಿಲ್ಲೆಯೊಂದರಲ್ಲೇ 6 ಲಕ್ಷ ಎಕರೆ ಭೂಮಿಯಲ್ಲಿ ರೈತರು ಬಿತ್ತನೆ ಮಾಡಲಿಕ್ಕಾಗಲಿಲ್ಲ. ಭತ್ತ ಬೆಳೆಯಲಿಕ್ಕಾಗಲಿಲ್ಲ. ಅಂದೂ ಸರ್ಕಾರಕ್ಕೆ ಕೇಳಿದ್ದೇವೆ. ಇಂದು ಯಾವ ರೈತರು ಭತ್ತ ಬೆಳೆಯಲಿಕ್ಕಾಗಲಿಲ್ಲ, ಬಿತ್ತನೆ ಮಾಡಲಿಕ್ಕಾಗಲಿಲ್ಲ, ಎಕರೆಗೆ 25 ಸಾವಿರ ರೂಪಾಯಿಗಳನ್ನಾದರೂ ಆ ರೈತನಿಗೆ ಪರಿಹಾರ ಕೊಡಿ ಎಂದು ನಾವೀಗಾಗಲೇ Supreme Court ಆದೇಶ ಬಂದಾಗ ವಿಶೇಷ ಅಧಿವೇಶನ ಕರೆದ ದಿವಸದಿಂದ ಕೇಳುತ್ತಿದ್ದೇವೆ. ಅದರ ಬಗ್ಗೆ ಸರ್ಕಾರದಿಂದ ಬಜೆಟ್‌ನಲ್ಲಿ ಏನೂ ಸದ್ದು ಇಲ್ಲ. ಅಂದು ಪರಿಶೀಲನೆ ಮಾಡುತ್ತೇವೆಂದು ಹೇಳಿದರು.

ಶ್ರೀ ಹೆಚ್.ಡಿ. ರೇವಣ್ಣ: 2 ವರ್ಷಗಳಿಂದ ನಮ್ಮ ಜಿಲ್ಲೆಯಲ್ಲಿ ನೀರಾವರಿ ಪ್ರದೇಶದಲ್ಲೂ ಬೆಳೆ ಬೆಳೆದಿಲ್ಲ. Dry area ದಲ್ಲೂ ಬೆಳೆ ಇಲ್ಲ. 22 TMC ನೀರನ್ನು ನಾವು ಹಾಸನ ಹೇಮಾವತಿ, ಯಗಚಿಯಿಂದ ತಮಿಳುನಾಡಿಗೆ ಬಿಟ್ಟುಕೊಟ್ಟಿದ್ದೇವೆ. ನಮ್ಮ ಪರಿಸ್ಥಿತಿ ಏನಾಗಬೇಕೆಂದು ಲೆಕ್ಕ ಹಾಕಿ. ಇಂದು ರೈತರು 30 ಜಿಲ್ಲೆಗಳಿಗೆ ಕೊನೆ ಏನಾದರೂ ಅತಿ . . . ಯಾರಾದರೂ ಸೇರಿಕೊಳ್ಳುವವರಿದ್ದರೆ ನೀವು ಭಿಕ್ಷೆ ಎತ್ತಿ ಎಂದು ನಮಗೆ ಹಾಸನ ಜಿಲ್ಲೆಗೆ ಹೇಗೂ ಒಂದು ಭಿಕ್ಷಾ ಕೇಂದ್ರವನ್ನು ಈ ವರ್ಷ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕೊಟ್ಟುಬಿಟ್ಟಿದ್ದೀರಿ. ಆ ಪರಿಸ್ಥಿತಿಗೆ ಬಂದು ಹೋಗಿದೆ. ದಯಮಾಡಿ ಇದನ್ನು ಗಂಭೀರವಾಗಿ ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ. 2 ವರ್ಷಗಳ ಬೆಳೆ ಏನು ನಷ್ಟವಾಗಿದೆ ಅದಕ್ಕೆ 25 ಸಾವಿರ ರೂಪಾಯಿಗಳಂತೆ ಕೊಡಬೇಕು. ಆಮೇಲೆ, ಮಂಡ್ಯ ಜಿಲ್ಲೆಯಲ್ಲಿ ಕೊನೆಯ ಭಾಗಕ್ಕೂ ನೀರು ಹೋಗಿಲ್ಲ. ಮಂಡ್ಯ ಜಿಲ್ಲೆ ಇರಬಹುದು, ಕೆ.ಆರ್. ನಗರ ತಾಲ್ಲೂಕು ಇರಬಹುದು. ದಯಮಾಡಿ, ಇದನ್ನು ಗಂಭೀರವಾಗಿ ಸರ್ಕಾರ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ರೇವಣ್ಣನವರೆ, ಬಜೆಟ್ ಮೇಲೆ ಮಾತನಾಡಲು ಇಂದು ಕೊನೆಯ ದಿನ. ಮಾತನಾಡುವವರು ಬಹಳ ಜನರಿದ್ದಾರೆ. ಅದಕ್ಕೆ short ಆಗಿ ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ರಾಜಣ್ಣನವರು, ಇಲ್ಲಿ ಸರ್ಕಾರ ಸಾಲ ಮನ್ನಾ ಘೋಷಣೆ ಮಾಡಿ ಸಹಕಾರಿ ಬ್ಯಾಂಕುಗಳಿಗೆ ಸಾಲ ಕಟ್ಟದಿದ್ದರೆ ಮುಚ್ಚಿಹೋಗಬೇಕಾಗುತ್ತದೆ ಎಂದು ಹೇಳಿದರು. ನನ್ನ ಕಾಲದಲ್ಲಿ ನಾವು ಅಂದು 2.5 ಸಾವಿರ ಕೋಟಿ ರೂಪಾಯಿ ಸಾಲ ಮನ್ನಾ ಮಾಡಿದಾಗ ಇಪ್ಪತ್ತೇ ದಿವಸಗಳಲ್ಲಿ ಎಲ್ಲಾ ಸಹಕಾರಿ ಬ್ಯಾಂಕ್‌ಗಳಿಗೆ 2.5 ಸಾವಿರ ಕೋಟಿ ಹಣ ಕೊಟ್ಟಿದ್ದೇವೆ. ಅಂದು ಎಷ್ಟೋ ಬ್ಯಾಂಕುಗಳವರು ಬೀಗ ಹಾಕಿಕೊಂಡು ಮನೆಯಲ್ಲಿ ಮಲಗಿದ್ದರು. ಅಂದಿನ DCC Bank ಗಳ activities ಇರಲಿಲ್ಲ. ಅಂದು ನಾವು ತೆಗೆದುಕೊಂಡಂಥ ನಿರ್ಧಾರದಿಂದ ಎಷ್ಟೋ ಬ್ಯಾಂಕುಗಳಿಗೆ ಹೊಸದಾಗಿ ಮತ್ತೆ life ಬಂತು. ನಾವು ಅಂದು ಮಾಡಿ ತೋರಿಸಿದ್ದೇವೆ. ಅಂದು ನಾನು ಮುಖ್ಯಮಂತ್ರಿಯಾಗಿದ್ದಾಗ 2.5 ಸಾವಿರ ಕೋಟಿ ರೂಪಾಯಿ ಸಾಲ ಮನ್ನಾ ಮಾಡಿದಾಗ ಇಪ್ಪತ್ತೇ ದಿವಸಗಳಲ್ಲಿ ಎಲ್ಲ bank accountಗೆ ಅದನ್ನು ನಾವು ಸರ್ಕಾರದಿಂದ ಕೊಟ್ಟಿದ್ದೇವೆ. ಸರ್ಕಾರಕ್ಕೆ ಇಚ್ಛಾಶಕ್ತಿ ಇದ್ದರೆ ಇದೇನೂ ಅಂಥ ದೊಡ್ಡ ವಿಷಯವಲ್ಲ. ನಾನು ಕೊನೆಯದಾಗಿ ಹೇಳಬಯಸುತ್ತೇನೆ. 2012-13ರ 1,26,396 ಕೋಟಿ ರೂಪಾಯಿ ಎಂದು ಆಯವ್ಯಯದಲ್ಲಿ ಹೇಳುತ್ತಾರೆ. ಆದರೆ, ವೆಚ್ಚ ಮಾಡತಕ್ಕಂಥದ್ದು 99 ಸಾವಿರ ಕೋಟಿ ರೂಪಾಯಿ. 26 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಿಲ್ಲ. ಅಂದರೆ, 2012-13ರಲ್ಲಿ 21% ಹಣವನ್ನು ಬಳಕೆ ಮಾಡುವುದಿಲ್ಲ. 2013-14ರ ಬಜೆಟ್‌ನಲ್ಲಿ 1,37,314 ಕೋಟಿ ರೂಪಾಯಿ ಘೋಷಣೆ ಮಾಡುತ್ತಾರೆ. ಆದರೆ, ವೆಚ್ಚ ಮಾಡಿದಂಥದ್ದು 1,13,717 ಕೋಟಿ ರೂಪಾಯಿ. 23,598 ಕೋಟಿ ರೂಪಾಯಿಗಳನ್ನು ಬಳಕೆಯನ್ನೇ ಮಾಡಿಲ್ಲ. 2014-15ರಲ್ಲಿ 1,53,937 ಕೋಟಿ ರೂಪಾಯಿಗಳ ಆಯವ್ಯಯದಲ್ಲಿ ಖರ್ಚು ಮಾಡಿದ್ದು 1,31,365

ಕೋಟಿ ರೂಪಾಯಿ. 22,571 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿಲ್ಲ. 2015-16ರಲ್ಲಿ 1,66,672 ಕೋಟಿ ರೂಪಾಯಿಗಳ ಆಯವ್ಯಯ ಮಂಡನೆ ಮಾಡುತ್ತಾರೆ. 1 ಲಕ್ಷದ 49 ಸಾವಿರ ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ. ಮತ್ತೆ ಅಲ್ಲಿ ಸುಮಾರು 18 ಸಾವಿರ ಕೋಟಿ ಹಣವನ್ನು ಖರ್ಚು ಮಾಡುವುದಿಲ್ಲ. ಕಳೆದ 4 ವರ್ಷಗಳ ಆಯವ್ಯಯದಲ್ಲಿ ನೀವು ಮಂಡನೆ ಮಾಡಿರತಕ್ಕಂಥ ಹಣವನ್ನು ಖರ್ಚು ಮಾಡತಕ್ಕಂಥದ್ದಕ್ಕೆ ನೀವು ಮಾಡಿರತಕ್ಕಂಥ ಲೆಕ್ಕ ತೆಗೆದರೆ 4 ವರ್ಷಗಳಲ್ಲಿ ಸುಮಾರು 80 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿಲ್ಲ. ಇಂದು ಈ ರೀತಿ ಬಜೆಟ್‌ನಲ್ಲಿ ತೋರಿಸತಕ್ಕಂಥದ್ದು, ಆ ವರ್ಷ ಖರ್ಚು ಮಾಡತಕ್ಕಂಥದ್ದು, ಕೆಲವು flagship ಕಾರ್ಯಕ್ರಮವೆಂದು ಹೇಳುತ್ತಾರೆ, ಆದರೆ, ಇದು ಆ ರೀತಿಯಾಗಿಲ್ಲ. ಇಲ್ಲಿ ಇಷ್ಟು ಹಣವನ್ನು ಖರ್ಚು ಮಾಡದೇ ಏತಕ್ಕೋಸ್ಕರ ಬಜೆಟ್ ಗಾತ್ರ ತೋರಿಸುತ್ತೀರಿ? ಏಕೆ ಇಷ್ಟು ಸಾಲ ಮಾಡಿದ್ದಾರೆ? ಈ ಸರ್ಕಾರದ ಆಯವ್ಯಯದ ಖರ್ಚುಗಳನ್ನು ನೋಡಿದಾಗ ಈ ರಾಜ್ಯದ ಸರ್ಕಾರದ non-plan committed expenditure ಬಹುಶ: 79% ಇದೆ. ನೀವು ಇವತ್ತು ಯೋಜನಾ ವೆಚ್ಚಗಳಿಗೆ ಮಾಡತಕ್ಕಂಥ ಖರ್ಚು ನೋಡಿದರೆ, ಒಂದು ವರ್ಷದಲ್ಲಿ 20 ಸಾವಿರ ಕೋಟಿ ರೂಪಾಯಿಗಳನ್ನೂ ಪ್ರತಿ ವರ್ಷ ದಾಟುವುದಿಲ್ಲ. ಆದ್ದರಿಂದ ಇಂದು ಈ ಸರ್ಕಾರದ ಈ ರೀತಿಯ ಬಜೆಟ್‌ಗಳೇನಿವೆ ಅರ್ಥಹೀನವಾಗಿ ಜನರಲ್ಲಿ ಇಂದು ಇದರ ಬಗ್ಗೆ ಟೀಕೆ ಪ್ರಾರಂಭವಾಗುತ್ತದೆ. ಯಾರೂ ನಂಬದೇ ಇರತಕ್ಕಂಥ ಪರಿಸ್ಥಿತಿಗೆ ಬಂದಿದ್ದೇವೆ.

(ಮುಂದು)

27-03-2017 (31) 4-20 KKD/PS

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಂದು)

ಇವತ್ತು ರೈತರ ಸಾಲಮನ್ನಾ ವಿಷಯದಲ್ಲಿ ರೈತರಿಗೆ ಬೆಳೆಪರಿಹಾರ ಕೊಡತಕ್ಕಂಥ ವಿಷಯದಲ್ಲಿ ಬೆಳೆವಿಮೆ ಯೋಜನೆಯಲ್ಲಿ 268 ಕೋಟಿ ರೂಪಾಯಿಗಳನ್ನು ರೈತರು ಕಟ್ಟಿದ್ದಾರೆ. ಆ 268 ಕೋಟಿ ರೂಪಾಯಿ ಬೆಳೆ ವಿಮೆಯನ್ನು ಕಟ್ಟಿರತಕ್ಕಂಥ ರೈತರಿಗೆ, ಇಲ್ಲಿ ಅವರಿಗೆ ರೈತರು ಹೋಗಿ ಬೆಳೆ ವಿಮೆ claim ಮಾಡಲಿಕ್ಕೆ ಹೋದರೆ ಕಂದಾಯ ಇಲಾಖೆಯವರು ಹೇಳುತ್ತಾರೆ, ನಮಗೆ ಇದು ಗೊತ್ತಿಲ್ಲ, ನಮಗೆ ಇದರ ಪೂರ್ಣ ಮಾಹಿತಿ ಇಲ್ಲ, ನೀವು Insurance Company ಹತ್ತಿರ ಹೋಗಿ ಎಂದು

ಹೇಳುತ್ತಾರೆ. Insurance Company ಯವರು ಕೈಗೆ ಸಿಗುವುದಿಲ್ಲ. 268 ಕೋಟಿ ರೂಪಾಯಿಗಳನ್ನು ರೈತರಿಂದ ಬೆಳೆ ವಿಮೆ ರೂಪದಲ್ಲಿ ಕಟ್ಟಿಸಿಕೊಂಡು ರೈತರಿಗೆ ಒಂದು ಬಿಡಿಗಾಸು ಸಹ ಕೊಟ್ಟಿಲ್ಲ. ಇನ್ನು ಬೆಳೆ ಪರಿಹಾರದ ಬಗ್ಗೆ ಹೇಳುವುದಾದರೆ, ಬೆಳೆಪರಿಹಾರಕ್ಕೆ ಕೇಂದ್ರ ಸರ್ಕಾರ 450 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು ಮತ್ತು ಇವರು ಅಂದರೆ ಈ ಸರ್ಕಾರ 260 ಕೋಟಿ ರೂಪಾಯಿಗಳನ್ನು ಒಟ್ಟು 600 ಚಿಲ್ಲರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ರೈತನ ಬಗ್ಗೆ ಎಷ್ಟು ಕಳಕಳಿ ಈ ಸರ್ಕಾರಗಳಿಗೆ ಇವೆ? ಈ ಬಜೆಟ್‌ನಲ್ಲಿ ರೈತನಿಗೆ ಆಶಾದಾಯಕವಾದಂಥ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ನಾವು ಇಲ್ಲಿ ಕಾಣುತ್ತಿಲ್ಲ. ಇನ್ನು ಸರ್ಕಾರ ಮಾರ್ಚ್ 31 ರವರೆಗೆ ಅಸಲು ಕಟ್ಟುವುದಕ್ಕೆ ಗಡುವು ಕೊಟ್ಟು, ಈ ದಿನಾಂಕದೊಳಗೆ ಅಸಲು ಕಟ್ಟಿದರೆ ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ರೈತರಿಗೆ ಇವತ್ತು ಮಾರ್ಚ್ 31 ರೊಳಗೆ ಅಸಲನ್ನು ಸಹ ಕಟ್ಟಲಿಕ್ಕೆ ಸಾಧ್ಯವಿಲ್ಲ. ಮುಂದಿನ ಡಿಸೆಂಬರ್ ತಿಂಗಳವರೆಗಾದರೂ ಅಸಲು ಕಟ್ಟತಕ್ಕಂಥದ್ದನ್ನು defer ಮಾಡಲಿ. ಇಲ್ಲದಿದ್ದರೆ ರೈತರು ಬದುಕುಲಿಕ್ಕೆ ಆಗುವುದಿಲ್ಲ. ಯಾರೋ ಒಬ್ಬ ರೈತನಿಗೆ ಶಿಂಷಾ ಸಹಕಾರಿ ಬ್ಯಾಂಕ್‌ನವರು ಒಂದು ಬಹಿರಂಗ ಹರಾಜು ನೋಟೀಸು ಕೊಟ್ಟು, ಏನಾದರೂ ನನ್ನ ಒಡವೆ ಎಲ್ಲ ಹರಾಜು ಹಾಕಿದರೆ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಆ ರೈತ ಹೇಳಿಕೆ ಕೊಟ್ಟಿದ್ದಾನೆ. ಇವತ್ತು ಈ ರೀತಿ ಇದೆ. ಆದ್ದರಿಂದ, ಸರ್ಕಾರ ತಕ್ಷಣ ಬ್ಯಾಂಕುಗಳಿಗೆ ಸೂಚನೆ ಕೊಡಬೇಕು, ಡಿಸೆಂಬರ್ ತಿಂಗಳವರೆಗೆ ಅಸಲು ಕಟ್ಟತಕ್ಕಂಥದ್ದನ್ನು defer ಮಾಡಬೇಕೆನ್ನತಕ್ಕಂಥದ್ದನ್ನು ಸರ್ಕಾರಕ್ಕೆ ಹೇಳುವುದರ ಮುಖಾಂತರ, ನನಗೆ ಮಾತಾಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಅಶೋಕ್ ಖೇಣಿ (ಬೀದರ್ ದಕ್ಷಿಣ): ಮಾನ್ಯ ಅಧ್ಯಕ್ಷರೇ, ಈ ಬಜೆಟ್‌ನಲ್ಲಿ ಹೇಳುತ್ತಾರೆ; It is good that the goal of both the Centre and State Governments want to bring in Ramarajya. However, it is essential to understand that raw means mind, ma means Soul and only if the mind dissolves into the soul

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

the great awareness emerges. All the religious texts endorses this view, I feel that Ramrajya means; Governance with great awareness. ಅದು ಆಗುತ್ತಿಲ್ಲ. Unfortunately, governance is done, in spite of governance. For example take HKRDB; according to the procedure and the law, you are supposed to prepare a plan of action. Then implement based on the plan of action. There is lot of money is being spent. ನಾಲ್ಕು ವರ್ಷ ಗಳಾಯಿತು ಇನ್ನೂ ಪ್ಲ್ಯಾನ್ ಇಲ್ಲ. Regional commissioner ಅವರು ಅವರ ಮನಸ್ಸಿಗೆ ಬಂದಿದ್ದು ಏನೇನೋ ಮಾಡುತ್ತಾರೆ. Arrogance of the bureaucracy. ಎಷ್ಟೇ ದೂರವಾಣಿ ಕರೆ ಮಾಡಿದರೂ ಎಷ್ಟೇ ಮೆಸೇಜ್ ಮಾಡಿದರೂ ಅದಕ್ಕೆ ಉತ್ತರಿಸುವುದಿಲ್ಲ. They do not have to answer to the people, I have to answer to the people. I like the Chief Minister and the concerned minister to take this and I am happy to show, ಸುಮಾರು ಮೆಸೇಜುಗಳನ್ನು ಕಳುಹಿಸಿರುವುದನ್ನು ತೋರಿಸುತ್ತೇನೆ. ಅವರನ್ನು ಭೇಟಿಯಾದಾಗ ಕೇಳಿದರೆ, ನೀವೇನ್ರೀ, ರೆಡ್ಡಿ ಬ್ರದರ್ಸ್ ಅವರನ್ನೇ ಜೈಲಿಗೆ ಕಳುಹಿಸಿದ್ದೇನೆ, ನಿಮ್ಮದೇನು ದೊಡ್ಡದು ಎಂದು ಹೇಳುತ್ತಾರೆ. Is that the way to talk as an officer? Why is he there? He is supposed to serve and assist us to serve the public. ಅದನ್ನು ಬಿಟ್ಟು, I have said the concerned minister, ಅವರು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದರು, ಆದರೆ ಇದುವರೆಗೂ ಏನೂ ಆಗಿಲ್ಲ. ಅವರು ಏನು ಮಾಡಿದ್ದಾರೆಂಬುದಕ್ಕೆ ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. Micro and Macro ಎಂದು ಮಾಡಿದ್ದಾರೆ. There is no provision to do macro in HKRDB bylaws. But ಏನು ಮಾಡಿದ್ದಾರೆಂದರೆ, Micro ದಲ್ಲಿ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

project approve ಮಾಡುವುದಿಲ್ಲ. ನನ್ನ projects year together delay ಮಾಡುತ್ತಾರೆ. Time ಆಯಿತು ಎಂದು macro ನಲ್ಲಿ ಹಾಕುತ್ತಾರೆ. Then, at their discretion, they allocate the funds. For example; Macro ದಲ್ಲಿ 3 years ನಮಗೆ zero fund ಬಂದಿದೆ. while other constituencies like Bhalki, Basavakalyan got lion share of the money. Only Bhalki ನಲ್ಲಿ ಸಿಕ್ಕಿದೆ. ಈ officer ಏನು ಮಾಡುತ್ತಿದ್ದಾರೆಂದರೆ, he is just interested in pleasing the ministers who are in power, either Gulbarga's Central opposition leader or the ministers in charge. So what I request is; ಬಜೆಟ್‌ನಲ್ಲಿ ಪ್ರತ್ಯೇಕವಾದ ಇಲಾಖೆ ಮಾಡಿ. HKRDB ಗೆ ಹಣ ಒದಗಿಸಿ Rs.1500 Crores money is being spent, somebody manage that part time. How can a part time Minister manage it? Let there be a full time minister and full time department for HKRDB, because it is a big region, planning has to be done. 4 ವರ್ಷ ಕಳೆದರೂ ಇನ್ನೂ plan ಮಾಡಿಲ್ಲವೆಂದರೆ, I feel a disgrace. ನಾನು ತಮಗೆ ಒಂದು ಉದಾಹರಣೆ ಕೊಡುತ್ತೇನೆ. This is just to say that; how injustice is being done. ನನಗೆ injustice ಮಾಡುತ್ತಿಲ್ಲ. ನನಗೆ ಮೂರು ಹೊತ್ತು ಊಟ ಸಿಗುತ್ತದೆ. ನನ್ನನ್ನು ಚುನಾಯಿಸಿರುವ 2,80,000 ಜನರಿಗೆ injustice ಆಗುತ್ತಿದೆ, because of these officers. ಉದಾಹರಣೆಗೆ; ಔರಾದ್‌ಗೆ 92 ಕೋಟಿ ರೂ.ಗಳು ಸಿಕ್ಕಿದೆ, ಬಸವಕಲ್ಯಾಣಕ್ಕೆ 88 ಕೋಟಿ ರೂ.ಗಳು ಸಿಕ್ಕಿದೆ, ಭಾಲ್ಕಿಗೆ 113 ಕೋಟಿ ರೂ.ಗಳು ಸಿಕ್ಕಿದೆ. ಬೀದರ್ ಉತ್ತರಕ್ಕೆ 140 ಕೋಟಿ ರೂ.ಗಳು ಸಿಕ್ಕಿದೆ, ಹುಮ್ನಾಬಾದ್‌ಗೆ 101 ಕೋಟಿ ರೂ.ಗಳು ಸಿಕ್ಕಿದೆ, ಆದರೆ ಬೀದರ್ ದಕ್ಷಿಣಕ್ಕೆ 25 ಕೊಟಿ ಮಾತ್ರ. Why? I want to know why? I want the Hon'ble Chief Minister to tell me

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

why is he running the department like this? ನೋಡಿ ನಾನು ಮಾನ್ಯ ಸಚಿವರುಗಳಿಗೆ I have given enough opportunities to help me, resolve this issue. But, they keep saying yes, ಮಾಡುತ್ತೇವೆ, ಮಾಡುತ್ತೇವೆ ಎಂದು ಆದರೆ ಏನೂ ಆಗುತ್ತಿಲ್ಲ. The best part is; look at this. There is no provision in the laws to do this, I raised this issue in the board meeting. The officer in charge, secretary says; ಸರ್ ನಾನು ಏನು ಮಾಡಲಿ board has approved. I asked a question. Have you informed the Board that this is against the law? ಗಪ್ ಕೂಡುತ್ತಾರೆ. What are the board members know? Officers are supposed to explain this is beyond the rule. You are approving something which is beyond the law, which you have to permit according to the Nanjundappa report.

ಅಧ್ಯಕ್ಷರು: ಇದು HKDB issue. Budget ಮೇಲಿನ issue ಬಗ್ಗೆ ಮಾತನಾಡಿ.

ಶ್ರೀ ಅಶೋಕ್ ಖೇಣಿ: ಮಾನ್ಯ ಅಧ್ಯಕ್ಷರೇ, ಬಜೆಟ್ ಮೇಲೆಯೇ ಹೇಳುತ್ತಿದ್ದೇನೆ, there is discrimination. Ok take for example; ಬಜೆಟ್ ನಲ್ಲಿ we had requested, we wanted Mannaekkelli to be a taluk headquarter. Because lot of people involved there. ನನ್ನ constituency ಗೆ ಏನು ಆಗುತ್ತದೆಯೆಂದರೆ, ನಮ್ಮ ಕ್ಷೇತ್ರದ ಸ್ವಲ್ಪ ಜನ ಹುಮನಾಬಾದ್‌ಗೆ ಹೋಗಬೇಕಾಗುತ್ತದೆ, ಇನ್ನು ಸ್ವಲ್ಪ ಜನರು ಬೀದರ್‌ಗೆ ಹೋಗಬೇಕಾಗುತ್ತದೆ. I have to deal with two Tahasildars, two everybody, different E.Os. everything. It is impossible to manage. ಅದನ್ನು ನಾವು ಕೇಳಿದ್ದೆವು,

ಸರ್ಕಾರ ಮಾಡಿಲ್ಲ. ಈಗ Agriculture ನಲ್ಲಿ, Animal and Husbandry ನಲ್ಲಿ ಚಾಂಗಲೂರ್‌ನಲ್ಲಿ they set up one animal shelter to feed the animals. ನಾವೆಲ್ಲ ಹೋಗಿ, MLA LAD ನಲ್ಲಿ ಅಲ್ಲಿ ಬೋರ್‌ವೆಲ್ ಹಾಕಿಸಿ, ಹುಲ್ಲು ಬೆಳೆಸುವುದಕ್ಕೆ we tried our best. There is no provision provided to feed those animals. Recently, because of starvation 4-5 animals have died. Imagine a dumb animal which loves died of starvation, because we refuse to provide the feed. ಅದಕ್ಕೂ ನೋಡಬೇಕು, check ಮಾಡಬೇಕು. Agriculture ನಲ್ಲಿ ಇನ್ನೊಂದಿದೆ, ನಾನು ಸರ್ಕಾರಕ್ಕೆ request ಮಾಡಿದ್ದೆ. ಬಾಬಾ ರಾಮ್‌ದೇವ್‌ರವರು food processing plant ಹಾಕುತ್ತಿದ್ದಾರೆ. ಅದನ್ನು ನಾನು ಹೋಗಿ ನೋಡಿ ಬಂದಿದ್ದೇನೆ. I requested him to come to Bidar to put a food processing plant. Because, majority people of my constituency are agriculturist. ಅವರು ಬಂದರೆ ರೈತರಿಗೆ guaranteed ಹಣ ಸಿಗುತ್ತದೆ, other than sugarcane ಸಿಗುತ್ತದೆ. They will have a better livelihood. I request the government to extend an invitation to him, because other governments like Telangana and Andhra Pradesh are extending. So I like them to invest. That will provide 10 thousand jobs for farmers.

ಅಧ್ಯಕ್ಷರು: O.k., Please, conclude.

ಶ್ರೀ ಅಶೋಕ್ ಖೇಣಿ: Sir, I am waiting to talk, please give me few minutes, I have been discriminated. See, I do not belong to this party or that party. ಅವರೇ ಮಾತನಾಡುತ್ತಿದ್ದಾರೆ, ನಮ್ಮ

ಜನರಿಗೆ ನಾನು protection ಕೊಡಬೇಕಲ್ಲವೇ? ಆದ್ದರಿಂದ, ನಾನು ಸ್ವಲ್ಪ ಹೊತ್ತು ನಿಂತು ಮಾತನಾಡಬೇಕು.

ಅಧ್ಯಕ್ಷರು: HKDB ಬಗ್ಗೆ ಮಾತನಾಡುವುದು ಬೇಡ, ಬಜೆಟ್ ಬಗ್ಗೆ ಮಾತನಾಡಿ.

ಶ್ರೀ ಅಶೋಕ್ ಖೇಣಿ: They provided in the budget for HKRDB.

ಅಧ್ಯಕ್ಷರು: ಆಯಿತು. ಅಲ್ಲಿ ಕಮಿಟಿ ಇರುತ್ತದೆ, Board ಇರುತ್ತದೆ.

ಶ್ರೀ ಅಶೋಕ್ ಖೇಣಿ: HKRDB ಬಗ್ಗೆ ಮಾತನಾಡಿದ್ದಾರೆ, ಅದಕ್ಕೆ ಮಾತನಾಡುತ್ತಿದ್ದೇನೆ.

ಅಧ್ಯಕ್ಷರು: ಈಗ ಹೇಳಿದ್ದೀರಿ.

ಶ್ರೀ ಅಶೋಕ್ ಖೇಣಿ: ಅವರು HKRDB ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಹೇಳುತ್ತಿದ್ದಾರೆ. ನಾನು ಹೇಳುತ್ತಿದ್ದೇನೆ; somebody is putting dust in their eyes. Because it is being run autocratically, the whole planning is rubbish. Somebody has to investigate and find out the results. ಜನರಿಗೆ ಬಹಳ ಅನ್ಯಾಯ ಆಗುತ್ತಿದೆ. Only few ministers who are power in Gulbarga are getting all the funds. I have been asking that HKRDB has to give me taluka-wise what funds you have given in the last four years. He refuses to give it. RTI ನಲ್ಲಿ ಹಾಕಿದರೂ ಅವನಿಗೂ ಮಾಹಿತಿ ಕೊಡುತ್ತಿಲ್ಲ. He thinks, he is the new Nizam of Gulbarga ಮತ್ತೆ ಇನ್ನೇನು ಹೇಳಬೇಕು? ಸಣ್ಣ ನೀರಾವರಿ ಇಲಾಖೆಯವರು ಕೆರೆಗಳನ್ನು ಮಾಡುತ್ತಿದ್ದಾರೆ. ನಮಲ್ಲಿ ಒಂದು ಕಮ್ಠಾಣಾ ಎನ್ನುವ 500 ವರ್ಷಗಳ ಐತಿಹಾಸಿಕ ಕೆರೆ ಇದೆ, ಆ ಕೆರೆಯನ್ನು restore ಮಾಡಿದರೆ 30 ಹಳ್ಳಿಗಳಿಗೆ ಕೃಷಿ ಮತ್ತು ಕುಡಿಯುವ ನೀರು ಸಿಗುತ್ತದೆ. We gave proposal, they have rejected it. Thirty villages will have no drought. It is the only lake in Karnataka whose embankment has



ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

built with laterite stone. ನಾನು ಇದರ ಬಗ್ಗೆ ಮನವಿ ಮಾಡಿದ್ದೆ, ಆದರೂ ಹಾಕಿಲ್ಲ. Minor Irrigation Department is having one CAG Report, I will quote. "The Minor Irrigation Department claim of restoration of 1989 hectares was not factual as components like silt removal, improvements of canals and repairs to sewage gates were not completely executed. No guidelines were prepared for implementation of schemes and selection of beneficiaries like transparency with certain subsidy of 33.22 crores.

(ಮುಂದು)

27-03-2017-(32)-4-30-ಎಸ್ಕೆಂಕೆ-ಪಿಎಸ್

Sri Ashok Kheni: (Cont..)

ಮತ್ತೆ schools, ಒಂದು ಕಡೆಗೆ ನಮ್ಮ ಪ್ರಧಾನ ಮಂತ್ರಿಯವರು ಸ್ವಚ್ಛ ಭಾರತದ ಬಗ್ಗೆ ಹೇಳುತ್ತಾರೆ. ಎಲ್ಲಾ ಶಾಲಾ ಕಟ್ಟಡಗಳನ್ನು ಕಟ್ಟುತ್ತಿದ್ದಾರೆ. Day schools ನಲ್ಲಿ toilet ಕಟ್ಟುತ್ತಿಲ್ಲ. ನಮ್ಮ ಕಮಠಾಣಾ ಶಾಲೆಯಲ್ಲಿ ಸಂಗೊಳ್ಳಿ ಶಾಲೆಯಲ್ಲಿ ಶೌಚಾಲಯ ಕಟ್ಟುತ್ತಿಲ್ಲ. ನಾವು ಹೋಗಿ ಏಕೆ ಶೌಚಾಲಯ ಕಟ್ಟುತ್ತಿಲ್ಲವೆಂದು ಕೇಳಿದ್ದಕ್ಕೆ, what is their answer is; ಸಾಹೇಬರೆ, ಇದು ಡೇ ಸ್ಕೂಲ್ ಇದೆ, ಇಲ್ಲಿ ಶೌಚಾಲಯ ಬೇಕಾಗಿಲ್ಲ ಎನ್ನುತ್ತಾರೆ. Boys' day school ನಲ್ಲಿ toilets ಬೇಕಾಗಿಲ್ಲವಂತೆ. What they have done is; they done two contracts, one for toilets and one for school. Toilet ಕಟ್ಟಿಸುವ entire money has disappeared. I like somebody to look at it, what has happened. Where do the boys go to the bathroom? ಅವರು ಒಂದು ರಸ್ತೆಯ ಬದಿ ಹೋಗಬೇಕು ಅಥವಾ inside the

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

compound ಹೋಗಬೇಕು, ಅಲ್ಲಿ ಅವರು toilet ಹಾಕಿಲ್ಲ. I like that to be included. Another important thing, ನಮ್ಮ ಜಿಲ್ಲೆಯಲ್ಲಿ English schools ಇಲ್ಲ. ಬೀದರ್ ದಕ್ಷಿಣದಲ್ಲಿ ಒಂದು cinema theatre ಇಲ್ಲ. ನಮ್ಮ ಹತ್ತಿರ ಏನೂ ಇಲ್ಲ. colleges ಇಲ್ಲ, ಒಂದು English schools ಇಲ್ಲ, ಈಗ NEET ನಲ್ಲಿ ನೀವು ಎಲ್ಲಾ ಹಿಂದಿ, ಮರಾಠಿ, ತೆಲಗು, ತಮಿಳು, ಬೆಂಗಾಲಿ, ಅಸ್ಸಾಮಿ, ಭಾಷೆಯಲ್ಲಿ exam ಗೆ appear ಆಗಬೇಕೆಂದು ಹೇಳುತ್ತಾರೆ. ನಮ್ಮ ಹುಡುಗರು ಹೇಗೆ appear ಆಗುತ್ತಾರೆ? ಹೇಗೆ ಮಾಡುತ್ತಾರೆ? People responses of this mistake, there is no action against them. What has happened is, there is no fear factor with bureaucracy. Court system is lagged. ಕೋರ್ಟ್ ಕೇಸು ಪ್ರಕರಣಗಳಲ್ಲಿ ಹತ್ತು ವರ್ಷಕ್ಕೆ ಬರುತ್ತವೆ, ಬರುವಷ್ಟರಲ್ಲಿ ಎಲ್ಲಾ ಸತ್ತು ಹೋಗುತ್ತಾರೆ. witness ಸತ್ತು ಹೋಗುತ್ತಾರೆ. It has become like a free for all. If you break the law, you will have benefit. ನಾನು ಇನ್ನೊಂದು request ಮಾಡಿದ್ದೆ. 99 acres of land was given three years back to the Home Department to create a women only training centre. Because, according to the statistics, we got only 6% women in the police force and now we required is 30%. We could have women only training centre. We can bring experts from FBI or Scotland yard or israili force and teach them how to mitigate the domestic crimes. ಅವರು ಬಂದು ಏನು ಮಾಡುತ್ತಾರೆ? ಇಲ್ಲ ಇಲ್ಲ ಅದು ಬೇಡ, women's toilet ಕೊಡುತ್ತೇವೆ, existing infrastructure ಜೊತೆಗೆ ಹತ್ತು ಕೋಟಿಯ toilets ಕೊಡುತ್ತೇವೆ ಎಂದು ಹೇಳುತ್ತಾರೆ. This is a shame, when we want to create some infrastructure which Karnataka

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

to be proud of. ಡೆಹರಾಡೂನ್‌ನಲ್ಲಿ ಮಿಲಿಟರಿ ಅಕಾಡೆಮಿ ಇದೆ. We could be proud of. We Will show what you give, Ok we will give some toilets. I request them to include that. ಮತ್ತೆ ಗ್ರಾಮ ಪಂಚಾಯಿತಿಯಲ್ಲಿ, in my constituency I have started wi fi.

ಅಧ್ಯಕ್ಷರು : I think it is last point. ಮಾತನಾಡಿ.

Mr.Ashok Khani : ಇನ್ನೂ 3 points ಇದೆ. wi fi I have been waiting for 67 years to speak. Please give me some time. Wi fi ಮಾಡಿದ್ದೇವೆ, I am glad and I welcome that the government is also doing wifi, because it is fantastic, it will bring decentralized education and knowledge. It brings three important points. Decentralized education, knowledge and knowledge in everybody's hand. ಇನ್ನೊಂದು ಆಗಿದೆ. KIADB ಯವರು treatment plants ಸಲುವಾಗಿ ದುಡ್ಡು ಹಾಕುತ್ತಾರೆ. But, I do not know, where the money goes, none of the treatment plants have been built. ಈಗ 2 ವಾರಗಳ ಹಿಂದೆ ಹೊಸ ಸುಪ್ರಿಂ ಕೋರ್ಟ್ ಆದೇಶ ಬಂದಿದೆ. If you do not have treatment plants within three months (90 days) all the industries have to be shut down. ಅದು ಏನಾಗಿದೆ ಎಂಬುದು ನನಗೆ ಗೊತ್ತಿಲ್ಲ. ಅದು ಮಾಡುತ್ತಿದ್ದು, it is very important, industry shut down, ಒಂದು ಕಡೆ monetization ಆಗಿದೆ, ಇನ್ನೊಂದು ಕಡೆ de-industrialization ಆಗಿ ಬಿಡುತ್ತದೆ. ಅದಕ್ಕೆ, it is necessary to do it. ಇನ್ನೊಂದು ಆಗಿತ್ತು ಏನೆಂದರೆ; National Investment and manufacturing zone ಎಂದು ಬೀದರ್‌ಗೆ ಆಗಿತ್ತು. Logistic hub ಮಾಡಿದ್ದರು machine tool industrial centre

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಾಡಿದ್ದರು. paper ನಲ್ಲಿದೆ, it is lying for 15 years, there is no mention of it in the Budget. ಅದು ಸ್ವಲ್ಪ check ಮಾಡಿ ಮಾಡಬೇಕು, it creates employment. Corruption in Housing. ಈಗ ನೀವು ಕೊಡುತ್ತಿರುವ ಎಲ್ಲ ಮನೆಗಳು useless. ಎಲ್ಲ corruption ಪಂಚಾಯತ್ ನಲ್ಲಿ ಬಹಳ corruption ಇದೆ. 20-25 ಸಾವಿರ ರೂಪಾಯಿ ಹೋಗುತ್ತಿದೆ ಬಡವರಿಗೆ ಕೊಡಲಿಕ್ಕಾಗುವುದಿಲ್ಲ. In my own constituency you have given 20 crores per year for housing. The same money was given to panchayats. Same money was given to ZP and TP. We could have do lot of development. ನನ್ನ ವಿಚಾರ ಇದೆ, housing should be done by lottery, it should be built and give it to the people, ಇದು budget ಗೆ ನನ್ನ suggestion ಇದೆ. ಮತ್ತೆ ಕಳಸ-ಬಂಡೂರಿಯ ಬಗ್ಗೆ ಅವರು 600+days ನಿಂದ strike ಮಾಡುತ್ತಿದ್ದಾರೆ, ಯಾರೂ ಹೋಗಿ visit ಮಾಡಿಲ್ಲ. ಅವರು ನಮ್ಮ ರೈತರು, ನನ್ನ request ಇದೆ, ಯಾರಾದರೂ ಹೋಗಿ visit ಮಾಡಿ, ಬೇಕಾದರೆ ತಾವೇ visit ಮಾಡಬೇಕು. Look at the real conditions, because there is a solution for easy, solution could be done. ನಾನು ಬೀದರ್‌ನಲ್ಲಿ ಒಂದು stadium ಕೇಳಿದ್ದೆ. Land ಅದೆಲ್ಲಾ ಆಗಿದೆ, ಇನ್ನು ಆ stadium ಮಾಡಿಲ್ಲ. ಆ ಬಗ್ಗೆ ಇದರಲ್ಲಿ announce ಮಾಡಿಲ್ಲ. ಮತ್ತೆ most important ನಮ್ಮ ಬೀದರ್‌ನಲ್ಲಿ ಪ್ರವಾಸೋದ್ಯಮ ಚೆನ್ನಾಗಿದೆ. ಮುಸ್ಲಿಂ ಜನರು ಹಜ್‌ಗೆ ಹೋಗುತ್ತಾರೆ, ಹಿಂದೂಗಳು ವಾರಣಸಿಗೆ ಹೋಗುತ್ತಾರೆ. So what I thought is, 125 years of Ambedkar's birthday, there is already identified 125 acres of land, it is available, already reserved. Build a 125 foot Ambedkar Statue, just like statue of liberty, hand would be about 50 feet long. We

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

can build inside the hand all the important things of our constitution. Children can go inside, study it and come down. It will become a centre of tourism for all the SC people in the whole country. That would generate minimum 2000 crores of income for Bidar and the funding is easy. We should request all the Hon'ble MLAs who have love for Ambedkar, 10% of their MLA LAD fund should be given to guild a statue.

ಅಧ್ಯಕ್ಷರು : next ರಫೀಕ್ ಅಹಮದ್‌ರವರು ಮಾತನಾಡಿ. Please conclude.

(ಗೊಂದಲ)

ಶ್ರೀ ಅಶೋಕ್ ಖೇಣಿ : I will finish in one paragraph.

(ಗೊಂದಲ)

ಶ್ರೀ ಸಿ.ಟಿ.ರವಿ : ನಿಮ್ಮ chamberಗೆ ಬಂದು ಮನವಿ ಮಾಡಿದ್ದೇನೆ.

ಅಧ್ಯಕ್ಷರು : ಯಾರಿಗೆ ಕೊಡಬೇಕೆಂದು ಗೊತ್ತಿದೆ ಕುಳಿತುಕೊಳ್ಳಿ, ಮಾತನಾಡಿದವರೇ ಮಾತನಾಡುವುದೇ?

ಶ್ರೀ ಅಶೋಕ ಖೇಣಿ : Minority (ಗೊಂದಲ)

ಅಧ್ಯಕ್ಷರು: ಸಿ.ಟಿ.ರವಿಯವರು ಮಾತನಾಡುವುದು ಎಲ್ಲರೂ ಮಾತನಾಡುವುದೆ, ಮಾತನಾಡದಿರುವವರಿಗೆ ಅವಕಾಶ ಕೊಡೋಣ.

ಶ್ರೀ ಅಶೋಕ ಖೇಣಿ : Facility for the poor and the upper class. ಏಕೆ discrimination? (ಗೊಂದಲ) I think you have to provide without discrimination the facilities for the poor irrespective of the cast. Thank you.

ಅಧ್ಯಕ್ಷರು : O.k., ರಫೀಕ್ ಅಹಮದ್‌ರವರು ಮಾತನಾಡಿ.

27-03-2017

ಡಾ:ಎಸ್.ರಫೀಕ್ ಅಹಮದ್ (ತುಮಕೂರು ನಗರ) :- ಮಾನ್ಯ ಅಧ್ಯಕ್ಷರೆ, 2017-18 ನೇ ಆಯವ್ಯಯದ ಮೇಲೆ ನನಗೆ ಚರ್ಚಿಸಲು ಅವಕಾಶ ಮಾಡಿ ಕೊಟ್ಟ ತಮ್ಮೆಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು : 5 minutes.

ಡಾ:ಎಸ್.ರಫೀಕ್ ಅಹಮದ್ : ಆಗಬಹುದು. ರಾಜ್ಯದ ಜನಪ್ರಿಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಸಿದ್ದರಾಮಯ್ಯನವರು 1,86,561 ಕೋಟಿ ರೂಪಾಯಿಯ ಜನಪರ, ಬಡವರ ಪರವಾದ ಆಯವ್ಯಯವನ್ನು ಮಂಡಿಸಿರುವುದಕ್ಕೆ ನಾನು ಅವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲ್ಲಿಕ್ಕೆ ಬಯಸುತ್ತೇನೆ. ಎಲ್ಲಾ ಕ್ಷೇತ್ರಗಳಲ್ಲೂ ಹಾಗೂ ಎಲ್ಲಾ ಇಲಾಖೆಗಳಲ್ಲೂ ಜನಪ್ರಿಯ ಯೋಜನೆಗಳು ಹಾಗೂ ಹೆಚ್ಚಿನ ಅನುದಾನವನ್ನು ಮೀಸಲಿಟ್ಟಿದ್ದಕ್ಕಾಗಿ ಮುಖ್ಯವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತಿದ್ದೇನೆ. ಯಾವುದೇ ರಾಜ್ಯದಲ್ಲಿ ಆಯವ್ಯಯ ಮಂಡನೆ ಮಾಡಿದಾಗ ವಿರೋಧ ಪಕ್ಷದವರು ಟೀಕೆ ಮಾಡುವುದು ಸಹಜ. ಆದರೆ, ಕೆಲವು ಒಳ್ಳೆಯ ಯೋಜನೆಗಳನ್ನು ನಿರ್ಣಯಗಳನ್ನು ತೆಗೆದುಕೊಂಡಾಗ ಅಂಥ ಟೀಕೆಗಳು ಬಂದಾಗ ಅದು ಎಷ್ಟು ಸಮಂಜಸ ಎನ್ನುವ ಪ್ರಶ್ನೆ ಈ ಸಂದರ್ಭದಲ್ಲಿ ಉದ್ಭವವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಪಶುಸಂಗೋಪನಾ ಇಲಾಖೆಯಲ್ಲಿ ಒಂದು ಒಳ್ಳೆಯ ನಿರ್ಣಯವನ್ನು ನಮ್ಮ ಮುಖ್ಯಮಂತ್ರಿಗಳು ಘೋಷಣೆ ಮಾಡಿದರು. ಅದಕ್ಕೆ ನಮ್ಮ ವಿರೋಧ ಪಕ್ಷದ ನಾಯಕರು, whatsapp ನಲ್ಲಿ ಬಂದಿರುವ " ಬೆಳಿಗ್ಗೆ ಉಚಿತ ತಿಂಡಿ, ಮಧ್ಯಾಹ್ನ ಮಾಂಸದ ತುಂಡು ಹಾಗೂ ರಾತ್ರಿ ಗುಂಡು " ಎನ್ನುವ message ನ್ನು ಓದಿದರು. ಕಡಿಮೆ ದರದಲ್ಲಿ ಬಡವರಿಗೆ ತಿಂಡಿ ಕೊಡುವುದು ತಪ್ಪೇ? ಜೊತೆಗೆ ನಮ್ಮ ಮುಖ್ಯಮಂತ್ರಿಯವರು ಪಶು ಸಂಗೋಪನಾ ಇಲಾಖೆಯಲ್ಲಿ ಬಹಳ clear ಆಗಿ ಹೇಳಿದ್ದಾರೆ. ಏನೆಂದರೆ "ಸಾರ್ವಜನಿಕರಿಗೆ ಸ್ವಚ್ಛ ಮತ್ತು ಆರೋಗ್ಯಕರ ಮಾಂಸವನ್ನು ಒದಗಿಸುವ ಉದ್ದೇಶದಿಂದ, ಪ್ರತಿ ಅಂಗಡಿಗೆ 5 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಅಸ್ತಿತ್ವದಲ್ಲಿರುವ ಮಾಂಸದ ಅಂಗಡಿಗಳನ್ನು ಆದುನೀಕರಣಗೊಳಿಸಲಾಗುವುದು. ಇದಕ್ಕಾಗಿ ಪ್ರತಿ ಅಂಗಡಿಗೆ 1.25 ಲಕ್ಷ ರೂಪಾಯಿಗಳ ಸಹಾಯಧನ ಒದಗಿಸಲಾಗವುದು." ಎಂದು ಹೇಳಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುವಾಗ, ಸರ್ಕಾರದಲ್ಲಿ ಜಿಲೇಬಿ ಫೈಲ್ ನಾನ್ ಜಿಲೇಬಿ ಫೈಲ್ ಇದೆ ಎಂದು ಹೇಳಿದರು.

27-03-2017

ಆ ರೀತಿಯಾಗಿ ಕ್ಲಾಸಿಫೈ ಆಗಿದೆಯೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಆದರೆ, ನಗರ ಅಥವಾ ಪಟ್ಟಣ ಇದ್ದಾಗ ಅಲ್ಲಿ ಜಿಲೇಬಿ ಏರಿಯಾ ನಾನ್ ಜಿಲೇಬಿ ಏರಿಯಾ ಎಂದು ಇದ್ದೇ ಇರುತ್ತದೆ. ಜಿಲೇಬಿ ಏರಿಯಾ ಎಂದರೆ ಸಸ್ಯಹಾರಿಗಳು ವಾಸಿಸತಕ್ಕಂಥ ಏರಿಯಾ. ನಾನ್ ಜಿಲೇಬಿ ಏರಿಯಾ ಎಂದರೆ ತಮಗೆ ಗೊತ್ತಿರುವ ಹಾಗೆ ಮಾಂಸಾಹಾರಿಗಳು ವಾಸವಿರುವ ಏರಿಯಾ.

ಅಧ್ಯಕ್ಷರು : ಇದು ನಿಮ್ಮ interpretation, ಅವರ interpretation ಬೇರೆ ಮಾಡಿದರು. ಅವರ interpretation ಬೇರೆ, ಜಿಲೇಬಿ ನಾನ್ ಜಿಲೇಬಿ.

ಡಾ:ಎಸ್.ರಫೀಕ್ ಆಹಮದ್ : ಅವರು ಫೈಲ್ಸ್ ಬಗ್ಗೆ ಹೇಳಿದರು. ಫೈಲ್‌ಗಳು ಇವೆಯೋ ಇಲ್ಲವೋ ನನಗೆ ಗೊತ್ತಿಲ್ಲ, ಆದರೆ ಏರಿಯಾಗಳು ಇವೆ.

(ಮುಂದು)

27.03.2017 4.40(33)KS:VG

ಡಾ:ಎಸ್.ರಫೀಕ್ ಅಹ್ಮದ್:- (ಮುಂದು)

ಮಾಂಸಹಾರಿ ಏರಿಯಾದಲ್ಲಿ ಇಂತಹ ಮಾಂಸದ ಅಂಗಡಿಗಳು ಇದ್ದರೆ ನಾವೆಲ್ಲ ಸಂತೋಷದಿಂದ ನೋಡಿಕೊಂಡು ಹೋಗುತ್ತೇವೆ. ನಾವು leg piece, shoulder piece ಅಥವಾ ಏನು ತೆಗೆದುಕೊಳ್ಳಬೇಕೆಂದು ನೋಡಿಕೊಂಡು ಹೋಗುತ್ತೇವೆ. ಆದರೆ, ಸಸ್ಯಹಾರಿ ಜನರು ವಾಸಿಸುವ ಪ್ರದೇಶಗಳಲ್ಲಿ ಮಾಂಸದ ಅಂಗಡಿಗಳು ಇದ್ದರೆ ನಾವಾಗಲಿ ಅಥವಾ ಮಹಿಳೆಯರು ಅಲ್ಲಿಗೆ ಹೋಗುವುದಕ್ಕೆ ಮುಜುಗರವಾಗುತ್ತದೆ. ಇವತ್ತು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಒಳ್ಳೆಯ ಯೋಜನೆಗಳನ್ನು ತಂದಿದ್ದಾರೆ. ಆದ್ದರಿಂದ, ಅಂತಹ ಅಂಗಡಿಗಳಲ್ಲಿ ಸ್ಕ್ರೀನ್ ಅಥವಾ ಗ್ಲಾಸ್ ಹಾಕಿ partition ಮಾಡುವ ಬಗ್ಗೆ ಇಂತಹ ಒಳ್ಳೆಯ ಯೋಜನೆಗಳನ್ನು ತಂದಿದ್ದಾರೆ. ಆದ್ದರಿಂದ, ಈ ಯೋಜನೆಯನ್ನು ನಾವೆಲ್ಲರೂ ಸ್ವಾಗತ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಸಚಿವರು ಒಂದು ಒಳ್ಳೆಯ ಯೋಜನೆಯನ್ನು ತಂದಿದ್ದಾರೆ. ಶಾಲೆಯಲ್ಲಿ ಮಕ್ಕಳಿಗೆ ವಾರದಲ್ಲಿ ಮೂರು ದಿವಸ ಹಾಲನ್ನು ಕೊಡುತ್ತಿದ್ದೆವು ಅದನ್ನು ಈಗ 5 ದಿವಸ ಮಾಡಿದ್ದೇವೆ. ಮಕ್ಕಳ ಪೌಷ್ಠಿಕಾಂಶ ಜಾಸ್ತಿ ಮಾಡುವುದಕ್ಕಾಗಿ 5

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ದಿವಸ ಹಾಲು ನೀಡಲಾಗುತ್ತಿದೆ. ಇದು ಬಹಳ ಒಳ್ಳೆಯ ಯೋಜನೆ ಆಗಿದೆ. ಹಾಗೆಯೇ, ದೃಷ್ಟಿ ಪರಿಕ್ಷೆ ಮತ್ತು ಕನ್ನಡಕಗಳ ವಿತರಣೆ ಯೋಜನೆ ಜಾರಿಗೆ ತರಲಾಗಿದೆ. ಈ ಯುಗದಲ್ಲಿ ಚಿಕ್ಕಮಕ್ಕಳು ಮೊಬೈಲು, ಕಂಪ್ಯೂಟರ್, ಲ್ಯಾಪ್‌ಟಾಪ್‌ಗಳನ್ನು use ಮಾಡುತ್ತಿರುವುದರಿಂದ ಮಕ್ಕಳ ದೃಷ್ಟಿಗೆ ಏನಾದರೂ ಹಾನಿ ಆದರೆ ಅದು ನಮಗೆ ತಕ್ಷಣ ಗೊತ್ತಾಗುವುದಿಲ್ಲ. ಆದ್ದರಿಂದ, ಶಾಲೆಗಳನ್ನು ದೃಷ್ಟಿ ಪರೀಕ್ಷೆ ಮಾಡುತ್ತಿರುವುದು ಒಂದು ಉತ್ತಮವಾದ ನಿರ್ಣಯವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಇದರ ಜೊತೆಗೆ ಪ್ರೌಢಶಾಲೆಯಲ್ಲಿ ಹೆಣ್ಣುಮಕ್ಕಳಿಗೆ ಚೂಡಿದಾರ್ ಅನ್ನು ಜಾರಿಗೆ ತಂದಿದ್ದಾರೆ. ಈ ಚೂಡಿದಾರದ ನಿಯಮವನ್ನು ಖಾಸಗಿ ಪ್ರೌಢಶಾಲೆಗಳಿಗೂ ತರಬೇಕೆಂದು ನಮ್ಮ ಮಾನ್ಯ ಶಿಕ್ಷಣ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಉನ್ನತ ಶಿಕ್ಷಣ ಸಚಿವಾಲಯದಿಂದ ರಾಯಚೂರಿನಲ್ಲಿ ಒಂದು ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡುತ್ತಿರುವುದು ಬಹಳ ಸ್ವಾಗತಾರ್ಹವಾದ ವಿಚಾರ. 2004 ರಲ್ಲಿ ತುಮಕೂರು ವಿಶ್ವವಿದ್ಯಾಲಯ ಪ್ರಾರಂಭವಾಯಿತು. ನಾನು ತುಮಕೂರಿನಲ್ಲಿ ವಾಸ ಮಾಡುತ್ತಿದ್ದೇನೆ. ಅಲ್ಲಿ ವಿಶ್ವವಿದ್ಯಾಲಯ ಪ್ರಾರಂಭ ಮಾಡುವುದಕ್ಕೆ 13 ವರ್ಷಗಳಾದರೂ ಇಲ್ಲಿಯವರೆಗೆ ಅದಕ್ಕೆ ಒಂದು ಜಾಗ ಸಿಕ್ಕಿಲ್ಲ. ಹಾಗೆಯೇ ಸರ್ಕಾರದಿಂದ ಅದಕ್ಕೆ ವಿಶೇಷ ಅನುದಾನ ಸಹ ಸಿಕ್ಕಿಲ್ಲ. ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ಶಿಕ್ಷಣ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ತಾವುಗಳು ಒಂದು ಒಳ್ಳೆಯ ನಿರ್ಣಯವನ್ನು ತೆಗೆದುಕೊಂಡಿದ್ದೀರಿ. ಆದ್ದರಿಂದ, ದಯವಿಟ್ಟು ಅಲ್ಲಿ ವಿಶ್ವವಿದ್ಯಾಲಯ ಪ್ರಾರಂಭ ಮಾಡುವುದಕ್ಕೆ ಒಂದು ಒಳ್ಳೆಯ ಜಾಗವನ್ನು ಮೊದಲೇ ನೋಡಿ ಅದಕ್ಕೆ ಅನುದಾನವನ್ನು ಮೀಸಲಿಡುವುದರ ಜೊತೆಗೆ ಒಂದು master plan ಮಾಡಿ ಸದರಿ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಿದರೆ ಒಂದು ಒಳ್ಳೆಯ university ಆಗುವುದಕ್ಕೆ ಯಾವುದೇ ಸಂಶಯ ಇಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಅದರ ಜೊತೆಗೆ ನಮ್ಮ ತುಮಕೂರು ವಿಶ್ವವಿದ್ಯಾಲಯಕ್ಕೆ 130 ಕೋಟಿ ರೂಪಾಯಿಗಳ ಒಂದು ಪ್ರಸ್ತಾವನೆಯನ್ನು ಕೊಟ್ಟಿದ್ದೆವು. ಈ ಬಜೆಟ್‌ನಲ್ಲಿ ಆ ಬಗ್ಗೆ ಯಾವುದೇ ಒಂದು ಮಾಹಿತಿ ಸಿಕ್ಕಿಲ್ಲ. ಆದ್ದರಿಂದ, ಉನ್ನತಶಿಕ್ಷಣ ಸಚಿವರು ನಮ್ಮ ವಿಶ್ವವಿದ್ಯಾಲಯಕ್ಕೆ 130ಕೋಟಿ ರೂಪಾಯಿಗಳ ಅನುದಾನವನ್ನು ಕೊಡಿಸಬೇಕೆಂದು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ. ಇವತ್ತು ಇಂಜಿನಿಯರಿಂಗ್, ವೈದ್ಯಕೀಯ ಮತ್ತು ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ ಸರ್ಕಾರಿ ಹಾಗೂ ಅನುದಾನಿತ

27-03-2017

ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ಕೊಡುತ್ತಿದ್ದಾರೆ. ಇದು ನಿಜವಾಗಿಯೂ ಕೂಡ ಬಹಳ ಸಂತೋಷದ ವಿಚಾರ ಆಗಿದೆ. ಇದರ ಜೊತೆಗೆ ಸರ್ಕಾರಿ ಕೋಟಾದ ಅಡಿಯಲ್ಲಿ ಖಾಸಗಿ ಇಂಜಿನಿಯರಿಂಗ್, ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ಪಡೆದುಕೊಳ್ಳುವ ವಿದ್ಯಾರ್ಥಿಗಳಿಗೂ ಕೂಡ ಲ್ಯಾಪ್‌ಟಾಪ್ ಕೊಟ್ಟರೆ ಅಲ್ಲಿನ ಮಕ್ಕಳಿಗೂ ಕೂಡ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ 5 ಜಿಲ್ಲಾ ಕೇಂದ್ರಗಳಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಕೊಟ್ಟಿದ್ದಾರೆ. ತುಮಕೂರಿಗೂ ಸಹ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕೊಟ್ಟಿದ್ದಾರೆ. ಇದು ಬಹಳ ಸಂತೋಷದ ವಿಷಯ. ಆದರೆ, ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ಈ ಹಿಂದೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹಿಂದಿನ ಆಯವ್ಯಯದಲ್ಲಿ ತುಮಕೂರಿಗೆ ವೈದ್ಯಕೀಯ ಕಾಲೇಜನ್ನು ಘೋಷಣೆ ಮಾಡಿದರು. ಈ ಬಾರಿ 6 ನಗರಗಳಿಗೆ ಅಂದರೆ, ಚಿತ್ರದುರ್ಗ, ಬಾಗಲಕೋಟೆ, ಹಾವೇರಿ, ಯಾದಗಿರಿ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರಿನಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭ ಮಾಡುತ್ತೇನೆಂದು ಹೇಳಿದ್ದಾರೆ. ಆದರೆ, ಈ 6 ನಗರಗಳ ಪೈಕಿ ತುಮಕೂರು ನಗರ ಬಿಟ್ಟು ಹೋಗಿದೆ. ಆದ್ದರಿಂದ, ತುಮಕೂರು ನಗರದಲ್ಲಿಯೂ ಕೂಡ ಸರ್ಕಾರಿ ವೈದ್ಯಕೀಯ ಕಾಲೇಜು ಪ್ರಾರಂಭ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಇದರ ಜೊತೆಗೆ ಜನರಿಕ್ ಔಷಧ ಮಳಿಗೆಯನ್ನು ಪ್ರಾರಂಭ ಮಾಡುತ್ತಿದ್ದಾರೆ. ಇದರಿಂದ ಬಡವರಿಗೆ ಬಹಳಷ್ಟು ಅನುಕೂಲತೆ ಆಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಇವತ್ತು ಜಿಲ್ಲಾ ಕೇಂದ್ರಗಳಲ್ಲಿ ಸ್ತ್ರೀಶಕ್ತಿ ಒಕ್ಕೂಟಗಳ ಮೂಲಕ ಸವಿರುಚಿ ಸಂಚಾರಿ ಕ್ಯಾಂಟೀನ್‌ಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದು ನಿಜಕ್ಕೂ ಬಹಳ ಸಂತೋಷದ ವಿಷಯ. ಬೆಂಗಳೂರು ನಗರದಲ್ಲಿ ನಮ್ಮ ಕ್ಯಾಂಟೀನ್ ಅಥವಾ ಇಂದಿರಾ ಕ್ಯಾಂಟೀನ್ ಎಂದು ಪ್ರಾರಂಭ ಮಾಡಲಾಗುತ್ತಿದೆ. ಆದ್ದರಿಂದ, ಅದೇ ಮಾದರಿಯಲ್ಲಿ ಸವಿರುಚಿ ಕ್ಯಾಂಟೀನ್‌ಗಳನ್ನು ಪ್ರಾರಂಭ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಇವತ್ತು ನಮ್ಮ ಸರ್ಕಾರ ಹಿಂದುಳಿದ ವರ್ಗ ಆಗಿರಬಹುದು, ಸಮಾಜ ಕಲ್ಯಾಣ ಇಲಾಖೆಯಿಂದ ದಲಿತರು ಅಥವಾ ಅಲ್ಪಸಂಖ್ಯಾತರು ಇರಬಹುದು. ಸರ್ಕಾರ ಈ ಒಂದು ವರ್ಗಕ್ಕೋಸ್ಕರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಹೊಸದಾಗಿ ಶಿಕ್ಷಣ ಇಲಾಖೆಯಲ್ಲಿ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಬಹಳಷ್ಟು ಸುಧಾರಣೆಗಳನ್ನು ಮಾಡಲಾಗಿದೆ. ಆದ್ದರಿಂದ ಸಮಾಜ ಕಲ್ಯಾಣ ಇಲಾಖೆಯ ಸಚಿವರು

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ಸಂದರ್ಭದಲ್ಲಿ ನಾನು ಅಭಿನಂದನೆ ಸಲ್ಲಿಸುತ್ತೇನೆ. ಕರ್ನಾಟಕದ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ನಮ್ಮ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಈ ಬಾರಿ 2750 ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟಿದ್ದಾರೆ. ಆದ್ದರಿಂದ ಈ ರಾಜ್ಯದ ಎಲ್ಲಾ ಅಲ್ಪಸಂಖ್ಯಾತರ ಪರವಾಗಿ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮಾನ್ಯ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತಾ ಈ ಇಲಾಖೆಯಲ್ಲಿ ಸುಮಾರು 800 ಕೋಟಿ ರೂಪಾಯಿಗಳನ್ನು ನಮ್ಮ ಅಲ್ಪಸಂಖ್ಯಾತರಿಗೆ ಅಂದರೆ, ಮುಸ್ಲಿಮರು, ಕ್ರೈಸ್ತರು, ಜೈನ್, ಸಿಖ್ ಜನಾಂಗದವರು ಆಗಿರಬಹುದು. ಒಟ್ಟಿನಲ್ಲಿ ಅಲ್ಪಸಂಖ್ಯಾತರು ವಾಸಿಸುವ ಕಾಲೋನಿಗಳ ಅಭಿವೃದ್ಧಿಗಾಗಿ ಇವರು ಹಣವನ್ನು ಮೀಸಲಾಗಿಟ್ಟಿದ್ದಾರೆ. ಇದರಿಂದ ಮುಂದಿನ ದಿನಗಳಲ್ಲಿ ಹೆಚ್ಚಿನ ಅನುಕೂಲಗಳನ್ನು ಆ ಕಾಲೋನಿಗಳಲ್ಲಿ ಮಾಡಬಹುದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ವಿರೋಧ ಪಕ್ಷದ ನಾಯಕರು ನಗರೋತ್ಥಾನದ ಬಗ್ಗೆ ಸಾಕಷ್ಟು ಹೇಳಿದ್ದಾರೆ. ನಾನು ಕೂಡ ಅದಕ್ಕೆ ಸಹಮತ ವ್ಯಕ್ತಪಡಿಸುತ್ತೇನೆ. ಬಿಬಿಎಂಪಿ ಯನ್ನು ಹೊರತು ಪಡಿಸಿದಿರೆ ನಮ್ಮ ರಾಜ್ಯದಲ್ಲಿ 10 ನಗರ ಪಾಲಿಕೆಗಳಿವೆ. 2013 ರಲ್ಲಿ ತುಮಕೂರು, ಶಿವಮೊಗ್ಗ, ಬಿಜಾಪುರ ನಗರಗಳಲ್ಲಿ ನಗರ ಪಾಲಿಕೆಗಳಾಗಿ ಮೇಲ್ದರ್ಜೆಗೇರಿಸಿ ಕೇವಲ 100 ಕೋಟಿ ರೂಪಾಯಿ ಅನುದಾನವನ್ನು ಕೊಟ್ಟಿದ್ದರು. ಅದಾದನಂತರ ನಮಗೆ ಒಂದೇಒಂದು ರೂಪಾಯಿ ವಿಶೇಷ ಅನುದಾನ ಈ ನಗರ ಪಾಲಿಕೆಗಳಿಗೆ ಬಂದಿಲ್ಲ. ಆದ್ದರಿಂದ, ಈ ಮೂರು ನಗರ ಪಾಲಿಕೆಗಳಲ್ಲಿ ಅಭಿವೃದ್ಧಿ ಕುಂಠಿತವಾಗುತ್ತಿದೆ. ಆದ್ದರಿಂದ, ನಮ್ಮ ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈಗ ಇರತಕ್ಕಂಥ ನಗರ ಪಾಲಿಕೆಗಳಿಗೆ ನಗರೋತ್ಥಾನ-4ರ ಅಡಿಯಲ್ಲಿ ನೂರು ನೂರು ಕೋಟಿಗಳ ವಿಶೇಷ ಅನುದಾನ ಬಿಡುಗಡೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ ಇವತ್ತು ನಮ್ಮ ಸರ್ಕಾರ ಒಳ್ಳೆಯ ನಿರ್ಣಯಗಳನ್ನು ತೆಗೆದುಕೊಂಡಿದೆ ಆದ್ದರಿಂದ, ನಮ್ಮ ಸರ್ಕಾರಕ್ಕೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಹಾಗೂ ಎಲ್ಲಾ ಇಲಾಖೆಗಳ ಮಾನ್ಯ ಸಚಿವರಿಗೆ ಅಭಿನಂದಿಸುತೇನೆ. 1,86,565 ಕೋಟಿ ರೂಪಾಯಿಗಳ ಆಯವ್ಯಯವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿದ್ದಾರೆ. ಇದರಿಂದ ನಮ್ಮ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ಅಭಿನಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಅಧ್ಯಕ್ಷರು:- ಶ್ರೀಮತಿ ವಿನಿಷಾ ನಿರೋರವರೆ, ತಾವು ಮಾತನಾಡಿ.

ಶ್ರೀ ಬಿ.ಆರ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, Business Advisory Committee ಯಲ್ಲಿ ತಾವು ತೀರ್ಮಾನ ತೆಗೆದುಕೊಂಡ ಹಾಗೆ ನನಗೆ ಮತ್ತು ಮಾನ್ಯ ಪುಟ್ಟಣ್ಣಯ್ಯನವರಗೆ ಮಾತನಾಡುವುದಕ್ಕೆ ಅವಕಾಶ  ಕೊಡಬೇಕೆಂದು ಚರ್ಚೆ ಆಗಿದೆ.

ಅಧ್ಯಕ್ಷರು:- ನಿಮಗೆ ಮತ್ತು ಮಾನ್ಯ ಪುಟ್ಟಣ್ಣಯ್ಯನವರಿಗೆ ಪ್ರತಿಯೊಂದು ವಿಷಯದ ಬಗ್ಗೆ ಕೂಡ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಅವಕಾಶ ಕೊಡದೆ ಇರತಕ್ಕಂಥ ವಿಷಯಗಳು ಯಾವುದೂ ಇಲ್ಲ. ಪ್ರತಿಯೊಂದು ಸಮಯದಲ್ಲಿಯೂ ಕೂಡ ನಿಮ್ಮಿಬ್ಬರಿಗೆ ಅವಕಾಶ ಕೊಟ್ಟಿದ್ದೇನೆ. ಯಾರಿಗೆ ಅವಕಾಶ ಕೊಟ್ಟಿಲ್ಲವೋ  ಅಂಥವರಿಗೆ ಮೊದಲು ಅವಕಾಶ ಕೊಟ್ಟು ಆನಂತರ ತಮಗೂ ಸಹ ಅವಕಾಶ ಕೊಡುತ್ತೇನೆ. ಶ್ರೀಮತಿ ವಿನಿಷಾ ನಿರೋರವರೆ, ತಾವು ಮಾತನಾಡಿ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀಮತಿ ವಿನಿಷಾ ನೀರೊ:- ಸನ್ಮಾನ್ಯ ಸಭಾಧ್ಯಕ್ಷರೆ, 2017-18ನೇ ಸಾಲಿನ ಬಜೆಟ್ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಹೇಳುವುದಕ್ಕೆ ಬಯಸುತ್ತೇನೆ. With the unique experience of twelve budgets under his belt, our Chief Minister's expertise is evident in this year's budget also. Karnataka is blessed to have someone like him taking care of the State's finances. Trying to please everyone is an indomitable task and there will always be naysayers. It is not an easy job to stretch the rupee to cover every fiscal aspect of the State. But our Chief Minister has once again has done a great job. Though the Anglo-Indians were not specifically included in this year's budget, I see that there are schemes in Housing which we could avail of and I will urge the Community to seek help in this as Housing is a big concern within the Community. We are happy that we were included in the State budget for the first time last year and work has been initiated to this effect. Special thank you from the Christian community in the State for the allocation of 175 crores. Our CM's commitment to social justice and inclusive growth of all people is evident from this generosity. Karnataka State Legislature ನಲ್ಲಿ papers ಅನ್ನು ಕಡಿಮೆ use ಮಾಡಬೇಕೆಂದು 2015ನೇ ಸಾಲಿನ ಬಜೆಟ್ ಮೇಲೆ ಮಾತನಾಡುವಂಥ ಸಂದರ್ಭದಲ್ಲಿ ನಾನು ಸಲಹೆ ಮಾಡಿದ್ದೆ. ಆದರೆ, ಇಲ್ಲಿಯವರೆಗೆ paper consumption

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕಡಿಮೆ ಆಗಿಲ್ಲ. ಹಾಗೆಯೇ ಈ ಸದನದಲ್ಲಿರುವ 225 tables ಮೇಲೆ collapsible desktops ಹಾಕುವುದಕ್ಕೆ ಹೇಳಿದ್ದೆ. Desktopಗಳಿಗೆ LAN (Local Area Network) connection ಮಾಡಿದರೆ ಸದನದಲ್ಲಿ ಏನು ಚರ್ಚೆ ಆಗುತ್ತದೆಯೋ ಅದು desktop ಮೇಲೆ ನೋಡುವುದಕ್ಕೆ ಅಗುತ್ತದೆ. Like questions and answers, bills being discussed. ಯಾರಿಗೆ paper copy ಬೇಕಾಗುತ್ತದೆಯೋ ಅವರು request ಮಾಡಿ ತೆಗೆದುಕೊಳ್ಳಬಹುದು. By introducing these desktops in the Assembly in our existing tables, instead of sending voluminous books of papers to all MLAs and officials, we will greatly reduce the number of trees being cut down to make paper, reduce cost of administration, reduce cost of printing and prove that Karnataka is truly an IT state of India by adopting E-Governance measures beginning within the assembly. ದಯವಿಟ್ಟು ಅದನ್ನು ಸ್ವಲ್ಪ ಬೇಗ implement ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು request ಮಾಡಿಕೊಳ್ಳುತ್ತೇನೆ. ನಾನು ಬಜೆಟ್‌ನಲ್ಲಿ ಬಹಳ ಮುಖ್ಯವಾಗಿ ನಾಲ್ಕು ವಿಷಯಗಳ ಬಗ್ಗೆ ಸ್ವಲ್ಪ highlight ಮಾಡಬೇಕಾಗಿದೆ. ಶಿಕ್ಷಣದ ಬಗ್ಗೆ ಹೇಳುವುದಾದರೆ, I welcome the Government's move to collaborate with reputed NGOs like Azim Premji Foundation, Akshara etc., to improve the quality of education. I suggest that the inside covers of school textbooks be printed with positive quotes and teachings of great leaders as well as messages of positive social attributes that children could imbibe. One of the best initiatives being introduced this year is the

provision of story books with social messages in Government School Libraries. While this is an excellent move, the Government must ensure that the books do not sit in shelves collecting dust, but must be used by the students. In order for this to happen, the children must be given the opportunity to read. I suggest that we introduce atleast one period once a week as special library period where children could read books, narrate stories and participate in debates and discuss social issues. This will bring about a social change in the minds of children as they grow into young adults and citizens of this country. I urge the Government to further improve infrastructure and facilities in Government schools. If we do this coupled with introduction of English and technology assisted learning, we will see a larger number of children attending Government schools. The number of dropouts will decrease and the pressure on private schools to admit more students into each class will reduce. Though it may sound ambitious, I would like to see a day when Government schools are more sought after than private schools in our State. It is not impossible for our Government to achieve such a feet. In today's world,

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

our children must be equipped to compete at an equal level with everyone else and should not be denied or deprived of any opportunities. I would like to say that language should be looked at as a means of communication first and all other aspects second. The knowledge of languages should be used as a value added to the education system.

HON'BLE SPEAKER: Madam, instead of reading, it is better to talk. You try to speak.

SMT.VINISHA NERO: I don't want to read. I know that I am short of time. So I don't want to miss it.

HON'BLE SPEAKER: OK.

(ಮುಂದು)

27-3-2017/4-50/34/YBG-VG

SMT.VINISHA NERO (continued): To this effect, I would like to suggest that we adopt a tri-lateral model which includes a global language, a national language and a regional language. The global language could be English, the national language Hindi or Sanskrit and the regional language Kannada. Students and their parents should be given the freedom to choose in which order they would like to study these three languages.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

Regarding women and children, I appreciate the introduction of the 'Saviruchi' model canteens supplying ethnic and healthy food is a brilliant idea. To encourage local cuisine promotion and healthy eating, I suggest that these units also be setup in all our tourist spots. Women in Karnataka are very hardworking and support their families and children to great extent whether in the fields in rural Karnataka or in bio-technology. There are numerous self-help groups in our State and I would like to suggest that we open women only markets in all our districts like what is being done in IMA Market in Manipur, Imphal. That will give employment and also financial stability to women who work in this State.

Regarding Health Care, one of the important aspects that needs to be considered by this Government is medical health insurance for all. It is very relevant today especially with so many lifestyle diseases and illnesses and also the cost of medical treatment is exorbitantly high. I urge the Government to make sure that medical insurance is made mandatory in our State. The rich people can pay for their insurance but the poor and middle class people can be offered some subsidy to

ensure that every single person in Karnataka is covered under medical insurance policy.

SMT.VINISHA NERO: I would also like to draw attention on two points regarding medical insurance. One is that HIV patients are not included and the other is those with liver diseases and pregnant women are restricted from getting life insurance policies. So, I request the Government to have a dialogue with these companies to ensure that these groups of people are not given any negative kind of feedback or deprived of the facility.

Lastly, I would like to bring to the notice of the Government to setup Art University for differently abled persons. We need to help them to gain higher education. The differently abled persons do not need sympathy and handouts but they just need opportunities, education, vocational training and employment. Also, the ITI training institutes which are there in the State needs to be revamped because some of them are in a terribly dilapidated state. Also the issuance of Smart Card for differently abled persons is one of my suggestions.

To conclude, a few days ago, I read in the newspaper that BBMP has banned use of grave stones

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

since 2002. Rituals connected with births and deaths, food habits and clothing style are particularly cultural aspects of a community. Banning of such placing of grave stones in memory of their loved ones will deprive and infringe on the rights of communities. We cannot force people to deviate from their practices when it comes to burial. I request that the order of BBMP banning grave stones be withdrawn immediately. Thank you.

ಅಧ್ಯಕ್ಷರು: ಅರವಿಂದ್ ಬೆಲ್ಲದ್‌ರವರು ಇಲ್ಲ. ಶ್ರೀ ಯು.ಬಿ.ಬಣಕಾರ್‌ವರು ನೀವು ಮಾತನಾಡಿ.

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಅಧ್ಯಕ್ಷರೆ, 2017-18ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆಗೆ ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತಿದ್ದೇನೆ. ಯಾವುದೇ ಜನಪರ ಸರ್ಕಾರ ಪ್ರತಿ ಆರ್ಥಿಕ ವರ್ಷದಲ್ಲಿ ತನ್ನ ಆಯವ್ಯಯವನ್ನು ಮಂಡಿಸುವುದರ ಮೂಲಕ ಈ ರಾಜ್ಯದ ಜನತೆಗೆ ಆಯವ್ಯಯದಲ್ಲಿ ಸರ್ಕಾರ ಯಾವ ಯಾವ ಇಲಾಖೆಗಳಿಗೆ ಎಷ್ಟೆಷ್ಟು ಹಣವನ್ನು ನಿಗದಿ ಮಾಡಲಾಗಿದೆ.

ಶ್ರೀ ವೈ.ಎ.ನಾರಾಯಣಸ್ವಾಮಿ: ದಯವಿಟ್ಟು ಇವತ್ತು ಯಾವ ಮಾಜಿ ಮಂತ್ರಿಗಳಿಗೆ ಅವಕಾಶ ಮಾತನಾಡುವುದಕ್ಕೆ ಕೊಡುವುದಕ್ಕೆ ಹೋಗಬೇಡಿ. ಹೊಸ members ಗೆ ಕೊಡಿ. ನಮಗೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಅವಕಾಶವನ್ನು ಕೊಟ್ಟಿಲ್ಲ. ಬಜೆಟ್ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡಲೇಬೇಕು.

(ಗೊಂದಲ)

ಅಧ್ಯಕ್ಷರು: ಯಾರು ಮಾತನಾಡಿಲ್ಲ ಅವರಿಗೆ 10-10 ನಿಮಿಷ ಅವಕಾಶ ಕೊಡೋಣ.

ಶ್ರೀ ಯು.ಬಿ.ಬಣಕಾರ: ಸರ್ಕಾರ ಆಯವ್ಯಯವನ್ನು ಮಂಡಿಸಿದ ದಿನ ಇಡೀ ರಾಜ್ಯದ ಜನ ಕಾತುರದಿಂದ ಕಾಯುತ್ತಿರುತ್ತಾರೆ. ಯಾವ್ಯಾವ ಹೊಸ ಯೋಜನೆಗಳನ್ನು ಜಾರಿಗೆ ಮಾಡಲಿಕ್ಕೆ ಸರ್ಕಾರ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತನ್ನ ಯೋಜನೆಯನ್ನು ಹಾಕಿಕೊಂಡಿದೆ ಎನ್ನುವುದನ್ನು ನೋಡುವ ಸಂದರ್ಭ. ಆದರೆ ದುರ್ದೈವ ಎಂದರೆ, ನಾವು ಬಜೆಟ್ ಮಂಡಿಸುವ ದಿವಸದಲ್ಲಿ ನೋಡುವ ದಿವಸಕ್ಕಿಂತ ಹೆಚ್ಚಿಗೆ, ಹಿಂದಿನ ವರ್ಷದ ಬಜೆಟ್‌ನಲ್ಲಿ ಸರ್ಕಾರ ಎಷ್ಟು ಅನುದಾನವನ್ನು ನಿಗದಿ ಮಾಡಿತ್ತು, ಮತ್ತು ಆ ವರ್ಷದ ಅಂತ್ಯಕ್ಕೆ ಎಷ್ಟು ಹಣವನ್ನು ಖರ್ಚು ಮಾಡಿದೆ ಎನ್ನುವುದನ್ನು ನೋಡುವುದು ಅತ್ಯಂತ ಮಹತ್ವವಾಗಿದೆ. ಈ ವರ್ಷ 1.81 ಕೋಟಿ ಲಕ್ಷ ರೂ.ಗಳ ಅನುದಾನವನ್ನು ಖರ್ಚು ಮಾಡುತ್ತೇವೆಂದು ಹೇಳಿರುವಂಥ ಸಂದರ್ಭದಲ್ಲಿ ನಾವು ಕಳೆದ ವರ್ಷಕ್ಕೆ ಹೋಲಿಕೆ ಮಾಡಬೇಕಾಗಿದೆ. ಕಳೆದ ವರ್ಷ 1,63,04,018 ಕೋಟಿ ರೂ.ಗಳನ್ನು ಅನುದಾನ ನಿಗದಿ ಮಾಡಿದಂಥ ಸಂದರ್ಭದಲ್ಲಿ, ಬಿಡುಗಡೆ ಆಗಿರುವುದು ಜನವರಿ ತಿಂಗಳ ಅಂತ್ಯಕ್ಕೆ ಕೇವಲ 1.13 ಕೋಟಿ ಲಕ್ಷ ರೂ.ಗಳು, ಇನ್ನು 50,000 ಕೋಟಿ ರೂ.ಗಳ ಹಣ ಬಿಡುಗಡೆ ಆಗಿರಲಿಲ್ಲ. ಕೇವಲ ಎರಡು ತಿಂಗಳುಗಳು ಉಳಿದ ಸಂದರ್ಭದಲ್ಲಿ ಈ ನಿಗದಿ ಮಾಡಿರುವಂಥ ಅನುದಾನವನ್ನು ಬಿಡುಗಡೆ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಬಹುಶ: ಸರ್ಕಾರದಿಂದ ಸಾಧನೆ ಮಾಡುವುದಕ್ಕೆ ಹೇಗೆ ಸಾಧ್ಯ ಎನ್ನುವುದನ್ನು ಗಮನ ಹರಿಸಬೇಕಾಗಿದೆ. ಈ ವರ್ಷ ಕಂದಾಯ ಇಲಾಖೆಯಲ್ಲಿ ಸರ್ಕಾರ 49 ತಾಲ್ಲೂಕುಗಳನ್ನು ಘೋಷಣೆ ಮಾಡಿದೆ. ಬಹುಶ: ಅದನ್ನು ನಾನು ಸ್ವಾಗತ ಮಾಡುತ್ತೇನೆ. ಈ ಒಂದು ಸಂದರ್ಭದಲ್ಲಿ ಈ ವರ್ಷ ಕಂದಾಯ ಇಲಾಖೆಗೆ 5900 ಕೋಟಿ ರೂ.ಗಳನ್ನು ನಿಗದಿ ಮಾಡಿದೆ. ಸರ್ಕಾರವೇ ಉತ್ತರ ಕೊಟ್ಟಂಥ ಸಂದರ್ಭದಲ್ಲಿ ಒಂದು ತಾಲ್ಲೂಕು ರಚನೆ ಮಾಡಲಿಕ್ಕೆ ಮೂಲಭೂತ ಸೌಕರ್ಯವನ್ನು ಕಲ್ಪಿಸಲಿಕ್ಕೆ 25 ಕೋಟಿ ರೂ.ಗಳ ಅವಶ್ಯಕತೆ ಇದೆ. ಈ 49 ತಾಲ್ಲೂಕುಗಳಿಗೆ 1225 ಕೋಟಿ ರೂ.ಗಳ ಅವಶ್ಯಕತೆ ಇದೆ. ಆದರೆ ಒಂದು ಪೈಸೆ ಹಣವನ್ನು ಸಹ ಈ ಬಜೆಟ್‌ನಲ್ಲಿ ಸರ್ಕಾರ ನಿಗದಿ ಪಡಿಸಿಲ್ಲ. ಈ ಹೊಸ ತಾಲ್ಲೂಕುಗಳ ರಚನೆಯ ಜೊತೆಗೆ ತಾವು ಮತ್ತು ನಾನು ಪ್ರತಿನಿಧಿಸತಕ್ಕಂಥ ರಾಣೆಬೆನ್ನೂರು ಉಪ ವಿಭಾಗವನ್ನು ಮಾಡಲಿಕ್ಕೆ ಬಹಳಷ್ಟು ದಿವಸಗಳಿಂದ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸುತ್ತಿದ್ದೇವೆ. ಇವತ್ತು ಉಪ ವಿಭಾಗವನ್ನು ಸ್ಥಾಪನೆ ಮಾಡಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ನನ್ನ ಒತ್ತಾಯ ರಾಣೆಬೆನ್ನೂರನ್ನು ಉಪ ವಿಭಾಗವನ್ನಾಗಿ ಸ್ಥಾಪನೆ ಮಾಡಿ ಅದರಲ್ಲಿ ಹಿರೇಕೆರೂರು ತಾಲ್ಲೂಕನ್ನು ಸೇರಿಸಬೇಕೆಂದು ಹೇಳಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇವತ್ತು ಹೊಸ ತಾಲ್ಲೂಕುಗಳನ್ನು ರಚನೆ ಮಾಡಿದ್ದಾರೆ. 124 ಹೊಸ ಹೋಬಳಿಗಳು ರಚನೆ ಆಗಬೇಕೆಂದು ಬಹಳಷ್ಟು ದಿವಸಗಳ ಬೇಡಿಕೆ ಇದೆ. ಆ ಒಂದು ಬೇಡಿಕೆಗೆ ಇವತ್ತು ಸರ್ಕಾರ ಸ್ಪಂದಿಸಿಲ್ಲ. ಕೂಡಲೇ ಹೊಸ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಹೋಬಳಿಗಳನ್ನು ರಚನೆ ಮಾಡಲಿಕ್ಕೆ ಸಹ ಸರ್ಕಾರ ತನ್ನ ಕಾರ್ಯಕ್ರಮವನ್ನು ರೂಪಿಸಬೇಕಾಗಿದೆ. ಇನ್ನೊಂದು ಅತ್ಯಂತ ಮಹತ್ವದ ವಸತಿ ಯೋಜನೆ, ಈ ಯೋಜನೆಯಲ್ಲಿ ಸರ್ಕಾರ ಪ್ರತಿ ವರ್ಷ ಮೂರು ಲಕ್ಷ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದ್ದರು. ಆದರೆ ಇದುವರೆಗೂ ಅವರು ಸಾಧಿಸಿದಂಥ ಸಾಧನೆಯನ್ನು ನಾವು ಗಮನ ಹರಿಸಬೇಕು. ಉದಾಹರಣೆಗೆ ನನ್ನ ಹಾವೇರಿ ಜಿಲ್ಲೆಯಲ್ಲಿ 2013-14ನೇ ಸಾಲಿನಿಂದ 2016-17ನೇ ಸಾಲಿನ ಅಂತ್ಯದವರೆಗೆ 53,068 ಮನೆಗಳನ್ನು ಸರ್ಕಾರ ಕಟ್ಟಬೇಕಾಗಿತ್ತು. ಆದರೆ ಕೇವಲ 17,752 ಮನೆಗಳನ್ನು ಮಾತ್ರ ಕಟ್ಟಲಿಕ್ಕೆ ಈ ಸರ್ಕಾರಕ್ಕೆ ಸಾಧ್ಯವಾಗಿದೆ. ಇನ್ನೊಂದು ಜಿಲ್ಲೆಯನ್ನು ನಾವು ಉದಾಹರಣೆಗಾಗಿ ತೆಗೆದುಕೊಳ್ಳುವುದಾದರೆ, ಬಾಗಲಕೋಟ ಜಿಲ್ಲೆಯಲ್ಲಿ 17,785 ಮನೆಗಳನ್ನು ಈ ಸರ್ಕಾರ ನಾಲ್ಕು ವರ್ಷದ ಅವಧಿಯಲ್ಲಿ ಕಟ್ಟಬೇಕಾಗಿತ್ತು. ಕೇವಲ 6,545 ಮನೆಗಳನ್ನು ಕಟ್ಟಿದೆ. ಇದರ ಅರ್ಥ ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಈ ಸರ್ಕಾರಕ್ಕೆ ಶೇಕಡಾ 30ರಷ್ಟು ಮನೆಗಳನ್ನು ಕಟ್ಟಲಿಕ್ಕೆ ಸಾಧ್ಯವಾಗಿಲ್ಲ. ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಬಹುಶ: ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳಬೇಕು. ಅವರು ಆಯವ್ಯಯ ಪುಸ್ತಕವನ್ನು ಓದುವಾಗ ಅವರು ಕಳೆದ ನಾಲ್ಕು ವರ್ಷದ ಸಾಧನೆಯ ಬಗ್ಗೆ ತೋರಿಸುತ್ತಾರೆ. ಈ ವರ್ಷ ಅನುದಾನ ನಿಗದಿ ಮಾಡಿದಂಥ ಸಂದರ್ಭದಲ್ಲಿ, ಹಿಂದಿನ ವರ್ಷದ ಸಾಧನೆಯ ಅಂಕಿ ಸಂಖ್ಯೆಗಳನ್ನು ಅವರು ಕೊಟ್ಟಿಲ್ಲ.

(ಮುಂದು)

27.3.2017/5.00(35)/UD.CP

ಶ್ರೀ ಯು.ಬಿ.ಬಣಕಾರ್ (ಮುಂದು. .. )

ಬಹುಶ: ಅವರು ಅಂಕಿ-ಸಂಖ್ಯೆಗಳನ್ನು ಕೊಟ್ಟಿದ್ದೇ ಆದರೆ ಸರ್ಕಾರ ಕಳೆದ ನಾಲ್ಕು ವರ್ಷಗಳಿಂದ ಏನು ಸಾಧನೆ ಮಾಡಿದೆ ಎನ್ನುವುದನ್ನು ಸ್ಪಷ್ಟವಾಗಿ ಗಮನಿಸಬಹುದಾಗಿದೆ. ಅಲ್ಪಸಂಖ್ಯಾತರಿಗೆ, ಹಿಂದುಳಿದ ವರ್ಗದವರಿಗೆ, ಟ್ಯಾಕ್ಸಿಗಳನ್ನು ಕೊಡಿಸುತ್ತೇವೆ ಎಂದು ಹೇಳಿದ್ದಾರೆ. ಆದರೆ 2015-16 ಹಾಗೂ 2016-17 ನೇ ಸಾಲುಗಳಲ್ಲಿ ಇಡೀ ರಾಜ್ಯದ ಯಾವುದೇ ತಾಲ್ಲೂಕಿನಲ್ಲಿಯೂ ಸಹ ಈ ವರ್ಗದವರಿಗೆ ಪ್ರವಾಸಿ ಟ್ಯಾಕ್ಸಿಗಳನ್ನು ಕೊಡಿಸುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುತ್ತಿದ್ದೇನೆ, ತಾವು ಈ ಒಂದು ಆಯವ್ಯಯವನ್ನು ಮಂಡಿಸುವಂತಹ ಸಂದರ್ಭದಲ್ಲಿ ಸ್ಪಷ್ಟವಾಗಿ



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅಂಕಿ-ಅಂಶಗಳಿಂದ ಕಳೆದ ನಾಲ್ಕು ವರ್ಷಗಳ ಸಾಧನೆಯನ್ನು ನಮ್ಮ ಮುಂದಿಡಬೇಕು. 2012 ರಲ್ಲಿ 'ಸರ್ವಜ್ಞ ಪ್ರಾಧಿಕಾರ' ರಚನೆಯಾಗಿದೆ. ಆದರೆ ಇವತ್ತಿನವರೆಗೂ ಆ ಪ್ರಾಧಿಕಾರ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ಆಗಿಲ್ಲ. ಕೂಡಲೇ 'ಸರ್ವಜ್ಞ ಪ್ರಾಧಿಕಾರ'ದ ರಚನೆ ಆದೇಶ ಕಾರ್ಯಗತವಾಗಬೇಕು ಎಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇನ್ನೊಂದು ವಿಚಾರ, ಮಾನ್ಯ ಅಧ್ಯಕ್ಷರೆ, ಜಲಸಂಪನ್ಮೂಲ ಇಲಾಖೆಯಲ್ಲಿ ನಿಮ್ಮ ತಾಲ್ಲೂಕಿನ ದೊಡ್ಡ ಕೆರೆಗೆ, ಬ್ಯಾಡಗಿ ತಾಲ್ಲೂಕಿನ ಗುಡ್ಡದ ಮಲ್ಲಾಪುರ ಮತ್ತು ಹಿರೇಕೆರೂರು ತಾಲ್ಲೂಕಿನ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಸರ್ಕಾರ ಮಂಜೂರು ಮಾಡಿದೆ. ಅದಕ್ಕಾಗಿ ಸರ್ಕಾರಕ್ಕೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ. ಆದರೆ ಈ ಘೋಷಣೆ ಏನಿದೆ ಅದು ಕಾರ್ಯಗತವಾಗಬೇಕು. ಕಳೆದ ವರ್ಷ ನೀರಾವರಿ ಇಲಾಖೆಗೆ 11,389 ಕೋಟಿ ರೂ.ಗಳನ್ನು ನಿಗದಿ ಮಾಡಿತ್ತು. ಆದರೆ ಕೇವಲ 5,555 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. 40% ಹಣವನ್ನು ಕಳೆದ ಬಾರಿ ಆಯವ್ಯಯದಲ್ಲಿ ಬಿಡುಗಡೆ ಮಾಡಲು ಸಾಧ್ಯವಾಗಿಲ್ಲ. ಈ ರೀತಿ ಘೋಷಣೆ ಮಾಡಿದ ಮೇಲೆ ಅವು ಕಾರ್ಯಗತ ಆಗಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಆದ್ದರಿಂದ ಈ ಎಲ್ಲಾ ಯೋಜನೆಗಳು ಜಾರಿಗೆ ಬಂದರೆ ಬಹುಶ: ಈ ಆಯವ್ಯಯವನ್ನು ಮಂಡಿಸಿದ್ದು ಸಾರ್ಥಕವಾಗುತ್ತದೆ ಎಂಬ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ಸಿದ್ದು ಬಿ.ನ್ಯಾಮಗೌಡರು ಮಾತನಾಡುವುದು.

ಶ್ರೀ ಸಿದ್ದು ಬಿ.ನ್ಯಾಮಗೌಡ (ಜಮಖಂಡಿ) : ಮಾನ್ಯ ಅಧ್ಯಕ್ಷರೆ, 2017-18ನೇ ಸಾಲಿನ ಆಯವ್ಯಯದ ಮೇಲೆ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ವಿಶೇಷವಾಗಿ ನಮ್ಮ ಮಾನ್ಯಮುಖ್ಯಮಂತ್ರಿಯವರು ಜನಪ್ರಿಯವಾದ ಬಜೆಟ್ ಅನ್ನು ಮಂಡಿಸಿದ್ದಾರೆ. ಅದರಲ್ಲಿಯೂ ವಿಶೇಷವಾಗಿ ನೀರಾವರಿಗೆ, ಶಿಕ್ಷಣಕ್ಕೆ, ಸಾಕಷ್ಟು ಹಣವನ್ನು ಕೊಟ್ಟಿದ್ದಾರೆ. ಕಳೆದ ನಾಲ್ಕು ವರ್ಷಗಳಲ್ಲಿ 48,000 ಕೋಟಿ ರೂ.ಗಳ ಬಜೆಟ್‌ನಲ್ಲಿ ನಮ್ಮ ಚುನಾವಣೆ ಪೂರ್ವದಲ್ಲಿ ಪ್ರತಿ ವರ್ಷ 10,000 ಕೋಟಿ ರೂ.ಗಳನ್ನು ನೀರಾವರಿಗೆ ಖರ್ಚು ಮಾಡುವುದಾಗಿ ಘೋಷಣೆ ಮಾಡಿದ್ದರು. ಆ ಪ್ರಕಾರ ಅವರು ಹಣ ಕೂಡ ಬಿಡುಗಡೆ ಮಾಡಿದ್ದಾರೆ. ನಾಲ್ಕು ವರ್ಷಗಳಲ್ಲಿ 48,000 ಕೋಟಿ ರೂ.ಗಳು, ಈ ವರ್ಷ ಹೆಚ್ಚು ಕಡಿಮೆ 16,000 ಕೋಟಿ ರೂ.ಗಳು. ಹೀಗಾಗಿ ಹೇಳಿರುವುದಕ್ಕಿಂತ ಹೆಚ್ಚಿನ ಅಮೌಂಟ್‌ಅನ್ನು ಬಜೆಟ್‌ನಲ್ಲಿ ಇಟ್ಟಿದ್ದಕ್ಕೆ ನಾವು ಅಭಿನಂದನೆ ಸಲ್ಲಿಸುತ್ತೇವೆ.

ಅದರ ಜೊತೆಗೆ ಶಿಕ್ಷಣದಲ್ಲಿ ಬಡ ವಿದ್ಯಾರ್ಥಿಗಳಿಗೆ, ಇಂಜಿನಿಯರ್ ವಿಭಾಗದಲ್ಲಿಯಾಗಲಿ ಅಥವಾ ಸ್ನಾತಕೋತ್ತರ ವಿಷಯದಲ್ಲಿ ಓದಲು ಬಂದಂತಹ ಕಾಲೇಜು ವಿದ್ಯಾರ್ಥಿಗಳಿಗೆ ಪುಕ್ಕಟೆ ಲ್ಯಾಪ್‌ಟಾಪ್ ಕೊಡುವಂತಹ ವ್ಯವಸ್ಥೆಯನ್ನೂ ಕೂಡ ಮಾಡಿದ್ದಾರೆ. ಹೀಗೆ ಅನೇಕ ಜನಪ್ರಿಯ ಯೋಜನೆಗಳನ್ನು ಈ ಬಜೆಟ್‌ನಲ್ಲಿ ಮಾಡಿದ್ದಾರೆ. ಅದಕ್ಕೆ ಅಭಿನಂದಿಸುತ್ತಾ, ವಿಶೇಷವಾಗಿ ನೇರವಾಗಿ ನಮ್ಮ ಕ್ಷೇತ್ರದ ವಿಷಯಕ್ಕೆ ಬರುತ್ತೇನೆ. ಜಮಖಂಡಿ ಕ್ಷೇತ್ರದಲ್ಲಿ ಆಲಮಟ್ಟಿ ಯೋಜನೆಯಿಂದ ಸುಮಾರು ಹಳ್ಳಿಗಳು ಮುಳುಗಡೆಯಾಗಿವೆ. ಆಲಮಟ್ಟಿ ಮೊದಲನೆ ಹಾಗೂ ಎರಡನೆ ಹಂತದಲ್ಲಿ ಸುಮಾರು 136 ಹಳ್ಳಿಗಳು ಮುಳುಗಡೆಯಾಗುತ್ತವೆ. ಅದರಲ್ಲಿ 1,38,364 ಎಕರೆ ಜಮೀನು ಮುಳುಗಡೆಯಾಗಿದೆ. ಮೂರನೇ ಹಂತದಲ್ಲಿ 20 ಗ್ರಾಮಗಳು ಮುಳುಗಡೆಯಾಗಿ ಸುಮಾರು 76,357 ಎಕರೆ ಭೂಮಿ ಮುಳುಗಡೆಯಾಗುತ್ತದೆ. ಕಾಲುವೆ ಮಾಡುವುದಕ್ಕೆ ಸುಮಾರು 10,000 ಎಕರೆ ಹಾಗೂ ಪುನರ್ವಸತಿ ಕೇಂದ್ರಗಳಿಗೆ ಹೆಚ್ಚು ಕಡಿಮೆ 15,000 ದಿಂದ 20,000 ಎಕರೆ ಭೂಮಿ ಬೇಕಾಗುತ್ತದೆ. ಹೆಚ್ಚು ಕಡಿಮೆ ನಮ್ಮ ಕ್ಷೇತ್ರದಲ್ಲಿ ಬಾಗಲಕೋಟೆ, ಬಿಜಾಪುರ ಜಿಲ್ಲೆಯಲ್ಲಿ UKP project ಗೆ 4,66,403 ಜಮೀನು ಮುಳುಗಡೆಯಾಗುವುದರಿಂದ ರೈತರಿಗೆ ಬಹಳಷ್ಟು ತೊಂದರೆಯಾಗಿದೆ. ಹಿಂದೆ 1ನೇ ಹಂತ, 2ನೇ ಹಂತದಲ್ಲಿ ಒಂದು ಎಕರೆಗೆ ಹೆಚ್ಚು ಕಡಿಮೆ ಒಂದೂವರೆ ಲಕ್ಷ ರೂ.ಗಳ ಪರಿಹಾರಧನ ಕೊಟ್ಟಿದ್ದಾರೆ. ಆಗ ಕೂಡ ರೈತರಿಗೆ ಬಹಳ ತೊಂದರೆಯಾಗಿದೆ. ಈಗ ಹೋದರೆ ಮುಳುಗಡೆಯಾಗುವ ಜಮೀನಿನ ಕಿಮ್ಮತ್ತು ಎಷ್ಟು ಕೊಡುತ್ತೇವೆ ಎನ್ನುವುದನ್ನು ಸರ್ಕಾರ ಇಲ್ಲಿಯವರೆಗೂ ನಿರ್ಧಾರ ಮಾಡಿಲ್ಲ. ಆ ಭಾಗದ ಎಲ್ಲಾ ಶಾಸಕರು ಸರ್ಕಾರಕ್ಕೆ ಕೇಳುತ್ತಾರೆ. ಅದು ಬಿಜಾಪುರ, ಬಾಗಲಕೋಟೆ ಜಿಲ್ಲೆ ಇರಬಹುದು, ಶಾಸಕರು ನಮಗೆ ಎಷ್ಟು ಅಮೌಂಟ್‌ನ ಪರಿಹಾರ ಕೊಡುತ್ತೀರಿ ಎಂದು ಕೇಳಿದರೆ, ನಮಗೆ ಹೇಳುವುದಕ್ಕೇ ಉತ್ತರವಿಲ್ಲ. ಕೇಳಿದರೆ ಕೇಂದ್ರ ಸರ್ಕಾರ ಮಾಡಿದೆ. Rural ಭಾಗದಲ್ಲಿದ್ದರೆ ನಾಲ್ಕು ಪಟ್ಟು, urban ಭಾಗವಾದರೆ ಎರಡು ಪಟ್ಟು ಕೊಡುತ್ತೇವೆ ಎಂದು ಅಷ್ಟೇ ಹೇಳುತ್ತಾರೆ. ಆದರೆ ಅದಕ್ಕೆ ಒಂದು ಯೋಗ್ಯವಾದಂತಹ ನಿರ್ಧಾರ ಇನ್ನೂ ಮಾಡಿಲ್ಲ. ಆದರೆ ನದಿ ದಂಡೆಯಲ್ಲಿರುವಂತಹ ಜಮೀನುಗಳು ಹೆಚ್ಚು ಕಡಿಮೆ ಒಂದೇ ಮಾದರಿಯಾಗಿವೆ. ಆದರೆ ಖರೀದಿ ಮಾಡಿದರೆ Sub Registrar office guidance value ಏನಿದೆ, ಒಂದೊಂದು ಗ್ರಾಮದಲ್ಲಿ . . . .

ಅಧ್ಯಕ್ಷರು: ಒಂದು ನಿಮಿಷ ತಾಳಿ ಮಾನ್ಯ ಕಂದಾಯ ಸಚಿವರು ಏನು ಹೇಳುತ್ತಿದ್ದಾರೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಕಾಗೋಡು ತಿಮ್ಮಪ್ಪ, (ಮಾನ್ಯ ಕಂದಾಯ ಸಚಿವರು): ಈಗ ಹೊಸ Land Acquisition Act ಬಂದಿದೆ. ಅದರ ಪ್ರಕಾರ ಕೊಡಬೇಕು. ಏಕೆಂದರೆ ಶರಾವತಿ ನದಿ ಮುಳುಗಡೆಯಾಗಿ ನಾವೆಲ್ಲಾ ಭಿಕ್ಷೆ ಬೇಡುತ್ತಿದ್ದೇವೆ. ಒಂದು ಎಕರೆಗೆ 6,000/- 7,000/- ರೂ.ಗಳನ್ನು ಕೊಡುತ್ತಾರೆ. ಈಗ ಇವರದ್ದು ಬಂದಿದೆ. ಏನು ಕೊಡಬೇಕು ಎನ್ನುವುದನ್ನು aggressive ಆಗಿ ಹೇಳಿ. ಹೊಸ ಕಾನೂನು ಪ್ರಕಾರ ಮಾಡಿದರೆ ನಿಮಗೆ ಒಂದು ಎಕರೆಗೆ ಕನಿಷ್ಟ ಎಂದರೆ 10 ಲಕ್ಷ ರೂ.ಗಳು, 50 ಲಕ್ಷ ರೂ.ಗಳನ್ನು ಕೊಡುವುದಕ್ಕೆ ಬರುತ್ತದೆ. Time bound ಆಗಿ aggressive ಆಗಿ ಹೇಳಿ.

ಶ್ರೀ ಸಿದ್ದು ಬಿ.ನ್ಯಾಮಗೌಡ: ಅದನ್ನೇ ಹೇಳುತ್ತಿದ್ದೇನೆ ಸಾರ್.

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ) (ದೇವರ ಹಿಪ್ಪರಗಿ): ಸಾರ್, UKP ಗೆ ಭೂ ಸ್ವಾಧೀನ ಕಾಯ್ದೆ ಪ್ರಕಾರ ಎಷ್ಟು ಹಣ ಬೇಕಾಗುತ್ತದೆ, ವರ್ಷದ ಬಜೆಟ್ ಇಷ್ಟು ಹಣ ಇಡಬೇಕೆಂದು ಎಲ್ಲರೂ ಒತ್ತಾಯ ಮಾಡಿದರೆ ಅದಕ್ಕೆ ಪರಿಹಾರ ಸಿಗುತ್ತದೆ. ನಾವು election ಬಂದಾಗ ಮಾತ್ರ ಪರಿಹಾರ ಕೊಡಬೇಕು, ನೀರಾವರಿ ಮಾಡಬೇಕೆಂದು ಅಲ್ಲ. ಎಲ್ಲರೂ ಸೇರಿ assembly ನಲ್ಲಿ UKP - III projectಗೆ ಎಷ್ಟು ದುಡ್ಡು ಬೇಕಾಗುತ್ತದೆ, ಎಷ್ಟು ವರ್ಷದಲ್ಲಿ ಕೊಡುತ್ತೀರಿ ಎಂದು ಒಂದು decision ತೆಗೆದುಕೊಳ್ಳಿ. ಆಗ ಒಂದು ತೀರ್ಮಾನವಾಗುತ್ತದೆ. ಇಲ್ಲವಾದರೆ ನಾವು ಪರಿಹಾರ ಕೇಳುವುದು, ಒಬ್ಬರು ಕಾಲುವೆ ಕೇಳುವುದು ಅಷ್ಟೇ ಆಗುತ್ತದೆ ಬೇರೆ ಏನೂ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಕಾನೂನು ಪ್ರಕಾರ ಕೊಡಲೇಬೇಕು.

ಶ್ರೀ ಎಸ್.ಚಿಕ್ಕಮಾದು (ಹೆಗ್ಗಡ ದೇವನ ಕೋಟೆ): ಮಾನ್ಯ ಅಧ್ಯಕ್ಷರೆ, ಇದು ಮಾನ್ಯ ಸಿದ್ದು ನ್ಯಾಮಗೌಡರಿಗೆ ಮಾತ್ರ ಸೀಮಿತವಾದುದು ಅಲ್ಲ. ಇದು ಇಡೀ ರಾಜ್ಯದಲ್ಲಿ ನಮ್ಮ ಹಿರಿಯ ಸಚಿವರಾದಂತಹ ಮಾನ್ಯ ಕಾಗೋಡು ತಿಮ್ಮಪ್ಪನವರು ಏನು ಹೇಳಿದರು ಅದು ಅಕ್ಷರ: ಸತ್ಯ. ಕೊನೆಗೆ ಇವರು ಪರಿಹಾರವನ್ನೂ 3-4 ಸಲ ಕೊಟ್ಟರು. ನನ್ನ ತಾಲ್ಲೂಕಿನಲ್ಲಿ 33 ಹಳ್ಳಿಗಳನ್ನು ಸ್ಥಳಾಂತರಗೊಳಿಸಿದರು. ಆದರೆ ಒಂದು ಹಳ್ಳಿಗೂ ಕೂಡ ಏನೂ ಮಾಡಲಿಲ್ಲ. ಅವರು ಬೀದಿಪಾಲಾಗಿದ್ದಾರೆ. ಮೀನನ್ನು ದಡಕ್ಕೆ ತಂದು ಹಾಕಿದ್ದಾರೆ. ಅದಕ್ಕೂ ಕೂಡ ಸರ್ಕಾರ specific ಆಗಿ ಮಾಡಿಕೊಡಬೇಕು. ಒಂದು ವರ್ಷ 55 ಕೋಟಿ ರೂ.ಗಳನ್ನು ಕೊಟ್ಟರೆ ಉದ್ಧಾರವಾಗುತ್ತದೆ.

27-03-2017

ಶ್ರೀ ಎ.ಎಸ್.ಪಾಟೀಲ್ (ನಡಹಳ್ಳಿ): UKP ಯಲ್ಲಿಯೂ ಕೂಡ ಮೊದಲು ಆಲಮಟ್ಟಿ, ನಾರಾಯಣಪುರ ಕಟ್ಟಿದಾಗ 166 ಹಳ್ಳಿಗಳು ಮುಳುಗಡೆಯಾದವು. ಇಡೀ ದೇಶದಲ್ಲಿಯೇ highest ಹಳ್ಳಿಗಳು ಮುಳುಗಿದ್ದರೆ, ಭೂಮಿ ಕೊಟ್ಟಿದ್ದರೆ ಒಂದು ಎಕರೆಗೆ 3,000 ರೂ.ಗಳಂತೆ ಕೊಟ್ಟಿರುವುದು ಎಂದರೆ ಅದು ಉತ್ತರ ಕರ್ನಾಟಕದ ಬಾಗಲಕೋಟೆ ಜಿಲ್ಲೆ, ಬಿಜಾಪುರ ಜಿಲ್ಲೆಯಲ್ಲಿ ಕೊಡಲಾಗಿದೆ. ಆಂಧ್ರಪ್ರದೇಶಕ್ಕೆ ನೀರು ಕೊಡುವುದರ ಜೊತೆಗೆ ಉತ್ತರ ಕರ್ನಾಟಕದ ಬಹುತೇಕ, ಗುಲ್ಬರ್ಗಾ, ರಾಯಚೂರು ಭಾಗದಲ್ಲಿ ನೀರಾವರಿ ಆಗುವುದಕ್ಕೆ 3,000, 2,000 ರೂ.ಗಳಿಗೆ 2,60,000 ಎಕರೆ ಭೂಮಿ ಕಳೆದುಕೊಂಡಿರುವ ಯಾವುದಾದರೂ ಜಿಲ್ಲೆ ಇದ್ದರೆ ಅದು ಅಖಂಡ ಬಿಜಾಪುರ ಜಿಲ್ಲೆ.

ಅಧ್ಯಕ್ಷರು: ಆಯಿತು. ಸಿದ್ದು ನ್ಯಾಮಗೌಡರೆ ಬೇಗ conclude ಮಾಡಿ.

ಶ್ರೀ ಸಿದ್ದು ಬಿ.ನ್ಯಾಮಗೌಡ: ನನ್ನ ತಾಲ್ಲೂಕಿನಲ್ಲಿ ಉದಾಹರಣೆಯಾಗಿ Sub Registrar ಕಛೇರಿಯಲ್ಲಿ ಖರೀದಿಯಾಗಿರುವುದು average ತೆಗೆದುಕೊಂಡರೆ ಒಂದು ಗ್ರಾಮದಲ್ಲಿ 2,18,000 ಇದೆ. ಇನ್ನೊಂದು ಗ್ರಾಮದಲ್ಲಿ 6,91,000 ಇದೆ. ಇನ್ನೊಂದು ಗ್ರಾಮದಲ್ಲಿ 4,31,000 ಇದೆ. ಮತ್ತೊಂದು ಗ್ರಾಮದಲ್ಲಿ 2,40,000 ಇದೆ. ಈ ರೀತಿ ಒಂದೊಂದು ಗ್ರಾಮಕ್ಕೆ ಒಂದೊಂದು guidance value ಹೆಚ್ಚು ಕಡಿಮೆಯಾಗಿ ಖರೀದಿ ಹೆಚ್ಚು ಕಡಿಮೆಯಾಗಿದೆ. ಸಾಮಾನ್ಯವಾಗಿ ನಮ್ಮ ರೈತರು ವ್ಯಾಪಾರ ಮಾಡುವಾಗ 20 ವರ್ಷದಿಂದ ಬಹಳ ಫಲವತ್ತಾದ ಜಮೀನು ಹತ್ತು ಲಕ್ಷ ರೂ.ಗಳಿಗೆ ಜಮೀನು ಮಾರಾಟ ಮಾಡಿದ್ದರೆ ಒಂದೂವರೆ ಲಕ್ಷ, ಎರಡು ಲಕ್ಷ ರೂಗಳಿಗೆ ಖರೀದಿ ಮಾಡಿದ್ದಾರೆ. ಈಗ ಅದರ ನಾಲ್ಕು ಪಟ್ಟು ಕೊಡುತ್ತೇವೆ ಎಂದರೆ ಅದರ ಲುಕ್ಸಾನು ಯಾರಿಗೆ ಆಯಿತು? ರೈತರಿಗೆ ಆಯಿತು. ಹಾಗಾಗಿ ನಮ್ಮಲ್ಲಿ ನೀರಾವರಿ ಜಮೀನು ಒಂದು ಎಕರೆ ಜಮೀನಿಗೆ 40 ಲಕ್ಷ ರೂ. ಕೆಳಗೆ ಸಿಗುವುದಿಲ್ಲ. ಒಣ ಬೇಸಾಯ ಜಮೀನು 25-26 ಲಕ್ಷ ರೂ.ಗಳು, ನೀರಾವರಿ ಜಮೀನು 40 ಲಕ್ಷ ರೂ.ಗಳ ಕೆಳಗೆ ಸಿಗುವುದಿಲ್ಲ. Sub Registrar ಕಛೇರಿಯಲ್ಲಿ 2 ಲಕ್ಷ, 3 ಲಕ್ಷ, 4 ಲಕ್ಷ ರೂ.ಗಳ ಕಿಮ್ಮತ್ತು ಮಾಡಿದ್ದಾರೆ. ಒಂದೇ ಒಂದು ಗ್ರಾಮದಲ್ಲಿ 6 ಲಕ್ಷ ರೂ.ಗಳು ಮಾಡಿದ್ದಾರೆ. ಯಾವ ಮಾನದಂಡ ಇಟ್ಟುಕೊಂಡು ಇವರು ನಾಳೆ ಬೆಲೆ ಕೊಡುತ್ತಾರೆ? ಇವರು average ತೆಗೆದುಕೊಳ್ಳುತ್ತಾರೋ ಅಥವಾ ಆ ಊರಿನ ಪ್ರಕಾರ ನಾಲ್ಕು ಪಟ್ಟು ಕೊಡುತ್ತಾರೋ, ನಾಲ್ಕು ಪಟ್ಟು ಕೊಟ್ಟರೆ ಒಬ್ಬರಿಗೆ ಚಲೋ ದುಡ್ಡು ಬರುತ್ತದೆ. ಇನ್ನೊಬ್ಬರಿಗೆ ಬರುವುದಿಲ್ಲ. ಬಹಳ ಕಡಿಮೆ ಬರುತ್ತದೆ.

27-03-2017

ಜಮೀನು ಮಾತ್ರ ಎಲ್ಲಾ ಒಂದೇ type ಜಮೀನು ಇವೆ. ಹೀಗಾಗಿ ರೈತರಲ್ಲಿ ಬಹಳಷ್ಟು ಅಸಂತೋಷವಾಗುತ್ತದೆ. ಅದು ರೈತರಿಗೆ ಒಂದು ಆತಂಕವಾಗಿದೆ. ನಮ್ಮ ಊರಿಗೆ ಎಷ್ಟು ದುಡ್ಡು ಕೊಡುತ್ತೀರಿ ಎನ್ನುವ ಮಾತನ್ನು ಕೇಳುತ್ತಿದ್ದಾರೆ. ಆದರೆ ಸರ್ಕಾರದವರಿಗೆ ನಾವು ಮಾನ್ಯ ಮುಖ್ಯಮಂತ್ರಿಯವರಿಗೆ, ನೀರಾವರಿ ಸಚಿವರಿಗೆ ವಿನಂತಿ ಮಾಡಿಕೊಂಡಿದ್ದೇವೆ, ಇದಕ್ಕೊಂದು Price Fixation Committee ಮಾಡಿ. ಏನು ರೇಟ್ ಕೊಡುತ್ತೀರಿ ಎನ್ನುವ committee ಮಾಡಿ. ಆ ಭಾಗದಲ್ಲಿರುವಂತಹ ಜನಪ್ರತಿನಿಧಿಗಳು, ಶಾಸಕರು ಇರಬಹುದು, MLC ಇರಬಹುದು, MP ಇರಬಹುದು, ಅಲ್ಲಿರುವಂತಹ ಹೋರಾಟಗಾರರ ಸಮಿತಿ ಇರಬಹುದು, ಅವರನ್ನು ಕರೆದು ಒಂದು ರೇಟ್ fix ಮಾಡಿ ಕೊಡಬೇಕು. ಏಕೆಂದರೆ, ಇವತ್ತು ಎಷ್ಟು ರೇಟ್ ಕೊಡುತ್ತೇವೆ ಎಂದು ಇನ್ನೂ ಯಾವುದೂ ನಿರ್ಧಾರವಾಗಿಲ್ಲ. ಹೀಗಾಗಿ ರೈತರು ಬಹಳ ಆತಂಕದಲ್ಲಿದ್ದಾರೆ, ತೊಂದರೆಯಲ್ಲಿದ್ದಾರೆ. Sudden ಆಗಿ ಅದಕ್ಕೆ ಏನಾದರೂ ಇಷ್ಟೇ ಕೊಡಬೇಕು, ನಾವು ನೀರು ಹಿಡಿಯುತ್ತೇವೆ ಎಂದರೆ ಬಹಳಷ್ಟು ರೈತರು ತೊಂದರೆಯಲ್ಲಿರುತ್ತಾರೆ. ಸುಮಾರು ಲಕ್ಷಗಟ್ಟಲೆ ಜಮೀನನ್ನು ಕಳೆದುಕೊಂಡಿದ್ದಾರೆ. ಬಹಳ ದೊಡ್ಡ ಸಮಸ್ಯೆ ಇದ್ದು, ಪುನರ್ವಸತಿ ಕೇಂದ್ರಗಳು ಸರಿಯಾಗಿ ಆಗಿಲ್ಲ. ಇನ್ನೂ 20 ಹಳ್ಳಿಗಳು ಮುಳುಗಡೆಯಾಗುತ್ತವೆ, ಇನ್ನೂ ಭೂ ಸ್ವಾಧೀನ ಪ್ರಕ್ರಿಯೆ ಚಾಲು ಆಗಿಲ್ಲ. ಹೀಗೆ ಅನೇಕ ಸಮಸ್ಯೆಗಳು ಇವತ್ತಿನ ದಿವಸ ನಮ್ಮ ಜಿಲ್ಲೆಯಲ್ಲಿ, ನಮ್ಮ ತಾಲ್ಲೂಕಿನಲ್ಲಿರುವುದರಿಂದ ಸರ್ಕಾರ ಕೂಡಲೇ ಈ ಕುರಿತು ಒಂದು Price Fixation Committee ಮಾಡಬೇಕು.

ಮುಂದು. . .

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017/5-10/36/MS-CP.

ಶ್ರೀ ಸಿದ್ದು ಬಿ ನ್ಯಾಮಗೌಡ: (ಮುಂದು)

ಕನಿಷ್ಟ ಪಕ್ಷ ಒಂದು ಎಕರೆಗೆ 40 ಲಕ್ಷಕ್ಕಿಂತ ಕಡಿಮೆ ಕೊಟ್ಟರೆ ಅಲ್ಲಿಯ ರೈತರಿಗೆ ಅನ್ಯಾಯವಾಗುತ್ತದೆ. ಇಲ್ಲದೆ ಹೋದರೆ ನಿಮಗೆ 40 ಲಕ್ಷಕ್ಕಿಂತ ಕೊಡುವ ಹಣ ಹೆಚ್ಚಿನಿಸಿದರೆ ನಮಗೆ ನೀವು ಏನು ಹಣ

ಕೊಡಬೇಡಿ. ನಾವು ಎಷ್ಟು ಜಮೀನುಗಳನ್ನು ಕಳೆದುಕೊಳ್ಳುತ್ತೇವೆ. ಅಷ್ಟು ನೀರಾವರಿ ಜಮೀನುಗಳನ್ನು ಕೊಟ್ಟರೆ ನಮಗೆ ಉಪಕಾರವಾಗುತ್ತದೆನ್ನುವಂತಹ ಮಾತನ್ನು ಹೇಳುತ್ತೇನೆ. ನಾವು ಸರ್ಕಾರಕ್ಕೆ ಮತ್ತು ಯೋಜನೆಗೆ ಸಹಕಾರ ಇದೆ. ನಮ್ಮ ಸಹಕಾರ ಇಲ್ಲದೆ ಹೋಗಿದ್ದರೆ ಇದಕ್ಕೆ ಚಳುವಳಿ ಮಾಡಿ projectಗೆ ತೊಂದರೆ ಕೊಡುತ್ತಿದ್ದೆವು. ಆದರೆ ನಮ್ಮ ಜಿಲ್ಲೆಗೆ ದೊಡ್ಡ ಯೋಜನೆಯು ಬರುತ್ತಿದೆ. ನಮಗೆ ಲುಕ್ಸಾನ್ ಆದರೂ ಪರವಾಗಿಲ್ಲ. ನಾವು ಸರ್ಕಾರದ ಜೊತೆಯಲ್ಲಿ ಕೈಜೋಡಿಸುತ್ತೇವೆಂದು ತಿಳಿದುಕೊಂಡು ಸರ್ಕಾರಕ್ಕೆ ಸಹಕಾರವನ್ನು ಕೊಡುತ್ತಿದ್ದೇವೆ. ದಯವಿಟ್ಟು ಏನು ನಮ್ಮ ಜಮೀನು ಗಳು ಇವೆ ಕನಿಷ್ಟ ಪಕ್ಷ ಎಕರೆಗೆ 40 ಲಕ್ಷ ರೂಪಾಯಿಗಳನ್ನು ಕೊಡಬೇಕು, ಆ ಹಣವನ್ನು ಬೇಗನೆ ಕೊಟ್ಟರೆ ಈಗಲೇ ಜಮೀನನ್ನು ಬೇರೆ ಕಡೆಯಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಇಲ್ಲದೆ ಹೋದರೆ ಒಂದೇ ಟೈಮ್‌ನಲ್ಲಿ ಬಂದರೆ ಆ ಟೈಮ್‌ನಲ್ಲಿ ಒಂದು ಎಕರೆಗೆ 40 ಲಕ್ಷ ರೂಪಾಯಿಗಳು ಏನಿದೆ ನಾಳೆ ದಿನ ಒಂದು ಕೋಟಿ ರೂಪಾಯಿಗಳಾಗುತ್ತದೆ. ಹಾಗಾಗಿ ನಾವುಗಳು ಬಹಳ ಕಷ್ಟದಲ್ಲಿದ್ದೇವೆ.

ಶ್ರೀ ವೈ.ಎ.ನಾರಾಯಣಸ್ವಾಮಿ: ಸನ್ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ನೋಡಿ. ಏಕೋಪಾಧ್ಯಾಯ ಶಾಲೆಗೆ ಮುಖ್ಯೋಪಾಧ್ಯಾಯರು ಎಂದು ಒಬ್ಬರೇ ಒಬ್ಬ ಮಂತ್ರಿ ಸದನದಲ್ಲಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ.ರವಿ: ಹೇಳಿಕೊಳ್ಳುವುದಕ್ಕೆ ಸಂಪುಟ ಸಚಿವರು, ಎಲ್ಲರಿಗೂ ಸಹ ಗೂಟದ ಕಾರು ಕೊಟ್ಟಿದೆ.

(ಗೊಂದಲ)

ಅಧ್ಯಕ್ಷರು: ಸಿದ್ದು ನ್ಯಾಮಗೌಡರೆ, ತಾವು ಬೇಗನೆ conclude ಮಾಡಿ.

(ಗೊಂದಲ)

ಶ್ರೀ ವೈ.ಎ.ನಾರಾಯಣಸ್ವಾಮಿ: ಅಧಿಕಾರಿಗಳ ಗ್ಯಾಲರಿಯಲ್ಲಿ ಅಧಿಕಾರಿಗಳು ಇಲ್ಲ. ಇಲ್ಲಿ ನೋಡಿದರೆ ಮಂತ್ರಿಗಳು ಇಲ್ಲ. ಏತಕ್ಕಾಗಿ ಸದನ ನಡೆಸುತ್ತೀರಿ?

(ಗೊಂದಲ)

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಹೆಚ್. ಕೆ. ಕುಮಾರಸ್ವಾಮಿ: ಸರ್ಕಾರವೇ ಅತ್ಮಾವಲೋಕನ ಮಾಡಿಕೊಳ್ಳಬೇಕು. ಮಾನ್ಯ ಸಚಿವರು ಒಬ್ಬರು ಬಿಟ್ಟರೆ. . . . .

(ಗೊಂದಲ)

ಶ್ರೀ ಸಿ.ಟಿ.ರವಿ: ಇಲ್ಲಿ ಸದನಕ್ಕೂ ಗೌರವಿಲ್ಲ. ಸಭಾಧ್ಯಕ್ಷರಿಗೂ ಗೌರವ ಇಲ್ಲ. ನಿಮಗಾದರೂ ಗೌರವ ತರುತ್ತದೆಯೇ?

(ಗೊಂದಲ)

ಶ್ರೀ ವೈ.ಎ.ನಾರಾಯಣಸ್ವಾಮಿ: ಮಂತ್ರಿಗಳು ಇಲ್ಲ, ಅಧಿಕಾರಿಗಳು ಇಲ್ಲ. ಯಾರಿಗೆ ಭಾಷಣ ಮಾಡಬೇಕು ಹೇಳಿ. .

ಅಧ್ಯಕ್ಷರು: ತಾವು conclude ಮಾಡಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಯಾರಿಗೆ ಭಾಷಣ ಮಾಡಬೇಕು ಹೇಳಿ.

ಶ್ರೀ ವೈ.ಎ.ನಾರಾಯಣಸ್ವಾಮಿ: ಯಾರಿಗಾಗಿ ಭಾಷಣ ಮಾಡಬೇಕು, ದಯಮಾಡಿ ಸದನವನ್ನು adjourn ಮಾಡಿ.

ಅಧ್ಯಕ್ಷರು: ಬೇಗನೆ ಮುಗಿಸಿ.

ಶ್ರೀ ಸಿ.ಟಿ.ರವಿ: ಈ ಸದನಕ್ಕೆ ನಿಜವಾಗಿಯೂ ಗೌರವವಿಲ್ಲ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಅರ್ಧಗಂಟೆಗಳ ಕಾಲ ಸದನವನ್ನು ಮುಂದಕ್ಕೆ ಹಾಕಿ.

ಶ್ರೀ ವೈ.ಎ.ನಾರಾಯಣಸ್ವಾಮಿ: ಸರ್ಕಾರಕ್ಕೆ ಸದನದ ಬಗ್ಗೆ ಗೌರವವಿಲ್ಲ.

(ಗೊಂದಲ)

ಶ್ರೀ ಸಿ.ಟಿ.ರವಿ: ಏಕೋಪಾಧ್ಯಾಯ ಶಾಲೆ ಒಬ್ಬರೆ ಮುಖ್ಯೋಪಾಧ್ಯಾಯ ಎಂದು ಒಬ್ಬರು ಮಂತ್ರಿಗಳು ಇದ್ದಾರೆ.

(ಗೊಂದಲ)

ಶ್ರೀ ಬಿ. ಬಿ. ನಿಂಗಯ್ಯ: ಇವತ್ತು ಒಂದೇ ದಿನ ಇರುವುದು, ಇವತ್ತು ಯಾವ ಯಾವ ಮಂತ್ರಿಗಳು ಇರಬೇಕಾಗಿತ್ತು ಅದರಲ್ಲಿ ಒಬ್ಬರೇ ಮಾನ್ಯ ಕಾಗೋಡು ತಿಮ್ಮಪ್ಪನವರು ಇರುವುದು.

(ಗೊಂದಲ)

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ವೈ.ಎ.ನಾರಾಯಣಸ್ವಾಮಿ: ಏಕೋಪಾಧ್ಯಾಯ ಶಾಲೆ ಮುಖ್ಯೋಪಾಧ್ಯಾಯರು, ಕಾಗೋಡು ತಿಮ್ಮಪ್ಪನವರು ಇದ್ದಾರೆ.

ಅಧ್ಯಕ್ಷರು: ಮಂತ್ರಿಗಳು ಬರುತ್ತಾರೆ. ನಾನು ಹೇಳಿ ಕಳುಹಿಸುತ್ತೇನೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಏನು ಸಾರ್ ಇದು. ಇಲಾಖೆಯ ಅಧಿಕಾರಿಗಳು ಸಹ ಇಲ್ಲ.

ಅಧ್ಯಕ್ಷರು: ಸಿದ್ದು ನ್ಯಾಮಗೌಡರೆ ತಾವು ಬೇಗನೆ conclude ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಉಪ ಚುನಾವಣೆಯ ಪ್ರಚಾರಕ್ಕೆ ಹೋಗಿದ್ದರೆ ಅದನ್ನಾದರೂ ಹೇಳಿಬಿಡಲಿ. ನಮಗೆ ಸದನಕ್ಕಿಂತ... ನಾವೆಲ್ಲರೂ ಇಲ್ಲಿ ಇದ್ದೇವೆ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಂತ್ರಿಗಳು......... ಜನರಿಗೆ ದುಡ್ಡು ಹಂಚುವ ಕೆಲಸ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರಹೆಗಡೆ ಕಾಗೇರಿ: ಉಪ ಚುನಾವಣೆಯಲ್ಲಿ .........

(ಗೊಂದಲ)

ಅಧ್ಯಕ್ಷರು: ತಾವು ಬೇಗನೆ conclude ಮಾಡಿ. ನಾನು ಮಂತ್ರಿಗಳು ಬರುವುದಕ್ಕೆ ಹೇಳಿ ಕಳುಹಿಸುತ್ತೇನೆ.

(ಗೊಂದಲ)

ಶ್ರೀ ವೈ.ಎ.ನಾರಾಯಣಸ್ವಾಮಿ: ಈಗ ಇನ್ನೊಬ್ಬರು ಮಂತ್ರಿಗಳು ಬಂದರು.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಒಬ್ಬ ಸಚಿವರ car driver ಏನು ದುಡ್ಡು ಹಂಚುವುದಕ್ಕೆ ಹೋಗಿದ್ದಾರೆ, ಅದನ್ನು inspection ಮಾಡುವುದಕ್ಕೆ ಇವರು ಹೋಗಿದ್ದಾರೆ.

(ಗೊಂದಲ)

ಅಧ್ಯಕ್ಷರು: ತಾವು conclude ಮಾಡಿ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಸಿದ್ದು ಬಿ ನ್ಯಾಮಗೌಡ: ನಾನು ಈಗ start ಮಾಡಿದ್ದೇನೆ. ನಾನು ಹೇಗೆ conclude ಮಾಡಲಿ.

ಅಧ್ಯಕ್ಷರು: ಹಾಗೆ ಎಂದರೆ ಹೇಗೇ?

ಶ್ರೀ ಸಿದ್ದು ಬಿ ನ್ಯಾಮಗೌಡ: ಹೌದು ಸಾರ್.

ಅಧ್ಯಕ್ಷರು: Main main points ಅನ್ನು ಹೇಳಿ.

(ಗೊಂದಲ)

ಶ್ರೀ ಸಿದ್ದು ಬಿ ನ್ಯಾಮಗೌಡ: ನಾವುಗಳು ಸಾವಿರಾರು ಎಕರೆ ಭೂಮಿಯನ್ನು ಕಳೆದುಕೊಂಡಿದ್ದೇವೆ. ನಮಗೆ ಮಾತನಾಡುವುದಕ್ಕೆ ಅವಕಾಶ ಇಲ್ಲವೆಂದರೆ ಹೇಗೆ? ನಾವು ನಮ್ಮ ಸಮಸ್ಯೆಯನ್ನು ಹೇಳುವುದು ಬೇಡವೇ? ನಾವು ಈಗ ಹೇಳದೆ ಇನ್ಯಾವಾಗ ಸಮಸ್ಯೆ ಹೇಳುವುದು ಹೇಳಿ.

ಅಧ್ಯಕ್ಷರು: ನಿಮಗೆ ಅದಕ್ಕಾಗಿ ಅವಕಾಶ ಕೊಟ್ಟಿದ್ದೇನೆ. ಆದಷ್ಟು ಬೇಗನೆ ಮುಗಿಸಿ.

ಶ್ರೀ ಸಿದ್ದು ಬಿ ನ್ಯಾಮಗೌಡ: ಅಧ್ಯಕ್ಷರೆ, ನಮ್ಮ ಸಮಸ್ಯೆ ಬಹಳಷ್ಟು ಇದೆ. ನಾವು ಸಾವಿರಾರು ಎಕರೆ ಭೂಮಿಯನ್ನು ಕಳೆದುಕೊಂಡಿದ್ದೇವೆ. ಅದಕೋಸ್ಕರ ನಮ್ಮ ತಾಲ್ಲೂಕು ಮತ್ತು ನಮ್ಮ ಜಿಲ್ಲೆಯಲ್ಲಾಗಲಿ ಒಣ ಬೇಸಾಯ ಭೂಮಿ ಸಾಕಷ್ಟು ಇದೆ. ನಮ್ಮ ಕೃಷ್ಣಾದಲ್ಲಿದ್ದಂತಹ ನೀರನ್ನು lift ಮಾಡಿ ಏತ ನೀರಾವರಿ ಯೋಜನೆಯನ್ನು ಮಾಡಿಕೊಟ್ಟರೆ ನಮ್ಮ ಜನರು ಅಲ್ಲಿಗೆ ಹೋಗಿ ಭೂಮಿ ತೆಗೆದುಕೊಂಡು ಒಕ್ಕಲುತನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕಾಗಿ ಮೂರು ನೀರಾವರಿ ಯೋಜನೆಗಳನ್ನು propose ಮಾಡಿದ್ದೇವೆ. ಅದು ಯಾವುದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಕುಲ್ಲಾಳ್ಳಿ, ಹುನ್ನೂರು ಏತ ನೀರಾವರಿ ಯೋಜನೆ, ಗಲಗಲಿ-ಮರೆಗುದ್ದಿ ಏತ ನೀರಾವರಿ ಯೋಜನೆ, ತುಬಚಿ-ಬಬಲೇಶ್ವರ ಏತ ನೀರಾವರಿ ಯೋಜನೆ ಈ ಮೂರು ಯೋಜನೆಗಳು ಇವೆ. ತುಬಚಿ-ಬಬಲೇಶ್ವರ ಏತ ನೀರಾವರಿ ಯೋಜನೆಯ ಕೆಲಸ ಪ್ರಾರಂಭವಾಗಿದೆ ಸಂತೋಷ. ಅದೇ ರೀತಿಯಾಗಿ ಗಲಗಲಿ-ಮರೆಗುದ್ದಿ ಮತ್ತು ಕುಲ್ಲಾಳ್ಳಿ- ಹುನ್ನೂರು ಇನ್ನು ಯಾವ ಹಂತದಲ್ಲಿದೆ, ಇದಕ್ಕೆ water allocation ಆಗಿದೆ, ಆದರೆ ಕೆಲಸ ಪ್ರಾರಂಭವಾಗಿಲ್ಲ. ಆದಷ್ಟು ಬೇಗ ಈ ವರ್ಷ ಆ ಯೋಜನೆಯನ್ನು ಪ್ರಾರಂಭಿಸಬೇಕೆಂದು ನಾನು

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಅದರ ಜೊತೆಗೆ ಇವತ್ತಿನದಿವಸ ಪ್ರವಾಸೋದ್ಯಮ ಇಲಾಖೆಯಿಂದ ನಮ್ಮ ಕ್ಷೇತ್ರಕ್ಕೆ ವಿಶೇಷವಾಗಿ ಅಂತಹ ದೊಡ್ಡ ಕೆಲಸ ಏನು ಆಗಿಲ್ಲ. ನಮ್ಮ ಪ್ರವಾಸೋದ್ಯಮ ಇಲಾಖೆಯಲ್ಲಿ ನಮ್ಮ ಜಿಲ್ಲೆಗೆ ಐತಿಹಾಸಿಕವಾದಂತಹ ರಾಮತೀರ್ಥ ಅರಮನೆ ಇದೆ. ಪಿ.ವಿ. ಕಾಸಗತ್ತಿಯವರ ಹಳೆಯ building ಇದೆ. ಇವೆಲ್ಲವೂ ಅಭಿವೃದ್ಧಿ ಮಾಡುವಂತಹ ಅವಶ್ಯಕತೆ ಇದೆ. ಆ ಕಟ್ಟೆ ಕೆರೆ ಚೆನ್ನಾಗಿ ಅಭಿವೃದ್ಧಿ ಮಾಡಿದರೆ ಅದು ಒಂದು ಒಳ್ಳೆಯ ಪ್ರವಾಸಿ ತಾಣವಾಗುತ್ತದೆ. ಅದಕ್ಕಾಗಿ ಸರ್ಕಾರವು ಹೆಚ್ಚು ಅನುದಾನವನ್ನು ಕೊಡಬೇಕು. ಅದಕ್ಕಾಗಿ ಸುಮಾರು 13 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಮಾಡಿಸಿ ಸರ್ಕಾರಕ್ಕೆ ಕೊಟ್ಟಿದ್ದೇವೆ. ಸರ್ಕಾರವು ಅದನ್ನು ಮಂಜೂರು ಮಾಡಿರುವುದಿಲ್ಲ. ದಯಮಾಡಿ ಆದನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇವೆ. ಜಮಖಂಡಿ ನಮ್ಮ ಕ್ಷೇತ್ರವಾಗಿದೆ ಅದು sub-division ಇರುವುದರಿಂದ ಇಲ್ಲಿಯವರೆವಿಗೆ Degree College ಆಗಿರುವುದಿಲ್ಲ. ಅಲ್ಲಿ ಕಳೆದ 50 ವರ್ಷದಿಂದ B.Ed., College ಇದೆ. ಆದರೆ ಅಲ್ಲಿಗೆ Degree college ಸಿಕ್ಕಿರುವುದಿಲ್ಲ. ಕಳೆದ 4 ವರ್ಷದಿಂದ degree college ಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಅದರ ಜೊತೆಗೆ Engineering College ಬೇಕೆಂದು ಕೇಳಿದ್ದೇನೆ ಅದು ಕೂಡ ಬಂದಿರುವುದಿಲ್ಲ. ದಯಮಾಡಿ ನಮ್ಮ ಕಡೆಗೆ Engineering college and Degree College ಮಂಜೂರು ಮಾಡಿಸಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಕೊನೆಯದಾಗಿ ಹೇಳುವುದಾದರೆ ಕುಡಚಿ- ಬಾಗಲಕೋಟೆ ರೈಲ್ವೆ ಲೈನ್, ನಾನು ಎಂಪಿಯಾಗಿದ್ದಾಗ ಅದನ್ನು ಮಂಜೂರು ಮಾಡಿಸಿ ಆ ಬಗ್ಗೆ ಸರ್ವೆ ಮಾಡಿಸಿದ್ದೇನೆ, ಇದು ಆಮೆಗತಿಯಲ್ಲಿ ನಡೆಯುತ್ತಿದೆ. ಭೂಸ್ವಾಧೀನ ಪ್ರಕ್ರಿಯೆ ವೇಗವಾಗಿ ಆದರೆ ಆ ಯೋಜನೆಯು ಬೇಗ ಬರುತ್ತದೆ. ಅದನ್ನು ಕೂಡ ನಮ್ಮ ಸರ್ಕಾರದವರು ಅದಷ್ಟು ಕಾಳಜಿ ವಹಿಸಿ ಬೇಗ ಭೂಸ್ವಾಧೀನ ಪ್ರಕ್ರಿಯೆ ಮಾಡಬೇಕೆಂದು ನಾನು ತಮ್ಮ ಮೂಲಕ ಕೇಳುತ್ತೇನೆ. ವಿಶೇಷವಾಗಿ ಬಹಳಷ್ಟು ನಮ್ಮಲ್ಲಿಯ ಜನರು ಜಮಖಂಡಿ ಜಿಲ್ಲೆಯಾಗಬೇಕೆಂದು ಹೋರಾಟ ಮಾಡುತ್ತಿದ್ದಾರೆ. ಜಿಲ್ಲೆಯು ಯಾವಾಗಲೋ ಆಗಬೇಕಾಗಿತ್ತು. ಮಹಾರಾಜರ ಸಂಸ್ಥಾನವನ್ನು ವಿಲೀನ ಮಾಡುವಾಗ ಜಿಲ್ಲೆಯಾಗಬೇಕೆಂಬ ದೆಸೆಯಿಂದ ಹೇಳಿದ್ದರು. ಅದು ಹಾಗೆಯೇ ಇದೆ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಜಮಖಂಡಿ ಜಿಲ್ಲೆಯಾದರೆ ಸಾವಳಗಿ-ಜಮಖಂಡಿ ಸನ್ಮಾನ್ಯ ಬಿ.ಡಿ.ಜತ್ತಿ ಸಾಹೇಬರ ಏನು ಹುಟ್ಟೂರು ಇದೆ, ಅದು ಸಾವಳಗಿ ತಾಲ್ಲೂಕು ಆಗಬೇಕೆಂಬ ದೆಸೆಯಿಂದ ಅಲ್ಲಿಯ ಜನರು, ರೈತರು ಸಾರ್ವಜನಿಕರು ಹೋರಾಟ ಮಾಡುತ್ತಿದ್ದಾರೆ. ಆದಕಾರಣ ಜಮಖಂಡಿಯನ್ನು ಜಿಲ್ಲೆಯನ್ನಾಗಿ ಮಾಡಬೇಕು. ಸಾವಳಗಿಯನ್ನು ತಾಲ್ಲೂಕು ಮಾಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಕೃಷ್ಣ ನದಿ ಇದೆ. ಕುಡಿಯುವ ನೀರಿಗಾಗಿ ಬಹಳ ತೊಂದರೆಯಾಗಿದೆ. ಈಗ ಮಹಾರಾಷ್ಟ್ರದಿಂದ ಕಳೆದ 10-12 ವರ್ಷಗಳಲ್ಲಿ ಸುಮಾರು 7-8 ಸಲ ಮಹಾರಾಷ್ಟ್ರ ಸರ್ಕಾರದಿಂದ ನಮ್ಮ ಸರ್ಕಾರವು ದುಡ್ಡು ಕೊಟ್ಟು ನೀರನ್ನು ಬಿಡಿಸಿಕೊಂಡು ಬಂದಿದೆ. ಕಳೆದ ವರ್ಷ ಮಹಾರಾಷ್ಟ್ರ ಸರ್ಕಾರವು ನಮಗೆ 2 ಟಿಎಂಸಿ ನೀರನ್ನು ಕೊಟ್ಟಿತ್ತು. ನಾವು ಅದಕ್ಕೆ ಪ್ರತಿಯಾಗಿ 2 ಟಿಎಂಸಿ ನೀರು ಅವರಿಗೆ ಸೋಲಾಪುರಕ್ಕೆ ಕುಡಿಯುವ ನೀರಿಗಾಗಿ ಕೊಡಬೇಕಾಗಿತ್ತು. ನಾವು ಇಲ್ಲಿಯವರೆವಿಗೆ ಒಂದು ಟಿಎಂಸಿ ನೀರನ್ನು ವಾಪಸ್ಸು ಕೊಟ್ಟಿದ್ದೇವೆ. ಇನ್ನು ಒಂದು ಟಿಎಂಸಿ ನೀರನ್ನು ವಾಪಸ್ಸು ಕೊಡಬೇಕಾಗಿದೆ. ಅದೇ ನೀರನ್ನು ಕೊಡಬೇಕೆಂದು ಅಲ್ಲಿಯ Secretaryಯವರು ನಮ್ಮ Secretaryಯವರಿಗೆ ಪತ್ರ ಬರೆದಿದ್ದಾರೆ. ನಮಗೆ ಕಾಲುವೆ ಮೂಲಕ ನೀರನ್ನು ಕೊಡುವುದಕ್ಕಾಗುತ್ತಿಲ್ಲ. ಈ ವರ್ಷ ಅವರು ಏನು ಹೇಳುತ್ತಿದ್ದಾರೆಂದರೆ ನೀವು ನೀರನ್ನು ಬೇಡುತ್ತಿದ್ದೀರಿ, ಆದರೆ ನೀವು ನಮಗೆ ನೀರನ್ನು ಕೊಡುವುದಿಲ್ಲ. ಮೊದಲು ನೀವು ನಮಗೆ ನೀರನ್ನು ಬಿಡಿ ಆಮೇಲೆ ನಾವು ನಿಮಗೆ ನೀರನ್ನು ಕೊಡುತ್ತೇವೆನ್ನುವಂತಹ ಮಾತು ಬಂದಿದೆ. ಹೀಗಾಗಿ ನಾವು ಸ್ವಲ್ಪ ಕಷ್ಟದಲ್ಲಿದ್ದೇವೆ. ನಾವು ಅವರಿಗೆ ನೀರು ಕೊಡುವುದಕ್ಕೆ ತೊಂದರೆ ಇದೆ. ಆದ್ದರಿಂದ ಏನೇ ಮಾಡಿ ಮಹಾರಾಷ್ಟ್ರ ಸರ್ಕಾರದ ಜೊತೆಯಲ್ಲಿ ಚರ್ಚೆ ಮಾಡಿ ಮಹಾರಾಷ್ಟ್ರ ಸರ್ಕಾರದವರ ಮನವೊಲಿಸಿ ಅವರಿಂದ 2-3 ಟಿಎಂಸಿ ನೀರನ್ನು ಬಿಡಿಸಿದರೆ ಆ ಭಾಗದ ರೈತರಿಗೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆನ್ನುವಂತಹ ಮಾತನ್ನು ಹೇಳುತ್ತೇನೆ. ಅದರಲ್ಲಿಯೂ ವಿಶೇಷವಾಗಿ ರೈತರ ಸಾಲದ ಬಗ್ಗೆ ಎಲ್ಲರೂ ಹೇಳಿದ್ದಾರೆ. ಈ ಸಾರಿಯ ಬಜೆಟ್‌ನಲ್ಲಿ ಸಾಲ ಮನ್ನಾ ಮಾಡುತ್ತಾರೆಂದು ಬಹಳಷ್ಟು ರೈತರು ಆಸೆ ಇಟ್ಟುಕೊಂಡಿದ್ದರು. ಆದರೆ ಸಾಲ ಮನ್ನಾ ಆಗಲಿಲ್ಲ. ಕಳೆದ ಮೂರು ವರ್ಷಗಳಿಂದ ಬರಗಾಲ ಇರುವುದರಿಂದಾಗಿ ಬಹಳಷ್ಟು ಕಷ್ಟದಲ್ಲಿ ನಮ್ಮ ರೈತರು

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಇದ್ದಾರೆ. ಸರ್ಕಾರವು ಸರಿಯಾದಂತಹ ಸಂದರ್ಭದಲ್ಲಿ ಸಾಲ ಮನ್ನಾ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಆಯಿತು. ಈಗ ಒಂದು ಪ್ರಕಟಣೆ ಇದೆ.

ಶ್ರೀ ಬಿ.ಬಿ. ನಿಂಗಯ್ಯ: ಮಾನ್ಯ ಅಧ್ಯಕ್ಷರೆ, ನಮ್ಮ problem ಹೇಳಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಆಯಿತು. ಈಗ ಒಂದು ಪ್ರಕಟಣೆ ಇದೆ.

**: ಪ್ರಕಟಣೆ:**

ಅಧ್ಯಕ್ಷರು: ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ಈ ಕೆಳಕಂಡ ವಿಧೇಯಕಗಳನ್ನು ದಿನಾಂಕ:24.03.2017ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

1) ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ, ತಿದ್ದುಪಡಿ ವಿಧೇಯಕ 2017
2) ಕರ್ನಾಟಕ ಭೂ ಕಂದಾಯ 2ನೇ ತಿದ್ದುಪಡಿ ವಿಧೇಯಕ 2017
3) ಕರ್ನಾಟಕ ವೃತ್ತಿಶಿಕ್ಷಣ ಸಂಸ್ಥೆಗಳ ( ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ತಿದ್ದುಪಡಿ) ವಿಧೇಯಕ 2017
4) ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕ 2017
5) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ 2017

=====

ಅಧ್ಯಕ್ಷರು: ಹೆಚ್.ಕೆ.ಕುಮಾರಸ್ವಾಮಿಯವರೆ ತಾವು ಮಾತನಾಡಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ(ಸಕಲೇಶಪುರ): ಸನ್ಮಾನ್ಯ ಅಧ್ಯಕ್ಷರೆ.....

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಸಿ.ಟಿ.ರವಿ: ಸನ್ಮಾನ್ಯ ಅಧ್ಯಕ್ಷರೆ, ನಮಗೆ ಮಾತನಾಡುವುದಕ್ಕೆ ಅವಕಾಶ ಇದೆಯಾ ಅಥವಾ ಇಲ್ಲವೇ ಹೇಳಿ.

ಅಧ್ಯಕ್ಷರು: ನೀವು 9 ಗಂಟೆಯ ತನಕ ಕೂಡುವುದಕ್ಕೆ ರೆಡಿ ಇದ್ದರೆ ನೋಡೋಣ.

ಶ್ರೀ ಸಿ.ಟಿ.ರವಿ: ನಾವು ಇನ್ನೂ ಮಾತನಾಡಿಲ್ಲ. ನಾನು ನಿಮ್ಮನ್ನು ಬೆಳಿಗ್ಗೆ ಮಾತನಾಡುವಾಗ ಕೇಳಿದ್ದೆ ಅವಕಾಶ ಕೊಡುತ್ತೇನೆಂದು ಹೇಳಿದ್ದೀರಿ.

ಅಧ್ಯಕ್ಷರು: ಈಗಲೂ ಅವಕಾಶ ಕೊಡುತ್ತೇನೆ. ತಾವು ಕುಳಿತುಕೊಳ್ಳಿ.

ಶ್ರೀ ಸಿ.ಟಿ.ರವಿ: ನಮಗೆ ಅವಕಾಶ ಇದೆಯಾ? ನೀವು ಒಂದು ಕಡೆಯಿಂದ ಹೀಗೆ ಬರುತ್ತೇವೆಂದು ಹೇಳಿದ್ದೀರಿ. ಅದು ಆಗಿದೆ.

ಅಧ್ಯಕ್ಷರು: ನಾನು ಎಲ್ಲರಿಗೂ ಅವಕಾಶ ಕೊಟ್ಟುಕೊಂಡು ಬಂದಿದ್ದೇನೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ರವಿಯವರೆ, ನಾನು 5 ನಿಮಿಷ ಮಾತನಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು): ಈಗ ಕೊನೆಯ ದಿವಸದಲ್ಲಿ ಎಲ್ಲರೂ ಮಾತನಾಡುತ್ತೇನೆಂದು ಹೇಳುತ್ತಿರುವುದು ಕಾಣುತ್ತಿದೆ.

ಅಧ್ಯಕ್ಷರು: ಸಿ.ಟಿ.ರವಿಯವರು ದಿನಾಗಲೂ ಮಾತನಾಡುತ್ತಿದ್ದರು. ಯಾವುದು ಬಿಟ್ಟಿದ್ದಾರೆ. ಎಲ್ಲಾ ದಿವಸವು ಮಾತನಾಡಿದ್ದಾರೆ.

(ಮುಂದು)

ವಿಸ. 27.03.2017/5.20/37/ಎನ್.ಸಿ.ಕೆ/ಹೆಚ್.ಎಸ್

ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಸಕಲೇಶಪುರ): ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರುವಂತಹ ಆಯವ್ಯಯವನ್ನು ಅವಲೋಕಿಸಿ ನೋಡಿದರೆ ಈ ವರ್ಷದ ಕಾರ್ಯಕ್ರಮಗಳಿಗಿಂತ ಕಳೆದ ಸಾರಿ ಮಾಡಿದ ಕಾರ್ಯಕ್ರಮಗಳು ಮತ್ತು ಸಾಧನೆಗಳ ಬಗ್ಗೆ ಹೆಚ್ಚು ಒತ್ತು ಕೊಟ್ಟು ಮಾತನಾಡಿದ್ದಾರೆ. ಕಳೆದ ಸಾರಿ ಮಾಡಿದ ಸಾಧನೆಗಳನ್ನು ಹೋಲಿಸಿ ಈ ಸಾರಿ ಹೊಸ ಕಾರ್ಯಕ್ರಮಗಳನ್ನು ಕೂಡ ಪ್ರಕಟಣೆ ಮಾಡುವಂಥ ಕೆಲಸವನ್ನು ಮಾಡಿದ್ದಾರೆ. ಆದರೆ ಒಂದು ಆತಂಕ ಅಂದರೆ ಯಾವುದೇ ಸರ್ಕಾರದ ಯೋಜನೆಗಳು, ಕಾರ್ಯಕ್ರಮಗಳು ಜಾರಿಯಾಗಬೇಕಾದರೆ ಸಾಕಷ್ಟು

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಸಿಬ್ಬಂದಿ ಇರಬೇಕು, ಸಾಕಷ್ಟು ಬದ್ಧತೆ ಇರಬೇಕು. ಅದು ಅಧಿಕಾರಿಗಳೇ ಇರಲಿ, ಜನಪ್ರತಿನಿಧಿಗಳೇ ಇರಲಿ, ಯಾರಿಗೆ ಆದರೂ ಬದ್ಧತೆ ಇರಬೇಕು. ಇವತ್ತು ಸರ್ಕಾರದಲ್ಲಿ ಸುಮಾರು 2.50 ಲಕ್ಷ ಸಿಬ್ಬಂದಿಯನ್ನು ಖಾಲಿ ಇಟ್ಟುಕೊಂಡು ಇಷ್ಟೊಂದು ಕಾರ್ಯಕ್ರಮಗಳನ್ನು, ಇಷ್ಟೊಂದು ಯೋಜನೆಗಳನ್ನು ಹೇಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಯಾವುದೇ ಇಲಾಖೆ ಇರಬಹುದು ಇವತ್ತು ತಾವು ಹತ್ತಾರು ಹೊಸ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಪ್ರಕಟಣೆ ಮಾಡಿದ್ದೀರಿ. ಆದರೆ ಈ ಕಾರ್ಯಕ್ರಮಗಳನ್ನು ಜಾರಿ ಮಾಡಬೇಕು. ಅದು ಆಹಾರ ಇಲಾಖೆ ಇರಬಹುದು, ಯಾವುದೇ ಇಲಾಖೆ ಇರಬಹುದು, ಇವತ್ತು ಸಾಮಾನ್ಯ ಆಡಳಿತ ಸರಿಯಾದ ರೀತಿಯಲ್ಲಿ ಸುಧಾರಣೆ ಆಗದಿದ್ದರೆ ಯಾವುದೇ ಕಾರ್ಯಕ್ರಮಗಳು ಜಾರಿಯಾಗುವುದಿಲ್ಲ. ಇನ್ನು ಕೂಡ ಬಡವರಿಗೆ ಹೆಚ್ಚಿನ ತೊಂದರೆಯಾಗುತ್ತದೆ ಎನ್ನುವುದನ್ನು ನಾವು ಗಮನಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಈ ಸಾರಿ ವಿಶೇಷ ಘಟಕ ಯೋಜನೆಗೆ 27 ಸಾವಿರ ಕೋಟಿ ರೂಪಾಯಿಗಳಿಗೆ ನಾನು ಹೆಚ್ಚಿಸಿದ್ದೇನೆ ಎಂದು ಘೋಷಣೆಯನ್ನು ಮಾಡಿದ್ದಾರೆ. ಕಳೆದ ಸಾರಿ 2016-17ರಲ್ಲಿ 19.50 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. 2015-16ರಲ್ಲಿ 15,000 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿದ್ದರು. ಇವತ್ತು ಸಾಧನೆಯಾಗಿರುವಂಥದ್ದು ಕೇವಲ 60-65% ಅಷ್ಟೇ ಆಗಿರುವುದು. ಉಳಿದಂಥ ಹಣ ಎಲ್ಲಿಗೆ ಹೋಯಿತು? ಇವತ್ತು ನೀವು ಹಣವನ್ನು ನಿಗದಿ ಮಾಡುತ್ತೀರಿ, ಆದರೆ ಆ ಹಣವನ್ನು ಪೂರ್ತಿ ಬಿಡುಗಡೆ ಮಾಡುವುದಿಲ್ಲ, ಬಿಡುಗಡೆಯಾದಂಥ ಹಣ ಸಹ ಖರ್ಚಾಗುವುದಿಲ್ಲ. ಇದು ನಮ್ಮ ಮೂಲಭೂತ ಪ್ರಶ್ನೆಯಾಗಿದೆ. ಸಾರ್ವಜನಿಕವಾಗಿ ಕೇಳಿದಂಥವರು ರೇಡಿಯೋ, ಟಿವಿ, ಪತ್ರಿಕೆಯವರು ಇರಬಹುದು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಇಷ್ಟೊಂದು ಲಕ್ಷಾಂತರ ಕೋಟಿ, ಸಾವಿರಾರು ಕೋಟಿ ರೂಪಾಯಿಗಳನ್ನು ಸರ್ಕಾರ ಕೊಡುತ್ತಿದೆ ಎಂಬ ಭಾವನೆ ಬರುತ್ತದೆ. ಆದರೆ ಅದು ಖರ್ಚಾದರೆ ಮಾತ್ರ ಅದರ ಉಪಯೋಗವಾಗುವುದು. ಫಲಾನುಭವಿಗಳಿಗೆ ನಿಜವಾಗಿ ಆ ಹಣ ದೊರಕಿದಾಗ ಮಾತ್ರ ಅರ್ಥ ಬರುತ್ತದೆ ಎನ್ನುವುದನ್ನು ಕೂಡ ನಾವು ಮರೆಯಬಾರದು ಅಧ್ಯಕ್ಷರೆ, ಈ ಒಂದು ಅರ್ಥದಲ್ಲಿ ಇವತ್ತು ಅನೇಕ ಕಾರ್ಯಕ್ರಮಗಳಿವೆ ನಿಜ. ಸುಮಾರು 29-30 ಇಲಾಖೆಗಳಿಗೆ ಹಣ ಕೊಡುತ್ತಿದ್ದೀರಿ. ಇವತ್ತು ಅಧಿಕಾರಿಗಳು ಆ ಯೋಜನೆಯನ್ನು ದುರುಪಯೋಗ ಮಾಡುತ್ತಿದ್ದಾರೆ ಎನ್ನುವುದಕ್ಕಿಂತ ಹೆಚ್ಚಾಗಿ ವಿಶೇಷ ಘಟಕ ಯೋಜನೆ ಜಾರಿಯನ್ನು ಸರ್ಕಾರವೇ ಒಂದು ರೀತಿ ದುರುಪಯೋಗ ಮಾಡುತ್ತಿದೆ. ಹಣವನ್ನು

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಯಾವುದಕ್ಕೆ ಖರ್ಚು ಮಾಡಬೇಕು? ಯಾವ್ಯಾವ ಇಲಾಖೆಗಳಿಗೆ ಎಷ್ಟೆಷ್ಟು ಖರ್ಚು ಮಾಡಬೇಕು? ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಅಧಿಕಾರಿಗಳಿಗೂ ಗೊತ್ತಿಲ್ಲ. ಸರ್ಕಾರಕ್ಕೂ ಗೊತ್ತಿಲ್ಲ. ಒಟ್ಟಾರೆ ಆ ವಿಶೇಷ ಘಟಕದ ಯೋಜನೆಯ ಹಣ ಖರ್ಚಾಗಬೇಕು. ಈಗ ಜ್ಯೂನಿಯರ್ ಕಾಲೇಜು ಕಟ್ಟಡ ಕಟ್ಟಿದರೆ, ಪ್ರೌಢಶಾಲೆಯ ಕಟ್ಟಡ ಕಟ್ಟಿದರೆ ಅದು ಹೇಗೆ ವಿಶೇಷವಾಗಿ ಬರುತ್ತದೆ. ಈ ರೀತಿ ಆಗಿದೆ. ವಿಶೇಷ ಘಟಕ ಯೋಜನೆಯ ಹಣವನ್ನು ನಿಮ್ಮ ಪ್ರೌಢ ಶಾಲೆಯ ದುರಸ್ತಿಗಾಗಿ ಕೊಟ್ಟಿದ್ದಾರೆ.

ಶ್ರೀ ತನ್ವೀರ್ ಸೇಠ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು):ಇಲ್ಲ, ಯಾವುದೇ ಹಣ SCP/TSP ಯಲ್ಲಿ ಬರುತ್ತಿಲ್ಲ. ಏಕೆಂದರೆ ಕಾಲೇಜುಗಳಿಗೆ, ಪ್ರೌಢಶಾಲೆಗಳಿಗೆ ಬರುತ್ತಿಲ್ಲ. ಎರಡನೆಯದಾಗಿ ಸರ್ಕಾರದಲ್ಲಿ ನಾನು ಪ್ರಸ್ತಾವನೆಯನ್ನು ಸಮಾಜ ಕಲ್ಯಾಣ ಇಲಾಖೆಗೆ.. ಶೇಕಡ 42 ರಷ್ಟು ನಮ್ಮಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಮಕ್ಕಳಿದ್ದಾರೆ. ಆ ಹಣ ಸದ್ಬಳಕೆ ಆಗುತ್ತದೆ ಎಂದು ಕೇಳಿದ್ದೇನೆಯೇ ವಿನ: ಬೇರೆ ರೀತಿ ಆಗುತ್ತಿಲ್ಲ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ:ವಿಶೇಷ ಘಟಕ ಯೋಜನೆ ಎಂದರೇನು? ಯಾರಿಗೆ ಕೊಡಬೇಕು? ಸಾಮಾನ್ಯ ಯೋಜನೆಗಳಿಗೆ ಹಾಕುವಂಥ ಹಣವನ್ನು ವಿಶೇಷ ಘಟಕ ಯೋಜನೆಗೆ ಏಕೆ ಕೊಡಬೇಕು?

ಶ್ರೀ ತನ್ವೀರ್ ಸೇಠ್: ಇಲ್ಲ. ಆ ರೀತಿ ಕೊಟ್ಟಿಲ್ಲ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ನಾನು ಕೊಡುತ್ತೇನೆ, ನಿಮ್ಮ ಇಲಾಖೆಯಲ್ಲಿಯೇ ಕೊಟ್ಟಿದ್ದೀರಿ.

ಶ್ರೀ ತನ್ವೀರ್ ಸೇಠ್: ಇಲ್ಲ,

ಶ್ರೀ ಬಿ.ಬಿ.ನಿಂಗಯ್ಯ: Sir, that is being misused.

ಶ್ರೀ ತನ್ವೀರ್ ಸೇಠ್: No, I will tell you.

ಶ್ರೀ ಬಿ.ಬಿ.ನಿಂಗಯ್ಯ: With evidence we are speaking. ನಿಮಗೆ ಆಧಾರಗಳನ್ನು ಬೇಕಾದರೆ ಕೊಡುತ್ತೇವೆ. That is being misused.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ನಾನು ಒಬ್ಬ ಶಾಸಕನಾಗಿ ಸ್ವಾಗತ ಮಾಡುತ್ತೇನೆ.

ಶ್ರೀ ತನ್ವೀರ್ ಸೇಠ್: ಮಾನ್ಯ ಸದಸ್ಯರಾದ ಕುಮಾರಸ್ವಾಮಿಯವರ ಆತಂಕ ನನಗೆ ಗೊತ್ತಾಗುತ್ತದೆ. ನಾನು ಒತ್ತಡ ಮಾಡಿದ ಮೇಲೆ..

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಸರ್ ಆಮೇಲೆ ಉತ್ತರ ಕೊಡಿ.

ಶ್ರೀ ತನ್ವೀರ್ ಸೇಠ್: ಒಂದು ನಿಮಿಷ, 57 ಮೀಸಲು ಕ್ಷೇತ್ರಗಳಿವೆ, ಆ ಮೀಸಲು ಕ್ಷೇತ್ರಗಳಲ್ಲಿ ಮಾನ್ಯ ಶಾಸಕರಿಗೆ ಏನು SCP/TSP ಹಣವನ್ನು ಕೊಟ್ಟಿದ್ದೇವೆ. ಅದರಲ್ಲಿ ಶಾಲೆಗಳನ್ನು ಸಹ ತೆಗೆದುಕೊಳ್ಳಿ ಎಂದು ಹೇಳುವಂಥ ಸಂದರ್ಭದಲ್ಲಿ ಕೆಲವು ಕಡೆ ತೆಗೆದುಕೊಂಡಿದ್ದಾರೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: Correct.

ಶ್ರೀ ತನ್ವೀರ್ ಸೇಠ್: ಅದು ಮೀಸಲು ಕ್ಷೇತ್ರದಲ್ಲಿ ತೆಗೆದುಕೊಂಡಿದ್ದಾರೆ, ಸಾಮಾನ್ಯ ಕ್ಷೇತ್ರದಲ್ಲಿ ತೆಗೆದುಕೊಂಡಿಲ್ಲ. ಇವತ್ತು ನಿಮ್ಮ ಕಣ್ಣು ಮುಂದೆಯೇ ಆ ಹಣದ ಸದ್ಬಳಕೆ ಆದರೆ, ಅಕ್ಷರದ ಜ್ಞಾನ ನಮ್ಮ ಮಕ್ಕಳಲ್ಲಿ ಬರುವಂಥದ್ದು ಆದರೆ ಅದು ಪರಿಶಿಷ್ಟ ಜಾತಿ/ವರ್ಗದ ಮಕ್ಕಳಲ್ಲಿಯೇ ಬರಲಿ. ತಪ್ಪೇನಾಗುವುದಿಲ್ಲ. ಆದರೆ ಹಣ ಸದ್ಬಳಕೆ ಆಗುವಂಥದ್ದಕ್ಕೆ ಬೇರೆ ಬೇರೆ ಯೋಜನೆಗಳಲ್ಲಿ ಆಗುತ್ತಿರುವ ವಿಚಾರದ ಬಗ್ಗೆ ನೀವೇನು ಹೇಳುತ್ತಿದ್ದೀರಿ. ಇದು ನಿಮ್ಮ ಕಣ್ಣು ಮುಂದೆ ಆಗುವಂಥ ಕೆಲಸವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈ ಸಾರಿ ಕೆಲವು ವಿಶೇಷವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ ಅದನ್ನು ಸ್ವಾಗತಿಸುತ್ತೇನೆ. ಹಾಸ್ಟೆಲ್‌ಗಳಿಗೆ ಇವತ್ತು ದರ ಹೆಚ್ಚು ಮಾಡಿದ್ದೀರಿ. ಸುಮಾರು 800-00 ರೂಪಾಯಿಗಳಿರುವುದನ್ನು 1400-00 ರೂಪಾಯಿಗಳಿಗೆ ಹೆಚ್ಚು ಮಾಡಿದ್ದೀರಿ. ಇದು ಅತ್ಯಂತ ಸ್ವಾಗತಾರ್ಹ ಕ್ರಮ, ಅದನ್ನು ನಾನು ಒಪ್ಪುತ್ತೇನೆ. ಇವತ್ತು ದಿನಕ್ಕೆ 40-00 ರೂಪಾಯಿಗಳು ಬರುತ್ತದೆ. ಈಗ ಜಾಸ್ತಿ ಬರುತ್ತದೆ ಅದರ ಅಗತ್ಯತೆ ಇತ್ತು. ಅಂಥವನ್ನೆಲ್ಲಾ ನಾನು ಇಲ್ಲವೆಂದು ಹೇಳುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ (ಮಾನ್ಯ ಕಂದಾಯ ಸಚಿವರು): ತಾವು ಹಿರಿಯ ಸದಸ್ಯರಿದ್ದೀರಿ. ಮೊದಲನೆಯದಾಗಿ ಶಾಸನಬದ್ಧವಾಗಿ ಆ ವರ್ಗದ ಜನರಿಗೆ ಇಷ್ಟೇ ಹಣವನ್ನು ಇಡಬೇಕು ಎಂದು ತೀರ್ಮಾನವಾಗಿದೆ. ಆ ಪ್ರಕಾರ ಹಣ ಇಟ್ಟಿದೆ. ನೀವು ಹೇಳಿದ ಪ್ರಕಾರ 27 ಸಾವಿರ ಕೋಟಿ ರೂಪಾಯಿಗಳು ಇದೆ. ಇರಲಿ, ನಾನು ನಿಮಗೆ ಕೊಡುವ ಸಲಹೆ ಏನೆಂದರೆ, ಈ ಹಣವನ್ನು ಯಾವರೀತಿ ಖರ್ಚು ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರಕ್ಕೆ ಸಲಹೆ ಕೊಡಿ. ಏಕೆಂದರೆ ಅನಾವಶ್ಯಕವಾಗಿ ಕೆಲವು ಯೋಜನೆಗಳಲ್ಲಿ ಹಣ ಉಳಿಯುತ್ತದೆ. ಉದಾಹರಣೆಗೆ ಗಂಗಾ ಕಲ್ಯಾಣ ಒಂದು ಕ್ಷೇತ್ರಕ್ಕೆ 10 ಕೊಡುತ್ತಾರೆ,

50 ಕೊಡಲಿ. ಏಕೆಂದರೆ productive oriented programme ಅನ್ನು ತೆಗೆದುಕೊಳ್ಳಿ ಎಂದು ಒತ್ತಾಯ ಮಾಡಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಅತ್ಯಂತ ಅನುಭವಿ ಹಿರಿಯ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪ ಹೇಳಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಈಗ ಸರ್ಕಾರ ಇನ್ನೊಂದು ಸ್ಕೀಮ್ ಮಾಡಿದೆ ಅದನ್ನು ನಾನು ಸ್ವಾಗತಿಸುತ್ತೇನೆ. ಈಗ ತಾಂತ್ರಿಕ ವಿದ್ಯಾಲಯಗಳಲ್ಲಿ ಅದು ಮೆಡಿಕಲ್ ಕಾಲೇಜುಗಳಿರಬಹುದು, ಪಾಲಿಟೆಕ್ನಿಕ್ ಇರಬಹುದು, ಇಂಜಿನಿಯರಿಂಗ್ ಕಾಲೇಜುಗಳಿರಬಹುದು, ಯಾವುದೇ ವೃತ್ತಿನಿರತ ವಿದ್ಯಾರ್ಥಿಗಳಿಗೆ ಈ ಸಾರಿ ನೀವು laptop ಕೊಡುತ್ತೇವೆಂದು ಹೇಳಿದ್ದೀರಿ. I agree and I welcome it. ಅದು ಒಳ್ಳೆಯ ಸ್ಕೀಮ್ ಅಂಥದ್ದನ್ನು ಮಾಡಿ. ಅಂಬೇಡ್ಕರ್ ಅಭಿವೃದ್ಧಿ ನಿಗಮ, ವಾಲ್ಮೀಕಿ ಅಭಿವೃದ್ಧಿ ನಿಗಮ, ಅಲ್ಪಸಂಖ್ಯಾತರ ನಿಗಮ, ಹಿಂದುಳಿದ ವರ್ಗಗಳ ನಿಗಮಕ್ಕೆ ತಾವು ಮಾಡಿದ್ದೀರಲ್ಲಾ, ನೀವು ಭೌತಿಕ ಗುರಿಯನ್ನು ಹೆಚ್ಚು ಮಾಡಿ. ಅದರ ಮೂಲಕ ಹಣವನ್ನು ಖರ್ಚು ಮಾಡಿ. ನಮಗೆ 20-25 ಕೊಡುತ್ತೀರಿ. ಸರ್, 1600-2000 ಗಳವರೆಗೆ ನಿರುದ್ಯೋಗಿಗಳಿಂದ ಅರ್ಜಿಗಳು ಬರುತ್ತವೆ. ದಯಮಾಡಿ ಅದಕ್ಕೆ ಈ ಹಣವನ್ನು ಖರ್ಚು ಮಾಡಿ. ಕೇಂದ್ರದಲ್ಲಿ National Finance Development Corporation ಎಂದು ಇದೆ. ಸಾಹೇಬರು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಾಗಿದ್ದರು, ಆದರೆ ಅದನ್ನು ಇಲ್ಲೇಕೆ ಮಾಡಿಲ್ಲ? ಇಲ್ಲಿ ಕೇವಲ ಅಭಿವೃದ್ಧಿ ನಿಗಮ ಅಷ್ಟೇ ಇದೆ. Finance Development Corporation ಎಂದು convert ಆಗಬೇಕು. ಅದೇ ಬ್ಯಾಂಕ್ ಆಗಬೇಕು. ಈ ಹಣ ಪ್ರತಿ ವರ್ಷ 7-8 ಸಾವಿರ ರೂಪಾಯಿಗಳು ಉಳಿಯುತ್ತಿದೆ. ಆ ದುಡ್ಡನ್ನು ಕಾರ್ಪೋರೇಷನ್‌ಗೆ ಹಾಕಿ, ಅರ್ಜಿಗಳನ್ನು ಕರೆಯಿರಿ. ಅವರಿಗೆ ಕೊಡಿ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸಂಬಂಧಪಟ್ಟ ಲಕ್ಷಾಂತರ ನಿರುದ್ಯೋಗಿಗಳು ಇದ್ದಾರೆ. ಹಿಂದುಳಿದ ವರ್ಗದಲ್ಲಿ ಇದ್ದಾರೆ, ಅಲ್ಪಸಂಖ್ಯಾತರಲ್ಲಿ ಇದ್ದಾರೆ. ನೀವೆಷ್ಟು ಕೊಡುತ್ತೀರಿ? ಒಂದೊಂದು ಕ್ಷೇತ್ರಕ್ಕೆ 10-10 ಕೋಟಿ, 5-5 ಕೋಟಿ ರೂಪಾಯಿಗಳು ಕೊಡುತ್ತೀರಿ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಮಹಿಳೆಯರಿಗೆ ಸ್ತ್ರೀಶಕ್ತಿ ಸಂಘಗಳಿಗೆ ಕೊಡಿ. ಸ್ವಸಹಾಯ ಸಂಘಗಳಿಗೆ ಕೊಡಿ. ನಮ್ಮ ಹತ್ತಿರ ಅಣ್ಣಾ ಎಂದು ಅರ್ಜಿಗಳನ್ನು ಹಿಡಿದುಕೊಂಡು ಬರುತ್ತಾರೆ. ನಾವು ಅವರಿಗೆ ಹಣ ಬಂದಿರುವುದೇ ಕಡಿಮೆ ಎಂದು ಹೇಳುತ್ತೇವೆ. ನಾವು ಅವರಿಗೆ ಇಲ್ಲವೆಂದು strict ಆಗಿ ಹೇಳುವುದಕ್ಕಾಗುವುದಿಲ್ಲ. ಮುಂದಿನ

ವರ್ಷ ನೋಡೋಣ ಹೋಗಮ್ಮ ಎಂದು ಕಳುಹಿಸುತ್ತೇವೆ. ಅವರು ಪುನ: ಬಂದು ಮುಂದಿನ ವಾರ ಬಾ ಎಂದಿದ್ದಿರಿ, ಮುಂದಿನ ತಿಂಗಳು ಬಾ ಎಂದಿದ್ದಿರಿ ಎಂದು ಆ ಹೆಂಗಸರು ಬರುತ್ತಾರೆ. ದಯಮಾಡಿ ಅಂಥವರಿಗೆ ಮಾಡಿ ಎಂದು ನಾನು ಹೇಳುತ್ತಿರುವುದು. ಈ ರೀತಿಯ ಕಾರ್ಯಕ್ರಮಗಳಿಗೆ ಹಣವನ್ನು ಖರ್ಚು ಮಾಡಿ ಎಂದು ನಾನು ಹೇಳುತ್ತಿರುವುದು. ಆಗ ಹಣ ಹೇಗೆ ಉಳಿಯುತ್ತದೆ? ಆಮೇಲೆ ಹಣವನ್ನು ಮಾರ್ಚ್ ತಿಂಗಳಿನಲ್ಲಿ ಬಿಡುಗಡೆ ಮಾಡುವುದು. ಫೆಬ್ರವರಿ ತಿಂಗಳಿನಲ್ಲಿ ತಾವು ಬಿಡುಗಡೆ ಮಾಡುತ್ತೀರಿ. ಆಗ ಇನ್ನೂ action plan approve ಆಗಿರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಗಂಗಾ ಕಲ್ಯಾಣ ಯೋಜನೆಯಲ್ಲಿ ಹೋದ ವರ್ಷದ್ದೇ ಇನ್ನೂ implement ಆಗಿಲ್ಲ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಹೋದ ವರ್ಷದ್ದು ಇನ್ನು implement ಆಗಿಲ್ಲ. ಎರಡು ವರ್ಷಗಳ ಬೋರ್‌ವೆಲ್ ಕೊರೆಯುವುದು ಇನ್ನೂ ಹಾಗೆಯೇ ಬಾಕಿ ಇದೆ. ಪ್ರವಾಸೋದ್ಯಮ ಇಲಾಖೆಯ ಸಚಿವರು ಇಲ್ಲ. ಪ್ರವಾಸೋದ್ಯಮ ಇಲಾಖೆಯವರು ಬಂದಿರುವರೋ ಇಲ್ಲವೋ ಗೊತ್ತಿಲ್ಲ. ನಮ್ಮ ಹಾಸನ ಜಿಲ್ಲೆಯಲ್ಲಿ 2013-14, 2014-15 ಎರಡು ವರ್ಷಗಳ ಪ್ರವಾಸಿ ಟ್ಯಾಕ್ಸಿಗಳನ್ನು ಇನ್ನು ಕೂಡ ವಿತರಣೆ ಮಾಡಿಲ್ಲ. ಎಲ್ಲಾ ಕಡೆ ಹಾಗೇ ಇದೆ. ಏನು problem? Problem ಏನೆಂದು ಹೇಳಬೇಕಲ್ಲವೇ? ಏಕೆ ಈ ಯೋಜನೆ ವಿಳಂಬವಾಗುತ್ತಿದೆ. ಒಂದು ಕೊಡುತ್ತಾರೆ. ಅದಕ್ಕೆ ನಾವೇನು ಅಧ್ಯಕ್ಷರುಗಳಲ್ಲ, ಜಿಲ್ಲಾಧಿಕಾರಿಯವರೇ ಅಧ್ಯಕ್ಷರು. ಅಧಿಕಾರಿಗಳೆ selection ಮಾಡುವುದು. ಅಲ್ಲಿಗೆ ಬಂದವರು ಹೋಗಿ ಬರೆದುಕೊಂಡು ಬರುತ್ತಾರೆ. ಅಲ್ಲಿಯೂ ಏನೋ ಅವ್ಯವಹಾರ ನಡೆಯುತ್ತಿದೆ. ಅಂಥ ಸ್ಕೀಮ್ಸ್ ಕೊಡಿ. ಅದು ಸರಿಯಿದೆ. ಮೂರು ವರ್ಷಗಳಿಂದ ಇನ್ನೂ ಏಕೆ ಕೊಡದೇ ಇದ್ದೀರಿ? ಈ ರೀತಿ ಒತ್ತಾಯ ಮಾಡುತ್ತೇನೆ, ಸಮಾಜ ಕಲ್ಯಾಣ ಇಲಾಖೆಯ ಸಚಿವರು ಹೋದರು. ಹಣವನ್ನು ಈ ರೀತಿ ಸ್ಕೀಮ್ ಕೊಡುವುದಕ್ಕೆ ಹಾಕಿ ಎಂದು ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ನಮ್ಮ ಕೊಡಗು ಜಿಲ್ಲೆಗೆ 50.00 ಕೋಟಿ ರೂಪಾಯಿಗಳ ವಿಶೇಷ ಅನುದಾನವನ್ನು ಕೊಟ್ಟಿದ್ದಾರೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಮಲೆನಾಡು ಭಾಗದ ರಸ್ತೆಗಳಿಗೆ ಅಗತ್ಯವಿದೆ. ಆದರೆ ಅದನ್ನು release ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: ಒಂದು ನಿಮಿಷ, 4 ವರ್ಷಗಳಿಂದ 50.00 ಕೋಟಿ ರೂಪಾಯಿಗಳೆಂದು declare ಮಾಡಿ ಇದುವರೆಗೆ 41.00 ಕೋಟಿ ರೂಪಾಯಿಗಳು ಮಾತ್ರ ಬಂದಿರುವುದು. ನಾಲ್ಕು ವರ್ಷಗಳಿಂದ ಬರಲೇ ಇಲ್ಲ.

ಶ್ರೀ ಬಿ.ಬಿ.ನಿಂಗಯ್ಯ: ಕೊಡಗು ಜಿಲ್ಲೆಗೆ ಕೊಡಲಿ, ನಮ್ಮದು ಮಲೆನಾಡು ಪ್ರದೇಶ ನಮಗೂ ಸೇರಿಸಿ ಕೊಡಲಿ ಎಂದು ನಮ್ಮ ಕೋರಿಕೆ ಇದೆ.

(ಗೊಂದಲ)

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ನಾವು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿದ್ದೇವೆ. ಅಪ್ಪಚ್ಚುರಂಜನ್‌ರವರೇ ನಮ್ಮದು ಸಹ catchment area. ನಮ್ಮ ಏರಿಯಾದಲ್ಲಿ ಮಳೆ ಬರುವುದರಿಂದಲೇ ಇವತ್ತು ಜಲಾಶಯಗಳು ತುಂಬಿ ಸಮಸ್ಯೆಗಳು ಪರಿಹಾರವಾಗುವುದು. ಕೊಡಗು ಜಿಲ್ಲೆಗೆ ಕೊಟ್ಟಿರುವುದಕ್ಕೆ ಸ್ವಾಗತ ಮಾಡುತ್ತೇನೆ. ಹಿಂದೆ ಚಿಕ್ಕಮಗಳೂರು ಜಿಲ್ಲೆಗೆ ಕೊಟ್ಟಿರುವುದಕ್ಕೆ ಸ್ವಾಗತ ಮಾಡುತ್ತೇನೆ, ಸಕಲೇಶಪುರ ತಾಲ್ಲೂಕಿಗೆ ಏಕೆ ಕೊಡುತ್ತಿಲ್ಲ? ಕನಿಷ್ಠ 10.00 ಕೋಟಿ ರೂಪಾಯಿಗಳನ್ನು ಆ ತಾಲ್ಲೂಕಿಗೆ ಕೊಡಿ ಎಂದು ನಾನು ಕೇಳಿದ್ದೇನೆ. ಇಲ್ಲಪ್ಪ ಕುಮಾರಸ್ವಾಮಿ ನಿನಗೆ ಗೊತ್ತಿಲ್ಲ. ಮಳೆ ಅಲ್ಲಿ ಮೇಲೆ ಬರುತ್ತದೆ ಎಂದು ಹೇಳಿದರು. ಮಳೆ ಸಕಲೇಶಪುರದ ಮೂಲಕ ಬಂದು ಹೇಮಾವತಿ, ಕೆ.ಆರ್.ಎಸ್. ಜಲಾಶಯಗಳು ತುಂಬುವುದು. ಇನ್ನೆಲ್ಲಿಂದ ನೀರು ಬರುತ್ತದೆ? ಒಂದೊಂದು ಸಾರಿ ನಮಗೆ ಏನು ಅನ್ನಿಸುತ್ತದೆ ಗೊತ್ತೇ? ನಮಗೆ ನೀವೆಲ್ಲಾ ಸಹಾಯ ಮಾಡದೇ ಇರುವುದನ್ನು ನೋಡಿದರೆ `ಮಾಡಿದ್ದು ಉಣ್ಣೋ ಮಹರಾಯ` ಎಂದು ಅನುಭವಿಸಲಿ ಬಿಡಿ ಎಂದು ಹೇಳಬೇಕೆನ್ನಿಸುತ್ತದೆ. ಇವತ್ತು ನಮಗೆ ಗೊತ್ತಾಗುತ್ತಿದೆ. ಮಲೆನಾಡಿನಲ್ಲಿಯೂ ಕೂಡ ಪರಿತಾಪವಿದೆ. ಎತ್ತಿನಹೊಳೆ ಯೋಜನೆ ಮಾಡುತ್ತಿದ್ದೀರಿ, ನನಗೆ ಮಾತನಾಡಲಿಕ್ಕೆ ಅಧ್ಯಕ್ಷರು time ಕೊಡುತ್ತಿಲ್ಲ. ಹಾಗಾಗಿ ನಾನು ಅದರ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ. ಅರಣ್ಯ ಇಲಾಖೆಯ ಬಗ್ಗೆ ಒಂದು ವಿಷಯ ಮಾತನಾಡಿ ಮುಗಿಸುತ್ತೇನೆ. ನಮ್ಮ ಮಂತ್ರಿಗಳು ಇಲ್ಲ.

(ಮುಂದು)

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

27.03.2017/5.30(38)DL.HS

ಶ್ರೀ ಹೆಚ್.ಕೆ.ಕುಮಾರಸ್ವಾಮಿ:(ಮುಂದು. . . . .)

ಮಾನ್ಯ ಅಧ್ಯಕ್ಷರೆ, ಆನೆ ದಾಳಿ ತಡೆಯುವುದಕ್ಕಾಗಿ ಅನೇಕ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಅವು ಯಾವುದಕ್ಕೂ ಪ್ರಯೋಜನಕ್ಕೆ ಬರುವುದಿಲ್ಲ. ಮಾನ್ಯ ಬೋಪಯ್ಯ ಅವರು ರೈಲು ಹಳಿಗಳನ್ನು ಉದ್ಘಾಟನೆ ಮಾಡಿದ್ದಾರೆ ಎಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಸೋಲಾರ್ ಬಗ್ಗೆ ಹೇಳಿದ್ದೀರಿ. ಅದು ಯಾವುದೂ ಸರಿಯಾಗಿ ಆಗುತ್ತಿಲ್ಲ. ಆನೆ ಕಾರಿಡಾರ್ ಮಾಡುವಂತಹ ಒಂದು ಯೋಜನೆ ನನ್ನ ಕ್ಷೇತ್ರದಲ್ಲಿ ತಯಾರಾಯಿತು. 2,000 ಚಿಲ್ಲರೆ ಎಕರೆ ಖಾಸಗಿ ಅವರ ಜಮೀನು ಹಾಗೂ 20,000 ಎಕರೆ ಅರಣ್ಯ ಮತ್ತು ಕಂದಾಯ ಇಲಾಖೆಯ ಜಮೀನನ್ನು ಕೊಡುವುದು ಎಂದು ತೀರ್ಮಾನ ಆಗಿದೆ. ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಗೊತ್ತಿಲ್ಲ. 2016-17ನೇ ಬಜೆಟ್‌ನಲ್ಲಿ ಆನೆ ಕಾರಿಡಾರ್ ಅನ್ನು ಮಾಡುವುದಕ್ಕಾಗಿ ಸಮೀಕ್ಷೆಗೆ ರೂ. 20 ಕೋಟಿಗಳನ್ನು ಇಟ್ಟಿದ್ದೇವೆ ಎಂದು ಹೇಳಿದ್ದಾರೆ. ಆ ಹಣ ಇಟ್ಟಿದ್ದ ಉದ್ದೇಶ ಈಗ ಏನಾಗಿದೆ ಎಂದರೆ, 'ಪ್ರಸಕ್ತ 2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವ ರೂ. 20 ಕೋಟಿ ಅನುದಾನವನ್ನು ಕೊಡಗು ವೃತ್ತ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಹಾಗೂ ಚಾಮರಾಜನಗರ ವೃತ್ತ ವ್ಯಾಪ್ತಿಯಲ್ಲಿ ಮತ್ತಿತರ ಆನೆಯ ಮೊಗಸಾಲೆಗಳಲ್ಲಿ ಬರುವ ಅರಣ್ಯದಲ್ಲಿರುವ ಖಾಸಗಿ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಉಪಯೋಗಿಸತಕ್ಕದ್ದು'. ನಿಮಗೆ shift ಆಗಿದೆ. ಇದು ಮಾಡಿದ್ದ ಉದ್ದೇಶ ಏನು? ಆಗುತ್ತಿರುವುದು ಏನು? ಇವತ್ತಿನ ದಿವಸ ಕಾಂಫೈರ್ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿ ಹಣ ಇದೆ. ಏತಕ್ಕಾಗಿ ಆ ಹಣವನ್ನು ಬಳಸಿಕೊಳ್ಳುತ್ತಿಲ್ಲ? ಇವತ್ತು ಒಂದು ಸಭೆಯನ್ನು ಕರೆದಿದ್ದರು. ನನಗೆ ಕಣ್ಣೊರೆಸುವ ಸಲುವಾಗಿ ಆ ಸಭೆಯನ್ನು ಕರೆಯಲಾಗಿತ್ತು ಎಂದು ಅನ್ನಿಸುತ್ತಿದೆ. ನಾವು ಒಂದು ಮೀಟಿಂಗ್ ಕರೆದಿದ್ದೆವು, ಜನಪ್ರತಿನಿಧಿಗಳನ್ನು ಕರೆದಿದ್ದೆವು, ರಿಜಿಸ್ಟರ್‌ನಲ್ಲಿ ಸಹಿ ಹಾಕಿದ್ದಾರೆ ನೋಡಿ ಎಂದು ಹೇಳುತ್ತಾರೆ. ಮಾನ್ಯ ಬೋಪಯ್ಯನವರು, ಮಾನ್ಯ ಅಪ್ಪಚ್ಚು ರಂಜನ್, ಮಾನ್ಯ ಜೀವರಾಜ್ ಅವರು ಬಹಳ ತರ್ಕಬದ್ಧವಾಗಿ ಮಾತನಾಡಿದರು. ಆ ಸಂದರ್ಭದಲ್ಲಿ ನಮ್ಮ ಅರಣ್ಯ ಸಚಿವರು ಇದ್ದರು. ಅವರಿಗೆ ಈ ಸಭೆ ಪ್ರಯೋಜನ ಇಲ್ಲವೆಂದು ಗೊತ್ತಾಯಿತು. ಅದಕ್ಕೆ ಅವರು ಬುದ್ಧಿವಂತಿಕೆಯಲ್ಲಿ ಮಾತನಾಡಲಿಲ್ಲ. ಸುಮ್ಮನೆ ಏಕೆ ಈ ತರಹದ ಕೆಲಸವನ್ನು ಮಾಡುತ್ತಿದ್ದೀರಿ? ದಯವಿಟ್ಟು, ಆನೆ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾರಿಡಾರ್‌ಗೆ ಏನು ಹಣ ಅಗತ್ಯ ಇದೆ ಆ ಹಣವನ್ನು ಬಿಡುಗಡೆ ಮಾಡಬೇಕು. ಇಲ್ಲವಾದರೆ, ನಾನು, ಮಾನ್ಯ ನಿಂಗಯ್ಯ, ಬೋಪಯ್ಯ ಇರಬಹುದು. . . ಅದನ್ನು ಯಾರ ಕೈಯಲ್ಲಿಯೂ explain ಮಾಡುವುದಕ್ಕೆ ಆಗುವುದಿಲ್ಲ. ನಾವು ಆನೆ ದಾಳಿಯಿಂದ ಸತ್ತಿರುವವರ ಜಾಗಕ್ಕೆ ಹೋದ ಸಂದರ್ಭದಲ್ಲಿ ಅದನ್ನು ಅನುಭವಿಸುವವರಿಗೆ ನಮಗೆ ಗೊತ್ತು. ಅಲ್ಲಿಯ ಪರಿಸ್ಥಿತಿ ಶಾಸಕನಾಗಿರುವ ನನಗೆ ಗೊತ್ತು.

ಶ್ರೀ ಕೆ.ಜಿ.ಬೋಪಯ್ಯ(ವಿರಾಜಪೇಟೆ): ಮಾನ್ಯ ಅಧ್ಯಕ್ಷರೆ, ನಮ್ಮ ಕಡೆಯಲ್ಲಿ ಅಲ್ಪಸಂಖ್ಯಾತ ಬಂಧುಗಳು ಶಾಲೆಗೆ ಹೋಗುವುದೇ ಕಷ್ಟ. ಶುಕ್ರವಾರದಂದು 19 ವರ್ಷದ ಒಂದು ಹುಡುಗಿ ತನ್ನ ಅಣ್ಣನ ಜೊತೆ ಸ್ಕೂಟರಿನಲ್ಲಿ ಕಾಲೇಜಿಗೆ ಹೋಗುತ್ತಿದ್ದಳು. ಮೂರು ಆನೆಗಳು all of a sudden ಬಂದು attack ಮಾಡಿದೆ. ಗಾಡಿಯಲ್ಲಿ ಕುಳಿತುಕೊಂಡಿರುವವರ ಪರಿಸ್ಥಿತಿ ಕೊಂಬೆ ಮುರಿದು ಹೋದಂತಹ ಪರಿಸ್ಥಿತಿ ಆಗಿತ್ತು. ಆ ಹುಡುಗಿ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಹುಡುಗಿ. ಆ ಹುಡುಗಿ ಕಾಲೇಜಿನಲ್ಲಿ rank holder ಆಗಿದ್ದಳು. ಅಪರೂಪಕ್ಕೆ ಈ ತರಹ ಘಟನೆ ಆಗುತ್ತದೆ. ಅವರು ಕೂಲಿ ಕೆಲಸ ಮಾಡುವವರು. ಆ ಕುಟುಂಬದ ಪರಿಸ್ಥಿತಿ ಏನು? ಆನೆಗಳದ್ದೇ ಕಾಟ. ಆ ಕುಟುಂಬಕ್ಕೆ ರೂ.2 ಲಕ್ಷ, ರೂ. 5 ಲಕ್ಷ ಕೊಟ್ಟರೆ ಮುಗಿದುಹೋಯಿತೇ? ಇಂಥ ಪ್ರತಿಭಾವಂತ ಹುಡುಗಿ ಮೇಲೆ ಈ ರೀತಿ ಆನೆ ದಾಳಿ ನಡೆದಿದೆ. ನನಗೆ ಏನು ಆಗುತ್ತಿದೆ ಎಂದು ಗೊತ್ತಾಗುತ್ತಿಲ್ಲ. ಸರ್ಕಾರ ಕೇವಲ ಘೋಷಣೆ ಮಾಡುತ್ತದೆ ಅಷ್ಟೇ. ಒಂದು ರೂಪಾಯಿ ಸಹ ಖರ್ಚು ಮಾಡುವುದಂತೂ ಇಲ್ಲ. ಈ ಪರಿಸ್ಥಿತಿ ನಮ್ಮ ಮಲೆನಾಡು ಭಾಗದ ಸಕಲೇಶಪುರದಲ್ಲಿಯೂ ಇದೆ. ಈ ಬಜೆಟ್ ಅಧಿವೇಶನ ಪ್ರಾರಂಭ ಆದಮೇಲೆ ನನ್ನ ಕ್ಷೇತ್ರದಲ್ಲಿ ಮೂರು ಜನರ ಮೇಲೆ ಆನೆ ದಾಳಿ ಮಾಡಿದೆ.

ಅಧ್ಯಕ್ಷರು: ಮಾನ್ಯ ಕುಮಾರಸ್ವಾಮಿ ಅವರೆ, conclude ಮಾಡಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಮೂರು ಜನ ಸತ್ತುಹೋಗಿದ್ದಾರೆ. ಬೆಳಿಗ್ಗೆ, ಸಂಜೆ ಅಥವಾ ಮಧ್ಯರಾತ್ರಿಯಲ್ಲಿ ಫೋನ್ ಬಂದರೆ ಏನಾದರೂ ಒಂದು ಅನಾಹುತ ಆಗಿರುತ್ತದೆ. ಆ ತರಹದ ಸ್ಥಿತಿಯಲ್ಲಿ ನಾವು ಬದುಕುತ್ತಿದ್ದೇವೆ. ದಯಮಾಡಿ, ಅದಕ್ಕೆ ಒಂದು ಶಾಶ್ವತ ಪರಿಹಾರ ಕಂಡುಹಿಡಿಯಬೇಕೆಂದು ಮನವಿ ಮಾಡುತ್ತೇನೆ. ವೈದ್ಯರ ನೇಮಕಾತಿ ಮತ್ತು ಅರೆಕಾಲಿಕ ವೈದ್ಯರ ನೇಮಕಾತಿ ಬಗ್ಗೆ ನಾವು ಹೇಳುತ್ತಿದ್ದೇವೆ. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಮಾನ್ಯ ಕೆ.ಆರ್.ರಮೇಶ್‌ಕುಮಾರ್ ಅವರು ಪ್ರಯತ್ನ ಮಾಡುತ್ತಿದ್ದಾರೆ. ಅವರು

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಪ್ರಯತ್ನ ಮಾಡುತ್ತಿಲ್ಲ ಎಂದು ನಾನು ಹೇಳುತ್ತಿಲ್ಲ. ಆದರೂ ಪ್ರಯತ್ನ ಸಾಲದು. ಕಳೆದ ಸಲ 713 ತಜ್ಞ ವೈದ್ಯರನ್ನು ನೇಮಕ ಮಾಡಿಕೊಂಡಿದ್ದಾರೆ. ಕೆಲಸಕ್ಕೆ ಸೇರಿದವರು 259. ಇನ್ನು 460 ಜನ ಉಳಿದರು. ಈಗ ಪುನ: ಕಾಲ್ ಮಾಡಿದ್ದಾರೆ. ಪುನ: ಅದೇ ಸ್ಥಿತಿ ಆಗುತ್ತದೆ. ಪುನ: ಬಂದು join ಆಗುತ್ತಾರೆ ಎಂದು ಯಾವ ಗ್ಯಾರಂಟಿ? ಅದಕ್ಕೆ alternative ಆಗಿ ಸರ್ಕಾರ ಏನಾದರೂ ಪರಿಹಾರ ಕಂಡುಹಿಡಿಯಬೇಕು. ಶಿಕ್ಷಕರು ಎರಡು ದಿನ late ಆಗಿ ಬಂದರೂ ಇನ್ನೊಬ್ಬ ಶಿಕ್ಷಕರು ಪಾಠ ಮಾಡುತ್ತಾರೆ. ವೈದ್ಯರು ಇಲ್ಲದೆ ಇದ್ದರೆ ಯಾರು ಬರುತ್ತಾರೆ? ಅದು ಒಂದು ಕಡ್ಡಾಯ ಮಾಡಬೇಕು. ಮಾನ್ಯ ಮುಜರಾಯಿ ಮಂತ್ರಿಗಳು ಇಲ್ಲಿ ಇದ್ದಾರೆ. ಹಾಗಾಗಿ, ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳೆ, 34,000ಕ್ಕೂ ಹೆಚ್ಚು ಮುಜರಾಯಿ ದೇವಸ್ಥಾನಗಳು ಇವೆ. ಮಾನ್ಯ ಬಂಗಾರಪ್ಪನವರು ಆರಾಧನಾ ಯೋಜನೆಯನ್ನು ಮಾಡಿದರು. ಆ ಯೋಜನೆಯಡಿಯಲ್ಲಿ ಹಣವನ್ನು ಕೊಡುತ್ತಿದ್ದೀರಿ. ಒಂದೊಂದು ಊರಿನಲ್ಲಿ 8 ರಿಂದ 10 ದೇವಸ್ಥಾನಗಳಿವೆ. ಒಂದು ದೇವಸ್ಥಾನದ ಹೆಸರು ಹೇಳಿದ ತಕ್ಷಣ ಇನ್ನೊಬ್ಬ ಬಂದು ನಾನು ಸ್ವಂತ ದೇವಸ್ಥಾನವನ್ನು ಮಾಡುತ್ತಿದ್ದೇನೆ ಅದಕ್ಕೆ ಹಣ ಕೊಡಿ ಎಂದು ಕೇಳುತ್ತಾನೆ. ಮಳಿಯಮ್ಮ, ಬೇಲಿಮರದಮ್ಮ, ಬುಡದಮ್ಮ ಹೀಗೆ ಎಷ್ಟು ದೇವರ ಹೆಸರು ಬೇಕು? ತಾವು ಎಷ್ಟು ಹಣವನ್ನು ಕೊಟ್ಟಿದ್ದೀರಿ? ಕಳೆದ ವರ್ಷ ಆರಾಧನಾ ಯೋಜನೆಯಡಿಯಲ್ಲಿ ಇಡೀ ಹಾಸನ ಜಿಲ್ಲೆಗೆ ರೂ. 4,90,000 ಹಣವನ್ನು ಕೊಟ್ಟಿದ್ದೀರಿ. ಈ ಹಣ ಸಾಕೇ?

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಅಧ್ಯಕ್ಷರೆ, ಆ ಹಣವನ್ನು ಕೊಡಬೇಕಾದರೆ ಅರಣ್ಯ ಇಲಾಖೆಯಿಂದ NOC ತೆಗೆದುಕೊಂಡು ಬನ್ನಿ ಎಂದು ನಮ್ಮ ಜಿಲ್ಲೆಯಲ್ಲಿ ADC ಅವರು ಹೇಳುತ್ತಾರೆ. DC ಕೈಕೆಳಗೆ ಇರುವ ADC ಅವರು ನಾವು ಆರಾಧನಾ ಸಮಿತಿಯಿಂದ recommend ಮಾಡಿ ಕಳುಹಿಸಿರುವುದನ್ನು ಅರಣ್ಯ ಇಲಾಖೆಗೆ NOC ಗಾಗಿ ಕಳುಹಿಸುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ(ಮಾನ್ಯ ಕಾಗೋಡು ತಿಮ್ಮಪ್ಪ): ಮಾನ್ಯ ಬೋಪಯ್ಯನವರೆ, reference ಇದ್ದರೆ ತಂದುಕೊಡಿ.

ಶ್ರೀ ಕೆ.ಜಿ.ಬೋಪಯ್ಯ: ಮಾನ್ಯ ಸಚಿವರೆ, ತಂದುಕೊಡುತ್ತೇನೆ. ನಾಳೆ ಅದನ್ನು ತಮ್ಮ ಕೈಗೆ ಕೊಡುತ್ತೇನೆ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳು ಮಾಡುತ್ತಿರುವಂತಹ ತಕರಾರನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಮಾನ್ಯ ಮಂತ್ರಿಗಳು ಇಲ್ಲಿ ಇರುವುದರಿಂದ ಹೇಳುತ್ತಿದ್ದೇನೆ. ಆರಾಧನಾ ಯೋಜನೆಗೆ ಕನಿಷ್ಠ ಒಬ್ಬೊಬ್ಬ ಶಾಸಕರಿಗೆ ಒಂದು ಲಕ್ಷದಂತೆ ಇಪ್ಪತ್ತೈದು ಲಕ್ಷ ರೂ.ಗಳನ್ನು ಕೊಡಿ. ಆ ಹಣವನ್ನು 25 ದೇವರುಗಳಿಗೆ ಕೊಡುತ್ತೇವೆ. ಮುಜರಾಯಿ ದೇವಸ್ಥಾನಗಳು ಎಲ್ಲವೂ ಬಹಳ ಪುರಾತನವಾದಂತಹ ಇತಿಹಾಸ ಉಳ್ಳ ದೇವಸ್ಥಾನಗಳಾಗಿವೆ. ಹಾಗಾಗಿ, ಅವುಗಳಿಗೆ ಹೆಚ್ಚಿನ ಅನುದಾನವನ್ನು ಕೊಡಿ. ಆಲೂರು ತಾಲ್ಲೂಕಿನ ಹಳೆಪಾಳ್ಯದಲ್ಲಿ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ ಎಂದು ಒಂದು ಹಳೆಯ ದೇವಸ್ಥಾನ ಇದೆ.

ಶ್ರೀ ಕಾಗೋಡು ತಿಮ್ಮಪ್ಪ: ಆಗ ಪ್ರಭುಗಳು ಮಾಡಿ ಇಟ್ಟಿದ್ದು ಅಷ್ಟೇನೇ. ಜನಕ್ಕೆ ಏನೂ ಕೊಟ್ಟಿಲ್ಲ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಸಚಿವರೆ, ಪ್ರಭುಗಳು ಮಾಡಿದ್ದು ಒಂದು ದೇವಸ್ಥಾನ, ಒಂದು ಕೆರೆ, ಒಂದು ಶಾಲೆ ಕಟ್ಟಿಸಿದ್ದಾರೆ. ರಸ್ತೆ ಮಾಡಿಸಲಿಲ್ಲ. ಬೇರೆ ಏನೂ ಕೊಡಲಿಲ್ಲ. ಅದರಿಂದ ನಾವು ಇವತ್ತಿನ ದಿವಸ ಅನುಭವಿಸುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು 2017-18ನೇ ಸಾಲಿನ ಬಜೆಟ್ ಏನು ಮಂಡಿಸಿದ್ದಾರೆ ಅದು ಮೇಲ್ನೋಟಕ್ಕೆ ಓದುವುದಕ್ಕೆ, ಕೇಳುವುದಕ್ಕೆ ಬಹಳ ಹಿತವಾಗಿದೆ. ಆದರೆ, ಜಾರಿ ಮಾಡತಕ್ಕಂಥದ್ದು ಕಷ್ಟ ಇದೆ. ಮಹಿಳಾ ಮತ್ತು ಕಲ್ಯಾಣ ಅಭಿವೃದ್ಧಿ ಇಲಾಖೆಗೆ ಅವರು ಕೊಡುವ ಹಣ ಕೇವಲ ಸಂಬಳಕ್ಕೆ ಆಗುತ್ತದೆ. ಅಂಗನವಾಡಿ ಕಾರ್ಯಕರ್ತರು ಮೊನ್ನೆ ದಿವಸ ಪ್ರತಿಭಟನೆ ಮಾಡಿದರು. ಅವರಿಗೆ ರೂ. 10,000/-ಗಳನ್ನು ಕೊಡಿ. Minimum Wages Act ಎಂದು ಒಂದು Act ಇದೆ. ಅವರೂ ಸಹ ಕಾರ್ಮಿಕರು. ಕನಿಷ್ಠ ರೂ. 7,000/- ಮಾಡಿದ್ದೀರಿ. ಅದನ್ನು ರೂ. 10,000/- ಎಂದು ಇಲ್ಲಿ announce ಮಾಡಿ. ಮಾನ್ಯ ವಿರೋಧ ಪಕ್ಷದವರು ನಮಗೆ ಕ್ರೆಡಿಟ್ ಹೋಗುತ್ತದೆ ಎಂದು ಹೇಳಿದರು ಎನ್ನಬೇಡಿ. ನಿಮಗೆ ಕ್ರೆಡಿಟ್ ಹೋಗಲಿ. ಸರ್ಕಾರ ಮಾಡಿದ್ದು ಎಂದು ನಾವೇ ಹೇಳುತ್ತೇವೆ. ದಯವಿಟ್ಟು ಅವರಿಗೆ ರೂ. 10,000/- ಕೊಡಿ. ಕಾಲೇಜಿನ ಅತಿಥಿ ಶಿಕ್ಷಕರದು ಅದು ಒಂದು ದೊಡ್ಡ ಸಮಸ್ಯೆ ಆಗಿದೆ.

ಶ್ರೀ ಸಾ.ರಾ.ಮಹೇಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಅಲ್ಲಿಗೆ ಹೋಗಿ ಹದಿನೈದು ದಿವಸದಿಂದ ಮಾತನಾಡಿಸಿಲ್ಲ. ಅಲ್ಲಿಗೆ ಯಾರೂ ಹೋಗಿಲ್ಲ.

27-03-2017

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, UGC ಅವನು 16 period ಪಾಠ ಮಾಡುವುದಕ್ಕೆ ಒಂದೂಕಾಲು ಲಕ್ಷ ಸಂಬಳ ತೆಗೆದುಕೊಳ್ಳುತ್ತಾನೆ. ಇವರು ಸಹ ಅದೇ ಮಾಡುವುದು. ಇವರು ಕೇವಲ ರೂ. 11,000/- ತೆಗೆದುಕೊಳ್ಳುತ್ತಾರೆ. ದಯಮಾಡಿ, ಅದನ್ನು ಮಾಡಬೇಕು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಹಣವನ್ನು ಕಡಿಮೆ ಕೊಡಲಾಗುತ್ತಿದೆ. ನಮ್ಮಲ್ಲಿ ಶೇಕಡಾ 40 ರಷ್ಟು ಮಹಿಳೆಯರು ಅಪೌಷ್ಠಿಕಾಂಶದಿಂದ ನರಳುತ್ತಿದ್ದಾರೆ. ಮಕ್ಕಳ ಸ್ಥಿತಿ ತಮಗೆ ಗೊತ್ತಿದೆ. ಉತ್ತರ ಕರ್ನಾಟಕದಲ್ಲಿ ಇದು ಜಾಸ್ತಿ ಇದೆ.

(ಗೊಂದಲ)

ಶ್ರೀ ಸಾ.ರಾ.ಮಹೇಶ್: ಮಾನ್ಯ ಅಧ್ಯಕ್ಷರೆ, ಅತಿಥಿ ಉಪನ್ಯಾಸಕರ ಬಗ್ಗೆ ಸರ್ಕಾರದಿಂದ ಒಂದು ಹೇಳಿಕೆಯನ್ನು ಕೊಡಿಸಿ.

(ಗೊಂದಲ)

ಶ್ರೀ ಎಸ್.ಆರ್. ಶ್ರೀನಿವಾಸ್ (ವಾಸು): ಇದಕ್ಕೇನಾದರೂ ಪರಿಹಾರ ಹುಡುಕಿ.

ಶ್ರೀ ಸಾ.ರಾ.ಮಹೇಶ್: ಮಾನ್ಯ ಅಧ್ಯಕ್ಷರೆ, ಅತಿಥಿ ಶಿಕ್ಷಕರು 12 ದಿವಸಗಳಿಂದ ಹಗಲು-ರಾತ್ರಿ ಧರಣಿ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಾ.ರಾ.ಮಹೇಶ್ ಅವರೆ, ಕುಳಿತುಕೊಳ್ಳಿ. ಮಾನ್ಯ ಹೆಚ್.ಕೆ.ಕುಮಾರಸ್ವಾಮಿ ಅವರು ಮಾತನಾಡುತ್ತಿದ್ದಾರೆ, ಅವರು ಹೇಳುತ್ತಾರೆ.

(ಗೊಂದಲ)

ಶ್ರೀ ಬಿ.ಬಿ.ನಿಂಗಯ್ಯ: ಮಾನ್ಯ ಅಧ್ಯಕ್ಷರೆ, ಅತಿಥಿ ಉಪನ್ಯಾಸಕರು 12 ದಿನಗಳಿಂದ ಅಹೋರಾತ್ರಿ ಧರಣಿ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಅತಿಥಿ ಉಪನ್ಯಾಸಕರು 12 ದಿನಗಳಿಂದ ಚಳುವಳಿ ಮಾಡುತ್ತಿದ್ದಾರೆ. ಒಂದೂವರೆ ಲಕ್ಷ ರೂ.ಗಳನ್ನು ತೆಗೆದುಕೊಂಡು ಕೆಲಸ ಮಾಡುವುದನ್ನು ಅವರು ಕೇವಲ 9,500 ರೂ.ಗಳನ್ನು ತೆಗೆದುಕೊಂಡು ಮಾಡುತ್ತಿದ್ದಾರೆ. ಇಡೀ ಸರ್ಕಾರಕ್ಕೆ ಅವರು ಅಷ್ಟು

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಹಣವನ್ನು ಉಳಿಸಿದ್ದಾರೆ. ಅವರು ಸುಮಾರು 14-15 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ದಯಮಾಡಿ, ಸರ್ಕಾರ ಅದರ ಬಗ್ಗೆ ಏನಾದರೂ ಆಲೋಚನೆ ಮಾಡಲಿ.

(ಗೊಂದಲ)

( ಈ ಹಂತದಲ್ಲಿ ಜೆಡಿಎಸ್ ಪಕ್ಷದ ಸದಸ್ಯರುಗಳಾದ ಮಾನ್ಯ ಸಾ.ರಾ.ಮಹೇಶ್, ಮಾನ್ಯ ಕೆ.ಎಂ. ಶಿವಲಿಂಗೇಗೌಡ ಮತ್ತು ಮಾನ್ಯ ಸಿ.ಎನ್.ಬಾಲಕೃಷ್ಣ ಅವರು ಸದನದ ಬಾವಿಗೆ ಬಂದರು)

(ಗೊಂದಲ)

ಶ್ರೀ ಎಸ್.ಆರ್.ಶ್ರೀನಿವಾಸ್(ವಾಸು): ಮಾನ್ಯ ಅಧ್ಯಕ್ಷರೆ, ಅತಿಥಿ ಶಿಕ್ಷಕರ ಬಗ್ಗೆ ಏನಾದರು ಒಂದು ಕ್ರಮ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಮ್ಮ ಕೆಲವು ಸ್ನೇಹಿತರು ಬಾವಿಗೆ ಬಂದಿದ್ದಾರೆ.

ಅಧ್ಯಕ್ಷರು: ಏತಕ್ಕಾಗಿ?

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಪರಿಸ್ಥಿತಿ ಹಾಗೆ ಇದೆ. ಅತಿಥಿ ಉಪನ್ಯಾಸಕರ ಬೇಡಿಕೆಯನ್ನು ಸರ್ಕಾರ ಗಮನಿಸಬೇಕೆಂದು.

(ಗೊಂದಲ)

ಅಧ್ಯಕ್ಷರು: ಮಾನ್ಯ ಕುಮಾರಸ್ವಾಮಿ ಅವರೆ, ತಾವು ಮಾತನಾಡುತ್ತಿದ್ದೀರಿ, ಸರ್ಕಾರಕ್ಕೆ ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟವರನ್ನು ಕರೆದು . . . .

(ಗೊಂದಲ)

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ, ಗ್ರಾಮೀಣಾಭಿವೃದ್ಧಿ ಇಲಾಖೆ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಮಲೆನಾಡಿನಲ್ಲಿ ಸಹ ಕುಡಿಯುವ ನೀರಿನ ಸಮಸ್ಯೆ ಇದೆ.

(ಗೊಂದಲ)

ಶ್ರೀ ಎಸ್.ಚಿಕ್ಕಮಾದು: ಮಾನ್ಯ ಕುಮಾರಸ್ವಾಮಿ ಅವರೆ,, ಅತಿಥಿ ಶಿಕ್ಷಕರ ಬಗ್ಗೆ ಹೇಳಿ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

(ಗೊಂದಲ)

ಅಧ್ಯಕ್ಷರು: ತಾವು ಅತಿಥಿ ಶಿಕ್ಷಕರ ಬಗ್ಗೆ ಹೇಳಿದ್ದೀರಿ. ಜೆಡಿಎಸ್ ಪಕ್ಷದ ಸದಸ್ಯರುಗಳೇ ತಾವು ಸದನದ ಬಾವಿಗೆ ಏಕೆ ಬರುತ್ತೀರಿ? ಮಾನ್ಯ ಕುಮಾರಸ್ವಾಮಿ ಅವರು ಅತಿಥಿ ಶಿಕ್ಷಕರ ಬಗ್ಗೆ ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಸ್.ಆರ್.ಶ್ರೀನಿವಾಸ(ವಾಸು): ಮಾನ್ಯ ಅಧ್ಯಕ್ಷರೆ, ಅವರು ಮಾತನಾಡಿದ್ದಾರೆ. ಸರ್ಕಾರದಿಂದ ಪರಿಹಾರ ಹೇಳಿಸಿ.

(ಗೊಂದಲ)

ಶ್ರೀ ಬಿ.ಬಿ.ನಿಂಗಯ್ಯ: ಮಾನ್ಯ ಅಧ್ಯಕ್ಷರೆ, ಅತಿಥಿ ಶಿಕ್ಷಕರ ಬಗ್ಗೆ ಕೊನೆಪಕ್ಷ ಸರ್ಕಾರ ಒಂದು ಹೇಳಿಕೆಯನ್ನು ಮಾಡಲಿ.

(ಗೊಂದಲ)

ಅಧ್ಯಕ್ಷರು: ಅವರ ಕಡೆಯಿಂದ ಏನು ಮಾಡಿಸುತ್ತೀರಿ?

(ಗೊಂದಲ)

ಶ್ರೀ ಎಸ್.ಚಿಕ್ಕಮಾದು: ಮಾನ್ಯ ಅಧ್ಯಕ್ಷರೆ, ಏನು ಕ್ರಮ ತೆಗೆದುಕೊಳ್ಳುತ್ತದೆ ಎನ್ನುವುದನ್ನು ಹೇಳಲಿ.

(ಗೊಂದಲ)

ಶ್ರೀ ಎಸ್.ಆರ್.ಶ್ರೀನಿವಾಸ(ವಾಸು): ಮಾನ್ಯ ಅಧ್ಯಕ್ಷರೆ, ತಮ್ಮಿಂದ ಆದೇಶ ಹೋಗಲಿ. ಕಳೆದ 12 ದಿವಸದಿಂದ ಅಹೋರಾತ್ರಿ ಸತ್ಯಾಗ್ರಹ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಬಿ.ನಿಂಗಯ್ಯ: ಮಾನ್ಯ ತನ್ವೀರ್ ಸೇಠ್ ಅವರೆ, ಹೇಳಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಕುಮಾರಸ್ವಾಮಿ ಅವರೆ, ತಾವು ಮಾತನಾಡುತ್ತಿದ್ದೀರಿ. ತಾವು ಸರ್ಕಾರಕ್ಕೆ ಹೇಳುತ್ತಿದ್ದೀರಿ. ಸರ್ಕಾರ ಏನು ಉತ್ತರ ಕೊಡುತ್ತದೆ ನೋಡೋಣ. ಮಾನ್ಯ ಸದಸ್ಯರೇ, ತಾವು ಏಕೆ ಇಲ್ಲಿ ಬಂದಿದ್ದೀರಿ?

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

(ಗೊಂದಲ)

ಶ್ರೀ ಎಸ್.ಚಿಕ್ಕಮಾದು: ಮಾನ್ಯ ಅಧ್ಯಕ್ಷರೆ, ಯಾವಾಗಲೂ ಸರ್ಕಾರ ಉತ್ತರ ಕೊಟ್ಟಿಲ್ಲ. ಉನ್ನತ ಶಿಕ್ಷಣ ಸಚಿವರನ್ನು ಕರೆಸಿ ಅವರಿಂದ ಉತ್ತರ ಕೊಡಿಸಿ.

(ಗೊಂದಲ)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ತಾವು ಆದೇಶ ಕೊಡಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸದಸ್ಯರುಗಳೇ, ತಾವು ಬಾವಿಗೆ ಬಂದ ಉದ್ದೇಶ ಏನು?

(ಗೊಂದಲ)

ಶ್ರೀ ಎಸ್.ಚಿಕ್ಕಮಾದು: ಮಾನ್ಯ ಅಧ್ಯಕ್ಷರೆ, ಸರ್ಕಾರ ಅತಿಥಿ ಶಿಕ್ಷಕರ ಹತ್ತಿರ ಹೋಗಿ ಮಾತನಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲಿ.

(ಗೊಂದಲ)

ಅಧ್ಯಕ್ಷರು: ಮಾನ್ಯ ಸದಸ್ಯರೇ ತಾವು ಎದ್ದು ಬಾವಿಗೆ ಬಂದರೆ ಸದನವನ್ನು ಹೇಗೆ ನಡೆಸುವುದು? ಅವರು ಒಂದು issue ಅನ್ನು ಎತ್ತಿದ್ದಾರೆ. ಆ issueಗೆ ಸರ್ಕಾರದಿಂದ ಉತ್ತರ ಕೊಡಿಸುತ್ತೇನೆ. ತಾವು ಹೀಗೆ ಎದ್ದು ಬಾವಿಗೆ ಬಂದರೆ ಹೇಗೆ?

(ಗೊಂದಲ)

ಶ್ರೀ ಎಸ್.ಚಿಕ್ಕಮಾದು: ಮಾನ್ಯ ಅಧ್ಯಕ್ಷರೆ, ಈಗಲೇ ಉತ್ತರ ಕೊಡಿಸಿ.

ಅಧ್ಯಕ್ಷರು: ಈಗಲೇ ಉತ್ತರ ಕೊಡಿಸಿ ಎಂದರೆ ಯಾರು ಕೊಡುತ್ತಾರೆ? ಉತ್ತರ ಕೊಡಿಸುವುದಕ್ಕೆ ಆಗುತ್ತದೆಯೇ? ಸುಮ್ಮನೆ ಏನು ಮಾತನಾಡುತ್ತೀರಿ?

(ಗೊಂದಲ)

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಶಿವಲಿಂಗೇಗೌಡರೆ, ಮಾನ್ಯ ಮಂತ್ರಿಗಳು ಬರುತ್ತಾರೆ ಎಂದು ಮಾನ್ಯ ಅಧ್ಯಕ್ಷರು ಹೇಳಿದ್ದಾರೆ. ಮಾನ್ಯ ಸದಸ್ಯರುಗಳು ತಮ್ಮಮ್ಮ ಸ್ಥಾನಕ್ಕೆ ಹೋಗಿ.

(ಗೊಂದಲ)

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಅಧ್ಯಕ್ಷರು: ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ನಿಮ್ಮ ಪಕ್ಷದವರೆ ಮಾತನಾಡುತ್ತಿರುವ ಸಂದರ್ಭದಲ್ಲಿ ನೀವು ಸದನದ ಬಾವಿಗೆ ಬಂದರೆ ಹೇಗೆ? ಹೀಗೆ ಆದರೆ, ನಾನು ತಿಳಿದ ಹಾಗೆ ಮಾಡುತ್ತೇನೆ. ಇದಕ್ಕಿಂತ ನಾನು ಏನೂ ಹೇಳುವುದಕ್ಕೆ ಆಗುವುದಿಲ್ಲ.

(ಮುಂದು. . .)

27.03.2017 / 5.40 (39) / JB-SSD

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಜೆ.ಡಿ.(ಎಸ್) ಪಕ್ಷದ ಸದಸ್ಯರಾದ ಶ್ರೀ ಸಾ.ರಾ.ಮಹೇಶ್, ಶ್ರೀ ಸಿ.ಎನ್.ಬಾಲಕೃಷ್ಣ ಹಾಗೂ ಶ್ರೀ ಕೆ.ಎಂ.ಶಿವಲಿಂಗೇಗೌಡರು ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದರು)**

ಅಧ್ಯಕ್ಷರು (ಮುಂದು . . .)

ನೀವು ಬಂದು ಬಾವಿಯಲ್ಲಿ ನಿಂತರೆ ಹೇಗೆ? ಹೀಗಾದರೆ ಹೇಗೆ? ಹೀಗಾದರೆ ತಿಳಿದಹಾಗೆ ಮಾಡಿಕೊಳ್ಳಿ. ಇದಕ್ಕೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ. ಅವರು ಮಾತನಾಡುವುದಕ್ಕೆ ಹೊರಟಿದ್ದಾರೆ. ಅವರು ನಿಮ್ಮ ಪಕ್ಷದವರೇ ಆಗಿದ್ದಾರೆ. ನೀವು ಬಾವಿಗೆ ಬರುತ್ತೀರಿ. ಇದು ಏನು ವ್ಯವಸ್ಥೆ?

(ಗೊಂದಲ)

ಶ್ರೀ ಎಸ್.ಆರ್. ಶ್ರೀನಿವಾಸ (ವಾಸು): ಸರ್ ಉತ್ತರ ಕೊಡಿಸುತ್ತೇನೆಂದು ಹೇಳಿದ್ದೀರಿ. ಇದುವರೆಗೂ ಉತ್ತರ ಕೊಡಿಸಿಲ್ಲ.

(ಗೊಂದಲ)

ಅಧ್ಯಕ್ಷರು: ಉತ್ತರ ಕೊಡಿಸುವುದು ನನ್ನ ಜವಾಬ್ದಾರಿ. ಉತ್ತರ ಕೊಡಿಸುತ್ತೇನೆ. ಉತ್ತರ ಕೊಡಿಸೋಣ. ನೀವು ಕೊಟ್ಟ ಕೂಡಲೇ ಓಡಿ ಬಂದು ಅವರು ಉತ್ತರ ಕೊಡಬೇಕೇ? ಇದು ಯಾವ ಪದ್ಧತಿ ರೀ?

ಶ್ರೀ ಬಿ.ಬಿ.ನಿಂಗಯ್ಯ: ನಾವೂ ಕೂಡ ಮಾತನಾಡುತ್ತೇವೆ ಈಗ.

ಅಧ್ಯಕ್ಷರು: ಮಾತನಾಡುವಾಗ ನಿಮಗೆ ಅವಕಾಶ ಕೊಡುತ್ತೇನೆ. ಕೊಟ್ಟಾಗ ನೀವು ಮಾತನಾಡಬಹುದು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ದಯಮಾಡಿ, ಗ್ರಾಮಿಣಾಭಿವೃದ್ಧಿ . . .

(ಗೊಂದಲ)

ಅಧ್ಯಕ್ಷರು: ಇದು ಯಾವ ವ್ಯವಸ್ಥೆ ಎಂಬುದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಎಸ್.ಆರ್.ಶ್ರೀನಿವಾಸ್ (ವಾಸು): ಯಾವತ್ತಿಗೂ ಉತ್ತರವಿಲ್ಲ. ಪಶುಭಾಗ್ಯದಲ್ಲಿ ಉತ್ತರ ಕೊಡಿಸುತ್ತೇವೆಂದು ಹೇಳಿದ್ದೀರಿ. ಉತ್ತರ ಕೊಡಿಸಿಲ್ಲ.

(ಗೊಂದಲ)

ಅಧ್ಯಕ್ಷರು: ಇದನ್ನಂತೂ ನಾನಂತೂ ಕಂಡಿಲ್ಲ. ನನ್ನ ಅವಧಿಯೊಳಗೆ ಈ ವ್ಯವಸ್ಥೆ ಕಂಡಿಲ್ಲ. ನಿಮ್ಮ ಪಕ್ಷದವರು ಮಾತನಾಡುವಾಗ ನೀವೇ ಬಂದು ಬಾವಿಗೆ ಇಳಿಯುತ್ತೀರಿ. ಅಂದರೆ, ಅವರು ಮಾತನಾಡಬಾರದೇ? ಮಾತನಾಡುವುದು ಬೇಡವೇ? ನೀವು ಬಂದು ಬಾವಿಗೆ ಇಳಿದರೆ ಅವರು ಮಾತನಾಡಬೇಕೇ? ಇದು ಎಂತಹ ವ್ಯವಸ್ಥೆ? I can't understand. Please resume your seats.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿನಿರತ ಸದಸ್ಯರು ಮಾತನಾಡುತ್ತಿದ್ದರು)**

ಅಧ್ಯಕ್ಷರು: No, no please resume your seat. ಇಲ್ಲ ದಯಮಾಡಿ ತಾವು . . .

(ಗೊಂದಲ)

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಒಂದು ಬೇಸರವೇನೆಂದರೆ, ಸೌಜನ್ಯಕ್ಕೆ ಮಂತ್ರಿಗಳು ಹೋಗಬಹುದಿತ್ತು.

(ಗೊಂದಲ)

ಅಧ್ಯಕ್ಷರು: ಇರಲಿ. ಅಭ್ಯಾಸ ಹೇಳುವುದಕ್ಕೆ ಅವರು ಹೊರಟಿದ್ದಾರೆ. ಅವರು ನಿಮಗಿಂತಲೂ senior member of your party. He is explaining everything. Why you come here? I can't understand. Please resume your seat.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿನಿರತ ಸದಸ್ಯರು ಮಾತನಾಡುತ್ತಿದ್ದರು)**

ಅಧ್ಯಕ್ಷರು: I shall see that the Government will reply to his point. Government ಉತ್ತರ ಕೊಡುತ್ತದೆ, ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಉತ್ತರ ಕೊಡಲಿ. ನಾಳೆ ಒಂದು ಸಲ ಸರ್ಕಾರ ಹೋಗಿಬರಲಿ. ಅವರನ್ನು ಉದಾಸೀನ ಮಾಡುವುದು ಬೇಡ. ಉದಾಸೀನ ಬೇಡ.

(ಗೊಂದಲ)

ಅಧ್ಯಕ್ಷರು: ಮಾನ್ಯ ಶಿವಲಿಂಗೇಗೌಡರೆ, ತಾವು ಹಿರಿಯರು. ಹೀಗಾದರೆ ಹೇಗೆ ಆಗುತ್ತದೆ? ತಾವು ಕುಳಿತುಕೊಳ್ಳಿ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿನಿರತ ಸದಸ್ಯರು ಮಾತನಾಡುತ್ತಿದ್ದರು)**

ಅಧ್ಯಕ್ಷರು: ಉತ್ತರ ಕೊಡಿಸೋಣ. ಶಿವಲಿಂಗೇಗೌಡರಂತಹ ಹಿರಿಯ ಸದಸ್ಯರು ಹೀಗೆ ಬಂದು ನಿಂತುಕೊಂಡರೆ ಹೇಗೆ? ಸದನ ನಡೆಸುವುದು ಹೇಗೆ? No. I can't understand. Please resume your seats.

ಶ್ರೀ ಎಸ್.ಚಿಕ್ಕಮಾದು: ನಮ್ಮವರಿಗೆ ನಾವೇ disturb ಮಾಡಿದಹಾಗೆ ಆಗುತ್ತದೆ ಕಣಪ್ಪ.

ಅಧ್ಯಕ್ಷರು: ನಿಮ್ಮ ಪಕ್ಷದ ಸದಸ್ಯರು ಮಾತನಾಡುವಾಗ ನೀವು ಬಂದರೆ you are against to it. ನಿಮ್ಮ ಪಕ್ಷದವರಿಗೇ ನೀವು against ಆಗಿ ಮಾತನಾಡುತ್ತೀರಾ? No I can't understand this. Please resume your seat.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಸರ್ಕಾರ ಒಪ್ಪಿಕೊಂಡಿದೆ. ಈ ಕಡೆಗೆ ಬಂದುಬಿಡಿ.

**(ಈ ಹಂತದಲ್ಲಿ ಶ್ರೀ ಎಸ್.ಚಿಕ್ಕಮಾದು ಹಾಗೂ ಶ್ರೀ ಎಸ್.ಆರ್. ಶ್ರೀನಿವಾಸ್(ವಾಸು)ರವರು ಸದನದ ಬಾವಿಗೆ ಬಂದರು)**

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿನಿರತ ಸದಸ್ಯರು ಮಾತನಾಡುತ್ತಿದ್ದರು)**

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಹೇಳಿಕೆ ಕೊಡುತ್ತೇನೆಂದು ಹೇಳಿದ್ದಾರೆ. ಬನ್ನಿ ಸಾರ್.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿನಿರತ ಸದಸ್ಯರು ಮಾತನಾಡುತ್ತಿದ್ದರು)**

ಅಧ್ಯಕ್ಷರು: ನೋಡ್ರಿ, ನೀವು ಮಾಡುತ್ತಿರುವುದು ಸರಿಯಲ್ಲ. ಅಲ್ಲಿ ಅವರು ಮಾತನಾಡುವುದಕ್ಕೆ ಹೊರಟಿದ್ದಾರೆ. ನಾನು ಸರ್ಕಾರದಿಂದ ಉತ್ತರ ಕೊಡಿಸುತ್ತೇನೆಂದು ಹೇಳುತ್ತಿದ್ದೇನೆ. ನಿಮ್ಮ ಪಕ್ಷದವರೆ ಹೀಗೆ ಬಾವಿಯಲ್ಲಿ ಬಂದು ನಿಂತರೆ ಏನು ಇದರ ಅರ್ಥ?

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿನಿರತ ಸದಸ್ಯರು ಮಾತನಾಡುತ್ತಿದ್ದರು)**

ಅಧ್ಯಕ್ಷರು: ನನಗಂತೂ ಅದು ತಿಳಿಯುತ್ತಿಲ್ಲ. ನನ್ನ ಅನುಭವದಲ್ಲಿ ಇಂತಹ ವ್ಯವಸ್ಥೆ ಆಗಿಲ್ಲ, ನಾನು ಇದನ್ನು ನೋಡಿಲ್ಲ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿನಿರತ ಸದಸ್ಯರು ಮಾತನಾಡುತ್ತಿದ್ದರು)**

ಅಧ್ಯಕ್ಷರು: ಹಾಗಾದರೆ ಈಗ ಏನು ಮಾಡಬೇಕು? ಸದನ ಎಲ್ಲಾ ಬಿಟ್ಟು ನೀವು ಹೇಳಿದ ಹಾಗೆ ಕೇಳಿಬಿಡಬೇಕೇ?

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿನಿರತ ಸದಸ್ಯರು ಮಾತನಾಡುತ್ತಿದ್ದರು)**

ಅಧ್ಯಕ್ಷರು: ಏನ್ರಿ ಇದು? ನಿಮ್ಮ ಸದಸ್ಯರು ಮಾತನಾಡುವುದಕ್ಕೆ ಹೊರಟರೆ ಹೀಗೆ ಮಾಡುವುದೇ? ಅವರಿಗೆ ಉತ್ತರ ಕೊಡಿಸುತ್ತೇನೆಂದು ಹೇಳುತ್ತಿದ್ದೇನೆ. ನೋಡ್ರಿ, ಕುಮಾರಸ್ವಾಮಿಯವರೆ . . .

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ತನ್ವೀರ್‌ಸೇಠ್‌ರವರೆ, ಒಂದು assurance ಕೊಡಿ. ಸರ್ಕಾರ ಏನು ಮಾಡುತ್ತದೆ ಎಂದು ಹೇಳಿ.

ಅಧ್ಯಕ್ಷರು: Consider ಮಾಡುತ್ತಾರೆ. ಎಲ್ಲವನ್ನೂ ಒಮ್ಮಿಂದೊಮ್ಮೆಲೇ ಕೊಡುವುದಕ್ಕೆ ಆಗುತ್ತದೆಯೇ?

**(ಈ ಹಂತದಲ್ಲಿ ಶ್ರೀ ಮಾನಪ್ಪ ವಜ್ಜಲ ಹಾಗೂ ಡಾ: ಎಸ್.ಶಿವರಾಜ್ ಪಾಟೀಲ್‌ರವರು ಸದನದ ಬಾವಿಗೆ ಬಂದರು)**



ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಧ್ಯಕ್ಷರು: ಕುಮಾರಸ್ವಾಮಿಯವರೆ, ತಾವು ಹಿರಿಯ ಸದಸ್ಯರು. ನೀವು ಮಾತನಾಡುವಾಗ ಆ ಪಾಯಿಂಟ್ ಹಿಡಿದು ನಿಮ್ಮ ಸದಸ್ಯರು well ಗೆ ಬರುತ್ತಾರೆ. ಇದು ಸರಿಯೇ?

(ಗೊಂದಲ)

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಅವರು ಕೊಟ್ಟು ಆದಮೇಲೆ ನಾನು ಮಾತನಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ನಾವು ಉತ್ತರ ಕೊಡಿಸೋಣ. ಇಲ್ಲಿ ಬರುವುದು ಸರಿಯೇ? ಅವರು resume ಮಾಡಲಿ. ಈಗ ಕೊಡುವುದಕ್ಕೆ ಹೋಗಬೇಡಿ. Let them resume their seats, then you can reply. Please ಈ ವ್ಯವಸ್ಥೆ ಬೇಡ. Please resume your seats. I shall ask the Minister, ಮಿನಿಸ್ಟರ್ ರವರಿಂದ ಉತ್ತರ ಕೊಡಿಸುತ್ತೇನೆ. ತಾವು ದಯಮಾಡಿ ಹೋಗಿ. ನೀವು ಈಗ ಉತ್ತರ ಕೊಡಬೇಡಿ. Let them resume their seats.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಸ್ಪೀಕರ್.ಮಹೇಶ್‌ರವರೆ, ಈಗ ನಿಮ್ಮ ಪ್ರತಿಭಟನೆ ತೋರಿಸಿದ್ದೀರಿ. ವಿಷಯ ಹೇಳಿದ್ದೀರಿ. ಸರ್ಕಾರದಿಂದ ಉತ್ತರ ಕೊಡಿಸುತ್ತೇನೆ, ಅವರು ಕ್ರಮ ವಹಿಸುತ್ತೇವೆಂದು ಹೇಳಿದ್ದಾರೆ. ಆ ಭರವಸೆ ಮೇಲೆ ನಾವು ಮಾಡೋಣ.

ಅಧ್ಯಕ್ಷರು: ಉತ್ತರ ಕೊಡಿಸುತ್ತೇನೆ. ಉತ್ತರ ಕೊಡಿಸೋಣ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಇಲ್ಲದಿದ್ದರೆ ಬೆಳಿಗ್ಗೆ ಮಾಡೋಣ. ನಾಳೆ ಉತ್ತರ ನೋಡಿಕೊಂಡು ನಾಳೆ ಮಾಡೋಣ.

ಅಧ್ಯಕ್ಷರು: ನಿಮ್ಮದು ಏನಾದರೂ ಇದ್ದರೆ ನಾಳೆ ಮಾಡಿ. ಇವತ್ತು ಮಾಡುವುದು ಸರಿಯಲ್ಲ. ಇದು ಸರಿಯಲ್ಲ.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿನಿರತ ಸದಸ್ಯರು ಮಾತನಾಡುತ್ತಿದ್ದರು)**

ಅಧ್ಯಕ್ಷರು: ಇದು ಸರಿಯಲ್ಲ. Please resume.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಚಿಕ್ಕಮಾದುರವರೆ, ನಾಳೆ ಮಾಡೋಣ. Please ಬನ್ನಿ. ನಾಳೆ ಮಾಡೋಣ ಬನ್ನಿ.

ಶ್ರೀ ತನ್ವೀರ್ ಸೇಠ್ : ಮಾನ್ಯ ಅಧ್ಯಕ್ಷರೆ, . . .

ಅಧ್ಯಕ್ಷರು: Please be seated. I will not allow you to . . I am not going to allow you. Please be seated. ಇದು ಸರಿಯಲ್ಲ ವ್ಯವಸ್ಥೆ. ದಯಮಾಡಿ, let them resume their seats.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಅವರು ರೆಡಿ ಇದ್ದಾರೆ. ಸರ್ಕಾರ ರೆಡಿಯಿದೆ.

ಅಧ್ಯಕ್ಷರು: Then you can discuss everything. No.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಸರ್ಕಾರ ಉತ್ತರ ಕೊಡುವುದಕ್ಕೆ ರೆಡಿಯಿದೆ. ಹೇಳಿಯೇ ಹೇಳುತ್ತಾರೆ. ಬನ್ನಿ ಆಮೇಲೆ ಹೇಳುತ್ತಾರೆ. ಬನ್ನಿ ಅವರಿಗೆ ಒಂದು ಅವಕಾಶ ಕೊಡೋಣ. ನಮ್ಮ ಪಕ್ಷದ ನಿಲುವು ನಮ್ಮ ಶಾಸಕರ ನಿಲುವು ಹೇಳಿದ್ದೇವೆ. ಅವರು ಉತ್ತರ ಕೊಡುತ್ತಾರೆ.

ಅಧ್ಯಕ್ಷರು: ಕೊಡುತ್ತಾರೆ. ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದೀರಿ.

**(ಈ ಹಂತದಲ್ಲಿ ಶ್ರೀ ಬಿ.ಬಿ.ನಿಂಗಯ್ಯನವರು ಸದನದ ಬಾವಿಗೆ ಬಂದರು)**

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿನಿರತ ಸದಸ್ಯರು ಮಾತನಾಡುತ್ತಿದ್ದರು)**

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಮಂತ್ರಿಗಳು ಈಗಲೇ ಉತ್ತರ ಹೇಳಲಿ.

ಅಧ್ಯಕ್ಷರು: ಉತ್ತರ ಕೊಡಿಸೋಣ ರೀ. ನಿಮ್ಮ ಪಕ್ಷದಲ್ಲಿ ಒಂದಿಷ್ಟು ಮಂದಿ ಹಾಗೆ, ಒಂದಿಷ್ಟು ಮಂದಿ ಹೀಗೆ ಮಾಡಿದರೆ ಹೇಗಪ್ಪ?

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಈಗ ಅಂಗನವಾಡಿ ಕಾರ್ಯಕರ್ತೆಯವರು ಮಹಿಳೆಯರು ಎಂದು ಸರ್ಕಾರ ಅನುಕಂಪದ ಮೇಲೆ ಹೋಗಿದೆ. ಅಲ್ಲಿ ಇನ್ನೂ ಶಿಕ್ಷಕರ ಮೇಲೆ ಅವರಿಗೆ ಗಮನ ಬಂದಿಲ್ಲ. ಅದು ಏನು ಮಾಡುತ್ತಾರೆ ಎಂದು ನೋಡೋಣ. ನಿಮ್ಮದು ಆಗಲಿ ಇನ್ನೊಬ್ಬರದು ಆಗಲಿ ಒಂದೇ.

ಅಧ್ಯಕ್ಷರು: ನೋಡ್ರಿ ಶಿವಲಿಂಗೇಗೌಡರೆ, ತಾವೆಲ್ಲರೂ ಸೀನಿಯರ್ ಮೆಂಬರ್ಸ್. ತಾವು ಎಲ್ಲರಿಗೂ ಗೈಡ್ ಮಾಡಬೇಕು. ಆದರೆ, ನಿಮ್ಮ ಪಾರ್ಟಿಯವರು ಮಾತನಾಡುತ್ತಿರುವಾಗ ನೀವು ಬಂದು ಬಾವಿಯಲ್ಲಿ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನಿಂತರೆ ಏನಾಗುತ್ತದೆ? ಹೇಳಿ ನೀವೇ ಹೇಳಿ. ಇದು ಸರಿಯೇ? Please resume your seats.

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿನಿರತ ಸದಸ್ಯರು ಮಾತನಾಡುತ್ತಿದ್ದರು)**

(ಗೊಂದಲ)

ಅಧ್ಯಕ್ಷರು: Please resume your seats. Please resume your seats I say. ಸರಿಯಲ್ಲ.

(ಗೊಂದಲ)

ಶ್ರೀ ಕೆ.ಷಡಕ್ಷರಿ: ಆಗಿನಿಂದ ಹೇಳುತ್ತಿದ್ದಾರೆ ಬಾರಪ್ಪ. ಗೌಡ್ರೆ, ಶಿವಲಿಂಗೇಗೌಡ್ರೆ, ಪಾಪ ಅವರು ಹೇಳುತ್ತಿದ್ದಾರೆ. ಬನ್ರಿ. ಏಕೆ ಸುಮ್ಮನೆ? ಮಹೇಶಣ್ಣ ಬನ್ನಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಉತ್ತರ ಕೊಡುತ್ತಾರೆ ಬನ್ನಿ.

ಅಧ್ಯಕ್ಷರು: ಉತ್ತರ ಕೊಡುತ್ತಾರೆ. ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಅವರು ಏನು ಹೇಳುತ್ತಾರೆ ನೋಡೋಣ.

ಶ್ರೀ ಸಿ.ಟಿ.ರವಿ: ಮಾನ್ಯ ಅಧ್ಯಕ್ಷರೆ, ಇದು ಜನರ ಸರ್ಕಾರ. ಅಲ್ಲಿ ಹೋಗಿ ಚಳವಳಿ ಮಾಡುತ್ತಿದ್ದಾರೆ ಎಂದರೆ, ಸರ್ಕಾರದ ಪ್ರತಿನಿಧಿಗಳು ಹೋಗಿ ಮಾತನಾಡಬೇಕು ಅಲ್ಲವೇ? ನಾವು ಏನೂ ಸರ್ವಾಧಿಕಾರಿಗಳಲ್ಲ. ನಾವು ಯಾರೂ ಸರ್ವಾಧಿಕಾರಿಗಳಲ್ಲ.

ಅಧ್ಯಕ್ಷರು: ಅದನ್ನೇ ಹೇಳೋಣ. ಇಲ್ಲಿ ಬಂದು ನಿಂತರೆ ಹೇಗೆ?

ಶ್ರೀ ಸಿ.ಟಿ.ರವಿ: ನಾವು ಯಾರೂ ಸರ್ವಾಧಿಕಾರಿಗಳಲ್ಲ. ಜನರು ನಮಗೆ ಕೊಟ್ಟಿರುವ ಅಧಿಕಾರ ಇದು. ಜನ ಬೀದಿಯಲ್ಲಿ ನಿಂತು ಕೇಳುತ್ತಾರೆ. ನಾವು ಆಗ ಮಾತನಾಡಬೇಕಲ್ಲವೇ?

(ಗೊಂದಲ)

ಅಧ್ಯಕ್ಷರು: ಅವರು ಏನು ಹೇಳುತ್ತಾರೆ ಕೇಳೋಣ. ಸರ್ಕಾರ ಕೇಳೋಣ. ಅವರು ಏನು ಹೇಳುತ್ತಾರೆ ನೋಡೋಣ. ಇಲ್ಲಿ ನಿಂತುಕೊಂಡರೆ ಹೇಗೆ?

(ಗೊಂದಲ)

ಶ್ರೀ ಸಿ.ಟಿ.ರವಿ: ಅವರು ಹೇಳಬೇಕಲ್ಲವೇ?

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

(ಗೊಂದಲ)

ಅಧ್ಯಕ್ಷರು: Resume your seats I say. ನಿಮ್ಮ ಪಕ್ಷದವರೇ ಮಾತನಾಡುತ್ತಾರೆ. ನಿಮ್ಮ ಪಕ್ಷದವರೇ ಅದೇ ಪಾಯಿಂಟ್ ಹೇಳುತ್ತಿದ್ದಾರೆ. ನೀವು ಬಂದು ಬಾವಿಗೆ ಬಂದರೆ ಹೇಗೆ? ಏನು ಅರ್ಥ? ನಾನಂತೂ ಇಂತಹ ವ್ಯವಸ್ಥೆ ಕಂಡಿಲ್ಲ. ದಯಮಾಡಿ. ಮಂತ್ರಿಗಳು reply ಕೊಡುತ್ತಾರೆ. ತಾವು ದಯಮಾಡಿ resume ಮಾಡಿ. ತಾವು ದಯಮಾಡಿ ಸೀಟುಗಳಿಗೆ ಹೋಗಿ. ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಕೆ.ಷಡಕ್ಷರಿ: ವಾಸಣ್ಣ. ಬನ್ನಿ. ಹೇಳಿದ್ದಾರೆ ಬನ್ನಿ.

ಅಧ್ಯಕ್ಷರು: I can't understand.

ಶ್ರೀ ಕೆ.ಷಡಕ್ಷರಿ: ಅಷ್ಟೊಂದು request ಮಾಡುತ್ತಾರೆ. ನೀವು ಹಠ ಮಾಡುತ್ತೀರಿ.

ಅಧ್ಯಕ್ಷರು: ಅವರು ಉತ್ತರ ಕೊಡುತ್ತಾರೆ. ನೀವು ಇಲ್ಲಿ ನಿಂತರೆ ಹೇಗೆ?

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಅಧ್ಯಕ್ಷರು ಒಪ್ಪಿಕೊಂಡಿದ್ದಾರೆ. ಭರವಸೆ ಕೊಡುತ್ತಿದ್ದಾರೆ. ಬನ್ನಿ

(ಗೊಂದಲ)

ಶ್ರೀ ಕೆ.ಷಡಕ್ಷರಿ: ಕುಮಾರಸ್ವಾಮಿಯವರೆ ಹೇಳುತ್ತಿದ್ದಾರೆ, ಏಕೆ ಹೀಗೆ ಸುಮ್ಮನೆ ಇದು ಮಾಡುತ್ತೀರಿ?

(ಗೊಂದಲ)

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಸಚಿವರು ಈಗ ಉತ್ತರ ಹೇಳುತ್ತಾರೆ ಬನ್ನಿ.

ಅಧ್ಯಕ್ಷರು: Please resume.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಉತ್ತರ ಕೊಡುತ್ತಾರೆ.

ಅಧ್ಯಕ್ಷರು: Please resume. Please resume your seats. ಮಂತ್ರಿಗಳು ಉತ್ತರ ಕೊಡುತ್ತಾರೆ. ಅವರು ಮಾತನಾಡುವುದಕ್ಕೆ ಹೊರಟಿದ್ದಾರೆ. ಮಾತನಾಡಿ.

ಶ್ರೀ ಬಿ.ಬಿ.ನಿಂಗಯ್ಯ: ಸಭಾಧ್ಯಕ್ಷರಿಗೆ ಗೌರವ ಕೊಡೋಣ ಬನ್ನಿ.

ಶ್ರೀ ಕೆ.ಷಡಕ್ಷರಿ: ಬನ್ನಿರಪ್ಪ. ಹಠ ಮಾಡಿದರೆ ಹೇಗೆ?

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿನಿರತ ಜೆ.ಡಿ.(ಎಸ್) ಪಕ್ಷದ ಸದಸ್ಯರು ತಮ್ಮ ಸ್ಥಾನಗಳಿಗೆ ತೆರಳಿದರು)**

ಅಧ್ಯಕ್ಷರು: ತಮ್ಮದು ಮುಗಿಯಲಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಗ್ರಾಮೀಣಾಭಿವೃದ್ಧಿ ಇಲಾಖೆ ಸಹಜವಾಗಿ, ಈಗಿರತಕ್ಕಂತಹ ಸುಮಾರು 1 ಲಕ್ಷ 41 ಸಾವಿರ ಕಿ.ಮೀ. ಗ್ರಾಮೀಣ ರಸ್ತೆಗಳಿವೆ. ಮಾನ್ಯ ಸಭಾಧ್ಯಕ್ಷರಿಗೆ ಇಲ್ಲಿಯತನಕ ಆಗಿರುವಂತಹದ್ದು ಶೇಕಡಾ 40ರಷ್ಟು ಅಷ್ಟೆ. ರಸ್ತೆಗಳು ಡಾಂಬರೀಕರಣ ಕಂಡಿರುವಂತಹದ್ದು ಹೇಳುತ್ತಿದ್ದೇನೆ. ಆ ಸರ್ಕಾರ, ಈ ಸರ್ಕಾರ ಬೇರೆ. 70 ವರ್ಷದ ಅವಧಿಯಲ್ಲಿ ನಾವು ಸಾಧನೆ ಮಾಡಿರುವಂತಹದ್ದು ಕೇವಲ 40%. ಅದನ್ನು ಎಲ್ಲಾ ಸರ್ಕಾರಗಳೂ ಕೂಡ ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಇತ್ತೀಚೆಗೆ "ನಮ್ಮ ಗ್ರಾಮ ನಮ್ಮ ರಸ್ತೆ" ಯೋಜನೆ ತರಲಾಗಿದೆ. ಬೇಸರವೇನು ಎಂದರೆ, 2016-17ನೇ ಸಾಲಿನಲ್ಲಿ ಕಳೆದ ಬಜೆಟ್‌ನಲ್ಲಿ, ನಾವು ಈ ವರ್ಷ ಪ್ರತಿ ಕ್ಷೇತ್ರಕ್ಕೆ 20 ಕಿ.ಮೀ. ರಸ್ತೆ ಕೊಡುತ್ತೇವೆಂದು ಸರ್ಕಾರ ಭರವಸೆ ಕೊಟ್ಟಿದೆ. ಈಗ ವರ್ಷ ಕಳೆದು ಹೋದರೂ ಸಹ ಈಗ ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿದೆ. ಈ ರೀತಿ ವಿಳಂಬವಾಗಬಾರದು. ಜೊತೆಗೆ ಕಳೆದ ಸಾರಿ ನಾಲ್ಕು ವರ್ಷಗಳ ಹಿಂದೆ ಮಂಜೂರಾದಂತಹ ಕಾರ್ಯಕ್ರಮಗಳು ಇನ್ನೂ ಕೂಡ ಟೆಂಡರ್ ಪ್ರಕ್ರಿಯೆ ಮುಗಿದಿಲ್ಲ. ಇನ್ನೂ ಕೂಡ ಮುಗಿದಿಲ್ಲ. ಕಾರಣವೇನೆಂದರೆ, ಪ್ಯಾಕೇಜ್. ಮಾನ್ಯ ಅಪ್ಪಚ್ಚುರಂಜನ್‌ರವರೆ, 6-7 ಕೋಟಿ ರೂಪಾಯಿಗಳಿಗೆ 3-4 ಕೆಲಸಗಳನ್ನು ಪ್ಯಾಕೇಜ್ ಮಾಡಿಬಿಡುತ್ತಾರೆ. ಅವನು ಯಾರು ಬರಬೇಕು? ತಮಿಳುನಾಡಿನಿಂದ ಬರಬೇಕು, ಆಂಧ್ರದಿಂದಲೇ ಬರಬೇಕು, ಗುಜರಾತ್‌ನಿಂದಲೇ ಬರಬೇಕು. ಕರ್ನಾಟಕದವನಿಗೆ ಯಾವನಿಗೂ ತಾಕತ್ತಿಲ್ಲ. ತಾಕತ್ತು ಇದ್ದರೂ ಸಹ ಅದು allow ಆಗುವುದಿಲ್ಲ. ಅದು ಒಂದು.

**(ಈ ಹಂತದಲ್ಲಿ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)**

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಇವತ್ತು ಆ ಪರಿಸ್ಥಿತಿಯಿದೆ. ದಯಮಾಡಿ, . . ಬಹಳ ಮಜ ಎಂದರೆ, ಆ ಪ್ಯಾಕೇಜ್ ಮಾಡಿಕೊಳ್ಳುತ್ತಾನಲ್ಲಾ, ಕೊನೆಗೆ ಬಂದು ಮಾಡುವುದು ಯಾರು ಗೊತ್ತಾ? ನಮ್ಮೂರ ಬೋರಯ್ಯನೇ ಮಾಡುವುದು. ಆ ಪ್ಯಾಕೇಜ್ ವರ್ಕ್ ನಾಲ್ಕೈದು ಇರುತ್ತದಲ್ಲಾ ಸರ್? ಕೊನೆಗೆ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಬಂದು ಮಾಡುವವರು ಯಾರು? ನಮ್ಮೂರಿನವರೇ ಮಾಡುವುದು. ಬೇರೆ ಎಲ್ಲಿಂದಲೂ ಅವರು ಬರುವುದಿಲ್ಲ. ಅದೇ ತರಹದಲ್ಲಿ . .

ಶ್ರೀ ಎಂ.ಪಿ.ಅಪ್ಪಚ್ಚುರಂಜನ್: Fees ಕೊಟ್ಟು percentage ತೆಗೆದುಕೊಂಡು ಕಳಪೆ ಕೆಲಸ ಮಾಡಿ ಮುಗಿಸಿಬಿಡುತ್ತಾರೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಪುನ: ಕಳಪೆ ಕಾಮಗಾರಿಯಾಗುತ್ತದೆ. ಬೇರೆ ಇನ್ನು ಏನೂ ಆಗುವುದಿಲ್ಲ. ದಯಮಾಡಿ ಆ ಕಡೆಗೆ ಗಮನ ಕೊಡಬೇಕು. ವೈಯುಕ್ತಿಕ ಕೆಲಸಗಳನ್ನು ಬೇಕಾದರೆ ಮಾಡಲಿ, ಲೋಕಲ್‌ನವರನ್ನೇ ಹಾಕಿಕೊಳ್ಳಲಿ. Technical approval ಗೆ ಏನೇನು ಬೇಕು ಮೂಲ ಅದು ಇದ್ದೇ ಇರುತ್ತದೆ. ಅವರು ಹಾಕಲೇ ಬೇಕು. ಅದು ಒಂದು ಕಳಪೆ ಕಾಮಗಾರಿಯಾಗುತ್ತದೆ. ಆಮೇಲೆ 'ಗ್ರಾಮ ವಿಕಾಸ ಯೋಜನೆ' ಎಂದು ಜಾರಿಗೆ ಬಂತು. ನಾವು ನೀವು ಜಂಟಿ ಸರ್ಕಾರವಿದ್ದಾಗ 'ಸುವರ್ಣ ಗ್ರಾಮ ಯೋಜನೆ' ಎಂದು ಮಾಡಿದೆವು. ಆ ಹೆಸರಿನಲ್ಲಿ ಕೊಟ್ಟರೆ ಇವರಿಗೆ ಎಲ್ಲಿ ಹೆಸರು ಹೋಗುತ್ತದೋ ಎಂದು 'ಗ್ರಾಮ ವಿಕಾಸ ಯೋಜನೆ' ಎಂದು introduce ಮಾಡಿದರು. ಇಲ್ಲಿಯವರೆಗೂ ಬಹಳಷ್ಟು ಕಡೆಗಳಲ್ಲಿ ಕೆಲಸಗಳೇ ಅಂದರೆ ಕಾಮಗಾರಿಗಳು ಪ್ರಾರಂಭವಾಗಿಲ್ಲ. ನಾವು ಶಾಸಕರು ಅಧ್ಯಕ್ಷರಿದ್ದೇವೆ. ಕ್ರಿಯಾ ಯೋಜನೆ ಮಾಡಿಕೊಟ್ಟಿದ್ದೇವೆ. ಮೂಲ ಕಾರಣವೇನೆಂದರೆ, ನೀವು ಗ್ರಾಮಪಂಚಾಯಿತಿ . . .

ಶ್ರೀ ಸಿ.ಟಿ.ರವಿ: ಕುಮಾರಸ್ವಾಮಿಯವರೆ, ಅದರ ಜೊತೆಗೆ ಏನು ಹೇಳಿದ್ದರು ಎಂದರೆ, ಸಮಗ್ರ ಗ್ರಾಮದ ಅಭಿವೃದ್ಧಿಯಾಗುತ್ತದೆ ಎಂದು ಹೇಳಿದ್ದರು. ಈಗ ರೂ.75 ಲಕ್ಷದಲ್ಲಿ ಕೆಲಸಕ್ಕೆ ರೂ.40-43 ಲಕ್ಷಗಳನ್ನು ಮಾತ್ರ development work ಗೆ ಉಪಯೋಗ ಮಾಡಿದ್ದಾರೆ.

ಶ್ರೀ ತಿಮ್ಮರಾಯಪ್ಪ: ಸರ್ 6 ರಸ್ತೆಗಳು ಇದ್ದರೆ 3 ರಸ್ತೆಗಳ ಮಾತ್ರ ಆಗುತ್ತದೆ.

ಶ್ರೀ ಸಿ.ಟಿ.ರವಿ: ಸಮಗ್ರ ಇಲ್ಲ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಏನಾಗಿದೆ ಎಂದರೆ, ರೂ.78 ಲಕ್ಷಗಳನ್ನು ಕೊಡುತ್ತಾರೆ. ಅದರಲ್ಲಿ ದೇವಸ್ಥಾನಗಳು, ಕೆರೆಗಳು, ಚರಂಡಿಗಳು, ಮತ್ತೊಂದು, ಆಟದ ಮೈದಾನ ಇವೆಲ್ಲವನ್ನೂ ನಾವು ಮಾಡಬೇಕು. ಏಕೆ ವಿಳಂಬವಾಗುತ್ತಿದೆ ಎಂದರೆ, ಸರ್ಕಾರ ಹಣವನ್ನು ಗ್ರಾಮಪಂಚಾಯಿತಿಗಳಿಗೆ deposit ಮಾಡುತ್ತದೆ. ಹೌದಾ ಸರ್? ಮಾಡಿದ್ದಾರೆ ಈಗ.

ಶ್ರೀ ಸಾ.ರಾ.ಮಹೇಶ್: ವಾಪಸ್ಸು ತೆಗೆದುಕೊಂಡರು.

ಶ್ರೀ ಬಿ.ಬಿ.ನಿಂಗಯ್ಯ: ಇದೆಲ್ಲಾ ಮಾಡಿ ಪಂಚಾಯತ್ ಅಧ್ಯಕ್ಷರು ಸಹಿ ಹಾಕುತ್ತಿಲ್ಲ.

(ಮುಂದು . . .)

ದಿನಾಂಕ: 27-03-2017-5.50(40)-ಜೆ.ಎಲ್&ಎಸ್.ಎಸ್.ಡಿ

ಶ್ರೀ ಬಿ.ಬಿ.ನಿಂಗಯ್ಯ: ಪಂಚಾಯಿತಿ ಅಧ್ಯಕ್ಷರು ಸಹಿ ಹಾಕುತ್ತಿಲ್ಲ.

ಶ್ರೀ ಸಾ.ರಾ.ಮಹೇಶ್: ಇಲ್ಲ ವಾಪಸ್ಸು ತೆಗೆದುಕೊಂಡರು

ಶ್ರೀ ಸಿ.ಟಿ.ರವಿ: ಅದಕ್ಕೆಲ್ಲಾ rules frame ಮಾಡಿದ್ದಾರೆ. ಅಕಸ್ಮಾತ್ ಪಂಚಾಯಿತಿ ಅಧ್ಯಕ್ಷರು ಒಂದು ವಾರದೊಳಗೆ ಸಹಿ ಹಾಕದೆ ಇದ್ದರೆ, EO, ಶಾಸಕ ಯಾರು ಬೇಕಾದರೂ thumb ಕೊಡಬಹುದು ಎಂದು rules ಮಾಡಿದ್ದಾರೆ. ಅದೆಲ್ಲಾ ಸಮಸ್ಯೆಯಿಲ್ಲ, ಆದರೆ surplus amount, ಒಂದು ಸಮಗ್ರ ಗ್ರಾಮದ ಅಭಿವೃದ್ಧಿಗೆ ಬೇಕಾದಂತಹ ಅನುದಾನವನ್ನು ಅದರಲ್ಲಿ ಇಟ್ಟಿಲ್ಲ. ಶವರ್, ಬ್ಯೂಟಿಪಾರ್ಲರ್‌ನಿಂದ ಬಂದ ರೀತಿ ಹೊರಗೆ ಬರಬಹುದು ಎಂದೆಲ್ಲಾ ಹೇಳಿದ್ದು ಅದೆಲ್ಲಾ ಇಲ್ಲ.

ಶ್ರೀ ಬಿ.ಆರ್.ಯಾವಗಲ್: ಸ್ವಾಮಿ, ತಾವು ಸುವರ್ಣಗ್ರಾಮ ಮಾಡಿದ್ರಿ, ತಾವು ಹಾಗೆ ಮಾಡಿದ್ರಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಈಗ ಸಮಗ್ರ ಗ್ರಾಮ ಅಭಿವೃದ್ಧಿ ಆಗಬೇಕೆಂಬುದು ಒಂದು ಕನಸು. ಆದರೆ 78 ಲಕ್ಷ ರೂ.ಗಳಲ್ಲಿ ಸಮಗ್ರ ಗ್ರಾಮ ಅಭಿವೃದ್ಧಿ ಆಗುವುದಿಲ್ಲ. ಕನಿಷ್ಠ ಎರಡು ಕೋಟಿ ರೂ. ಗಳನ್ನಾದರೂ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ಹೌದು ತಾವು ಹೇಳುವುದು ನಿಜ, ಒಂದು ಪಂಚಾಯಿತಿಗೆ ಕನಿಷ್ಠ ಐದು ಕೋಟಿ ರೂ.ಗಳನ್ನಾದರೂ ಕೊಟ್ಟರೆ ಒಂದು ರೂಪ ತರುವುದಕ್ಕೆ ಸಾಧ್ಯವಿದೆ. ಆದರೆ ಈಗ ಪ್ರಾರಂಭವಾಗಿದೆ, ಈಗ ಪ್ರಾರಂಭವಾಗಿರುವುದು ಇನ್ನೂ ವಿಸ್ತಾರವಾಗಬೇಕು ಅದನ್ನು ಹೇಗೆ ಮಾಡಬೇಕೆಂಬ ಬಗ್ಗೆ ಸಲಹೆ ಕೊಡಿ.

ಶ್ರೀ ಸಾ.ರಾ.ಮಹೇಶ್: ಸಾರ್, ಪ್ರಾರಂಭವಾಗಿ 10 ವರ್ಷಗಳಾಯಿತು.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಸಿ.ಟಿ.ರವಿ: ನೀವು ಹಿರಿಯ ಸಚಿವರಾಗಿರುವ ಕಾರಣಕ್ಕೆ ಕ್ಯಾಬಿನೇಟ್‌ನಲ್ಲಿಯೂ ಕೂಡ ಬೆಳಕು ಚೆಲ್ಲಬಹುದು. ನೀವು NREGS club ಮಾಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೇವೆ, ಪೂರ್ಣ ಪ್ರಮಾಣದ estimate ಮಾಡಿ ಎಂದು ಅವರು ಹೇಳಿದ್ದರು. ನಾನು ಖುದ್ದು ಆಸಕ್ತಿವಹಿಸಿ ಅವರು ಹೇಳಿದ ಹಾಗೆ ಎಲ್ಲಾ ಮಾಡಿಸಿದೆ ಆದರೆ NREGS ಇದ್ದಕ್ಕೂ ಏನು ಜೋಡಿಸಲಿಲ್ಲ. ಇದು ಈಗಿರುವಂತಹ ಸ್ಥಿತಿ. ಅವರು ಹೇಳಿದ್ದರು ಆದರೆ ಅವರು ಹೇಳಿದ ಹಾಗೆ ಇಲ್ಲವೆಂದು ಹೇಳುತ್ತಿದ್ದೇನೆ. ನಿಮಗೆ ಏಕೆ ಹೇಳುತ್ತಿದ್ದೇನೆ ಎಂದರೆ ಈಗ ಹೆಚ್.ಕೆ.ಪಾಟೀಲ್ ರವರು ಇಲ್ಲ. ಅವರು ಷೋಕೇಸ್‌ನಲ್ಲಿಟ್ಟು ಇಂಧ್ರ, ಚಂದ್ರ ಎಂದು ತೋರಿಸುತ್ತಾರೆ. ಆದರೆ ಆ ರೀತಿ ಇಲ್ಲ ಅವರು ಹೇಳಿದ ಹಾಗೆ ಶವರ್ ಇಲ್ಲ, ನೀರೂ ಇಲ್ಲ, ಕುಡಿಯುವುದಕ್ಕೇ ನೀರಿಲ್ಲ ಶವರ್ ಎಲ್ಲಿ ಬಂತು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಈ ಹಣ ಗ್ರಾಮಪಂಚಾಯಿತಿಗಳಿಗೆ ಹೋಗುತ್ತಿದೆ. ಗ್ರಾಮಪಂಚಾಯಿತಿ ಅಧ್ಯಕ್ಷರು ಗ್ರಾಮಪಂಚಾಯಿತಿ ಅಧ್ಯಕ್ಷರಾಗಿಲ್ಲ, ಅವರು ರಾಷ್ಟ್ರಾಧ್ಯಕ್ಷರಾಗಿದ್ದಾರೆ, ರಾಷ್ಟ್ರಪತಿಗಳಾಗಿದ್ದಾರೆ. ರಾಷ್ಟ್ರಪತಿಗಳಾದ ಪ್ರಣಬ್ ಮುಖರ್ಜಿ ಸಾಹೇಬರು ಹೇಗೆ ಕೈಯಾಡಿಸುತ್ತಾರೋ ಹಾಗೆಯೇ ಇವರೂ ಅಲ್ಲಿಂದಲೇ ನಮಗೆ ಟಾಟಾ ಮಾಡುತ್ತಾರೆ ಆದರೆ ಗ್ರಾಮಪಂಚಾಯಿತಿ ಅಧ್ಯಕ್ಷರನ್ನು ಮಾತನಾಡಿಸುವುದಕ್ಕಾಗುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಮೊದಲು ಗ್ರಾಮ ಪಂಚಾಯಿತಿಯೆಂದು ಇತ್ತು, ಈಗ ಗ್ರಾಮ ಸ್ವರಾಜ್ ಎಂದು ಆಗಿದೆ. ಗ್ರಾಮ ಸ್ವರಾಜ್ ಆದನಂತರ ಅವರು ಒಂದು ಪ್ರಭುತ್ವವನ್ನು ಸಾಧಿಸಬೇಕಲ್ಲವೇ?

ಶ್ರೀ ಹೆಚ್.ಕೆ.ಕುಮಾರಸ್ವಾಮಿ: Title ಗಳು ಬಹಳ ಚೆನ್ನಾಗಿವೆ. ಸ್ವರಾಜ್ ಈಗಾಗಲೇ title ಪ್ರಕಾರ ಸುರಾಜ್ಯದ ಕಡೆಗೆ ಹೋಗುತ್ತಿದೆ ಅದು ಹೋಗಲಿ. ಆದರೆ ಅವರಿಗೆ ಏನಾದರೊಂದು ಅಂಕಿತ ಹಾಕಬೇಕು ಅದು ಬಹಳ ದುರಹಂಕಾರದ ಪರಮಾವಧಿ, ಇದು ಒಳ್ಳೆಯದಲ್ಲ. ಈ ನಿಟ್ಟಿನಲ್ಲಿ ಸರ್ಕಾರ strict ಆದೇಶ ಕೊಟ್ಟು ಮೊದಲು ಚೆಕ್ issue ಮಾಡು ಎಂದು ಹೇಳಿ ಸಹಿ ಮಾಡಿಸಬೇಕೆಂಬುದು ಒಂದು ವಿಷಯವಾಗಿದೆ.

ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ (ರಾಜ್ಯ ಜವಳಿ ಖಾತೆ ಹಾಗೂ ಮುಜರಾಯಿ ಸಚಿವರು): ಮಾನ್ಯ ಅಧ್ಯಕ್ಷರೆ, ಇರುವ ಅಧಿಕಾರವನ್ನು ತದನಂತರ ಬದಲಾವಣೆ ಮಾಡಿ ಮತ್ತೆ Land Army ಗೆ ವಾಪಸ್ಸು ತಂದು ಕೊಡಬೇಕೆಂದು ಮಾಡಿಸಿದ್ದೇವೆ. ಅದು ಸರಿಯಾಗಿ ನಡೆದಿದೆ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಲಮಾಣಿಯವರೆ, ಅವರಿಗೆ ಇವರು ಚೆಕ್ ಕೊಡಬೇಕು. ನಾವು ಅತ್ಯಂತ ಸಣ್ಣ ಇಲಾಖೆಗಳೆಂದು ಉದಾಸೀನ ಮಾಡುತ್ತೇವೆ. ಉದಾಹರಣೆಗೆ, ಮೀನುಗಾರಿಕೆ ಇಲಾಖೆಗೆ ವಿಶೇಷ ಘಟಕ ಯೋಜನೆ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. 2013-14ರಲ್ಲಿ 171 ಲಕ್ಷ ರೂ.ಗಳು ಬಿಡುಗಡೆ ಆಯಿತು, ಖರ್ಚಾಗಿರುವುದು ಕೇವಲ 167 ಲಕ್ಷ ರೂ.ಗಳು. 2014-15ನೇ ಸಾಲಿನಲ್ಲಿ ಬಿಡುಗಡೆ ಮೊತ್ತ 15 ಕೋಟಿ ರೂ.ಗಳು, ಖರ್ಚಾಗಿರುವುದು 14 ಕೋಟಿ ರೂ.ಗಳು ಇನ್ನೂ ಹಣ ಉಳಿಯಿತು. 2015-16ನೇ ಸಾಲಿನಲ್ಲಿ ಬಿಡುಗಡೆ ಆಗಿರುವುದು 17 ಕೋಟಿ ರೂ.ಗಳು, 16 ಕೋಟಿ ರೂ.ಗಳು ಖರ್ಚಾಗಿರುವುದು ಇನ್ನೂ 1.32 ಕೋಟಿ ರೂ.ಗಳು ಉಳಿಯಿತು. ಮೀನುಗಾರರು ಇಲ್ಲವೇ, ಬೆಸ್ತರು ಇಲ್ಲವೇ, ಫಲಾನುಭವಿಗಳು ಇಲ್ಲವೇ? ಎಷ್ಟು ಜನರಿದ್ದಾರೆ. ತಮಗೆ ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಮೀನುಗಾರರಿಗೆ ಒಂದು ಕ್ಷೇತ್ರಕ್ಕೆ ಒಂದೇ ಮೀನುಗಾರರ vehicle ಕೊಡುವುದು ಆ vehicleಗೆ 60% ಸಬ್ಸಿಡಿ ಇದೆ. Physical target, ಭೌತಿಕ ಗುರಿ ಹೆಚ್ಚು ಮಾಡಿ ಎಂದಷ್ಟೆ ನಾವು ಕೇಳುತ್ತಿರುವುದು.

ಶ್ರೀ ಕಾಗೋಡು ತಿಮ್ಮಪ್ಪ: ನಾನು ಹೇಳುತ್ತೇನೆ ಕೇಳಿ, ಹಣವನ್ನು ಯಾವ ರೀತಿ ಬಳಸಿಕೊಳ್ಳಬೇಕೆಂಬ ಬಗ್ಗೆ ನೀವೆಲ್ಲರೂ ಸೇರಿ ಚರ್ಚೆ ಮಾಡಿ, ಸರ್ಕಾರಕ್ಕೆ ಮನವರಿಕೆ ಮಾಡಿಕೊಡಿ. ಇಲ್ಲವಾದರೆ ಇದೇ ರೀತಿ ಹಣೆಬರಹವಾಗುತ್ತದೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ನಮ್ಮ ಪರಿಷತ್ ಸಭೆ ಐದು ವರ್ಷ ನಡೆದೇ ಇರಲಿಲ್ಲ. ನಮ್ಮ ಅವಧಿಯಲ್ಲಿ ಒಂದು ಬಾರಿ ಸಭೆ ನಡೆಯಿತು, ಈಗ ಮುಖ್ಯಮಂತ್ರಿಗಳ ಅಧಿಕಾರವಧಿಯಲ್ಲಿ ಎರಡು ಬಾರಿ ಪರಿಷತ್ ಸಭೆ ನಡೆದಿದೆ. ದುರಾದೃಷ್ಟವಶಾತ್ ಸಭೆ ಕರೆದಾಗಲೇ ಏನಾದರೂ ಆಗುತ್ತದೆ. ಪರಿಷತ್ ಸಭೆಗಳು ಅನೇಕ ಕಾರಣಕ್ಕಾಗಿ ಮುಂದೆ ಮುಂದೆ ಹೋಗುತ್ತವೆ. ಇದೊಂದು ಉದಾಹರಣೆ ಹೇಳಿದೆ ಅಷ್ಟೆ. ಬಜೆಟ್‌ನಲ್ಲಿ ನಿಗದಿ ಮಾಡಿರುವ ಹಣ ಬಿಡುಗಡೆ ಆಗಬೇಕು, ಬಿಡುಗಡೆ ಆದ ಹಣ ಖರ್ಚಾಗಬೇಕು ಆಗ ಮಾತ್ರ ಬಜೆಟ್‌ಗೆ ಅದರ sanctity ಉಳಿಯುತ್ತದೆ ಎಂಬ ಮಾತನ್ನು ಹೇಳುತ್ತೇನೆ. ಇವತ್ತು ನೌಕರರಿಗೆ ಏಳನೇ ವೇತನ ಆಯೋಗ ಮಾಡಿದ್ದೀರಿ ನಾವು ಅದಕ್ಕೆ ವಿರೋಧ ಮಾಡುತ್ತಿಲ್ಲ. ಅದೇ ರೀತಿ ಬೇರೆ ಬೇರೆ neglected ಸಮಾಜ ಏನಿದೆ, ಅಂಗನವಾಡಿ ಕಾರ್ಯಕರ್ತೆಯರು ಇತ್ಯಾದಿ ಇರಬಹುದು ಅಂತಹವರಿಗೆ ಹೆಚ್ಚು ಗೌರವಧನವನ್ನು ಕೊಡಬೇಕು. ಅವರ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಸೇವೆಯನ್ನು ಸರ್ಕಾರ ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕು. ಮಕ್ಕಳಿಂದ ಹಿಡಿದು ಎಲ್ಲರನ್ನೂ ಪಾಲನೆ ಮಾಡುವುದು ಅಂಗನವಾಡಿ ಕಾರ್ಯಕರ್ತರಾಗಿದ್ದು, ಅವರಿಗೆ ಹೆಚ್ಚು ಗೌರವಧನವನ್ನು ಕೊಡಿ ಎಂದು ಒತ್ತಾಯ ಮಾಡುತ್ತಾ, 2017-18ನೇ ಸಾಲಿನಲ್ಲಿ ಸರ್ಕಾರ ಸುಮಾರು 37,000 ಕೋಟಿ ರೂ.ಗಳನ್ನು ಸಾಲ ಮಾಡುತ್ತಿದೆ. ಒಟ್ಟು 96,000 ಕೋಟಿ ರೂ.ಗಳಿಗೆ ಸಾಲ ಏರಿದೆ, ಏರಿಕೆ ಮಾಡಿರುವುದು ನೋಡಿದರೆ ಮುಂದೆ ಸರ್ಕಾರ ಬರುವುದಿಲ್ಲವೆಂಬ ಅನುಮಾನ ಇರುವ ಹಾಗೆ ಕಾಣುತ್ತದೆ. ಏಕೆಂದರೆ, ಮುಂದೆ ಯಾರು ಬರುತ್ತಾರೋ ಅವರು ತೀರಿಸಿಕೊಳ್ಳಲಿ, ಆಮೇಲೆ ನೋಡೋಣ ಎಂಬ ಅನುಮಾನ ಇರಬಹುದು. ಏನೇ ಇರಲಿ ಬಡವರ ಕಾರ್ಯಕ್ರಮಗಳು ಜಾರಿಯಾಗಲಿ ಬಜೆಟ್‌ನಿಂದ ಅನುಕೂಲವಾಗಲಿ ಎಂದು ಹೇಳುತ್ತಾ ಮಾತನಾಡುವುದಕ್ಕೆ ಇವತ್ತು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್: ಬಿ.ಆರ್.ಪಾಟೀಲ್ ರವರೆ ಮಾತನಾಡಿ ಅವರು ಇಲ್ಲವೇ, ಪುಟ್ಟಣ್ಣಯ್ಯ ನವರು.

ಶ್ರೀ ಸಾ.ರಾ.ಮಹೇಶ್: ಮಾನ್ಯ ಛೇರ್ಮನ್ ರವರೆ, ಅತಿಥಿ ಉಪನ್ಯಾಸಕರ ವಿಷಯಕ್ಕೆ ಉತ್ತರ ಕೊಡಿಸುತ್ತೇನೆಂದು ಹೇಳಿದ್ದರು. ಬಾವಿಯಿಂದ ಹೊರಗೆ ಕಳುಹಿಸಿ ಉತ್ತರ ಕೊಡಿಸುತ್ತೇವೆ ಎಂದು ಹೇಳಿದ್ದರು ಅದಕ್ಕೆ ದಯಮಾಡಿ ಉತ್ತರ ಕೊಡಿಸಿ. 11 ದಿವಸಗಳಾದರೂ ಹೋಗಿ ಅವರನ್ನು ಭೇಟಿ ಮಾಡಿಲ್ಲ. ಸರ್ಕಾರದಿಂದ ಯಾರು ಹೋಗಿ ಭೇಟಿ ಮಾಡಿದ್ದಾರೆಂಬ ಉತ್ತರ ಕೊಡಿಸಿ.

ಛೇರ್ಮನ್: ಅವರ ಪ್ರಶ್ನೆಗೆ ಉತ್ತರ ಕೊಡುತ್ತಿರೋ ಹೇಗೆ?

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಸರ್ಕಾರದ ಪರವಾಗಿ ಸಚಿವರಿದ್ದಾರೆ, ಉತ್ತರ ಹೇಳಲಿ.

ಶ್ರೀ ತನ್ವೀರ್ ಸೇಠ್(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು): ಮಾನ್ಯ ಛೇರ್ಮನ್ ರವರೆ, ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಅತಿಥಿ ಉಪನ್ಯಾಸಕರ ಧರಣಿ ಸತ್ಯಾಗ್ರಹ ಮತ್ತು ಉಪವಾಸ ಸತ್ಯಾಗ್ರಹ ಕಳೆದ 11 ದಿವಸಗಳಿಂದ ನಡೆಯುತ್ತಿರುವುದು ಸರ್ಕಾರದ ಗಮನದಲ್ಲಿದೆ. ಉನ್ನತ ಶಿಕ್ಷಣ ಸಚಿವರು ಮೇಲ್ಮನೆಯಲ್ಲಿ ಉತ್ತರ ಕೊಡುವಂತಹ ಸಂದರ್ಭದಲ್ಲಿ ನಾನು ಅಲ್ಲೇ ಇದ್ದೆ. ಅವರ ಬಹುತೇಕ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಈಗಾಗಲೇ ಇಲಾಖೆ ಕೆಲಸ ಮಾಡುತ್ತಿದೆ. ಯಾರಾದರೂ ಅಲ್ಲಿ ಭೇಟಿ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನೀಡಬೇಕಾಗಿತ್ತೆಂದು ಸದಸ್ಯರು ಕೇಳುತ್ತಿದ್ದಾರೆ. ನಮ್ಮ ಕಡೆಯಿಂದ ಉನ್ನತ ಶಿಕ್ಷಣ ಸಚಿವರು ಅಥವಾ ಅವರ ಪ್ರತಿನಿಧಿ ಯಾರು ಹೋಗಿದ್ದಾರೆಂಬುದು ನನ್ನ ಗಮನದಲ್ಲಿ ಇಲ್ಲ.

ಶ್ರೀ ಸಾ.ರಾ.ಮಹೇಶ್: ನಾನು ಇವತ್ತು ಅಲ್ಲಿಂದಲೇ ಬಂದಿದ್ದೇನೆ ಯಾರೂ ಕೂಡ ಹೋಗಿಲ್ಲ.

ಶ್ರೀ ತನ್ವೀರ್ ಸೇಠ್ : ಆದರೆ ಆ ನಿಯೋಗ ಬಂದು ಭೇಟಿ ಮಾಡಿ ಅವರ ಬಳಿ ಚರ್ಚೆ ಮಾಡಿರುವ ವಿಚಾರ ನನ್ನ ಗಮನದಲ್ಲಿದೆ. ಈ ವಿಚಾರವನ್ನು ಉನ್ನತ ಶಿಕ್ಷಣ ಸಚಿವರ ಗಮನಕ್ಕೆ ತರುತ್ತೇನೆ ಹಾಗೂ ಅದರ ಸ್ಪಷ್ಟವಾದ ಉತ್ತರವನ್ನು ಸದನದಲ್ಲಿ ಕೊಡಿಸುವುದಕ್ಕೆ ಪ್ರಯತ್ನಪಡುತ್ತೇನೆ.

ಛೇರ್ಮನ್: ಸದಸ್ಯರುಗಳ ಅಭಿಪ್ರಾಯವೇನೆಂದರೆ, ಅತಿಥಿ ಉಪನ್ಯಾಸಕರು ಧರಣಿ, ಪ್ರತಿಭಟನೆ ಮಾಡುತ್ತಿರುವ ಸಂದರ್ಭದಲ್ಲಿ ಸರ್ಕಾರದ ವತಿಯಿಂದ ಯಾರಾದರೂ ಹೋಗಿ ಮಾತನಾಡಿಸಬೇಕು ಅವರ ಬೇಡಿಕೆಗಳನ್ನು ಆಲಿಸಬೇಕೆಂದು ಹೇಳುತ್ತಿದ್ದಾರೆ.

ಶ್ರೀ ತನ್ವೀರ್ ಸೇಠ್: ನಾನು ಪೂರ್ಣ ವಿವರಗಳನ್ನು ಪಡೆದುಕೊಂಡು ಸಚಿವರಿಂದ ಅಥವಾ ಇಲಾಖೆಯಿಂದ ಮಾಹಿತಿ ತರಿಸಿ ಕೊಡುತ್ತೇನೆ.

ಛೇರ್ಮನ್: ಮಾಹಿತಿಯೆಂದರೆ, ಯಾರಾದರೂ ಸ್ಥಳಕ್ಕೆ ಹೋಗುವ ರೀತಿ ನೋಡಿಯೆಂದು.

(ಗೊಂದಲ)

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಉತ್ತರ ಯಾವಾಗ ಕೊಡಿಸುತ್ತೀರಿ?

(ಗೊಂದಲ)

ಶ್ರೀ ಸಾ.ರಾ.ಮಹೇಶ್: 11 ದಿವಸಗಳಿಂದ ಧರಣಿ ಮಾಡುತ್ತಿದ್ದರೂ ಸ್ಥಳಕ್ಕೆ ಹೋಗದಿರುವಂತಹ busy ನಿಮ್ಮ ಸಚಿವರಿಗೆ ಏನಿದೆ? 11 ದಿವಸಗಳು ಧರಣಿ ಮಾಡಬೇಕೇ? ಇಷ್ಟು ದಿವಸ ಧರಣಿ ಮಾಡಿದರು ಹೋಗದಿರುವಷ್ಟು ನಿಮ್ಮ ಮಂತ್ರಿಗಳು busy ಆಗಿದ್ದಾರೆಯೇ? ಈ ಬಗ್ಗೆ ದಯವಿಟ್ಟು ಹೇಳಿ.

ಶ್ರೀ ತನ್ವೀರ್ ಸೇಠ್: ಇಲ್ಲಾ ಹಾಗಲ್ಲ.

(ಗೊಂದಲ)

ಶ್ರೀ ಸಾ.ರಾ.ಮಹೇಶ್: ದಯವಿಟ್ಟು ಸಚಿವರನ್ನು ವಹಿಸಿಕೊಳ್ಳಬೇಡಿ. ಇದು ಜನರ ಸರ್ಕಾರ.

(ಗೊಂದಲ)

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಸಿ.ಟಿ.ರವಿ: ನಮ್ಮದು ಜನರ ಸರ್ಕಾರವೆಂದು ಹೇಳುತ್ತೇವೆ. ಜನರ ಸರ್ಕಾರವೆಂದು ಹೇಳಿದ ಮೇಲೆ ಜನರ ಅಹವಾಲನ್ನು ಕೇಳಬೇಕೋ ಬೇಡವೋ? ಅವರ ಸಂಕಷ್ಟಕ್ಕೆ ಕಿವಿಯೊಡ್ಡಬೇಕೋ ಬೇಡವೋ?

(ಗೊಂದಲ)

ಶ್ರೀ ಸಾ.ರಾ.ಮಹೇಶ್: ಜನ ನಗುತ್ತಾರೆ, ಇಲ್ಲಿ ಹೌಸ್ ನಡೆಯುತ್ತಿದೆ. 11 ದಿವಸಗಳಿಂದ ಹೋಗಿಲ್ಲವೆಂದರೆ ಏನರ್ಥ?

ಶ್ರೀ ತನ್ವೀರ್ ಸೇಠ್: ರವಿಯವರೆ, ಏನಾಗುತ್ತಿದೆಯೆನ್ನುವುದು ತಮಗೂ ಗೊತ್ತಿದೆ.

(ಗೊಂದಲ)

ಶ್ರೀ ಸಾ.ರಾ.ಮಹೇಶ್: ಏನಾಗುತ್ತಿದೆ?

(ಗೊಂದಲ)

ಶ್ರೀ ತನ್ವೀರ್ ಸೇಠ್: ಒಂದು ನಿಮಿಷ ಇರಿ, ನನ್ನ ಜವಾಬ್ದಾರಿ ಏನೆಂದು ನನಗೆ ಗೊತ್ತಿದೆ.

ಛೇರ್ಮನ್: ಮಾನ್ಯ ಸಚಿವರೆ, ಯಾರಾದರೊಬ್ಬರು ಸ್ಥಳಕ್ಕೆ ಹೋಗುವುದಕ್ಕೆ ಕ್ರಮ ಕೈಗೊಳ್ಳಿ ಅಷ್ಟೆ.

ಶ್ರೀ ತನ್ವೀರ್ ಸೇಠ್: ನಾನು ಉನ್ನತ ಶಿಕ್ಷಣ ಸಚಿವರ ಗಮನಕ್ಕೆ ತಂದು ಅವರು ಅಥವಾ ಅವರ ಪರವಾಗಿ ಮಾಹಿತಿ ತರಿಸಿ ನಾನು ಕೊಡುತ್ತೇನೆ.

(ಮುಂದುವರೆದಿದೆ)

ದಿನಾಂಕ: 27-03-2017-6.00(41) AJ/VR

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ ( ಮೇಲುಕೋಟೆ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು 12ನೇ ಬಜೆಟ್ ಮಂಡಿಸಿದ್ದಾರೆ. ನಮ್ಮ ದೇಶದ ಪ್ರಧಾನ ಮಂತ್ರಿಯವರು 'ಮನ್ ಕಿ ಬಾತ್' ಎನ್ನುವ ಸಂದೇಶವನ್ನು ಕೊಟ್ಟಿದ್ದಾರೆ. ನಾವು ಇಲ್ಲಿ 'ಧನ್ ಕಿ ಬಾರೆ' ಮೆ ಬಾತ್ ಕರೆತೆ ಹೈ. ಸರ್ಕಾರ ರೈತರಿಗೆ ಸಾಲ ಮನ್ನಾ ಮಾಡಬೇಕೆಂದು ನಾವು ಹೋರಾಟ ಮಾಡುತ್ತಿದ್ದೇವೆ. ಆದರೆ ಕೇಂದ್ರ ಸರ್ಕಾರ ಮತ್ತು ಅರುಣ್ ಜೇಟ್ಲಿ ಅವರು ಸಾಲ ಮನ್ನಾ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ನಾನು ಸದನದಲ್ಲಿ ಹೇಳುವುದೇನೆಂದರೆ ದೂರದರ್ಶನದಲ್ಲಿ ಪ್ರಸಾರವಾಗುವ 'ಕಾಮಿಡಿ ಕಿಲಾಡಿಗಳು' ಎನ್ನುವ ಕಾರ್ಯಕ್ರಮದ ಪರಿಸ್ಥಿತಿ ನಮ್ಮದಾಗಿದೆ. ಇವರು ಸಾಲ ಮನ್ನಾ ಮಾಡುವುದು,

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಬಿಡುವುದು ಬೇರೆ ಪ್ರಶ್ನೆ. ಮಾನ್ಯ ಮುಖ್ಯಮಂತ್ರಿಗಳು 25,000 ಕೋಟಿ ರೂ.ಗಳು ಮುಂಗಾರಿನಲ್ಲಿ ರೈತರಿಗೆ ನಷ್ಟವಾಗಿದೆ, ಹಿಂಗಾರಿನಲ್ಲಿ 7,000 ಕೋಟಿ ರೂ.ಗಳು ನಷ್ಟವಾಗಿದೆಯೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರಕ್ಕೆ 4,250 ಕೋಟಿ ರೂ.ಗಳು ಕೊಡಿಯೆಂದು ಕೇಳಿದ್ದೇವೆ. ಇದರಲ್ಲಿ ಅವರು 450 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಕುಂಟೆಗೆ, ಖುಷ್ಕಿಗೆ 68 ರೂ.ಗಳನ್ನು ಕೊಡುವ ಬದಲು 58 ರೂ. ಗಳನ್ನು ಕೆಲವೇ ಜನರಿಗೆ ಕೊಟ್ಟಿದ್ದಾರೆ. ಅದೇ ರೀತಿ ತರಿ ಭೂಮಿಗೆ 130 ರೂ.ಗಳನ್ನು ಸಹ ಕೆಲವೇ ಜನರಿಗೆ ಕೊಟ್ಟಿದ್ದಾರೆ. 30,000 ಕೋಟಿ ರೂ.ಗಳನ್ನು ನಷ್ಟವಾಗಿದ್ದು, ಇದನ್ನು ಕೊಡುವವರು ಯಾರು? ನಾವೇನೂ ಹೇಳಿಲ್ಲ. ನಷ್ಟವಾಗಿರುವ ಬಗ್ಗೆ ನಾವು ಯಾರ ಹತ್ತಿರ ಸಹ ಮಾತನಾಡಿರುವುದಿಲ್ಲ. ಈ 30,000 ಕೋಟಿ ರೂ.ಗಳಿಗೆ ಹೊಣೆಗಾರರು ಯಾರು? ರೈತರ ಸಾಲ? ರೈತರಿಂದ ಆದಾಯ ಇಲ್ಲವೇ? ಕೇವಲ ಬೀರು, ಬ್ರಾಂದಿ ಮಾರಾಟ ಮಾಡುವುದರಲ್ಲಿ 18,000 ಕೋಟಿ ರೂ.ಗಳು ಬಂದಿದೆ. ಆದರೆ ನಾವು ಕೇಳುತ್ತಿರುವ ಸಾಲ ಮನ್ನಾ 9,000 ಕೋಟಿ ರೂ.ಗಳು. ಇಡೀ ಬೊಕ್ಕಸಕ್ಕೆ ಶೇ.70% ತೆರಿಗೆ ರೂಪದಲ್ಲಿ ಬರುವಂತಹ ರೈತರನ್ನು ರಕ್ಷಣೆ ಮಾಡುವುದಕ್ಕೆ ಸಾಲ ಮನ್ನಾ ಮಾಡುವುದಕ್ಕಾಗಿರುವುದಿಲ್ಲ. ಬೆಳೆ ನೀತಿ ಸೃಷ್ಟಿ ಮಾಡುವುದಕ್ಕಾಗಿರುವುದಿಲ್ಲ. ರೈತರಿಗೆ ಪ್ರತ್ಯೇಕವಾದ ಮಾರುಕಟ್ಟೆ ಇಲ್ಲ. ಹೀಗಾದರೆ ರೈತರು ಯಾರ ಹತ್ತಿರ ಹೋಗಬೇಕು? ಈ ಸೆಕ್ಟರ್ ಅನ್ನು ರಕ್ಷಣೆ ಮಾಡುವವರು ಯಾರು? ನಾವು 50 ವರ್ಷದ ಹಿಂದೆ ಹೋಗಿ ನೋಡಿದ್ದಾಗ, ಕುದುರೆ ಹಾಕುವ ಜೋಳವೂ, ಮೀನಿಗೆ ಹಾಕುವ ಗೋಧಿಯನ್ನು ತಂದು ತಿನ್ನುತ್ತಿರುವ ದೇಶದಲ್ಲಿ ಇವತ್ತು ಮೊನ್ನೆಯಷ್ಟೆ ಮಾನ್ಯ ಪ್ರಧಾನ ಮಂತ್ರಿಯವರು 270 ಮಿಲಿಯನ್ ಟನ್‌ನಷ್ಟು ಆಹಾರ ಉತ್ಪಾದನೆ ಮಾಡಿ ಸ್ವಾಭಿಮಾನ ಮತ್ತು ಸ್ವಾವಲಂಬಿಗಳಾಗಿ ಬದುಕುವಂತಹ ದೇಶವನ್ನಾಗಿ ಮಾಡಿರತಕ್ಕಂತಹ "ಹೇ ಕಿಸಾನ್ ಕೋ ಸಲಾಮ್" ಲೇಕಿನ್ ಕಿಸಾನ್ ಕೋ ಕ್ಯಾ ದಿಯಾ? ಕೋಯಿ ನೀತಿ ಬನಾಯಾ? ಕಿಸಾನ್ ಕೋ ಸಲಾಮ್, ರೈತರಿಗೆ ನಮಸ್ಕಾರ. ಆದರೆ ರೈತರಿಗೆ ಕೃಷಿ ನೀತಿ ಮಾಡಿದ್ದೀರಾ? ಇಲ್ಲಿ ಕೃಷಿ ವೇತನ ಆಯೋಗ ಮಾಡಿದ್ದಾರೆ. ರಾಜ್ಯ ಸರ್ಕಾರದಲ್ಲಿ ಕೃಷಿ ಆಯೋಗ ರಚನೆ ಮಾಡಿ 4 ವರ್ಷವಾಯಿತು. ಆಯೋಗ ಇಲ್ಲ, ಈ ಯೋಗ ಇಲ್ಲ. ಆದರೆ ನಾವು ಯಾರ ಹತ್ತಿರ ಹೋಗಬೇಕು? ಯಾರು ಯಾರನ್ನು ರಕ್ಷಣೆ ಮಾಡುತ್ತಾರೆ. ಯಾವ ಸೆಕ್ಟರ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ? ಯಾವ ಸರ್ಕಾರಿ ಅಧಿಕಾರಿಗಳು, ವ್ಯಾಪಾರಸ್ಥರು, ಎಂ.ಎಲ್.ಎ. ಗಳು, ಮಂತ್ರಿಗಳು ಯಾರು ತಾನೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ? ಯಾರೊಬ್ಬರು ಆತ್ಮಹತ್ಯೆ

ಮಾಡಿಕೊಂಡಿರುವುದಿಲ್ಲ. ಆದರೆ 4-5 ಲಕ್ಷ ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದಕ್ಕೆ ಬೇರೆ ಬೇರೆ ಕಾರಣಗಳಿರಬಹುದು. ಅದನ್ನು ಮಾನ್ಯ ಸದಸ್ಯರಾದ ಶ್ರೀ ಸಿ.ಟಿ. ರವಿ ಅವರು ಹೇಳಿದರೆ ಅದನ್ನು ಗುರುತು ಹಾಕಿಕೊಂಡು ರೈತರಿಗೆ ಹೇಳುತ್ತೇನೆ. ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಯಾವುದೇ ಕೃಷಿ ನೀತಿಯಿಲ್ಲ, ಒಂದು ಮಾರ್ಕೆಟ್ ಇಲ್ಲ ಮಾನ್ಯ ಅಧ್ಯಕ್ಷರೆ. ಉದಾಹರಣೆಗೆ ಒಂದು ವಿಷಯವನ್ನು ಹೇಳುತ್ತೇನೆ. 1960ನೇ ಇಸವಿಯಲ್ಲಿ ಒಬ್ಬ clerk ನ ಸಂಬಳ 60 ರೂ.ಗಳಿತ್ತು. ಆಗ ತೆಂಗಿನಕಾಯಿಯ ಬೆಲೆ 30 ಪೈಸೆಯಿತ್ತು. ಆದರೆ ಇವತ್ತು minimum salary 18,500 ರೂ.ಗಳಿದೆ. ಅಂದರೆ 300 ಪಟ್ಟು ಜಾಸ್ತಿಯಾಗಿದೆ. ನಮ್ಮ ತೆಂಗಿನಕಾಯಿಯ ಬೆಲೆಯೂ ಸಹ 300 ಪಟ್ಟು ಜಾಸ್ತಿಯಾಗಿದ್ದರೆ ಸರ್ಕಾರಕ್ಕೆ ನಾವೂ ಸಹ ತೆರಿಗೆ ಕೊಡುತ್ತಿದ್ದೆವು. ಯಾವಾಗಲೂ ಸರ್ಕಾರದ ಬೊಕ್ಕಸಕ್ಕೆ ಹಣ ಜಾಸ್ತಿ ಬರಬೇಕಾದರೆ ಬಹುಸಂಖ್ಯಾತರನ್ನು ಆರ್ಥಿಕವಾಗಿ ಮೇಲೆತ್ತಿ, ಅವರೆಲ್ಲರೂ ತೆರಿಗೆ ಕೊಡುವ ಸಾಮರ್ಥ್ಯ ಇದ್ದರೆ ಮಾತ್ರ ಹಣ ಹೆಚ್ಚು ಬರುತ್ತದೆ. ಅಮೇರಿಕಾ ದೇಶದಲ್ಲಿ hotel supplier ಸಹ ತೆರಿಗೆ ಕೊಡುತ್ತಾನೆ. ಅಮೇರಿಕಾ ದೇಶದ ಎಲ್ಲಾ ವರ್ಗದ ಜನರೂ ಸಹ ತೆರಿಗೆ ಕಟ್ಟುತ್ತಾರೆ. ಆದರೆ ಇಲ್ಲಿ ಬಡವರು ಇನ್ನು ಬಡತನದಲ್ಲಿಯೇ ಇರುವುದರ ಮೂಲಕ ಬಿ.ಪಿ.ಎಲ್. ಕಾರ್ಡ್ ನೀಡಿ ಬಡವರನ್ನು ಬಡವರನ್ನಾಗಿಯೇ ಮಾಡುವಂತಹ ಕೆಲಸ ಆಗಿದೆ. ಮಾನ್ಯ ಸದಸ್ಯರಾದ ಕುಮಾರಸ್ವಾಮಿ ಅವರು ಮಾತನಾಡಿದರು. ಸರ್ಕಾರ 27,000 ಕೋಟಿ ಹಣವನ್ನು ಹಿಂದುಳಿದವರ, ಅಲ್ಪಸಂಖ್ಯಾತರ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದವರ ಕೊಟ್ಟಿರುವ ಹಣ ಎಷ್ಟು? ಆರ್ಥಿಕವಾಗಿ ಮೇಲೆ ಎಷ್ಟು ಜನ ಬಂದಿದ್ದಾರೆ? ತನ್ನ ಕಾಲಿನ ಮೇಲೆ ತಾನು ನಿಂತು ಕೊಳ್ಳುವ ಆರ್ಥಿಕ ಸ್ವಾತಂತ್ರ್ಯ, ಉದ್ಯೋಗ ನೀತಿ ಎಲ್ಲಿ ಸೃಷ್ಟಿಯಾಗಿದೆ? ಮಾನ್ಯ ಅಧ್ಯಕ್ಷರೆ, ಆಯವ್ಯಯ ಮಂಡಿಸುವುದಷ್ಟೇ ಅಲ್ಲ, ಆಯವ್ಯಯದ ಮೂಲಕ ಬಡತನವನ್ನು ಎಷ್ಟರ ಮಟ್ಟಿಗೆ ನಾಶ ಮಾಡಿದ್ದೇವೆ ಎನ್ನುವುದು ಬರಬೇಕು. ಆರ್ಥಿಕವಾಗಿ ಮೇಲೆತ್ತುವುದು, ಬಿ.ಪಿ.ಎಲ್. ಕಾರ್ಡಿನಿಂದ ಪ್ರಮೋಷನ್ ಸಿಗಬೇಕು. ಇದು ನಾವು ಮಾಡುವಂತಹ ಸಹಾಯ. ಗಂಗಾಕಲ್ಯಾಣ ಯೋಜನೆಯನ್ನು ಮಾಡಿದ್ದೇವೆ. ಆದರೆ ಆ ಯೋಜನೆ ಎಷ್ಟರಮಟ್ಟಿಗೆ ಕೃಷಿಯಾಗಿ, ಪರಿವರ್ತನೆಯಾಗಿ, ಎಷ್ಟು ಜನ ವ್ಯವಸಾಯ ಮಾಡುತ್ತಿದ್ದಾರೆ? ಎಲ್ಲಿದೆ ಕೃಷಿ ನೀತಿ? ಬೆಲೆ ಮತ್ತು ಬೆಳೆ ನೀತಿಗಳಿಲ್ಲ, ಕೃಷಿ ನೀತಿ ಇಲ್ಲ. ಯಾವುದೇ ನೀತಿಯಿಲ್ಲವೆಂದರೆ ರೈತರನ್ನು ಯಾವ ರೀತಿ ರಕ್ಷಣೆ ಮಾಡುತ್ತಾರೆ? ಕೃಷಿ ಎಂದರೆ ಯಾವುದು? ಮೊನ್ನೆ ಉದಾಹರಣೆಗೆ ಒಂದು ಮಾತನ್ನು ಹೇಳಿದೆ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಮಾನ್ಯ ಶಾಸಕರುಗಳು ನಿವೃತ್ತಿಯಾದರೆ 40,000/-, ಡಿ.ಸಿ. ನಿವೃತ್ತಿಯಾದರೆ 90,000/- ರೂ.ಗಳನ್ನು ತಿಂಗಳಿಗೆ ಕೊಡುತ್ತಾರೆ. ಆದರೆ ನಮ್ಮ ಊರಿನಲ್ಲಿ 2,40,000 ಜನರಿಗೆ ಭತ್ತವನ್ನು ಬೆಳೆದು ಅಕ್ಕಿಯನ್ನು ಕೊಡುವಂತಹ ಒಬ್ಬ ಹೆಣ್ಣು ಮಗಳಿಗೆ ವರ್ಷಕ್ಕೆ 60,000/- ರೂ.ಗಳನ್ನು ಕೊಡುತ್ತಾರೆ. ಶ್ರಮವನ್ನು ಜ್ಞಾನವೆಂದು ನಾವು ಎಲ್ಲಿ ಒಪ್ಪಿದ್ದೇವೆ? ಆದರೆ ಅಮೇರಿಕಾ ದೇಶದಲ್ಲಿ ಡಾಂಬರ್ ಹಾಕುವವನಿಗೆ 120 ಡಾಲರ್ ಸಂಬಳ ಕೊಡುತ್ತಾರೆ. ಆದರೆ ಇಂಜಿನಿಯರ್‌ಗೆ 80 ಡಾಲರ್ ಸಂಬಳವನ್ನು ಕೊಡುತ್ತಾರೆ. ಏಕೆಂದರೆ ಅಲ್ಲಿ ಶ್ರಮವನ್ನು ಜ್ಞಾನವೆಂದು ಒಪ್ಪಿಕೊಂಡಿದ್ದಾರೆ. ನಮಗೆ constitutional rights ಇಲ್ಲವೇ? ದೈಹಿಕ ಶ್ರಮ, ಬಸವಣ್ಣನವರ ಬಗ್ಗೆ ಹೇಳಿದ್ದೇವೆ. ಇದು ಬಸವಣ್ಣನ ನಾಡು, ಕಾಯಕವೇ ಕೈಲಾಸ ಎಂದೆಲ್ಲಾ ಹೇಳಿದ್ದೇವೆ. ಕಾಯಕ ಮಾಡುವವರಿಗೆ ಯಾವುದೇ ಕೃಷಿ ನೀತಿ ಏಕೆ ಮಾಡಿಲ್ಲ? ಕೃಷಿ ಎಂದರೆ ಭತ್ತ, ರಾಗಿ ಮತ್ತು ಜೋಳ ಬೆಳೆಯುವುದಲ್ಲ. ಉದಾಹರಣೆಗೆ 25 ಲಕ್ಷ ಹೆಕ್ಟೇರ್ ಭೂ ಪ್ರದೇಶದಲ್ಲಿ ಗೋವಿನ ಜೋಳ ಬೆಳೆಯುತ್ತಾರೆ. ಇದರಿಂದ ಕೋಳಿ ಮಾಂಸದ ಉದ್ಯಮ ಎಷ್ಟು ಸೃಷ್ಟಿಯಾಯಿತು? ನೂರು ಬೈ ಪ್ರಾಡಕ್ಟ್ಸ್, paint ಗೆ ಬಳಕೆಯಾಗುತ್ತದೆ, ಹಾಲು ಉತ್ಪಾದನೆಯಲ್ಲಿ ಗೋವಿನ ಜೋಳ ಪ್ರಮುಖ ಪಾತ್ರ ವಹಿಸುತ್ತದೆ. ಅದು ಜೀವನಾವಶ್ಯಕವಾದ ವಸ್ತುವಲ್ಲವೆಂದು ಹೇಳಿ ಯಾವುದೇ ರೀತಿಯ ಬೆಂಬಲ ಬೆಲೆ ಘೋಷಣೆ ಮಾಡಿರುವುದಿಲ್ಲ. Central Agriculture Price Commission ಯಾವುದೇ ಬೆಲೆ ನೀತಿ ಮಾಡದೇ, minimum supporting price ಎಂದು declare ಮಾಡಿದರೆ, cost of cultivation and cost of living ಬಗ್ಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಆಲೋಚನೆ ಮಾಡದಿದ್ದರೆ ಕೃಷಿಯನ್ನು ಯಾವ ರೀತಿ ರಕ್ಷಣೆ ಮಾಡುತ್ತಾರೆ? ರೈತರೆಲ್ಲರೂ ಗುಳೆ ಹೋಗುತ್ತಿದ್ದಾರೆ ಮಾನ್ಯ ಅಧ್ಯಕ್ಷರೆ. ಯಾವ ದೇಶದಲ್ಲಿ ಕೃಷಿ ನಾಶವಾಗುತ್ತದೋ ಆ ದೇಶಕ್ಕೆ ಬಹಳ ದೊಡ್ಡ ಆಪತ್ತಿದೆ. ಇಂದು ಬಹಳ ಜನರು, ದೇಶದ ಎಲ್ಲಾ ನಾಗರಿಕರು ಬರಗಾಲ ಬಂದಿರುವುದು ರೈತರಿಗೆ ಎಂದು ತಿಳಿದುಕೊಂಡಿದ್ದಾರೆ. ಬರಗಾಲ ಬಂದಿರುವುದು ರೈತರಿಗಲ್ಲ, ಇಡೀ ರಾಜ್ಯ ಮತ್ತು ದೇಶದ ಆಹಾರ ಭದ್ರತೆಗೆ, ಇಡೀ ರಾಜ್ಯ ಮತ್ತು ದೇಶದ ಉದ್ಯೋಗ ಭದ್ರತೆಗೆ, ಬೆಂಗಳೂರಿನ ಹೋಟೆಲುಗಳು ಯಾವುದರ ಆಧಾರದ ಮೇಲೆ ನಿಂತಿವೆ? Raw materials ಕೊಡುವವರು ಯಾರು? ಹೊರಗಡೆಯಿಂದ ಬರುವ 10-20 ಲಕ್ಷ ಜನರಿಗೆ ಊಟ ಕೊಡುವಂತಹ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಹೋಟೆಲುಗಳು ಎಷ್ಟಿವೆ? ಆ ಹೋಟೆಲುಗಳಿಗೆ raw materials ಕೊಡುವವರು ಯಾರು? ಅವರಿಗೆ ಟಮೊಟೊ, ಆಲೂಗಡೆ, ಬದನೇಕಾಯಿ, ಈರುಳ್ಳಿ ಎಲ್ಲವೂ ಕಂಪ್ಯೂಟರ್‌ನಲ್ಲಿ ಬರುತ್ತದೆಯೋ? ಮಾನ್ಯ ಅಧ್ಯಕ್ಷರೆ ಆ ಬೆಳೆಗಳೆಲ್ಲವೂ ಯಾವುದರ ಮೇಲೆ ಬರುತ್ತದೆ? ಒಂದು ಕಡೆ ಪ್ರಕೃತಿ ಮೇಲೆ ಜೂಜಾಡಬೇಕು, ಇನ್ನೊಂದು ಕಡೆ ಮಾರ್ಕೆಟ್‌ನಲ್ಲಿ ಜೂಜಾಡಬೇಕು, ಇನ್ನೊಂದು ಸರ್ಕಾರದ ನೀತಿ, ಮತ್ತೊಂದು ಕಡೆ ಸಾಲದ ನೀತಿ ಇರುವಾಗ ನಾವು ಯಾವುದರ ಮೇಲೆ ಹೋರಾಟ ಮಾಡಿ ಬದುಕಬೇಕು. ಹೀಗಿರುವಾಗ ನೀವು ಏಕೆ ಕೇಳಬೇಕು. ನಮಗೆ ನೀವು ಸಾಲ ಕೊಡುವುದೇ ಬೇಡ. ವೈಜ್ಞಾನಿಕ ಬೆಲೆ ನೀತಿ ಪದ್ಧತಿಯನ್ನು ಅನುಷ್ಠಾನಕ್ಕೆ ತೆಗೆದುಕೊಂಡು ಬನ್ನಿ. ಇಲ್ಲದಿದ್ದರೆ ಮರುಪಾವತಿ ಮಾಡುವಂತಹ ನೀತಿ ಆಧಾರದ ಮೇಲೆ ಸಾಲದ ನೀತಿಯನ್ನು ಸೃಷ್ಟಿ ಮಾಡಬೇಕು. ಮಾನ್ಯ ಅಧ್ಯಕ್ಷರೆ, ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ರೈತರು ಬದುಕುವಂತಹ ಯಾವ ರೀತಿಯ ಸಾಲದ ನೀತಿಯಿದೆ? ಎರಡು ರೂ.ಗಳ ಹಾಲಿನ ದರ ಕೊಡುವುದು, ಎಮ್ಮೆ ಸಾಕುವವರು ಯಾರು? ಎಮ್ಮೆ ಸಾಲವನ್ನು ಯಾರಿಗೆ ಕೊಡುತ್ತಿದ್ದೀರಿ? ಪಶು ಭಾಗ್ಯ ಯೋಜನೆಯನ್ನು ಯಾರಿಗೆ ಕೊಡುತ್ತಿದ್ದೀರಿ? ಸರ್ಕಾರಿ ನೌಕರರಿಗೆ ಕೊಡುತ್ತಿದ್ದೀರಾ. ಎಂ.ಎಲ್.ಎ ಗಳಿಗೆ ಕೊಡುತ್ತಿದ್ದೀರಾ, ವಿಧಾನಪರಿಷತ್ ಸದಸ್ಯರಿಗೆ ಕೊಡುತ್ತಿದ್ದೀರಾ, ಯಾರಿಗೆ ಸಾಲವನ್ನು ಕೊಡುತ್ತಿದ್ದೀರಿ? ನಾನು ಹೇಳುವುದೇನೆಂದರೆ ನಿಜವಾಗಿಯೂ ಎಮ್ಮೆ, ಹಸು ಸಾಲವನ್ನು ಕೊಡಬೇಕು. ಅಂದರೆ ಉಚಿತವಾಗಿ ಎಮ್ಮೆಯನ್ನು ಕೊಡಬೇಕು. ಜೊತೆಗೆ ಎಮ್ಮೆ ಸಾಕುವುದಕ್ಕೆ 50,000/- ಗಳನ್ನು ಕೊಡಬೇಕು. ಗೌರವಧನವನ್ನಾಗಿ 50,000/- ರೂ.ಗಳನ್ನು ಕೊಡಬೇಕು. ಈ ದೇಶದಲ್ಲಿ ಗಂಜಲ, ತೊಪ್ಪೆಯನ್ನು ಯಾರು ಮುಟ್ಟುತ್ತಾರೆ? ತೊಪ್ಪೆ ಮತ್ತು ಗಂಜಲವನ್ನು ದೇಶದಲ್ಲಿ ಯಾರು ಮುಟ್ಟುತ್ತಿದ್ದಾರೆ. ಬಡವರನ್ನು ಹುಡುಕಿ ಸಾಲವನ್ನು ಕೊಟ್ಟು ಪಶು ಭಾಗ್ಯದಲ್ಲಿ ನಿನ್ನ ಭಾಗ್ಯ ಬರುತ್ತದೆ ಎಂದು ಹೇಳಿ ಕೊಡಬೇಕು. ಬಹಳ ದೊಡ್ಡ ಭಾಗ್ಯವೆಂದು ಹೇಳಬೇಕು. ಹಾಲನ್ನು ಕರೆಸಿ, ಕರೆಸಿ ಆ ಹಾಲನ್ನು ಡೈರಿಗೆ ತೆಗೆದುಕೊಂಡು 70 ಲಕ್ಷ ಲೀಟರ್ ಹಾಲನ್ನು ಗಟಗಟನೆ ಕುಡಿಯುತ್ತಾರೆಯೇ ಅವರು? ತೊಪ್ಪೆಯನ್ನು ತೆಗೆಯುವುದಕ್ಕೆ ಜನರನ್ನು ಹುಡುಕಿದ್ದು ಅದಕ್ಕೊಂದು ಸಾಲವಂತೆ? ಇದು ಸಾಲನಾ ಇದು? ಜಗತ್ತಿನಲ್ಲಿ ಯಾವ ದೇಶದಲ್ಲಾದರೂ ಹಾಲು ಕುಡಿಯುವವರೆಲ್ಲಾ plan ಮಾಡಿ ತೊಪ್ಪೆಯನ್ನು ಎತ್ತುವವರು ಹುಡುಕಿ ಅವರಿಗೆ ಸಾಲ ಕೊಟ್ಟಿರುವಂತಹ ಈ ಸಾಲದ ನೀತಿ ಏನಿದೆ ಅದು ಯಾವ ನೀತಿಯೆಂದು ಅರ್ಥವಾಗುತ್ತಿಲ್ಲ. ಇಲ್ಲದಿದ್ದರೆ



ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನಮಗೂ ಒಂದು ಸಾಲದ ನೀತಿಯನ್ನು ಮಾಡಿ. ಇದರಿಂದ ದಯವಿಟ್ಟು ಕಡ್ಡಾಯವಾಗಿ ಎಲ್ಲರೂ ಸಾಲ ತೆಗೆದುಕೊಳ್ಳುವಂತಹ ಪರಿಸ್ಥಿತಿ ಸೃಷ್ಟಿಯಾಗಲಿ. Business ಸಾಲ ಎಲ್ಲರಿಗೂ ಬೇಕು, Motor bike, Car ಸಾಲ ಎಲ್ಲರಿಗೂ ಬೇಕು.

(ಮುಂದು ...)

ದಿನಾಂಕ: 27.03.2016.06.10.(42).ಜಿಎಂ.ವಿಆರ್.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ(ಮುಂದುವರೆದುದು):

ಕಾರ್ ಮೇಳ ನಡೆಸಿ ಕಾರನ್ನು ನಿಲ್ಲಿಸಿ ಸಾಲ ಬೇಕಾದರೆ ಬನ್ನಿ ಎಂದು ಹೇಳುತ್ತಾರೆ. ಅದೇ ರೀತಿ ಎಮ್ಮೆ, ಹಸುಗಳನ್ನು ನಿಲ್ಲಿಸಿ, ಎಲ್ಲರಿಗೂ ಎಮ್ಮೆ, ಹಸುಗಳನ್ನು ಕೊಡುತ್ತೇವೆ ಬನ್ನಿ ಎಂದು ಕರೆಯಲಿ. ಅದು ಏಕೆ ಆಗುವುದಿಲ್ಲ?

ಎರಡನೇ ವಿಷಯ ನಮ್ಮ ಶಿಕ್ಷಣ ಮಂತ್ರಿಗಳು ಎಲ್ಲಿಗೆ ಹೋದರೋ ಗೊತ್ತಾಗಲಿಲ್ಲ. ಪ್ರಾಥಮಿಕ ಶಿಕ್ಷಣಕ್ಕೆ 5 ರಿಂದ 6 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಮಕ್ಕಳು ಖಾಲಿಯಾಗುತ್ತಿದ್ದಾರೆ. ಹೊಸ ನೀತಿ ಮಾಡುತ್ತಿದ್ದಾರೆ. ಸುತ್ತ-ಮುತ್ತ ಇರುವಂಥ ಖಾಸಗಿ ಶಾಲೆಗಳಿಗೆ ಮಕ್ಕಳು ಸೇರಿಕೊಂಡರೆ ನಾವು ಫೀಸ್ ಕಟ್ಟುತ್ತೇವೆಂದು ಹೇಳುತ್ತಿದ್ದಾರೆ. RTE fees ಕೊಡುತ್ತೇವೆಂದು ಹೇಳುತ್ತಿದ್ದಾರೆ. ಏತಕ್ಕಾಗಿ? ಸರ್ಕಾರಿ ಶಾಲೆಯನ್ನು ಖಾಲಿ ಮಾಡಿಸುವುದಕ್ಕಾಗಿಯೇ? ನಾನು ಹೇಳುವುದೇನೆಂದರೆ 18 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟು ಪ್ರಾಥಮಿಕ ಶಿಕ್ಷಣವನ್ನು ಕೊಡುವುದರ ಮೂಲಕ ನೀವು ಏನು ಮಾಡುತ್ತಿದ್ದೀರಿ? ಮೊನ್ನೆ ದಿವಸ ಪಾಂಡವಪುರದಲ್ಲಿ ನಾವೊಂದು ಕ್ರಾಂತಿಯನ್ನು ಮಾಡಿದೆವು. ಎಲ್‌ಕೆಜಿ, ಯುಕೆಜಿಗೆ ಮಕ್ಕಳನ್ನು ಸೇರಿಸುವ ಕೆಲಸ ಮಾಡಿದೆವು. ನೂರು ಮಕ್ಕಳಿದ್ದವು, ಇವತ್ತು 440 ಜನ ಮಕ್ಕಳಾಗಿದ್ದಾರೆ. 440 ಮಕ್ಕಳಾದ ನಂತರ ಈ ಸಾರಿ 900 ಮಕ್ಕಳನ್ನು ಶಾಲೆಗೆ ಸೇರಿಸಿ ಒಂದು ದೊಡ್ಡ ಆಂದೋಲನವನ್ನು ಮಾಡಿದ್ದೇವೆ. ಕನ್ನಡ ಶಾಲೆಗಳಿಗೆ 900 ಮಕ್ಕಳನ್ನು ಸೇರಿಸಿದ್ದೇವೆ. ದಯವಿಟ್ಟು ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಕರೆತರುವಂಥ ಒಂದು ಆಲೋಚನೆ ಮಾಡಬೇಕು. 18 ಸಾವಿರ ಕೋಟಿ ಖರ್ಚು ಮಾಡಿ ಖಾಸಗಿ ಶಾಲೆಯಲ್ಲಿ ಏನು ಹೇಳಿಕೊಟ್ಟಿರುತ್ತಾರೆ? ನಿಜವಾದ ಗುಣಾತ್ಮಕವಾದ ಶಿಕ್ಷಕರಿದ್ದಾರೆಯೇ?

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಕಾಗೋಡು ತಿಮ್ಮಪ್ಪ: ನಿಮ್ಮ ಸಲಹೆ ಏನೆಂದು ಹೇಳಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಸಾರ್, ಸಲಹೆಯಲ್ಲ, ಖಾಸಗಿ ಶಾಲೆಗಳಿಗೆ ಸೇರಿರುವ ಮಕ್ಕಳಿಗೆ ಸರ್ಕಾರ ನಾನು ಫೀಸ್ ಕಟ್ಟುತ್ತೇನೆ ಎಂದರೆ ಎಲ್ಲರೂ ಹೋಗಿ ಖಾಸಗಿ ಶಾಲೆಗೆ ಸೇರಿಕೊಳ್ಳುತ್ತಾರೆ. 4 ಲಕ್ಷ ಇದ್ದವರು ಮುಂದಿನ ವರ್ಷಕ್ಕೆ 8 ಲಕ್ಷ ಮಕ್ಕಳಾಗುತ್ತಾರೆ. ಖಾಸಗಿ ಶಾಲೆಗಳಿಗೆ ಏತಕ್ಕಾಗಿ ಉತ್ತೇಜನ ಕೊಡುತ್ತೀರಿ? ಯಾವ ಕಾರಣಕ್ಕಾಗಿ ಖಾಸಗಿ ಶಾಲೆಗಳಿಗೆ ಮಕ್ಕಳು ಹೋಗುತ್ತಿದ್ದಾರೆಂದು observe ಮಾಡಬೇಕು. ಆ ಸ್ಟೈಲ್‌ನಲ್ಲಿಯೇ ಶಿಕ್ಷಣವನ್ನು start ಮಾಡಬೇಕು. ಇವತ್ತಿನ education ಎಲ್ಲಿಗೆ ಬಂದು ಮುಟ್ಟಿದೆ? ಉದ್ಯೋಗ, ಸಂಸ್ಕೃತಿ, ವಿನಯವನ್ನು ಕೊಡುವಂಥ ಶಿಕ್ಷಣ ಎಲ್ಲಿದೆ? ನಾನೇ ನಮ್ಮ ಊರಿನಲ್ಲಿ ನೋಡಿದ್ದೇನೆ. ರವಿಯವರೆ ನೀವುಗಳು ಡಿಗ್ರಿ ಮಾಡಿರುವವರು, ನಾನಂತೂ ಡಿಗ್ರಿ ಮಾಡಿಲ್ಲ, ಗದ್ದೆಯಲ್ಲಿದ್ದವನು. ಬಿ.ಎ ಓದಿ ಬಂದಿರುವವನು ನಮ್ಮ ಊರಿನಲ್ಲಿ ಏನು ಮಾಡುತ್ತಾನೆ? ಅಮೇರಿಕಾದಲ್ಲಿ ಗಂಡು ಮಗನಾಗಲಿ ಅಥವಾ ಹೆಣ್ಣು ಮಗಳಾಗಲಿ 18 ವರ್ಷ ಆದ ಕೂಡಲೇ ಮನೆಯನ್ನು ಬಿಟ್ಟು ಹೊರಬಂದು ಸ್ವಯಂ ಉದ್ಯೋಗ ಸೃಷ್ಟಿ ಮಾಡಿಕೊಳ್ಳುತ್ತಾರೆ. ಅವರ ಅಪ್ಪ-ಅಮ್ಮನ ಬಳಿ ಮಕ್ಕಳು ಇರುವುದಿಲ್ಲ. ಇಲ್ಲಿ ನೀವು ಬಿ.ಎ ಓದಿಸಿ, ಅವನಿಗೊಂದು ಡಿಗ್ರಿ ಕೊಟ್ಟು, ಒಂದು ಮೊಬೈಲ್ ಕೊಡಿಸಿದರೆ, ಅವನು ಪಿಕಾಸಿಯನ್ನು ಮುಟ್ಟುವುದಿಲ್ಲ, ಗುದ್ದಲಿಯನ್ನು ಮುಟ್ಟುವುದಿಲ್ಲ, ಗದ್ದೆಗೂ ಹೋಗುವುದಿಲ್ಲ. ಮೊಬೈಲ್ ಹಿಡಿದುಕೊಂಡು 6 ಜನ ಕುಳಿತುಕೊಂಡು ಬಿಟ್ಟರೆ ಹೊಡೆಯುತ್ತಿರುವುದೇ, ಈ ರೀತಿ ಎಲ್ಲಾ ಬುದ್ಧಿಮಾಂದ್ಯ ಮಕ್ಕಳನ್ನು ಸೃಷ್ಟಿ ಮಾಡುತ್ತಿದ್ದೀರಿ. ಅವರ ಅಪ್ಪನನ್ನೂ ನೋಡುತ್ತಿಲ್ಲ, ಅಮ್ಮನನ್ನೂ ನೋಡುತ್ತಿಲ್ಲ. ನಾನಲ್ಲ ಇದನ್ನು ಹೇಳುತ್ತಿರುವುದು. ಮೊನ್ನೆ ದಿವಸ ನಮ್ಮ brother-in-law Canadaದಿಂದ ಬಂದಿದ್ದರು. ಇಡೀ ಅಮೇರಿಕಾ, ಉತ್ತರ ಅಮೇರಿಕಾದವರೆಲ್ಲರೂ ಮಬ್ಬಾಗಿ ಬಿಟ್ಟಿದ್ದಾರೆ. ಜಾಗತೀಕರಣ, ಉದಾರೀಕರಣ ನೀತಿಯಿಂದಾಗಿ ಯುವಶಕ್ತಿಯ realityಯನ್ನು ಸಂಪೂರ್ಣ ನಾಶ ಮಾಡುತ್ತಿದ್ದಾರೆ. ಜ್ಞಾನ, ತಂತ್ರಜ್ಞಾನ ಇರಬೇಕು, ಬೇಡ ಎಂದು ಹೇಳುತ್ತಿಲ್ಲ. ಯಾರದ್ದೂ ಮಾತೇ ಇಲ್ಲ. ಮೊನ್ನೆ 70 ಜನ ಮದುವೆಗೆ ಬಂದಿದ್ದಾರಂತೆ, ಒಬ್ಬನೂ ಮಾತನಾಡುತ್ತಿಲ್ಲವಂತೆ, ಏಕೆ ಎಂದು ಕೇಳಿದೆ? ಎಲ್ಲರೂ What's appನಲ್ಲಿ ಬಂದಿರುವವರಂತೆ, invitation ಹೋಗಿದೆ, ಎಲ್ಲರೂ What's Appನಲ್ಲಿ ಬಂದಿರುವವರಂತೆ, ಆ ಮದುವೆಗೆ ಬಂದಿರುವವರೆಲ್ಲರೂ what's appನಲ್ಲಿ

ಬಂದಿರುವವರಾಗಿದ್ದಾರೆ. ನೋಡಿ, ಯಾವ ಸ್ಥಿತಿಗೆ ಬಂದಿದೆ. ನೋಡಿ, ತಾವು ಇಲ್ಲಿ ಇದ್ದೀರಿ, ಒಂದು ದೊಡ್ಡ ಚರ್ಚೆಯಾಗಬೇಕು. ಬದಲಾವಣೆಯಾಗಬೇಕು, skill laborers create ಆಗುವಂಥ ಕೆಲಸ ಆಗಬೇಕು.

ಶ್ರೀ ಸಿ.ಟಿ.ರವಿ: ಪುಟ್ಟಣ್ಣಯ್ಯನವರೆ, ಮದುವೆನೂ what's appನಿಂದಲೇ ಆಗಿದೆಯೇ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಒಂದನ್ನು ಬಿಟ್ಟು ಇನ್ನೆಲ್ಲವೂ what's appನಿಂದಲೇ ಆಗಿದೆ.

ಶ್ರೀ ಸಿ.ಟಿ.ರವಿ: ಯಾವುದದು?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಆ ಡಾಶ್‌ನ್ನು ನೀವೇ fill up ಮಾಡಿಕೊಳ್ಳಿ. ನಿಮಗೆ ಮದುವೆಯಾಗಿದೆಯಲ್ಲವೆ? ಆ ಡಾಶ್‌ನ್ನು ನೀವೇ fill up ಮಾಡಿಕೊಳ್ಳಿ.

ಶ್ರೀ ಸಿ.ಟಿ.ರವಿ: ನಿಮಗ್ಯಾಕೆ ಆ ಅನುಮಾನ ಶುರುವಾಯಿತು?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ನೀವ್ಯಾಕೆ ಎಲ್ಲವೂ what's app ಎಂದು ಹೇಳಿದಿರಿ. ಶಿಕ್ಷಣ skill laborers create ಮಾಡದೇ ಇದ್ದರೆ ನಿಜವಾಗಿಯೂ ಹೇಳುತ್ತಿದ್ದೇನೆ, ಎಷ್ಟು ನಿರುದ್ಯೋಗ ಸಮಸ್ಯೆ ಸೃಷ್ಟಿಯಾಗಿದೆ ಗೊತ್ತಿದೆಯೇ? ನಗರೀಕರಣ ಸೃಷ್ಟಿಯಾಗಿದೆ. ಇವತ್ತು ಬಿ.ಇ ಮಾಡಿರುವ ಹುಡುಗರು 4,000 ರೂಪಾಯಿ, 5,000 ರೂಪಾಯಿ ಅಥವಾ 7,000 ರೂಪಾಯಿ ವೇತನ ಕೊಡಿ ಎಂದು ಕೇಳುತ್ತಿದ್ದಾರೆ. Education ಉದ್ಯೋಗವನ್ನೇ ಸೃಷ್ಟಿ ಮಾಡದೆ, ಲಕ್ಷಾಂತರ ರೂಪಾಯಿ ಖರ್ಚು ಮಾಡಿ ತಾಂತ್ರಿಕ ಶಿಕ್ಷಣವನ್ನು ಕೊಡುತ್ತಿದ್ದೀರಿ. ಇದರಿಂದ ಸರ್ಕಾರಕ್ಕೆ ಎಷ್ಟು ಖರ್ಚಾಗುತ್ತದೆ? ಒಬ್ಬ ಇಂಜಿನಿಯರ್ ಆಗುವುದಕ್ಕೆ ಸರ್ಕಾರಕ್ಕೆ 6 ರಿಂದ 7 ಲಕ್ಷ ರೂಪಾಯಿ ಬೇಕಾಗುತ್ತದೆ. ಒಬ್ಬ ಎಂಬಿಬಿಎಸ್ ಡಾಕ್ಟರ್ ಆಗಬೇಕಾದರೆ ಸರ್ಕಾರಕ್ಕೆ 15 ರಿಂದ 16 ಲಕ್ಷ ರೂಪಾಯಿ ಬೇಕಾಗುತ್ತದೆ. ಇದು ಯಾರ ದುಡ್ಡು? ತೆರಿಗೆ ದುಡ್ಡು, ಅವನು ಅಲ್ಲಿ ಏನಾಗಿದ್ದಾನೆ? ಉದ್ಯೋಗವನ್ನೇ ಸೃಷ್ಟಿ ಮಾಡದೆ ಇರುವ ಶಿಕ್ಷಣವನ್ನು ನೀವು ಯಾವ ಉದ್ದೇಶದ ಮೇಲೆ ಕೊಡುತ್ತಿದ್ದೀರಿ? ಆದ್ದರಿಂದ ತಾವು ಗಂಭೀರವಾಗಿ ಆಲೋಚನೆ ಮಾಡಬೇಕು. ದುಡ್ಡು ಕೊಡುವುದಲ್ಲ, 22.50 ಸಾವಿರ ಕೋಟಿ ರೂಪಾಯಿ ಹಣವನ್ನು ಕೊಟ್ಟು ನಿರುದ್ಯೋಗಿ ಯುವಕರನ್ನು ಸೃಷ್ಟಿ ಮಾಡಿ, ಯಾವ ರೀತಿಯ ಶಿಕ್ಷಣದ ಆಲೋಚನೆಯನ್ನು ನೀವು ಮಾಡುತ್ತಿದ್ದೀರಿ? ಮಾನ್ಯ ಛೇರ್‌ಮನ್‌ರವರೆ, ನಾನು ತಮಗೆ ಹೇಳಿದೆ, ದಯವಿಟ್ಟು war footನಲ್ಲಿ ತೀರ್ಮಾನ ತೆಗೆದುಕೊಳ್ಳಿ. Minor Irrigationನಲ್ಲಿ ನಾನೇ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಪ್ರಯೋಗ ಮಾಡುತ್ತಿದ್ದೇನೆ, ದಯವಿಟ್ಟು ನಮ್ಮ ತಾಲ್ಲೂಕಿಗೆ 3-4 ದಿವಸಗಳಲ್ಲಿ ಬನ್ನಿ. 60 ರಿಂದ 70 ಟ್ರಾಕ್ಟರ್‌ಗಳು, ವಾಹನಗಳು ಮಣ್ಣನ್ನು ಹೊಡೆಯುತ್ತಿವೆ. 6 ಹಿಟಾಚಿ ಉಪಯೋಗಿಸಿದ್ದೇನೆ. 300 ಎಕರೆ ವಿಸ್ತೀರ್ಣದ ಕೆರೆ, 10 ರಿಂದ 15 ದಿವಸಗಳಲ್ಲಿ ಮುಗಿದು ಹೋಯಿತು. ಆ ಕೆರೆಯ ಎರಡರಿಂದ ಮೂರು ಪಟ್ಟುಗಳಷ್ಟು ನೀರನ್ನು ಕೂಡಿ ಹಾಕಬಹುದು. 7 ರಿಂದ 9 ಲಕ್ಷ ರೂಪಾಯಿಗಳಷ್ಟು ದುಡ್ಡು ಖರ್ಚಾಯಿತು. ನೀವೇ ಏನಾದರೂ DPR ಮಾಡಿ ಟೆಂಡರ್ ಕರೆದು ಕೆರೆಯ ಹೂಳೆತ್ತಿಸಿದ್ದರೆ ಸುಮಾರು ಒಂದು ಕೋಟಿ ವೆಚ್ಚ ಆಗುತ್ತಿತ್ತು. ನೀವು ಬನ್ನಿ, ಏತಕ್ಕಾಗಿ ಹಿಂದು-ಮುಂದು ನೋಡುತ್ತಿದ್ದೀರಿ? ಇವತ್ತು ಕರ್ನಾಟಕದಲ್ಲಿ ಅಂತರ್ಜಲಕ್ಕಾಗಿ ಎಷ್ಟು ಲಕ್ಷ ಬೋರ್ ಕೊರೆದಿದ್ದೀರಿ? ಯಾವುದೇ ಸರ್ಕಾರ declare a war, under ground water recharge is a priority sector, ಏತಕ್ಕಾಗಿ delay ಮಾಡುತ್ತಿದ್ದೀರಿ? ಏತಕ್ಕಾಗಿ ಎಂದು ನನಗೆ ಅರ್ಥವಾಗುತ್ತಿಲ್ಲ. ಇನ್ನು ಒಂದು ತಿಂಗಳು ಮುಂಗಾರು ಪ್ರಾರಂಭವಾದರೆ ನೀವು ಕೆರೆಗಳನ್ನು ಏನು ಮಾಡುತ್ತೀರಿ? ಇಷ್ಟೊತ್ತಿಗಾಗಲೇ ಕೆರೆಗಳಲ್ಲಿ ಹೂಳು ಎತ್ತಬೇಕಾಗಿತ್ತು. ಈಗ ನಾನೇನು ಕೆರೆಗಳಲ್ಲಿರುವ ಹೂಳನ್ನು ಎತ್ತಿ ಹಾಕಿಸುತ್ತಿದ್ದೇನೆ, ಇನ್ನೂ ಹೂಳು ತುಂಬಿಕೊಂಡಿದೆ. ಎಷ್ಟು ಕೆರೆಗಳಲ್ಲಿ ಹೂಳು ತುಂಬಿಕೊಂಡಿದೆ ಎನ್ನುವ ಬಗ್ಗೆ ಮೊನ್ನೆ ತಾವು ಉತ್ತರ ಕೊಟ್ಟಿದ್ದೀರಿ. ಒಂದು ಪೋಲೀಸ್ complaint ಕೊಡಬೇಕು. ಯಾರೋ ಒಬ್ಬ ಪೋಲೀಸ್ complaint ಕೊಟ್ಟಿದ್ದಾನಂತೆ, ಬಾವಿ ಸಾಲ ತೆಗೆದುಕೊಂಡಿರುವುದು ನಿಜವಂತೆ, ಬಾವಿ ತೋಡಿಸಿರುವುದು ನಿಜವಂತೆ, ಬಾವಿ ಕಾಣೆಯಾಗಿದೆಯೆಂದು complaint ಕೊಟ್ಟಿದ್ದಾನೆ. ಅದನ್ನು certify ಮಾಡಿರುವಂಥವನು, ಇಲ್ಲಿ ಬಾವಿ ಇತ್ತು ಎಂದು ಅವನೇ ಹೇಳಿದ್ದಾನೆ. ಬಾವಿ ಕಾಣೆಯಾಗಿದೆ, ದಯವಿಟ್ಟು ಹುಡುಕಿ ಕೊಡಬೇಕಾಗಿ ಪೋಲೀಸ್‌ರಲ್ಲಿ ವಿನಂತಿ ಎಂದು ಪೋಲೀಸ್ complaint ಕೊಟ್ಟಿದ್ದಾನೆ. ನೀವೂ ಸಹ ಅದೇ ರೀತಿ ಒಂದು complaint ಕೊಡಬೇಕು. 42,000 ಕೆರೆಗಳಲ್ಲಿ 28,000 ಕೆರೆಗಳಿವೆ, ಇನ್ನು 16,000 ಕೆರೆಗಳು ಕಾಣೆಯಾಗಿವೆ. ಹುಡುಕಿ ಕೊಟ್ಟವರಿಗೆ ಸೂಕ್ತ ಬಹುಮಾನವನ್ನು ಕೊಡಲಾಗುವುದು ಎಂದು ಬರೆಯಬೇಕು. ಏತಕ್ಕಾಗಿ ಈ ಸ್ಥಿತಿ ಬಂದಿದೆ? ಮಾನ್ಯ ಕಂದಾಯ ಮಂತ್ರಿಗಳು ಮತ್ತು ನೀವು ಸೇರಿ ಒಂದು declare ಮಾಡಿ. ಎಲ್ಲಾ ಕೆರೆಗಳನ್ನು ಯಥಾಸ್ಥಿತಿಯಲ್ಲಿರುವಂತೆ ಪ್ಲಾನ್ ಮಾಡಿ. ನೋಡಿ, ದಯವಿಟ್ಟು ನೀವು ನಮ್ಮ ಊರಿನ ಕೆರೆಯನ್ನು ನೋಡಲು ಬನ್ನಿ. ಆ Mines and

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

Geologyಯವರನ್ನು ಕರೆಸಿ. ಸುಮಾರು 200 ಲೋಡ್‌ನಷ್ಟು ಮರಳು ಸಿಗುತ್ತದೆ. 200 ಲೋಡ್‌ಗೆ royalty fix ಮಾಡಿಕೊಡಿ. ಕೆರೆ ಖಾಲಿಯಾಯಿತು, ಮರಳಿನಿಂದ ದುಡ್ಡು ಬಂತು, ಆ ಮರಳಿನಿಂದ ಕೆರೆಯ ಕೆಲಸ ಕ್ಲೀನಾಗಿ ಆಯಿತು. Minor irrigationರವರು ಈ ರೀತಿಯ ಎಷ್ಟು slabಗಳಿವೆಯೆಂದು ಯೋಚನೆ ಮಾಡಿ. ದಯವಿಟ್ಟು ಕಾಲ ಕಳೆಯಬೇಡಿ. 25-30 ವರ್ಷ ರಾಜಕೀಯ ಜೀವನದಲ್ಲಿ ನಿಮಗೆ ಅನುಭವವಿದೆ, ಖುಷ್ಕಿ ಪ್ರದೇಶದಿಂದ ಬಂದಿದ್ದೀರಿ, ನೀರಿನ ಬವಣೆ ಎಷ್ಟು ಎಂದು ನಿಮಗೂ ಗೊತ್ತಿದೆ. ಹೇಗೆ ನೀವು ಕೆರೆಗಳನ್ನು ರಕ್ಷಣೆ ಮಾಡುತ್ತೀರಿ? ಇವತ್ತು ಕರ್ನಾಟಕದ 18 ಜಿಲ್ಲೆಯಲ್ಲಿ ತೆಂಗಿನ ಬೆಳೆಗಾರರು ಸಂಪೂರ್ಣ ನಾಶವಾಗಿದ್ದಾರೆ. ಇವರನ್ನು ಹೇಗೆ ರಕ್ಷಣೆ ಮಾಡುತ್ತೀರಿ? ಎಲ್ಲಿದೆ ಭಾಗಾಯತಿ, ಬರಗಾಲದ ನೀತಿ?

ಛೇರ್‌ಮನ್: ಸಮಯವಾಗುತ್ತಿದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಛೇರ್‌ಮನ್‌ರವರೆ, ಇನ್ನೆರಡು ನಿಮಿಷ ಮಾತನಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಭಾಗಾಯತಿ, ಬರಗಾಲಕ್ಕೆ ಏನಾದರೂ ನೀತಿ ಮಾಡಿದ್ದೀರಾ? ರವಿಯವರೇ, ಮೊನ್ನೆ ನಾನು ಆಕಸ್ಮಿಕವಾಗಿ ಮಗಳ ಮನೆಗೆ ಹೋಗಿದ್ದೆನು. ಅಮೇರಿಕಾದಲ್ಲಿ ಭೂಮಿಯನ್ನು ತಕ್ಕಲು ಬಿಟ್ಟರೆ ಪರಿಹಾರ ಕೊಡುತ್ತಾರೆ. ಹಿಂಗಾರಿ ಖುಷ್ಕಿ ಪ್ರದೇಶದಲ್ಲಿ ಬೆಳೆ ಆಗಿಲ್ಲ, ಮುಂಗಾರಿ ಬೆಳೆ ಆಗಿಲ್ಲ. ಒಂದು ಎಕರೆ ತಕ್ಕಲು ಬಿಡುತ್ತಾರೆ. ನೀವು ಏನು ಕೊಡುತ್ತೀರಿ? ಒಂದು ಎಕರೆ ತಕ್ಕಲು ಬಿಟ್ಟರೆ ನೀವು ಏನು ಕೊಡುತ್ತೀರಿ? ಉತ್ತರ ಕರ್ನಾಟಕದಲ್ಲಿ 50% ಬೀಜ ಹಾಕಿ ಬೆಳೆ ಬೆಳೆದು ಇಂತಿಷ್ಟು ಬಂದಿತು, ಇನ್ನೇನು ಒಡೆ ಕಡಿಯಬೇಕು ಬಿ - ಗ್ರೇಡ್ ಭೂಮಿ ಸಂಪೂರ್ಣ ನಾಶವಾಯಿತು. ಅದಕ್ಕೇನು ನೀವು ನೀತಿ ಮಾಡಿದ್ದೀರಿ? ಮೊನ್ನೆ ಹೇಳುತ್ತಾರೆ 18 ಲಕ್ಷದ 60 ಸಾವಿರ ಎಕರೆ ಕಾವೇರಿ ವಿವಾದದಿಂದ ಸುಮಾರು ಒಂದೂವರೆ ವರ್ಷಗಳ ಕಾಲ ಸಂಪೂರ್ಣ ರೈತರು ನಾಶವಾಗಿದ್ದಾರೆ. ಸುಮಾರು ಹತ್ತು ಸಾವಿರ ಕೋಟಿ ರೂಪಾಯಿ ಆದಾಯ ಬರುತ್ತಿದ್ದಂಥ ತೆಂಗಿನ ಮರಗಳು ಸಂಪೂರ್ಣ ನಾಶವಾಗಿವೆ. ಗೊರಸು ತೆಂಗಿನ ಮರ ಬೇರೆ, ನೀರಾವರಿ ತೆಂಗಿನ ಮರವೇ ಬೇರೆ. ಗೊರಸು ತೆಂಗಿನ ಮರ ತಡೆಯುತ್ತದೆ, ನೀರಾವರಿ ತೆಂಗಿನ ಮರ ತಡೆಯುವುದಿಲ್ಲ. ಸಂಪೂರ್ಣ ನಾಶವಾಗುತ್ತದೆ. ಏಷ್ಯಾಕ್ಕೆ biggest market ಎಂದರೆ ಮದ್ದೂರಿನ ಯಳನೀರು ಮಾರುಕಟ್ಟೆ, ಸಂಪೂರ್ಣ ನಾಶವಾಗಿ ಹೋಗಿದೆ. ಕಪ್ಪುತಲೆಯ ಹುಳದಿಂದ 90%ನಷ್ಟು ತೆಂಗಿನ ಮರ ನಾಶವಾಗುತ್ತಿದೆ. ತೋಟಗಾರಿಕೆ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಇಲಾಖೆ ಸುಮ್ಮನೆ ಕುಳಿತಿದೆ. ಇದನ್ನೆಲ್ಲಾ ಯಾರ ಬಳಿ ಕೇಳಬೇಕು? ಎಲ್ಲಿದೆ, ಈ ಆರ್ತನಾದ ಯಾರಿಗೆ ಹೇಳಬೇಕು? ಇದು ಯಾವ ಸರ್ಕಾರದ ಮುಂದಿರುವ ಪ್ರಶ್ನೆಯಲ್ಲ, ಬರಗಾಲಕ್ಕೆ ಒಂದು ನೀತಿಯನ್ನು fix ಮಾಡದೇ ಇದ್ದರೆ ರೈತರನ್ನು ಹೇಗೆ ರಕ್ಷಣೆ ಮಾಡುತ್ತೀರಿ? ನಿಜ ಹೇಳುತ್ತಿದ್ದೇನೆ, ನಿಮಗೂ ಬೇಸಿಗೆ ಜಾಸ್ತಿಯಾಗಿ ಕಾಫಿ ಹೂಗಳೆಲ್ಲವೂ ಉದುರಿ ಹೋಗಿದೆ. Plantation ಬರಗಾಲ ಎಂದು declare ಮಾಡಬೇಕು. ನೀರಾವರಿ ಬರಗಾಲ declare ಮಾಡಬೇಕು.

(ಮುಂದುವರೆದಿದೆ)

27.03.2017 / 06.20 (43) MPL-PS

**ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಮುಂದು. . .)**

ನೀರಾವರಿ ಬರಗಾಲವನ್ನು declare ಮಾಡಬೇಕು. ನೋಡಿ ತಾವು ಏನು ಮಾಡುತ್ತೀರೋ ಕೊಡುತ್ತೀರೋ, ಬರಗಾಲದ ಒಂದು concept create ಮಾಡಿ. ಬರಗಾಲ ಎನ್ನುವುದು ಯಾವ್ಯಾವುದು? ಪ್ರಕೃತಿಯ ವಿಕೋಪಕ್ಕೆ ಸಿಕ್ಕಿ ಯಾವ ತರಹದ್ದು? ನಿಮಗೆ ಹೇಳುತ್ತೇನೆ. ಬೇಸಿಗೆ ಜಾಸ್ತಿ ಆಗಿ ಬೀನಿಸ್ ಎಲ್ಲಾ ಉದುರಿ ಹೋಗಿದೆ. ಟೊಮ್ಯಾಟೋ ಹೂವೆಲ್ಲಾ ಉದುರಿ ಹೋಗಿದೆ. ನೋಡಿ observe ಮಾಡಿಸಿ. ಆಮೇಲೆ ಯಾವತ್ತು ನೀವೆಲ್ಲಾ ಸೇರಿ agriculture, horticulture department ನವರೆಲ್ಲಾ ಸೇರಿ ಎಲ್ಲಿ, ಯಾವಾಗ ಮೀಟಿಂಗ್ ಮಾಡಿದ್ದೀರಿ? ಮಾನ್ಯ ಅಧ್ಯಕ್ಷರೆ, ನೀವು 6 ಅಡಿ ಅಥವಾ 6 1/2 ಅಡಿ ಇದ್ದೀರಿ. ಒಂದು ಸಣ್ಣ sample ಗೆ ಹೇಳುತ್ತೇನೆ. ಹದಿಮೂರುವರೆ ಲಕ್ಷ ಅಂಗವಿಕಲ ಮಕ್ಕಳಿದ್ದಾರೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ನೀವು 6 ಅಡಿ ಎಂದು ಹೇಳಿ ಅಥವಾ 6 1/2 ಅಡಿ ಎಂದಾದರೂ ಹೇಳಿ. ಎರಡರಲ್ಲಿ ಒಂದನ್ನು ಹೇಳಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : 6 1/4 ಇರಬಹುದು ಮಧ್ಯದಲ್ಲಿ. ನೀವು ಒಂದು ರೀತಿ 3rd umpire ಇದ್ದ ಹಾಗೆ. ಅದೇನು clear ಮಾಡಿಬಿಡಿ ನೀವು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ನಮಗೆ clear ಆಗಿದೆ. ಅವರು ಯಾವಾಗ ಹೋಗಿ ಮೇಲೆ ಕುಳಿತಿದ್ದಾರೆ, ಆಗಲೇ clear ಆಗಿದೆ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಸಿ.ಟಿ.ರವಿ : ಅಲ್ಲ, clear ಆಗಿದೆ. ಖಾಯಂ ಆಗುವುದು ಅಷ್ಟೇ ಬಾಕಿ ಇದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ನಾವು, ನೀವೆಲ್ಲಾ ಏಕೆ ಗಲಾಟೆ ಮಾಡುತ್ತಿರುವುದು ಎಂದು . . .

ಚೇರ್‌ಮನ್ : ನೀವು ಯಾರು ಏನು ಪ್ರಚೋದನೆ ಮಾತನ್ನು ಹೇಳಿದರೂ ನಾನು ಮೌನವಾಗಿರುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ರೀ ಸ್ವಾಮಿ ಕಾಂಗ್ರೆಸ್ ನವರು, ದಳದವರು, ಬಿ.ಜೆ.ಪಿ ಯವರು ಏಕೆ ಹೀಗೆ ಕೂಗಾಡುತ್ತೀರಿ? Swaraj India ಮೊನ್ನೆ declare ಆಗಿದೆ. ನಾವು ಬಂದರೆ ನಿಮಗೇನ್ರಿ ತೊಂದರೆ?

ಶ್ರೀ ಬಿ.ಆರ್.ಪಾಟೀಲ್ : ಏ ತೊಂದರೆಯಿಲ್ಲ. ರೈತರಿಗೆ ಒಳ್ಳೆಯದಾಗುತ್ತದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : Swaraj India ದವರು ನಾವು ಬರುತ್ತೇವೆ. ಸ್ವಲ್ಪ ದಿವಸ ನಿಮಗೆ ಒಂದು 5 ವರ್ಷ ರಜಾ ಕೊಡುತ್ತೇವೆ.

ಶ್ರೀ ಸಾ.ರಾ.ಮಹೇಶ್ : ಎಲ್ಲಿಗೆ ಸರ್?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಸರ್ಕಾರ ರಚನೆ ಮಾಡುವುದಕ್ಕೆ.

ಶ್ರೀ ಸಾ.ರಾ.ಮಹೇಶ್ : ಸರ್ಕಾರ ರಚನೆ ಮಾಡುವುದಕ್ಕಾ?

ಚೇರ್‌ಮನ್ : ಪುಟ್ಟಣ್ಣಯ್ಯ ನವರೆ ಮಾತನಾಡುವವರು ಇನ್ನೂ ಬಹಳ ಜನರಿದ್ದಾರೆ. ಸಮಯ ಕಡಿಮೆ ಇದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಇನ್ನೆರಡೇ ನಿಮಿಷ. ಒಂದೇ ಒಂದು example.

ಶ್ರೀ ಸಿ.ಟಿ.ರವಿ : ಈಗ ನೀವು ಎಷ್ಟು ಸೀಟ್ ಗೆಲ್ಲಬೇಕೆಂದು ಇರುವುದು?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : 224 .

ಶ್ರೀ ಸಿ.ಟಿ.ರವಿ : First 224 ಜನ candidates ಅನ್ನು declare ಮಾಡಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಎಷ್ಟು ಸೀಟ್? ನಿಲ್ಲಿಸಿರುವ ಸೀಟನ್ನೆಲ್ಲಾ ನಾವೇ ಗೆಲ್ಲುವುದು. ಹೇಳಿದ್ದೇವೆ. ರೈತರು ಒಪ್ಪಿಕೊಂಡಿದ್ದು agreement ಆಗಿದೆ.

ಶ್ರೀ ಸಾ.ರಾ.ಮಹೇಶ್ : ರವಿ 224 ರ ಮೇಲಿದ್ದೆಲ್ಲಾ ಅವರೇ ಗೆಲ್ಲುವುದು.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಬಿ.ಬಿ.ನಿಂಗಯ್ಯ : ರಾಜ್ಯದ ರೈತರ ಕಷ್ಟ ಅರ್ಥ ಮಾಡಿಕೊಂಡಿರುವ ಪುಟ್ಟಣ್ಣಯ್ಯ ರವರು ಮುಖ್ಯಮಂತ್ರಿಯಾದರೆ ರಾಜ್ಯಕ್ಕೆ ಸುಭಿಕ್ಷೆಯಾಗುತ್ತದೆ, ಆಗಲಿ ಎಂದು ನಾವು ಆಶಿಸುತ್ತೇವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಧನ್ಯವಾದಗಳು. ನಮ್ಮ ಆಸೆ ಏನು ಗೊತ್ತೇನ್ರಿ? ನಾನು ಮುಖ್ಯಮಂತ್ರಿಯಾಗಬೇಕೆಂದು ಅಲ್ಲ.

ಶ್ರೀ ಸಿ.ಟಿ.ರವಿ : ಒಂದು ನಿಮಿಷ ಸರ್. ಇದು ಸೀರಿಯಸ್ ಸರ್ ಈಗ. ಪಕ್ಷವನ್ನು ಈಗಲೇ change ಮಾಡಿದ್ದೀರೋ ಅಥವಾ ಮುಂದೆ change ಮಾಡುವ ಯೋಚನೆಯಲ್ಲಿದ್ದೀರೋ?

ಶ್ರೀ ಬಿ.ಬಿ.ನಿಂಗಯ್ಯ : ಮುಂದೆ position ನೋಡಿಕೊಂಡು ನಂತರ ಉತ್ತರ ಹೇಳುತ್ತೇವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ನಾನು ಮುಖ್ಯಮಂತ್ರಿ ಆಗಬೇಕೆಂದಲ್ಲ. ನಿಮಗೆ political threatens ಮಾಡಬೇಕು. ನಿಮ್ಮ ಮೂರು ಜನಕ್ಕೂ ರಾಜಕೀಯ ಭಯ ಸೃಷ್ಟಿಯಾಗಬೇಕು. ರೈತರ ಬದುಕನ್ನು ರಕ್ಷಣೆ ಮಾಡದಿದ್ದರೆ ನಮ್ಮನ್ನು ಯಾರೂ ಉಳಿಸುವುದಿಲ್ಲ ಎಂಬ ಕನಿಷ್ಟ ಭಯ ಸೃಷ್ಟಿಯಾದರೆ ಸಾಕು. ನಾನು ಉತ್ಪ್ರೇಕ್ಷೆಯಾಗಿ ಮಾತನಾಡುತ್ತಿಲ್ಲ. 5 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡರು. ಯಾರೂ ಆಲೋಚನೆ ಮಾಡದಿದ್ದರೆ 29 ರಾಜ್ಯಸರ್ಕಾರ, 7 ಕೇಂದ್ರಾಡಳಿತ ಪ್ರದೇಶ ಕೇಂದ್ರಸರ್ಕಾರ ಏನಿದರ ಅರ್ಥ? ನೀವೇ ಯೋಚನೆ ಮಾಡಿ. ಒಬ್ಬ ರವಿಗೆ ಸಿ.ಬಿ.ಐ refer ಮಾಡಿದ್ರಿ. ಕನಿಷ್ಟ Agriculture scientist, ಒಬ್ಬ Economist, ಒಬ್ಬ Psychiatrist ಯಾರಾದರೂ 5 ಜನರ ಕಮಿಟಿ ಮಾಡಿ. ಸಬ್ ಲೋಗ್ ಮಿಲಾಕೋ ಹತ್ಯಾ ಕಿಯಾ ಹೈ. ಏ ಖೂನ್ ಕಿಯಾ ಹೈ. ಏ ಖೂನೀ ಕೋ ಕೈಸೆ ರಕ್ಷಣ್ ಕರತಾ ಹೈ? ಆದುದರಿಂದ ತಾವು ಅರ್ಥ ಮಾಡಿಕೊಳ್ಳಬೇಕು. ಈಗ ನಾನೇನೋ ಭಾಷಣ ಮಾಡಿ ರೈತರ ರಕ್ಷಣೆ ಮಾಡುವುದಕ್ಕಲ್ಲ. ನಾವು ರೈತರ ಸಾವಿನ ಬಗ್ಗೆ ಆಲೋಚನೆ ಮಾಡದಿದ್ದರೆ ಕೇಂದ್ರ ಮತ್ತು ರಾಜ್ಯಸರ್ಕಾರಗಳು ಜನರ ಪಾಲಿಗೆ ಸತ್ತು ಹೋಗಿವೆ.

ಚೇರ್‌ಮನ್ : ನಾರಾಯಣಸ್ವಾಮಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಆದುದರಿಂದ ಕಡೆಯದೊಂದು ಮಾತನ್ನು ಹೇಳುತ್ತೇನೆ. ತಾವು ಅದನ್ನು implement ಮಾಡಬೇಕು. ಕಾಸಿಲ್ಲ. ಏನೂ ತೊಂದರೆಯಿಲ್ಲ. 63% ಸಕ್ಕರೆ ಕಾಯಿಲೆ. 50% Cardiac. ತಾಯಿಯ ಗರ್ಭದಿಂದ ಬರುವಂತಹ ಮಕ್ಕಳಿಗೆ ಈಗಾಗಲೇ ಸಕ್ಕರೆ ಕಾಯಿಲೆ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

27-03-2017

3-4 ಮಕ್ಕಳಿಗೆ ಕಿಡ್ನಿ ಇಲ್ಲ ಆಗಲೆ. ಹದಿಮೂರುವರೆ ಲಕ್ಷ ಅಂಗವಿಕಲ ಮಕ್ಕಳು. ಮಕ್ಕಳ ಬೆಳವಣಿಗೆ ಎಷ್ಟರಮಟ್ಟಿಗೆ ಆಗುತ್ತಿದೆ ಎಂದು ವರದಿ ತರಿಸಿಕೊಂಡು ಹೇಳಿ. ಈ ರೀತಿ generation ಬೆಳೆದರೆ ಹೇಗೆ? ವಿಷಮುಕ್ತ ಆಹಾರ ಮತ್ತು ಆರೋಗ್ಯ ರಕ್ಷಣೆ ಮತ್ತು ದೇಹದ ದೃಢತೆ. ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆ, ಆರೋಗ್ಯ ಇಲಾಖೆ, Rural development. ನೋಡಿ ಇವರು ಬಂದ ಮೇಲೆ ಕನಿಷ್ಠ ಶುದ್ಧವಾದ ನೀರು ಬಂದ ಮೇಲೆ ಸ್ವಲ್ಪ ಆರೋಗ್ಯ ಸುಧಾರಣೆಯಾಗಿದೆ. ನೋಡಿ ಇದೊಂದನ್ನು ಮಾಡಿ ಮುಂದಿನ ವರ್ಷಕ್ಕೆ. 7th standard to 12th standard 15 Marks ಚೆನ್ನಾಗಿ ವ್ಯಾಯಾಮ ಮಾಡಿ ದೇಹವನ್ನು ಚೆನ್ನಾಗಿ ಇಟ್ಟುಕೊಂಡಿರುವ ಮಕ್ಕಳಿಗೆ 15 marks ಎಂದು declare ಮಾಡಿ. 5 ವರ್ಷದಲ್ಲಿ ಕರ್ನಾಟಕದ ಆರೋಗ್ಯ 50% ಸುಧಾರಣೆಯಾಗುತ್ತದೆ. ನೀವು ಒಂದು ರೂಪಾಯಿಯನ್ನು ಕೊಡುವುದು ಬೇಡ ದುಡ್ಡು. 50% ಸುಧಾರಣೆಯಾಗುತ್ತದೆ. ಮಾವೋ ಕೂಡಾ ಇದನ್ನೇ ಮಾಡಿದ್ದು. 18 ವರ್ಷದ ಎಲ್ಲಾ ಹುಡುಗರಿಗೆ ಸೈಕಲ್ ಹೊಡೆಸಿದೆ. ಇಡೀ ಚೈನಾ 85% health perfect. ಯೋಚನೆ ಮಾಡಿ. Horticulture department, Agriculture department, Education department, Health department ಸೇರಿ ಒಂದು plan ಮಾಡಿ. ಹೊಸದಾಗಿ ಕರ್ನಾಟಕದಲ್ಲಿ ವಿಷ ಮುಕ್ತ ಆಹಾರವನ್ನು 12 ವರ್ಷದಲ್ಲಿ clear ಮಾಡುತ್ತೇವೆಂದು ಹೇಳಿ. ಸಿಕ್ಕಿಂ ರಾಜ್ಯದಲ್ಲಿ ರಾಸಾಯನಿಕ ಗೊಬ್ಬರ ಮತ್ತು pesticides ಉಪಯೋಗಿಸುವವನಿಗೆ ಸರ್ಕಾರದವರು 10 ವರ್ಷ ಜೈಲಿಗೆ ಹಾಕುವ ನೀತಿಯನ್ನು, ಕಾನೂನನ್ನು ಮಾಡಿದ್ದಾರೆ. ನೈಸರ್ಗಿಕ ಕೃಷಿ ಆಂದೋಳನವನ್ನು ಪ್ರಾರಂಭ ಮಾಡಿ. ನೋಡಿ ಆಂಧ್ರದಲ್ಲಿ ಪ್ರಾರಂಭ ಮಾಡಿದ್ದಾರೆ. ಚಂದ್ರಬಾಬು ನಾಯ್ಡು, ಸುಭಾಷ್ ಬಾಳೇಕರ್‌ನನ್ನು ದತ್ತು ತೆಗೆದುಕೊಂಡು ಪಂಚಾಯಿತಿಗೆ ಒಂದು ನೈಸರ್ಗಿಕ ಕೃಷಿ ಆಂದೋಳನ ಪ್ರಾರಂಭ ಮಾಡಿದರು. ದಯವಿಟ್ಟು ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಬೇಕೆಂದು ಹೇಳಿ ಅಧ್ಯಕ್ಷರ ಮೂಲಕ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಸಿ.ಟಿ.ರವಿ : ಹಸಿರು ಶಾಲನ್ನು ಹಾಕಿಕೊಂಡು ಗೊಬ್ಬರ ಸಿಗುತ್ತಿಲ್ಲ ಎಂದು strike ಮಾಡುವವರು ನೀವೆ. ಇಲ್ಲಿ ರಾಸಾಯನಿಕ ಗೊಬ್ಬರವನ್ನು ban ಮಾಡಬೇಕೆಂದು ಹೇಳುವವರು ನೀವೆ. ಎರಡನ್ನೂ ನೀವೇ ಹೇಳಿದರೆ ಹೇಗೆ ಆಗುತ್ತದೆ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ನಾನು ಹೇಳುವುದು ನಾಳೆಯೇ ಬ್ಯಾನ್ ಮಾಡಿ ಎಂದಲ್ಲ. 10 ವರ್ಷ 12 ವರ್ಷ ಹಂತಹಂತವಾಗಿ ಮಾಡಬೇಕು. ಪ್ರತಿ ಪಂಚಾಯಿತಿಯಲ್ಲಿ 10% ನೈಸರ್ಗಿಕ ಕೃಷಿಗೆ. ನೀವೇ ಹೇಳುತ್ತೀರಿ ಬಿ.ಜೆ.ಪಿ ಯವರು ದೇಶೀಯ ತಳಿಯನ್ನು ರಕ್ಷಣೆ ಮಾಡಿ. ವಿದೇಶಿ ಕೋ ಹಟಾವೋ, ದೇಶಿ ಕೋ ಬಚಾವೋ, ಐಸೀ ಹಮ್ ಬೀ ಬಾಥ್ ಕರ್ ರಹೆ ಹೈ ಬಾಯಿ.

ಶ್ರೀ ಸಿ.ಟಿ.ರವಿ : ಸಹಿ ಬಾತ್ ಹೆ. ರುಕ್ ಕೆ ಆಯಾ ಆಪ್ ಕೆ ಮನ್ ಮೈ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಲೆಕಿನ್ ಕ್ಯೂ ಐಸಿ ಬಾತ್ ಕರ್ ರಹೆಹೆ, ವಿಷ ಮುಕ್ತ್ ಆಹಾರ್ ಕೆ ಬಾರೆ ಮೆ ಹಮ್ ಬೀ ಬಾತ್ ಕರ್ ರಹೆಹೆ. ದೇಶೀ ತಳಿ ಹೋನಾ ಹೈ. ದೇಶದ ತಳಿ ಬೇಕೇ ಬೇಕಾಗಿದೆ. ಯಾರು ನೈಸರ್ಗಿಕ ಕೃಷಿ ಮಾಡುತ್ತಾರೆ, ಒಂದೊಂದು ಹಳ್ಳಿಕಾರ್ ತಳಿ free ಕೊಡುತ್ತೇವೆಂದು ಘೋಷಣೆ ಮಾಡಿ. ಒಂದು ಹಸುವಿನಲ್ಲಿ 30 ಎಕರೆ ಮಾಡಬಹುದು. ದಯವಿಟ್ಟು ಕಳುಹಿಸಿಕೊಡಿ, ನಾನು ತೋರಿಸಿಕೊಡುತ್ತೇನೆ. 10 ಲಕ್ಷ ಜನರು ಬಂದಿದ್ದಾರೆ ಬನ್ನೂರಿನಲ್ಲಿ ಕೃಷ್ಣಪ್ಪನ ತೋಟ ನೋಡುವುದಕ್ಕೆ. 1 ಎಕರೆಯಲ್ಲಿ 400 ಟನ್ ಕಬ್ಬು ಬೆಳೆಯಬಹುದು ಎಂದು ಅವರು ಹೇಳುತ್ತಾರೆ. ನಾವೇನು ಆಗಿದ್ದೇವೆ. ಚರ್ಚೆ ಮಾಡಬೇಕು ಸರ್.

ಚೇರ್‌ಮನ್ : ಪುಟ್ಟಣ್ಣಯ್ಯನವರೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಆಗಿಹೋಯಿತು. ಮಾತು ಮುಗಿಸುತ್ತೇನೆ.

ಚೇರ್‌ಮನ್ : ನೀವು ಮುಗಿಸಿದ್ದಿರಿ. ನೀವು ಮುಗಿಸಿದಿರಿ ಎಂದು ನಾನು ಬೇರೆಯವರ ಹೆಸರನ್ನು ಕರೆದೆ. ಮಧ್ಯದಲ್ಲಿ. . . .

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಒಂದೇ ಒಂದು. ತಮಗೆ next session ಗೆ. . .

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮಾನ್ಯ ಅಧ್ಯಕ್ಷರೆ, ಅವರಿಗೆ ಇನ್ನೊಂದು ಅವಕಾಶ ಕೊಡಬೇಕು. ಕ್ರೀಡಾ ಸಚಿವರು ಬಹಳ ಲಕ್ಷ್ಯ ಕೊಟ್ಟು ಕೇಳುತ್ತಿದ್ದಾರೆ. ಕ್ರೀಡೆ ಬಗ್ಗೆ ಒಂದೆರಡು ಮಾತನ್ನು ಹೇಳಿ ಮುಗಿಸಿ ನನ್ನ ಪರವಾಗಿ ವಿನಂತಿ.

ತಿದ್ದುಪಡಿಯಾಗದ / Uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಸರ್ ದಯವಿಟ್ಟು ತಾವು youngsters.

ಚೇರ್‌ಮನ್ : ಈಗ ಒಂದೇ ಒಂದು ಎಂದರೆ ಮಾತನಾಡುವವರ ಸಂಖ್ಯೆ ಜಾಸ್ತಿ ಇದೆ. ನಾನು ಸಮಯ ಮಿತಿ ಮಾಡದಿದ್ದರೆ ಅಧಿವೇಶನ ಮುಕ್ತಾಯ ಮಾಡುವುದು ಇನ್ನೂ ಬಹಳ ವಿಳಂಬವಾಗುತ್ತದೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಸರ್ ಡಾ|| ಖಾದರ್ ಎಂದು ಹೇಳಿ ಟಿ.ವಿ ಯಲ್ಲಿ ಸರಳ ಜೀವನ ಕಾರ್ಯಕ್ರಮದಲ್ಲಿ ಬರುತ್ತಾರೆ. ನಾನು ಎರಡು ಗಂಟೆ ಅವರ ಭಾಷಣ ಕೇಳಿದ್ದೇನೆ. ನಮ್ಮ ಎಂ.ಎಲ್.ಎ ಗಳಿಗೆಲ್ಲಾ ಒಂದು ಸಾರಿ 2 hours ಭಾಷಣ ಮಾಡಿಸಿ. ದಯವಿಟ್ಟು ಅದನ್ನು ಮಾಡಿಸಲೇಬೇಕು. ಎಷ್ಟು ಚೆನ್ನಾಗಿ ಮಾತನಾಡುತ್ತಾರೆಂದರೆ ನೀವ್ಯಾರು ಎದ್ದು ಹೋಗುವ ಪ್ರಶ್ನೆಯೇ ಬರುವುದಿಲ್ಲ. ತಾವು ನೋಡುವುದಕ್ಕೆ ಒಳ್ಳೆಯ ಪೈಲ್ವಾನ್ ಕಂಡಂತೆ ಕಾಣುತ್ತೀರಿ ನೀವು. 6 ಅಡಿ 3 ಅಂಗುಲ ಇದ್ದೀರಿ. ದಯವಿಟ್ಟು ಕ್ರೀಡೆಗೆ ಹೆಚ್ಚು ಒತ್ತು ಕೊಡಿ. ನೋಡಿ ಜಗತ್ತಿನಲ್ಲಿ ಮನುಷ್ಯನಿಗೆ ಸಂಬಂಧ ಇರುವ ಒಂದೇ ರಂಗ ಸಾಂಸ್ಕೃತಿಕ ರಂಗ, ಕ್ರೀಡಾ ರಂಗ. ಅವನು ಹೇಳುತ್ತಾನೆ. ಕ್ರೀಡಾ ರಂಗವನ್ನು ಸೃಷ್ಟಿ ಮಾಡಿದವನು ಜಗತ್ತಿನ ಶಾಂತಿಗೆ. ನೋಡಿ ಎಷ್ಟು ಚೆನ್ನಾಗಿ ಹೇಳುತ್ತಾನೆ. ಜಾತಿ ಮತ್ತು ಧರ್ಮಗಳ ವಿಷ ಬೀಜದಿಂದ ಹೊರ ಬರಲು ದೇಹದ ದೃಢತೆ ಮತ್ತು ಮೆದುಳಿನ ಏಕಾಗ್ರತೆ. ಹೆಣ್ಣು ದೃಢಕಾಯವಾಗಿರಬೇಕು, ಗಂಡು ದೃಢಕಾಯವಾಗಿರಬೇಕು. ಅವರಿಬ್ಬರಿಂದ ಹುಟ್ಟಿದಂತಹ ಮಕ್ಕಳು ಮಾನವ ಅತ್ಯಂತ ದೃಢಕಾಯವಾಗಿ ಹುಟ್ಟಬೇಕೆಂಬ ನಾಲ್ಕು ಆಸೆಗಳ ಎಲ್ಲಾ ನಿಮ್ಮಂತಹ ದೃಢಕಾಯರಾದ ಮಕ್ಕಳು ಹುಟ್ಟಬೇಕೆಂಬ ಆಸೆಯ ಮೇಲೆ ಕ್ರೀಡಾ ರಂಗವನ್ನು ಸೃಷ್ಟಿ ಮಾಡಿದ್ದೀರಿ. ಮೌನವಾಗಿದ್ದೀರಿ. ಸರ್ಕಾರದಿಂದ ಇನ್ನೊಂದು 200 ಕೋಟಿ ರೂ.ಗಳನ್ನು ತಂದು ಕ್ರೀಡೆಗೆ ಹೆಚ್ಚು ಪ್ರಯೋಜನಕಾರಿಯಾಗಿ ಕೆಲಸ ಮಾಡಲಿ ಎಂದು ಹೇಳುತ್ತಾ ಸನ್ಮಾನ್ಯ ಸಭಾಧ್ಯಕ್ಷರ ಪರವಾಗಿ ಅವರಿಗೆ ಹೇಳುತ್ತಾ, ತಾವು ದಯವಿಟ್ಟು minor irrigation ಬಗ್ಗೆ ನಾಳೆನೇ declare ಮಾಡಿ. ನಿಮಗೆ ಒಳ್ಳೆಯ ಹೆಸರು, ಗೌರವ ಬರುತ್ತದೆ. ಎಲ್ಲಾ ಶಾಸಕರಿಗೂ ಜವಾಬ್ದಾರಿ ಕೊಡಿ. ನಂತರ ಕಟ್ಟಿಕೊಳ್ಳೋಣ ಪಾರ್ಟಿ. ಎಲ್ಲಾ ಶಾಸಕರಿಗೂ ಜವಾಬ್ದಾರಿ ಕೊಡಿ ಎಂದು ವಿನಂತಿ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಚೇರ್‌ಮನ್ : ಈಗ ನಾರಾಯಣಸ್ವಾಮಿ ಯವರು. ಸ್ವಲ್ಪ ಕೆಲವೇ ಸಮಯದಲ್ಲಿ ಮುಗಿಸಿ. ನೀವು ತುರ್ತಾಗಿ ಹೋಗಬೇಕೆಂದು ಇರುವುದರಿಂದ ಅವಕಾಶ ಕೊಟ್ಟಿದ್ದೇವೆ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

(ಮುಂದು. . . .)

27.03.2017-6.30-(44) BR-PS

ಶ್ರೀ ವೈ.ಎ.ನಾರಾಯಣಸ್ವಾಮಿ (ಹೆಬ್ಬಾಳ): ಛೇರ್ಮನ್‌ರವರೇ, 2017-18ನೇ ಸಾಲಿನ ಬಜೆಟ್ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಹೆಚ್ಚು ಇಲಾಖೆಯನ್ನು ಟಚ್ ಮಾಡುವುದಕ್ಕೆ ಹೋಗುವುದಿಲ್ಲ. ಬಹಳ ಮುಖ್ಯವಾಗಿ ಮನುಷ್ಯನಿಗೆ ಅವಶ್ಯಕತೆ ಇರುವುದು ನೀರು. ನೀರಿನ ನಿರ್ವಹಣೆ ಬಗ್ಗೆ ಕರ್ನಾಟಕ ರಾಜ್ಯದಲ್ಲಿ ಸಮರ್ಪಕವಾದ ನೀತಿ ಇಲ್ಲ. ಕರ್ನಾಟಕ ರಾಜ್ಯದಲ್ಲಿರುವ ಸುಮಾರು 1.25 ಕೋಟಿ ಜನ ಜೀವನ ಮಾಡುತ್ತಿರುವ ಪ್ರದೇಶಗಳಲ್ಲಿ ಕುಡಿಯುವ ನೀರೂ ಇಲ್ಲ, ರೈತರ ಹೊಲಗಳಿಗೆ ನೀರೂ ಇಲ್ಲ. ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ, ಈ ರಾಜ್ಯದ ಶೇ.35ರಷ್ಟು ಜನರ ಭವಿಷ್ಯ ಡೋಲಾಯಮಾನವಾಗಿ ರುವುದರಿಂದ ಈ ರಾಜ್ಯಕ್ಕೆ ಏನಾದರೂ ಪ್ರತ್ಯೇಕವಾದ ಜಲ ನೀತಿಯನ್ನು ಸೃಷ್ಟಿ ಮಾಡಲಾಗಿದೆಯೇ? ರೂಪಿಸಲಾಗಿದೆಯೇ? ಎನ್ನುವ ಪ್ರಶ್ನೆಗೆ ಸರ್ಕಾರ ಉತ್ತರ ಕೊಟ್ಟಿದೆ, ಪುಟ್ಟಣ್ಣಯ್ಯನವರೇ, 2002ರಲ್ಲಿ ಈ ರಾಜ್ಯದಲ್ಲಿ ಜಲ ನೀತಿ ಇತ್ತು. ಅದರಿಂದೀಚೆಗೆ ನಮ್ಮಲ್ಲಿ water policy ಇಲ್ಲ. ಕೇಂದ್ರ ಸರ್ಕಾರದಲ್ಲಿ 2012ರಲ್ಲಿ ಆ Water policyಯನ್ನು ಪರಿಷ್ಕರಿಸಲಾಗಿದೆ. ಆ ಒಂದು ನಿಟ್ಟಿನಲ್ಲಿ ನಾವು ಹೆಜ್ಜೆ ಇಡುತ್ತಿದ್ದೇವೆ. ಸಮಿತಿ ಮಾಡಿದ್ದೇವೆ. ಸಮಿತಿ reportಗೆ ಕಾಯುತ್ತಿದ್ದೇವೆಂದು ಹೇಳಿ ಏಳು ವರ್ಷವಾಯಿತು. ಇದುವರೆವಿಗೆ ಈ ರಾಜ್ಯದಲ್ಲಿ ಸಮಗ್ರವಾದ ನೀರಿನ ನೀತಿ ಜಾರಿಗೆ ತಂದಿಲ್ಲ. ಆದ್ದರಿಂದಲೇ ಇಷ್ಟು ಅಸಮರ್ಪಕವಾದ ನೀರಿನ ಬಳಕೆ, ಅಸಮರ್ಥವಾದ ನೀರಿನ ನಿರ್ವಹಣೆ ಮತ್ತು ವಿಶೇಷವಾಗಿ ಬಯಲು ಸೀಮೆಗಳು ಯಾವಾಗಲೂ ಬರಗಾಲ ಪೀಡಿತಕ್ಕೆ ಒಂದು ಕಡೆಯಾದರೆ, ನೀರನ್ನು ಉಣಿಸದೇ ಇರುವ ನಮ್ಮ ಬೇಜವಾಬ್ದಾರಿ ಸಹ ಎಲ್ಲರನ್ನೂ ಇವತ್ತು ಜನ ನೋಡುತ್ತಿದ್ದಾರೆ. ನಾನು ಜಾಸ್ತಿ ಒತ್ತು ಮಾಡುವುದಕ್ಕೆ ಹೋಗುವುದಿಲ್ಲ. ತಮ್ಮ ಸರ್ಕಾರ ಬಂದ ಮೇಲೆ 2013ನೇ ಇಸವಿಯಲ್ಲಿ ಮಾನ್ಯ ಮಾಜಿ ಮುಖ್ಯ ಮಂತ್ರಿಗಳಾದ ವೀರಪ್ಪ ಮೊಯ್ಲಿಯವರು ಚಿಕ್ಕಬಳ್ಳಾಪುರಕ್ಕೆ ಬಂದು ಎತ್ತಿನಹೊಳೆ ಯೋಜನೆಗೆ ಶಂಖುಸ್ಥಾಪನೆ ಹಾಕಿದರು. ಈಗ ನಾವು 2017ನೇ ಇಸವಿಯಲ್ಲಿದ್ದೇವೆ. ಆ



ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಯೋಜನೆ ಏನಾಗಿದೆ? ಎಷ್ಟು ದುಡ್ಡು ಖರ್ಚು ಮಾಡಿದ್ದೀರಿ? ನೀವ ಕಳೆದ ಬಜೆಟ್‌ನಲ್ಲಿ ನಮಗೆ ಆಶ್ವಾಸನೆ ಕೊಟ್ಟಿದ್ದೀರಿ, ಅದು ಏನೆಂದರೆ, ಎತ್ತಿನಹೊಳೆ ಯೋಜನೆಗೆ ಸಮನ್ವಯ ಸಮಿತಿ ರಚನೆ ಮಾಡುತ್ತೇವೆ, ಅದರ ಜೊತೆಗೆ ಬೇರೆ ಬೇರೆ ಮೂಲಗಳಿಂದ ದೊರಕಬಹುದಾದ ಪರ್ಯಾಯ ನೀರಿನ ಲಭ್ಯತೆ ಬಗ್ಗೆ ಅಧ್ಯಯನ ನಡೆಸಿ, ಬಯಲುಸೀಮೆ ಜಿಲ್ಲೆಯ ಬರಪೀಡಿತ ಪ್ರದೇಶಗಳಿಗೆ ಶಾಶ್ವತ ನೀರಾವರಿಯನ್ನು ಕಲ್ಪಿಸುತ್ತೇವೆ ಎನ್ನುವ ಮಾತನ್ನು ಕಳೆದ ವರ್ಷ ಹೇಳಿದ್ದೀರಿ. ಈ ವರ್ಷದ ಬಜೆಟ್‌ನಲ್ಲಿ ಅದರ ಬಗ್ಗೆ ಪ್ರಸ್ತಾಪವೇ ಇಲ್ಲ. ಒಂದೇ ಒಂದು ಪ್ಯಾರಾ ಹೇಳಿದ್ದೀರಿ, ಎತ್ತಿನಹೊಳೆ ಯೋಜನೆ ಏತನೀರಾವರಿ ಕಾಮಗಾರಿಗಳಲ್ಲಿ 8 ವಿಯರ್ ಕಾಮಗಾರಿಗಳಿದ್ದು 2 ಮಾತ್ರ progressನಲ್ಲಿದೆ. ಸುಮಾರು 270 ಕಿ.ಮೀ. ಪೈಪ್‌ಲೈನ್ ಹಾಕಬೇಕಾಗಿದ್ದು, ಕೇವಲ 31 ಕಿ.ಮೀ. ಪೈಪ್‌ಲೈನ್ ಮಾತ್ರ ಹಾಕಿದ್ದೇವೆ, ನಮ್ಮ ಕೊರಟಗೆರೆ ತಾಲ್ಲೂಕು ಬೈರಗುಂದಲದ ಜಲಾಶಯ ಕಟ್ಟಬೇಕೆಂದು ಹೇಳಿದಿರಿ, ಇನ್ನೂ ಸರ್ವೆಯಾಗಿಲ್ಲ, ಜಮೀನು ಸ್ವಾಧೀನ ಪಡಿಸಿಕೊಳ್ಳಲಿಲ್ಲ. ನಮ್ಮ ಜಾರ್ಜ್ ಸಾಹೇಬರು ಹೇಳುತ್ತಿದ್ದಾರೆ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ ಜೊತೆಗೆ ಬೆಂಗಳೂರಿಗೂ ನೀರು ಕೊಡುತ್ತೇವೆಂದು ಹೇಳುತ್ತಾರೆ. ನಮಗೆ ಕೊಡಿ ಸ್ವಾಮಿ ಎಂದು ಪಾವಗಡದವರು ಗಲಾಟೆ ಮಾಡುತ್ತಾರೆ, ಅದಕ್ಕೂ ನೀರು ಕೊಡುತ್ತೇವೆಂದು ಹೇಳುತ್ತೀರಿ.

ಶ್ರೀ ಕೆ.ಎಂ.ತಿಮ್ಮರಾಯಪ್ಪ: ನಾರಾಯಣಸ್ವಾಮಿಯವರೇ, ಪಾವಗಡಕ್ಕೆ ನೀರು ಬೇಡವೇ? ಜನ ಸರಿ ಇಲ್ಲವಾ?

ಶ್ರೀ ವೈ.ಎ.ನಾರಾಯಣಸ್ವಾಮಿ: ದಯವಿಟ್ಟು ತೆಗೆದುಕೊಳ್ಳಿ. ನನ್ನ ಪ್ರಶ್ನೆ ಇಷ್ಟೆ ಈ ಎತ್ತಿನಹೊಳೆ ಯೋಜನೆಯ ಬಗ್ಗೆ ದಯವಿಟ್ಟು ಈ ಸದನಕ್ಕೂ ತಿಳಿದುಕೊಳ್ಳಲು ಹಕ್ಕಿದೆ. ಆ ಭಾಗದ ಜನರಿಗೆ ಜಾಸ್ತಿ ಮಂಕುಬೂದಿಯನ್ನು ಹಾಕುವುದಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ. ಈ ಸದನದಲ್ಲಿ ರಮೇಶ್‌ಕುಮಾರ್ ಸಾಹೇಬರು ಇಲ್ಲ. ಅವರು 2013ರಲ್ಲಿ ಚುನಾವಣೆಗೆ ಹೋಗಿದ್ದರು, ಆಗ ನಾನೂ ಇದ್ದೆ. ಅವರು ಭಾಷಣ ಮಾಡುತ್ತಿದ್ದರು, ಈ ಭಾಗದ ಜನರಿಗೆ ನೀರು ಕೊಡದೇ ನಾನು ಮುಂದಿನ ಚುನಾವಣೆಗೆ ಬರುವುದಿಲ್ಲ ಎನ್ನುವ ಮಾತನ್ನು ಹೇಳಿದ್ದರು. ನಾನು ಇವತ್ತು ಬಹಳ ವಿನಮ್ರವಾಗಿ ಬೇಡುತ್ತಿದ್ದೇನೆ. ಎತ್ತಿನಹೊಳೆ ಯೋಜನೆ ಬಗ್ಗೆ ಶ್ವೇತಪತ್ರವನ್ನು ಹೊರಡಿಸಿ. White paper ತನ್ನಿ, ಏನಾಗಿದೆ? ಯಾವ stageನಲ್ಲಿದೆ? ಇಲ್ಲದೇ ಇದ್ದರೆ ವರಾಹಿ ಯೋಜನೆ ಬಗ್ಗೆ ತಮಗೆಲ್ಲಾ ಗೊತ್ತಿದೆಯಲ್ಲಾ? ಆ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಯೋಜನೆ ಪ್ರಾರಂಭವಾಗಿ 33 ವರ್ಷಗಳು ಆಯಿತು. 19 ಕೋಟಿ ರೂಪಾಯಿಗಳಿಗೆ ಯೋಜನೆ ಪ್ರಾರಂಭವಾಗಿದ್ದು, 531 ಕೋಟಿ ರೂಪಾಯಿ ಖರ್ಚಾಗಿದೆ ಇನ್ನೂ finish ಆಗಿಲ್ಲ. ಇದು ನಾನು ನಿಮ್ಮ ಮೇಲೆ ಬೆರಳು ತೋರಿಸುತ್ತಿಲ್ಲ. ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ, ಆ ಬಯಲು ಸೀಮೆ ಜನ ಏನು ಪಾಪ ಮಾಡಿದ್ದಾರೆ? ಇವತ್ತು ತಾವು ಹೊರಟಿದ್ದೀರಿ. ನಾನು ಬಹಳ ಒತ್ತಾಯಪೂರ್ವಕವಾಗಿ ಆಗ್ರಹ ಮಾಡುತ್ತಿದ್ದೇನೆ, Kindly bring white paper on this Ettina Hole scheme ದಯವಿಟ್ಟು ತರಬೇಕು. ನಮ್ಮ ಹಕ್ಕಿದೆ, ನಿಮ್ಮ ಜವಾಬ್ದಾರಿ ಇದೆ. ಎರಡನೆಯದು, ನಿಮ್ಮ ಇಲಾಖೆಯ ವತಿಯಿಂದ ರಮೇಶ್‌ಕುಮಾರ್‌ರವರು ಬೆಂಗಳೂರಿನ ಜನ ಮುಕಳಿ ತೊಳೆದ ನೀರನ್ನು ನಮಗೆ ಕೊಡಿ ಸ್ವಾಮಿ ಎಂದು ಆ ಸೀಟಿನಲ್ಲಿ ಕುಳಿತುಕೊಂಡು ಕೇಳಿದರು. ಎರಡು ವರ್ಷವಾಯಿತು, ಆ ಯೋಜನೆ ಶುರುವಾಗಿದೆಯೇ? ಕೆ.ಸಿ.ವ್ಯಾಲ್ಲಿ ಶುರುವಾಗಿದೆಯೇ? ಹೆಬ್ಬಾಳ ವ್ಯಾಲಿ ಶುರುವಾಗಿದೆಯೇ? ತಾವು ನೀರಾವರಿ ತಜ್ಞರಿದ್ದೀರಿ,

ಶ್ರೀ ಜಿ.ಹೆಚ್.ಶ್ರೀನಿವಾಸ್: ಛೇರ್ಮನ್‌ರವರೇ, ಕೆಸಿ ವ್ಯಾಲಿಯೂ ಶುರುವಾಗುತ್ತದೆ, ಹೆಬ್ಬಾಳದ್ದೂ ಶುರುವಾಗುತ್ತದೆ, ಟೆಂಡರ್ ಕರೆದಿದ್ದಾರಲ್ಲಾ?

ಶ್ರೀ ವೈ.ಎ.ನಾರಾಯಣಸ್ವಾಮಿ: ದಯವಿಟ್ಟು ತಾವು ಕುಳಿತುಕೊಳ್ಳಿ. ಇನ್ನೂ ಮಂತ್ರಿಯಾಗುವುದು ದೂರವಿದೆ, ಕುಳಿತುಕೊಳ್ಳಿ. ಬರೀ ಮಂತ್ರಿಗಳೆಂದು ಹೇಳುತ್ತಿಲ್ಲ, ಅವರು ನೀರಾವರಿ ತಜ್ಞರಿದ್ದಾರೆ, ಜಲ ತಜ್ಞರಿದ್ದಾರೆ. ಈ ರಾಜ್ಯದಲ್ಲಿ ಯಾರಾದರೂ inter basinನಿಂದ fight ಮಾಡಿ ಅವರ ಊರಿಗೆ ನೀರನ್ನು ತಂದಿದ್ದರೆ, ಜಯಚಂದ್ರರವರು ಒಬ್ಬರೇ. ನಮಗೆ ಅವರ ಮೇಲೆ ನಂಬಿಕೆಯಿದೆ, ವಿಶ್ವಾಸವಿದೆ. ಅವರಿಗೆ ಒಂದು ಪ್ರಶ್ನೆ ಕೇಳುತ್ತಿದ್ದೇನೆ. ಎರಡು ವರ್ಷದ ಹಿಂದೆ ನೀವು ಶುರು ಮಾಡಿದ ಈ ಯೋಜನೆ ಯಾವಾಗ ತೆರೆ ಕಾಣಿಸುತ್ತೀರಿ. ನಾವು already ಬಾಣಲಿಯಲ್ಲಿ ಬೇಯುತ್ತಿದ್ದೇವೆ, ದಯವಿಟ್ಟು ನಮ್ಮನ್ನು ಬೆಂಕಿಗೆ ಹಾಕಿ ಹೋಗಬೇಡಿ. ಏಕೆಂದರೆ, STP secondary treatment ಮಾಡಿ ನೀರು ಬಿಡುತ್ತೇವೆಂದು ಹೇಳುವಿರಲ್ಲಾ, ನಿಮ್ಮ ಅಧಿಕಾರಿಗಳ ಮೇಲೆ ನಿಮಗೆ ನಂಬಿಕೆ ಇದೆಯೇ? ಜಾರ್ಜ್ ಸಾಹೇಬರೇ ಇವತ್ತು ಬೆಂಗಳೂರಿನ storm water drain ನಲ್ಲಿ ನೀರು ಹರೆಯುತ್ತಿದೆಯಲ್ಲಾ, ಅದೆಲ್ಲಾ secondary treatment water, ಆ ನೊರೆ ಬರುತ್ತದೆಯಲ್ಲಾ ಆ ನೀರು ಹಾಗೆ ತಮಿಳುನಾಡು ಕಡೆಗೆ ಹೋಗುತ್ತಿದೆಯಲ್ಲಾ ಅದು STP

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಯಿಂದ ಪಾಸಾದ water, ಅಂದ ಮೇಲೆ ಅದು biologically free, chemically free ಎಂದು ನೀವು confirm ಮಾಡಿಕೊಳ್ಳುವುದು ಯಾವಾಗ? ಆ ನೀರನ್ನು ನಮ್ಮ ಕೆರೆಗಳಿಗೆ ಬಿಟ್ಟರೆ ಹೇಗೆ? ಈಗಲೇ ನಾವು ಸಂಪೂರ್ಣವಾಗಿ ನೆಲ ಕಚ್ಚಿ ಹೋಗಿದ್ದೇವೆ. ಇನ್ನು ಇರುವ ಕೆರೆಗಳನ್ನೂ ಕೆಡಿಸಿ ನಮ್ಮನ್ನು ಎಲ್ಲಿ ಹಾಕುವಿರಿ? ಆದ್ದರಿಂದಲೇ ತಮ್ಮನ್ನು ಮನವಿ ಮಾಡಿಕೊಳ್ಳುತ್ತೇನೆ, ನಾವು already ಬಾಣಲಿಯಲ್ಲಿ ಬೇಯುತ್ತಿದ್ದೇವೆ, ನಮ್ಮನ್ನು ಬೆಂಕಿಗೆ ಹಾಕಬೇಡಿ. ದಯವಿಟ್ಟು ತಮ್ಮನ್ನು ಕೈಮುಗಿದು ಬೇಡಿಕೊಳ್ಳುತ್ತಿದ್ದೇನೆ, ತಿಮ್ಮಪ್ಪ ಸಾಹೇಬರೇ, ನಿಮಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಚಿಕ್ಕಬಳ್ಳಾಪುರದಲ್ಲಿ ರೈತರು 169 ದಿನ strike ಮಾಡಿದರು, ಇವತ್ತು ಕೋಲಾರ ಜಿಲ್ಲೆಯಲ್ಲಿ 293 ನೇ ದಿನ strike ಮಾಡುತ್ತಿದ್ದಾರೆ. ಪದವಿ ಉಪನ್ಯಾಸಕರು 11 ದಿನ strike ಮಾಡಿದರು, ಸರ್ಕಾರ ಹೋಗಿಲ್ಲವೆಂದು ಧರಣಿ ಮಾಡಿದರು, ನಾವು 293 ದಿನದಿಂದ strike ಮಾಡುತ್ತಿದ್ದೇವೆ, ಯಾರು ಕೇಳುವವರು? ನಮ್ಮ ಗತಿ ಏನು? ಏನು ಕಥೆಯಿದು? ಆದುದರಿಂದಲೇ ಈ ಸರ್ಕಾರ, ಈ ರಾಜ್ಯದಲ್ಲಿರುವ ನೀರಿನ ಸಂಪನ್ಮೂಲವನ್ನು ಸಮಗ್ರವಾಗಿ ಬಳಕೆ ಮಾಡಿಕೊಳ್ಳಬೇಕಾಗಿದೆ. ಸಮಗ್ರವಾದ ಒಂದು ನೀತಿಯನ್ನು ತರಬೇಕಾಗಿದೆ. Water budget, not a Financial budget ಅಲ್ಲ, ನಮ್ಮಲ್ಲಿ ಮೇಲ್ಮೈ ನೀರು ಎಷ್ಟಿದೆ? ಅಂತರ್ಜಲ ಎಷ್ಟಿದೆ? sub surface water resources ಎಷ್ಟಿದೆ? ಇವೆಲ್ಲವನ್ನೂ ನಾವು ಲೆಕ್ಕ ಹಾಕಿದ್ದೇವಾ? ಹಾಕಿಲ್ಲ. ಆ ನೀರನ್ನು ಬಳಕೆ ಮಾಡುವ ವಿಧಾನ ಯಾವುದು? ನಮ್ಮಲ್ಲಿ Water Audit ಬಗ್ಗೆ ಯಾರಾದರೂ ಕೇಳಿದ್ದೀರಾ? Water Audit ಬಗ್ಗೆ ಯಾರಾದರೂ ಚರ್ಚೆ ಮಾಡಿದ್ದೀರಾ? ನೀವು ಒಂದು ಯೋಜನೆ ತರಬೇಕಾದರೆ, ಕಾನೂನು ತರುತ್ತೀರಲ್ಲಾ ಇಷ್ಟು ಎಕರೆಗೆ ನೀರು ಉಣಿಸುತ್ತೇವೆಂದು, Water Audit ಬಗ್ಗೆ ಇದುವರೆವಿಗೂ ಈ ಸದನದಲ್ಲಿ ಚರ್ಚೆ ಯಾಗಿಲ್ಲ. ಚರ್ಚೆ ಮಾಡಬೇಕು. ಹಣಕಾಸಿನ ನಿರ್ವಹಣೆಗಿಂತ ಹೆಚ್ಚಾಗಿ ಇವತ್ತು ನೀರಿನ ನಿರ್ವಹಣೆ ಆಗಬೇಕಾಗಿದೆ. ಇವತ್ತು ಸವಳು ಜವಳು ಆಗುತ್ತಿದೆ. ಇನ್ನೂ floood irrigation ನಲ್ಲೇ ಇದ್ದೇವೆ, ಜಾಸ್ತಿ ನೀರು ಹಾಯಿಸುಕೊಳ್ಳುತ್ತೇವೆ. ನಮ್ಮ ರೈತರಲ್ಲೂ ಸ್ವಾರ್ಥವಿದೆ, ನಾವು ಸ್ವಾರ್ಥಪರರು, ನಮ್ಮ ಹೊಲಕ್ಕೆ ಜಾಸ್ತಿ ನೀರು ಬರಲಿ ಎನ್ನುತ್ತೇವೆ, 2.86 ಲಕ್ಷ ಹೆಕ್ಟೇರ್ ಪ್ರದೇಶ ಇಂದು ಸವಳು-ಜವಳಿಗೆ ತುತ್ತಾಗಿದೆ. ಅದನ್ನು ರಿಪೇರಿ ನಾರ್ಮಲ್ ಸ್ಥಿತಿಗೆ ತರಬೇಕಾದರೆ, ನಾಲ್ಕೈದು ಸಾವಿರ ಕೋಟಿ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ದುಡ್ಡು ಬೇಕಾಗಿದೆ. ಒಂದು ಕಡೆ over usage of water, ಇನ್ನೊಂದು ಕಡೆ ನಾವು ಭೂಮಿಯನ್ನು ಹಾಳು ಮಾಡುತ್ತಿದ್ದೇವೆ. ನೀರು ಬಿಡುವುದಕ್ಕೂ ಹಣ, ಕೆಟ್ಟು ಹೋಗಿರುವ ಭೂಮಿಯನ್ನು ರಿಪೇರಿ ಮಾಡುವುದಕ್ಕೂ ಹಣ. ಇದರ ಬಗ್ಗೆ ನಾನು ಸರ್ಕಾರವನ್ನು ಬಹಳ ಆಗ್ರಹಪೂರ್ವಕವಾಗಿ ಒತ್ತಾಯ ಮಾಡುತ್ತಿದ್ದೇನೆ, ದಯವಿಟ್ಟು ಸಮಗ್ರವಾದ ಜಲನೀತಿಯನ್ನು ತನ್ನಿ. ನಂತರ, Integrated Water Resources Management ತನ್ನಿ. Micro Irrigation ಬಗ್ಗೆ ಹೆಚ್ಚು ಒತ್ತನ್ನು ಕೊಡಿ. ನಮ್ಮಲ್ಲಿರುವ ಜಲಸಂಪನ್ಮೂಲ ಸುಮಾರು 1554 TMC ಏನಿದೆ. . .

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ನಾರಾಯಣಸ್ವಾಮಿಯವರೇ, ಸವಳು-ಜವಳು ಬಗ್ಗೆ ಹೇಳೀದಿರಲ್ಲಾ, ರೈತರು ಹೆಚ್ಚು ಹೊಲಗಳಿಗೆ ನೀರು ಬಿಡುವುದರಿಂದ ಸವಳು ಜವಳು ಆಗುತ್ತದೆಯೆಂದು ಹೇಳಿದಿರಲ್ಲಾ, ಅಧ್ಯಕ್ಷರೇ, ನನ್ನದು 60 ಎಕರೆ ಹೊಲ ಇದೆ. ನಾನು ಪೈಪ್‌ಲೈನೂ ಮಾಡಿಲ್ಲ, ಅದನ್ನು ಇರಿಗೇಷನೂ ಮಾಡಿಲ್ಲ. ಸವಳು-ಜವಳು ಬಂದು ಬಿಟ್ಟಿದೆ. ಕಾರಣ ಏನೆಂದರೆ, ಎತ್ತರ ಪ್ರದೇಶದಲ್ಲಿ ನೀರಾವರಿಯಾದರೆ ತಗ್ಗು ಪ್ರದೇಶದಲ್ಲಿರುವ ಜಮೀನ್ನಿಗೆ ಸವಳು-ಜವಳು ಬರುತ್ತದೆ. ಕೇವಲ ನಾವು ನೀರು ಹೆಚ್ಚಾಗಿ ಬಳಕೆ ಮಾಡುವುದರಿಂದ ಸವಳು ಜವಳು ಬರುತ್ತದೆ ಎನ್ನುವುದು ಒಂದು ಭಾಗವಿದ್ದರೂ, ಇನ್ನೊಂದು ಭಾಗ ನಾವು ನೀರು ಹಾಯಿಸದೇ ಇರುವ ಜಮೀನುಗಳೂ ಸವಳು ಜವಳಾಗುತ್ತದೆ. ಕಾರಣ ಎಂದರೆ ಎತ್ತರ ಪ್ರದೇಶದಲ್ಲಿ ನೀರಾವರಿ ಆಗುವುದರಿಂದ water flowing ಬಂದು ಅದು ಸವಳು ಜವಳು ಆಗುತ್ತದೆ. ಅದರ ಬಗ್ಗೆಯೂ ತನಿಖೆಯಾಗಬೇಕು.

(ಮುಂದುವರೆದಿದೆ)

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017/6-40/ 45/HRV/VG

ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):-ತುಂಬಾ ಸಂತೋಷವಾಯಿತು, ತಾವು ಅಪೂರ್ವವಾಗಿ ಚರ್ಚೆ ಮಾಡಿದ್ದೀರಿ. ನೀರಿನದು, ಮ್ಯಾನೇಜ್‌ಮೆಂಟ್ ವಗೈರೆ, ವಗೈರೆ, ಈ ಚರ್ಚೆಯನ್ನು ನೀರಾವರಿ ಇಲಾಖೆಯ ಬೇಡಿಕೆ ಬಂದಾಗ ನೀವು ಚರ್ಚೆ ಮಾಡಿದರೆ ಆ ಮಂತ್ರಿಗಳು ಆ

ಮಂತ್ರಿಗಳು ಅದಕ್ಕೆ ಸಾಂದರ್ಭಿಕವಾದ ಉತ್ತರವನ್ನು ಕೊಡುತ್ತಾರೆ. ಈಗ ನಮ್ಮ ಮುಂದೆ ಇರುವುದು ಬಜೆಟ್. ಆ ಬಜೆಟ್‌ನಲ್ಲಿ ನೀರಾವರಿ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಹೇಳಿ.

ಶ್ರೀ ವೈ.ಎ.ನಾರಾಯಣಸ್ವಾಮಿ:-ಅದನ್ನು ಹೇಳಿದ್ದೇನೆ. ಎತ್ತಿನಹೊಳೆ ಬಗ್ಗೆ ಮತ್ತು ಎರಡು ಯೋಜನೆಗಳ ಬಗ್ಗೆ ನಾನು ಹೇಳಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ:-ನಾನು ಹೇಳುತ್ತೇನೆ ಕೇಳಿ. ನಮ್ಮಲ್ಲಿ ದಿಕ್ಕು ತಪ್ಪುತ್ತಿದ್ದಾರೆ. ಬಜೆಟ್‌ನಲ್ಲಿ ಮಾತನಾಡುವ ರೀತಿ ಮತ್ತು ವಿಧಾನಗಳ ಬಗ್ಗೆ ಒಂದು ದೃಷ್ಟಿ ಇಟ್ಟುಕೊಳ್ಳಬೇಕು. ಎರಡನೆಯದಾಗಿ ಬೇಡಿಕೆಗಳ ಮೇಲೆ ಮಾತನಾಡುವಾಗ ಒಂದು ದೃಷ್ಟಿ ಇಟ್ಟುಕೊಳ್ಳಬೇಕು. ಆ ರೀತಿ ಚರ್ಚೆ ಮಾಡಿದರೆ ಆ ಚರ್ಚೆಗೆ ಒಂದು ಅರ್ಥ ಬರುತ್ತದೆ. ಅದಕ್ಕಾಗಿ ತಮಗೆ ಜ್ಞಾಪಿಸಿದೆ.

ಶ್ರೀ ವೈ.ಎ.ನಾರಾಯಣಸ್ವಾಮಿ:-ಆಯಿತು.

ಶ್ರೀ ಬಿ.ಆರ್. ಯಾವಗಲ್:-ಮಾನ್ಯ ಛೇರ್ಮನ್‌ರವರೆ, ನಾರಾಯಣಸ್ವಾಮಿಯವರ ಕ್ಷೇತ್ರಕ್ಕೂ ನೀರಾವರಿಗೂ ಬಹಳಷ್ಟು ಸಂಬಂಧವಿದ್ದಂತೆ ಇಲ್ಲ.

ಛೇರ್ಮನ್:-ನಾರಾಯಣಸ್ವಾಮಿಯವರೆ ತಾವು ಮಾತನಾಡಿ, ಇನ್ನು ಐದು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ವೈ.ಎ.ನಾರಾಯಣಸ್ವಾಮಿ:-ಆಯಿತು, ಮುಗಿಸುತ್ತೇನೆ. ಈ ರಾಜ್ಯದ ನೀರಾವರಿ ಮಂತ್ರಿಗಳು ಒಂದು ಮಾತನ್ನು ಹೇಳಿದರು, ಈ ಅರ್ಕಾವತಿ ಮತ್ತು ವೃಷಭಾವತಿ ವ್ಯಾಲಿ ಬೆಂಗಳೂರಿನ ಸುತ್ತಮುತ್ತಲೂ ಇದೆಯಲ್ಲಾ ಆ ವ್ಯಾಲಿಯನ್ನು ಲಂಡನ್‌ನಲ್ಲಿರುವ Thames ನದಿಯ ಮಾದರಿಯಲ್ಲಿ ನಾವು remodeling ಮಾಡುತ್ತೇವೆ ಎನ್ನುವಂಥ ಮಾತನ್ನು ಹೇಳಿದರು. ಏನಾಯಿತು ಸಾರ್, ಮಾಡುವುದಕ್ಕಾಗಲಿಲ್ಲ, ಅದರ ಬಗ್ಗೆ ವಾಷಿಂಗ್ಟನ್ ಟೈಮ್ಸ್‌ನಲ್ಲಿ Ad ಕೊಟ್ಟಿದ್ದರು. ಗುರುಗಳೇ ದಯವಿಟ್ಟು ಕೇಳಿ, ಅದೇನಾಯಿತು ಎಂಬುದು ಗೊತ್ತಾಗಲಿಲ್ಲ. ಎರಡನೆಯದಾಗಿ ಪಶ್ಚಿಮ ಘಟ್ಟಗಳಿಂದ ಈ ಕಡೆಗೆ ಬಯಲು ಸೀಮೆಗೆ ನೀರನ್ನು ತರಬೇಕಾದರೆ technology ಬಗ್ಗೆ ಮಾತನಾಡಿದ್ದರು, funneling and tunneling ಎಂದು, funneling and tunneling ಮುಖಾಂತರ ನೀರನ್ನು ತರುತ್ತೇವೆಂದು ಹೇಳಿದ್ದರು. ನಿಮ್ಮ ಸರ್ಕಾರದ ಈ ಘೋಷಣೆಗಳೆಲ್ಲವೂ ಘೋಷಣೆಗಳಾಗಿಯೇ ಉಳಿದಿದೆ. ಅದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ:-ಯಾರು ಹೇಳಿದ್ದು?

ಶ್ರೀ ವೈ.ಎ.ನಾರಾಯಣಸ್ವಾಮಿ:-ಮಾನ್ಯ ಮಂತ್ರಿಗಳಾದ ಎಂ.ಬಿ. ಪಾಟೀಲರೇ ಹೇಳಿದ್ದು. ಉತ್ತರ ಕೊಟ್ಟಿದ್ದಾರೆ. I am speaking on record, ಇದು ಒಂದು ವಿಷಯ. ನನಗೆ ಒಂದು ಕಾಣುತ್ತಿದೆ, ನಿಮ್ಮಲ್ಲಿ delivery mechanism ಇಲ್ಲ. You have failed in delivering the goods. ನಿಮ್ಮಲ್ಲಿ delivery mechanism ಇಲ್ಲ. Scheme ಇದೆ, ನಿಮ್ಮಲ್ಲಿ idea ಇದೆ, ಆದರೆ delivery mechanism ಇಲ್ಲದೇ ಇರುವುದರಿಂದ ಯಾವ projects field ಗೆ ಹೋಗುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ ನೀವು 2013-14 ರಲ್ಲಿ ಅಧಿಕಾರಕ್ಕೆ ಬಂದಿರಿ, ಬಜೆಟ್‌ನಲ್ಲಿ ಏನು ಹೇಳಿದಿರಿ, ನೀರಾವರಿಗೆ 50 ಸಾವಿರ ಕೋಟಿ ಕೊಡುತ್ತೇವೆ. ನಮ್ಮ ನಡೆ ಕೃಷ್ಣದೆಡೆಗೆ, ನೀರಾವರಿಗೆ 50 ಸಾವಿರ ಕೋಟಿ, 9 ಲಕ್ಷ ಹೆಕ್ಟೇರ್‌ಗೆ ನೀರಾವರಿಯನ್ನು ಕಲ್ಪಿಸುತ್ತೇವೆಂದು ಹೇಳಿದಿರಿ. ಎಷ್ಟು ಕೊಟ್ಟಿದ್ದೀರಿ ಸ್ವಾಮಿ? ಅಂಕಿ ಅಂಶ ಹೇಳಲೆ, 2013-14 ರಲ್ಲಿ 1 ಲಕ್ಷದ 8 ಸಾವಿರ ಕೊಟ್ಟಿದ್ದೀರಿ, ಇವತ್ತಿಗೆ ಬರುತ್ತೇನೆ, ಇವತ್ತಿಗೆ 2 ಲಕ್ಷ 81 ಸಾವಿರ ಹೆಕ್ಟೇರ್‌ಗೆ ಮಾತ್ರ ನೀರಾವರಿ ಕೊಟ್ಟಿದ್ದೀರಿ. ಎಷ್ಟು ಕೊಡುತ್ತಿದ್ದೀರ ಎಂದು ನೀವೇ ಲೆಕ್ಕ ಹಾಕಿ, 6 ಲಕ್ಷ ಇನ್ನು ಬಾಕಿಯಿದೆ. ನೀವು 9 ಲಕ್ಷ ಎಂದು ಹೇಳಿದ್ದಿರಿ, ಈಗ 3 ಲಕ್ಷ ಮಾಡಿದ್ದೀರಿ, ಇನ್ನು 6 ಲಕ್ಷ ಹೆಕ್ಟೇರ್ ಬಾಕಿಯಿದೆಯಲ್ಲ.

ಶ್ರೀ ಜೆ.ಹೆಚ್.ಶ್ರೀನಿವಾಸ್:- ಮಾನ್ಯ ಛೇರ್ಮನ್‌ರವರೆ, ಎಲ್ಲವೂ ಆಗುತ್ತಿದೆ. Major upper bhadra projects ನಲ್ಲಿ ಆಗುತ್ತಿದೆ. ಕೆಲವು projects complete ಆಗುವುದರಲ್ಲಿ ಕೆಲವು ಕಾರಣಕ್ಕೋಸ್ಕರ late ಆಗಿದೆ. ಸರ್ಕಾರ ದುಡ್ಡನ್ನು investment ಮಾಡಿದೆ. ಯಾರೂ ಮಾಡಿರಲಾರದಷ್ಟು investment ಅನ್ನು major irrigation ಗೆ ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ.

(ಗೊಂದಲ)

ಶ್ರೀ ವೈ.ಎ.ನಾರಾಯಣಸ್ವಾಮಿ:-ಮಾನ್ಯ ಛೇರ್ಮನ್‌ರವರೆ, ನಾನು ಇಷ್ಟೇ ಹೇಳುವುದು, ನೀರಾವರಿ ಇಲಾಖೆಯಿಂದ ಬಯಲು ಸೀಮೆ ಜಿಲ್ಲೆಗಳಿಗೆ ಬಹಳ ಅನ್ಯಾಯವಾಗಿದೆ. ಎತ್ತಿನಹೊಳೆ ಯೋಜನೆ ಬಗ್ಗೆ ಶ್ವೇತಪತ್ರ ತರಬೇಕು. ಕೆ.ಸಿ. ವ್ಯಾಲಿ ಬಗ್ಗೆ ಮತ್ತು ಹೆಬ್ಬಾಳ್ ವ್ಯಾಲಿಯಿಂದ ನೀರು ತರುವ

ಬಗ್ಗೆ ಇನ್ನೊಂದು ಸಲ ಪುನರ್ವಿಮರ್ಶೆ ಮಾಡಿ ನೀವು ಆ ನದಿಗೆ ನೀರನ್ನು ಹರಿಸಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ಶಿಕ್ಷಣ ಇಲಾಖೆ ಬಗ್ಗೆ ಹೇಳುವುದಾದರೆ, , ,

ಛೇರ್ಮನ್:-ನಾರಾಯಣಸ್ವಾಮಿಯವರೆ ಸಮಯ ಈಗಾಗಲೇ ಬಹಳಷ್ಟು ಆಗಿದೆ.

ಶ್ರೀ ವೈ.ಎ.ನಾರಾಯಣಸ್ವಾಮಿ:-ಮಾನ್ಯ ಛೇರ್ಮನ್‌ರವರೆ, ಇವೆಲ್ಲವೂ ಶಿಕ್ಷಣದ ಮೇಲೆ depend ಆಗಿದೆ. ಒಂದೆರಡು ನಿಮಿಷ ಮಾತನಾಡುತ್ತೇನೆ. ನೋಡಿ ಈ ವರ್ಷ ಶಿಕ್ಷಣ ಇಲಾಖೆಗೆ ನಿಮ್ಮ ಸರ್ಕಾರದಿಂದ ಈ ವರ್ಷ ನಿಮ್ಮ ಬಜೆಟ್‌ನಲ್ಲಿ 1% ದುಡ್ಡನ್ನು ಕಡಿಮೆ ಮಾಡಿದ್ದೀರಿ. 2013-14 ನೇ ಸಾಲಿನಲ್ಲಿ 15% ಕೊಟ್ಟಿದ್ದೀರಿ. 2015-16 ನೇ ಸಾಲಿನಲ್ಲಿ 13% ಕೊಟ್ಟಿದ್ದೀರಿ. 2016-17 ರಲ್ಲಿ 12% ಕೊಟ್ಟಿದ್ದೀರಿ. 2017-18 ರಲ್ಲಿ ಅಂದರೆ ಈ ವರ್ಷ 11% ಕೊಟ್ಟಿದ್ದೀರಿ. ಹಳೆಯ ಯೋಜನೆಗಳನ್ನು ನೀವೇನು ತಂದಿದ್ದೀರಿ ಹೋದ ವರ್ಷ ಏನು ಘೋಷಣೆಯನ್ನು ಮಾಡಿದ್ದೀರಿ ಅದರಲ್ಲಿ ಹೋದ ವರ್ಷ ಏನು ಘೋಷಣೆಯನ್ನು ಮಾಡಿದ್ದೀರಿ 50% not in the light of the day ಎಂದು ನಿಮಗೆ ಹೇಳುತ್ತೇನೆ. 2013-14 ರಲ್ಲಿ ವಿದ್ಯಾಕೇಂದ್ರವನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದಿರಿ. ಮಾಡಲಿಲ್ಲ. 2014-15 ರಲ್ಲಿ ಶಾಲೆಗಾಗಿ ನಾವು ತಾಲ್ಲೂಕಿಗೊಂದು ಮಾದರಿ ಶಾಲೆ ಮಾಡುತ್ತೇವೆಂದು ಹೇಳಿದ್ದಿರಿ. ಯಾವ ತಾಲ್ಲೂಕಿನಲ್ಲಿ ಮಾಡಿದ್ದಿರಿ ಸ್ವಾಮಿ, ಮಾಡಿಲ್ಲ. ಮಾದರಿ ಶಾಲೆಯನ್ನು ಮಾಡಲಿಲ್ಲ. 2013-14 ನೇ ಇಸವಿಯಿಂದ ಒಂದನೇ ತರಗತಿಯಲ್ಲಿ ಇಂಗ್ಲೀಷ್ ಭಾಷೆಯನ್ನು ಕಲ್ಲಿಸುತ್ತೇವೆಂದು ಹೇಳಿದ್ದಿರಿ. ಎಷ್ಟು English teacher ಗಳನ್ನು appointment ಮಾಡಿಕೊಂಡಿದ್ದೀರಿ? ಎಷ್ಟು teacher ಗಳಿಗೆ English language ಕಲಿಸುವ ಬಗ್ಗೆ training ಕೊಟ್ಟಿದ್ದೀರಿ? ಇದರಲ್ಲಿ ಏನು ಬೆಳವಣಿಗೆಯಾಗಿದೆ ಎಂಬ ಬಗ್ಗೆ ದಯವಿಟ್ಟು ನೀವು ಹೇಳಬೇಕು. ನೀವು ಮಾಡಲಿಲ್ಲ. ಮಾನ್ಯ ಕಿಮ್ಮನೆ ರತ್ನಾಕರ್‌ರವರು ಸಚಿವರಾಗಿದ್ದರು, ಪಾಪ ಅವರು ಯಾವಾಗಲೂ ಸದನದ ಸಭೆಯಿಂದ ಹೊರಗೆ ಹೋಗುವುದಿಲ್ಲ, ಈಗೇನೋ ಆಚೆ ಹೋಗಿದ್ದಾರೆ, ಇರಲಿ. 6 ಸಾವಿರ ಕೋಟಿ ರೂ.ಗಳು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗೆ ಬೇಕೆಂದು ಬೇಡಿಕೆಯನ್ನು ಅವರು ಇಟ್ಟಿದ್ದರು. ಇವತ್ತು ಸರ್ಕಾರಿ ಶಾಲೆಗಳ ಸ್ಥಿತಿಗತಿ ಏನಿದೆ, ಮಾನ್ಯ ಛೇರ್ಮನ್‌ರವರೆ, ತಾವು ಕೂಡ ಸಚಿವರಾಗಿದ್ದಿರಿ,

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಎಲ್ಲಾದರೂ ಕ್ಲಾಸ್ ರೂಂಗಳನ್ನು ಇಂದು ಊರುಗಳಲ್ಲಿ ಕಟ್ಟುವುದಕ್ಕಾಗುತ್ತಿದೆಯೆ? ಕಾಂಪೌಂಡ್ ಕಟ್ಟುತ್ತಿದ್ದಾರೆಯೆ, ಟಾಯ್ಲೆಟ್ ಕಟ್ಟಿದ್ದಾರೆಯೆ? ನೀವೇನು ಕಟ್ಟಿದ್ದೀರಿ ಹೇಳಿ.

ಶ್ರೀ ಸಿ.ಟಿ. ರವಿ:-ಮಾದರಿ ಶಾಲೆಯನ್ನು ಪಂಚಾಯತಿ ಮತ್ತು ಹೋಬಳಿಗೊಂದು ಮಾಡಿ ಅಲ್ಲಿಗೆ ಸುತ್ತಮುತ್ತಲ ಇರುವಂಥ ಹಳ್ಳಿಗಳಲ್ಲಿರುವ ಎಲ್ಲಾ ಮಕ್ಕಳನ್ನು ಕರೆದುಕೊಂಡು ಬರುತ್ತೇವೆ, ಈ ರೀತಿಯಲ್ಲಿ ಮಾದರಿ ಶಾಲೆಯನ್ನು ಮಾಡುತ್ತೇವೆ ಎಂದು ಹೇಳಿದ್ದರು. ಇಂಥ ರೀತಿಯ ಅವರ ಕನಸು ನನಸಾಗಲಿಲ್ಲ.

ಶ್ರೀ ವೈ.ಎ.ನಾರಾಯಣಸ್ವಾಮಿ:-ಈ ವರ್ಷ ಇನ್ನೊಂದು ಹೊಸ ಯೋಜನೆಯನ್ನು ಕೊಟ್ಟಿದ್ದಾರೆ. ಪಂಚಾಯತಿ ಲೆವೆಲ್‌ನಲ್ಲಿ ಮಾದರಿ ಶಾಲೆ ಮಾಡುತ್ತೇವೆಂದಿದ್ದಾರೆ. ನಾನು ಇಷ್ಟೇ ಹೇಳುವುದು, ಮಾನ್ಯ ಸಚಿವರೆ ನೀವು ಬೇಕಾದರೆ ಅದನ್ನು ಓದಿ.

ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-ಈ ವರ್ಷ 176 ತಾಲ್ಲೂಕುಗಳಲ್ಲಿ ನಾವು 1 ರಿಂದ 12 ನೇ ತರಗತಿಯವರೆಗೂ ಶಿಕ್ಷಣ ಕವಚಗಳನ್ನು ಮಾಡುತ್ತೇವೆ ಎಂದು ಹೇಳಿದ್ದೇವೆ. ಪಂಚಾಯತಿಗಲ್ಲ.

ಶ್ರೀ ವೈ.ಎ.ನಾರಾಯಣಸ್ವಾಮಿ:-ಪಂಚಾಯತಿಯಲ್ಲ ಸಾರ್, ತಾಲ್ಲೂಕಿಗೊಂದು ಶಾಲೆ ಕಟ್ಟುತ್ತೇವೆ ಎಂದಿದ್ದೀರಿ.

ಶ್ರೀ ತನ್ವೀರ್ ಸೇಠ್:-ಎಲ್ಲಾ ತಾಲ್ಲೂಕುಗಳಲ್ಲಿ ಎಂದು ಹೇಳಿರುವುದು. ಎರಡನೆಯದಾಗಿ 2016-17 ರಲ್ಲಿ,

ಶ್ರೀ ವೈ.ಎ.ನಾರಾಯಣಸ್ವಾಮಿ:-ಮಾನ್ಯ ಸಚಿವರೆ, ನೀವು ಉತ್ತರ ಹೇಳಬೇಕಾದಾಗ ಎಲ್ಲವನ್ನು ಹೇಳಿ. ನಾನು ತಪ್ಪು ಹೇಳಿದ್ದರೆ correct ಮಾಡಿಕೊಳ್ಳುತ್ತೇನೆ. ನಾನೇನೂ ಅತೀತನಲ್ಲ. ತಪ್ಪು ಮಾಡಿದ್ದರೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ನೀವು ಸಾಧನೆ ಎಂದು ಹೇಳಿದ್ದೀರಿ. ಬಜೆಟ್‌ನಲ್ಲಿ 4 ವರ್ಷದ ಸಾಧನೆ, ಮೂರು ವರ್ಷದ ಸಾಧನೆಯೆಂದಿದ್ದೀರಿ. ಅಂದರೆ ಜನರು ಮರೆತುಹೋಗಿರುತ್ತಾರೆ, ನಾವು ಅವರಿಗೆ ಜ್ಞಾಪಕ ಮಾಡಬೇಕೆಂದು ಹೇಳಿ ಈ ರೀತಿ ನೀವು ಪ್ರಿಂಟ್ ಮಾಡಿದ್ದೀರಿ. ಪ್ರಿಂಟ್ ಮಾಡಬೇಕಾದರೆ ಸುಮಾರು schemes ಇದೆಯಲ್ಲಾ they are not in the light of the day, but you have

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

printed it once again. ದಯವಿಟ್ಟು ನೀವು ಶಿಕ್ಷಣಕ್ಕೆ ಮೋಸ ಮಾಡುವುದಕ್ಕೆ ಹೋಗಬೇಡಿ. ನಾನು ಹೇಳುತ್ತೇನೆ, ದೇವನೂರು ಮಹದೇವ್‌ರವರು ಒಂದು ಮಾತನ್ನು ಹೇಳಿದ್ದರು. ಆ ಮಾತನ್ನು ನೀವೇ 2013-14 ನೇ ಇಸವಿಯಲ್ಲಿ ಪ್ರಿಂಟ್ ಮಾಡಿದ್ದೀರಿ. 'ಎದೆಗೆ ಬಿದ್ದ ಅಕ್ಷರ, ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ, ಯಾವಾಗಲೂ ಫಲ ಕೊಡುತ್ತದೆ ' ಎನ್ನುವಂಥ ಮಾತನ್ನು ನೀವು ಉಲ್ಲೇಖ ಮಾಡಿ ಶಿಕ್ಷಣ ಬಜೆಟ್‌ನ್ನು ಕೊಟ್ಟಿದ್ದೀರಿ. ಎಂಥ ಶಿಕ್ಷಣವನ್ನು ಕೊಡುತ್ತಿದ್ದೇವೆ ನಾವು, ಪುಟ್ಟಣ್ಣಯ್ಯನವರು ಆಗಲೇ ಬಹಳ ಚೆನ್ನಾಗಿ ಹೇಳಿದರು, 4 ಲಕ್ಷ ಮಕ್ಕಳನ್ನು RTE ಮುಖಾಂತರ ಖಾಸಗಿ ಶಾಲೆಗಳಿಗೆ ಕಳುಹಿಸುತ್ತಿದ್ದೇವೆ, ನಮ್ಮ ಸರ್ಕಾರಿ ಶಾಲೆಗಳ ಬಗ್ಗೆ ನಮಗೆ ನಂಬಿಕೆಯಿಲ್ಲ. ಸರ್ಕಾರಿ ಶಾಲೆಗಳಲ್ಲಿರುವ ಶಿಕ್ಷಕರು CET Exam pass ಮಾಡಿ highly qualified ಹೊಂದಿದ್ದು merit ನಲ್ಲಿದ್ದವರು ಇರುತ್ತಾರೆ. ಸರ್ಕಾರಿ ಅಧಿಕಾರಿಗಳಾಗಲಿ, ಶಿಕ್ಷಕರಾಗಲಿ, ನಾವಾಗಲೀ, ಯಾರೂ ನಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವುದಿಲ್ಲ. ಆ ಸರ್ಕಾರಿ ಶಾಲೆಯಿರುವುದು ಬಡವರಿಗೆ, ದಲಿತರಿಗೆ, ಕಾರ್ಮಿಕರಿಗೆ. ಅಲ್ಲಿ ನೀವು RTE ಯಿಂದ ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸುತ್ತೀರಿ. 18 ಸಾವಿರ ಕೋಟಿ ಬಜೆಟ್ ಕೊಡುತ್ತೀರಿ, ದುಡ್ಡನ್ನು ಅವರಿಗೆ ಕೊಡುತ್ತೀರಿ. ಯಾವಾಗ ಸರ್ಕಾರಿ ಶಾಲೆ ಬೆಳೆಯುವುದು? ಇದರ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು ಎನ್ನುವಂಥ ಮಾತನ್ನು ಹೇಳಬಯಸುತ್ತೇನೆ. ಆಮೇಲೆ ಗ್ರಾಮೀಣ ಭಾಗದಲ್ಲಿ ವಿಶೇಷವಾಗಿ Mathematics and English ವಿಷಯಗಳನ್ನು ಕಲಿಸುವುದರ ಬಗ್ಗೆ ಬಹಳ ಒತ್ತನ್ನು ಕೊಡಬೇಕಾಗುತ್ತದೆ. ಇನ್ನು ಮೂಲಭೂತ ಸೌಕರ್ಯಗಳಿಗೆ ಎಷ್ಟು ದುಡ್ಡನ್ನು ಈ ವರ್ಷ ನೀವು ಕೊಟ್ಟಿದ್ದೀರೋ ಗೊತ್ತಿಲ್ಲ. ಶಾಲೆಗಳಲ್ಲಿ ಶೌಚಾಲಯವಿಲ್ಲದೆ ಬಹಳ ಕಷ್ಟವಾಗಿದೆ. ಎಲ್ಲ ಸ್ನೇಹಿತರುಗಳೆಲ್ಲರೂ ಚರ್ಚೆ ಮಾಡುತ್ತಿದ್ದರು, ಒಂದು ಕ್ಲಾಸ್ ರೂಂ ಅನ್ನು ಒಂದು ಶಾಲೆಗೆ ಹೆಚ್ಚು ಕಟ್ಟುವುದಕ್ಕೆ ಆಗುತ್ತಿಲ್ಲವೆನ್ನುವಂಥ ಮಾತನ್ನು ಹೇಳಿದರು. ಆದರೆ ಇದರ ಬಗ್ಗೆ ತಾವು ಬಹಳ ಗಂಭೀರವಾಗಿ ಗಮನ ಹರಿಸಬೇಕೆಂದು ಹೇಳುತ್ತೇನೆ. ಸಮಯ ಜಾಸ್ತಿ ಕೊಟ್ಟಿಲ್ಲ, ಆದರೂ ಕೊನೆಯ ಮಾತನ್ನು ಹೇಳಿಬಿಡುತ್ತೇನೆ. ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ನಮ್ಮ ಹಿರಿಯ ಮಂತ್ರಿಗಳನ್ನು ಕೇಳಬೇಕು. ಒಂದೇ ಒಂದು ವಾಕ್ಯ ಹೇಳಿ ಮುಗಿಸುತ್ತೇನೆ.

ಛೇರ್ಮನ್:-ಹೇಳಿ, ಹೇಳಿ, ಕೊನೆ ವಾಕ್ಯ.

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ವೈ.ಎ.ನಾರಾಯಣಸ್ವಾಮಿ:-ಕೊನೆ ವಾಕ್ಯ. ಸಮಾಜ ಕಲ್ಯಾಣ ಇಲಾಖೆ ಸಚಿವರಿಗೆ ಒಂದು ವಿಚಾರವನ್ನು ನಾನು ಕೇಳಿದ್ದೆ. ನಿಮ್ಮ ಸರ್ಕಾರ ಬಂದಾಗಿನಿಂದ 2015-16 ರ ತನಕ ಗಂಗಾ ಕಲ್ಯಾಣ ಯೋಜನೆಯಲ್ಲಿ ಎಷ್ಟು ಬೋರ್‌ವೆಲ್‌ಗಳನ್ನು ಕೊರೆಸಿದ್ದೀರಿ ಎಂದು ಕೇಳಿದ್ದೆ. ಅವರು ಉತ್ತರದಲ್ಲಿ 24064 ಬೋರ್‌ವೆಲ್ ಕೊರೆಸಿದ್ದೇವೆ ಎಂದು ಹೇಳಿದ್ದರು. No water, no money scheme, ಆದರೆ ಬಯಲು ಸೀಮೆ ಜಿಲ್ಲೆಗಳಲ್ಲಿ ಎಷ್ಟು ಬೋರ್‌ವೆಲ್ ಹಾಕಿದ್ದೀರಿ ಎಂದು ಕೇಳಿದೆ. ಅವರು 1753 ಬೋರ್‌ವೆಲ್‌ಗಳನ್ನು ಹಾಕಿದ್ದೇವೆಂದು ಹೇಳಿದರು. ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ, ಬೆಂಗಳೂರು ಗ್ರಾಮಾಂತರದಲ್ಲಿ ನೀವು ಕೊಡುವ 1 ಲಕ್ಷ, 2 ಲಕ್ಷ ರೂಪಾಯಿಗಳಲ್ಲಿ ಬೋರ್‌ವೆಲ್ ಹಾಕುವುದಕ್ಕೆ ಆಗುತ್ತದೆಯೆ? ನೀರು ಬರುತ್ತದೆಯೆ, ನೀರು ಬಂದಿದೆಯೆ, ಸ್ಕೀಂ ಏನು ಗೊತ್ತೆ, ಬೋರ್ ಹೋಗಿರುವುದಿಲ್ಲ ಆ ಜಾಗಕ್ಕೆ, ಒಂದು ಬಿಂದಿಗೆ ನೀರು ಹಾಕುವುದು, ಗ್ಯಾಸ್ ಹೊಡೆಸುವುದು, ನೀರು ಚಿಮ್ಮುತ್ತದೆ, ಫೋಟೋ ತೆಗೆದುಕೊಳ್ಳುವುದು, ದುಡ್ಡನ್ನು ಲೂಟಿ ಮಾಡುವುದು. ಏಕೆ ಅನ್ಯಾಯ ಮಾಡುತ್ತೀರಿ. ಆ ಕಡೆ ನೀರೂ ಇಲ್ಲ, ಬೋರ್ ಕೂಡ

ಹಾಕುವುದಿಲ್ಲ, ದುಡ್ಡು ತಿಂದುಹಾಕುತ್ತಾರೆ ಮಧ್ಯದಲ್ಲಿ. ಈ ಬಗ್ಗೆ ಸಮಗ್ರವಾದ ತನಿಖೆಯಾಗಬೇಕೆಂದು ನಾನು ಆಗ್ರಹ ಮಾಡುತ್ತಿದ್ದೇನೆ.

(ಮುಂದು)

27-03-2017/46/6,50/ HBU/VG

ಶ್ರೀ ವೈ.ಎ. ನಾರಾಯಣ ಸ್ವಾಮಿ (ಮುಂದು) : ಒಂದು ಬಿಂದಿಗೆ ನೀರು ಹಾಕುವುದು, ಗ್ಯಾಸ್ ಹೊಡೆಸುವುದು, ನೀರು ಚಿಮ್ಮುತ್ತದೆ, ಫೋಟೋ ತೆಗೆದುಕೊಳ್ಳುವುದು, ದುಡ್ಡು ಲೂಟಿ ಮಾಡುವುದು. ಅನ್ಯಾಯ ಏಕೆ ಮಾಡುತ್ತೀರಿ? ಆ ಕಡೆ ಬೋರ್ ಹಾಕುವುದಿಲ್ಲ, ನೀರು ಇಲ್ಲ, ಮಧ್ಯದಲ್ಲಿ ದುಡ್ಡು ತಿಂದು ಹಾಕುವವರು. ಇದರ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕೆಂದು ಆಗ್ರಹ ಮಾಡುತ್ತಿದ್ದೇನೆ. ಇಷ್ಟು ಹೇಳಿ ಕೊನೆಯದಾಗಿ ಬೆಂಗಳೂರು ಬಗ್ಗೆ . .

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಚೇರ್‌ಮನ್ : ನಾರಾಯಣ ಸ್ವಾಮಿಯವರೆ, ನಿಮ್ಮ ಸಮಯ ಮುಗಿಯಿತು. ಈಗ ಮಾನ್ಯ ಬಿ.ಬಿ. ನಿಂಗಯ್ಯನವರು ಮಾತನಾಡಿ. ತಾವು ಬಹಳ ಸುದೀರ್ಘವಾಗಿ ಮಾತನಾಡಿದ್ದೀರಿ. ತಮ್ಮ ಚರ್ಚೆಯ ವಿಷಯ ಕೂಡ ಚೆನ್ನಾಗಿ ಬಂದಿದೆ. ಮಾನ್ಯ ಬಿ.ಬಿ. ನಿಂಗಯ್ಯನವರು ಮಾತನಾಡಿದ ಮೇಲೆ ಮಾನ್ಯ ಬಿ.ಆರ್. ಪಾಟೀಲ್‌ರವರು ಮಾತನಾಡಿ.

ಶ್ರೀ ವೈ.ಎ. ನಾರಾಯಣ ಸ್ವಾಮಿ : ಮಾನ್ಯ ಚೇರ್‌ಮನ್ ರವರೆ ಒಂದೇ ಒಂದು ಮಾತು.

ಚೇರ್‌ಮನ್ : ಬಿ.ಆರ್. ಪಾಟೀಲ್‌ರವರೆ ನಾನು ನಿಮ್ಮನ್ನು ಕರೆದೆ, ಆದರೆ ಆಗ ತಾವು ಇರಲಿಲ್ಲ.

ಶ್ರೀ ಬಿ.ಬಿ. ನಿಂಗಯ್ಯ : ಆಗ ತಮ್ಮನ್ನು ಕರೆದರು, ನಾನು ಐದು ನಿಮಿಷ ಮಾತನಾಡಿದ ಮೇಲೆ ತಾವು ಮಾತನಾಡಿ.

ಶ್ರೀ ವೈ.ಎ. ನಾರಾಯಣಸ್ವಾಮಿ : ಮಾನ್ಯ ಚೇರ್‌ಮನ್ ರವರೆ, ಕೊನೆಯದಾಗಿ ನಾನು conclude ಮಾಡುತ್ತೇನೆ.

ಚೇರ್‌ಮನ್ : ವಿಷಯ ಬೇರೆ ಹೋದ ಹಾಗೆ ಸಮಯ ಜಾಸ್ತಿಯಾಗುತ್ತದೆ.

ಶ್ರೀ ವೈ.ಎ. ನಾರಾಯಣ ಸ್ವಾಮಿ : ಬೆಂಗಳೂರು ನಗರದಲ್ಲಿ ನಾಲ್ಕು ವರ್ಷದಿಂದ ವಸತಿ ಯೋಜನೆಯಡಿ ಯಾರಿಗೂ ಒಂದು ಮನೆ ಕೊಡುವುದಕ್ಕೆ ಆಗಲಿಲ್ಲ. ಅದನ್ನು ಜಾರ್ಜ್‌ರವರು ಒಪ್ಪಿಕೊಳ್ಳುತ್ತಾರೆ, ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಈ ವರ್ಷವಾದರೂ ಕೋರ್ ಏರಿಯಾದಲ್ಲಿ ಜಾಗವಿಲ್ಲದೆ ಇರುವುದರಿಂದ, ನೀವು ಮನೆಗಳನ್ನು ಕಟ್ಟಿ ಬಡವರಿಗೆ ಕೊಡುವುದಕ್ಕೆ ಆಗದಿರುವುದರಿಂದ ಬೆಂಗಳೂರು ಹೊರಭಾಗದಲ್ಲಿ ಜಾಗವನ್ನು ಗುರುತಿಸಿ, ಮನೆಗಳನ್ನು ಕಟ್ಟಿ ಕೋರ್ ಏರಿಯಾದ ವಿಧಾನಸಭಾ ಕ್ಷೇತ್ರಗಳಿಗೆ ಇಷ್ಟು ಮನೆಗಳು ಎಂದು ಫಿಕ್ಸ್ ಮಾಡಿ ಬಡವರಿಗೆ ಆ ಮನೆಗಳನ್ನು ಹಂಚಿಕೆ ಮಾಡಿ ಕೊಟ್ಟರೆ ಪುಣ್ಯ ಕಟ್ಟಿಕೊಳ್ಳುತ್ತೇವೆನ್ನುವ ಮಾತನ್ನು ವಿನಂತಿ ಮಾಡಿಕೊಳ್ಳುತ್ತಾ ಸಮಯ ಜಾಸ್ತಿ ಕೊಟ್ಟಿದ್ದೀರಿ, ತಪ್ಪಾಗಿದ್ದರೆ ಕ್ಷಮಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಚೇರ್‌ಮನ್ : ನೀವು ಚೆನ್ನಾಗಿ ಮಾತನಾಡಿದಿರಿ, ಆದರೆ ಇಲ್ಲಿ ನಮಗೆ ಸಮಯದ ಅಭಾವ ಇದೆ. ಶ್ರೀ ಬಿ.ಬಿ. ನಿಂಗಯ್ಯನವರೆ ಮಾತನಾಡಿ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಬಿ.ಬಿ. ನಿಂಗಯ್ಯ : ಮಾನ್ಯ ಚೇರ್‌ಮನ್ ರವರೆ, ತಾವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಮತ್ತು ಮಾನ್ಯ ರವಿಯವರು ಸುಮಾರು ಬೆಳಿಗ್ಗೆಯಿಂದ ಕಾದಿದ್ದೇವೆ.

ಚೇರ್‌ಮನ್ : ಆ ರೀತಿ ಕಾಯುತ್ತಿರುವವರು ಇನ್ನು ಸುಮಾರು ಜನ ಇದ್ದಾರೆ.

ಶ್ರೀ ಬಿ.ಬಿ. ನಿಂಗಯ್ಯ (ಮೂಡಿಗೆರೆ) : ಮಾನ್ಯ ಚೇರ್‌ಮನ್ ರವರೆ, ನಾನು ಹತ್ತು ನಿಮಿಷ ಮಾತನಾಡುತ್ತೇನೆ. ರಾಜ್ಯದ ರಾಜಕಾರಣದ ಇತಿಹಾಸದಲ್ಲಿ ಮುಖ್ಯಮಂತ್ರಿಗೆ ಹನ್ನೆರಡು ಬಾರಿ ಆಯವ್ಯಯ ಮಂಡಿಸುವಂಥ ಅವಕಾಶ ಈಗಿನ ಮುಖ್ಯಮಂತ್ರಿಯವರಂಥ ಮಾನ್ಯ ಸಿದ್ದರಾಮಯ್ಯನವರಿಗೆ ಸಿಕ್ಕಿದೆ. ಮಾನ್ಯ ಮುಖ್ಯಮಂತ್ರಿಯವರು ದೊಡ್ಡ ಪ್ರಮಾಣದಲ್ಲಿ ದೊಡ್ಡ ಗಾತ್ರದ 1,86,000 ಕೋಟಿ ರೂಪಾಯಿಯ ಬಜೆಟ್‌ನ್ನು ಮಂಡಿಸಿದ್ದಾರೆ. ಇವತ್ತು ನಮ್ಮ ಕೃಷಿ ಪ್ರಧಾನವಾದ ರಾಷ್ಟ್ರ. ಬಹುತೇಕ ನಾವೆಲ್ಲ 189 ಕ್ಷೇತ್ರಗಳಿಂದ ಆಯ್ಕೆಯಾಗಿ ಬಂದಿರುವವರು ಹಳ್ಳಿ ಮೂಲದಿಂದ ಬಂದಿದ್ದೇವೆ. ಸುಮಾರು 37,000 ಕೋಟಿ ರೂಪಾಯಿ ಸಾಲ ಎತ್ತಿ ಬಜೆಟ್‌ನ್ನು ಮಂಡಿಸುತ್ತಿದ್ದಾರೆ. ಹಳ್ಳಿಯಲ್ಲಿ ಒಂದು ಗಾದೆ ಇದೆ, ಸಾಲ ಮಾಡಿಯಾದ್ದರೂ ತುಪ್ಪ ತಿನ್ನಿ ಎಂದು ಹೇಳುತ್ತಾರೆ. ಇವತ್ತು ರೈತ ಪ್ರಧಾನವಾದ ರಾಷ್ಟ್ರ ಎಂದು ನಾನು ಏಕೆ ಹೇಳಿದೆ ಎಂದರೆ ತಮಗೆಲ್ಲ ಗೊತ್ತಿದೆ. ಮಾನ್ಯ ಹಿರಿಯ ಸಚಿವರು ಕುಳಿತಿದ್ದಾರೆ. ರಾಜ್ಯದಲ್ಲಿ ಹಿಂದೆಂದೂ ಕಾಣದಂಥ ಬರಗಾಲವನ್ನು ನಾವು ಎದುರಿಸುತ್ತಿದ್ದೇವೆ. ನಾನು, ಮಾನ್ಯ ಹಿರಿಯ ಸಚಿವರಾದಂಥ ಕಾಗೋಡು ತಿಮ್ಮಪ್ಪನವರು, ಮಾನ್ಯ ರವಿಯವರು ಎಲ್ಲಾ ಮಲೆನಾಡು ಭಾಗದಿಂದ ಬಂದಂಥವರು. ನಮ್ಮ ಮಲೆನಾಡನ್ನು ಕೂಡ ಬರಗಾಲಪೀಡಿತ ಪ್ರದೇಶ ಎಂದು ಘೋಷಣೆ ಮಾಡುವಂಥ ಸಂದಿಗ್ಧ ಸ್ಥಿತಿಯಲ್ಲಿ ನಾವೆಲ್ಲ ಇದ್ದು, ಘೋಷಣೆಯಾಗಿದೆ. ಇಡೀ ರಾಜ್ಯದ ಜನ ಅಪಾರ ನಿರೀಕ್ಷೆ ಮಾಡಿದ್ದರು. ಮುಂದಿನ ವರ್ಷ ಚುನಾವಣೆ ಇದೆ, ಆ ಕಾರಣಕ್ಕಾದರೂ ಕನಿಷ್ಠ ಯಾವ ರೈತರು ಬೆಳೆಯಿಲ್ಲದೆ ಸೊರಗಿ ಹೋಗಿದ್ದಾರೆ, ಸಾಲ ಮನ್ನಾ ಮಾಡಬಹುದು ಎಂದು ಅಪಾರ ನಿರೀಕ್ಷೆಯಲ್ಲಿದ್ದರು, ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಓದಿದ್ದು, ಮಧ್ಯದಲ್ಲಿ ಸಾಲ ಮನ್ನಾದ ಬಗ್ಗೆ ಏನೂ ಪ್ರಸ್ತಾಪ ಮಾಡದಿದ್ದರಿಂದ ಮಂಡ್ಯದ ಒಬ್ಬ ರೈತ ಕೂಡಲೇ ಹೋಗಿ ಆತ್ಮಹತ್ಯೆ ಮಾಡಿಕೊಂಡ. ನಾವೆಲ್ಲರೂ ನೋಡಿದೆವು, ಆ ಸುದ್ದಿಯನ್ನು ಕೇಳಿದೆವು. ಆದ್ದರಿಂದ ಆ ರೈತನ ನಿರೀಕ್ಷೆ ಹುಸಿಯಾಯಿತಲ್ಲ, ಬಹಳ ದು:ಖದ ಸಂಗತಿ. ಈಗಲೂ ಕಾಲ ಮಿಂಚಿಲ್ಲ. ನಾಳೆ ಉತ್ತರ ಕೊಡುವಂಥ

ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಈ ದಾರುಣ ಸ್ಥಿತಿಯ ಸಂಪೂರ್ಣವಾದ ಅರಿವಿದೆ. ಅದಕ್ಕೋಸ್ಕರ ನಾನು ಹೇಳಿದ್ದು. ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ಬಿಟ್ಟರೆ ಅತೀ ಹೆಚ್ಚು ಆಯವ್ಯಯವನ್ನು ಮಂಡಿಸಿದಂಥ ಕೀರ್ತಿ ಅವರದು. ಅಪಾರ ಅನುಭವದ ಮೇಲೆ ಅವರಿಗೆ ರಾಜ್ಯದ ಸಂಪೂರ್ಣ ಸ್ಥಿತಿಗತಿಗಳ ಅರಿವಿದೆ. ನಾವೂ ಕೂಡ ಅವರ ಜೊತೆಗೆ ಬಹಳ ವರ್ಷಗಳ ಕಾಲ ರಾಜಕೀಯ ಮಾಡಿಕೊಂಡು ಬಂದಿದ್ದೇವೆ. ಆದರೆ ಇಂದು ರೈತನ ಸ್ಥಿತಿ ಹೀಗಿರುವಾಗ ಸಾಲ ಮನ್ನಾ ಮಾಡಲಿಲ್ಲವಲ್ಲ ಎನ್ನುವ ನೋವು ನಮ್ಮೆಲ್ಲರಿಗೂ ಕಾಡುತ್ತಿದೆ. ಅದಕ್ಕಾಗಿ ಸಾಲ ಮಾಡಿಯಾದರೂ ತುಪ್ಪ ತಿನ್ನು ಎಂದು ಹೇಳಿದೆ. ಆ ರೈತರಿಗೆ ಸಾಲ ಮನ್ನಾ ಮಾಡಿದ್ದರೆ ಬಹುಶ: ಇಷ್ಟು ದೊಡ್ಡ ಗಾತ್ರದ ಬಜೆಟ್‌ನ್ನು ಮಂಡಿಸಿದ್ದಕ್ಕಾದರೂ ಸಂತೋಷ ಪಡುತ್ತಿದ್ದರು. ಇವತ್ತು ಎಲ್ಲಾ ಇಲಾಖೆಗಳಿಗೆ ಕೂಡ ಹಣವನ್ನು ಒದಗಿಸುವಾಗ ತುಸು ಕಳೆದ ವರ್ಷಕ್ಕಿಂತ ಶೇಕಡ 14.16 ರಷ್ಟು ಗಾತ್ರ ದೊಡ್ಡದಾಗಿದೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆ ಬಗ್ಗೆ ಬಹಳಷ್ಟು ಸದಸ್ಯರುಗಳು ಮಾತನಾಡಿದ್ದಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ನಾವು ಡಿಮ್ಯಾಂಡ್ ಮೇಲೆ ಚರ್ಚೆ ಮಾಡುವಾಗ ಮುಂದೆ ಚರ್ಚೆ ಮಾಡುತ್ತೇವೆ.

ಆದರೆ ತೋಟಗಾರಿಕೆ ಇಲಾಖೆ ಬಗ್ಗೆ ಹೇಳುವುದಾದರೆ ನಮ್ಮೆಲ್ಲ ಬಯಲು ಸೀಮೆಯವರಿಗೆ ಗೊತ್ತಿದೆ, ತೆಂಗಿನ ತೋಟ ಮತ್ತು ಅಡಿಕೆ ತೋಟವನ್ನು ಕಡಿದು ಹಾಕುವಂಥ ಸ್ಥಿತಿ ನಿರ್ಮಾಣವಾಗಿದೆ. ಆ ದೃಷ್ಟಿಯಿಂದ ಇವತ್ತು ರೈತನ ಬದುಕನ್ನು ನೆನಸಿಕೊಂಡರೆ ಬಹಳ ಸಂಕಟವಾಗುತ್ತದೆ. ಹಾಗಾಗಿ ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ್ದು. ಸಣ್ಣ ನೀರಾವರಿ ಇಲಾಖೆಯವರು ಜವಾಬ್ದಾರಿ ಹೊತ್ತು ಕೆರೆ ಸಂಜೀವಿನಿ ಎನ್ನುವ ಯೋಜನೆಯನ್ನು ತಂದಿದ್ದೀರಿ. ಮಾನ್ಯ ಕಾಗೋಡು ತಿಮ್ಮಪ್ಪನವರೇ, ಬೇಲೂರು ಮೇಲೆ ಬರುತ್ತಾ ಮಾಗಡಿ ಕೆರೆ ಇದೆ. ಅದು ಸುಮಾರು 1,500 ಎಕರೆಗೆ ನೀರುಣಿಸುತ್ತಿತ್ತು. ಅದು ಸಂಪೂರ್ಣ ಒಣಗಿ ಹೋಗಿದೆ. ಅದರ ಹೂಳೆತ್ತುವುದಕ್ಕೆ ಸಹ ನಮ್ಮ ಹತ್ತಿರ ದುಡ್ಡಿಲ್ಲ. ನೀವು ಒಳ್ಳೆಯ ಸ್ಕೀಮ್ ಅನೌನ್ಸ್ ಮಾಡಿದ್ದೀರಿ. ಮಾನ್ಯ ಪುಟ್ಟಣ್ಣಯ್ಯನವರೆ ಒಂದು ಸ್ಕೀಮ್ ಅನ್ನು ಸ್ವಂತ ಮಾಡಿಸಿ ಕೋಟಿ ರೂಪಾಯಿ ಆಗುವುದನ್ನು 9 ಲಕ್ಷ ರೂಪಾಯಿಯಲ್ಲಿ ಮುಗಿಸಿದ್ದೇವೆ ಎಂದು ಹೇಳಿದರು.

ಶ್ರೀ ಕಾಗೋಡು ತಿಮ್ಮಪ್ಪ : ನಿಜ, ಹೋದವರ್ಷ ಮತ್ತು ಈ ವರ್ಷ ಮಳೆಯ ಕೊರತೆಯಿಂದಾಗಿ ಬರಗಾಲ ಬಂದಿದೆ. ಮೊದಲನೆಯದಾಗಿ ನಮ್ಮ ರಾಜ್ಯದಲ್ಲಿ ಎಲ್ಲಾ ಕೆರೆಗಳು ಬತ್ತಿವೆ. ನಾವು ನಿಜವಾಗಿ

ಬುದ್ಧಿವಂತಾದರೆ, ಅದರಲ್ಲೂ ವಿಶೇಷವಾಗಿ ಮಲೆನಾಡಿನಲ್ಲಿ ಉದ್ಯೋಗ ಖಾತ್ರಿಯನ್ನು ಬಳಸಿಕೊಂಡು ಹೂಳೆತ್ತುವ ಕೆಲಸವನ್ನು ಮಾಡುವ ಒಂದು ಧೈರ್ಯವನ್ನು ಮತ್ತು ಉತ್ಸಾಹವನ್ನು ತೋರಿಸಿದರೆ, ಅದರಲ್ಲಿ ಸಿಗುವಷ್ಟು ಹಣ ಇನ್ನು ಯಾವುದರಲ್ಲೂ ಸಿಗುವುದಿಲ್ಲ. ದುರಂತವೆಂದರೆ ನಮ್ಮ ಚುನಾಯಿತ ಪ್ರತಿನಿಧಿಗಳಿಗೆ ಅದರಲ್ಲಿ ಆಸಕ್ತಿಯಿಲ್ಲ.

ಶ್ರೀ ಬಿ.ಬಿ. ನಿಂಗಯ್ಯ : ಇಲ್ಲ, ನಾವು ಆಸಕ್ತಿ ವಹಿಸಿ ಮಾಡುತ್ತಿದ್ದೇವೆ. ಆದರೆ ಅಲ್ಲಿ ಏನಾದರೂ ತಕರಾರು ತೆಗೆದು ಅವಕಾಶ ಮಾಡದೆ ನಮ್ಮಲ್ಲಿ ತೊಂದರೆ ಕೊಡುತ್ತಿದ್ದಾರೆ. ಅದಕ್ಕೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲವೆನ್ನುವ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಅದರಲ್ಲಿ ಕೇಳಿದ ಕೂಡಲೇ ಕೆಲಸ ಕೊಡಬೇಕೆಂದು ಇದೆ. ಪಂಚಾಯತ್‌ನಲ್ಲಿ ಒಂದು ಹೊಸ ಕ್ರಿಯಾಯೋಜನೆ ಮಾಡಲಿ, ಕಳುಹಿಸಿ ಕೊಡಿ, ಮೂರು ದಿವಸದಲ್ಲಿ ಅಪ್ರೂವ್ ಮಾಡಿಸಿ ಕೊಡುವ ಕೆಲಸ ಮಾಡೋಣ.

ಶ್ರೀ ಬಿ.ಬಿ. ನಿಂಗಯ್ಯ : ಸರಿ, ಅದನ್ನು ನಾವು ಮುಂದೆ ಬಳಸಿಕೊಂಡು ನೋಡುತ್ತೇವೆ. ಕೃಷಿ ಭಾಗ್ಯ ಯೋಜನೆ ಕೃಷಿ ಇಲಾಖೆಗೆ ಮಾತ್ರ ಇತ್ತು. ಆದರೆ ಈ ಬಾರಿ ತೋಟಗಾರಿಕೆ ಇಲಾಖೆಗೆ ಕೂಡ ವಿಸ್ತರಿಸಿ, ನಮ್ಮ ಮಲೆನಾಡು ಮತ್ತು ಕರಾವಳಿಗೆ ಬಿಟ್ಟಿದ್ದಿರಿ. ಆದರೆ ಈ ಬಾರಿ ಅದನ್ನು ಸೇರಿಸಿ ವಿಶೇಷವಾಗಿ 200 ಕೋಟಿ ರೂಪಾಯಿ ಕೊಟ್ಟಿರುವುದು ಬಹಳ ಸಂತೋಷದ ವಿಚಾರ. ಅದು ಮಲೆನಾಡಿಗೂ ಉಪಯೋಗವಾಗಲಿ ಎನ್ನುವ ದೃಷ್ಟಿಯಿಂದ ಮಾಡಿದ್ದಾರೆ. ಅದನ್ನು ಸ್ವಾಗತ ಮಾಡುತ್ತೇನೆ.

ಇನ್ನು ಪಶುಸಂಗೋಪನೆ ಇಲಾಖೆ ಬಗ್ಗೆ ಹೇಳುವುದಾದರೆ ಮಾನ್ಯ ಮಂತ್ರಿಗಳು 1,500 ಕ್ಕೂ ಹೆಚ್ಚು PVC ಗಳು ಇವೆ. ಅದರಲ್ಲಿ 302 ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸುತ್ತೇವೆಂದು ಹೇಳಿದ್ದೀರಿ. ಅದು ಅಗತ್ಯವಾಗಿ ಆಗಬೇಕು. ನಾನು ಮಂತ್ರಿಯಾಗಿದ್ದಾಗ ಸುಮಾರು 1,500 ಆಸ್ಪತ್ರೆಗಳನ್ನು ಕೊಟ್ಟಿದ್ದೆ. ಅದರ ಹಿಂದೆ ಬಹಳ ಆಸ್ಪತ್ರೆಗಳಲ್ಲಿ ವೈದ್ಯರಿರಲಿಲ್ಲ. ಮಾನ್ಯ ಜಯಚಂದ್ರರವರು ಕೂಡ ಈ ಇಲಾಖೆಯಲ್ಲಿ ಮಂತ್ರಿಯಾಗಿದ್ದಿರಿ. ನೀವು ಡಾಕ್ಟರುಗಳನ್ನು ನೇಮಕ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಾಡುತ್ತೇವೆಂದು ಹೇಳಿದಿರಿ. ಆದರೆ ಈವರೆಗೂ ಆಸ್ಪತ್ರೆಗಳಲ್ಲಿ ವೈದ್ಯರಿಲ್ಲದೆ, ಆ ಆಸ್ಪತ್ರೆಗಳನ್ನು ಮುಚ್ಚತಕ್ಕಂಥ ಸ್ಥಿತಿಗೆ ಬಂದಿವೆ. ಅದರ ಬಗ್ಗೆ ಸರ್ಕಾರ ಹೆಚ್ಚು ಆಸಕ್ತಿಯನ್ನು ವಹಿಸಬೇಕೆಂದು ಹೇಳುತ್ತೇನೆ.

ಸಹಕಾರ ಇಲಾಖೆ ಬಗ್ಗೆ ಹೇಳುವುದಾದರೆ ನಮ್ಮ ಮಹಿಳೆಯರಿಗೆ ಬಡ್ಡಿರಹಿತವಾಗಿ ಸಾಲ ಕೊಡುತ್ತೇವೆಂದು ಹೇಳಿದ್ದೀರಿ. ಅದು ಹೆಮ್ಮೆ ಪಡುವಂಥ ಹಾಗೂ ಬಹಳ ಸಂತೋಷದ ವಿಚಾರ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಎಸ್‌ಸಿ/ಎಸ್‌ಟಿ ಯವರಿಗೆ ಆಡಳಿತ ಮಂಡಳಿಯಲ್ಲಿ ಎರಡು ಸ್ಥಾನವನ್ನು ಕೊಡುವುದಕ್ಕೆ ಅವಕಾಶ ಮಾಡಿದ್ದೀರಿ. ಹಿಂದುಳಿದ ವರ್ಗದವರಿಗೂ ಎರಡು ಸ್ಥಾನಗಳನ್ನು ಕೊಡುವುದಕ್ಕೆ ಅವಕಾಶ ಮಾಡಿದ್ದೀರಿ. ಆದರೆ ಎಸ್‌ಸಿ/ಎಸ್‌ಟಿ ಯವರಿಗೆ ಮೂರು ಸ್ಥಾನಗಳನ್ನು ಕೊಡುವ ಹಾಗೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಜಲಸಂಪನ್ಮೂಲ ಇಲಾಖೆ, ನಾವು ಮಲೆನಾಡು ಭಾಗದಿಂದ ಬಂದಿರುವವರು. ನದಿಗಳು ಮಲೆನಾಡಿನಲ್ಲಿ ಹುಟ್ಟುವುದು. ಆ ಭಾಗಕ್ಕೆ ಸೇರಿದವರು ಮಾನ್ಯ ರವಿ ಮತ್ತು ನಾನು ಇದ್ದೇನೆ. ನದಿಗಳ ಮೂಲ ಅಭಿವೃದ್ಧಿಗೆ ಜಲಸಂಪನ್ಮೂಲ ಇಲಾಖೆಯಿಂದ ಏನೂ ಕೊಡುತ್ತಿಲ್ಲ. ಅದು ಕಾರವಾರ, ಶಿವಮೊಗ್ಗ ಜಿಲ್ಲೆ ಅಥವಾ ನಮ್ಮ ಜಿಲ್ಲೆಯಿರಬಹುದು. ಆ ಭಾಗದ ಪ್ರದೇಶಾಭಿವೃದ್ಧಿಗೆ ಸಾಹೇಬರು ಸ್ಪೀಕರ್ ಇದ್ದಾಗ ನಾನು ಹೇಳಿದ್ದೇನೆ. ನದಿಗಳ ಮೂಲ ಪ್ರದೇಶಾಭಿವೃದ್ಧಿಗೆ ಕಾರ್ಯಕ್ರಮಗಳು ಹಾಕಲಿಲ್ಲ. ಎಲ್ಲಾ ಕಡೆ ಡ್ಯಾಂ ಕಟ್ಟಿದ್ದೇವೆ. ಅಲ್ಲಿ ನೀರು ಬಳಕೆದಾರರಿಗೆ ತೆರಿಗೆ ವಿಧಿಸುತ್ತೇವೆ. ಆ ಹಣದಲ್ಲಿ ಸ್ವಲ್ಪನಾದರೂ ಕೊಟ್ಟು ನದಿ ಮೂಲದ ಅಭಿವೃದ್ಧಿಗೆ ಏನಾದರೂ ಯೋಜನಾ ಕಾರ್ಯಕ್ರಮಗಳನ್ನು ಹಾಕಬೇಕೆಂದು ಒತ್ತಾಯ ಮಾಡುತ್ತೇನೆ.

(ಮುಂದು)

27.03.2017 7.00 (47) RD-CP

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಬಿ.ಬಿ.ನಿಂಗಯ್ಯ: ಮುಂದು.. ..

ಅರಣ್ಯ ಇಲಾಖೆ ಬಗ್ಗೆ ಮಾನ್ಯ ಕುಮಾರಸ್ವಾಮಿಯವರು ಮಾತನಾಡುತ್ತಾ ಹೇಳಿದರು. ಮಾನವ ಮತ್ತು ವನ್ಯ ಜೀವಿಗಳ ಒಂದು ಕಾದಾಟ, ನಾವು election day ದಿನ ಮೂಡಿಗೆರೆಯಲ್ಲಿ ಒಂದು ಆನೆ

ಓಟು ಹಾಕುವುದಕ್ಕೆ ಬರುವವರನ್ನು ತುಳಿದು ಹಾಕಿತು. ಆ ಆನೆ ನಾಲ್ಕು ಜನರನ್ನು ಸಾಯಿಸಿದೆ. ನಾವು ಅದನ್ನು ಮತ್ತೆ ಮತ್ತೆ ಪ್ರಶ್ನೆ ಮಾಡಿದಾಗ, ಅದನ್ನು ಹಿಡಿಯುತ್ತೇವೆಂದು ಆದೇಶ ಮಾಡಿದರು, ಅದನ್ನು ಮೊನ್ನೆ ಹಿಡಿದರು. ಅಲ್ಲಿ ಸಾಯಿಸಿದಂಥ ಆನೆಗೆ ಒಂದೇ ದಂತ ಇತ್ತಂತೆ, ಈಗ ಹಿಡಿದಿರುವಂಥ ಆನೆಗೆ ಎರಡು ದಂತಗಳಿವೆ, ಅದು ಸಣ್ಣ ಆನೆಯಾಗಿದೆ. ಹಾಗಾಗಿ ಒಟ್ಟಾರೆ ನಾನು ಮೂಡಿಗೆರೆಗೆ ಸೀಮಿತವಾಗಿ ಹೇಳುತ್ತಿಲ್ಲ. ಮಲೆನಾಡಿನ ಭಾಗದಲ್ಲಿ ...

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ನಿಂಗಯ್ಯನವರೆ, ಆನೆ ಉಡುಪಿಯಿಂದ ತಪ್ಪಿಸಿಕೊಂಡು ಬಂದಿರಬಹುದು ನೋಡಿ, ಅದು ಓಟು ಹಾಕುವವರನ್ನೇಲ್ಲಾ ತುಳಿಯುತ್ತಿದೆಯೆಂದರೆ....

ಶ್ರೀ ಬಿ.ಬಿ.ನಿಂಗಯ್ಯ: ಇಲ್ಲ, ಏನಾಗಿದೆಯೆಂದರೆ, ಕಾಡಿನಲ್ಲಿ ಆಹಾರವಿಲ್ಲದೇ ನಾಡಿಗೆ ಬರುವ ಪರಿಸ್ಥಿತಿಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ: ಅಲ್ಲಿ ದೊಡ್ಡ ಮರಗಳಿವೆ, ಅದನ್ನು ತೆಗೆದುಕೊಂಡು ಹೋಗಿ ಚೈನ್ ಹಾಕಿ ಆನೆಯನ್ನು ಕಟ್ಟಿದರೆ ಆಯಿತು.

ಶ್ರೀ ಬಿ.ಬಿ.ನಿಂಗಯ್ಯ: ಇಲ್ಲ ಸಾರ್, actually ಅಲ್ಲಿ ಕಾಫಿ ತೋಟಕ್ಕೆ ಕೆಲಸಕ್ಕೆ ಹೋಗಲು ಭಯ ಉಂಟಾಗುವ ಪರಿಸ್ಥಿತಿ ಇದೆ. ಬೆಳಿಗ್ಗೆ 6 ಗಂಟೆಗೆ ಆನೆ ಬಂದು ಬಿಡುತ್ತದೆ. ಈ ಸ್ಥಿತಿ ಇದೆ, ಅದು ಮಾನ್ಯ ಸಿ.ಟಿ.ರವಿಯವರಿಗೂ ಗೊತ್ತಿದೆ. ಹಾಗಾಗಿ ಇವತ್ತು ಬಹಳ ವರ್ಷಗಳ ನಂತರ ಸಕಲೇಶಪುರ, ಕೊಡಗು, ಚಿಕ್ಕಮಗಳೂರು ಭಾಗಗಳಲ್ಲಿ ಆನೆಗಳ ಹಾವಳಿ ಇದೆ. ಅದಕ್ಕೆ ಆನೆ corridor ಮಾಡುವಂಥ ಕೆಲಸವಾಗಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಟಿ.ರವಿ: ಈಗ ಆನೆಗೆ ಬೇಲಿ ಹಾಕುತ್ತೇವೆಂದು ಹೇಳಿ, ರೈಲ್ವೆ ಕಂಬಿ ಹಾಕಿಕೊಂಡು ಬೇಲಿ ಹಾಕುತ್ತೇವೆಂದು ಹಾಕಿದ್ದರು. ನಾನು ಚಾಮರಾಜನಗರ ಜಿಲ್ಲೆಯ campaignನಲ್ಲಿದ್ದೆ. ಆ ಆನೆ ಬೇಲಿ ಬಿಲ್ ಮಾತ್ರ ಆಗಿದೆ, ಆನೆ ಬರುವುದನ್ನು ಏನು ತಡೆದಿಲ್ಲ. ನಮ್ಮ ಇಲಾಖೆಯವರು ಆನೆಗೆ ಬೇಲಿಯನ್ನು ಹಾಕಿ, ಆನೆ ಬರುವುದಕ್ಕೆ ದಾರಿಯನ್ನು ಬಿಟ್ಟಿದ್ದಾರೆ. ಅದು ಎಲ್ಲಿ ಬರಬೇಕೋ ಅಲ್ಲಿ ಜಾಗ ಬಿಟ್ಟಿದ್ದಾರೆ, ಅವು ಊರಿನೊಳಗೆ ಎಲ್ಲಿ ದಾರಿ ಬಿಟ್ಟಿದ್ದಾರೋ, ಅಲ್ಲಿ ಸಲೀಸಾಗಿ ಬರುತ್ತವೆ.

ಚೇರ್ಮನ್: ಮಾನ್ಯ ನಿಂಗಯ್ಯನವರೆ, ಬೇಗ ಮುಗಿಸಬೇಕು, ಸಮಯ ಆಯಿತು.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಬಿ.ಬಿ.ನಿಂಗಯ್ಯ: ಮಾನ್ಯ ಚೇರ್ಮನ್‌ರವರೆ, ಇನ್ನು ಎರಡು ನಿಮಿಷಗಳಲ್ಲಿ ಮುಗಿಸುತ್ತೇನೆ. ಈಗಾಗಲೇ ಬಹಳ ಮುಖ್ಯವಾಗಿ ಪ್ರಾಥಮಿಕ ಶಿಕ್ಷಣ ಇಲಾಖೆ ಬಗ್ಗೆ ಮಾತನಾಡುತ್ತಾ ಎಲ್ಲರೂ ಹೇಳಿದ್ದಾರೆ. ಹಿಂದೆ ಮಾನ್ಯ ಹೊರಟ್ಟಿಯವರು ಇದ್ದಾಗಲೇ ಪ್ರಸ್ತಾಪವಾಗಿತ್ತು. ಅದು ಒಂದನೇ ತರಗತಿಯಿಂದಲೇ ಇಂಗ್ಲೀಷ್ ಭಾಷೆಯನ್ನು ಕಲಿಸಬೇಕೆಂದು ಇತ್ತು. ತಾವು ಅದನ್ನು ಈ ಸಾರಿ ಸೇರಿಸಿದ್ದೀರಿ. ಅದಕ್ಕಾಗಿ ನಾನು ವಿಶೇಷವಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ. ಅದರ ಅವಶ್ಯಕತೆ ಇದೆ, ಕನ್ನಡದ ಜೊತೆಗೆ ಇಂಗ್ಲೀಷ್ ಭಾಷೆಯನ್ನು ಒಂದನೇ ತರಗತಿಯಿಂದಲೇ ಹೇಳಿಕೊಡುವುದು ಬಹಳ ಉತ್ತಮ, ಅದು ಒಂದು ಒಳ್ಳೆಯ ಕಾರ್ಯಕ್ರಮವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಸಾ.ರಾ.ಮಹೇಶ್: ಮಾನ್ಯ ನಿಂಗಯ್ಯನವರೆ, ಒಂದು ನಿಮಿಷ, ಮಾನ್ಯ ಶಿಕ್ಷಣ ಸಚಿವರು ಒಂದಷ್ಟು ಬದಲಾವಣೆಗಳನ್ನು ತರಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ನನ್ನ ಮನವಿ ಏನಿದೆಯೆಂದರೆ, ಈಗ ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗವಿದೆ, ಇದರ ಜೊತೆಗೆ ಯಾವುದೇ local ಚುನಾವಣೆಗೆ ನಿಲ್ಲುತ್ತಿದ್ದಾರೆ. ಅವರೆಲ್ಲರನ್ನೂ ಸೇರಿಸಿ, ಅವರೆಲ್ಲರ ಮಕ್ಕಳು ಕಡ್ಡಾಯವಾಗಿ ಸರ್ಕಾರಿ ಶಾಲೆಗಳಲ್ಲಿ ಓದಲೇ ಬೇಕೆಂದು ಏನಾದರೂ ಒಂದು ನಿಯಮ ಮಾಡುವುದಕ್ಕೆ ಸಾಧ್ಯವೇ? ಅಂಥ ಒಂದು ಪರಿಸ್ಥಿತಿಯಾದರೆ, ಆಗ ತಾವು ಈಗ ಸರ್ಕಾರಿ ಶಾಲೆಗಳನ್ನು ಉನ್ನತ ಮಟ್ಟಕ್ಕೆ ತರಬೇಕೆಂದು ಏನು ಯೋಚನೆ ಮಾಡುತ್ತಿದ್ದೀರಿ, ಅದಕ್ಕೆ ಅನುಕೂಲವಾಗಬಹುದೆಂದು ನನ್ನ ಮನವಿ ಇದೆ.

ಶ್ರೀ ಸಿ.ಟಿ.ರವಿ: ಮಾನ್ಯ ನಿಂಗಯ್ಯನವರೆ, ಈಗ ಅಮೇರಿಕಾದಲ್ಲಿ ಪ್ರಾಥಮಿಕ ಶಿಕ್ಷಣ ಎಲ್ಲರಿಗೂ common ಇದೆ, ಅಲ್ಲಿ community ಶಾಲೆಗಳಿವೆ. ಆ ಪ್ರದೇಶದ ಶಾಲೆಗಳಿಗೆ ಸೇರಿಸಬೇಕು. ನಮಗೆ ಏಕೆ? ನಮ್ಮ ಸಂವಿಧಾನದಲ್ಲೆ ಸಮಾನ ಶಿಕ್ಷಣ ಎಂದು ಏನು ಹೇಳಿದೆ, ಮೂಲಭೂತ ಹಕ್ಕು, ಶಿಕ್ಷಣ ನಮ್ಮ ಮೂಲಭೂತ ಹಕ್ಕು ಎಂದು ಇದ್ದಾಗ, ನಾವು ಏಕೆ ಆ territory fix ಮಾಡಿ, ಅಲ್ಲಿ resident ಯಾರಿದ್ದಾರೆ, ಅವರೆಲ್ಲಾ schoolಗೆ ಕಡ್ಡಾಯವಾಗಿ ಹೋಗಬೇಕು. ತಾವು ಖಾಸಗಿ ಶಾಲೆಗಳಿದ್ದರೆ ಅದಕ್ಕೆ aid ಕೊಡಿ.

(ಗೊಂದಲ)

ಶ್ರೀ ಎಂ.ಕೆ.ಸೋಮಶೇಖರ್: ಮಾನ್ಯ ಚೇರ್ಮನ್‌ರವರೆ, ನಾವು ಇಷ್ಟು ಜನ ನಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಕಳುಹಿಸುತ್ತೇವೆಂದು ಹೇಳಿದರೆ ಸಾಕಾಗಿದೆ.

27-03-2017

(ಗೊಂದಲ)

ಶ್ರೀ ಸಾ.ರಾ.ಮಹೇಶ್: ನಾವು ಅದನ್ನೇ ಹೇಳುತ್ತಿರುವುದು, ಅದು ಅಗುತ್ತಿಲ್ಲವೆಂದು ಅದಕ್ಕೆ ನಿಯಮ ಮಾಡಿ ಎಂದು ಹೇಳುತ್ತಿರುವುದು.

(ಗೊಂದಲ)

ಶ್ರೀ ಸಿ.ಟಿ.ರವಿ: ನಾವು ಸರ್ಕಾರಿ ಶಾಲೆಗಳಲ್ಲಿ ಓದಿದ್ದು, ನಮ್ಮ ಮಕ್ಕಳು ಖಂಡಿತವಾಗಿ ಸರ್ಕಾರಿ ಶಾಲೆಯಲ್ಲಿ ಓದುತ್ತಿಲ್ಲ. ನಮಗೆ ಆಗ ಅದು ಬಿಟ್ಟರೆ ಬೇರೆ ಗತಿ ಇರಲಿಲ್ಲ. ನಮ್ಮ ಊರಿನಲ್ಲಿ ಆ ಸ್ಕೂಲ್ ಬಿಟ್ಟರೆ ಬೇರೆ ಇರಲಿಲ್ಲ.

ಶ್ರೀ ತನ್ವೀರ್ ಸೇಠ್: ಮಾನ್ಯ ಚೇರ್ಮನ್‌ರೆ, ಒಂದು ನಿಮಿಷ, ಈಗ ಬಹಳ ಸೂಕ್ಷ್ಮವಾದಂಥ ವಿಚಾರ ಪ್ರಸ್ತಾಪವಾಗಿದೆ. ಇವತ್ತು ಸರ್ವೋಚ್ಚ ನ್ಯಾಯಾಲಯ ಮಾತೃ ಭಾಷೆಯಾಗಿರಬಹುದು, ಮಾಧ್ಯಮವಾಗಿರಬಹುದು, ಅದು ಪೋಷಕರಿಗೆ ಬಿಟ್ಟಂಥ ವಿಚಾರವೆಂದು ಹೇಳಿದೆ. ಅಷ್ಟು ಇದ್ದರೂ ನಮ್ಮ ರಾಜ್ಯದಲ್ಲಿ ನಾವು ಶಿಕ್ಷಣವನ್ನು ಮಾತೃ ಭಾಷೆಯಲ್ಲಿ ಕೊಡಬೇಕೆನ್ನುವುದನ್ನು ಕಡ್ಡಾಯವಾಗಿ ಮಾಡಿಕೊಂಡು ಹೋಗುತ್ತಿದ್ದೇವೆ. ಈಗ ಖಾಸಗಿ ಶಾಲೆಗಳು ಪ್ರತಿ ವರ್ಷ ಏಕಾಏಕಿ ಬೆಳೆಯುತ್ತಿದ್ದಂಥದ್ದು, ಅದಕ್ಕೆ ನಿಯಂತ್ರಣ ತರುವಂಥ ಕೆಲಸವನ್ನು ನಾವು ಈ ವರ್ಷದಿಂದಲೇ ಮಾಡಿದ್ದೇವೆ. ಎರಡನೆಯದಾಗಿ, ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳು ಮತ್ತು ಅಲ್ಲಿ ಉನ್ನತೀಕರಣ ಮಾಡುವಂಥ ಕೆಲಸವನ್ನು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಈಗ ಯಾರ ಮೇಲೂ ಕಡ್ಡಾಯವಾಗಿ ಇಂಥ ಶಾಲೆಗೆ ಹೋಗಬೇಕೆಂದು ಹೇಳುವುದಕ್ಕೆ ಆಗುವುದಿಲ್ಲ. ಈಗ ನಾವು ಕರ್ನಾಟಕ ಜ್ಞಾನ ಆಯೋಗ ಮತ್ತು ಕೇಂದ್ರ ಸರ್ಕಾರದ ಶಿಕ್ಷಣ ನೀತಿಯ ವ್ಯವಸ್ಥೆ ಜಾರಿಗೆ ಬರುತ್ತಿದೆ. ಇದರ ಹಿನ್ನೆಲೆಯಲ್ಲಿ ನಾವು ಕರ್ನಾಟಕದಲ್ಲಿ ಶಿಕ್ಷಣ ನೀತಿಯನ್ನು ಜಾರಿ ಮಾಡುವಂಥದ್ದಕ್ಕೆ ಪ್ರಸ್ತಾಪವನ್ನು ಈ ವರ್ಷದ ಬಜೆಟ್‌ನಲ್ಲಿ ಕೊಟ್ಟಿದ್ದೇವೆ. ಇದರ ಜೊತೆಗೆ ಮಾನ್ಯ ನಾರಾಯಣ ಸ್ವಾಮಿಯವರು ಏನು ಹೇಳಿದ್ದರೆಂದರೆ, ಆಂಗ್ಲ ಭಾಷೆಯನ್ನು ಪರಿಚಯ ಮಾಡಿಸಿ ಕೊಡುವಂಥ ಪ್ರಸ್ತಾವನೆ ಬಹಳ ಹಿಂದಿನಿಂದಲೂ ಇದ್ದರೂ ಕೂಡ ವ್ಯವಸ್ಥೆ ಆಗಿರಲಿಲ್ಲ. ಈ ವರ್ಷ 10,500 ಶಿಕ್ಷಕರಿಗೆ ಆಂಗ್ಲ ಭಾಷೆಯ ತರಬೇತಿಯನ್ನು ಕೊಟ್ಟು, ನಾವು ಸಿದ್ಧತೆಯನ್ನು ಮಾಡಿಕೊಂಡೇ ಇದನ್ನು ಮಾಡಿರುವಂಥದ್ದು. ಹಾಗಾಗಿ ನಮಗೆ ಏನಾಗುತ್ತದೆ, ಕನ್ನಡ ಶಾಲೆಗಳ ಸ್ಥಿತಿ-ಗತಿಗಳು ಏನಾಗಿದೆ.

27-03-2017

ಶ್ರೀ ಬಿ.ಬಿ.ನಿಂಗಯ್ಯ: ಸಾರ್, ತಾವು ಉತ್ತರ ಕೊಡುವಾಗ ಅದನ್ನು ಹೇಳಿ.

ಶ್ರೀ ತನ್ವೀರ್‌ಸೇಠ್: ಒಂದು ನಿಮಿಷ, ಮಾದರಿ ಶಾಲೆಗಳ ವಿಚಾರ ಬಂತು. ಅದು ಹೋಬಳಿಗೆ ಒಂದು ಶಾಲೆ ಅಥವಾ ಗ್ರಾಮ ಪಂಚಾಯಿತಿಯಲ್ಲಿ ಒಂದು ಶಾಲೆ ಎಂದು ಏನು ಬಂತು. ನಾವು ಶಾಲೆಗಳನ್ನು ಕ್ರೋಢೀಕರಿಸುವಂಥ ಸಂದರ್ಭದಲ್ಲಿ, ನಾವು ಶಾಲೆಗಳನ್ನು ಮುಚ್ಚುವಂಥ ಪರಿಸ್ಥಿತಿ ಬಂದು ಬಿಡುತ್ತದೆ. ಆ ರೀತಿ ಆಗಬಾರದು, ನಾವು ಇರುವಂಥ ಜಾಗದಲ್ಲೇ ಏನು ಮಾಡಬಹುದೆಂಬುದರ ಬಗ್ಗೆ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದೇವೆ. ಈಗ ನಮ್ಮ ಸರ್ಕಾರಿ ಶಾಲೆಗಳ ವ್ಯವಸ್ಥೆಯಲ್ಲಿ ಶೈಕ್ಷಣಿಕವಾಗಿ ಗುಣಮಟ್ಟದ ಶಿಕ್ಷಣ ಕೊಡುವ ಕಡೆಗೆ ಈಗಾಗಲೇ ನಾವು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದೇವೆ.

ಶ್ರೀ ಬಿ.ಬಿ.ನಿಂಗಯ್ಯ: ಆಯಿತು, ಧನ್ಯವಾದಗಳು.

ಚೇರ್ಮನ್: ಮಾನ್ಯ ನಿಂಗಯ್ಯನವರೆ, ಮುಗಿಸಿ.

ಶ್ರೀ ಬಿ.ಬಿ.ನಿಂಗಯ್ಯ: ಆಯಿತು, ಮುಗಿಸುತ್ತೇನೆ. Atleast ಶಿಕ್ಷಕರ ಮಕ್ಕಳಾದರೂ ಕೂಡ ಕಡ್ಡಾಯವಾಗಿ ಶಾಲೆಗೆ ಬರುವುದಕ್ಕೆ ಏನಾದರೂ ಕ್ರಮ ಕೈಗೊಳ್ಳಬಹುದೇ, ಎಂದು ಸಲಹೆ ಮಾಡುತ್ತೇನೆ. ಮಾನ್ಯ ಕಂದಾಯ ಸಚಿವರೆ, ಎರಡು ನಿಮಿಷ ಇರಬೇಕೆಂದು ಕೇಳಿಕೊಳ್ಳುತ್ತೇನೆ. ವಿಶೇಷವಾಗಿ ಸರ್ಕಾರ ಈ ಬಾರಿ 49 ತಾಲ್ಲೂಕುಗಳ ರಚನೆ ಮಾಡುತ್ತೇವೆಂದು ಘೋಷಣೆಯನ್ನು ಮಾಡಿದೆ. ಕಳೆದ 30 ವರ್ಷಗಳಿಂದ ನನ್ನ ಕ್ಷೇತ್ರದ ಕಳಸಾ ಎನ್ನುವಂಥದ್ದು ಮೂಡಿಗೆರೆಯಿಂದ 64 ಕಿ.ಮೀ.ದೂರದಲ್ಲಿದೆ. ಅಲ್ಲಿಂದ South Canara borderಗೆ 38 ಕಿ.ಮೀ. ಆಗುತ್ತದೆ. ಒಟ್ಟು 102 ಕಿ.ಮೀ.ನಷ್ಟು ಮೂಡಿಗೆರೆ ತಾಲ್ಲೂಕು ಕೇಂದ್ರಕ್ಕೆ ಆಗುತ್ತದೆ. ನಾವು ಪ್ರತಿ ಬಾರಿ ಬೇಡಿಕೆಯನ್ನು ಇಡುತ್ತಲೇ ಬಂದಿದ್ದೇವೆ. ಮಾನ್ಯ ಕಂದಾಯ ಸಚಿವರು Speaker ಆಗಿದ್ದಾಗಲೂ ಕೂಡ ಅವರನ್ನು ಭೇಟಿ ಮಾಡಿದ್ದೇವೆ.

ಶ್ರೀ ಸಿ.ಟಿ.ರವಿ: ಮಾನ್ಯ ನಿಂಗಯ್ಯನವರೆ, ಅದು ನ್ಯಾಯವಾಗಿ ಆಗಬೇಕಾಗಿರುವುದು, ಯಾವುದೇ ಮಾನದಂಡ ತೆಗೆದುಕೊಂಡರೂ ಕಳಸಾ ತಾಲ್ಲೂಕು ಆಗಬೇಕು. ಅದನ್ನು ಏಕೆ ಮಾಡಲಿಲ್ಲವೆಂಬುದಕ್ಕೆ ಮಾಡಿದವರು ಉತ್ತರ ಕೊಡಬೇಕು. ಯಾವುದೇ ಲೆಕ್ಕದಲ್ಲಿ ಹೋದರೂ ಕಳಸಾ ತಾಲ್ಲೂಕು ಆಗಬೇಕು.

ಶ್ರೀ ಬಿ.ಬಿ.ನಿಂಗಯ್ಯ: ಮಾನ್ಯ ಚೇರ್ಮನ್‌ರವರೆ, ನಮಗೆ ಅನ್ಯಾಯವಾಗಿದೆ. ಆ ದೃಷ್ಟಿಯಿಂದ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಮಾನ್ಯ ಕಂದಾಯ ಸಚಿವರಿಗೆ ವಿನಂತಿ ಮಾಡುತ್ತೇನೆ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನಾಳೆ ಉತ್ತರ ಕೊಡುವಾಗ ಕಳಸಾವನ್ನು ತಾಲ್ಲೂಕು ಕೇಂದ್ರವಾಗಿ ಘೋಷಣೆ ಮಾಡಬೇಕೆಂದು ತಮ್ಮ ಮೂಲಕ ವಿನಮ್ರ ವಿನಂತಿ ಮಾಡಲಿಚ್ಛಿಸುತ್ತೇನೆ. ಏಕೆಂದರೆ, ಅಲ್ಲಿ ಎರಡು ಹೋಬಳಿಗಳಲ್ಲಿ ಸುಮಾರು 13 ಗ್ರಾಮ ಪಂಚಾಯಿತಿಗಳ ವ್ಯಾಪ್ತಿ ಬರುತ್ತದೆ. ಸುಮಾರು 42 ಕಂದಾಯ ಗ್ರಾಮಗಳು, 455 ದಾಖಲೆ ಗ್ರಾಮಗಳು ಬರುತ್ತವೆ. ಅದು ಗುಡ್ಡಗಾಡು, ತಾವು ಕಳಸಾ, ಗೊರನಳ್ಳಿಗೆ ಹೋಗಿದ್ದೀರಿ. ಆ ಪ್ರದೇಶ ಏಕೆ ಬಿಟ್ಟು ಹೋಯಿತೆಂಬುದು ನನಗೆ ಗೊತ್ತಾಗಿಲ್ಲ. ಹಿಂದ ಹುಂಡೇಕಾರ್ ಸಮಿತಿ ಕೊಟ್ಟಿತ್ತು, ಗದ್ದಿಗೌಡರ ಸಮಿತಿ ಕೊಟ್ಟಿತ್ತು ಮತ್ತು ಮಾನ್ಯ ಎಂ.ಪಿ.ಪ್ರಕಾಶ್‌ರವರ ಸಮಿತಿ ಕೂಡ ಕೊಟ್ಟಿದೆ. ತಾವು ಅಜ್ಜಂಪುರವನ್ನು ಮಾಡಿರುವುದು ಸಂತೋಷ, ಅದು ನಮ್ಮ ಜಿಲ್ಲೆಯ ಒಂದು ಭಾಗ. ಆದರೆ ಕಳಸಾ ಏಕೆ ಸರ್ಕಾರದ ಕಣ್ಣಿಗೆ ಬೀಳಲಿಲ್ಲ, ಗಮನಕ್ಕೆ ಬರಲಿಲ್ಲವೆಂಬುದು ನನಗೆ ಬಹಳ ಆತಂಕವಾಗಿದೆ, ಬೇಸರವಾಗಿದೆ. ಇಡೀ ಆ ಭಾಗದ ಜನ ಸರ್ಕಾರದಿಂದ ಒಂದು ಒಳ್ಳೆಯದನ್ನು ನಿರೀಕ್ಷೆ ಮಾಡಿದೆ. ಅದನ್ನು ತಾಲ್ಲೂಕು ಮಾಡದೇ ಇರುವುದು ನಮಗೆಲ್ಲರಿಗೂ ದು:ಖವಾಗಿದೆ. ಆದ್ದರಿಂದ ಮಾನ್ಯ ಚೇರ್ಮನ್‌ರವರೆ, ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, ನಾಳೆ ಉತ್ತರ ಕೊಡುವಾಗ ಮಾನ್ಯ ಮುಖ್ಯಮಂತ್ರಿಯವರಿಂದ ತಾಲ್ಲೂಕು ಘೋಷಣೆ ಮಾಡಿಸಬೇಕೆಂಬ ಕಳಕಳಿಯ ಒತ್ತಾಯದ ಒಂದು ಆಗ್ರಹವನ್ನು ನಾನು ಮಾಡುತ್ತೇನೆ.

ಚೇರ್ಮನ್: ಮಾನ್ಯ ಬಿ.ಆರ್.ಪಾಟೀಲ್‌ರವರೆ.. .

ಶ್ರೀ ಬಿ.ಬಿ.ನಿಂಗಯ್ಯ: ಮಾನ್ಯ ಚೇರ್ಮನ್‌ರವರೆ, ಒಂದೇ ಒಂದು ನಿಮಿಷ. ಇವತ್ತು ಮಾನ್ಯ ಉನ್ನತ ಶಿಕ್ಷಣ ಸಚಿವರು ಇಲ್ಲಿದ್ದಾರೆ.

ಶ್ರೀ ಸಿ.ಟಿ.ರವಿ: ಮಾನ್ಯ ಮುಖ್ಯಮಂತ್ರಿಯವರು ಬಜೆಟ್ ಪುಸ್ತಕವನ್ನು ನಿಮ್ಮೆಲ್ಲರ ಸಮಯವನ್ನು ತೆಗೆದುಕೊಂಡು 4 ಗಂಟೆಗಳು ಓದಿದರು.

ಶ್ರೀ ಬಿ.ಬಿ.ನಿಂಗಯ್ಯ: ಮಾನ್ಯ ಚೇರ್ಮನ್‌ರವರೆ, ಸರ್ಕಾರ ಒಂದು ಒಳ್ಳೆಯ ಕೆಲಸವನ್ನು ಮಾಡಿದೆ. ಸಂವಿಧಾನ ಶಿಲ್ಪಿ ಭಾರತರತ್ನ ಅಂಬೇಡ್ಕರ್‌ರವರ 125 ಜನ್ಮ ದಿನ ಆಚರಣೆ ಮಾಡುವ ಈ ಸಂದರ್ಭದಲ್ಲಿ, ಡಾ:ಬಿ.ಆರ್.ಅಂಬೇಡ್ಕರ್‌ರವರು ವ್ಯಾಸಂಗ ಮಾಡಿದ London School of Economics ಮಾದರಿಯಲ್ಲಿ, ಬೆಂಗಳೂರಿನಲ್ಲಿ ಡಾ:ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಎಂಬ ಅರ್ಥಶಾಸ್ತ್ರದ ಉನ್ನತ ವ್ಯಾಸಂಗ ಹಾಗೂ ಸಂಶೋಧನಾ ಸಂಸ್ಥೆಯನ್ನು ಬೆಂಗಳೂರಿನಲ್ಲಿ

ಸ್ಥಾಪಿಸಲು ಸರ್ಕಾರ ಅನುಮೋದನೆ ನೀಡಿದೆಯೆನ್ನುವಂಥದ್ದು. ಇದು ಅತ್ಯಂತ ಹೆಮ್ಮೆಯ ಮತ್ತು ಶ್ಲಾಘನೆಯ ವಿಚಾರವಾಗಿದೆ. ಏಕೆಂದರೆ, ಅವರ 125ನೇ ವರ್ಷದ ಜಯಂತಿಯನ್ನು ಭಾರತದ ಪ್ರಧಾನ ಮಂತ್ರಿಯವರು ಕೂಡ ವರ್ಷ ಇಡೀ ಆಚರಿಸಬೇಕೆಂದು ಕಳೆದ ವರ್ಷ ಒಂದು circular ಮಾಡಿದರು. ರಾಜ್ಯ ಸರ್ಕಾರವು ಸಹ ಮಾಡುತ್ತಾ ಬಂದಿದೆ. ಇದೊಂದು ಮೈಲಿಗಲ್ಲು ಆಗುವಂಥ ಕೆಲಸವಾಗಿದೆ. ಅಮೇರಿಕಾದಲ್ಲಿ ಕೂಡ ಆ ಯೂನಿವರ್ಸಿಟಿಯಲ್ಲಿ ಅಂಬೇಡ್ಕರ್‌ರವರ ಬಗ್ಗೆ ಅಧ್ಯಯನ ಮಾಡಿ, ಅವರ ಸೆನೆಟ್‌ನಲ್ಲಿ World Genius Man ಎನ್ನುವಂಥದ್ದನ್ನು ಅವರು resolution ಮಾಡಿದರು. ಇದನ್ನು ಅವರು ಕೂಡ ಒಪ್ಪಿದರು. "World Knowledge Day" ಆ ಶೀರ್ಷಿಕೆಯಡಿ ಇವೆಲ್ಲವನ್ನೂ ಆಚರಣೆ ಮಾಡಿದೆ. ಈ ವರ್ಷ ವಿಶೇಷವಾಗಿ ರಾಜ್ಯ ಸರ್ಕಾರ ಅದನ್ನು ಮನಗಂಡು ಅವರ ಹೆಸರಿನಲ್ಲಿ ಒಂದು Economic School ಮಾಡುವಂಥದ್ದು ಇದೆಯಲ್ಲಾ, ಅದು ನಮ್ಮ ಇಡೀ ಸದನಕ್ಕೆ ಮತ್ತೆ ಇಡೀ ರಾಜ್ಯದಲ್ಲಿ ಎಲ್ಲರೂ ಹೆಮ್ಮೆ ಪಡುವಂಥ ವಿಚಾರವೆಂದು ಹೇಳಬಯಸುತ್ತೇನೆ. ಮತ್ತೆ ಮುಂದುವರೆದು. ..

ಚೇರ್ಮನ್: ಇಲ್ಲ, ಈಗ ಮಾನ್ಯ ಬಿ.ಆರ್.ಪಾಟೀಲ್‌ರವರು ಮಾತನಾಡುತ್ತಾರೆ.

ಶ್ರೀ ಬಿ.ಬಿ.ನಿಂಗಯ್ಯ: ಮಾನ್ಯ ಚೇರ್ಮನ್‌ರವರೆ, Social Welfare Department ಬಗ್ಗೆ ಒಂದೇ ನಿಮಿಷದಲ್ಲಿ ಬಹಳ ಮುಖ್ಯವಾದದ್ದು ಹೇಳಿಬಿಡುತ್ತೇನೆ. 2013ನೇ ಸಾಲಿನಲ್ಲಿ ನಾವು ನೀವೆಲ್ಲಾ bill pass ಮಾಡಿ ಕೊಟ್ಟೆವು. ಮಾನ್ಯ ಕುಮಾರಸ್ವಾಮಿಯವರು ಪ್ರಸ್ತಾಪ ಮಾಡಿದರು. ಅದು ಬಹಳ ಕ್ರಾಂತಿಕಾರಕ ಮಸೂದೆಯಾಗಿದ್ದು, next ಆಂಧ್ರ.

ಮುಂದು.. ..

27-03-2017/7/10/48/GG/CP

ಶ್ರೀ ಬಿ.ಬಿ. ನಿಂಗಯ್ಯ (ಮುಂದುವರೆದುದು): ಆದರೆ ಈವರೆಗೆ ಸ್ಪಷ್ಟ ಕಾರ್ಯಕ್ರಮಗಳನ್ನು ಕೊಟ್ಟಿಲ್ಲ. ಈ ವರ್ಷ ಇವರಿಗಾಗಿ 27,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಹೇಳಿದ್ದಾರೆ. ಒಂದು ಆಯ್ದ ರಚನಾತ್ಮಕ, ದಲಿತರ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಮಾಡುವಂಥ ಒಂದು ಸಮಗ್ರ ಕಾಯಿದೆ ಎಂದು ನಾವು ಅದನ್ನು ಭಾವಿಸಿದ್ದೆವು. ಆದರೆ ಈವರೆಗೂ ಕೇವಲ ಕಾಂಕ್ರೀಟ್ ರೋಡ್ ಮಾಡುವುದು, ಸಮುದಾಯ ಭವನ ಕಟ್ಟುವುದು, ಇಲ್ಲವೆಂದರೆ ಕುರಿ-



ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕೋಳಿಗಳನ್ನು ಕೊಡುವುದು, ಇಷ್ಟಕ್ಕೆ ಸೀಮಿತವಾಗಿದೆಯೇ ಹೊರತು ಒಳ್ಳೆಯ assets create ಮಾಡತಕ್ಕಂಥ ಯೋಜನೆಗಳಾಗಿಲ್ಲ. ಗಂಗಾ ಕಲ್ಯಾಣ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಿದರು. ಅದು ಆಗಿನಿಂದ ಇದೆ. ಈಗ ಅದನ್ನು ನೀರಾವರಿ ಇಲಾಖೆಯಿಂದಲೂ ಕೊಡುತ್ತಿದ್ದಾರೆ. Land Purchasing Scheme, ಇದು ಬಹಳ ಒಳ್ಳೆಯ ಕಾರ್ಯಕ್ರಮ. ಕಳೆದ ಬಾರಿ ಇದಕ್ಕೆ ಬರೀ 60 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. 27,000 ಕೋಟಿ ರೂಪಾಯಿಗಳಲ್ಲಿ ಕನಿಷ್ಠ 1,000 ಕೋಟಿ ರೂಪಾಯಿಗಳನ್ನು ಇದಕ್ಕೆ ಇಡಲು ಆಗುವುದಿಲ್ಲವೇ?

ಶ್ರೀ ಸಿ.ಟಿ. ರವಿ: Market priceಗೂ ಇವರು ದುಡ್ಡು ಕೊಡುವುದಕ್ಕೂ ಸಂಬಂಧವೇ ಇಲ್ಲ. ಅದರಲ್ಲಿ ನೀವು purchase ಮಾಡಲು ಸಾಧ್ಯವೇ ಆಗುವುದಿಲ್ಲ. ಇದನ್ನು ಜಾಸ್ತಿ ಮಾಡಬೇಕು.

ಶ್ರೀ ಬಿ.ಬಿ. ನಿಂಗಯ್ಯ: ಈ ವರ್ಷ ಜಾಸ್ತಿ ಮಾಡಿದ್ದಾರೆ. Unit cost 15 ಲಕ್ಷ ರೂಪಾಯಿಗಳು ಎಂದು ಮಾಡಿದ್ದಾರೆ.

ಶ್ರೀ ಸಿ.ಟಿ. ರವಿ: ಮತ್ತೊಂದು ವಿಚಾರವೆಂದರೆ, Tourism taxi ಎಂದು ಕೊಡುತ್ತಾರೆ. ಆ ಟ್ಯಾಕ್ಸಿಗೆ ಪೆಟ್ರೋಲ್ ಹಾಕುವಷ್ಟೂ ಬಾಡಿಗೆ ಬರುವುದಿಲ್ಲ. ಹಾಗಾಗಿ, ಅವರ ಆಯ್ಕೆಗೆ ಬಿಡಬೇಕು. ಆ ಪ್ರದೇಶದಲ್ಲಿ ಅವನು ಅಂಗಡಿ ಇಟ್ಟುಕೊಳ್ಳುತ್ತಾನೋ, workshop ಮಾಡುತ್ತಾನೋ, tourism taxi ತೆಗೆದುಕೊಳ್ಳುತ್ತಾನೋ ಅಥವಾ ಬೇರೆ ಏನು ಮಾಡುತ್ತಾನೋ ಅದಕ್ಕೆ ಹಣ ಕೊಡುವಂಥ ವ್ಯವಸ್ಥೆಯಾಗಬೇಕು. ಬೇಕಾದರೆ ನೀವು ಒಂದು ಸರ್ವೆ ಮಾಡಿ, ಎಷ್ಟು ಜನರಿಗೆ ಟ್ಯಾಕ್ಸಿ ಕೊಟ್ಟಿದ್ದೀರಿ, ಅದರಲ್ಲಿ ಎಷ್ಟು ಜನ ದುಡ್ಡು ಕಟ್ಟಿ ಸ್ವಾವಲಂಬಿಗಳಾಗಿದ್ದಾರೆ ಎಂದು ನೋಡಿ. ಸಾಲವನ್ನು ಕೊಡುವ ಉದ್ದೇಶವೆಂದರೆ, ಅವನು ಸ್ವಾವಲಂಬಿಯಾಗಬೇಕು ಎಂದು ಕೊಡುವುದು, ಸಾಲಗಾರನಾಗಬೇಕು ಎಂದು ಅಲ್ಲ. ಅವನನ್ನು ಸಾಲಗಾರನನ್ನಾಗಿ ಮಾಡಿ, ಅವನಿಗೆ ಇನ್ಯಾವುದೇ ಯೋಜನೆಯಲ್ಲಿ ಲಾಭ ಆಗದ ಹಾಗೆ ಮಾಡಿ ಕೂರಿಸಿಬಿಡುತ್ತೇವೆ. Demandಗಿಂತ supply ಜಾಸ್ತಿಯಾದರೆ automatically ಇಡೀ ಉದ್ಯಮ ಕುಸಿದು ಹೋಗುತ್ತದೆ. ಈಗ ಆಗಿರುವುದೂ ಅದೇ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಬಿ.ಬಿ. ನಿಂಗಯ್ಯ: ಆ ದೃಷ್ಟಿಯಿಂದ ಹೇಳುತ್ತಿದ್ದೇನೆ, ಅದು ಬಹಳ ಒಳ್ಳೆಯ ಒಂದು ಕಾಯಿದೆ. ಕನಿಷ್ಠ ಈವರೆಗೆ ಶಾಸಕರಾದ ನಮ್ಮನ್ನು ಕರೆಸಿ ಚರ್ಚೆ ಮಾಡಿಲ್ಲ. ಒಂದು ದಿನ ವಿಶೇಷವಾಗಿ ಆ ಬಗ್ಗೆಯೇ ಈ ಮನೆಯಲ್ಲಿ ಚರ್ಚೆಯಾಗಲಿ. ಆ ಹಣ ಸಮರ್ಪಕವಾಗಿ ಬಳಕೆಯಾಗಲಿ. ಆಗ ನಿಮ್ಮ ಸರ್ಕಾರಕ್ಕೇ ಒಳ್ಳೆಯ ಹೆಸರು ಬರುತ್ತದೆ, ಒಳ್ಳೆಯ ಕಾಯಿದೆಯನ್ನು ತಂದಿದ್ದೀರಿ. ಜಮೀನು ಕೊಳ್ಳತಕ್ಕಂಥ ಯೋಜನೆ ಬಹಳ ಒಳ್ಳೆಯ ಕಾರ್ಯಕ್ರಮ. ಅದಕ್ಕೆ 50-60 ಕೋಟಿ ರೂಪಾಯಿಗಳನ್ನಿಟ್ಟರೆ ಅದು ಯಾವುದಕ್ಕೆ ಸಾಕಾಗುತ್ತದೆ? ಅದಕ್ಕೆ 1,000 ಕೋಟಿ ರೂಪಾಯಿಗಳನ್ನು ಇಡಿ. ಕೌಶಲ್ಯ ಅಭಿವೃದ್ಧಿ ಬಗ್ಗೆ ಹೇಳಿದ್ದೀರಿ. ಅದರಲ್ಲಿ ವಿಶೇಷವಾಗಿ ತರಬೇತಿ ಕೊಡಿ. ಅವರ man power ಬಳಕೆ ಸರಿಯಾಗಿ ಆಗಲಿ, ಅವರಿಗೆ ಅನುಕೂಲವಾಗಲಿ ಎಂದು ಹೇಳಿ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತಾ, ಮತ್ತೊಮ್ಮೆ ತಮ್ಮಲ್ಲಿ ಕೈ ಮುಗಿದು ವಿನಂತಿ ಮಾಡುತ್ತೇನೆ, 'ಕಳಸ'ವನ್ನು ತಾಲ್ಲೂಕು ಕೇಂದ್ರವಾಗಿ ಘೋಷಣೆ ಮಾಡಲು ತಾವು ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡಬೇಕು, ಅದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ (ಆಳಂದ): ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು 2017-18ನೇ ಸಾಲಿನ ಆಯವ್ಯಯವನ್ನು ಮಂಡನೆ ಮಾಡಿ ಸದನದ ಒಪ್ಪಿಗೆಯನ್ನು ಕೇಳಿ ಈ ಆಯವ್ಯಯ ಪತ್ರವನ್ನು ಮಂಡಿಸಿದ್ದಾರೆ. ಅದರ ಮೇಲೆ ಬಹಳಷ್ಟು ದೀರ್ಘವಾದಂಥ ಚರ್ಚೆಯಾಗಿದೆ. ಸಮಯವೂ ಬಹಳ ಕಡಿಮೆ ಇದೆ. ನಾನು ಕೆಲವೇ ಕೆಲವು ವಿಷಯಗಳನ್ನು ಮಾತನಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಾನು ಸುಮಾರು ಮೂರು ಸಲ ಈ ಕೆಳಮನೆಗೆ ಬಂದಿದ್ದೇನೆ, ಒಂದು ಸಲ ಮೇಲ್ಮನೆಯಲ್ಲಿ ಕೂಡ ಇದ್ದೆ. ನಾನು ಅನೇಕ ಆಯವ್ಯಯಗಳನ್ನು ನೋಡಿದ್ದೇನೆ. ಬಹುತೇಕ ಇವರು ಬಹಳ ಒಳ್ಳೆಯ ಪ್ರಯತ್ನವನ್ನು ಮಾಡಿ ಆಯವ್ಯಯವನ್ನು ಮಂಡಿಸಿದ್ದಾರೆ. ಇವತ್ತು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ತಮಗೆ ಇದ್ದಂಥ ಇತಿಮಿತಿಗಳಲ್ಲಿ ಮತ್ತು ರಾಜ್ಯದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಸಾರ್ವತ್ರಿಕವಾಗಿ ಈ ರಾಜ್ಯದ ಅಭಿವೃದ್ಧಿ ಯಾವ ರೀತಿ ಆಗಬೇಕು ಎನ್ನುವುದಕ್ಕೆ ಬಹಳಷ್ಟು ಪ್ರಾಮಾಣಿಕವಾದ ಪ್ರಯತ್ನವನ್ನು ಪಟ್ಟು ಎಲ್ಲರಿಗೂ ಕೂಡ ನ್ಯಾಯವನ್ನು ಒದಗಿಸುವಂಥ ಕೆಲಸವನ್ನು ಮಾಡಿದ್ದಾರೆ. ಸಾಮಾನ್ಯವಾಗಿ ಪ್ರಜಾಪ್ರಭುತ್ವದಲ್ಲಿ



ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಬೇಡಿಕೆಗಳಿಗೆ ಕೊನೆಯಿಲ್ಲ, ಬೆಟ್ಟದಷ್ಟು ಸಮಸ್ಯೆಗಳು ಕೂಡ ಇವೆ. ಈ ಎಲ್ಲ ಸಮಸ್ಯೆಗಳನ್ನು ಪರಿಹಾರ ಮಾಡಬೇಕು ಎಂದು ಅಧಿಕಾರದಲ್ಲಿದ್ದವರಿಗೆ ಅನಿಸಿದರೂ ಪರಿಸ್ಥಿತಿ ಅವರಿಗೆ ಅನುಕೂಲ ಮಾಡಿಕೊಡುವುದಿಲ್ಲ. ಏಕೆಂದರೆ, ಈ ಹಣಕಾಸಿನ ವ್ಯವಸ್ಥೆಯ frame ಒಳಗಡೆಯೇ ಈ ಎಲ್ಲ ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಹೀಗೆ ಮಾಡುವಾಗ, ಮಾನ್ಯ ಮುಖ್ಯಮಂತ್ರಿಗಳು ತಾವು ನಂಬಿದಂಥ ತತ್ವ ಮತ್ತು ಸಿದ್ಧಾಂತದ ಆಧಾರದ ಮೇಲೆ ಇವತ್ತು ಎಲ್ಲರನ್ನೂ ಗಮನದಲ್ಲಿಟ್ಟುಕೊಂಡು, ಯಾರನ್ನೂ ಕಡೆಗಣನೆ ಮಾಡದೇ, ಸಾರ್ವತ್ರಿಕವಾಗಿ, ಸಾಮಾಜಿಕ ಮತ್ತು ಆರ್ಥಿಕ ಆರ್ಥಿಕ ನ್ಯಾಯವನ್ನು ಕೊಡುವಂಥ ಬಹಳ ಅದ್ಭುತವಾದಂಥ ಕೆಲಸವನ್ನು ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಸಾಮಾನ್ಯವಾಗಿ ಅಧಿಕಾರ ಎಲ್ಲರಿಗೂ ಬರುತ್ತದೆ. ಆದರೆ ಅಧಿಕಾರದ ಉಪಯೋಗ ಅವರು ನಂಬಿದಂಥ ಸಿದ್ಧಾಂತ ಮತ್ತು ತತ್ವದ ಆಧಾರದ ಹಿನ್ನಲೆಯಲ್ಲಿ ಅದು ಹಂಚಿಕೆಯಾಗುತ್ತದೆ. ಮಾನ್ಯ ಸಿದ್ದರಾಮಯ್ಯನವರು ಸಮಾಜವಾದಿ ಚಳುವಳಿಯಿಂದ ಬಂದಂಥವರು, ರೈತರ ಚಳುವಳಿಯಿಂದ ಬಂದಂಥವರು ಮತ್ತು ಬಡತನದ ಅನುಭವವನ್ನು ಕಂಡಿರತಕ್ಕಂಥವರು ಮತ್ತು ಈ ಕರ್ನಾಟಕ ರಾಜ್ಯದ ಆರ್ಥಿಕ ವಿಷಯದಲ್ಲಿ ಅಪಾರವಾದಂಥ ಅನುಭವವನ್ನು ಇಟ್ಟುಕೊಂಡಂಥವರು. ಅವರು ಉತ್ತಮವಾದಂಥ ಪ್ರಯತ್ನವನ್ನು ಮಾಡಿದ್ದಾರೆ. ತಮಗೂ ಗೊತ್ತಿದೆ, Might is right ಎಂದು ನಾವು ಓದಿದ್ದೇವೆ. ಯಾವನಿಗೆ ಬಲ ಇರುತ್ತದೆ, ಅವನಿಗೆ ಅದರ ಲಾಭವೂ ಸಿಗುತ್ತದೆ. ಆದರೆ ಇವತ್ತಿನ ಈ ಬಜೆಟ್‌ನಲ್ಲಿ ಯಾರು ನಿರ್ಗತಿಕರಿದ್ದಾರೆ, ಯಾರಿಗೆ ಶಕ್ತಿಯಿಲ್ಲ, ಯಾರಿಗೆ ಧ್ವನಿಯಿಲ್ಲ, ಯಾರು ಕಷ್ಟದಲ್ಲಿದ್ದಾರೆ, ಯಾರು ನೊಂದಿದ್ದಾರೆ, ಅಂಥವರಿಗೂ ಕೂಡ ಈ ರಾಜ್ಯದ ಪಾಲನ್ನು ಕೊಡುವಂಥ ಕೆಲಸವನ್ನು ಮಾಡಿದ್ದಾರೆ.

ಶ್ರೀ ಸಿ.ಟಿ. ರವಿ: ಒಂದು ಗಾದೆ ಮಾತು ಇದೆಯಲ್ಲ, ಅಧಿಕಾರ ಇಲ್ಲದೇ ಇದ್ದಾಗ, ಹೋರಾಟ ಮಾಡುತ್ತಿದ್ದಾಗ 'ಸಮಾಜವಾದ', ಅಧಿಕಾರ ಬಂದಾಗ 'ಸ' ತೆಗೆದು ಬರೀ ಮಜವಾದ.

ಶ್ರೀ ಬಿ.ಆರ್. ಪಾಟೀಲ್: ಸಿದ್ದರಾಮಯ್ಯನವರು ಮಜಾ ಮಾಡುತ್ತಾರೆ ಎಂದು ನೀವು ಹೇಳಿದರೂ ಯಾರೂ ನಂಬುವುದಿಲ್ಲ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಸಿ.ಟಿ. ರವಿ: ನಾನು ಅವರಿಗೆ ವ್ಯಕ್ತಿಗತವಾಗಿ ಹೇಳಲಿಲ್ಲ. ಸಮಾಜವಾದದ ಹಿನ್ನಲೆಯಿಂದ ಬಂದಂಥವರು ಎಂದು ಹೇಳಿದಿರಲ್ಲ, ಅದಕ್ಕಾಗಿ ಹೇಳಿದೆ. ಮುಲಾಯಂಸಿಂಗ್ ಯಾದವ್ ಸಮಾಜವಾದಿ, ಲಾಲೂ ಪ್ರಸಾದ್ ಯಾದವ್ ಸಮಾಜವಾದಿ, ಸಿದ್ದರಾಮಯ್ಯನವರು ಸಮಾಜವಾದಿ.

ಶ್ರೀ ಬಿ.ಆರ್. ಪಾಟೀಲ್: ನೀವು ರಾಷ್ಟ್ರವಾದಿಗಳಾಗಿ, ರಾಷ್ಟ್ರಭಕ್ತರಾಗಿ ಏನೇನು ಮಾಡಿದ್ದೀರಿ ಎನ್ನುವುದನ್ನೂ ಕೂಡ ಹೇಳೋಣ. ನೀವು ರಾಷ್ಟ್ರಭಕ್ತರು, ರಾಷ್ಟ್ರದ ಉದ್ಧಾರ ಎಷ್ಟು ಮಾಡಿದ್ದೀರಿ ಎನ್ನುವುದು ನಮಗೂ ಗೊತ್ತಿದೆ.

ಶ್ರೀ ಸಿ.ಟಿ. ರವಿ: 100% ನಾವು ರಾಷ್ಟ್ರವಾದಿಗಳೇ. ಬೇಕಾದರೆ ಚರ್ಚೆ ಮಾಡೋಣ. ರಾಜ್ಯಸಭಾ ಕೋಟಾಗೆ ಯಾರ್ಯಾರು ಎಷ್ಟೆಷ್ಟು . . . . . ಎಂದು ಚರ್ಚೆ ಮಾಡೋಣ.

ಶ್ರೀ ಬಿ.ಆರ್. ಪಾಟೀಲ್: ಏನಾಗಿದೆ ಎಂದರೆ, ರಾಷ್ಟ್ರಭಕ್ತರು ಎಂದರೆ ನಾವೇ ಎಂದುಕೊಂಡಿದ್ದಾರೆ, ಅದನ್ನು ಇವರೇನು ಗುತ್ತಿಗೆ ತೆಗೆದುಕೊಂಡಿದ್ದಾರೆಯೇ? ಈ ರಾಷ್ಟ್ರದಲ್ಲಿ ಹುಟ್ಟಿದಂಥ ಎಲ್ಲರೂ ಕೂಡ ನಾವು ರಾಷ್ಟ್ರದ ಭಕ್ತರು ಎಂದು ಅವರಿಗೆ ಹೇಳಲು ಇಷ್ಟಪಡುತ್ತೇನೆ. ಹೀಗಾಗಿ ವಿತಂಡವಾದವನ್ನು ಮಾಡುವುದು ಬೇಡ. ಸ್ವಲ್ಪ ಕೆಣಕಬೇಕು ಎನ್ನುವ ಸ್ವಭಾವ ರವಿಯವರಿಗೆ ಯಾವತ್ತೂ ಇದೆ. ಅದನ್ನು ಅವರು ಎಲ್ಲಿಂದ training ಪಡೆದರೋ ಗೊತ್ತಿಲ್ಲ. ಯಾವ ಸಂಘ ಪರಿವಾರದಿಂದ ಪಡೆದರೋ, ನಿಮಗೆ ಯಾರು training ಕೊಟ್ಟರೋ ಗೊತ್ತಿಲ್ಲ.

ಶ್ರೀ ತನ್ವೀರ್ ಸೇಠ್: ಸವದಿಯವರ ಪಕ್ಕ ಕುಳಿತಿದ್ದಾರಲ್ಲ.

ಶ್ರೀ ಬಿ.ಆರ್. ಪಾಟೀಲ್: ಲಕ್ಷ್ಮಣ ಸವದಿಯವರು ಸಂಘ ಪರಿವಾರದಿಂದ ಹೋಗಿಲ್ಲ ಎಂದು ಕಾಣುತ್ತದೆ. ಬಹುಶ: training ಕೊಟ್ಟವರೆಲ್ಲ ಖಾಲಿಯಾಗಿದ್ದಾರೆ.

ಶ್ರೀ ಸಿ.ಟಿ. ರವಿ: ಅವರು ಜನತಾ ಪರಿವಾರದಿಂದ ಸಂಘ ಪರಿವಾರಕ್ಕೆ ಬಂದಿದ್ದಾರೆ. ಆದರೆ ನೀವು ಯಾವುದನ್ನೂ ಪೂರ್ಣ ಮಾಡಲಿಲ್ಲ. ಎಲ್ಲವನ್ನೂ ಸ್ವಲ್ಪಸ್ವಲ್ಪ ಮುಟ್ಟಿಬಿಟ್ಟು ಹೋದಿರಿ.

ಶ್ರೀ ಬಿ.ಆರ್. ಪಾಟೀಲ್: ನಮ್ಮದು ಹೋರಾಟದ ಬದುಕು. ನಾವು ಎಲ್ಲೇ ಇರಲಿ, ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು, ವ್ಯವಸ್ಥೆಯನ್ನು ಸುಧಾರಣೆ ಮಾಡಬೇಕು, ಸಮಾನತೆಯನ್ನು ತರಬೇಕು ಎನ್ನುವ ಹೋರಾಟದಲ್ಲಿ ನಾವು ಏಳುಬೀಳುಗಳನ್ನು ನೋಡಿಕೊಂಡು ಬಂದಿದ್ದೇವೆ. ಮನಸ್ಸಿಗೆ ತೃಪ್ತಿ ಇದೆ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ನೀವು ಮಾತನಾಡುವುದನ್ನು ಆನಂದದಿಂದ ಕುಳಿತು ಕೇಳಬೇಕು ಎಂದು ನನಗೆ ಒಂದು ಕಡೆಯಾದರೆ ಇನ್ನೊಂದು ಕಡೆ ನಿಮ್ಮ ಬಗ್ಗೆ ಮರುಕ. ಏಕೆಂದರೆ, ಮೊದಲೆಲ್ಲ ನಾವು ನೋಡುತ್ತಿದ್ದ ಹಾಗೆ ಪ್ರಾರಂಭದಲ್ಲಿ ವಿರೋಧ ಪಕ್ಷದ ನಾಯಕರು, ಉಪನಾಯಕರು ಹೀಗೆ ಮಾತನಾಡುತ್ತಾ ಹೋಗಿ floor leaders ಎಲ್ಲರೂ ಮಾತನ್ನು ಮುಗಿಸುತ್ತಿದ್ದರು. ಆಮೇಲೆ ಎರಡನೇ ಲೈನು, ಮೂರನೇ ಲೈನಿಗೆ ಹೋಗುತ್ತಿತ್ತು. ಈಗ ಹೇಗಾಗಿದೆ ಎಂದರೆ, ಹಳ್ಳಿಗಳಲ್ಲಿ ಕುಸ್ತಿ ಆಡಿಸುತ್ತೇವೆ. ಹೇಗೆ ಆಡಿಸುತ್ತೇವೆ ಎಂದರೆ ಮೊದಲಿಗೆ ಬಾಳೆಕಾಯಿ ಪೈಲ್ವಾನರನ್ನು ಕರೆಯುತ್ತೇವೆ, ಇಬ್ಬರನ್ನು ಹಚ್ಚುವುದು, ಕುಸ್ತಿ ಆಡಿಸುವುದು, ಬಾಳೆಕಾಯಿ ಕೊಟ್ಟು ಕಳುಹಿಸಿಬಿಡುವುದು, ಆಮೇಲೆ ತೆಂಗಿನಕಾಯಿಯವರನ್ನು ಕರೆಯುತ್ತೇವೆ, ಅವರನ್ನು ಕುಸ್ತಿ ಆಡಿಸುವುದು, ಅವರ ಕೈಗೆ ತೆಂಗಿನಕಾಯಿ ಕೊಟ್ಟು ಕಳುಹಿಸುವುದು, ಕೊನೆಗೆ ಯಾರು ಉಳಿಯುತ್ತಾರೆ ಎಂದರೆ ಗದೆ ತೆಗೆದುಕೊಳ್ಳುವವರು, ಖಡ್ಗ ತೆಗೆದುಕೊಳ್ಳುವವರು ಕಡೆಗೆ ಉಳಿಯುತ್ತಾರೆ. ಈ ಗೌಡರು ಈಗ ಗದೆ ತೆಗೆದುಕೊಳ್ಳುವುದಕ್ಕೆ ಹೋಗುತ್ತಿದ್ದಾರೋ, ಖಡ್ಗ ತೆಗೆದುಕೊಳ್ಳುವುದಕ್ಕೆ ಹೋಗುತ್ತಿದ್ದಾರೋ, ಬಾಳೆಕಾಯಿ ತೆಗೆದುಕೊಳ್ಳುವುದಕ್ಕೆ ಹೋಗುತ್ತಾರೋ ಎನ್ನುವುದೇ ತಿಳಿಯದಂತಾಗಿದೆ. ಅದಕ್ಕೆ ನನಗೆ ಒಂದು ಕಡೆ ಖುಷಿ, ಒಂದು ಕಡೆ ಮರುಕ ಆಗುತ್ತಿದೆ.

ಶ್ರೀ ಬಿ.ಆರ್. ಪಾಟೀಲ್: ನಾನು ಯಾವತ್ತೂ ಕೂಡ ಯಾರನ್ನೂ ಖುಷಿ ಪಡಿಸುವ ಸ್ವಭಾವದವನಲ್ಲ. ಆ ರೀತಿಯ ಸ್ವಭಾವ ಇದ್ದಿದ್ದರೆ ನಾನು ಬಹಳ ಮುಂದೆ ಹೋಗುತ್ತಿದ್ದೆ. ಆದರೆ ಇದ್ದಂಥ ವಿಷಯವನ್ನು ನೇರವಾಗಿ ಹೇಳುವಂಥ ಸ್ವಭಾವ ನನ್ನದು.

(ಗೊಂದಲ)

ಶ್ರೀ ಸಿ.ಟಿ. ರವಿ: ನೋಡಿ, ನಮ್ಮ ಸಮಾಜ ಕಲ್ಯಾಣ ಖಾತೆಯ ಸಚಿವರು ಸದನಕ್ಕೆ ಬಂದರು. ನಿನ್ನೆಯಷ್ಟೇ ಕಿರೀಟ ಇಟ್ಟು, ಖಡ್ಗ ಕೊಟ್ಟು ಬಂದಿದ್ದಾರೆ. ಗುಂಡ್ಲುಪೇಟೆ, ನಂಜನಗೂಡಿಗೆ ಹೋಗಿ ಕೊಟ್ಟು ಬಂದಿದ್ದಾರೆ.

(ಗೊಂದಲ)

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಎಂ.ಕೆ. ಸೋಮಶೇಖರ್: ಇದ್ದುದ್ದನ್ನು ಇದ್ದ ಹಾಗೆ ಹೇಳಿದರೆ ಇವರಿಗೆ ಸಹಿಸಿಕೊಳ್ಳಲು ಆಗುವುದಿಲ್ಲ. ಇದ್ದದ್ದು ಇದ್ದ ಹಾಗೆ ಹೇಳಿದರೆ ಏನೋ ಬಂದು ಒದೆಯಿತಂತೆ.

(ಗೊಂದಲ)

(ಮುಂದುವರೆದಿದೆ)

27-03-2017 : 7-20 [49] kkd:hs 1

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ನಮ್ಮ ಸಮಾಜ ಕಲ್ಯಾಣ ಸಚಿವರಾದ ಆಂಜನೇಯ ಸಾಹೇಬರು ಬಂದಿದ್ದಾರೆ. ನೀವು ಬಂದಿರುವುದಕ್ಕೆ ನನಗೆ ಪ್ರೇರಣೆ ಆಯಿತು. ನಾವು ಗರಡಿ ಮನೆಯಲ್ಲಿ ಎಲ್ಲೂ ಯಾವುದೇ photo ಹಾಕುವುದಿಲ್ಲ. ನಾವು ಗರಡಿ ಮನೆಯಲ್ಲಿ ಯಾರದೂ photo ಹಾಕುವುದಿಲ್ಲ, ಬರೀ ಆಂಜನೇಯ photo ಒಂದೇ ಹಾಕುವುದು. ಅದಕ್ಕೆ ಸಮಾಜ ಕಲ್ಯಾಣ ಇಲಾಖೆ ಸಚಿವರಿಗೆ ಕೈಮುಗಿದು ಕೇಳಿಕೊಳ್ಳುತ್ತೇನೆ, ಈ ಗರಡಿ ಮನೆಗೆ ಐದೈದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಶೌಚಾಲಯ ಸಹ ಕಟ್ಟುವುದಕ್ಕಾಗುವುದಿಲ್ಲ. ಆ ಗರಡಿ ಮನೆಗೆ ಕನಿಷ್ಟ ಪಕ್ಷ ತಾಲ್ಲೂಕಿಗೆ ಒಂದು ಹಾಸ್ಟೆಲು, ಒಂದು ಗರಡಿ ಮನೆ ಕೊಡಿ. ಇದರಿಂದ ಅವರ ಶಿಕ್ಷಣವೂ ಆಗುತ್ತದೆ, ಕುಸ್ತಿಯನ್ನೂ ಕಲಿಯುತ್ತಾರೆ, ಈ ಕುಸ್ತಿ ಕಲಿಯುವ ಸಂದರ್ಭದೊಳಗೆ ವಿದ್ಯಾಭ್ಯಾಸವೂ ಆಗುತ್ತದೆ. ಅದೊಂದನ್ನು ತಾವು ಮಾಡಿರಿ ಎಂದು ಕೇಳಿಕೊಳ್ಳುತ್ತೇನೆ. ನೀವು ಸದ್ಯಕ್ಕೆ ಗರಡಿ ಕಡೆಗೆ ಹೋಗಲಿಲ್ಲವೇನು?

ಶ್ರೀ ಬಿ.ಆರ್. ಪಾಟೀಲ್: ಸವದಿಯವರೆ, ನಾನು ನಿಮ್ಮ ಜೊತೆಗೆ ಸ್ವಲ್ಪ ಸಹಮತ ವ್ಯಕ್ತಪಡಿಸಿದ್ದೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ದೊಡ್ಡ ಫೈಲ್ವಾನರೇ ಬಂದರು ಬಿಡಿರಿ, ಇನ್ನೇನಿದೆ?

ಛೇರ್ಮನ್: ಇನ್ನೂ 4-5 ಜನರು ಮಾತನಾಡುವುದಕ್ಕಿದ್ದಾರೆ.

ಶ್ರೀ ಬಿ.ಆರ್.ಪಾಟೀಲ್: ನಾನು ಮಾತನಾಡುತ್ತಿದ್ದೆ, ರವಿಯವರು ಮಾತಿನ ಮಧ್ಯೆ ಬಂದರು.

ಛೇರ್ಮನ್: ನೀವು yield ಆಗಬೇಡಿ.

(ಗೊಂದಲ)

27-03-2017

ಶ್ರೀ ಬಿ.ಬಿ. ನಿಂಗಯ್ಯ: ಚರ್ಚೆ ಮಧ್ಯೆ ತಮಾಷೆಯ ಮಾತುಗಳು ಇಲ್ಲದಿದ್ದರೆ ಕುಳಿತುಕೊಳ್ಳುವುದಕ್ಕೆ ಬೇಜಾರು ಆಗುತ್ತದೆ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್: ತಾವು ಸಭಾಧ್ಯಕ್ಷರ ಸ್ಥಾನದಲ್ಲಿ ಕುಳಿತಿದ್ದೀರಿ. ಒಬ್ಬರೋ ಇಬ್ಬರೋ ಮಂತ್ರಿಗಳು ಕುಳಿತಿದ್ದರು. ನೋಡಿ, ಈ ಚರ್ಚೆ ಆರಂಭವಾದ ಹಾಗೆ ಇನ್ನೊಬ್ಬರು ಮಂತ್ರಿಗಳು join ಆದರು.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: Photoವನ್ನು ನಾವು ಗರಡಿ ಮನೆಯವರು ಹಾಕುತ್ತೇವೆಂದ ಕೂಡಲೇ ಮಾನ್ಯ ರಮೇಶ್ ಕುಮಾರ್‌ರವರು ಬಂದುಬಿಟ್ಟರು, ಇವನು ಮತ್ತೆ ಏನು ಹಾಕುತ್ತಾನೋ ಎಂದು.

ಶ್ರೀ ಬಿ.ಆರ್. ಪಾಟೀಲ್: ನಮಗೇನೆಂದರೆ, ಎಲ್ಲಿ ಅಪ್ರಾತವಾದಂಥ ಹೆಚ್ಚಿನ ಸಂಖ್ಯೆಯ ಬಜೆಟ್ ಇದೆ ಆ ಮಂತ್ರಿಯೇ ಜಾಸ್ತಿ ಸದನಕ್ಕೆ ಬರುವುದಿಲ್ಲ, ಇವರು ಬಂದರಲ್ಲ ಎಂದು ನಮಗೆ ಖುಷಿ ಆಯಿತು. ಹೋಳಿಗೆ ತುಪ್ಪ ಸಿಗುತ್ತದೋ ಗೊತ್ತಿಲ್ಲ, ಅವರು ಬಂದರೆ ಸಾಕು ನಮಗೆ.

ಶ್ರೀ ಬಿ.ಬಿ. ನಿಂಗಯ್ಯ: ರಮೇಶ್ ಕುಮಾರ್ ಸಾಹೇಬರು ಮಂತ್ರಿಗಳಾದ ಮೇಲೆ ಆ ಇಲಾಖೆಗೆ ಒಂದು ಹೊಸ ಕಾಯಕಲ್ಪ ಆಗುತ್ತಿದೆ. ಅದಕ್ಕಾಗಿ ಅವರಿಗೆ ಅಭಿನಂದಿಸುತ್ತೇವೆ.

ಛೇರ್ಮನ್: ಅವರು ಮಾತನಾಡಲಿ, ಇನ್ನೂ ತುಂಬಾ ಸದಸ್ಯರು ಮಾತನಾಡುವವರಿದ್ದಾರೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ನಮ್ಮೆಲ್ಲರ ಸಮಯವನ್ನು ಬಿ.ಆರ್. ಪಾಟೀಲರಿಗೇ ಧಾರೆ ಎರೆದು ಕೊಡುತ್ತೇವೆ. ಅವರು ಇನ್ನೂ ಅರ್ಧ ಗಂಟೆ ಮಾತನಾಡಲಿ, ಆಮೇಲೆ ಕುಳಿತುಕೊಳ್ಳಲಿ. ಎಷ್ಟು ಮಾತನಾಡುತ್ತಾರೋ ನೋಡೋಣ.

ಶ್ರೀ ಬಿ.ಬಿ. ನಿಂಗಯ್ಯ: ಅವರು senior member, ಮಾತನಾಡಲಿ ಬಿಡಿ ಸರ್.

ಶ್ರೀ ಬಿ.ಆರ್.ಪಾಟೀಲ್: ಮಾನ್ಯ ಛೇರ್ಮನ್‌ರವರೆ, ವಿಷಯ ಬಹಳ ವಿಸ್ತಾರವಾಗಿದೆ, ಸಮಯ ಜಾಸ್ತಿಯಾಗಿದೆ, ಸಮಯದ ಅಭಾವವನ್ನು ಅರ್ಥಮಾಡಿಕೊಂಡು ನಾನು ಮಾತನಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇಷ್ಟೆಲ್ಲ ಪ್ರಾಮಾಣಿಕವಾದ ಪ್ರಯತ್ನ ಮಾಡಿ ಆರ್ಥಿಕ ಶಕ್ತಿಯನ್ನು ಕೊಡಲು, ಸಾಮಾಜಿಕ ನ್ಯಾಯ ಕೊಡಲು ಸಾಕಷ್ಟು ಪ್ರಯತ್ನವನ್ನು ಪಡುತ್ತಿದ್ದಾರೆ, ಪಟ್ಟಿದ್ದಾರೆ. ಈ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮಧ್ಯೆ ರೈತರಿಗೆ ಏನೂ ಮಾಡಿಲ್ಲವೆನ್ನುವಂಥ ಮಾತು ಕೂಡ ಕೇಳಿಬರುತ್ತಿದೆ. ರೈತರ ಸಾಲ ಮನ್ನಾ ಮಾಡಬೇಕಾಗಿತ್ತು. ಅದನ್ನು ಕಾರಣಾಂತರಗಳಿಂದ ಮಾಡಿಲ್ಲ. ಒಂದು ವಾದವನ್ನು ನಿರಂತರವಾಗಿ ಹೇಳುತ್ತಿದ್ದಾರೆ. ರಾಜ್ಯ ಸರ್ಕಾರ ಸಹಕಾರಿ ಸಾಲವನ್ನು ನಾನು ಮನ್ನಾ ಮಾಡುತ್ತೇನೆ, ಕೇಂದ್ರ ಸರ್ಕಾರ ತಮ್ಮ ರಾಷ್ಟ್ರೀಕೃತ ಬ್ಯಾಂಕುಗಳಿಂದ ಕೊಟ್ಟಂಥ ಸಾಲವನ್ನು ಮನ್ನಾ ಮಾಡಿರಿ ಎನ್ನುವ ಮಾತಿಗೆ ಇವತ್ತೂ ಕೂಡ ಬದ್ಧರಾಗಿದ್ದಾರೆ. ಆದರೆ, ಒಂದು ಮಾತು ಹೇಳುತ್ತೇನೆ. ಪುಟ್ಟಣ್ಣಯ್ಯನವರು ಈಗತಾನೆ ಹೊರಕ್ಕೆ ಹೋದರು. ಈ ಸಾಲಮನ್ನಾದಿಂದ ರೈತರ ಸಮಸ್ಯೆ ಪರಿಹಾರ ಆಗುತ್ತದೋ? ಆಗಬಾರದೆಂದಲ್ಲ. ಸರ್ಕಾರದವರು ರೈತರ ಒಂದು ಕೃಷಿ ಬೆಲೆ ನೀತಿ ಆಯೋಗವನ್ನು ಮಾಡಿದ್ದಾರೆ. ರಮೇಶ್ ಕುಮಾರ್‌ರವರು ಮಂತ್ರಿಯಾಗಿರಲಿಲ್ಲ. ನಾನು ಮತ್ತು ರಮೇಶ್ ಕುಮಾರ್‌ರವರು Agriculture Price and Cost Commission ಮಾಡಿರಿ ಎಂದು ಹೇಳುತ್ತಿದ್ದೆವು. ನೀವು ಬರೀ ಕೃಷಿ ಬೆಲೆ ಆಯೋಗ ಮಾಡಿದರೆ ಆಗುವುದಿಲ್ಲ, ಕೃಷಿ ಬೆಲೆ ಜೊತೆಗೆ cost ಬಗ್ಗೆ ಕೂಡ ಆಯೋಗ ಅಧ್ಯಯನ ಮಾಡಿ ಒಂದು ವರದಿ ಕೊಟ್ಟರೆ ನಿಜವಾಗಿಯೂ ಕೂಡ ಒಂದು sustainable agriculture ಮಾಡುವುದಕ್ಕೆ ಸಾಧ್ಯತೆ ಆಗುತ್ತದೆ. ಆಮೇಲೆ, ಸರ್ಕಾರಕ್ಕೆ ನಾನೊಂದು ಪ್ರಶ್ನೆ ಕೇಳುತ್ತೇನೆ. ಕೃಷಿ ಬೆಲೆ ಆಯೋಗದವರು ಈಗಾಗಲೇ ಒಂದು ಶಿಫಾರಸ್ಸನ್ನು ಮಾಡಿದ್ದಾರೆ. ಎಷ್ಟು ಶಿಫಾರಸ್ಸುಗಳನ್ನು ಸರ್ಕಾರದವರು ಒಪ್ಪಿದ್ದೀರಿ? ಇಡೀ ಕೃಷಿಗೆ 500 ಕೋಟಿ ರೂಪಾಯಿಗಳನ್ನು ಈ ಆವರ್ತ ನಿಧಿಯಾಗಿ ನೀವು ಕೊಡಬೇಕೆಂದು ಶಿಫಾರಸ್ಸನ್ನು ಮಾಡಿದರೂ ಇವತ್ತಿಗೂ ಕೂಡ ನೀವು ಶಿಫಾರಸ್ಸನ್ನು ಒಪ್ಪಿಲ್ಲ. ರಾಜಣ್ಣನವರು ಬಹಳ ಚೆನ್ನಾಗಿ, ಸರಿಯಾಗಿ ಹೇಳಿದರು. ಇವತ್ತು ರೈತರು ಏನು ಸಾಲ ತೆಗೆದುಕೊಳ್ಳುತ್ತಾರೆ, ಅವರ ಸಂಖ್ಯೆ ಬಹಳ ಕಡಿಮೆ ಇದೆ. ಸಂಪೂರ್ಣ ರೈತರಿಗೆ ಸಾಲದ ಸೌಲಭ್ಯ ಸಿಗುತ್ತಿಲ್ಲ. ಹಾಗಾಗಿ ಇವತ್ತು ರೈತರ ಸಾಲ ಮನ್ನಾ ಮಾಡುವುದರಿಂದ ಮಾತ್ರ ರೈತರು ಉದ್ಧಾರವಾಗುತ್ತಾರೆಂದರೆ ನಾನು ಒಪ್ಪುವುದಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಆರೋಗ್ಯ ಸಚಿವರು): ಮಾನ್ಯ ಛೇರ್ಮನ್‌ರವರೆ, ರೈತ, ರೈತನ ಕಲ್ಪನೆ, ಸಾಲದ ವ್ಯವಸ್ಥೆ ಇದರ ಬಗ್ಗೆ ಅಭ್ಯಾಸ, ಅಧ್ಯಯನ ಇಲ್ಲದೆ ಬಹಳ ಜನರು ಮಾತನಾಡುತ್ತಾರೆ. ರೈತ ಎಂದರೆ ಬರೀ ಭೂಮಿ ಇದ್ದವನು ಮಾತ್ರ ಅಲ್ಲ. ರೈತ, ರೈತನನ್ನು

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅವಲಂಬಿಸಿ ಬದುಕತಕ್ಕಂಥ ರೈತ, ಕೃಷಿ ಕಾರ್ಮಿಕ ಬರುತ್ತಾನೆ. ಈಗ ನಮಗೆ credit facilities ಇರುವುದು ಯಾವುದೆಂದರೆ, Co-operation Minister ಆಗಿ ಕೆಲಸ ಮಾಡಿದಂಥ ಲಕ್ಷ್ಮಣ ಸಂಗಪ್ಪ ಸವದಿಯವರು ಇಲ್ಲಿದ್ದಾರೆ. Primary Agricultural Cooperative Societies (PACS) ಎಂದು, ಅವರು short term loan, medium term loan ಕೊಡುತ್ತಾರೆ, long term loan ಕೊಡುವುದಿಲ್ಲ. Long term loan ಕೊಡುವುದಕ್ಕೆ ಇಡೀ ರಾಜ್ಯದಲ್ಲಿ ಇರತಕ್ಕಂಥದ್ದು PCARD banks. PCARD banks 90% banks ಎಲ್ಲ ineligible ಆಗಿವೆ. Defunct ಆಗಿಲ್ಲ. ಸಾಲ ಕೊಡುವುದಕ್ಕೆ ಅರ್ಹತೆ ಕಳೆದುಕೊಂಡಿವೆ. ಇವರಿಗೆ ಸಾಲ ಕೊಡತಕ್ಕಂಥದ್ದು Nationalized banks. ಸಂಸ್ಥೆ ಸುಸ್ತಿದಾರ ಆದರೆ ಅವರು ಸಾಲ ಕೊಡುವುದಕ್ಕೆ ಅರ್ಹತೆ ಕಳೆದುಕೊಂಡು ಬಿಡುತ್ತಾರೆ. Individual farmer ಗೆ ಅರ್ಹತೆ ಇದ್ದರೂ ಕೊಡುವುದಕ್ಕೆ ಬರುವುದಿಲ್ಲ. ಆವಾಗ ಇವರು ಸಾಲಕ್ಕೆ ಎಲ್ಲಿಗೆ ಹೋಗಬೇಕು? Commercial banks, Nationalized banksಗೆ ಹೋಗಬೇಕು. Commercial banks ನಲ್ಲಿ ನಮಗೆ ಯಾವ concessions ಇಲ್ಲ. ನಾವು Cooperative sector ನಲ್ಲಿ 3% interest, zero percent interest ಇನ್ನೊಂದು ಮತ್ತೊಂದು ಮಾತನಾಡುತ್ತೇವೆಲ್ಲ, ಇದೆಲ್ಲ ಯಾರಿಗೆ ಗೊತ್ತಾ? Only 6% of the farmers of the Stateಗೆ. ಹೆಚ್ಚಿಗೆ ಜನ members ಆಗಿಲ್ಲ. ಮಾನ್ಯ ಬಿ.ಆರ್. ಪಾಟೀಲರಿಗೆ ನಾನು ಇಷ್ಟೇ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊನ್ನೆ ಕೂಡ ನಮ್ಮ ವೇದಿಕೆಯಲ್ಲಿ ನಾನು ಮುಖ್ಯಮಂತ್ರಿಯವರಿಗೆ ನಿವೇದನೆ ಮಾಡಿಕೊಂಡೆ. ಇಡೀ ರಾಜ್ಯಕ್ಕೆ ಒಂದು ಕೃಷಿ ಬೆಲೆ ಆಯೋಗ ಮಾಡತಕ್ಕಂಥದ್ದು ಅವೈಜ್ಞಾನಿಕ. ಪ್ರಾಂತ್ಯವಾರು, ನೀವು region-wise ಮಾಡಿ ಅಥವಾ district-wise ಮಾಡಿ. ಚಿಕ್ಕಮಗಳೂರಿನಲ್ಲಿರುವ ಸಮಸ್ಯೆ ಬೇರೆ, ಕೋಲಾರದಲ್ಲಿರುವ ಸಮಸ್ಯೆ ಬೇರೆ, ಗುಲಬರ್ಗಾದಲ್ಲಿರುವ ಸಮಸ್ಯೆ ಬೇರೆ. ಅಲ್ಲಿಯ ಹವಾಮಾನ, ಭೂಮಿಯ ಗುಣ, ರೈತ ಯಾವುದನ್ನು ಬೆಳೆಯುತ್ತಾನೆ ಅದಕ್ಕೆ ಹೊಂದಿಕೊಂಡು ಅವನಿಗೆ ಏನು ಖರ್ಚು ಬೀಳುತ್ತದೆ ಎಂದು ಲೆಕ್ಕ ಹಾಕಿ, ಧಾರಣೆವಾಸಿ ಏನಿದೆ ಎಂದು ನೋಡಿಕೊಂಡು ಅವನಿಗೆ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಏನು market price ಕೊಡಬೇಕೆನ್ನುವುದನ್ನು decide ಮಾಡಿ. Fertilizers price ಯಾರು decide ಮಾಡುವುದು? Farmer? Central Government? State Government? Manufacturer? ಹೌದಲ್ಲ ಸವದಿಯವರೆ? Seeds rate ಅನ್ನು ಯಾರು decide ಮಾಡುವುದು? Seeds Company. Pesticides rate decide ಮಾಡುವುದು ಅವರೇ. ಇವು ಯಾವುದಕ್ಕೂ ಸರ್ಕಾರದ control ಇಲ್ಲ. ಸಾಲ ಮನ್ನಾ ಯಾರಿಗೆ ಯಾವುದಕ್ಕೆ ಮಾಡುವುದು? ನಾನು ಸಾಲ ಮಾಡಿದ್ದೇನೆ. ನನ್ನದು tractor ಮೇಲೆ ಸಾಲ ಇದೆ, poly houseಗೆ ಸಾಲ ತೆಗೆದುಕೊಂಡಿದ್ದೇನೆ, ಬೇರೆ ಇನ್ನೊಂದಕ್ಕೂ ಸಾಲ ತೆಗೆದುಕೊಂಡಿದ್ದೇನೆ. ಮೂರು ತರಹದ ಸಾಲ ತೆಗೆದುಕೊಂಡಿದ್ದೇನೆ, ಇದರಲ್ಲಿ ನನ್ನದು ಯಾವ ಸಾಲವನ್ನು ಮನ್ನಾ ಮಾಡುತ್ತೀರಿ? ಸಾಲ ಮನ್ನಾ ಮಾಡಿಬಿಡುತ್ತೀರಿ. ಮತ್ತೆ ನನಗೆ ಸಾಲ ಬೇಕಾಗಿದ್ದರೆ ಹೇಗೆ? Credit system ಅನ್ನು ಕಡಿಮೆ rate of interest ನಲ್ಲಿ ರೈತನಿಗೆ ಸಿಗುವ ಹಾಗೆ ಮಾಡಿ ಎಂದು ಕೇಳಬೇಕು. No. of farmers ಎಲ್ಲರೂ ಕೂಡ ನಿಮ್ಮ societyಗಳನ್ನು revamp ಮಾಡಿ, panchayat-wise ಮಾಡಿ, ಎಲ್ಲ members ಅನ್ನು ಕೂಡ ಅದರ ವ್ಯಾಪ್ತಿಗೆ ತಂದು ಕಡಿಮೆ rate of interest ಗೆ 4%, 3% ಬಡ್ಡಿಗೆ ಸಾಲ ಸಿಗುವ ಹಾಗೆ ಮಾಡಿದರೆ ನಾವ್ಯಾರೂ ರೈತರು ಸಾಲ ಮನ್ನಾ ಕೇಳುವುದಿಲ್ಲ. ನಮ್ಮದು ಖರ್ಚು ಎಷ್ಟಾಗುತ್ತದೆಂದು ಕೇಳಿಕೊಂಡು ನಮಗೆ price fix ಮಾಡಿ. ಮತ್ತೆ ಇವೇನಿವೆ, ರಾಸಾಯನಿಕ ಗೊಬ್ಬರಗಳಾಗಲಿ, ಕ್ರಿಮಿಕೀಟಕಗಳಾಗಲಿ ಅಥವಾ ಬೀಜ ಆಗಲಿ, ಇವುಗಳ ಮೇಲೆ ಸರ್ಕಾರ control ತರಬೇಕು. ಯೂರಿಯಾ manufacture ಮಾಡುವುದಕ್ಕೆ ಏನು ಬೇಕಾಗುತ್ತದೆಂದು assess ಮಾಡಬೇಕು. You can't go beyond this ಎಂದು ಹೇಳಬೇಕು. ಅವರಿಗೆ ನಾವು ಲಗಾಮು ಇಲ್ಲದೆ ಬಿಟ್ಟುಬಿಟ್ಟು, ನಾನು ಯೂರಿಯಾವನ್ನು ಹಾಕಲೇಬೇಕು, DAPಯನ್ನು ನಾನು ತೆಗೆದುಕೊಳ್ಳಲೇಬೇಕು, Phosphate ನನಗೆ ತಪ್ಪಿದ್ದೇ ಅಲ್ಲ. ನಮ್ಮ ರೈತನ economy ಏನಿರುತ್ತದೆ, ಈಗ ಅವನು accept ಮಾಡುವುದಿಲ್ಲ. So, comprehensive ಆಗಿ ಮಾತನಾಡಬೇಕು ಬಿ.ಆರ್.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಪಾಟೀಲರೆ. Agriculture Price Commissions should be region-wise or district-wise. The Governments, both Central and State Governments fertilizer ಮೇಲೆ, pesticides ಮೇಲೆ, seeds ಮೇಲೆ control ಇಟ್ಟುಕೊಳ್ಳಬೇಕು. Price fixation authorityಯನ್ನು ಇಟ್ಟುಕೊಳ್ಳಬೇಕು. ಮತ್ತೆ investment ಏನಿರುತ್ತದೆಂದು ನೋಡಿಕೊಂಡು ನೀವು Labour Act ಪ್ರಕಾರ factory ಯಲ್ಲಿ ಕೆಲಸ ಮಾಡತಕ್ಕಂಥವನಿಗೆ ಕಿಬ್ಬೆರಳಿಗೆ ತೊಂದರೆಯಾದರೆ ಇಷ್ಟು compensation ಎಂದು fix ಮಾಡುತ್ತೀರಿ. ನನ್ನ ಕುಟುಂಬವೇ ಸತ್ತುಹೋದರೆ ನಮಗೆ ಬೆಲೆ ಇಲ್ಲವೇ? ಹಾಗಾದರೆ ನಮ್ಮ ಜೀವಕ್ಕೆ ಬೆಲೆಯೇ ಇಲ್ಲವೇ? ಸರ್ಕಾರಿ ನೌಕರಿಯಲ್ಲಿರತಕ್ಕಂಥವರು ಸತ್ತುಹೋದರೆ ಅವರಿಗೆ ಅನುಕಂಪದ ಆಧಾರದ ಮೇಲೆ ಎಂದು ಉದ್ಯೋಗ ಕೊಡುತ್ತೀರಿ. ನಮ್ಮ ಮೇಲೆ ನಿಮಗೆ ಅನುಕಂಪ ಇಲ್ಲವೇ? ನಾವು ಎಷ್ಟು ಜನ ಇದ್ದೇವೆ? ನಾವು ಸೊಪ್ಪು ಬೆಳೆಯದೇ ಇದ್ದರೆ, ಹಾಲು ಕೊಡದೇ ಹೋದರೆ, ಅನ್ನ ಕೊಡದೇ ಹೋದರೆ ನೀವು ಬದುಕಿರುತ್ತೀರಾ? ಸತ್ತೇ ಹೋಗುತ್ತೀರಿ. ನಮ್ಮಿಂದ ನೀವು ಬದುಕುಬೇಕು, ನಿಮಗೆ ಅನುಕಂಪ ಬೇಕು, ನಮಗೆ ಅನುಕಂಪ ಬೇಡವೇ? ನಾವು ಕೇಳುತ್ತಿರತಕ್ಕಂಥದ್ದು ಸಾಲ ಮನ್ನಾ ಅಲ್ಲ. ನಮಗೆ ದೃಢವಾದ ಗೌರವವಾದ ಬದುಕು ಬೇಕು. ಇದನ್ನು ನಾನು ಆವತ್ತು ಮಾತನಾಡಿದ್ದು. ಆ ಮಾತಿಗೆ ಇವತ್ತೂ ಬದ್ಧನಾಗಿದ್ದೇನೆ. ಮಾತು ಆ ಶೈಲಿಯಲ್ಲಿ ಹೋಗಲಿ.

ಶ್ರೀ ಸಿ.ಟಿ. ರವಿ: ಆದರೆ, ಸುದೈವವಶಾತ್ ನೀವು cabinet ನಲ್ಲಿದ್ದೀರಿ. You are part of the Government. ಇದನ್ನೆಲ್ಲ ಯಾರು ಮಾಡಬೇಕು? ನೀವು ಹೇಳಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ಅಲ್ಲಿ ಮಾತನಾಡಿದ್ದನ್ನು ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಸಿ.ಟಿ. ರವಿ: ನಿಮ್ಮ ಕಳಕಳಿ ಬಗ್ಗೆ ನಮ್ಮ ಪ್ರಶ್ನೆ ಇಲ್ಲ. ಇದನ್ನು ಯಾರು ಮಾಡಬೇಕು? ನೀವೇ ಈ ರೀತಿ ಗೋಳು ಹೇಳಿಕೊಳ್ಳುವುದಾದರೆ ಉಳಿದವರು ಯಾರ ಹತ್ತಿರ ಗೋಳು

ಹೇಳಿಕೊಳ್ಳಬೇಕು? ನಾವು ನಿಮ್ಮ ಹತ್ತಿರ ಗೋಳು ಹೇಳಿಕೊಳ್ಳಬೇಕು. ನೀವು ನಿಮ್ಮ ಗೋಳು ಹೇಳಿಕೊಳ್ಳುವುದಾದರೆ ನಮ್ಮ ಪರಿಸ್ಥಿತಿ ಏನು?

(ಮುಂದು)

ವಿಸ:27-03-2017 7-30 (50) ಎಂಕೆಕೆ:ಹೆಚ್ಎಸ್

ಶ್ರೀ ಕೆ.ಆರ್. ರಮೇಶ್‌ಕುಮಾರ್: ರವಿಯವರೆ, you raised a good issue. ನಾನು ಆ ವೇದಿಕೆಯಲ್ಲಿ ಮಾತನಾಡಿದ್ದನ್ನು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ನಾನು ಶಪಥ ಮಾಡಿದ್ದೇನೆ. ನನಗೆ Governor ರವರು ಪ್ರತಿಜ್ಞಾವಿಧಿಯನ್ನು ಬೋಧಿಸಿದ್ದಾರೆ. ನನ್ನ ಕರ್ತವ್ಯವನ್ನು, ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲದೇ ನನಗೆ ಲಭ್ಯವಿರುವ ವೇದಿಕೆಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಮಾತನಾಡಿದ್ದೇನೆ. ಸ್ವಲ್ಪ ಫಲ ಕೊಟ್ಟಿದೆ. ಉಳಿದಿದ್ದು ಮುಂದಿನ ದಿನಗಳಲ್ಲಿ ಗೊತ್ತಾಗುತ್ತದೆ. ಅದಕ್ಕೆ ನಾನು ನಿಮಗೆ indirect ಆಗಿ ಏನು ಹೇಳುತ್ತಿದ್ದೇನೆಂದರೆ, ಒಂದು ಚೂರು ನಿಯಮ ಉಲ್ಲಂಘನೆ ಮಾಡಿ ಇಲ್ಲಿಂದ ಈ ರೀತಿಯ pressure ಬಂದರೆ ಆ ವಾದವನ್ನು ಅಲ್ಲಿ ಇನ್ನೂ ಹೆಚ್ಚು ಬಲವಾಗಿ ನಾನು ವಾದ ಮಾಡುವುದಕ್ಕೆ ಅನುಕೂಲ. ಇದರಲ್ಲಿ party ಪ್ರಶ್ನೆ ಇಲ್ಲ. ರೈತರೆಲ್ಲ ಒಂದೇ.

(ಗೊಂದಲ)

ಛೇರ್ಮನ್: ಪಾಪ, ಅವರಿಗೆ interference ಜಾಸ್ತಿಯಾಯಿತು. ನೀವು ಹೇಳಿ ಮುಗಿಸಿ.

ಶ್ರೀ ಬಿ.ಆರ್ ಯಾವಗಲ್: ಛೇರ್ಮನ್‌ರವರೆ, ಒಂದೇ ನಿಮಿಷ. ಚರ್ಚೆ ನಡೆದಿತ್ತು ಎಂದು ನಾನು ಸ್ವಲ್ಪ ಹೇಳಬಯಸುತ್ತೇನೆ. ಈಗ ರವಿಯವರು ಹೇಳಿದರು. ಇದೆಲ್ಲ ನೀವು ಮಾಡಬೇಕು. ಈ ದೇಶದ economy (ಆರ್ಥಿಕ ನೀತಿಯೇ) ರೈತರ ಪರವಾಗಿಲ್ಲ. ಇದು ಬಳಕೆದಾರರು ಮತ್ತೊಂದು vested interest ಪರವಾಗಿದೆ. ಅದು ಬದಲಾವಣೆಯಾಗಬೇಕು. ಕೇವಲ ರಾಜ್ಯ ಸರ್ಕಾರ ಮಾಡಿದರೆ ಆಗುವುದಿಲ್ಲ. ಕೇಂದ್ರದಲ್ಲಿ ಆ ನೀತಿ ಬರಬೇಕು, ಬದಲಾವಣೆ ತರಬೇಕು. ಕಳಕಳಿ ಇದ್ದರೆ ಮಾತ್ರ ಇದಾಗುತ್ತದೆ. ಇಲ್ಲವೆಂದರೆ ಯಾರು ಏನು ಹೇಳಿದರೂ ಆಗುವುದಿಲ್ಲ.

(ಗೊಂದಲ)

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಶ್ರೀ ಸಿ.ಟಿ. ರವಿ: ಈ ದೇಶಕ್ಕೆ ಸ್ವಾತಂತ್ರ್ಯ ಬಂದು 70 ವರ್ಷಗಳಾಯಿತು. ಬಹುಶ: ನನಗೆ ಅನಿಸುವ ಪ್ರಕಾರ ನೀವು 50 ವರ್ಷಗಳಿಂದ ರಾಜಕೀಯ ಕ್ಷೇತ್ರದಲ್ಲಿದ್ದೀರಿ. ಹಳಿ ತಪ್ಪಿದ್ದು ಯಾವಾಗ? ಈಗ ರೈತ ಕೇಂದ್ರಿತ ಆರ್ಥಿಕ ವ್ಯವಸ್ಥೆ ವ್ಯಾಪಾರೀ ಕೇಂದ್ರಿತವಾಗಿ ಬದಲಾಗಿದ್ದು ಯಾವಾಗ? ಇವತ್ತೇ?

(ಗೊಂದಲ)

ಶ್ರೀ ಸಿ.ಟಿ. ರವಿ: ಯಾವಾಗ ಬದಲಾಗಿದ್ದು?

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ: ನೀವು ಮಾಡಬೇಕಾದಾಗ ಏನೂ ತಪ್ಪಿಲ್ಲ. ನೀವೇನೂ ರೈತರ ಪರವಾಗಿ ಏನೂ ಬಂದಿಲ್ಲವಲ್ಲ.

(ಗೊಂದಲ)

ಶ್ರೀ ಸಿ.ಟಿ. ರವಿ: 600ಕ್ಕೂ ಹೆಚ್ಚು ಜೀವರಕ್ಷಕ ಔಷಧಿ ಬೆಲೆ ಕಡಿಮೆ . . .

(ಗೊಂದಲ)

ಶ್ರೀ ಬಿ.ಆರ್. ಯಾವಗಲ್: ರವಿಯವರೆ, ಚರ್ಚೆ . . .

(ಗೊಂದಲ)

ಶ್ರೀ ಬಿ.ಆರ್. ಯಾವಗಲ್: ನೀವು ಪ್ರಸ್ತಾಪ ಮಾಡುತ್ತಿದ್ದೀರಿ. ನಿಮ್ಮ ಕೈಯಲ್ಲಿ ಅಧಿಕಾರವಿದೆ. ರೈತರ ಪರವಾಗಿ ಬಹಳ ಕಳಕಳಿ ತೋರಿಸುತ್ತೀರಿ. ನೀವು ಹೇಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಯಾವಗಲ್‌ರವರೆ ಒಂದು ನಿಮಿಷ.

ಛೇರ್ಮನ್: ಅವರು yield ಆಗಿಲ್ಲ, ನೀವು ಮಾತನಾಡಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ರವಿಯವರೆ, ನಾನು ಅಲ್ಲಿ ಕುಳಿತಾಗ ಮನಮೋಹನಸಿಂಗ್‌ರವರು ಪ್ರಧಾನಮಂತ್ರಿಯಾಗಿದ್ದಾಗ ನಾನು ಆಡಳಿತ ಪಕ್ಷದ ಸದಸ್ಯನಾಗಿಯೇ ಮನಮೋಹನಸಿಂಗ್‌ರವರನ್ನು ಸೇರಿಸಿಕೊಂಡೇ ವಿಮರ್ಶೆ ಮಾಡಿದ್ದೇನೆ, ಟೀಕೆ ಮಾಡಿದ್ದೇನೆ. ಇದು party ಆಧಾರದ ಮೇಲೆ ಮಾತನಾಡತಕ್ಕಂಥ ವಿಚಾರವಲ್ಲ. Reserve Bank ನವರ reports ತೆಗೆದುಕೊಳ್ಳಿ, banks functioning ತೆಗೆದುಕೊಳ್ಳಿ, ಎಷ್ಟು NPS ಇದೆ ತೆಗೆದುಕೊಳ್ಳಿ, ಎಷ್ಟು bad debts ಇದೆ ತೆಗೆದುಕೊಳ್ಳಿ, ಎಷ್ಟು ಕೋಟಿ ರೂಪಾಯಿ ಇದೆ ಎಂದು

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತೆಗೆದುಕೊಳ್ಳಿ. ಎಷ್ಟು ಜನರಿಗೆ ಯಾರ್‍ಯಾರ ಅವಧಿಯೊಳಗೆ relief ಸಿಕ್ಕಿದೆ ನೋಡಿ. ಒಬ್ಬ big house ಗೆ ಒಂದು ಲಕ್ಷ ಕೋಟಿ ರೂಪಾಯಿ ಕೊಡುತ್ತೀರಿ. ಎಷ್ಟು ನಮಗೆ ಕೊಟ್ಟರೆ ನಿಮಗೆ ಅಷ್ಟು ಆಗುವುದು. ವ್ಯವಸ್ಥೆ ಏನಾಗಿದೆ ಎಂದರೆ, ಇದು BJP, Congress, J.D.(S), Coalition, National Front, UDA, UPA ಪ್ರಶ್ನೆಯಲ್ಲ. ಯಾರು ಅಲ್ಲಿ ಬದ್ಧವಾದ ಸ್ಥಾನಗಳಲ್ಲಿ ಕುಳಿತಿದ್ದಾರೆ, they are anti-farmer. ನಾವು ಇಲ್ಲಿಂದ ಎಲ್ಲ ಪಕ್ಷಗಳಿಂದ ಹೋಗತಕ್ಕಂಥವರು ನಮಗೆ ಅದರ ಮೇಲೆ concentration ಇಲ್ಲ. We get divided on narrow lines. ಯಾವಗಲ್‌ರವರು ಹೇಳಿದತಕ್ಷಣ ನೀವು. . . . ನೋಡಿ, ಯಾವಗಲ್‌ರವರೂ ಇದನ್ನು Central Government ನೀವು ಮಾಡಿ ಎಂದು ಹೇಳಿ ಹೇಳುವಂಥ ಪ್ರಶ್ನೆಯಲ್ಲ. ನೀವು ನಮಗೆ ಹೇಳುವುದು ಅಲ್ಲ. ನಾವೆಲ್ಲರೂ ಕಲೆತು ಎಲ್ಲರಿಗೂ ಇವತ್ತು ಯಾರು ನಡೆಸುತ್ತಿದ್ದಾರೆ, both Central Government and State Government ಗೆ ನಾವು ಹೇಳಬೇಕಾಗುತ್ತದೆ. ನಿಮ್ಮ credit policy ಯನ್ನು re-define ಮಾಡಿ. Pro-farmer ಮಾಡಿ. ಏನು pro-capitalist, pro-industrialist economic policy ಇದೆ, that should get basically changed. ಅಂದೂ ಇದೆ, ಇವತ್ತೂ ಇದೆ. It has not changed.

ಶ್ರೀ ಬಿ.ಆರ್. ಪಾಟೀಲ್:- ಚರ್ಚೆಯಾಗಬೇಕು. ಚರ್ಚೆ ಬಹಳ ಆಳವಾಗಿ ಹೋಗುತ್ತಿದೆ. ಬಹುಶ: ರಮೇಶ್‌ಕುಮಾರ್‌ರವರಿಗೆ ಒಂದು ಮಾತು ಗೊತ್ತಿರಬಹುದು. ಏಕೆಂದರೆ, ತಾವು ಬಹಳ ಓದುತ್ತೀರಿ. Constituent Assembly ಯಲ್ಲಿ ಸಂವಿಧಾನ ಸಭೆ ನಡೆಯುತ್ತದಲ್ಲ, ಈ ಕೃಷಿ ಬಗ್ಗೆ ಚರ್ಚೆ ಮಾಡುವಾಗ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಈ ಕೃಷಿಯನ್ನು ಉದ್ದಿಮೆದರ್ಜೆಯನ್ನಾಗಿ ಮಾಡಿದರೆ ಮಾತ್ರ ನಮ್ಮ ದೇಶದಲ್ಲಿ ಕೃಷಿ ಉಳಿಯುತ್ತದೆ ಎನ್ನುವಂಥ ವಾದವನ್ನು ಅಂದು ಆ ಸಭೆಯಲ್ಲಿ ಮಂಡಿಸಿದ್ದರು. ದುರ್ದೈವದಿಂದ ಆ ಮಾತನ್ನು ಯಾರೂ ಒಪ್ಪಲಿಲ್ಲ. ಇವತ್ತು ಕೃಷಿಯನ್ನು ಒಂದು ಉದ್ದಿಮೆ ದರ್ಜೆಯನ್ನಾಗಿ ಮಾಡಿದ್ದರೆ, ರಮೇಶ್‌ಕುಮಾರ್‌ರವರು ಹೇಳಿದರಲ್ಲ, industrial product ಮಾಡಿ, ಅವರು price ಅನ್ನು ಏನು ನಿರ್ಧಾರ ಮಾಡುತ್ತಾರೆ, ಆ ಹಕ್ಕು ಇವರಿಗೂ ಕೂಡ ಬರಲಿಕ್ಕೆ ಸಾಧ್ಯತೆ ಇತ್ತು. ಅಂದು ದುರ್ದೈವ ಏನಾಗಿದೆ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಎಂದರೆ, ರಮೇಶ್‌ಕುಮಾರ್‌ರವರೆ, ಇವತ್ತು ನಮ್ಮೆಲ್ಲರಿಗೂ ಕೂಡ ನೋವಿದೆ, ನಮಗೆಲ್ಲ ಬಹಳ ಆಶಯಗಳಿವೆ, ಬಹಳ ಚಿಂತನೆಗಳಿವೆ. ಸಮಾಜದ ಬಗ್ಗೆ ಕಳಕಳಿ ಇದೆ. ಜನಪರವಾಗಿ ನಾವೆಲ್ಲ ಇದ್ದೇವೆ. ಆದರೆ, ಇಂದು ಈ ರಾಜಕೀಯ, ಚುನಾವಣಾ ವ್ಯವಸ್ಥೆ ಎಷ್ಟು ಹದಗೆಟ್ಟು ಹೋಗಿದೆಯಲ್ಲ, ಇದಕ್ಕೆಲ್ಲ ದಾಸರಾಗಿ ಇಡೀ ದೇಶ ನರಳುವಂಥ ಪರಿಸ್ಥಿತಿಗೆ ನಾವೆಲ್ಲ ಬಂದು ನಿಂತಿದ್ದೇವೆ. ತಾವು ನಿಜವಾಗಿಯೂ ಹೇಳಿದಿರಿ. ಇಂದು political funding ಅನ್ನು ರೈತರು ಮಾಡುತ್ತಾರೆಯೇ? ರೈತರು political funding ಮಾಡುವುದಿದ್ದರೆ, ಸರ್ಕಾರಗಳು ರೈತರ ಪರವಾಗಿ ನಿಲ್ಲುತ್ತಿದ್ದವು. ಇಂದು political funding,.. ಯಾವ ಪರಿಸ್ಥಿತಿಯಲ್ಲಿ ನಾವೆಲ್ಲ ಇಂದು ಇಲ್ಲಿ ಸದನಕ್ಕೆ ಬಂದಿದ್ದೇವೆ ಎನ್ನುವುದು ತಮಗೂ ಗೊತ್ತು. ಎಲ್ಲರಿಗೂ ಗೊತ್ತು. ಕೆಲವು ಸಲ ಇಂಥ ವಿಷಯಗಳು ಚರ್ಚೆಗೆ ಬರಬೇಕಾಗುತ್ತದೆ. ಎಲ್ಲಾ ರೈತರ ಬಗ್ಗೆ ಮಾತನಾಡುತ್ತೇವೆ, ಏಕೆ ಮಾಡುವುದಕ್ಕಾಗುತ್ತಿಲ್ಲ? ಯಾರಾದರೂ ಹೋಗಿ court ನಿಂದ stay ತಂದರೇ? ರೈತರ ಪರವಾಗಿ ನೀವು ಮಾಡಬೇಡಿ ಎಂದು ಹೇಳಿ ಜನರು ಬೇಡವೆಂದು ವಿಧಾನಸಭೆಯಲ್ಲಿ ನೂಕುತ್ತಿದ್ದಾರೆಯೇ? ಮಾಡುವುದಕ್ಕೆ ಏಕಾಗುತ್ತಿಲ್ಲವೆಂದರೆ, ಎಲ್ಲಾ ಸರ್ಕಾರಗಳೂ ದೊಡ್ಡ ದೊಡ್ಡ ಉದ್ಯೋಗಪತಿಗಳು ಮತ್ತು Corporate house ಗಳ ಪರವಾಗಿ ಏಕೆ ರಾಜಕೀಯ ಪಕ್ಷಗಳಿವೆ ಎಂದರೆ, this is a political funding. ಜಯಪ್ರಕಾಶ್ ನಾರಾಯಣ್ ಒಂದು ಮಾತು ಹೇಳಿದ್ದರು. Election starts with the corruption. Sorry. Corruption starts with the election ಎಂದು ಹೇಳಿದ್ದರು. ಎರಡೂ correct. J.P.ಯವರು ಈ ಮಾತನ್ನು ಬಹಳ ಸತ್ಯವಾಗಿ ಹೇಳಿದ್ದರು. Corruption starts with the election. ಮೂಲ ಬೇರು ಅಲ್ಲಿದೆ. ಈ ಬೇರನ್ನು ಕಿತ್ತು, ಈಗ ಚರ್ಚೆ ಮಾಡುತ್ತಿದ್ದೇವೆ, ಕೋಳಿ ಮೊದಲೋ, ಮೊಟ್ಟೆ ಮೊದಲೋ, ಕೋಳಿ ಮೂಲ, ಮೊಟ್ಟೆ ಮೂಲ ಈ ವಾದ ನಮ್ಮ ಉತ್ತರಕರ್ನಾಟಕದಲ್ಲಿ ಹಾಡುತ್ತಾರಲ್ಲ, ಹರ್‌ದೇಸಿ ನಾಗೇಶಿ, ಅವನು ಕೋಳಿ ಮೂಲ ಎನ್ನುತ್ತಾನೆ, ಇವರು ಮೊಟ್ಟೆ ಮೂಲ ಎನ್ನುತ್ತಾನೆ. ಯಾವುದು ಸತ್ಯ? ಯಾವುದು ಮಿಥ್ಯ? ಇದರ ಅಂತಿಮ ನಿರ್ಧಾರ ಆಗಲಾರದಂಥ ಪರಿಸ್ಥಿತಿಗೆ ನಾವಿವತ್ತು ಬಂದಿದ್ದೇವೆ.

ಛೇರ್ಮನ್: ಬೇಗ conclude ಮಾಡುತ್ತೀರಾ?

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಬಿ.ಆರ್. ಪಾಟೀಲ್: ನಾನು ಮಾತನಾಡಿ ಮುಗಿಸುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಇದು ವಿಚಿತ್ರ ದೇಶ. ಜಯಪ್ರಕಾಶ್ ನಾರಾಯಣ್‌ರವರ movement ಪ್ರಾರಂಭವಾಗುವುದಕ್ಕೆ ಮೊದಲು ಮೊದಲನೇ ಹಂತ ಗುಜರಾತ್‌ನಲ್ಲಿ ನವನಿರ್ಮಾಣ ಸಮಿತಿ ಪ್ರಾರಂಭವಾದದ್ದು. ಗುಜರಾತ್‌ನಲ್ಲಿ ನವನಿರ್ಮಾಣ ಸಮಿತಿ ಪ್ರಾರಂಭವಾಗಿ ಯುವಕರು, ವಿದ್ಯಾರ್ಥಿಗಳೆಲ್ಲ ಬೀದಿಗೆ ಬಂದು ಹೋರಾಟ ಮಾಡಿ, ಆಮೇಲೆ it spread to Bihar. ಲಾಲೂ ಪ್ರಸಾದ್ ಯಾದವ್‌ರವರು ಒಬ್ಬ ವಿದ್ಯಾರ್ಥಿಯಾಗಿ ನವ ನಿರ್ಮಾಣ ಸಮಿತಿಯ movementನಲ್ಲಿದ್ದು, ಆಮೇಲೆ J.P. movement ಗೆ ಬಂದರು. ಆಮೇಲೆ, ವಿಪರ್ಯಾಸ ಎಲ್ಲಿಗೆ ಬಂತೆಂದರೆ, ಚಿಮನ್ ಭಾಯ್ ಪಟೇಲ್ ಸರ್ಕಾರದ ವಿರುದ್ಧ ನವನಿರ್ಮಾಣ ಸಮಿತಿ ಹುಟ್ಟಿದ್ದು, ಚಿಮನ್ ಭಾಯ್ ಪಟೇಲರೇ ಬಂದು ಜನತಾ ಪಾರ್ಟಿಯನ್ನೇ, ಜಯಪ್ರಕಾಶ್‌ರವರ movement ಅನ್ನೇ take over ಮಾಡಿಬಿಟ್ಟರು.

ಶ್ರೀ ಬಿ.ಆರ್. ಪಾಟೀಲ್: ರಮೇಶ್‌ಕುಮಾರ್‌ರವರೇ, ಬಹುಶ: ನೀವು ಇತಿಹಾಸ ಪುಟ ತಿರುವಲಿಕ್ಕೆ ಹೋದರೆ, ಯಾರು emergency resolution ಅನ್ನು cabinet ನಲ್ಲಿ move ಮಾಡಿದರು ಅವರೇ ದೇಶದ Deputy Prime Minister ಆದರು. ಅದು ಬೇಡ. ಅನೇಕ ಕಹಿ ಘಟನೆಗಳು, ಕಹಿ ಅನುಭವಗಳನ್ನು ಉಂಡು ಇಲ್ಲಿಗೆ ಬಂದಿದ್ದೇವೆ. ಯಾರು ತುರ್ತು ಪರಿಸ್ಥಿತಿಯ ನಿರ್ಣಯವನ್ನು cabinet ನಲ್ಲಿ ಮಂಡಿಸಿದರು, ಅವರೇ ಈ ದೇಶದ ಉಪಪ್ರಧಾನಿಯಾದರು. ಅಂದಿನ ಪರಿಸ್ಥಿತಿ, ಅಂದಿನ ರಾಜಕೀಯ ಸನ್ನಿವೇಶದಲ್ಲಿ ಈ ಬದಲಾವಣೆಗಳು ಆಗಿಹೋಗಿವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಒಂದು classic difference ಇದೆ. Yes. ಬಾಬು ಜಗಜೀವನರಾಂ ಅಂದಿನ ದಿವಸ particular circumstances ನಲ್ಲಿ move ಮಾಡಿದ್ದರೆಂದು ಭಾವಿಸೋಣ. Emergency ಇನ್ನೂ ಇದ್ದಾಗಲೇ, ಇಂದಿರಾ ಗಾಂಧಿಯವರು Prime Minister ಆಗಿದ್ದಾಗಲೇ rebel ಆಗಿ ಹೊರಗಡೆ ಬಂದಿದ್ದರು. Why do you forget that? But, here is a case, ನವ ನಿರ್ಮಾಣ ಸಮಿತಿಯವರು ಯಾರು ಅವರ ವಿರುದ್ಧ ಹೋರಾಟ ಪ್ರಾರಂಭ ಮಾಡಿದ್ದರು, ಯಾವ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಮುಖ್ಯಮಂತ್ರಿಯ ವಿರುದ್ಧ ಹೋರಾಟ ಮಾಡಿದ್ದರೋ, ಯಾವುದರ ಫಲವಾಗಿ ಜನತಾ ಪಕ್ಷ ಉದಯವಾಯಿತೋ, ಅಂತಹ ವ್ಯಕ್ತಿಯೇ ಬಂದು ಇದರ ನಾಯಕನಾಗಿಬಿಟ್ಟರು, ಮಾಲೀಕನಾಗಿಬಿಟ್ಟರು. ನಾನು ಅದನ್ನೇ ಹೇಳುತ್ತಿರುವುದು, they are two different cases. Club ಮಾಡಬೇಡಿ. ಬಾಬು ಜಗಜೀವನರಾಂರವರು yes, he moved the resolution. But he was the one, ಅವರು ಮತ್ತು ಹೇಮಾವತಿ ನಂದನ್ ಬಹುಗುಣರವರು they came out. They constituted Congress for democracy. They were against Indira Gandhi before elections. ಅವರು elections ಆದಮೇಲೆ ಬರಲಿಲ್ಲ. ಇಂದಿರಾಗಾಂಧಿಯವರು ಸೋತ ಮೇಲೆ ಬರಲಿಲ್ಲ.

ಶ್ರೀ ಬಿ.ಆರ್. ಪಾಟೀಲ್: ನೀವು ಚಿಮನ್ ಭಾಯ್ ಪಟೇಲ್‌ರವರ ಉದಾಹರಣೆ ಕೊಟ್ಟಮೇಲೆ ನಾನು ಇದನ್ನೂ ಇನ್ನೊಂದು ಉದಾಹರಣೆ ಕೊಟ್ಟೆ. He came out from the party and formed Congress for democracy. ಇದೆಲ್ಲ ದಾಖಲೆಯಲ್ಲಿದೆ. ನಾವು ಹೆಚ್ಚಿಗೆ ಮಾತನಾಡಬೇಕಿಲ್ಲ.

ಛೇರ್ಮನ್: ಬಿ.ಆರ್.ಪಾಟೀಲರೆ, ಬೇಗ conclude ಮಾಡಿ. ಇನ್ನೂ 5 ಜನ ಮಾತನಾಡುವವರಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್: ಮುಗಿಸುತ್ತೇನೆ. ರವಿಯವರು ನಡುವೆ ಮಾತನಾಡಿದರು. ಮಾನ್ಯ ರಮೇಶ್‌ಕುಮಾರ್‌ರವರು ಬಹಳ ಹಿರಿಯರು.

ಛೇರ್ಮನ್: ನೀವು allow ಮಾಡಬೇಡಿ. ನೀವು yield ಆಗುತ್ತೀರಿ.

ಶ್ರೀ ಬಿ.ಆರ್. ಪಾಟೀಲ್: ಅವರು ನಮಗಿಂತ ಅನುಭವಸ್ಥರು, ಅವರೂ ಸಹ ನಮಗೆ ಪೂರಕವಾಗಿ ಪ್ರೋತ್ಸಾಹ ಕೊಡುತ್ತಿದ್ದಾರೆ.

ಛೇರ್ಮನ್: ನೀವು yield ಆಗಬೇಡಿ.

ಶ್ರೀ ಸಿ.ಟಿ. ರವಿ: ಕೆಲವರ ಮಾತನ್ನು ಈ ಸದನದಲ್ಲಿ ಗಮನಿಸುತ್ತಿದ್ದಾಗ ಯಾರ್‍ಯಾರು ಎಲ್ಲೆಲ್ಲಿ ಎನ್ನುವ ಮುನ್ಸೂಚನೆಯೂ ಕಂಡು ಬರುತ್ತಿದೆ. ಕೆಲವರು ಮಾತನಾಡುತ್ತಿರುವುದು, ಪೀಠಿಕೆ ಎಲ್ಲ ನೋಡುತ್ತಿದ್ದಾಗ ಗೊತ್ತಾಗುತ್ತದೆ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

(ಗೊಂದಲ)

ಶ್ರೀ ಸಿ.ಟಿ. ರವಿ: ಏನು ಪಾಟೀಲರೆ, . . . ನಿಲ್ಲಬಹುದೆಂದು ಒಂದು ಅಂದಾಜಿಗೆ ಬರುತ್ತಿದೆ.

(ಗೊಂದಲ)

ಶ್ರೀ ಬಿ.ಆರ್. ಪಾಟೀಲ್: ನಾನು ವಿಷಯಕ್ಕೆ ಬರುತ್ತೇನೆ. ಈಗಲೂ ಕೂಡ ಸರ್ಕಾರಕ್ಕೆ ನಾನು ವಿನಂತಿ ಮಾಡುತ್ತೇನೆ. ಒಂದು ಬೆಲೆ ಆಯೋಗವನ್ನು ತಾವು ಮಾಡಿದ್ದೀರಿ. ಒಂದು ಬೆಲೆ ಆಯೋಗದ ಶಿಫಾರಸ್ಸನ್ನಾದರೂ ಒಪ್ಪಿ ರೈತರಿಗೆ ಯೋಗ್ಯವಾದ ರಮೇಶ್‌ಕುಮಾರ್‌ರವರೆ, ನೀವು serious ಆಗಿ ಮಾತನಾಡುತ್ತೀರಿ. ಏಕೆಂದರೆ,...

(ಗೊಂದಲ)

ಛೇರ್ಮನ್: ಪಾಟೀಲರೆ, conclude ಮಾಡಿ. ನೀವು ಯಾರಿಗೂ. . . .ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ.

ಶ್ರೀ ಬಿ.ಆರ್. ಪಾಟೀಲ್: ಈ ಆಯೋಗದ ಶಿಫಾರಸ್ಸನ್ನು ತಾವು ಒಪ್ಪಿ ಎಲ್ಲಾ ಬೆಳೆಗಳಿಗೆ ನ್ಯಾಯ ಕೊಡುವ ಕೆಲಸ ಮಾಡಿದ್ದರೆ ನ್ಯಾಯ ಸಿಗುತ್ತಿತ್ತು.

(ಮುಂದು)

27-03-2017-(51)-7-40-ಎಸ್ಕೆ-ಎಸ್ಎಸ್‌ಡಿ

ಶ್ರೀ ಬಿ.ಆರ್.ಪಾಟೀಲ್ : ನಮ್ಮ ಸ್ನೇಹಿತರು ಈಗ ಕಡೆಯ ಕುಸ್ತಿ ಎಂದು ಹೇಳಿದರು. ಇನ್ನು ಮಾತನಾಡುವವರು ಇದ್ದರೆ ಅವರಿಗೆ ಅವಕಾಶ ಕೊಡಿ ನಾನು ಬೇಕಾದರೆ ತಪ್ಪಿಸಿಕೊಳ್ಳುತ್ತೇನೆ.

ಛೇರ್ಮನ್ : ತಾವು ಗಮನಿಸಿ ಸದನದಲ್ಲಿ ಅತ್ಯಂತ ಕಡಿಮೆ ಮಾತನಾಡಿರುವವರು ಇದ್ದಾರೆ. ಅವಕಾಶ ಸಿಗುವುದಿಲ್ಲ ಹೀಗಾಗಿ ಅವರಿಗೂ ಅವಕಾಶ ಕೊಡಬೇಕು.

ಶ್ರೀ ಬಿ.ಆರ್.ಪಾಟೀಲ್ :ನಾನು ಎರಡೇ ಎರಡು ವಿಷಯ ಪ್ರಸ್ತಾಪಿಸುತ್ತೇನೆ. ನಮ್ಮ ಭಾಗದಲ್ಲಿ ಭಾರಿ ಪ್ರಮಾಣದಲ್ಲಿ ತೊಗರಿಬೇಳೆ ಬೆಳೆಯುತ್ತಾರೆ. ಪ್ರತಿ ವರ್ಷ ನಮ್ಮ ದೇಶದಲ್ಲಿ ಬೇಳೆಕಾಳು ಮತ್ತು ಎಣ್ಣೆಕಾಳುಗಳನ್ನು ಹೊರ ದೇಶದಿಂದ ತರಿಸಿಕೊಳ್ಳುತ್ತೇವೆ. ಈ ವರ್ಷ bumper ಬೆಳೆ ಬಂತು. ನಮ್ಮ ಸರ್ಕಾರದವರು ತೊಗರಿ ಮಂಡಳಿ ಎಂದು ಮಾಡಿದ್ದಾರೆ, ಅದಕ್ಕೆ ನಾಮಕಾವಸ್ಥೆಯಾಗಿ ಒಬ್ಬರನ್ನು



ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಅಧ್ಯಕ್ಷರನ್ನಾಗಿ ಕೂಡಿಸಿದ್ದಾರೆ. ಅದೊಂದು ಅಸ್ತಿಪಂಜರ, ಅದಕ್ಕೆ ರಕ್ತ ಇಲ್ಲ ಮಾಂಸ ಇಲ್ಲ ಚೈತನ್ಯ ಇಲ್ಲ ಶಕ್ತಿ ಇಲ್ಲ. ತೊಗರಿ Board ತೊಗರಿಬೇಳೆಯನ್ನು ಖರೀದಿಸಬೇಕೆಂದರೆ ಏನು ಸಿದ್ದತೆಯೂ ಇಲ್ಲ. ಕೊನೆಗೆ NAFEDದವರು ಬಂದರು ಎಂದು ಮರ್ಯಾದೆ ಉಳಿಯಿತು. ಇಲ್ಲದಿದ್ದರೆ ಈ ಸರ್ಕಾರದಲ್ಲಿರುವಂಥ ನಿಮ್ಮಂಥವರಿಗೆ ಜನ ಬೆನ್ನುಹತ್ತುತ್ತಿದ್ದರು. NAFED ನವರು ಬಂದರು ಬಹಳ ಸಂತೋಷ, ಈಗ ಖರೀದಿ ನಡೆಯುತ್ತಿದೆ. ಆದರೆ, ಯಾವ ಮಟ್ಟದಲ್ಲಿ ನಡೆಯಬೇಕು ಆ ಮಟ್ಟದಲ್ಲಿ ತೊಗರಿಬೇಳೆ ಖರೀದಿಯಾಗುತ್ತಿಲ್ಲ. ಇನ್ನು ಬಹಳ ದೊಡ್ಡ ಪ್ರಮಾಣದಲ್ಲಿ ತೊಗರಿಬೇಳೆ stock ಇದೆ. ನಾನು ಇವತ್ತು ಸರ್ಕಾರಕ್ಕೆ ವಿನಂತಿಸುತ್ತೇನೆ.

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಮಾನ್ಯ ಕೃಷಿ ಸಚಿವರು ಬರುವ ಏಪ್ರಿಲ್-15ರವರೆಗೆ ಅವಧಿಯನ್ನು ವಿಸ್ತಾರ ಮಾಡಿದ್ದಾರೆ, ಇಡೀ ನಮ್ಮ ರೈತರೇನು ತೊಗರಿಬೇಳೆ ಉತ್ಪಾದನೆ ಮಾಡಿದ್ದಾರೆ, ಸಂಪೂರ್ಣ ಆ ತೊಗರಿ ಖರೀದಿಸುವವರೆಗೆ ನೀವು ಈ ಖರೀದಿ ಕೇಂದ್ರಗಳನ್ನು ಖಾಯಂ ಆಗಿ ಇಡಬೇಕು. ಸಂಪೂರ್ಣವಾಗಿ ತೊಗರಿಯನ್ನು ಖರೀದಿಸಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ನೇರವಾಗಿ ನಾನು ವಿಷಯಕ್ಕೆ ಬರುತ್ತೇನೆ. ಇವತ್ತು ನಮ್ಮ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಅಬಕಾರಿ ಇಲಾಖೆಯಿಂದ ಬರಬೇಕಾದ ಆದಾಯ ಈ note ರದ್ದಿನಿಂದಾಗಿ ಬರಬೇಕಾದಷ್ಟು ಆದಾಯ ಬಂದಿಲ್ಲ ಎಂದು ಹೇಳಿದ್ದಾರೆ. 16 ಸಾವಿರ ಕೋಟಿ ರೂಪಾಯಿ ಆದಾಯ ನೀರಿಕ್ಷೆ ಮಾಡಿದ್ದರು, ಈ ವರ್ಷ ಮತ್ತೆ 19 ಸಾವಿರ ಕೋಟಿ ಆದಾಯವನ್ನು ನಿರೀಕ್ಷೆ ಮಾಡಿದ್ದಾರೆ. ಇಷ್ಟೆಲ್ಲಾ ಸಾಮಾಜಿಕ ಕಳಕಳಿಯಿಟ್ಟುಕೊಂಡು ಆರ್ಥಿಕ ಬದ್ರತೆಯನ್ನು ಕೊಡುವ ಕಾರ್ಯಕ್ರಮ ಹಾಕಿಕೊಂಡು ಕೋಟಿಗಟ್ಟಲೆ ಹಣವನ್ನು ಹಿಂದುಳಿದವರಿಗೆ, ದಲಿತರಿಗೆ ನೀವೆಲ್ಲರೂ ಖರ್ಚು ಮಾಡುತ್ತಿರಬೇಕಾದರೆ, ಈ ಅಬಕಾರಿ ನೀತಿಯನ್ನು ಜಾರಿಯಲ್ಲಿಟ್ಟು ಯಾವ ಅರ್ಥಿಕ ಬದ್ರತೆ ಕೊಡುವುದಕ್ಕೆ ನಿಮಗೆ ಸಾಧ್ಯವಿದೆ? ಯಾರಿಗೆ ನೀವು ಶಕ್ತಿ ಕೊಡಲಿಕ್ಕೆ ಸಾಧ್ಯವಿದೆ? ಯಾವ ತರಹ ಆಗಿದೆ ಎಂದರೆ, ಇವರು ಕೊಡದಲ್ಲಿ ಹಾಲು ಹಾಕಿ ಆ ಕೊಡಕ್ಕೆ ಒಂದು ತೂತು ಹಾಕಿದ್ದಾರೆ. ಅದೆಲ್ಲಾ ಸೋರಿಕೊಂಡು ಹೋಗುತ್ತಿದೆ, ಜನರಿಗೆ ಯಾವುದೂ ಲಾಭ ಸಿಗುತ್ತಿಲ್ಲ. ನಾನು ಈ ಸದನದ ಮೂಲಕ ಬೇಡಿಕೆ ಇಡುತ್ತೇನೆ. ಅನೇಕ ಜನ ಸದಸ್ಯರ ಮನಸ್ಸಿನಲ್ಲಿಯೂ ಕೂಡ ಇದು ಇದೆ. ಪಾನ ನಿಷೇಧ, ಇದು ಬಹಳ ಮುಖ್ಯವಾದುದು. ಗುಜರಾತ್

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಏಕೆ ಸಮೃದ್ಧಿಯಾಗಿದೆ, ಗುಜರಾತ್‌ನಲ್ಲಿ ಪ್ರಾರಂಭದಿಂದಲೂ ಕೂಡ ಮೊರಾರ್ಜಿ ದೇಸಾಯಿ ಕಾಲದಿಂದ ನರೇಂದ್ರ ಮೋದಿಯವರೆಗೂ ಇವತ್ತಿನವರೆಗೆ ಅಲ್ಲಿ ಪಾನ ನಿಷೇಧ ಇದೆ. ಆ ಪಾನ ನಿಷೇಧ ಇದ್ದ ಕಾರಣಕ್ಕಾಗಿ ಅಲ್ಲಿ crime rate ಕಡಿಮೆ ಇದೆ. ಇವತ್ತು ಅಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಇದೆ. ಅಲ್ಲಿ ಇವತ್ತು ಜನಕ್ಕೆ ಆರ್ಥಿಕವಾದ ಶಕ್ತಿ ಬಂದಿದೆ. ಹೀಗಾಗಿ ಗುಜರಾತ್ ಪ್ರಗತಿ ಮಾಡಿದೆ. ನರೇಂದ್ರ ಮೋದಿಯವರೊಬ್ಬರೇ ಪ್ರಗತಿ ಮಾಡಲಿಲ್ಲ. ಮಾನ್ಯ ತನ್ವೀರ್ ಸೇಠ್‌ರವರೇ ಯಾವ ಧರ್ಮ ಕೂಡ ಇದಕ್ಕೆ ಒಪ್ಪಿಗೆ ಕೊಟ್ಟಿಲ್ಲ. ಯಾವ ಧರ್ಮ ಕೂಡ ಇದಕ್ಕೆ ಮಾನ್ಯತೆ ನೀಡಿಲ್ಲ, ಮಾನ್ಯ ಮುಖ್ಯಮಂತ್ರಿಗಳಿಗೆ ಸಾಮಾಜಿಕ ನ್ಯಾಯದ ಪರವಾಗಿ ನಿಂತಿರತಕ್ಕಂಥವರು ಮತ್ತು ಮಹಿಳೆಯರನ್ನು ಅಬಲೆ ಎಂದು ಒಪ್ಪಿರುವಂಥವರು, ಮಹಿಳೆಯನ್ನು ಕೂಡ ಒಬ್ಬ ಗುಲಾಮ ಎಂದು ಒಪ್ಪಿದಂಥವರು, ಅಂದರೆ ನಮ್ಮ ಸಾಮಾಜಿಕ ನ್ಯಾಯದ ಈ ಪರಿಭಾಷೆಯಲ್ಲಿ ಸಮಾಜಕ್ಕೆ ದೊಡ್ಡ ಕೊಡುಗೆ ಕೊಡುವ ಮನಸ್ಸು ಏನಾದರೂ ಇದ್ದಿದ್ದರೆ ಪಾನ ನಿಷೇಧವನ್ನು ಮಾಡಿ. ಬಿಹಾರದಲ್ಲಿ ಯಾವ ತರಹ ಮಾಡಿದ್ದಾರೆ, ಅಂಥ ಖಡಕ್ ಆದ ಕಾನೂನು ತಂದು ನಮ್ಮ ನಾಡಿನಲ್ಲಿ ಸಾರಾಯಿ ನಿಷೇಧವನ್ನು ಮಾಡಿ. ಇದಕ್ಕೆ ಅನೇಕ ಜನ ಆಳುವ ಪಕ್ಷದ ಶಾಸಕರು ಕೂಡ ಧ್ವನಿಗೂಡಿಸುತ್ತಾರೆ. ಯಾವ ಪರಿಸ್ಥಿತಿ ಇದೆ ಎಂದರೆ, ಹಳ್ಳಿಗಾಡಿನಲ್ಲಿ ಹೋದರೆ ನಮ್ಮ ಹೆಣ್ಣು ಮಕ್ಕಳು, ನಮಗೆ ಅಕ್ಕಿ ಬೇಡ ಗೋದಿ ಬೇಡ ನಮಗೆ ಏನೂ ಬೇಡ, ಮೊದಲು ಸಾರಾಯಿ ಬಂದ್ ಮಾಡಿ ಎಂದು ಕೇಳುತ್ತಾರೆ. ಲಂಬಾಣಿ ತಾಂಡಗಳಲ್ಲಿ ದಲಿತರ ಓಣಿಗಳಲ್ಲಿ ಬಡವರು ಕೈ ಜೋಡಿಸಿ, ನಮಗೆ ಇದೊಂದರಿಂದ ಮುಕ್ತಿ ಮಾಡಿ ನಾವು ನಿಮ್ಮನ್ನು ಏನೂ ಬೇಡುವುದಿಲ್ಲ ಎಂದು ಕೇಳುತ್ತಾರೆ. ಪರಿಸ್ಥಿತಿ ಬಹಳ ಗಂಭೀರವಿದೆ. ಇವತ್ತು ಸಂಜೆ ಯಾವ ಹಳ್ಳಿಗೂ ಕೂಡ ಹೋಗವ ಹಾಗೆ ಇಲ್ಲ. ಧಾರ್ಮಿಕ ಸಭೆ ನಡೆಸುವ ಹಾಗೆ ಇಲ್ಲ, ರಾಜಕೀಯ ಕಾರ್ಯಕ್ರಮಗಳು ನಡೆಸುವ ಹಾಗೆ ಇಲ್ಲ. ಹಳ್ಳಿಗಳ ಪರಿಸ್ಥಿತಿ ಎಲ್ಲಿಗೆ ಹೋಗಿದೆ ಎಂದರೆ, ಬಹುಶ: ಅನೇಕ ಜನ ಸದಸ್ಯರು ಇದನ್ನು ಒಪ್ಪುತ್ತಾರೆ. ಸಾರಾಯಿ ಹೋಟೆಲ್‌ಗಳಲ್ಲಿ, ಪಾನ್‌ಬೀಡಾ ಷಾಪ್‌ಗಳಲ್ಲಿ, ಕಿರಾಣಿ ಅಂಗಡಿಗಳಲ್ಲಿ ಅವ್ಯಾಹತವಾಗಿ ಮಾರಾಟವಾಗುತ್ತಿದೆ. ಇದೇ ಕಾನೂನು ಮತ್ತು ಸುವ್ಯವಸ್ಥೆಯೇ? ಸರ್ಕಾರ ಎಂದರೆ ಇದೇನಾ? ಇವತ್ತು ಸಾರಾಯಿ ಇಂದು ನಮ್ಮ ನಾಡಿಗೆ ಎಷ್ಟು ಸಮಸ್ಯೆ ಮಾಡಿದೆ ಎಂದರೆ, ಎಷ್ಟೋ ಜನ ಹುಡುಗರು, ಯುವಕರು ಹಾಳಾಗುತ್ತಿದ್ದಾರೆ, ಆರೋಗ್ಯ ಹಾಳಾಗುತ್ತಿದೆ, ಅವರು ದಾರಿ ಬಿಡುತ್ತಿದ್ದಾರೆ.. ಅಧ್ಯಕ್ಷರೆ ನಾನು ಬಹಳ ಗಂಭೀರವಾದ ವಿಷಯ ಪ್ರಸ್ತಾಪಿಸುತ್ತಿದ್ದೇನೆ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

(ಗೊಂದಲ)

ಅಧ್ಯಕ್ಷರು : ಪಾಟೀಲ್‌ರೇ ತಾವು ಮಾತನಾಡಿ ಬೇಡ ಎನ್ನುವುದಿಲ್ಲ, ಆದರೆ ತಾವು ಮಾತನಾಡಲಿಕ್ಕೆ ಪ್ರಾರಂಭಿಸಿ 30 ನಿಮಿಷವಾಯಿತು.

ಶ್ರೀ ಬಿ.ಆರ್.ಪಾಟೀಲ್ : Sir ತಾವು ಇರಲಿಲ್ಲ, ನನಗೆ ಬಹಳ interference ಆಯಿತು. ಮಾನ್ಯರಾದ ಸವದಿಯವರು, ರವಿಯವರು, ರಮೇಶ್ ಕುಮಾರ್‌ರವರು, ಮಧ್ಯದಲ್ಲಿ ಮಾತನಾಡಿದರು.

ಅಧ್ಯಕ್ಷರು : ಸವದಿಯವರು ಇನ್ನು ಮಾತನಾಡಿಲ್ಲ. ಇನ್ನು ಬಹಳ ಜನ ಮಾತನಾಡುವವರು ಇದ್ದಾರೆ ತಾವು ಬೇಗ ಮುಗಿಸಿ.

ಶ್ರೀ ಬಿ.ಆರ್.ಪಾಟೀಲ್ : ಬಿಹಾರದಲ್ಲಿ ಮಾನ್ಯ ನಿತೇಶ್ ಕುಮಾರ್‌ರವರು ಪಾನ ನಿಷೇಧವನ್ನು ಜಾರಿ ಮಾಡಿದ ಮೇಲೆ Independent survey ಆಗಿದೆ. ನಾನು ಆ survey ಆಧಾರದ ಮೇಲೆ ಹೇಳುತ್ತೇನೆ. ಇವತ್ತು ಅಲ್ಲಿ crime rate, accidents, domestic violence ಕಡಿಮೆಯಾಗಿದೆ. ಎಲ್ಲರೂ ಸರಿಯಾಗಿ ಮನೆಗೆ ಹೋಗಿ ಮಕ್ಕಳ ಜೊತೆಗೆ ಕಾಲ ಕಳೆಯುತ್ತಿದ್ದಾರೆ. ಹೀಗಾಗಿ ಅಲ್ಲಿ Police ನವರಿಗೂ ಕೆಲಸ ಕಡಿಮೆಯಾಗಿದೆ. Court ನಲ್ಲಿ case ಗಳು ಕಡಿಮೆಯಾಗಿವೆ. ಸರ್ಕಾರಕ್ಕೂ ಕೂಡ ತಲೆ ನೋವು ಕಡಿಮೆಯಾಗಿದೆ. ಏಕೆ ಈ ಕೆಲಸ ಮಾಡಬಾರದು? ಬಿಜೆಪಿ ಸ್ನೇಹಿತರು ತಾವು ತಿಳಿದುಕೊಳ್ಳಬೇಕು, ಏಕೆಂದರೆ, ಚಾರಿತ್ರ್ಯ, ಧರ್ಮ, ನ್ಯಾಯ-ನೀತಿ, ರಾಷ್ಟ್ರ, ಎಂದು ನೀವೆಲ್ಲಾ ಏನು ಹೇಳುತ್ತಿರಿ ಅದನ್ನು ಒಪ್ಪುತ್ತೇವೆ. ನೀವು ಮಾನ್ಯ ನರೇಂದ್ರ ಮೋದಿಯವರಿಗೆ ಒಂದು ಮಾತು ಹೇಳಿ ರಾಷ್ಟ್ರವ್ಯಾಪ್ತಿ ಪಾನ ನಿಷೇಧ ಮಾಡಿಸಿ. ಸಂವಿಧಾನದಲ್ಲಿ Directive Principles of the State Policy ನಲ್ಲಿ ರಾಜ್ಯಗಳಿಗೆ ಮಾತ್ರ ಅಧಿಕಾರ ಕೊಟ್ಟಿದ್ದಾರೆ. ತಾವೆಲ್ಲಾ ಧರ್ಮ, ಸಂಸ್ಕೃತಿ, ಇದೆಯಲ್ಲಾ ನೀವು ಹೇಳುತ್ತಿರಲ್ಲ ಅದರೊಳಗೆ ಇದು ಕೂಡ ಬರುತ್ತದೆ. ಈ ಸಾರಾಯಿ ನಿಷೇಧ ಮಾಡಿದರೆ ನಿಜವಾಗಿಯೂ ಕೂಡ ಒಳ್ಳೆಯದಾಗುತ್ತದೆ.

(ಗೊಂದಲ)

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಗುಜರಾತ್ ರಾಜ್ಯದ್ದು ಉಲ್ಲೇಖಿಸಿ ಹೇಳಿದಿರಿ ಮತ್ತು ಅದನ್ನು ಹೇಳಿದಿರಿ.

ಶ್ರೀ ಬಿ.ಆರ್.ಪಾಟೀಲ್ : ಗುಜರಾತ್ ರಾಜ್ಯದಲ್ಲಿ ನರೇಂದ್ರ ಮೋದಿಯವರು ತಂದಿಲ್ಲ. ಗುಜರಾತ್‌ನಲ್ಲಿ ಮೊರಾರ್ಜಿ ದೇಸಾಯಿಯವರು ಮುಖ್ಯಮಂತ್ರಿಯಾಗಿದ್ದ ಕಾಲದಿಂದ ಕೂಡ ಗಾಂಧೀಜಿಯವರಿಗೆ ಗೌರವ ಕೊಡಬೇಕೆಂದು ತಂದರು.

(ಗೊಂದಲ)

ಶ್ರೀ ಸಿ.ಟಿ.ರವಿ : ಮಹಾತ್ಮ ಗಾಂಧೀಜಿಯವರ ಆಶಯ ಸಂಪೂರ್ಣ ಪಾನ ನಿಷೇಧ ಆಗಬೇಕೆಂದು ಇತ್ತು. ಮಹಾತ್ಮ ಗಾಂಧೀಜಿಯವರ ವಾರಸುದಾರರು ಯಾರು?

ಶ್ರೀ ಬಿ.ಆರ್.ಪಾಟೀಲ್ : ಮಹಾತ್ಮ ಗಾಂಧೀಜಿಯವರ ವಾರಸುದಾರರು ಕಾಂಗ್ರೆಸ್‌ನವರು.

(ಗೊಂದಲ)

ಶ್ರೀ ಸಿ.ಟಿ.ರವಿ : ಏಕೆ ತರಲಿಲ್ಲ?

ಶ್ರೀ ಬಿ.ಆರ್.ಪಾಟೀಲ್ : ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯ ಬಂದ ಮೇಲೆ ಅಂದು ಐದು ರಾಜ್ಯಗಳಲ್ಲಿ ಇದ್ದಂಥ ಕಾಂಗ್ರೆಸ್ ಸರ್ಕಾರಗಳಿಗೆ, ದಯಮಾಡಿ ಈ ದೇಶಕ್ಕೆ ನ್ಯಾಯ ಕೊಡಬೇಕಾಗಿದ್ದರೆ, ಈ ದೇಶಕ್ಕೆ ಏನಾದರೂ ಒಳ್ಳೆಯದು ಮಾಡಬೇಕಾಗಿದ್ದರೆ, ಮೊದಲು ಪಾನ ನಿಷೇಧಿಸಿ ಎಂದು ಅವರು ಹೇಳಿದರು. ಆದರೆ, ಕಾಂಗ್ರೆಸ್ ನವರು ಅವರ ಮಾತು ಕೇಳಲಿಲ್ಲ. ಬರಿ ಗಾಂಧೀಜಿ ಬೇಕಾಗಿತ್ತು.

(ಗೊಂದಲ)

ಶ್ರೀ ಸಿ.ಟಿ.ರವಿ : ಏಕೆಂದರೆ, ನೀವು ಹೇಳಿದಿರಲ್ಲ commission ವ್ಯವಹಾರ ಆಗಿನಿಂದ ಶುರುವಾಗಿತ್ತು. ಅದಕ್ಕಾಗಿ ಅವರು ಕೊಡಲಿಲ್ಲ.

(ಗೊಂದಲ)

ಶ್ರೀ ಬಿ.ಅರ್.ಪಾಟೀಲ್ : ಗಾಂಧೀಜಿಯವರು ಬೇಕಾಗಿತ್ತು ಗಾಂಧೀಜಿಯವರ ಮಾತುಗಳು ಬೇಕಾಗಿರಲಿಲ್ಲ. ನಮ್ಮ ಸರ್ಕಾರದವರು ಪಾನ ನಿಷೇಧವನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದರೆ, ಮಾನ್ಯ ರಮೇಶ್ ಕುಮಾರ್‌ರವರೇ ನೀವು ಈ ವಿಚಾರದಲ್ಲಿ ನಮ್ಮ ಪರವಾಗಿ ಇಲ್ಲ. ಈ ಪಾನ ನಿಷೇಧವನ್ನು

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಒಂದು ವೇಳೆ ಜಾರಿ ಮಾಡಿದರೆ ಕರ್ನಾಟಕದ ಆರೂವರೆ ಕೋಟಿ ಜನತೆಯಲ್ಲಿನ ಶೇಕಡ 50 ರಷ್ಟಿರುವ ಮಹಿಳೆಯರು ನಿಮ್ಮ ಪರವಾಗಿ ನಿಲ್ಲುತ್ತಾರೆ. ನಿಮಗೆ ಬೆಂಬಲ ಕೊಡುತ್ತಾರೆ.

(ಗೊಂದಲ)

ಶ್ರೀ ಕೆ.ಆರ್.ರಮೇಶ್ ಕುಮಾರ್ : ಈಗ ನೀವು ನನ್ನನ್ನು ಎಬ್ಬಿಸಿದಿರಿ ಈ ಹೊತ್ತು ಸರಿಯಿಲ್ಲ.

ಶ್ರೀ ಬಿ.ಆರ್.ಪಾಟೀಲ್ : ಧೈರ್ಯದಿಂದ ನೀವು ಈ ಪ್ರಯೋಗವನ್ನು ಮಾಡಿ. ಇಡೀ ಹೆಣ್ಣುಮಕ್ಕಳು ನಿಮಗೆ vote ಕೊಡುತ್ತಾರೆ.

(ಗೊಂದಲ)

ಶ್ರೀ ಕೆ.ಆರ್.ರಮೇಶ್ ಕುಮಾರ್ : ಬಿ.ಆರ್.ಪಾಟೀಲ್‌ರೇ ಇಲ್ಲಿ ಸ್ವಲ್ಪ ಕೇಳಿ. ನಾನು ಹೇಳುವುದು ಸರ್ಕಾರವೇ ಪ್ರೋತ್ಸಾಹಿಸಿ ಕುಡಿಯಿರಿ ನಮಗೆ ಆದಾಯ ಬರುತ್ತದೆ ಎಂದು ಹೇಳುವುದು ಬೇರೆ ಮಾತು. ಒಟ್ಟಾರೆ ಪಾನ ನಿಷೇಧ ವಿಷಯ ಚರ್ಚೆ ಮಾಡುವುದಕ್ಕೆ ಈ ಸಮಯವಂತೂ ಅಲ್ಲ, ಆ ವಿಷಯ ಬೇರೆ. ಒಂದು ವೇಳೆ ನಾಣಯ್ಯನವರು ಸದನದಲ್ಲಿ ಇದ್ದಿದ್ದರೆ ಸದನ ನಡೆಯುವುದಕ್ಕೆ ಬಿಡುತ್ತಿರಲಿಲ್ಲ ನನ್ನ time ಎಂದು ಹೇಳಿ ಹೊರಟು ಬಿಡುತ್ತಿದ್ದರು. ನಾನೇನು ಹೇಳುತ್ತೇನೆಂದರೆ, intoxication, ಮನುಷ್ಯನ equilibrium, ಸಮತೋಲನ ಕಳೆದು ಹೋಗುತ್ತದೆ, ಕುಡಿದಾಗ ಮತ್ತು ಏರುತ್ತದೆ, intoxication ಬರಿ alcohol ತೆಗೆದುಕೊಳ್ಳುವುದರಿಂದ ಆಗುತ್ತದೆಯೆ? ವಯಸ್ಸಿನಿಂದ, ಜಾತಿಯ ಬಲದಿಂದ, ಹಣದ ಬಲದಿಂದ, ಅಧಿಕಾರದಿಂದ, ಆಗುತ್ತದೆ. ಅಫೀಮು ಇದೆಯಲ್ಲ ಅದು ಯಾವುದೇ ರೂಪದಲ್ಲಿ ಮನುಷ್ಯನನ್ನು ಪ್ರವೇಶ ಮಾಡಬಹುದು. Liquor consumption ಸರ್ಕಾರವೇ promote ಮಾಡತಕ್ಕಂಥದ್ದು for the sake of revenue is bad per-se ಆದರೆ, ನೀವು ಹೇಳತಕ್ಕಂಥ ಮಡಿವಂತಿಕೆಯ ಪಾನ ನಿಷೇಧ ಇದೆಯಲ್ಲ ಅದು ಸಾಧ್ಯವಿಲ್ಲದ ವಿಚಾರ. Let us be practical. ಈಗ ಏನಾಗುತ್ತಿದೆ ನಾವು ಹೊಸ wine shops ಕೊಟ್ಟಿಲ್ಲ. ಆ wine shops ನವರೆಲ್ಲ ಊರಿನಲ್ಲಿರುವ ಕಿರಾಣಿ ಅಂಗಡಿಗಳಿಗೆಲ್ಲಾ ಕೊಟ್ಟು ಮಾರಿಸುತ್ತಿದ್ದಾರೆ that is wrong.

(ಗೊಂದಲ)

27-03-2017

ಶ್ರೀ ಬಿ.ಆರ್.ಪಾಟೀಲ್ : ಮಾನ್ಯ ನಮ್ಮ ರಮೇಶ್ ಕುಮಾರ್‌ರವರು ಸತ್ಯವನ್ನು ಮುಚ್ಚಿಡುವಂಥ ಪ್ರಯತ್ನ ಮಾಡುತ್ತಿದ್ದಾರೆ. ಬುದ್ಧಿವಂತ ವಕೀಲರು case ಗೆದ್ದೇ ಗೆಲ್ಲುತ್ತಾರೆ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಇಲ್ಲ, ಒಂದು ನಿಮಿಷ ಇಲ್ಲಿ ಕೇಳಿ. You did not listen to me. ನಾನು ಜಿಲ್ಲಾ in-charge Minister ಆದ ಮೇಲೆ you can go to Kolar, 70 ಕಿ.ಮಿ., first thing I have done is ನಮ್ಮ officers ಕರೆಯಿಸಿ, ಬೇರೆ ಎಲ್ಲೂ ಇಲ್ಲ. ಡಾಬಗಳಲ್ಲಿ ಊರುಗಳಲ್ಲಿ excepting licensed bars and wine stores ಬಿಟ್ಟು ಎಲ್ಲೂ sale ಮಾಡಬಾರದು ಎಂದು ಹೇಳಿದೆ. ಸುಮಾರು ಜನ ಹೆಣ್ಣು ಮಕ್ಕಳು ಬಂದು ನನಗೆ ಆರತಿ ಎತ್ತಿದರು. ಕದ್ದು ಕೆಲವು ಕಡೆ ಮಾರುತ್ತಾರೆ. ಇವತ್ತು ಬೆಳಿಗ್ಗೆ 11.00 ಗಂಟೆಗೆ ನಮ್ಮ D.C.(Excise) ಗೆ phone ಮಾಡಿ, ರೀ ಪುನ: ಕೆಲವು ಕಡೆ ಮಾರುತ್ತಿದ್ದಾರಂತೆ ದಯಮಾಡಿ, you please control it ಎಂದು ಹೇಳಿದೆ.

(ಮುಂದು)

27.03.2017 7.50 (52) KS:SSD

ಶ್ರೀ ಕೆ.ಆರ್.ರಮೇಶ್ ಕುಮಾರ್(ಮುಂದು)

ನನ್ನ conviction ಅನ್ನು ನೀವು question ಮಾಡಬೇಡಿ. ನಾನು ನಿಮಗೆ ಏನು ಹೇಳುತ್ತಿದ್ದೇನೆಂದರೆ, Don't take liquor, ಪಾನ ನಿಷೇಧ ಮಾಡಿ ಎಂದು ನಾವು ಹೇಳಿದರೆ ಆಗುವುದಿಲ್ಲ. ಆ atmosphere ಅನ್ನು ನಾವು ಕ್ರಿಯೇಟ್ ಮಾಡಬೇಕಾಗುತ್ತದೆ. Please understand that, ನಮ್ಮ ಖುಷಿಗೆ ನಾವು ಹೇಳಿದರೆ it does not go. ಬೆಂಗಳೂರಿನಲ್ಲಿ 126 clubs ಇವೆ. Elite class ಎಂದು ನಾವು ಯಾರಿಗೆ ಕರೆಯುತ್ತೇವೆ? Slumನಲ್ಲಿ ಯಾರಾದರು ಹೆಣ್ಣು ಮಕ್ಕಳು ಅಥವಾ ಗಂಡು ಮಕ್ಕಳು ಕುಡಿದು ಗಲಾಟೆ ಮಾಡಿಕೊಂಡರೆ ಗುಡಿಸಲುಗಳಲ್ಲಿ ಜಗಳ ಮಾಡುತ್ತಾರೆಂದು ನಾವು ಹೇಳುತ್ತೇವೆ. ಆದರೆ, ಕ್ಲಬ್‌ನಲ್ಲಿ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ದೊಡ್ಡ ದೊಡ್ಡ ವ್ಯಾಪಾರಸ್ಥರು, IAS, IPS officers ಮತ್ತು ಅವರ ಮಕ್ಕಳು, ಮಡದಿಯರು ಹಾಗೂ ನಮ್ಮ ಮಂತ್ರಿಗಳ ಮನೆಯ ಸಂಬಂಧಿಕರೆಲ್ಲರೂ ಸೇರಿಕೊಂಡು ಗ್ಲಾಸ್ ಒಡೆದು ಹಾಕಿಕೊಂಡರೆ socialization ಎಂದು ಹೇಳುತ್ತೇವೆ. ಇವರು ಮಾಡಿದರೆ socialization ಅವರು ಮಾಡಿದರೆ ಗಲಾಟೆ ಆಗುತ್ತದೆ ಅಲ್ಲವೇ? Have the whole thing viewed at a different angle. ನಮಗೆ ಇದರಲ್ಲಿ class concept ಮುಖ್ಯವಾಗಿದೆ. ವರ್ಗದ ಕಲ್ಪನೆ ಬರಬೇಕು, ಇವತ್ತು ವರ್ಗ ಸಂಘರ್ಷ ಆಗಬೇಕಾಗಿದೆ. ಆದರೆ, ವರ್ಗ ಸಂಘರ್ಷದ ಮಾತನ್ನು ನಾವು ಆಡುತ್ತಿಲ್ಲ. ಆದರೆ, ನಾವೆಲ್ಲರೂ ಯುಟೋಪಿಯನ್ ವಿಚಾರ ಮಾತನಾಡುತ್ತಿದ್ದೇವೆ. This is a matter, ಇದರಲ್ಲಿ ಯಾರನ್ನು exploit ಮಾಡುತ್ತಿದ್ದೇವೆಂಬ ಬಗ್ಗೆ ಹೇಳಿ.

ಶ್ರೀ ಬಿ.ಆರ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಮಾತಿನಲ್ಲಿ ಇದರ ಬಗ್ಗೆ ಹೇಳಬೇಕಾದರೆ, ಇವತ್ತು ರಾಜ್ಯದಲ್ಲಿ ಬರಗಾಲ ಇದೆ. ಇವತ್ತಿನದಿವಸ ಹಳ್ಳಿಗಳಲ್ಲಿ ಕುಡಿಯುವುದಕ್ಕೆ ನೀರು ಸಿಗುತ್ತಿಲ್ಲ. ಎಲ್ಲಾ ಕಡೆ ಸಾರಾಯಿ ಸಿಗುತ್ತದೆ. ಇದು ಈ ದೇಶದ ದುರ್ದೈವ. ಜನರಿಗೆ ನೀರು ಬೇಕೆ ಹೊರತು ಸಾರಾಯಿ ಬೇಕಾಗಿಲ್ಲ. ಆದರೆ, ಇವತ್ತಿನದಿವಸ ಸಾರಾಯಿ ಮಾತ್ರ ಸಿಗುತ್ತದೆ ಆದರೆ, ಕುಡಿಯುವುದಕ್ಕೆ ನೀರು ಸಿಗುವುದಿಲ್ಲ. ಆದ್ದರಿಂದ, ಯಾವುದಕ್ಕೆ ಆದ್ಯತೆ ಹೆಚ್ಚಿದೆ ಹೇಳಿ?

ಅಧ್ಯಕ್ಷರು:- ಮಾನ್ಯ ಬಿ.ಆರ್.ಪಾಟೀಲ್‌ರವರೆ, ಈಗ ಕೋರಂಗೆ ಅವಶ್ಯಕತೆ ಇರುವಷ್ಟು ಸದಸ್ಯರು ಇಲ್ಲ. ಆದ್ದರಿಂದ, ಬೇಗ ಮುಗಿಸಿ.

ಶ್ರೀ ಬಿ.ಆರ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವ ಮಧ್ಯೆ ಬೇರೆಯವರು ಎದ್ದು ಮಾತನಾಡುತ್ತಿದ್ದಾರೆ. ಆದ್ದರಿಂದ, ತಡವಾಗುತ್ತಿದೆ.

ಅಧ್ಯಕ್ಷರು:- ಆಯಿತು. ಮಾತನಾಡಿ.

ಶ್ರೀ ಬಿ.ಆರ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ಲಿವರ್ ಕ್ಯಾನ್ಸರ್ ಚಿಕಿತ್ಸೆ ಪಡೆದುಕೊಳ್ಳುವುದಕ್ಕಾಗಿ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಸಹಾಯಧನ ಕೊಡಿಸಿ ಎಂದು ಕೇಳುವುದಕ್ಕೆ ಜನರು ನಮ್ಮ ಹತ್ತಿರ ಬರುತ್ತಾರೆ. ಕುಡಿದು ಕುಡಿದು ಲಿವರ್ ಡ್ಯಾಮೇಜ್ ಆಗಿರುತ್ತದೆ. ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಸಹಾಯಧನ ಕೊಡಿ ಎಂದು ನಾವು ಬಹಳಷ್ಟು ಜನರಿಗೆ ಪತ್ರವನ್ನು ಕೊಟ್ಟಿರುತ್ತೇವೆ. ಆದ್ದರಿಂದ, ಪಾನ ನಿಷೇಧ ಮಾಡುವುದರ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚನೆ ಮಾಡಬೇಕು. ಈ

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಒಂದು ಕೆಲಸ ಮಾಡಿದರೆ ಮಾತ್ರ ನೀವು ಮುಂದಿನ ಸಾರಿ ಅಧಿಕಾರಕ್ಕೆ ಬರುತ್ತೀರಿ ಇಲ್ಲದಿದ್ದರೆ ಕಷ್ಟವಾಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಇಷ್ಟೆಲ್ಲ ದುಡ್ಡು ಕೊಟ್ಟರು ಏಕೆ ಮೇಲಕ್ಕೆ ಬರುತ್ತಿಲ್ಲವೆಂದು ಮತ್ತು ಏಕೆ ಖರ್ಚು ಮಾಡುತ್ತಿಲ್ಲವೆಂದು ಅನೇಕ ಜನ ಮಾನ್ಯ ಸದಸ್ಯರು ಬೊಟ್ಟು ಮಾಡಿ ತೋರಿಸಿದರು. ಆದರೆ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಮೂಲ ಸಮಸ್ಯೆಯೇ ಬೇರೆ ಇದೆ. ಆ ಪ್ರದೇಶದಲ್ಲಿ ಅತ್ಯಂತ ಹಿಂದುಳಿದ ವರ್ಗದವರು, ಮುಸಲ್ಮಾರು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಲ್ಲಿ ಇವತ್ತಿಗೂ ಕೂಡ ಬಹುತೇಕ ಜನರಿಗೆ ಅಕ್ಷರ ಜ್ಞಾನ ಇಲ್ಲ. ನಮ್ಮ ಕಾಲದಿಂದಲೇ ಅಲ್ಲಿ ಕನ್ನಡ ಶಾಲೆಗಳು ಪ್ರಾರಂಭವಾದವು. ನಮ್ಮ ಭಾಗದಲ್ಲಿ ಹೈಸ್ಕೂಲ್ ಶಾಲೆಗಳು ಮತ್ತು ಕಾಲೇಜುಗಳನ್ನು ಹೊಸದಾಗಿ ಪ್ರಾರಂಭ ಮಾಡಿ ಎಂದು ಸರ್ಕಾರ ಬಂದ ಮೇಲೆ ನಾವು ನಿರಂತರವಾಗಿ ಬೇಡಿಕೆ ಇಡುತ್ತಿದ್ದೇವೆ. 371(ಜೆ) ಕಲಂ ಪ್ರಕಾರ ಆ ಭಾಗದವರಿಗೆ ಲಾಭ ಸಿಗಬೇಕಾದರೆ ಅಲ್ಲಿ ಮೊದಲು ಹೈಸ್ಕೂಲ್, ಜೂನಿಯರ್ ಕಾಲೇಜು, ಡಿಗ್ರಿ ಕಾಲೇಜುಗಳನ್ನು ಪ್ರಾರಂಭ ಮಾಡಿದರೆ ಈ ಮೂಲಕ 371(ಜೆ) ಕಲಂ ಪ್ರಕಾರ ಅದರ ಲಾಭ ನಮ್ಮ ಜನರಿಗೆ ಆಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅಲ್ಲಿ ಸ್ಕೂಲ್ ಮತ್ತು ಕಾಲೇಜುಗಳನ್ನು ಪ್ರಾರಂಭ ಮಾಡದೆ 371(ಜೆ) ಕಲಂ ಪ್ರಕಾರ ಅದರ ಲಾಭವನ್ನು ನೀವು ತೆಗೆದುಕೊಳ್ಳಿ ಎಂದರೆ ಹೇಗೆ? ಈ ರೀತಿ ಆದಾಗ ಶಿಕ್ಷಣದಲ್ಲಿ ಮತ್ತು ಸರ್ಕಾರಿ ನೌಕರಿಯಲ್ಲಿ ಲಾಭ ಸಿಗುವುದಿಲ್ಲ. ಈಗ ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಬಸವರಾಜ್ ರಾಯರೆಡ್ಡಿರವರು ಬಂದರು. ಅವರ ಗಮನಕ್ಕೆ ತರುವುದೇನೆಂದರೆ, ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ maximum ಅತ್ಯಂತ ಜಾಸ್ತಿ ಅಲ್ಪಸಂಖ್ಯಾತರು ಇರುವ ಪ್ರದೇಶವಾಗಿದೆ. ಹಾಗೆಯೇ ಆ ಭಾಗದಲ್ಲಿ ಅತಿ ಹೆಚ್ಚು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಜನಾಂಗದವರು ಇರತಕ್ಕಂಥ ಪ್ರದೇಶವಾಗಿದೆ. ಆ ಪ್ರದೇಶದಲ್ಲಿ ನಮ್ಮ ಈಗಿನ ಶೈಕ್ಷಣಿಕ ಮಟ್ಟದ ಬಗ್ಗೆ ಹೇಳುವುದಾದರೆ, ಇವತ್ತು ಮಹಿಳೆಯರಲ್ಲಿ ಶೇಕಡ 54 ರಷ್ಟು ಮಾತ್ರ ಸಾಕ್ಷರತೆ ಇದ್ದು ಆದ್ದರಿಂದ, ಆ ಭಾಗದ ಹಿಂದುಳಿಕೆಯನ್ನು ತೆಗೆದು ಹಾಕಬೇಕಾದರೆ ಸರ್ಕಾರದವರು ಆದಷ್ಟು ಹೆಚ್ಚು ಹೈಸ್ಕೂಲ್, ಜೂನಿಯರ್ ಮತ್ತು ಡಿಗ್ರಿ ಕಾಲೇಜುಗಳನ್ನು ತೆಗೆದರೆ ಮಾತ್ರ 371(ಜೆ) ಕಲಂ ನ ಲಾಭ ನಮಗೆ ಸಿಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

27-03-2017

ಅಧ್ಯಕ್ಷರು:- ಶಿಕ್ಷಣ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಈ ಎಲ್ಲಾ ವಿಷಯ ಹೇಳಿ. ಈಗ ಕೇವಲ ಬಜೆಟ್ ಮೇಲೆ ಮಾತ್ರ ಮಾತನಾಡಿ. ತಾವು ಸೀನಿಯರ್ ಸದಸ್ಯರಾಗಿದ್ದೀರಿ. ಈ ಎಲ್ಲ ವಿಷಯವನ್ನು ಡಿಮಾಂಡ್ ಬಗ್ಗೆ ಮಾತನಾಡುವಂಥ ಸಂದರ್ಭದಲ್ಲಿ ಮಾತನಾಡಿ.

ಶ್ರೀ ಬಿ.ಆರ್.ಪಾಟೀಲ್:- ನಮ್ಮ ಕ್ಷೇತ್ರಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಭೀಮ ನದಿಯಿಂದ ನೀರನ್ನು ತಂದು ಅಮರ್ಜಾ ನದಿಗೆ ಹಾಕುವಂಥ ಒಂದು ಯೋಜನೆಯನ್ನು ಮಂಜೂರು ಮಾಡಿದ್ದಾರೆ. ಅದಕ್ಕೆ ಅವರಿಗೆ ಅಭಿನಂದಿಸುತ್ತೇನೆ. ಹಾಗೆಯೇ ಆಳಂದದಲ್ಲಿ ಅಂತರ್ಜಲ ಹೆಚ್ಚು ಮಾಡುವುದಕ್ಕೆ ಒಂದು ವಿಶೇಷವಾದಂಥ ಯೋಜನೆಯನ್ನು ಮಂಜೂರು ಮಾಡಿರುವುದಕ್ಕೆ ಅವರಿಗೆ ಈ ಸಂದರ್ಭದಲ್ಲಿ ವಂದಿಸಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಆಯಿತು. ಮಾನ್ಯ ಎಂ.ಕೆ.ಸೋಮಶೇಖರ್‌ರವರೆ, ತಾವು ಮಾತನಾಡಿ.

ಶ್ರೀ ಸಿ.ಎನ್.ಬಾಲಕೃಷ್ಣ:- ಮಾನ್ಯ ಸಭಾಧ್ಯಕ್ಷರೆ, ನಮಗೂ ಸಹ ದಯಮಾಡಿ ಅವಕಾಶ ಕೊಡಬೇಕು.

ಅಧ್ಯಕ್ಷರು:- ಎಲ್ಲರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಎನ್.ಹೆಚ್.ಕೋನರೆಡ್ಡಿ:- ಮಾನ್ಯ ಅಧ್ಯಕ್ಷರೆ, ಕಾಂಗ್ರೆಸ್ ಪಕ್ಷದ ಸದಸ್ಯರನ್ನು ಕೇಳಿಯೇ ಬಜೆಟ್ ಮಾಡಲಾಗಿರುತ್ತದೆ. ಆದ್ದರಿಂದ, ನಮ್ಮ ಕಡೆಯ ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಚರ್ಚೆಯೆ ಮುಗಿದು ಹೋಗುತ್ತದೆ.

ಶ್ರೀ ಎಂ.ಕೆ.ಸೋಮಶೇಖರ್(ಕೃಷ್ಣರಾಜ):- ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಈ ವರ್ಷ ಕೊಟ್ಟಿರುವ ಬಜೆಟ್ ಇಡೀ ದೇಶದಲ್ಲಿಯೇ ಒಂದು ಮಾದರಿ ಮತ್ತು ವಿಶೇಷವಾದಂಥ ಹಾಗೂ ಎಲ್ಲರಿಗೂ ಅನುಕೂಲವಾಗುವಂಥ ಒಂದು ಬಜೆಟ್ ಅನ್ನು ಕೊಟ್ಟಿದ್ದಾರೆ. ಇದನ್ನು ದೇಶದ ಹೆಚ್ಚು ಜನ ಗಮನಿಸಿದ್ದಾರೆ ಹಾಗೆಯೇ ವೀಕ್ಷಿಸಿದ್ದಾರೆ. ಮತ್ತೆ ಎಲ್ಲರೂ ಮೆಚ್ಚಿಕೊಳ್ಳುವಂಥ ಒಂದು ಬಜೆಟ್ ಅನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿದ್ದಾರೆ. ಇಲ್ಲಿರತಕ್ಕಂಥ ಆದಾಯದಲ್ಲಿ ಎಲ್ಲಾ ಜನರಿಗೆ ಎಷ್ಟೆಲ್ಲಾ ಕೊಡುವುದಕ್ಕೆ ಸಾಧ್ಯತೆ ಇದೆಯೋ ಅಷ್ಟನ್ನು ಅವರೆಲ್ಲರಿಗೂ ಕೊಟ್ಟಿದ್ದಾರೆ. ಅದರಲ್ಲಿ ಮುಖ್ಯವಾಗಿ

27-03-2017

ಅರ್ಹರಿಗೆ ಅಂದರೆ, ನೊಂದ ಜನ, ಕೆಳವರ್ಗದ ಜನ ಮತ್ತು ಬಹಳಷ್ಟು ವರ್ಷಗಳಿಂದ ತುಳಿತಕ್ಕೆ ಒಳಗಾದ ಜನರಿಗೆ ಹೆಚ್ಚು ಅವಕಾಶವನ್ನು ಕಲ್ಪಿಸತಕ್ಕಂಥ ಕೆಲಸ ಆಗಿದೆ. ಅಂದರೆ, ನಿಜವಾದ ಅರ್ಹ ಜನರಿಗೆ ಕೊಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ರೈತರ ನೋವಿನ ಬಗ್ಗೆ ಮತ್ತು ರೈತರ ಆತ್ಮಹತ್ಯೆ ಬಗ್ಗೆ ಈಗಾಗಲೇ ಸಾಕಷ್ಟು ಜನ ಮಾತನಾಡಿದ್ದಾರೆ. ಆದರೆ, ಈ ನಾಡಿನಲ್ಲಿ ಯಾರೂ ಕೂಡ ಹಸಿದಿರಬಾರದೆಂದು ಈ ಸರ್ಕಾರ ಬಂದ ಮೇಲೆ ಅನ್ನಭಾಗ್ಯ ಯೋಜನೆಯನ್ನು ತಂದು ಎಲ್ಲರಿಗೂ ಅಕ್ಕಿ ಕೊಡತಕ್ಕಂಥ ಕೆಲಸ ಮಾಡಿದೆ. ಈ ಸಾರಿ ಬಜೆಟ್‌ನಲ್ಲಿ ಒಂದು ಕುಟುಂಬದ ಒಬ್ಬ ವ್ಯಕ್ತಿಗೆ 7 ಕೆ.ಜಿ. ಅಕ್ಕಿ ಮತ್ತು ಒಂದು ಕೆ.ಜಿ. ಬೇಳೆಯನ್ನು ಸೇರಿಸಿ ಕೊಡುವ ಬಹಳ ಅನುಕೂಲವಾದಂಥ ಕೆಲಸ ಮಾಡಿದ್ದಾರೆ. ಮತ್ತೆ ಅಪಘಾತಕ್ಕೆ ಒಳಗಾದವರಿಗೆ ತುರ್ತು ಚಿಕಿತ್ಸೆ ಕೊಡಬೇಕೆಂಬ ಉದ್ದೇಶದಿಂದ ರಾಜ್ಯ ರಸ್ತೆ ಸುರಕ್ಷಿತ ಪ್ರಾಧಿಕಾರ ರಚನೆ ಮಾಡುವುದಕ್ಕಾಗಿ ಬಜೆಟ್‌ನಲ್ಲಿ 5 ಕೋಟಿ ರೂಪಾಯಿ ಇಟ್ಟಿದ್ದಾರೆ. ಆದ್ದರಿಂದ, ಮಾನ್ಯ ಮುಖ್ಯ ಮಂತ್ರಿಗಳಿಗೆ ಅಭಿನಂದನೆಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಆದರೆ, ಇದನ್ನು ರಾಜ್ಯದಲ್ಲಿ ಒಂದು ಕಡೆ ಮಾಡಿದರೆ ಸಾಕಾಗುವುದಿಲ್ಲ. ಎಲ್ಲಾ ಜಿಲ್ಲಾ ಮಟ್ಟದಲ್ಲಿಯೂ ಕೂಡ ರಾಜ್ಯ ರಸ್ತೆ ಸುರಕ್ಷಿತ ಪ್ರಾಧಿಕಾರ ರಚಿಸಿ ಅಲ್ಲಿಗೂ ಕೂಡ ಹಣ ಇಡಬೇಕಾಗುತ್ತದೆ ಹಾಗೆಯೇ ಅಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ ಪೊಲೀಸ್ ಇಲಾಖೆ ಮತ್ತು ಆರ್.ಟಿ.ಓ. ಹಾಗೂ PWD ಇಲಾಖೆಗಳ ಮುಖ್ಯಸ್ಥರು ಮತ್ತು ಒಬ್ಬ ಟ್ರಾಫಿಕ್ ಇಂಜಿನಿಯರ್ ಹಾಗೂ ಅಲ್ಲಿ ಕಾರ್ಪೋರೇಷನ್ ಇದ್ದರೆ ಅದರ ಮುಖ್ಯಸ್ಥರೆಲ್ಲರನ್ನು ಸೇರಿಸಿ ಒಂದು ಸಮಿತಿ ಮಾಡಿ ಅಪಘಾತಗಳು ಏಕೆ ಆಗುತ್ತವೆಂದು ಮತ್ತು ಇದಕ್ಕೆ ಕಾರಣಗಳೇನು ಹಾಗೂ ರಸ್ತೆಗಳಲ್ಲಿ ಅವೈಜ್ಞಾನಿಕವಾಗಿ ಇರತಕ್ಕಂಥದ್ದು ಏನಿದೆ ಎಂದು ಮತ್ತು ಅದನ್ನು ಸರಿಪಡಿಸತಕ್ಕಂತಹ ಕೆಲಸ ಆಗಬೇಕು. ಆದ್ದರಿಂದ, ಈ ಪ್ರಾಧಿಕಾರಗಳನ್ನು ಎಲ್ಲ ಜಿಲ್ಲಾಮಟ್ಟದಲ್ಲಿ ಮಾಡಿದರೆ ಅಪಘಾತಗಳು ಸ್ವಲ್ಪಮಟ್ಟಿಗಾದರೂ ಕಂಟ್ರೋಲ್ ಮಾಡತಕ್ಕಂಥ ಕೆಲಸಗಳು ಆಗುತ್ತವೆ. ಈಗಾಗಲೇ ಸಾಕಷ್ಟು ವಿಚಾರಗಳನ್ನು ಮಾನ್ಯ ಸದಸ್ಯರೆಲ್ಲರೂ ಹೇಳಿದ್ದಾರೆ. ಆದ್ದರಿಂದ, ನಾನು ಆ ಬಗ್ಗೆ ಡೀಟೈಲ್ ಆಗಿ ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲಾ ವಿಚಾರಗಳ ಬಗ್ಗೆ ಹೇಳುತ್ತಾ ಹೋದರೆ ಅದು ಸಾಕಷ್ಟು ಉದ್ದ ಇದೆ. ಆದ್ದರಿಂದ, ಪ್ರತಿಯೊಂದು ವಿಷಯ ಹೇಳುವುದಕ್ಕೆ ಹೋಗುತ್ತಿಲ್ಲ. ಕುಡಿತದ ಬಗ್ಗೆ ಮಾನ್ಯ ಬಿ.ಆರ್.ಪಾಟೀಲ್‌ರವರು ಒಂದು ಮಾತನ್ನು ಈಗಾಗಲೇ ಹೇಳಿದ್ದಾರೆ ಅದು ನಿಜ ಆಗಿದೆ ಅದನ್ನು ನಾನೂ ಸಹ ಒಪ್ಪುತ್ತೇನೆ. ಇವತ್ತಿನದಿವಸ ಇದು ಬೇಕೆಂದು ಒಂದು ವರ್ಗದವರು ಹೇಳುತ್ತಾರೆ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಆದರೆ, ಹೆಚ್ಚಿನ ಜನರು  ಅಂದರೆ, ಈ ದೇಶದಲ್ಲಿ  ಆರ್ಥಿಕವಾಗಿ ದುರ್ಬಲರಾಗಿರುವವರು ಮತ್ತು ಬಹಳಷ್ಟು ಕೆಳಗಡೆ ಇರುವವರು  ಇದರಿಂದ ಪ್ರತಿನಿತ್ಯ ಬಹಳಷ್ಟು ನೋವಿಗೆ ಸಿಲುಕಿಕೊಂಡಿದ್ದಾರೆ. ಇವತ್ತಿನದಿವಸ ಅನೇಕ ಮನೆಯಲ್ಲಿ ಹೆಣ್ಣುಮಕ್ಕಳು ಬಹಳ ನೋವಿನಿಂದ ನರಳುತ್ತಿದ್ದಾರೆ. ಇವತ್ತಿನದಿವಸ ಅಕ್ಷರ ಜ್ಞಾನವನ್ನು ಹೊಂದಿಲ್ಲದೆ ಇರುವವರಲ್ಲಿ ಹಿಂದುಳಿದ ಜನರು ಮತ್ತು ದಲಿತರು, ಪೌರಕಾರ್ಮಿಕರು ಹೆಚ್ಚಾಗಿದ್ದಾರೆ. ಇವರೆಲ್ಲರೂ ಕೂಡ ಈ  ಕುಡಿತದ ದಾಸ್ಯಕ್ಕೆ  ಬಲಿಯಾಗಿ ಬಹಳಷ್ಟು ನೋವುಗಳನ್ನು ಅನುಭವಿಸತಕ್ಕಂಥ ಪರಿಸ್ಥಿತಿಗಳಾಗಿವೆ. ಇವರುಗಳು ವಿದ್ಯಾವಂತರಾಗಿ ಅವರ  standard, ಮಟ್ಟ ಮೇಲಿದ್ದರೆ ಅವರು ಯಾವುದೊಂದು ಸಮಯದಲ್ಲಿ  ಲಿಕ್ಕರ್ ಅನ್ನು ಮಿತಿಯಾಗಿ ಸೇವನೆ ಮಾಡಿ ಅದಕ್ಕೆ ಸರಿಯಾಗಿ ಆಹಾರವನ್ನು ಸೇವನೆ ಮಾಡಿ ಅವರ ಆರೋಗ್ಯವನ್ನು ಉತ್ತಮವಾಗಿ ಬೆಳಸಿಕೊಳ್ಳುವಂಥ ಕೆಲಸವನ್ನು ಮಾಡುತ್ತಾರೆ. ಆದರೆ, ಅವಿದ್ಯಾವಂತರು ಮತ್ತು  ಬಹಳ ಕೆಳವರ್ಗದಲ್ಲಿರತಕ್ಕಂಥ  ಹೆಚ್ಚಿನ ಜನರಿಗೆ  ಹೇಗೆ ಕುಡಿಯಬೇಕೆಂದು ಮತ್ತು ಏನು ಮಾಡಬೇಕೆಂದೂ ಸಹ ಗೊತ್ತಿಲ್ಲ. ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ದುಡಿದ ಹಣವನ್ನು ಕುಡಿತಕ್ಕೆ ಹಾಕಿ ಮನೆಯಲ್ಲಿ ಹೆಂಡತಿ ಮಕ್ಕಳಿಗೆ ಹಣವನ್ನು ಕೊಡದೆ ಇಡೀ ಕುಟುಂಬ ಇವತ್ತು ಬೀದಿ ಪಾಲಾಗುತ್ತಿದೆ. ಈ ಒಂದು ಕೆಳವರ್ಗದ ಜನರ ತೂಕ 35 ರಿಂದ 40 ಕೆ.ಜಿ.ಗಿಂತ ಜಾಸ್ತಿ ಇರುವುದಿಲ್ಲ. ಇವತ್ತಿನದಿವಸ ಹಾಡಿಯಲ್ಲಿ ಮತ್ತು ಕಾಡಿನಲ್ಲಿರುವ ಟ್ರೈಬಲ್ ಜನಾಂಗದವರು ಇದರಿಂದ ಬಹಳಷ್ಟು ನೋವಿಗೆ ಒಳಪಟ್ಟಿದ್ದಾರೆ. ಈ ಎಲ್ಲಾ ವರ್ಗದ ಜನರು  ಕುಡಿತಕ್ಕೆ ದಾಸ್ಯರಾಗಿರುವುದರಿಂದ ಇವತ್ತಿನದಿವಸ ಪುರುಷರ ಸಂಖ್ಯೆ ಕಡಿಮೆ ಆಗುತ್ತಿದೆ.  ಇದು ನಿಜಕ್ಕೂ ಬಹಳ ದು:ಖದ ಸಂಗತಿ ಆಗಿದೆ. ಆದ್ದರಿಂದ, ಪಾನ ನಿಷೇಧ ಮಾಡಬೇಕೆಂದು  ಮಾನ್ಯ ಮುಖ್ಯ ಮಂತ್ರಿಯವರಲ್ಲಿ  ಒತ್ತಾಯ ಮಾಡುತ್ತೇನೆ. ಹಾಗೆಯೇ ಪ್ರತಿ ಕುಟುಂಬದಲ್ಲಿ ಮನೆಯ ಯಜಮಾನ ದುಡಿಯುವುದನ್ನು ನಿಲ್ಲಿಸಿರುತ್ತಾನೆ ಮತ್ತೆ ಅಲ್ಪಸ್ವಲ್ಪ ದುಡಿದ ಹಣವನ್ನು ಕುಡಿತಕ್ಕೆ ಹಾಕಿರುತ್ತಾನೆ. ಆ ಮನೆಯಲ್ಲಿ ತಾಯಂದಿರು ಮತ್ತು ಹೆಂಡತಿಯರು ದುಡಿಯುತ್ತಾರೆ. ಅವರ ಮೇಲೂ ಕೂಡ  ಬೆಳಿಗ್ಗೆ ರಾತ್ರಿ ಜಗಳ ಮಾಡುತ್ತಾರೆ. ಇದರಿಂದ ಅವರ ಮಕ್ಕಳ ಮೇಲೆ ಕೂಡ ಕೆಟ್ಟ ಪರಿಣಾಮ ಬೀರುವುದರ ಜೊತೆಗೆ ಆ ಮಕ್ಕಳ ವಿದ್ಯಾಭ್ಯಾಸ ಕೂಡ ಹಾಳಾಗುತ್ತದೆ. ಯಾವ ಜನಾಂಗದ ಅಭಿವೃದ್ಧಿ ಆಗಬೇಕೆಂದು ಸರ್ಕಾರ ಬಯಸುತ್ತದೆಯೋ ಆ  ಕುಟಂಬದ ಅಭಿವೃದ್ಧಿ ಈ ಕುಡಿತದಿಂದ ಹಾಳಾಗುತ್ತಿದೆ. ಈಗಾಗಲೇ ಬಿಹಾರ ರಾಜ್ಯದಲ್ಲಿ  ಪಾನ ನಿಷೇಧ ಮಾಡಿದ್ದಾರೆ. ಅದೇ ರೀತಿಯಾಗಿ ಇಲ್ಲಿಯೂ ಕೂಡ ಪಾನ ನಿಷೇಧ

27-03-2017

ಮಾಡಿದರೆ ಒಳ್ಳೆಯದಾಗುತ್ತದೆ. ಇವತ್ತಿನದಿವಸ ಕೆಳ ವರ್ಗದ ಜನರ ಅಭಿವೃದ್ಧಿಗೋಸ್ಕರ ಸಾವಿರಾರು ಕೋಟಿ ರೂಪಾಯಿಗಳನ್ನು ಸರ್ಕಾರ ಖರ್ಚು ಮಾಡುತ್ತಿದೆ. ಎಸ್‌ಸಿ/ಎಸ್‌ಟಿ ಜನಾಂಗದವರ ಅಭಿವೃದ್ಧಿಗೋಸ್ಕರ ಕಳೆದ ವರ್ಷ 19,300 ಕೋಟಿ ಮತ್ತು ಈ ವರ್ಷ 26,000 ಕೋಟಿ ಖರ್ಚು ಮಾಡಲಾಗುತ್ತಿದೆ. ಕುಡಿತದಿಂದ ಸರ್ಕಾರಕ್ಕೆ 16,000 ಕೋಟಿ ಆದಾಯ ಬರುತ್ತಿದೆ. ಮುಂದಿನ ವರ್ಷ ಸುಮಾರು 19,000 ಕೋಟಿ ರೂಪಾಯಿ ಆದಾಯ ಬರಬಹುದು. ಆದರೆ, ಇದಕ್ಕಿಂತ ಹೆಚ್ಚಾಗಿ ಆ ಜನರು ಮೇಲಕ್ಕೆ ಬರಬೇಕೆಂದು ಬಿಪಿಎಲ್ ಕಾರ್ಡ್ ಅನ್ನು ಕೊಡುತ್ತಿದ್ದೇವೆ. ಇದು ಕೆಲವು ಅರ್ಹರಿಗೆ ಸಿಗುತ್ತದೆ. ಆದರೆ, ಇದರಲ್ಲಿ 40%ನಷ್ಟು ಅನರ್ಹರು ಸಹ ಕಾರ್ಡ್‌ಗಳನ್ನು ಪಡೆದುಕೊಂಡಿರುತ್ತಾರೆ. ಯಾರು ನಿಜವಾದ ಅರ್ಹರು ಇದ್ದಾರೆಯೋ ಅವರಿಗೆ ಬಿಪಿಎಲ್ ಕಾರ್ಡ್ ಸಿಗುತ್ತದೆ ಆದರೆ, ಕೆಲವರು ಮೋಸ ಮಾಡಿ ಪಡೆದುಕೊಂಡರೂ ಪರವಾಗಿಲ್ಲ ಎಂದು ನಾವು ತಿಳಿದುಕೊಳ್ಳುತ್ತೇವೆ. ಅದೇ ರೀತಿಯಾಗಿ ಈ ಕುಡಿತದಿಂದ ನಿಜವಾದ ಕುಟುಂಬಗಳು ಸಹ ಹಾಳಾಗುತ್ತಿವೆ. ಇದರಿಂದ ಬೇರೆಯವರಿಗೆ ತೊಂದರೆ ಆದರೂ ಚಿಂತೆ ಇಲ್ಲ. ಇತವತ್ತು ಪಾನ ನಿಷೇಧವನ್ನು ಜಾರಿಗೆ ತರತಕ್ಕಂಥ ಕೆಲಸವನ್ನು ಮಾಡಬೇಕು. ಇದರಿಂದ ಸಾಕಷ್ಟು ಅಪಘಾತಗಳು ಮತ್ತು ಕ್ರೈಂಗಳು ಹಾಗೂ ಅನೇಕ ಘಟನೆಗಳು ಇದರಿಂದ ಆಗುತ್ತಿವೆ. ಪಾನ ನಿಷೇಧ ಮಾಡಿದರೆ ಸಾಮಾಜಿಕ ಸುಭದ್ರತೆ ಕೂಡ ಬರುವುದಕ್ಕೆ ಅವಕಾಶ ಆಗುತ್ತದೆ. ಇವತ್ತಿನದಿವಸ ಇದನ್ನು ಒಂದೇ ಬಾರಿ ತೆಗೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಇದನ್ನು ಹಂತ ಹಂತವಾಗಿ ತೆಗೆಯಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಮುಂದಿನ ಚುನಾವಣೆಯ ಪ್ರಣಾಳಿಕೆಯಲ್ಲಿ ಸೇರಿಸಿ ಹಂತ ಹಂತವಾಗಿ ಪಾನ ನಿಷೇಧವನ್ನು ಜಾರಿಗೆ ತರುತ್ತೇನೆ ಎಂದು ಹೇಳತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ. ಮನೆ ಕಟ್ಟುವ ವಿಚಾರದ ಬಗ್ಗೆ ಹೇಳುವುದಾದರೆ, ಮೊದಲು 1.20 ಲಕ್ಷ ಇದ್ದಂಥದ್ದನ್ನು ಈಗ 1.50 ಲಕ್ಷ ರೂಪಾಯಿ ಮಾಡಿದ್ದಾರೆ. ಎಸ್‌ಸಿ/ಎಸ್‌ಟಿ ಜನಾಂಗದವರಿಗೆ 1.8 ಲಕ್ಷ ರೂಪಾಯಿಯಿಂದ 2.00 ಲಕ್ಷ ರೂಪಾಯಿವರೆಗೆ ಮಾಡಿದ್ದಾರೆ. ಈ ಹಣ ಮತ್ತು ಕೇಂದ್ರ ಸರ್ಕಾರ ಕೊಡುವ 1.5 ಲಕ್ಷ ರೂಪಾಯಿಗಳೆರಡನ್ನೂ ಸೇರಿಸಿದರೆ ಮನೆಗಳನ್ನು ಸಂಪೂರ್ಣ ಮಾಡುವುದಕ್ಕೆ ಆಗುವುದಿಲ್ಲ. ಅದರಲ್ಲಿಯೂ ನಗರ ಪ್ರದೇಶಗಳಲ್ಲಿ ground+2 ಮನೆಗಳನ್ನು ಕಟ್ಟುವುದಕ್ಕೆ ಸುಮಾರು 4.5 ಯಿಂದ 5.00 ಲಕ್ಷ ರೂಪಾಯಿ ಬೇಕಾಗುತ್ತದೆ.

(ಮುಂದು)

27-03-2017

27-3-2017/8-00/53/YBG-VR

ಶ್ರೀ ಎಂ.ಕೆ.ಸೋಮಶೇಖರ್(ಮುಂದು)

ಅದಕ್ಕೆ ಇವೆರಡು ಈ ಹಣದ ಜೊತೆಗೆ ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಬೇಕಾಗಿದೆ. ಈಗ ಸಾಲ ತೆಗೆದುಕೊಳ್ಳುವುದಕ್ಕೆ ರಾಜೀವ್ ಗಾಂಧಿ ವಸತಿ ನಿಗಮದವರನ್ನು ಕೇಳಿದರೆ ಅವಕಾಶ ಇಲ್ಲವೆಂದು ಹೇಳುತ್ತಾರೆ. ಈ ಎರಡು ಅನುದಾನಗಳನ್ನು ಸೇರಿಸಿ ನೀವು ಕೊಡುವ 2.00 ಲಕ್ಷ ರೂ.ಗಳು, ಕೇಂದ್ರದ 1.50 ಲಕ್ಷ ರೂ.ಗಳು, 3.50 ಲಕ್ಷ ರೂ.ಗಳಾಗುತ್ತದೆ, ಇದರ ಜೊತೆಗೆ ಇನ್ನು 1.50 ಲಕ್ಷ ರೂ.ಗಳನ್ನು ಬ್ಯಾಂಕಿನಿಂದ ಸಾಲ ತೆಗೆದುಕೊಂಡರೆ ಮನೆ ಸಂಪೂರ್ಣ ಮಾಡಲಿಕ್ಕೆ ಅವಕಾಶವಾಗುತ್ತದೆ. ಆ ಬ್ಯಾಂಕ್ ಸಾಲ ತೆಗೆದುಕೊಳ್ಳುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಗಿರಿಜನರಿಗೆ ಸಾಕಷ್ಟು ಅನುದಾನಗಳನ್ನು ಈಗ ಕೊಡುತ್ತಿದ್ದೀರಿ. ಕೊಡುತ್ತಿರುವುದು ಏನಾಗಿದೆ ಎಂದರೆ, ಅದು ಅವರಿಗೆ ನೇರವಾಗಿ ತಲುಪುತ್ತಿಲ್ಲ. ಕೆಲವು ಮಧ್ಯವರ್ತಿಗಳು ಅದನ್ನು ಬಳಸಿಕೊಂಡು ಅವರಿಗೆ ತಲುಪದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಅರಣ್ಯ ಇಲಾಖೆಯವರು ಅಲ್ಲೊಂದು ರಸ್ತೆಯನ್ನು ಮಾಡುವುದಕ್ಕೂ ಬಿಡುತ್ತಿಲ್ಲ. ಆ ರಸ್ತೆ ಅಭಿವೃದ್ಧಿ ಮಾಡುವುದಕ್ಕೆ ಬಿಡುವುದಿಲ್ಲ. ಮನೆ ಕಟ್ಟಿಕೊಳ್ಳುವುದಕ್ಕೆ ಬಿಡುವುದಿಲ್ಲ. ನಾವು ಕೊಡುತ್ತೇವೆ, ಅದು ಅನುಷ್ಠಾನಕ್ಕೆ ಬರುವುದಕ್ಕೆ ಅವಕಾಶಗಳು ಆಗುತ್ತಿಲ್ಲ. ಗಿರಿಜನರಿಗೆ ಏನು ಅವಕಾಶ ಮಾಡುತ್ತಿದ್ದೀರಿ, ಅವರಿಗೆ ನಿಜವಾಗಲೂ ತಲುಪತಕ್ಕಂಥ ಕೆಲಸಗಳನ್ನು ಮಾಡಬೇಕಾದರೆ, ಅವರಿಗೆ ಅವಕಾಶ ಕೊಡಿಸಬೇಕು ಎನ್ನತಕ್ಕಂಥ ಹೇಳುತ್ತಿದ್ದೇನೆ. ಬೆಂಗಳೂರು ಮಾಲಿನ್ಯ ರಹಿತ ಮಾಡಬೇಕೆಂದು 150 ಎಲೆಕ್ಟ್ರಿಕ್ ಬಸ್ಸುಗಳನ್ನು ಹಾಗೂ ಮೈಸೂರಿಗೆ 50 ಎಲೆಕ್ಟ್ರಿಕಲ್ ಬಸ್ಸುಗಳನ್ನು ಕೊಟ್ಟಿರುತ್ತೀರಿ. ಇನ್ನು ಹೆಚ್ಚು ಬಸ್ಸುಗಳನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ. 10,000 ಸಾವಿರ ಮಾಲಿನ್ಯ ರಹಿತ ಆಟೋಗಳಿಗೆ 30 ಸಾವಿರ ರೂ.ಗಳ ಸಬ್ಸಿಡಿ ಕೊಡುವುದಕ್ಕೆ 30 ಕೋಟಿ ರೂ.ಗಳನ್ನು ಇಟ್ಟಿರುತ್ತಾರೆ. ಮಾಲಿನ್ಯ ರಹಿತಕ್ಕೆ ಇನ್ನು ಹೆಚ್ಚು ಮಾಡಬೇಕು, ಇಲ್ಲದಿದ್ದರೆ ಈ ಮಾಲಿನ್ಯ ಇನ್ನು ಹೆಚ್ಚಾಗುತ್ತದೆ, ಮುಂದಿನ ದಿನಗಳಲ್ಲಿ ಆದಷ್ಟು ಮಾಲಿನ್ಯವನ್ನು ತಪ್ಪಿಸತಕ್ಕಂಥ ಎಲೆಕ್ಟ್ರಿಕ್ ವೆಹಿಕಲ್‌ಗಳು ಬರುವುದಕ್ಕೆ ಅವಕಾಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. KSIC ಗೆ 5 ಕೋಟಿ ರೂ.ಗಳ ಅನುದಾನವನ್ನು ಕೊಟ್ಟಿರುತ್ತಾರೆ. ಇನ್ನೊಂದು ಘಟಕ ಪ್ರಾರಂಭವಾಗುವುದಕ್ಕೆ 24 ಕೊಟಿ ರೂ.ಗಳು

ಬೇಕಾಗಿದೆ. ಇನ್ನು ಹೆಚ್ಚಿನ ಅನುದಾನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**: ಪ್ರಕಟಣೆ :**

ಅಧ್ಯಕ್ಷರು, ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ **2016ನೇ ಸಾಲಿನ " ಕರ್ನಾಟಕ ಭೂ ಸುಧಾರಣೆಗಳ (ತದ್ದುಪಡಿ) ವಿಧೇಯಕ"ವನ್ನು** ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ, ಕರ್ನಾಟಕ ವಿಧಾನ ಪರಿಷತ್ತು ಇಂದು, ದಿನಾಂಕ: 27.03.2017 ರಂದು ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

ಶ್ರೀ ಜೆ.ಟಿ.ಪಾಟೀಲ್(ಬೀಳಗಿ): ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು 2017-18ನೇ ಸಾಲಿನ ಬಜೆಟ್ ಅನ್ನು ಅತ್ಯಂತ ತೃಪ್ತಿದಾಯಕವಾಗಿ ಪ್ರತಿಯೊಂದು ಸಮಾಜದವರು ಶ್ಲಾಘನೆ ಮಾಡುವ ರೀತಿಯಲ್ಲಿ ಮಾಡಿದ್ದಾರೆ. ಅದಕ್ಕಾಗಿ ವೈಯಕ್ತಿಕವಾಗಿ ನಾನು ಉತ್ತಮವಾದ ಒಂದು ಬಜೆಟ್ ಅನ್ನು ನೀಡಿರುವುದಕ್ಕೆ ನಾನು ಧನ್ಯವಾದಗಳನ್ನು ಹೇಳುತ್ತೇನೆ. ಅದನ್ನು ವಿಶ್ಲೇಷಣೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಈ ಸಂದರ್ಭದಲ್ಲಿ ನಾನು ನನ್ನ ಕ್ಷೇತ್ರ ಹಾಗೂ ಬಾಗಲಕೋಟೆ ಜಿಲ್ಲೆಯೊಳಗೆ ಆಲಮಟ್ಟಿ ಜಲಾಶಯದೊಳಗೆ ಹೆಚ್ಚಿನ ಗ್ರಾಮಗಳನ್ನು ಹಾಗೂ ಭೂಮಿಯನ್ನು ಕಳೆದುಕೊಳ್ಳುವಂಥ ಜಿಲ್ಲೆ. ಇವತ್ತಿನವರೆಗೂ ಸಹಿತ 524 ಅಡಿಗೆ ಆಗುತ್ತದೋ ಇಲ್ಲವೋ ಎನ್ನುವಂಥ ಒಂದು ದೊಡ್ಡ ಸಮಸ್ಯೆಯಲ್ಲಿ ನಾನು ಸಿಲುಕಿಕೊಂಡಿದ್ದೇವೆ. ಈ ಸದನದ ಮೂಲಕ ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. 2017-18ನೇ ಸಾಲಿನಲ್ಲಿ 524 ಅಡಿಗೆ ಎತ್ತರಿಸುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ ಇಲ್ಲವೋ ಎನ್ನುವಂಥ ಒಂದು ಸಂದೇಶ ಆ ಸಂತ್ರಸ್ಥರಿಗೆ ಹೋಗಬೇಕಾಗಿದೆ. ಇದರ ಜೊತೆಗೆ ಕಳೆದ 15 ವರ್ಷಗಳಿಂದ ಪುನರ್ವಸತಿ ಕೇಂದ್ರಗಳಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ನಡೆಯದೇ ಇರುವುದರಿಂದ ನಮ್ಮ ಸರ್ಕಾರ ಬಂದ ನಂತರ ಸಹಿತ 4 ವರ್ಷಗಳಲ್ಲಿ 196 ಕೋಟಿ ರೂ.ಗಳ ಬಜೆಟ್ ಅನ್ನು ಬಿಡುಗಡೆ ಮಾಡಿದ್ದಾರೆ, ಆದರೆ ಕೆಲಸಗಳು ಪ್ರಾರಂಭವಾಗಿಲ್ಲ. ಆ ಪುನರ್ವಸತಿ ಕೇಂದ್ರಗಳ ಸ್ಥಿತಿ ಮತ್ತೇ 20 ವರ್ಷಗಳ ಹಿಂದೆ ಹೋಗಿದೆ. ಇದು ಅತ್ಯಂತ ದು:ಖದಾಯಕ ಸಂಗತಿ ಎನ್ನುವಂಥ

ಮಾತನ್ನು ಹೇಳುತ್ತೇನೆ. ಇದರ ಜೊತೆಗೆ ಸಂತ್ರಸ್ಥರಿಗೆ ಭೂಮಿಯ ಬೆಲೆ ನಿಗದಿ ಆಗಬೇಕಾಗಿದೆ. ಇನ್ನುವರೆಗೆ ಸಹಿತ ಭೂಮಿಯ ಬೆಲೆ ನಿರ್ಧಾರವಾಗಿಲ್ಲ. ಕೆಲವು ಕಡೆ guidance value ಈಗಾಗಲೇ ಸಿದ್ದು ನ್ಯಾಮಗೌಡರು ಮಾತನಾಡಿದಂತೆ ಹೆಚ್ಚು ಕಡಿಮೆ ಇದೆ. ಈಗಿನ average ತೆಗೆದುಕೊಂಡರೆ ಒಂದು ಎಕರೆಗೆ 8 ಲಕ್ಷ ರೂ.ಗಳಿಗಿಂತ ಹೆಚ್ಚು ಸಿಗುವುದಕ್ಕೆ ಸಾಧ್ಯವಿಲ್ಲ. ಅಲ್ಲಿರುವ ನಮ್ಮದು ಮತ್ತು ಸಂತ್ರಸ್ಥರ ಬೇಡಿಕೆ ಕನಿಷ್ಟ ಒಂದು ಎಕರೆಯ ಒಣ ಬೇಸಾಯಕ್ಕೆ 25 ಲಕ್ಷ ರೂ.ಗಳನ್ನು ಕೊಡಬೇಕು. ನೀರಾವರಿಗೆ ಒಂದು ಎಕರೆಗೆ 35-40 ಲಕ್ಷ ರೂ.ಗಳನ್ನು ಕೊಟ್ಟಾಗ ಮಾತ್ರ ಮಾರ್ಕೆಟ್‌ನ ಒಂದು ಬೆಲೆ ಸಿಕ್ಕಂತಾಗುತ್ತದೆ. ಅದಕ್ಕಿಂತಲೂ ನೀವು ಕಡಿಮೆ ಕೊಟ್ಟರೆ ಅಲ್ಲಿರುವ ಸಂತ್ರಸ್ಥರು ಒಪ್ಪಲಿಕ್ಕೆ ತಯಾರಿಲ್ಲ. ಅದಕ್ಕಾಗಿ ದಯಮಾಡಿ ಇಲ್ಲಿಯವರೆಗೆ 4 ವರ್ಷವಾಯಿತು, ನಮ್ಮ ಮುಖ್ಯಮಂತ್ರಿಗಳಾಗಲಿ, ನೀರಾವರಿ ಮಂತ್ರಿಗಳಾಗಲಿ, ಕಂದಾಯ ಮಂತ್ರಿಗಳಾಗಲಿ ಒಂದೂ ಸಭೆಯನ್ನು ಕರೆದಿಲ್ಲ. ಸದನದ ಮುಖಾಂತರ ನಾನು ಒತ್ತಾಯವನ್ನು ಮಾಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಬೇಗನೆ ಜನಪ್ರತಿನಿಧಿಗಳನ್ನು, ಆ ಸಂತ್ರಸ್ಥರ ಮುಖಂಡರನ್ನು ಕರೆಯಿಸಿ ಅವರ 31 ಬೇಡಿಕೆಗಳು ಇವೆ. ಹಿಂದಿನ ಸರ್ಕಾರದಲ್ಲಿ ಹಲವಾರು ಸಭೆಗಳನ್ನು ಮಾಡಿ ಸಮಸ್ಯೆಗಳನ್ನು ಬಗೆಹರಿಸಿದ್ದರು. ಇದನ್ನು ಏನಾದರೂ ಮಾಡದೇ ಹೋದರೆ ನಮ್ಮ ಸರ್ಕಾರದ ಮೇಲೆ ಒಂದು ದೊಡ್ಡ blame ಬರುತ್ತದೆ. ಅದಕ್ಕಾಗಿ ಮುಖ್ಯಮಂತ್ರಿಗಳಿಗೆ ನಾನು ಒತ್ತಾಯ ಮಾಡುತ್ತೇನೆ. ನಾನು ಇನ್ನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಅವಕಾಶ ಮಾಡಿಕೊಟ್ಟ ತಮಗೆ ಮತ್ತೊಮ್ಮೆ ಧನ್ಯವಾದಗಳನ್ನು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ರಘು ಮೂರ್ತಿಯವರೆ, ನೀವು ಮಾತನಾಡಿ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಬರೀ ಕಾಂಗ್ರೆಸ್‌ನವರಿಗೆ ಕೊಡುತ್ತಿದ್ದೀರಿ.

ಅಧ್ಯಕ್ಷರು: ಎಲ್ಲರಿಗೂ ಕೊಡುತ್ತಾ ಬಂದಿರುತ್ತೇನೆ, ಕೋನರೆಡ್ಡಿಯವರೆ, ನಿಮಗೂ ಅವಕಾಶ ಕೊಡುತ್ತೇನೆ.

ತಿದ್ದುಪಡಿಯಾಗದ / Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

27-03-2017

ಶ್ರೀ ಟಿ.ರಘೂಮೂರ್ತಿ(ಚಳ್ಳಕೆರೆ): ಮಾನ್ಯ ಅಧ್ಯಕ್ಷರೆ, ರಾಜ್ಯದ ಜನಪ್ರೀಯ ಮುಖ್ಯಮಂತ್ರಿಗಳು, ಸಾಮಾಜಿಕ ಹರಿಕಾರರು ಆದಾಂಥ ಮಾನ್ಯ ಸಿದ್ದರಾಮಯ್ಯನವರು 2017-18ನೇ ಸಾಲಿನ ಮುಂಗಡ ಪತ್ರದ ಮೇಲೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಕಳೆದ 4 ದಶಕಗಳಿಂದ ಸಾರ್ವಜನಿಕ ಸೇವೆಯಲ್ಲಿರುವಂಥ ಮಾನ್ಯ ಮುಖ್ಯಮಂತ್ರಿಗಳು ಈ ಸಾಲಿನ ಬಜೆಟ್ ಮಂಡನೆಯ ಮೂಲಕ ತಮ್ಮ ಅಪಾರವಾದ ಅನುಭವ, ಸಾಮಾಜಿಕ ಕಳಕಳಿ, ಕಾಳಜಿ ಮತ್ತು ಮುತ್ಸದ್ಧಿತನವನ್ನು ಮೆರೆದಿದ್ದಾರೆಂದರೆ ಅತೀಶಯೋಕ್ತಿ ಅಲ್ಲ. ನನಗೆ ಬಹಳಷ್ಟು ಸಮಯ ಕಡಿಮೆ ಇರುವುದರಿಂದ ಮೊಟ್ಟಮೊದಲನೆಯದಾಗಿ ನಾನು 2013-14ನೇ ಸಾಲಿನಲ್ಲಿ ಅನುಸೂಚಿತ ಜಾತಿ ಪಂಗಡಕ್ಕೆ ಒಂದು ಕಾಯಿದೆಯನ್ನು ತಂದರು. ಅದಕ್ಕಾಗಿ ಸಮಾಜ ಕಲ್ಯಾಣ ಸಚಿವರು ಮತ್ತು ಮುಖ್ಯಮಂತ್ರಿಗಳು ಮತ್ತು ಈ ಸದನ ಬೆಳಗಾವಿಯಲ್ಲಿ ಅಧಿವೇಶನ ಆಯಿತು, ಅದಕ್ಕೆ ನಾನು ವಿಶೇಷವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅದೇ ರೀತಿಯಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸಾಲಿನ ಮುಂಗಡ ಪತ್ರದಲ್ಲಿ ಬಹಳಷ್ಟು ಯೋಜನೆಗಳನ್ನು ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ, ಶಿಕ್ಷಣ ಇಲಾಖೆ ಇರಬಹುದು, ಆರೋಗ್ಯ ಇಲಾಖೆ ಇರಬಹುದು, ಕಂದಾಯ ಇಲಾಖೆ ಇರಬಹುದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ಯ ಇಲಾಖೆ ಇರಬಹುದು. ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ, ಎಲ್ಲಾ ಜಾತಿ ಜನಾಂಗದವರಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಅವರಿಗೆ ಏನು ಬಲ ನೀಡಬೇಕು ಅದನ್ನು ಮಾಡಿದ್ದಾರೆ. ವಿಶೇಷವಾಗಿ ನಾನು ನನ್ನ ಕ್ಷೇತ್ರ ಹಾಗೂ ಜಿಲ್ಲೆಗೆ ಸಂಬಂಧಿಸಿದ ವಿಷಯಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಾವು ಬರಗಾಲವನ್ನು ನೋಡುತ್ತಿದ್ದೇವೆ, ಬರಗಾಲ ಬಂದ ತಕ್ಷಣ ನೀರಿನ ಸಮಸ್ಯೆ ಕಾಣುವುದು. ಅಂಥ ಒಂದು ನೀರಿನ ಸಮಸ್ಯೆಯನ್ನು ಚಿತ್ರದುರ್ಗ ಜಿಲ್ಲೆಯವರು ಚಳ್ಳಕೆರೆ ಸೇರಿ 6 ತಾಲ್ಲೂಕುಗಳವರು ಅನುಭವಿಸುತ್ತಿದ್ದೇವೆ. ಇದಕ್ಕೆ ಪೂರಕವಾಗಿ 2014-15ನೇ ಸಾಲಿನಲ್ಲಿ ಬಜೆಟ್‌ನಲ್ಲಿ ಮಂಡನೆ ಆಗಿತ್ತು. ಮೊಳಕಾಲ್ಮೂರು, ಚಳ್ಳಕೆರೆ ಮತ್ತು ಪಾವಗಡಕ್ಕೆ ತುಂಗಭದ್ರಾ ಹಿನ್ನೀರಿನಿಂದ ನೀರನ್ನು ಕೊಡಬೇಕೆಂದು ಅದಕ್ಕೆ ಸುಮಾರು 1800 ಕೋಟಿ ರೂ.ಗಳ ಅಂದಾಜು ವೆಚ್ಚ ಎಂದು ಹೇಳಿದ್ದರು. ಆದರೆ ಅದು ಇದುವರೆಗೂ ಕಾರ್ಯಗತವಾಗಿಲ್ಲ. ನಾವು ಸುಮಾರು 3-4 ತಿಂಗಳುಗಳ ಹಿಂದೆ ಸಮಾಜ ಕಲ್ಯಾಣ ಸಚಿವರ ಒಂದು ಅಧ್ಯಕ್ಷತೆಯಲ್ಲಿ ಎಲ್ಲಾ Principal Secretary ಗಳ ಒಂದು ಸಭೆಯಲ್ಲಿ ಈ ಮೂರು ತಾಲ್ಲೂಕುಗಳು ಎಸ್‌ಸಿ:ಎಸ್‌ಟಿ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ಕ್ಷೇತ್ರಗಳಿಗೆ ಸಂಬಂಧಿಸುತ್ತವೆಂದು ಹೇಳಿ more than 50% population ಇದೆ ಎಂದು ಹೇಳಿ ಸಮಾಜ ಕಲ್ಯಾಣ ಇಲಾಖೆಯಿಂದ 50% ಅನುದಾನ ಕೊಡಬೇಕೆಂದು ಈಗಾಗಲೇ ತೀರ್ಮಾನ ಆಗಿದೆ. ಅದಕ್ಕೆ ಅನುಗುಣವಾಗಿ ಆ ಯೋಜನೆಯನ್ನು ಖಂಡಿತವಾಗಿ ಈ ವರ್ಷವಾದರೂ ಅನುಷ್ಠಾನಗೊಳಿಸಿದರೆ ಇಂತಹ ಬರಗಾಲ ಬಂದರೂ ಕೂಡ ನಮಗೆ ಆ ಒಂದು ಸಮಸ್ಯೆ ಇರುವುದಿಲ್ಲವೆಂದು ಹೇಳಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಇನ್ನೊಂದು ಮುಖ್ಯವಾಗಿ ಹೇಳಬೇಕೆಂದರೆ, ನಮ್ಮ ಸರ್ಕಾರ ಬಜೆಟ್‌ನಲ್ಲಿ 49 ತಾಲ್ಲೂಕುಗಳನ್ನು ಮಂಡನೆ ಮಾಡಿದ್ದೇವೆ. ಅದನ್ನು ಖಂಡಿತವಾಗಿ ನಾನು ಸ್ವಾಗತವನ್ನು ಮಾಡುತ್ತೇನೆ. ನಮ್ಮ ಜಿಲ್ಲೆಯಲ್ಲಿ 4 ತಾಲ್ಲೂಕುಗಳು ಆಗಬೇಕಾಗಿತ್ತು. ನನ್ನ ಕ್ಷೇತ್ರದ ಪರಶಾಂಪುರ ಮತ್ತು ತುರನೂರು ಮಾಡಬೇಕಾಗಿತ್ತು. ಆದರೆ ನಾನು ಈ ಸಂದರ್ಭದಲ್ಲಿ ತುರನೂರು ತಾಲ್ಲೂಕು ಮಾಡಬೇಕೆಂದು ಕೇಳುವುದಕ್ಕೆ ಹೋಗುವುದಿಲ್ಲ. ಆದರೆ ಪರಶಾಂಪುರ ಯಾವ ರೀತಿ ಅಪರಾಧಿಗೆ ಶಿಕ್ಷೆ ಆಗಲಿಲ್ಲವೆಂದರೂ ಕೂಡ ನಿರಪರಾಧಿಗೆ ಶಿಕ್ಷೆ ಆಗಬಾರದೆಂದು ಬಯಸುತ್ತೇನೆ. ಆ ರೀತಿ ಇಲ್ಲಿ ಇರತಕ್ಕಂಥದ್ದು ಪರಶಾಂಪುರ ಹೋಬಳಿ. ಏಕೆಂದರೆ, ಗಡಿ ಪ್ರದೇಶದಲ್ಲಿರತಕ್ಕಂಥದ್ದು ಮತ್ತು ಎಲ್ಲಾ ರೀತಿಯಲ್ಲಿ ತಾಲ್ಲೂಕು ಮಾಡುವುದಕ್ಕೆ ಯೋಗ್ಯ ಇರತಕ್ಕಂಥದ್ದು. ಮತ್ತು ಎಂ.ಬಿ.ಪ್ರಕಾಶ್‌ರವರ ವರದಿಯಲ್ಲಿರತಕ್ಕಂಥದ್ದು. ಇದಕ್ಕೆ ಪೂರಕವಾಗಿ ಕಳೆದ ಸಾರಿ ನಾನು ಒಂದು ಪ್ರಶ್ನೆಯನ್ನು ಹಾಕಿದ್ದೆ. ಆ ಪ್ರಶ್ನೆ ಸಂಖ್ಯೆ 1724, ಅದರಲ್ಲಿ ನನ್ನ ತಾಲ್ಲೂಕಿನ ಬಗ್ಗೆ ನೀವು ಯಾವಾಗ ನೀವು ಪರಶಾಂಪುರ ಹೋಬಳಿಯನ್ನು ತಾಲ್ಲೂಕು ಮಾಡುತ್ತೀರೆಂದು ಕೇಳಿದಾಗ ಸರ್ಕಾರದಿಂದ ಆಗಿನ ಕಂದಾಯ ಸಚಿವರು ನನಗೆ ಉತ್ತರವನ್ನು ಕೊಟ್ಟಿದ್ದಾರೆ. ಹೊಸ ತಾಲ್ಲೂಕುಗಳ ರಚನೆ ಬಗ್ಗೆ 4 ಸಮಿತಿಗಳು ನೀಡಿರುವ ವರದಿಯ ಆಧಾರದ ಮೇಲೆ 2013-14ನೇ ಸಾಲಿನ ಆಯವ್ಯಯದಲ್ಲಿ 43 ತಾಲ್ಲೂಕುಗಳನ್ನು ರಚಿಸುವುದಾಗಿ ಘೋಷಣೆ ಮಾಡಲಾಗಿರುತ್ತದೆ. ಇದರಲ್ಲಿ ಪರಶಾಂಪುರ ಹೋಬಳಿ ಪ್ರದೇಶವು ಸೇರಿರುತ್ತದೆಂದು ಹೇಳಿರುತ್ತಾರೆ. ಹಾಗಾಗಿ ಈ ಸದನದಲ್ಲಿ ಹೇಳಿರತಕ್ಕಂಥದ್ದು, ಈ ಸಂದರ್ಭದಲ್ಲಿ 43ರ ತಾಲ್ಲೂಕುಗಳ ಬದಲಾಗಿ 49 ತಾಲ್ಲೂಕುಗಳ ಘೋಷಣೆ ಮಾಡಿದ್ದಾರೆ. ಅದಕ್ಕಾಗಿ ಈ ತಾಲ್ಲೂಕನ್ನು ಮಾಡಿಯೇ ತೀರಬೇಕೆಂದು ಹೇಳಿ ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

(ಮುಂದು)

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

27.3.2017/8.10(54)/UD.VR

ಶ್ರೀ ಟಿ.ರಘುಮೂರ್ತಿ (ಮುಂದು. . .)

ಇನ್ನೊಂದು ನಮ್ಮ ಚಳ್ಳಕೆರೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ತಾಲ್ಲೂಕಿನಲ್ಲಿ ಬೆಳಗಟ್ಟ ಗ್ರಾಮದಲ್ಲಿ ಜೂನಿಯರ್ ಕಾಲೇಜು 2014-15ರಲ್ಲಿ ಮಂಜೂರಾಗಿತ್ತು. ಅದನ್ನು ಕಾರಣಾಂತರಗಳಿಂದ ಹಾಸನ ಜಿಲ್ಲೆಯಿಂದ ಚಿತ್ರದುರ್ಗ ಜಿಲ್ಲೆಗೆ ವರ್ಗಾಯಿಸಿದರು. ಅದನ್ನು ತಡೆಹಿಡಿದರು. ಅದರ ನಂತರ ಮಾನ್ಯ ಮುಖ್ಯಮಂತ್ರಿಗಳು ಮತ್ತು ಆಗಿನ ಶಿಕ್ಷಣ ಸಚಿವರು ಸೇರಿ ಇದೊಂದು ವಿಶೇಷ ಪ್ರಕರಣ ಎಂದು ಅದನ್ನು ಮಂಜೂರುಗೊಳಿಸಿದರು. ಅದು ಬಂದ ನಂತರ ಹಿರಿಯ ಅಧಿಕಾರಿಗಳು ಮತ್ತು ಈಗಿನ ಶಿಕ್ಷಣ ಸಚಿವರಿಗೆ ಅದರ ಬಗ್ಗೆ ಇತ್ತೀಚಿನ ಮಾಹಿತಿಯನ್ನು ಕೊಟ್ಟಿದ್ದೇನೆ. ಖಂಡಿತವಾಗಿಯೂ ನಮಗೆ ಈಗಾಗಲೇ ಮಂಜೂರಾಗಿದೆ ಎಂದು ತಿಳಿದು ಅದನ್ನು inauguration ಮಾಡಿದ್ದೇವೆ. ಅಂದರೆ ಪ್ರಾರಂಭ ವ್ಯವಸ್ಥೆ ಮಾಡಿದ್ದೇವೆ. ವಿದ್ಯಾರ್ಥಿಗಳೂ ಕೂಡ ನಮಗೆ ಜೂನಿಯರ್ ಕಾಲೇಜು ಆಯಿತು ಎಂದು, ಬಹಳಷ್ಟು ಜನರು ಆಸೆಪಟ್ಟಿದ್ದಾರೆ. ಆದರೆ ಬೇರೆ ಬೇರೆ ವಿಷಯಗಳನ್ನು ಹಾಕಿ ಅದನ್ನು ಯಾವ ರೀತಿ ಮಾಡಬಾರದು ಎನ್ನುವುದಕ್ಕೆ ಅಂಕಿ-ಅಂಶಗಳನ್ನು ತರಿಸುತ್ತಾರೆಯೇ ವಿನ: ಅದನ್ನು ಮಾಡಬೇಕೆಂದು ಮಾಡುತ್ತಿಲ್ಲ. ಹಾಗಾಗಿ ನಮ್ಮ ಶಿಕ್ಷಣ ಸಚಿವರು ಇಲ್ಲೇ ಇದ್ದಾರೆ. ಖಂಡಿತವಾಗಿಯೂ ಅವರು ಅದನ್ನು ನೆರವೇರಿಸಬೇಕೆಂದು ಕೇಳುತ್ತಾ, ನಾನು ಇನ್ನೂ ಬಹಳಷ್ಟು ವಿಷಯಗಳನ್ನು ಮಾತನಾಡುವುದು ಇದ್ದರೂ ಕೂಡ ಅನಿವಾರ್ಯ ಕಾರಣಗಳಿಂದ ನನ್ನ ಮಾತನ್ನು ಮೊಟಕುಗೊಳಿಸುತ್ತೇನೆ ಮತ್ತೆ ತಮಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ನನಗೆ ಖಂಡಿತವಾಗಿಯೂ ನೀವು ತಾಲ್ಲೂಕು ಅನ್ನು ಘೋಷಣೆ ಮಾಡಲೇಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಧನ್ಯವಾದಗಳು.

ಅಧ್ಯಕ್ಷರು: ಮಾನ್ಯ ಸಿ.ಟಿ.ರವಿಯವರು ಸೀಟಿನಲ್ಲಿ ಇಲ್ಲ. ಮಾನ್ಯ ಲಕ್ಷ್ಮಣ ಸವದಿಯವರು ಸೀಟಿನಲ್ಲಿ ಇಲ್ಲ. ಮಾನ್ಯ ಸಿ.ಎನ್.ಬಾಲಕೃಷ್ಣರವರು ಮಾತನಾಡುವುದು.

ಶ್ರೀ ಸಿ.ಎನ್.ಬಾಲಕೃಷ್ಣ (ಶ್ರವಣಬೆಳಗೊಳ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು 1,86,000 ಕೋಟಿ ರೂ.ಗಳ ಬಜೆಟ್ ಅನ್ನು 30,072 ಕೋಟಿ ರೂ.ಗಳ ಸಾಲದೊಂದಿಗೆ 12ನೇ ಬಾರಿ ದಾಖಲೆ ಬಜೆಟ್ ಅನ್ನು ಮಂಡನೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಸ್ವಾಗತವನ್ನು ಬಯಸುತ್ತಾ, ಕೃಷಿ ಕ್ಷೇತ್ರಕ್ಕೆ ಸುಮಾರು 5,080 ಕೋಟಿ ರೂ.ಗಳನ್ನು ನಿಗದಿಪಡಿಸಿದ್ದಾರೆ. ಈ ಒಂದು ಸರ್ಕಾರ ಸಾವಯವ ಕೃಷಿಗೆ ಹೆಚ್ಚಿನ ಆದ್ಯತೆ ನೀಡುವ ನಿಟ್ಟಿನಲ್ಲಿ ಕಳೆದ ಸಾಲುಗಳಿಂದಲೂ ಕೂಡ ರೈತರ ಪರವಾದಂತಹ

ತಿದ್ದುಪಡಿಯಾಗದ /uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಕಾರ್ಯಕ್ರಮವನ್ನು ರೂಪಿಸುವುದಕ್ಕೆ ಮಾನ್ಯ ಕೃಷಿ ಸಚಿವರು ತಿಳಿಸಿದ್ದರು. ಈ ಹಿಂದಿನ ಬಿಜೆಪಿ ಸರ್ಕಾರ ಕೂಡ ಸಾವಯವ ಕೃಷಿ ಬಗ್ಗೆ ಹಿಂದಿನ ಬಜೆಟ್‌ಗಳಲ್ಲಿಯೂ ಕೂಡ ಕಾರ್ಯಕ್ರಮಗಳನ್ನು ರೂಪಿಸುತ್ತೇವೆ ಎಂದು ಹೇಳಿದ್ದರು. ಆದರೆ ರಾಜ್ಯದಲ್ಲಿ ಸಾವಯವ ಕೃಷಿಕ ರೈತರ ಹಿತವನ್ನು ಕಾಪಾಡುವಲ್ಲಿ ಅವಕಾಶ ಆಗಿಲ್ಲ. ಏಕೆಂದರೆ ಇವತ್ತು ರಸಗೊಬ್ಬರಗಳನ್ನು avoid ಮಾಡಬೇಕೆಂದು ನಾವು ಚರ್ಚೆ ಮಾಡುತ್ತೇವೆ. ಆದರೆ ಸಾವಯವ ಕೃಷಿ ರೈತರಿಗೆ ಪ್ರೋತ್ಸಾಹ ನೀಡಿ ಅವರು ಬೆಳೆದಂತಹ ಬೆಳೆಗಳಿಗೆ ಪ್ರತ್ಯೇಕವಾದಂತಹ ಮಾರುಕಟ್ಟೆಯನ್ನು ಒದಗಿಸಿ ರೈತರು ಬೆಳೆದಂತಹ ಬೆಳೆಗಳಿಗೆ ಹೆಚ್ಚಿನ ದರವನ್ನು ನಿಗದಿಪಡಿಸುವುದಕ್ಕೆ ಸರ್ಕಾರ ಅವಕಾಶ ಮಾಡಿಲ್ಲ. ಅದನ್ನು ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಜೊತೆಗೆ ಇವತ್ತು ರೈತರು ಆತ್ಮಹತ್ಯೆ ಹಾದಿಯನ್ನು ಹಿಡಿದಿದ್ದಾರೆ. 1,500 ಕ್ಕಿಂತಲೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆ ಆದ ನಂತರ ಅವರಿಗೆ 'ಆತ್ಮಹತ್ಯೆ ಭಾಗ್ಯ' ಕೊಡುವುದಕ್ಕಿಂಥ ಅವರು ಆತ್ಮಹತ್ಯೆ ಮಾಡಿಕೊಳ್ಳದ ರೀತಿ ಅವರಿಗೆ ಪೂರಕವಾದಂತಹ ಮಾರುಕಟ್ಟೆ, ಬೆಳೆದಂತಹ ಬೆಳೆಗಳಿಗೆ ಸೂಕ್ತವಾದ ಬೆಲೆಗಳನ್ನು ಕೊಡಿಸುವುದಕ್ಕೆ ಸರ್ಕಾರ ಅವಕಾಶ ಮಾಡಿಕೊಡಬೇಕು.

ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದ್ದಂತೆ ನಮ್ಮ ಭಾಗದಲ್ಲಿ ಅತಿ ಹೆಚ್ಚು ತೆಂಗನ್ನು ಬೆಳೆಯುತ್ತೇವೆ. ಇವತ್ತು ತೀವ್ರತರವಾದ ಬರಗಾಲದಿಂದ 80% ತೆಂಗು ಸರ್ವನಾಶವಾಗಿದೆ. ನಾವು ಮಕ್ಕಳನ್ನು ಯಾವ ರೀತಿ ಬೆಳೆಸಲು ಪೋಷಣೆ ಮಾಡುತ್ತೇವೆ, ಅದೇ ರೀತಿ ಇವತ್ತು ತೆಂಗನ್ನೂ ಕೂಡ ಬೆಳೆಸುವುದಕ್ಕೆ ಅಷ್ಟೇ ಪೋಷಣೆ ಮಾಡಬೇಕಾಗುತ್ತದೆ. ನಾವು ನೆಟ್ಟಂತಹ ತೆಂಗಿನ ಮರಗಳು ಇವತ್ತು ನಮ್ಮ ಮುಂದೆ ಸುಳಿ ಹೂಳು ಹೋಗುವಂತಹ ಸ್ಥಿತಿ ನಿರ್ಮಾಣವಾಗಿದೆ. ಇವತ್ತು ತೆಂಗಿನ ಮರಗಳು ಸರ್ವನಾಶ ಆಗುತ್ತಿರುವಂತಹ ಸಂದರ್ಭದಲ್ಲಿ ಸರ್ಕಾರ ಒಂದು ತೆಂಗಿನ ಮರಕ್ಕೆ 20,000 ರೂಪಾಯಿಯಾದರೂ ಪರಿಹಾರ ಘೋಷಣೆ ಮಾಡಬೇಕು. ಜೊತೆಗೆ ಕೊಬ್ಬರಿ ಬೆಳೆಗಾರರ ಹಿತವನ್ನು ಕಾಪಾಡುವಂತೆ ಕಳೆದ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ, ತೋಟಗಾರಿಕೆ ಸಚಿವರಿಗೆ ಮನವಿ ಮಾಡಿದ್ದರೂ ಕೂಡ ಅದಕ್ಕೆ ಬೆಂಬಲ ಬೆಲೆಯನ್ನು ಹೆಚ್ಚಿನ ರೀತಿಯಲ್ಲಿ ನಿಗದಿ ಮಾಡಲಿಕ್ಕೆ ಆಗಿಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಯವರು ರಾಜ್ಯದಲ್ಲಿ ಬಜೆಟ್‌ಅನ್ನು ಮಂಡನೆ ಮಾಡುವಂತಹ ದಿವಸ ಇಡೀ ರಾಜ್ಯದ ರೈತರು ಟಿ.ವಿ ಮುಂದೆ ಕುಳಿತುಕೊಂಡು ಸಾಲವನ್ನು ಮನ್ನಾ ಮಾಡುತ್ತಾರೆ ಎನ್ನುವ ಒಂದು ನಿರೀಕ್ಷೆಯಲ್ಲಿದ್ದರು. ಇವತ್ತು ರೈತ ಬೆಳೆದಂತಹ ಬೆಳೆಗಳು ಕೈಗೆ ಸೇರಿಲ್ಲ. ಜೊತೆಗೆ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ತೀವ್ರತರವಾದ ಬರಗಾಲದಲ್ಲಿ ಬಿತ್ತನೆ ಕೂಡ ಮಾಡುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಅವರು ಬಜೆಟ್ ಮೇಲೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ರೈತರ ಪರವಾಗಿ ಒಂದು ಚಿಂತನೆ ಇಟ್ಟುಕೊಂಡು ಸಾಲ ಮನ್ನಾ ಮಾಡುವ ದಿಟ್ಟ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತಾ, ಇವತ್ತು ನೀರಾವರಿಗೆ ಸಂಬಂಧಪಟ್ಟಂತೆ ನಮ್ಮ ಜಿಲ್ಲೆಯಲ್ಲಿ ಹೇಮಾವತಿ ಡ್ಯಾಂ ಇದೆ. ನಮ್ಮ ಜಿಲ್ಲೆಗೆ ಕೇವಲ 30% ಮಾತ್ರ ಅನುಕೂಲತೆ ಇದೆ. ನನ್ನ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ತುಮಕೂರು ಮತ್ತು ಮಂಡ್ಯ ಜಿಲ್ಲೆಗೆ ಸುಮಾರು ಒಂಬತ್ತು ಮುಕ್ಕಾಲು ಕಿ.ಮೀ ಸುರಂಗದ ಮೂಲಕ ಸುಮಾರು 180 ಅಡಿ ಆಳದಲ್ಲಿ ನೀರನ್ನು ಹರಿಸುವಂತಹ ಅವಕಾಶ ಬೇರೆ ಜಿಲ್ಲೆಗಳಿಗೆ ಹೋಗಿ ಅಂತರ್ಜಲ ತುಂಬಾ ಕುಸಿತವನ್ನು ಕಂಡಿದೆ. ಇವತ್ತು ಕಲ್ಲೆಸೋಮನಹಳ್ಳಿ ಮತ್ತು ತೋಟಿ ಚನ್ನರಾಯಪ್ಪ, ಅಮಾನಿಕೆರೆ ಪ್ರಾಜೆಕ್ಟ್ tank filling scheme, ಸುಮಾರು 70 ಕೋಟಿ ಪ್ರಾಜೆಕ್ಟ್, ಇನ್ನೊಂದು ಕಲ್ಲೆಸೋಮನ ಹಳ್ಳಿ ಪ್ರಾಜೆಕ್ಟ್ 30 ಕೋಟಿ ರೂ.ಗಳ ವೆಚ್ಚದಲ್ಲಿ DPR ಆಗಿ, board approval ಆಗಿ ಕ್ಯಾಬಿನೆಟ್ ಅನುಮೋದನೆಯ ಹಂತದಲ್ಲಿದೆ. ಮಾನ್ಯ ಮುಖ್ಯಮಂತ್ರಿಯವರು Cabinet approval ಮಾಡಿ ಆ ಭಾಗದ ಜನರ ರೈತರ ಹಿತದೃಷ್ಟಿಯಿಂದ ಆ ಒಂದು ಸ್ಕೀಮ್ ಅನ್ನು ಕೈಗೆತ್ತಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತಾ, ಜೊತೆಗೆ ಪಶುಸಂಗೋಪನಾ ಇಲಾಖೆಗೆ ಸಂಬಂಧಿಸಿದಂತೆ ಇವತ್ತು ಬಜೆಟ್‌ನಲ್ಲಿಯೂ ಘೋಷಣೆ ಮಾಡಿದ್ದಾರೆ. ಏಕೆಂದರೆ accident ನಲ್ಲಿ ಎತ್ತುಗಳಾಗಲಿ, ಹಸುಗಳಾಗಲಿ, ಹಸುನೀಗಿದರೆ 10,000 ರೂ.ಗಳನ್ನು ಕೊಡುತ್ತೇವೆ ಎಂದು ಘೋಷಣೆ ಮಾಡಿದ್ದಾರೆ. ಅದು accident ಗೆ ಮಾತ್ರ ಸೀಮಿತ ಆಗಬಾರದು. ಹೊಲಗದ್ದೆ, ಮನೆಗಳಲ್ಲಿ ಎತ್ತು ಹಾಗೂ ಹಸುಗಳ ಸಾವಾದರೂ ಕೂಡ 10,000 ರೂ.ಗಳನ್ನು ಘೋಷಣೆ ಮಾಡುವ ನಿಟ್ಟಿನಲ್ಲಿ ಇವತ್ತು ಸರ್ಕಾರ ಅವಕಾಶ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತಾ, ಪಶುಸಂಗೋಪನಾ ಇಲಾಖೆ ಬಗ್ಗೆ ಕೂಡ ಹೆಚ್ಚಿನ ರೀತಿಯಲ್ಲಿ ರೈತರಿಗೆ ಅನುಕೂಲವಾಗುವಂತಹ ಹಲವಾರು ಕಾರ್ಯಕ್ರಮಗಳಿಗೆ ಅವಕಾಶ ಮಾಡಿಕೊಡಬೇಕು. ಸಹಕಾರ ಇಲಾಖೆ ಮೂಲಕ ರಾಜ್ಯದಲ್ಲಿ ಸುಮಾರು 23 1/2 ಲಕ್ಷ ಜನರಿಗೆ 10,800 ಕೋಟಿ ರೂ.ಗಳ ಸಾಲವನ್ನು ನೀಡಿದ್ದಾರೆ. ಇದು ಕೇವಲ ಸಹಕಾರಿ ಕ್ಷೇತ್ರದಲ್ಲಿ ಪಡೆದಿರುವಂತಹ ರೈತರಿಗೆ ಮಾತ್ರ ಪರಿಹಾರ ಅಲ್ಲ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿಯೂ ಪಡೆದುಕೊಂಡಿರುವ ರೈತರಿಗೂ ಕೂಡ ಸಾಲವನ್ನು ಮನ್ನಾ

ಮಾಡುವುದರ ಮೂಲಕ ರೈತರ ಹಿತವನ್ನು ಕಾಪಾಡುವ ನಿಟ್ಟಿನಲ್ಲಿ ಸರ್ಕಾರ ಗಮನಹಿರಿಸಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಿ, ಇವತ್ತು ಏನು ಮಾನ್ಯ ಮುಖ್ಯಮಂತ್ರಿಯವರು ಸಾಮಾಜಿಕ ನ್ಯಾಯದ ಅಡಿಯಲ್ಲಿ ಕೆಲವು ಹಿಂದುಳಿದ ವರ್ಗಗಳ ಹಿತವನ್ನು ಕಾಪಾಡುವ ನಿಟ್ಟಿನಲ್ಲಿಯೂ ಸಹ ಕೆಲವು ವಿಚಾರದಲ್ಲಿ ಸಹಕಾರ ಮಾಡಿದ್ದಾರೆ ಅದನ್ನೂ ಕೂಡ ನಾನು ಸ್ವಾಗತ ಮಾಡುತ್ತೇನೆ. ಜೊತೆಗೆ ಬಹು ಮುಖ್ಯವಾಗಿ ರೈತರ ಹಿತವನ್ನು ಕಾಪಾಡುವಂತಹ ನಿಟ್ಟಿನಲ್ಲಿ ಸಹಕಾರ ನೀಡಬೇಕು. ಇವತ್ತು ರೈತ ತುಂಬಾ ಸಂಕಷ್ಟದಲ್ಲಿದ್ದಾನೆ. ಬದುಕನ್ನು ನಿರ್ವಹಣೆ ಮಾಡುವುದರಲ್ಲಿ ತುಂಬಾ ಕಷ್ಟ ಇರುವುದರಿಂದ ಇದರ ಬಗ್ಗೆ ಸಾಲ ಮನ್ನಾ ಮಾಡುವಂತಹ ದಿಟ್ಟ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಬೇಕು. ಇವತ್ತು RDPR ಇಲಾಖೆಯಲ್ಲಿ, ಬಜೆಟ್‌ನಲ್ಲಿ 2,500 ಶುದ್ಧ ನೀರು ಘಟಕಗಳನ್ನು ಘೋಷಣೆ ಮಾಡಿದ್ದಾರೆ. ಇವತ್ತು 10,000 ಶುದ್ಧ ನೀರು ಘಟಕಗಳಾದರೂ ಬೇಕು. ಶುದ್ಧವಾದ ನೀರಿನಿಂದ ಉತ್ತಮವಾದಂತಹ ಆರೋಗ್ಯವನ್ನು ಕಾಪಾಡುವಂತಹ ನಿಟ್ಟಿನಲ್ಲಿ ಆ ಇಲಾಖೆಗೆ ಹೆಚ್ಚಿನ ಮಹತ್ವವನ್ನು ನೀಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಿ ಇವತ್ತು ಬಜೆಟ್ ಮೇಲೆ ನನಗೆ ಮಾತನಾಡಲು, ಏಕೆಂದರೆ ಹೆಚ್ಚು ಕಾಲಾವಕಾಶ ಇಲ್ಲ. ಆದರೂ ಕೂಡ ಅವಕಾಶ ಕೊಟ್ಟಿದ್ದೀರಿ ಅದಕ್ಕೆ ಧನ್ಯವಾದಗಳನ್ನು ತಿಳಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಕೆ.ಜಿ.ಬೋಪ್ಪಯ್ಯನವರು ಸೀಟಿನಲ್ಲಿ ಇಲ್ಲ. ಮಾನ್ಯ ಲಕ್ಷ್ಮಣ ಸವದಿಯವರು ಸೀಟಿನಲ್ಲಿ ಇಲ್ಲ. ಮಾನ್ಯ ಬಿ.ಆರ್.ಯಾವಗಲ್‌ರವರು ಮಾತನಾಡುವುದು.

ಶ್ರೀ ಬಿ.ಆರ್.ಯಾವಗಲ್ (ನರಗುಂದ) : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತುಂಬಾ ಧನ್ಯವಾದಗಳು. ನಾನು ಎರಡು ಮುಖ್ಯವಾದ ವಿಷಯಗಳ ಬಗ್ಗೆ ಮಾತ್ರ ಗಮನ ಸೆಳೆಯುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಒಳ್ಳೆಯ ಬಜೆಟ್‌ಅನ್ನು ಕೊಟ್ಟಿದ್ದಾರೆ. balancing act ಮಾಡಿದ್ದಾರೆ. ಎಲ್ಲಾ ವರ್ಗವನ್ನು ಸರಿಯಾಗಿ ತೂಗಿಸಿಕೊಂಡು ಹೋಗುವುದಕ್ಕೆ ಬೆಳವಣಿಗೆ ಸಹ ಆಗಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದಾರೆ. ಅದೂ ಕೂಡ ಬಹಳ ಕೆಟ್ಟ ಸನ್ನಿವೇಶದಲ್ಲಿ. ಈ ವರ್ಷದ ಬರಗಾಲ ಪರಿಸ್ಥಿತಿ ಇವತ್ತಿನದ್ದು ಅಲ್ಲ. ಕಳೆದ 3-4 ವರ್ಷಗಳಿಂದ ಏನು ಮುಂದುವರೆದುಕೊಂಡು ಬಂದಿದೆ, ಇಲ್ಲಿ ಹಲವಾರು ಬಾಬ್ತುಗಳಲ್ಲಿ ಅವರಿಗೆ ಕೊರತೆ ಇರುವುದು ಎದ್ದು ಕಾಣಿಸುತ್ತದೆ. ಆದರೂ ಸಹಿತ ಆ ಮಿತಿಯೊಳಗೆ ಹೊರಗಡೆಯಿಂದ ಸಾಲ ಮಾಡಿ ಮಾಡಿದಂತಹ

27-03-2017

ಅವರ ಒಂದು ಕೆಲಸ ಎಲ್ಲಾ ರೀತಿ planned ಕೆಲಸಗಳನ್ನು ಮುಂದುವರೆಸಿಕೊಂಡು ಹೋಗುವಂತೆ ಅವರೇನು ವ್ಯವಸ್ಥೆ ಮಾಡುತ್ತಿದ್ದಾರೆ ನಿಜಕ್ಕೂ ಶ್ಲಾಘನೀಯ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ವಿಶೇಷವಾಗಿ ಕೃಷಿ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿದ್ದಾರೆ. ಆದರೆ ಅದು ಸಾಲದು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಸುಮಾರು 65% ಜನ ಹಳ್ಳಿಗಾಡಿನಲ್ಲಿದ್ದಾರೆ. ಅದು ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ಕ್ಷೇತ್ರಕ್ಕಿಂಥ ಒಣ ಬೇಸಾಯ ಪ್ರದೇಶದಲ್ಲಿ ಬಹಳಷ್ಟು ಜನ ರೈತರು ಅಲ್ಲಿದ್ದಾರೆ. ಜನಸಾಂದ್ರತೆ ಅಲ್ಲಿದೆ. ಅವರಿಗಾಗಿ ಯೋಜನೆಗಳನ್ನು ರೂಪಿಸುವಂತಹ ಕೆಲಸವನ್ನು ಮಾಡಿದ್ದಾರೆ ಮಾಡುತ್ತಿದ್ದಾರೆ. ಅದು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಆಗಬೇಕು. ಕಳೆದ ವರ್ಷ ಸುಮಾರು 1,000 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ ಎಂದು ಹೇಳಿದರು. ಈಗಾಗಲೇ ಇನ್ನೂ ಹೆಚ್ಚು ಹಣವನ್ನು, 500 ಕೋಟಿ ರೂ.ಗಳನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ವಿಶೇಷವಾಗಿ ಕೆರೆಯನ್ನು ಮಾಡಿಸುತ್ತಿರುವುದು, ಅಲ್ಲಿ ಏನು ಕೃಷಿ ಭಾಗ್ಯ ಯೋಜನೆ ಇದೆ ಅದು ಬಹಳ ಶ್ಲಾಘನೀಯವಾದ ಕೆಲಸ. ಅದನ್ನು ಹೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು ಎಂದು ಹೇಳುತ್ತಾ, ನೀರಾವರಿ ಕ್ಷೇತ್ರಕ್ಕೆ ವಿಶೇಷವಾಗಿ ನಮ್ಮ ಭಾಗಕ್ಕೆ ಬರುವಂತಹ ಮಹದಾಯಿ, ಮಲಪ್ರಭಾ ಯೋಜನೆಗೆ ಮಹದಾಯಿ ನೀರನ್ನು ತರುವಂತಹ ಯೋಜನೆ ಬಗ್ಗೆ ಬಜೆಟ್‌ನಲ್ಲಿ ಏನಾದರೂ ಹೇಳಬೇಕಾಗಿತ್ತು.

ಮುಂದು. . .

27-03-2017-8-20-55-MS-PS.

ಶ್ರೀ ಬಿ.ಆರ್.ಯಾವಗಲ್: (ಮುಂದು)

ಸಾರ್ವತ್ರಿಕವಾದಂತಹ ಭಾವನೆ ಇತ್ತು. ಈ ವರ್ಷ ಈ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳು ಸಾಲದ ಬಗ್ಗೆ ಧೃಡವಾದಂತಹ ನಿಲುವನ್ನು ತಳೆಯುತ್ತಾರೆಂದು ನಂಬಿಕೆ ರಾಜ್ಯದ ಜನರಲ್ಲಿ ಅದರಲ್ಲಿಯೂ ವಿಶೇಷವಾಗಿ ರೈತವರ್ಗದಲ್ಲಿ ಇತ್ತು. ಏಕೋ ಮಾನ್ಯ ಮುಖ್ಯಮಂತ್ರಿಗಳು ಆ ಒಂದು ವಿಚಾರದಲ್ಲಿ ಬರದೆ ಇದ್ದದ್ದು ಎಲ್ಲರಿಗೂ ಆತಂಕದ ಸಂಗತಿ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ರಾಜ್ಯದಲ್ಲಿರುವಂತಹ ತೊಂದರೆಗಳು ಇದ್ದು ತುರ್ತಾಗಿ ಅದರಿಂದ ಲಾಭ ಏನು ಇಲ್ಲ. ಅವರ ಮುಂದಿನ ವರ್ಷದ ಬದುಕು ತಮ್ಮ ವೃತ್ತಿಯಾದ ಕೃಷಿಯನ್ನು ಸಾಗಿಸುವುದಕ್ಕೆ ಅನುಕೂಲವಾಗುತ್ತದೆ ಎನ್ನುವಂತಹ ಮಾತನ್ನು ನಾನು ಅವರ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಮಾಡುವುದಕ್ಕೆ ಇನ್ನು ಅವಕಾಶ ಇದೆ. ಅದನ್ನು

ಬಜೆಟ್‌ನಲ್ಲಿಯೇ ಹೇಳಬೇಕೆಂದು ಏನೂ ಇಲ್ಲ. ಮುಂದಿನ ವಿದ್ಯಾಮಾನಗಳಲ್ಲಿ ಆ ಕೆಲಸವನ್ನು ಮಾಡಲಿ ಎಂದು ಹಾರೈಸುತ್ತೇನೆ. ನಮ್ಮ ಮಲಪ್ರಭಾ ಯೋಜನೆಗೆ ಕಳೆದ ಬಜೆಟ್‌ನಲ್ಲಿ ಸುಮಾರು 963 ಕೋಟಿ ರೂಪಾಯಿಗಳನ್ನು modernization scheme ಅನ್ನು ಮಾಡಿದ್ದರು. ಅದು ಇಲ್ಲಿಯವರೆವಿಗೆ ಆ ಯೋಜನೆಯು ಮಂಜೂರಾತಿ ದೊರಕದೆ ಇರುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಆದಷ್ಟುಬೇಗನೆ ಅದು ಸಿಗಲಿ, ಆ ಯೋಜನೆಯು ಜಾರಿಯಾಗಲಿ ಎಂದು ಹಾರೈಸಿ ನೀವು ನನಗೆ ಮಾತನಾಡುವುದಕ್ಕೆ ಕೊಟ್ಟಂತಹ ಅವಕಾಶಕ್ಕಾಗಿ ವಂದಿಸಿ, ನಮಸ್ಕಾರಗಳನ್ನು ತಿಳಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಕೋನರೆಡ್ಡಿಯವರೆ ತಾವು ಮಾತನಾಡಿ.

ಶ್ರೀ ಎನ್.ಹೆಚ್.ಕೋನರೆಡ್ಡಿ(ನವಲಗುಂದ): ಮಾನ್ಯ ಅಧ್ಯಕ್ಷರೆ, 2017-18ರ ಆಯವ್ಯಯದ ಮೇಲೆ ಚರ್ಚೆ ಮಾಡುವುದಕ್ಕಾಗಿ ಅವಕಾಶ ಕೊಟ್ಟಿರುವುದಕ್ಕಾಗಿ ತಮಗೆ ವಿಶೇಷವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾನು ಒಂದು ಡಜನ್ ಬಜೆಟ್ ಅನ್ನು ಮಂಡನೆ ಮಾಡತಕ್ಕಂತಹ ಅವಕಾಶ ಯಾರಿಗಾದರೂ ಸಿಕ್ಕಿದ್ದರೆ ಅದು ಸನ್ಮಾನ್ಯ ಸಿದ್ಧರಾಮಯ್ಯನವರಿಗೆ ಎಂದು ಹೇಳುತ್ತೇನೆ. ನನಗೆ ವಿಶೇಷವಾಗಿ ಅವರ ಬಗ್ಗೆ ಗೌರವ ಮತ್ತು ಈ ತರಹ ರೈತರ ಸಾಲ ಮನ್ನಾ ಮಾಡುತ್ತಾರೆಂದು ಹೇಳಿ ನಮ್ಮ ಉತ್ತರಕರ್ನಾಟಕದ ಚಹಾ ಅಂಗಡಿಯ ಮುಂದೆ ಕುಳಿತಿದ್ದಾಗ ಪಂಚಾಯಿತಿ ಕಟ್ಟೆಯ ಮೇಲೆ ಎಲ್ಲರೂ ಮಾತನಾಡುತ್ತಿದ್ದರು. ಆದರೆ ರೈತರಿಗೆ ಸಾಲ ಮನ್ನಾ ಮಾಡದಿರುವುದಕ್ಕಾಗಿ first time ಅವರ ಬಜೆಟ್ ಅನ್ನು ಒಂದು ಅರ್ಧಗಂಟೆ ಕೇಳಿ ಹೊರಗೆ ಹೋಗತಕ್ಕದ್ದು, ಮತ್ತು ಈ ಬಜೆಟ್ ಪುಸ್ತಕದಲ್ಲಿ ಓದಿದಾಗ ಅದು ಇಲ್ಲದಿರುವುದರಿಂದ ನನಗೆ ನಿರಾಸೆ ಕೂಡ ಆಯಿತು ಇದು ಒಂದು ರಾಜ್ಯ ಸರ್ಕಾರದ ಪಾತ್ರ. ಕೇಂದ್ರಸರ್ಕಾರದ ಪಾತ್ರ ಮಾನ್ಯ ಆರ್ಥಿಕ ಸಚಿವರು ಮೊನ್ನೆ ರಾಜ್ಯಸಭೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟರು. ರಾಜ್ಯದಿಂದ ಯಾವುದೇ ಪ್ರಸ್ತಾವನೆ ಬಂದಿಲ್ಲ. ನಮಗೆ ಸಾಲ ಮನ್ನಾ ಮಾಡುವಂತಹ ಪ್ರಸ್ತಾವನೆ ನಮ್ಮ ಮುಂದಿಲ್ಲ ಎಂದು ಹೇಳಿದರು. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ತಾವು ಬಜೆಟ್ ಮೇಲೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಕೇಂದ್ರದಿಂದ ಸಾಲ ಮನ್ನಾ ಮಾಡುವ ಬಗ್ಗೆ ಪತ್ರ ಬರೆದಿರುವುದು ನಾವು ಕೂಡ ಮಾಧ್ಯಮದಲ್ಲಿ ಓದಿದ್ದೇವೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ರಾಜ್ಯಸರ್ಕಾರದಿಂದ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆಯೋ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಬಿಟ್ಟಿದ್ದಾರೆಯೊ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಉತ್ತರವನ್ನು ನೀಡಬೇಕೆಂದು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಇವತ್ತು ರಾಜ್ಯ ಸರ್ಕಾರವು ಸಾಲ ಮನ್ನಾ ಮಾಡುವುದು ಕೇವಲ 20% ಆಗಿದೆ. ಕೇಂದ್ರಸರ್ಕಾರದ್ದು 80% ಇದೆ. ರಾಷ್ಟ್ರೀಕೃತ ಬ್ಯಾಂಕಿನಿಂದ ಟ್ರಾಕ್ಟರ್ ಸಾಲ ಏನು ತೆಗೆದುಕೊಂಡಿರುತ್ತೇವೆ ಎಲ್ಲವೂ ಸಹ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿರುತ್ತದೆ. ಸಾಲ ಮನ್ನಾ ಮಾಡುವುದಕ್ಕೆ ರಾಜ್ಯ ಸರ್ಕಾರ ಕೇಂದ್ರಸರ್ಕಾರದ ಮೇಲೆ ಒತ್ತಡ ತರುವುದರ ಮೂಲಕ ಮಾಡಬೇಕು. ಬಿಜೆಪಿಯವರು ಇಲ್ಲಿ ಕುಳಿತಿದ್ದಾಗ ಬಹಳ ಮಾತನಾಡುತ್ತಾರೆ. ತಮಗೆ ಅಧಿಕಾರವನ್ನು ಕೊಟ್ಟರೆ ಸಾಲ ಮನ್ನಾವನ್ನು immediate ಆಗಿ ಮಾಡುತ್ತೇವೆಂದು ಹೇಳುತ್ತಾರೆ. ಇವತ್ತು ಕೇಂದ್ರದಲ್ಲಿ ಅವರದೇ ಆದ ಸರ್ಕಾರ ಇದೆ. ಅವರು ಏತಕ್ಕಾಗಿ ಸಾಲ ಮನ್ನಾ ಮಾಡುತ್ತಿಲ್ಲವೆಂದು ಈ ಸದನಕ್ಕೆ ಬೆಳಕು ಚೆಲ್ಲತಕ್ಕಂತಹದ್ದು ಬಹಳ ಅವಶ್ಯಕತೆ ಇದೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ಇನ್ನು ಬರಗಾಲದ ವಿಷಯಕ್ಕೆ ಸಂಬಂಧಪಟ್ಟಂತೆ ಇವರು ಕರ್ನಾಟಕವನ್ನು ಯಾವ ರೀತಿಯಾಗಿ ನೋಡುತ್ತಿದ್ದಾರೆಂದು ಹೇಳಿಬಿಡುತ್ತೇನೆ. ರಾಜ್ಯಸರ್ಕಾರವು ಕೇಂದ್ರಸರ್ಕಾರದ norms ಪ್ರಕಾರ 1750 ಕೋಟಿ ರೂಪಾಯಿಗಳನ್ನು ಕೇಳಿದರೆ ನಮಗೆ ಕೇವಲ 450 ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಇವತ್ತು ಏನು ಆಧಾರ್ ಲಿಂಕ್ ಮಾಡಿ ರೈತರಿಗೆ ಏನು ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ಇದರಿಂದ ಎಲ್ಲಾ ರೈತರಿಗೆ ಪರಿಹಾರ ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದೇ ಮಹಾರಾಷ್ಟ್ರ ಸರ್ಕಾರಕ್ಕೆ 3300 ಕೋಟಿ ರೂಪಾಯಿಗಳನ್ನು ಕೇಳಿದರೆ 3300 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ಅದೇ ಛತ್ತೀಸ್‌ಘಡಕ್ಕೆ 1700 ಕೋಟಿ ರೂಪಾಯಿಗಳನ್ನು ಕೇಳಿದರೆ 1600 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ಇವರಿಗೆ ಕರ್ನಾಟವು ಏನು ಅನ್ಯಾಯ ಮಾಡಿದೆ. ನಮಗೆ ಏತಕ್ಕಾಗಿ ಕಡಿಮೆ ಪರಿಹಾರವನ್ನು ಕೊಡುತ್ತಿದ್ದೀರಿ? ಅದಕ್ಕಾಗಿ ಕಾನೂನು ಸಚಿವರು ಇಲ್ಲಿಯೇ ಇದ್ದಾರೆ. ಕೇಂದ್ರಸರ್ಕಾರದ guidelines ಪ್ರಕಾರ 1750 ಕೋಟಿ ರೂಪಾಯಿಗಳನ್ನು ತಾವು ಕೇಳಿದ್ದೀರಿ. 450 ಕೋಟಿ ರೂಪಾಯಿಗಳನ್ನು ಏತಕ್ಕಾಗಿ ಕಡಿಮೆ ಕೊಟ್ಟಿದ್ದೀರಿ ಎಂದು ಕೇಳಬೇಕು. ನೇರವಾಗಿ ಅವರನ್ನು ಕರೆದುಕೊಂಡು ಇನ್ನೊಂದು ಸಾರಿ ಒಂದು ನಿಯೋಗವನ್ನು ಪ್ರಧಾನಮಂತ್ರಿಗಳ ಕಡೆಗೆ ತೆಗೆದುಕೊಂಡು ಹೋಗಿ ಒತ್ತಾಯ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ. ಇದರ ಜೊತೆಗೆ ಇವತ್ತು ರೈತರ ಸಲುವಾಗಿ ರಾಜ್ಯದಲ್ಲಿ 1500 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

27-03-2017

ದೇಶದಲ್ಲಿ 9,000 ಕ್ಕಿಂತಲೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೇಂದ್ರಸರ್ಕಾರವು 80% ಸಾಲವನ್ನು ಮನ್ನಾ ಮಾಡಬೇಕಾಗಿದೆ ಇದರಲ್ಲಿ ಅವರದು ಬಹಳ ಮಹತ್ವವಿದೆ. ರಾಜ್ಯಸರ್ಕಾರವು ಕೂಡ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಧೈರ್ಯವನ್ನು ತೋರಿಸಬೇಕಾಗಿತ್ತು. ನಾವು ಸಾಲ ಮನ್ನಾ ಮಾಡಿದ್ದೇವೆ ನೀವು ಸಾಲ ಮನ್ನಾ ಮಾಡಬೇಕೆಂದು ಒತ್ತಡ ಇರುವಂತಹ ವ್ಯವಸ್ಥೆ ಮಾಡಬೇಕಾಗಿತ್ತು ಅಥವಾ ನಾವು ಮನ್ನಾ ಮಾಡುತ್ತೇವೆನ್ನುವಂತಹ condition ಮೇಲೆ ಕೇಂದ್ರಸರ್ಕಾರಕ್ಕೆ ಒಂದು ನಿಯೋಗವನ್ನು ತೆಗೆದುಕೊಂಡು ಹೋಗಿ ಒತ್ತಾಯ ಮಾಡುವಂತಹದ್ದರಲ್ಲಿ ಮಹತ್ವ ಇತ್ತು. ಇವತ್ತು ಬಜೆಟ್‌ನಲ್ಲಿ ರೈತರ ಪರವಾಗಿ ಹೊಸ ಹೊಸ ಯೋಜನೆಗಳನ್ನು ಘೋಷಣೆ ಮಾಡಿದ್ದೀರಿ. ಕೃಷಿ ಹೊಂಡ ಇರಬಹುದು, ನಾನು ಕೃಷಿಸಚಿವರಾದ ಕೃಷ್ಣಭೈರೇಗೌಡರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮಲ್ಲಿ 1300 ಕೃಷಿ ಹೊಂಡಗಳನ್ನು ಮಾಡಿದ್ದೇವೆ. ಅಂತಹ ಯೋಜನೆಗಳನ್ನು ಜಾರಿಗೆ ತರುವಂತಹ ಅವಶ್ಯಕತೆ ಇದೆ. ಅದನ್ನು ಇನ್ನು ಮುಂದುವರೆಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ RMSA ಯೋಜನೆಯಡಿಯಲ್ಲಿ ಕಟ್ಟಡಗಳನ್ನು ಕಟ್ಟುವುದಕ್ಕೆ ಕೇಂದ್ರಸರ್ಕಾರವು ದುಡ್ಡನ್ನು ಕೊಟ್ಟಿದೆ. ಇವತ್ತು ಕಟ್ಟಡ ಕಟ್ಟುವುದಕ್ಕೆ contractor free ಬಿಟ್ಟು immediate ಹೋಗತಕ್ಕಂತಹ ನಿರ್ಣಯವನ್ನು ತೆಗೆದುಕೊಳ್ಳುತ್ತಿದ್ದೀರಿ. ಎಷ್ಟು building ಆಗಿದೆಯೊ ಅಷ್ಟು ಜಾಗವನ್ನು ಕೊಟ್ಟಿದ್ದೇವೆ. ಅದನ್ನು compulsory ಯಾಗಿ ಕಟ್ಟಬೇಕೆಂದು ಮಾಡಬೇಕು. ಇಲ್ಲದೆ ಹೋದರೆ risk and cost ಅವನಿಗೆ ಕೊಟ್ಟಂತಹ ಹಣವನ್ನು recovery ಮಾಡಿದರೆ ಮಾತ್ರ ಕೆಲಸ ಮಾಡುತ್ತಾನೆ ಹೊರತಾಗಿ ಇಲ್ಲದೆಹೋದರೆ ಕೆಲಸ ಮಾಡುವುದಿಲ್ಲ. ಕಾನೂನಿನ ವ್ಯವಸ್ಥೆಯಲ್ಲಿ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಈ ಹಿಂದೆ SSAಯಲ್ಲಿ ದುಡ್ಡು ಬರುತ್ತಿತ್ತು. ಇವತ್ತು ಎಂಎಲ್‌ಎಗಳಿಗೆ ಏನಾಗಿದೆ ಎಂದರೆ ಒಂದು school building ಕಟ್ಟುವುದಕ್ಕೆ ಸಾಧ್ಯವಿಲ್ಲದಂತಹ ಪರಿಸ್ಥಿತಿ ಬಂದಿದೆ. ಅದಕ್ಕಾಗಿ ಶಿಕ್ಷಣ ಸಚಿವರು ಸದನದಿಂದ ಹೋದರು ಎಂದು ಕಾಣಿಸುತ್ತದೆ. ನಾನು ಅವರಲ್ಲಿ ವಿನಂತಿ ಮಾಡುವುದೇನೆಂದರೆ, ಮೂಲಭೂತ ಸೌಕರ್ಯಕ್ಕಾಗಿ 18,000 ಕೋಟಿ ರೂಪಾಯಿಗಳನ್ನಿಟ್ಟಿದ್ದಾರೆಂದರೆ ಅದು ಸಾಕಾಗುವುದಿಲ್ಲ. ಮೂಲಭೂತ ಸೌರ್ಕಯಕ್ಕಾಗಿ ಎಷ್ಟು reserve ಮಾಡುತ್ತೀರಿ. ರಾಜ್ಯಸರ್ಕಾರಕ್ಕೆ ಎಷ್ಟು ಕೊಡುವುದಕ್ಕೆ ಸಾಧ್ಯವಿದೆ. ಈ ಬಗ್ಗೆ ಕೇಂದ್ರಸರ್ಕಾರಕ್ಕೆ ಒಂದು ಮನವಿಯನ್ನು ತೆಗೆದುಕೊಂಡು

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

SSA continuation ಇತ್ತು ಈ Government ಬಂದ ಮೇಲೆ ಅದನ್ನು ಬಂದ್ ಮಾಡಿದ್ದೀರಿ. ನೀವು ಆ ವ್ಯವಸ್ಥೆಯನ್ನು ಪ್ರಾರಂಭ ಮಾಡಿದರೆ ಒಳ್ಳೆಯದಾಗುತ್ತದೆ. ಸದನದಲ್ಲಿ ಉನ್ನತ ಶಿಕ್ಷಣ ಸಚಿವರು ಇದ್ದಾರೆ. ಕಾಲೇಜು ಕಟ್ಟಡವನ್ನು ಕಟ್ಟುವುದಕ್ಕೆ ಕೊಡುತ್ತೀರಿ. ಅವರು ಕಟ್ಟಡವನ್ನು ಕಟ್ಟುತ್ತಾರೆ ಆದರೆ ಆ ಕಟ್ಟಡವು ಈಗಾಗಲೇ crack ಬಿಟ್ಟಿದೆ. ಈ ಬಗ್ಗೆ ತಾವು strict ಆಗಿ decision ತೆಗೆದುಕೊಂಡು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ನಾನು ಆ ಕಟ್ಟಡವನ್ನು ಉದ್ಘಾಟನೆ ಮಾಡುವುದಕ್ಕಾಗಿ building ನೋಡುವುದಕ್ಕೆ ಹೋಗಿದ್ದೇನೆ. ಆಗಲೇ 10 ಕಡೆಯಲ್ಲಿ crack ಆಗಿರುತ್ತದೆ. ಈ ಬಗ್ಗೆ ತಾವು ವಿಶೇಷವಾಗಿ ಗಮನಹರಿಸಬೇಕಾಗಿದೆ.

ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು): ದಯವಿಟ್ಟು ತಾವು ಯಾವ ಕಟ್ಟಡ ಹೀಗೆ ಆಗಿದೆ ಬರೆದು ಕಳುಹಿಸಿ ಅವರ ಮೇಲೆ action ತೆಗೆದುಕೊಳ್ಳುತ್ತೇನೆ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಬರೆದುಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು: ತಾವು ಬೇಗನೆ conclude ಮಾಡಿ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಇದರ ಜೊತೆಗೆ ಸಹಕಾರ ಇಲಾಖೆಯವರು Zero percent ಮೇಲೆ ಸಾಲವನ್ನು ಕೊಡುತ್ತೇವೆಂದು ಹೇಳುತ್ತಾರೆ. ನಮ್ಮ ಧಾರವಾಡ KCC Bankನಲ್ಲಿ 50,000 ಸಾಲ ತೆಗೆದುಕೊಳ್ಳಬೇಕಾದರೆ ನಾವು 50,000 deposit ಇಡತಕ್ಕಂತಹ ಪ್ರಯತ್ನ ಆಗಿದೆ. ಸರ್ಕಾರಕ್ಕೆ KCC Bankಗೆ ದುಡ್ಡು ಕೊಡಬೇಕೆಂದು ದಯವಿಟ್ಟು ಆ ಬ್ಯಾಂಕಿಗೆ ಸರ್ಕಾರ ಏನು ಕೊಡಬೇಕಾಗಿದೆ ಒಂದು ಸಾರಿ ಅದಕ್ಕೆ ಕೊಟ್ಟು ನಮ್ಮ DCC Bank ಅನ್ನು ಅಭಿವೃದ್ಧಿ ಮಾಡಬೇಕೆಂದು ತೀರ್ಮಾನವನ್ನು ಸರ್ಕಾರ ಮಾಡಬೇಕು. ಜಲಸಂಪನ್ಮೂಲ ಇಲಾಖೆಯ ಬಗ್ಗೆ ಹೇಳುವುದಾದರೆ ಮಹದಾಯಿ ವಿಚಾರದೊಳಗೆ ತಾವು ಬಹಳ ದೊಡ್ಡ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಬೆಳಗಾಂ ಅಧಿವೇಶನದಲ್ಲಿ 5 ದಿವಸಗಳ ಕಾಲ ಚರ್ಚೆ ಮಾಡಿದ್ದೇವೆ. ಚರ್ಚೆ ಮಾಡಿ ultimately result ಎರಡು ಸಲ ಸದನದಲ್ಲಿ ಎಲ್ಲಾ ಶಾಸಕರು ಸೇರಿ ನಿರ್ಣಯವನ್ನು ಪಾಸು ಮಾಡಿದೆವು. ಕೇಂದ್ರಸರ್ಕಾರ ಮತ್ತು ರಾಜ್ಯ ಸರ್ಕಾರವು ಎರಡು ಕೂಡಿಕೊಂಡು, ಮಹದಾಯಿಗೆ ಗೋವಾಕ್ಕೆ ತಾವೇ ವಿಸಿಟ್ ಮಾಡುತ್ತೇವೆಂದು ಹೇಳಿದ್ದೀರಿ. ನಾನೇ ಹೋಗಿ ನನ್ನ ನೇತೃತ್ವದಲ್ಲಿ ಮನವಿ ಮಾಡುತ್ತೇನೆಂದು ಹೇಳಿದ್ದೀರಿ. ಮುಖ್ಯಮಂತ್ರಿಗಳು ಬೇಡ ಇನ್ನೊಂದು ಸಾರಿ ವಿಚಾರ

ಮಾಡೋಣವೆಂದು ಹೇಳಿದರು. ಇದೇ ಮನೋಹರ ಪರಿಕ್ಕಾರ್‌ರವರು ಮುಖ್ಯಮಂತ್ರಿಯಾಗಿದ್ದಾಗ ಅವರು ಬಂದು ಏನು statement ಮಾಡಿದರು ಎಂದರೆ ಆತ್ಮಾನಂದ ನಾಡಕರ್ಣಿ ಯವರ permission ತೆಗೆದುಕೊಳ್ಳಬೇಕೆಂದು ಹೇಳಿದಾಗ ಪ್ರಧಾನಮಂತ್ರಿಗಳಿಗೆ ಒಂದು ಪತ್ರವನ್ನು ಬರೆದರು ಅವರು immediate ಆಗಿ ಉತ್ತರವನ್ನು ಕೊಟ್ಟರು. ರಾಜ್ಯ ಸರ್ಕಾರದ ಯಾವುದೇ ಪತ್ರಕ್ಕೆ ಗೌರವ ಇಲ್ಲವೆಂದರೆ ಕೇಂದ್ರಸರ್ಕಾರವು ನಮ್ಮ ಪರವಾಗಿ ಇದೆಯೊ ಅಥವಾ ಇಲ್ಲವೊ, ಕರ್ನಾಟಕವು ಭಾರತ ಸರ್ಕಾರದ ಒಕ್ಕೂಟ ವ್ಯವಸ್ಥೆಯಲ್ಲಿದೆಯೊ ಇಲ್ಲವೋ ಎನ್ನುವಂತಹ ಸಂಶಯ ನಮಗೆಲ್ಲರಿಗೂ ಕಾಡುತ್ತಿದೆ.

ಅಧ್ಯಕ್ಷರು: ಕೋನರೆಡ್ಡಿಯವರೆ, ಈ ಸದನದ ಅಭಿಪ್ರಾಯವನ್ನು ನಾನು ಸಹಿತ ಪ್ರಧಾನಮಂತ್ರಿಗಳಿಗೆ ಪತ್ರ ಬರೆದು ಸದನದ ಅಭಿಪ್ರಾಯವನ್ನು ತಿಳಿಸಿದ್ದೇನೆ. ತಾವು interfere ಆಗಬೇಕು solve ಮಾಡಬೇಕೆಂದು ಹೇಳಿದ್ದೇನೆ. ತಾವುಗಳೆಲ್ಲರೂ ಒಮ್ಮತದ ನಿರ್ಣಯವನ್ನು ಮಾಡಿದ್ದೀರಿ. ಈ ಬಗ್ಗೆ ಪ್ರಧಾನಮಂತ್ರಿಗಳಿಗೆ ತಿಳಿಸಿದ್ದೇನೆ.

ಶ್ರೀ ಎನ್.ಹೆಚ್.ಕೋನರೆಡ್ಡಿ: 2002ರಲ್ಲಿ ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನಮಂತ್ರಿಗಳಾಗಿದ್ದರು. ಇದಕ್ಕಾಗಿ ಅವರು ತಾತ್ವಿಕವಾಗಿ ಒಪ್ಪಿಗೆಯನ್ನು ಸಹ ಕೊಟ್ಟಿದ್ದರು. ಈ ಪ್ರಧಾನಮಂತ್ರಿಗಳು at least ನಮ್ಮ ಕಡೆಗೆ ಏನು ನೋಡದೆ ಇದ್ದರೆ ಕೇಂದ್ರಸರ್ಕಾರದ ಬಗ್ಗೆ ನಾವು ಮಾತನಾಡದೆ ಇದ್ದರೆ ತಪ್ಪಾಗುತ್ತದೆ. ನಮ್ಮ ಭಾಗದಲ್ಲಿ 600 ದಿವಸಗಳ ಕಾಲ ಹೋರಾಟ ಮಾಡಿದ್ದೇವೆ. ಜಯಚಂದ್ರ ಸಾಹೇಬರೆ, ದಯವಿಟ್ಟು ಇನ್ನೊಂದು ಸಾರಿ ರೈತರ ಮೇಲೆ ಹಾಕಿರುವಂತಹ ಕೇಸುಗಳಲ್ಲಿ 30 ಕೇಸುಗಳು pending ಇದೆ. ರೈತರ ಮೇಲೆ ಹಾಕಿರುವಂತಹ ಎಲ್ಲಾ ಕೇಸುಗಳನ್ನು withdraw ಮಾಡಬೇಕು. ಈ ಬಗ್ಗೆ ತಾವು ಬೆಳಗಾಂನಲ್ಲಿ ಮಾತುಕೊಟ್ಟಿದ್ದೀರಿ. ಇದೇ ವಿಧಾನಸಭೆಯಲ್ಲಿಯೂ ಸಹ ಮಾತು ಕೊಟ್ಟಿದ್ದೀರಿ. ಅದಕ್ಕಾಗಿ ತಾವು compulsory ಆಗಿ case withdraw ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ನಮ್ಮ ಮಹದಾಯಿ-ಕಳಸಾಬಂಡೂರಿ ಯೋಜನೆ ಏನಿದೆ. ಇದು ಬಹಳ ಮಹತ್ವದ್ದಾಗಿದೆ. ನಾನು ಬೆಳಗಾಂ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದಾಗ ಏನು ಅದಕ್ಕಾಗಿ substitute land ಅನ್ನು ಕೊಡುವುದರ ಸಂಬಂಧ ಕೇಂದ್ರಸರ್ಕಾರಕ್ಕೆ

ತಿದ್ದುಪಡಿಯಾಗದ / uncorrected copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ಪ್ರಸ್ತಾವನೆಯನ್ನು ಸಲ್ಲಿಸಬೇಕಾದಾಗ ಅಲ್ಲಿ ಲ್ಯಾಂಡ್ ಇದೆ. ಅದನ್ನು ಕೊಡುವುದಕ್ಕೆ ರೈತರು ಮುಂದೆ ಬಂದರೂ ಕೂಡ ಈ ಅರಣ್ಯ ಇಲಾಖೆಯ ಅಧಿಕಾರಿಗಳು ಲ್ಯಾಂಡ್ ಖರೀದಿ ಮಾಡುವಂತಹ ಪ್ರಕ್ರಿಯೆಗೆ ಮುಂದಾಗುತ್ತಿಲ್ಲ. ನಮ್ಮ ಕರ್ನಾಟಕದಲ್ಲಿ ಅರಣ್ಯ ಅಧಿಕಾರಿಗಳು ಯಾವ ರೀತಿ ಇದ್ದಾರೆಂದರೆ ತಾವೇ forester ತರಹ act ಮಾಡುವುದಕ್ಕೆ ಹೋಗುತ್ತಿದ್ದಾರೆ. ದಯವಿಟ್ಟು ಆ ರೀತಿ ಆಗಬಾರದು. ಈ ಬಗ್ಗೆ supremecourtನ ಆದೇಶ ಇದೆ. ಆ ಪ್ರಕಾರ ಅದನ್ನು ಖರೀದಿ ಮಾಡುವುದಕ್ಕಾಗಿ ಹಣಕಾಸು ಇರುವುದರಿಂದ ಅದನ್ನು ಖರೀದಿ ಮಾಡಬೇಕು. ಈ ಯೋಜನೆಯನ್ನು ಜಾರಿ ಮಾಡುವುದಕ್ಕೆ ರಾಜ್ಯ ಸರ್ಕಾರವು ಕೇಂದ್ರಸರ್ಕಾರದ ಮೇಲೆ ಒತ್ತಡವನ್ನು ಹೇರಿ ಈ ಬಜೆಟ್ ಏನು ಮಾಡುತ್ತಿದ್ದೀರಿ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದೇನೆಂದರೆ, ರೈತರ ಸಾಲ ಮನ್ನಾ ಮಾಡಲಿಲ್ಲವೆಂದು ಇಡೀ ರಾಜ್ಯದ ಜನರು ನಿಮ್ಮ ಬಗ್ಗೆ ತಪ್ಪು ತಿಳಿದುಕೊಂಡು ಮಾತನಾಡುತ್ತಿದ್ದಾರೆ. ತಾವು ಬಜೆಟ್ ಮೇಲೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ಸಾಲ ಮನ್ನಾ ಮಾಡುತ್ತೇನೆ ಎಂದು ಘೋಷಣೆ ಮಾಡುವುದರ ಮುಖಾಂತರ ಉತ್ತರ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ನೀವು ಸಾಲ ಮನ್ನಾ ಮಾಡದೇ ಇದ್ದರೆ ಈ ಬಜೆಟ್ ಅನ್ನು ನಾನು ವಿರೋಧ ಮಾಡಬೇಕಾಗುತ್ತದೆನ್ನುವಂತಹ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ದಯವಿಟ್ಟು ಸಾಲ ಮನ್ನಾ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

(ಮುಂದು)

ವಿಸ. 27.03.2017/8.30/56/ಎನ್.ಸಿ.ಕೆ/ಪಿ.ಎಸ್

ಅಧ್ಯಕ್ಷರು: ಈಗ 2017-18 ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ ಮುಕ್ತಾಯವಾಗಿದೆ. ಮತ್ತು 2016-17 ನೇ ಸಾಲಿನ ಪೂರಕ ಅಂದಾಜುಗಳ ಮೂರನೇ ಮತ್ತು ಅಂತಿಮ ಕಂತಿನ ಮೇಲೆ ಚರ್ಚೆ ಮುಕ್ತಾಯವಾಗಿದೆ.

ಈಗ ಸದನವನ್ನು ಮುಂದೂಡಿ ನಾಳೆ ಬೆಳಿಗ್ಗೆ 10.30 ಗಂಟೆಗೆ ಸೇರೋಣ.

**(ಸದನದ ಕಲಾಪವನ್ನು ರಾತ್ರಿ 8.30 ಗಂಟೆಗೆ ಮುಂದೂಡಿ ಪುನ: ನಾಳೆ ಬೆಳಿಗ್ಗೆ 10.30 ಗಂಟೆಗೆ ಸೇರಲು ನಿಶ್ಚಯಿಸಿತು)**

ತಿದ್ದುಪಡಿಯಾಗದ/ Uncorrected Copy ಮತ್ತು ಪರಾಮರ್ಶೆಗಾಗಿ ಮಾತ್ರ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.